ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಭೂಮಿ ಮತ್ತು ಮನುಷ್ಯ ಸಂಬಂಧದ ವಿನ್ಯಾಸಗಳು

(ಪಿಎಚ್.ಡಿ. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಮಹಾ ಪ್ರಬಂಧ)

ಸಂಶೋಧಕರು

ರವೀಂದ್ರ ಎಚ್.ಎಲ್

ರಿ.ನಂ. KRSMKS00204

ಮಾರ್ಗದರ್ಶಕರು

ಡಾ. ಚಂದ್ರಪ್ಪ

ನಿವೃತ್ತ ಸಹ ಪ್ರಾಧ್ಯಾಪಕರು

ಶ್ರೀ ಆದಿ ಚುಂಚನಗಿರಿ ಪ್ರಥಮ ದರ್ಜೆ ಕಾಲೇಜು,

ಚನ್ನರಾಯಪಟ್ಟಣ

ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ ಮಂಡ್ಯ (ರಿ) ಮಂಡ್ಯ ಜಿಲ್ಲೆ

(ಹಂಪಿ ಕನ್ನಡ ವಿ.ವಿ.ಯಿಂದ ಮಾನ್ಯತೆ ಪಡೆದಿದೆ)

ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಭೂಮಿ ಮತ್ತು ಮನುಷ್ಯ ಸಂಬಂಧದ ವಿನ್ಯಾಸಗಳು

(ಪಿಎಚ್.ಡಿ. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಮಹಾ ಪ್ರಬಂಧ)

ಸಂಶೋಧಕರು

ರವೀಂದ್ರ ಎಚ್.ಎಲ್

ರಿ.ನಂ. **KRSMKS00204**

ಮಾರ್ಗದರ್ಶಕರು

ಡಾ. ಚಂದ್ರಪ್ಪ

ನಿವೃತ್ತ ಸಹ ಪ್ರಾಧ್ಯಾಪಕರು
ಶ್ರೀ ಆದಿ ಚುಂಚನಗಿರಿ ಪ್ರಥಮ ದರ್ಜೆ ಕಾಲೇಜು,
ಚನ್ನರಾಯಪಟ್ಟಣ

ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ ಮಂಡ್ಯ (ರಿ) ಮಂಡ್ಯ ಜಿಲ್ಲೆ

(ಹಂಪಿ ಕನ್ನಡ ವಿ.ವಿ.ಯಿಂದ ಮಾನ್ಯತೆ ಪಡೆದಿದೆ)

ಸಂಶೋಧಕರ ಪ್ರಮಾಣ ಪತ್ರ

ಕನ್ನಡ ವಿಶ್ವವಿದ್ಯಾಲಯದ ಪಿಹೆಚ್.ಡಿ. ಪದವಿಗಾಗಿ ಸಿದ್ಧಪಡಿಸಿರುವ **ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಭೂಮಿ ಮತ್ತು ಮನುಷ್ಯ ಸಂಬಂಧದ ವಿನ್ಯಾಸಗಳು** ಸಂಶೋಧನಾ ಮಹಾಪ್ರಬಂಧವನ್ನು ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ, ಕರ್ನಾಟಕ ಸಂಘ, ಮಂಡ್ಯ ಈ ಸಂಸ್ಥೆಯ ಮೂಲಕ ಶ್ರೀ ಆದಿ ಚುಂಚನಗಿರಿ ಪ್ರಥಮ ದರ್ಜೆ ಕಾಲೇಜಿನ ನಿವೃತ್ತ ಸಹ ಪ್ರಾಧ್ಯಾಪಕರು ಹಾಗೂ ಎಂ.ಎಲ್. ಶ್ರೀಂಕಂಠೇಶಗೌಡ ಕೇಂದ್ರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿರುವ ಡಾ. ಚಂದ್ರಪ್ಪ ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ.

ಈ ಮಹಾಪ್ರಬಂಧ ನನ್ನ ಸ್ವಂತ ಸಂಶೋಧನೆಯಾಗಿದೆ. ಇದನ್ನು ಸಂಪೂರ್ಣವಾಗಿಯಾಗಲೀ, ಭಾಗಶಃವಾಗಿಯಾಗಲೀ ಯಾವುದೇ ವಿಶ್ವವಿದ್ಯಾಲಯದ ಪದವಿ ಅಥವಾ ಡಿಪ್ಲೊಮಾಗೆ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ: 31-08-17
ಸ್ಥಳ : ಮಂಡ್ಯ

ಸಂಶೋಧಕರು

(ರವೀಂದ್ರ ಹೆಚ್.ಎಲ್.)

ರಿ.ನಂ. **KRSMKS00204**

ಮಾರ್ಗದರ್ಶಕರ ದೃಢೀಕರಣ ಪತ್ರ

ರವೀಂದ್ರ ಹೆಚ್.ಎಲ್. ಇವರು ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ ಕರ್ನಾಟಕ ಸಂಘ, ಮಂಡ್ಯ ಈ ಸಂಸ್ಥೆಯ ಮೂಲಕ **ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಭೂಮಿ ಮತ್ತು ಮನುಷ್ಯ ಸಂಬಂಧದ ವಿನ್ಯಾಸಗಳು** ಎಂಬ ವಿಷಯವನ್ನು ಕುರಿತು ನನ್ನ ಮಾರ್ಗದರ್ಶನದಲ್ಲಿ ಸಂಶೋಧನೆ ನಡೆಸಿ ಈ ಮಹಾ ಪ್ರಬಂಧವನ್ನು ಸಿದ್ದಪಡಿಸಿದ್ದಾರೆ.

ಈ ಸಂಶೋಧನಾ ಮಹಾಪ್ರಬಂಧವನ್ನು ಭಾಗಶಃವಾಗಿಯಾಗಲಿ ಅಥವಾ ಪೂರ್ಣವಾಗಿ ಯಾಗಲಿ ಈ ವಿಶ್ವವಿದ್ಯಾನಿಲಯದ ಅಥವಾ ಇತರೆ ಯಾವುದೇ ವಿಶ್ವವಿದ್ಯಾನಿಲಯ ಪದವಿ, ಡಿಪ್ಲೋಮಾ ಪದವಿಗಳಿಗಾಗಿ ಬಳಸಿಕೊಂಡಿಲ್ಲವೆಂದು ಪ್ರಮಾಣೀಕರಿಸುತ್ತೇನೆ. ಈ ಮಹಾ ಪ್ರಬಂಧವನ್ನು ಪಿಹೆಚ್.ಡಿ. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಲು ನಾನು ಸಮ್ಮತಿಸಿದ್ದೇನೆ.

ದಿನಾಂಕ : 26-8-2017

ಸ್ಥಳ : ಮಂಡ್ಯ

ಮಾರ್ಗದರ್ಶಕರು

(signature)

(ಡಾ. ಚಂದ್ರಪ್ಪ)
ಸಹ ಪ್ರಾಧ್ಯಾಪಕರು
ಮುಖ್ಯಸ್ಥರು, ಕನ್ನಡ ವಿಭಾಗ
ಶ್ರೀ ಆದಿಚುಂಚನಗಿರಿ ಪ್ರಥಮ ದರ್ಜೆ ಕಾಲೇಜು
ಚನ್ನರಾಯಪಟ್ಟಣ, ಹಾಸನ ಜಿಲ್ಲೆ.

ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಭೂಮಿ ಮತ್ತು ಮನುಷ್ಯ ಸಂಬಂಧದ ವಿನ್ಯಾಸಗಳು

ಪರಿವಿಡಿ

ಅಧ್ಯಾಯ–೧

ಅಧ್ಯಯನದ ಉದ್ದೇಶ, ಮಹತ್ವ ಮತ್ತು ವ್ಯಾಪ್ತಿ

ಸಾಹಿತ್ಯ ಅಧ್ಯಯನಕ್ಕೆ ಇಮ್ಮುಖ ನೆಲೆಗಳಿವೆ. ಒಂದು; ರಸಾನಂದ, ಇನ್ನೊಂದು; ಸಾಂಸ್ಕೃತಿಕ ಅರಿವು. ಸಾಹಿತ್ಯ ಭಿನ್ನ ಬಗೆಗಳಲ್ಲಿ ಅಭಿವ್ಯಕ್ತಗೊಂಡಿದೆ. ಕನ್ನಡ ಸಾಹಿತ್ಯ ಚರಿತ್ರೆ ಭಾಷಿಕ ನೆಲೆಯಿಂದ ಹಳಗನ್ನಡ, ನಡುಗನ್ನಡ, ಹೊಸಗನ್ನಡ ಎಂದು ವಿಭಾಗಿಸಲ್ಪಟ್ಟಿದೆ. ಕ್ರಿ.ಶ. ೮ನೇ ಶತಮಾನದಿಂದ ಕ್ರಿ.ಶ. ೧೮ನೇ ಶತಮಾನದವರೆಗೆ ಕಾವ್ಯವೇ ಮುಖ್ಯ ಪ್ರಕಾರವಾಗಿರುವುದು ವಿಶೇಷ. ಅಲ್ಲಲ್ಲಿ ಗದ್ಯಕಥನ ಕಾಣಿಸಿಕೊಂಡು ಗಮನಾರ್ಹ ಬರಹ ಎನಿಸಿಕೊಂಡಿರುವುದು ಮತ್ತೂ ವಿಶೇಷ.

ಹೊಸಗನ್ನಡದ 'ಮುದ್ದಣ' ನಿಂದ ಮೊದಲುಗೊಂಡಿರುವುದು ವೇದ್ಯ. ಅಲ್ಲಿಂದೀಚೆಗೆ ಭಾಷಿಕವಾಗಿ ಕಾವ್ಯ'ಕವಿತೆ'ಯಾಯಿತು. ಆಧುನಿಕ ಸಾಹಿತ್ಯ ಭಿನ್ನ ಪ್ರಕಾರಗಳಲ್ಲಿ ಪ್ರಕಟಗೊಂಡಿತು. ಕನ್ನಡ ಸಾಹಿತ್ಯದಲ್ಲಿ 'ನಾಟಕ' ಪ್ರಕಾರ ಅಲ್ಲಲ್ಲಿ ಕಾಣಿಸಿಕೊಂಡಿದ್ದರೂ, ಪೂರ್ಣ ಪ್ರಮಾಣದ ನಾಟಕ ರೂಪ ಕಂಡು ಬಂದಿದ್ದು ೧೯೦೦ ರಿಂದ ಈಚೆಗೆ.

'ಸಣ್ಣಕತೆ' ೧೯೨೦ರ ಈಚೆಗೆ ಸಮೃದ್ಧವಾಗಿ ಸೃಷ್ಟಿಗೊಂಡಿದೆ. ಕನ್ನಡದ ಮಹತ್ವದ ಸಣ್ಣಕತೆಗಾರರು ಕಾದಂಬರಿ ರಚನೆಯಲ್ಲಿಯೂ ವಿಶೇಷ ಗಮನಸೆಳೆದಿದ್ದಾರೆ.

ಕಾದಂಬರಿ 'ಕರತಲ ರಂಗಸ್ಥಳ' ಎಂಬ ಕುವೆಂಪುರವರ ಮಾತು ಬಹು ಆಯಾಮ ಹೊಂದಿದೆ. ಕಾದಂಬರಿ ಪ್ರಕಾರ ಕನ್ನಡದ ಜನಪ್ರಿಯ ಓದುಗ ಮಾಧ್ಯಮ. ಈ ಜನಪ್ರಿಯತೆಗೆ ಕಾದಂಬರಿಯ ಚೌಕಟ್ಟು, ಅದು ಒಳಗೊಳ್ಳಬಹುದಾದ, ಒಳಗೊಂಡಿರುವ ಭಿನ್ನ ದೃಷ್ಟಿಕೋನ, ನಿರ್ವಚನ ಕಾರಣ.

ಸಾಹಿತ್ಯದ ಮೂಲ 'ಬದುಕು'. ಈ ಬದುಕಿನ ಕೇಂದ್ರ ಮನುಷ್ಯ. ಮನುಷ್ಯನ ಗುಣ, ಸ್ವಭಾವ, ವರ್ತನೆ ಆಶೋತ್ತರಗಳು ಕಾದಂಬರಿಯ ರಚನೆಗೆ ಪ್ರೇರಕವಾಗಿವೆ. ಹಾಗಾಗಿಯೇ ಕೇವಲ 'ರಂಜನೆ'ಯನ್ನು ದಾಟಿ ಈ ಪ್ರಕಾರ 'ಬದುಕಿನ ವಿವಿಧ ವಿನ್ಯಾಸಗಳನ್ನು' ಕಟ್ಟಿಕೊಟ್ಟಿತು. ವ್ಯಕ್ತಿ ಬದುಕಿನ ವಿವಿಧ ಕಾಲಘಟ್ಟಗಳ ಸಂಘರ್ಷಕ್ಕೆ ಕಾದಂಬರಿ ಕೈಚಾಚಿತು. ಈ ಯತ್ನದಲ್ಲಿ ಸಫಲತೆ ಯನ್ನು ಪಡೆಯಿತು.

ಕನ್ನಡ ಕಾದಂಬರಿ ಪರಂಪರೆಗೆ ಈಗ ಸರಿ ಸುಮಾರು ನೂರು ವರ್ಷ ಅವಧಿ ಎನ್ನಬಹುದು. ಸ್ವಾತಂತ್ರ್ಯ ಪೂರ್ವ ಸ್ವಾತಂತ್ರ್ಯೋತ್ತರ ಹಂತಗಳಲ್ಲಿ ಈ ಪ್ರಕಾರ ಸಮೃದ್ಧವಾಗಿ ಬೆಳೆದು ನಿಂತಿದೆ. ಕೆರೂರು, ಮಾಸ್ತಿ, ರಾವ್‌ಬಹದ್ದೂರು, ಕಾರಂತ, ಕುವೆಂಪು ಮೊದಲಾಗಿ

ಚಿತ್ತಾಲ, ಅನಂತಮೂರ್ತಿ, ಲಂಕೇಶ, ತೇಜಸ್ವಿ, ಮಹಾದೇವ ಸೇರಿದಂತೆ ಅನೇಕ ಹಿರಿ–ಕಿರಿಯ ಲೇಖಕರಿಂದ ಈ ಪ್ರಕಾರ ಕನ್ನಡದಲ್ಲಿ ಜನಪ್ರಿಯ ಪ್ರಕಾರ ಎನಿಸಿಕೊಂಡಿದೆ.

ಈ ಪ್ರಕಾರ ಶೋಧಿಸಿರುವ 'ಮಾನವ ಸಂಸ್ಕೃತಿ'ಯನ್ನು ಅನೇಕ ಕಾದಂಬರಿಕಾರರು ಚಿತ್ರಿಸಿದ್ದಾರೆ. ಮನುಷ್ಯ ತನ್ನ ಬದುಕಿನಲ್ಲಿ ಹೊಂದಿರುವ ವಿವಿಧ ಸಂಬಂಧಗಳು ಕಾದಂಬರಿಕಾರರಿಗೆ 'ಸೆಲೆ' ಆಗಿವೆ. ಪ್ರಕೃತಿ, ಹೆಣ್ಣು–ಗಂಡು, ಸಮಾಜ, ಜಾತಿ, ಆಧುನಿಕತೆ, ನಾಗರಿಕರಣ, ಜಾಗತೀಕರಣ ಮೊದಲಾದ ಅಂಶಗಳು 'ವಸ್ತು'ವಾಗಿ ಈ ಕಾದಂಬರಿಗಳನ್ನು ಪೋಷಿಸಿವೆ.

ಶಿವರಾಮ ಕಾರಂತರು ತಮ್ಮ ಸಮಕಾಲೀನ ಕಾದಂಬರಿಕಾರರಿಗಿಂತ ಭಿನ್ನವಾಗಿ ಮನುಷ್ಯ ಸಂಬಂಧಗಳನ್ನು ಚಿತ್ರಿಸಿರುವ ಬಗೆಯನ್ನು ಈ ಅಧ್ಯಯನ ಗುರುತಿಸಲು ಯತ್ನಿಸಿದೆ. ಆದಿಮ ಸಂಸ್ಕೃತಿ–ಆಧುನಿಕ ಸಂಸ್ಕೃತಿಗಳ ಸಂಘರ್ಷಗಳು ಕಾರಂತರ ಅಭಿವ್ಯಕ್ತಿಯಲ್ಲಿ ಬಿಂಬಿತವಾಗಿವೆ. ಈ ಸಂಸ್ಕೃತಿ ನಿರ್ವಚನದಲ್ಲಿ ಭೂಮಿ, ಹೆಣ್ಣು–ಗಂಡು, ಕಾಮ ಇತ್ಯಾದಿ 'ಮೂಲಸೆಲೆ'ಗಳು ನಿರೂಪಿತವಾಗಿರುವ ಬಗೆಯನ್ನು ಈ ಅಧ್ಯಯನ ನಿರೂಪಿಸುತ್ತದೆ.

'ಭೂಮಿ ಮನುಷ್ಯರ ಆಸೆಗಳನ್ನು ಪೂರೈಸಬಲ್ಲದು. ದುರಾಸೆಗಳನ್ನಲ್ಲ' ಎಂಬ ಗಾಂಧೀಜಿಯವರ ಮಾತು ವಿಶೇಷ ಅರ್ಥದಲ್ಲಿ ಧ್ವನಿಸಿದೆ. ಇದನ್ನು ಸಾಹಿತ್ಯ ಇನ್ನೊಂದು ಆಯಾಮದಲ್ಲಿ ಹೇಳುತ್ತದೆ. ಕಾರಂತರ ಸೃಜನತೆ ಈ ಹೇಳಿಕೆಯನ್ನು ಬಿಂಬಿಸಿರುವ ಬಗೆಯನ್ನು ಈ ಅಧ್ಯಯನ ಪೃಥಕ್ಕರಿಸಿದೆ.

ಅ. ಉದ್ದೇಶ

ಸಾಹಿತ್ಯ ಮತ್ತು ಸಮಾಜದ ಸಂಬಂಧಗಳ ಹಿನ್ನೆಲೆಯಲ್ಲಿ ಕಲಾರೂಪನಾದ ಸಾಹಿತ್ಯ 'ಸಾಂಸ್ಕೃತಿಕ ಉತ್ಪಾದನೆ'ಯಾಗಿ ಹೊಮ್ಮುವ ರೀತಿ ಮತ್ತು ವಿಶಿಷ್ಟತೆಯನ್ನು ಗುರುತಿಸುವ ಉದ್ದೇಶ ಈ ಅಧ್ಯಯನದ್ದು. ವಾಸ್ತವಿಕ ಸಮಾಜ ಮತ್ತು ಸಾಹಿತ್ಯದ ವಾಸ್ತವಗಳ ತುಲನೆಯಲ್ಲಿ 'ಕಲೆ' ಹೊಮ್ಮಿದ ಬಗೆಯನ್ನು ಕಾರಂತರ ಕಾದಂಬರಿಗಳ ಅಧ್ಯಯನದಿಂದ ಗುರುತಿಸಬಹುದು.

ಸಮಾಜ ಅದರ ಅಂಗಸಂಸ್ಥೆಗಳು, ಸಂಸ್ಕೃತಿ, ಅದು ಒಳಗೊಂಡಿರುವ ವೈಶಿಷ್ಟ್ಯತೆ, ಅದರ ಅಕರಾಳ ವಿಕರಾಳ ಸ್ವರೂಪ, ಅದು 'ಭಾಷಿಕ'ವಾಗಿ ರೂಪುಗೊಂಡ ಬಗೆ, ಕಾರಂತರ ಗದ್ಯ, ಅದರ ಹದ–ಹಸನುಗಳ ನೆಲೆಯಲ್ಲಿ ಮನುಷ್ಯ ಮತ್ತು ಪ್ರಕೃತಿಯ ಅಂತಃ ಸಂಬಂಧಗಳನ್ನು ವಿಶ್ಲೇಷಿಸಲು ಈ ಅಧ್ಯಯನ ಯತ್ನಿಸಿದೆ.

ಸಾಹಿತ್ಯ ಪ್ರಕಾರವೊಂದು ತನ್ನ ಚೌಕಟ್ಟು ಮೀರಿ ಸ್ಪಂದಿಸುವ ಬಗೆಯೇ ಕುತೂಹಲ ಮೂಡಿಸುವಂತಹದ್ದು. ಕಾದಂಬರಿ ತನ್ನ ಸ್ವರೂಪದಿಂದಲೇ ಇಂತ ವಿಸ್ಮಯಗಳನ್ನು ಬಿಚ್ಚಿಟ್ಟಿದೆ. ಅದನ್ನು ಕಾರಂತರ ಕಾದಂಬರಿಗಳ ನೆಲೆಯಲ್ಲಿ ಗುರುತಿಸುವುದು ಈ ಅಧ್ಯಯನದ ಉದ್ದೇಶವಾಗಿದೆ.

'ನವೋದಯ ಕಾಲಘಟ್ಟ' ಎಂದು ಗುರುತಿಸುವ ಸಾಹಿತ್ಯ ಚರಿತ್ರೆಯ ಆಧುನಿಕ ಹಂತ ತನ್ನೊಡಲೊಳಗೆ ಭಿನ್ನ ಸಂಘರ್ಷಗಳನ್ನು ಹೊಂದಿದ್ದ, ಹೊಮ್ಮಿಸಿದ ಘಟ್ಟ, ರಾಷ್ಟ್ರ, ನಾಡು, ಸ್ವಾತಂತ್ರ್ಯ, ಏಕತೆ, ಐಕ್ಯತೆ ಇತ್ಯಾದಿ 'ಆಶಯ'ಗಳು ಮೌಲ್ಯಗಳಾಗಿ ಈ ಹಂತದ ಸೃಜನಾಭಿ ವ್ಯಕ್ತಿಯನ್ನು ಘೋಷಿಸಿದವು. ಕಾರಂತರ ಕಾದಂಬರಿಗಳಲ್ಲಿನ ಈ ಅಂಶಗಳನ್ನು 'ತಾತ್ವಿಕವಾಗಿ' ಹೊಂದಿರುವ ಸಾಧ್ಯತೆಗಳನ್ನು ಈ ಅಧ್ಯಯನ ಗುರುತಿಸಲು ಯತ್ನಿಸಿದೆ.

ತಮ್ಮ ಸಮಕಾಲೀನ ಕಾದಂಬರಿಕಾರರಿಗಿಂತ ಭಿನ್ನವಾಗಿ ಕಾರಂತರು 'ಕಾದಂಬರಿ' ಪ್ರಕಾರವನ್ನು ಒಗ್ಗಿಸಿಕೊಂಡ ಬಗೆ ಅಪೂರ್ವವಾದುದು. ಇಂತಹ ಯತ್ನ ಸಾಧ್ಯವಾದ ಬಗ್ಗೆಯೂ ಈ ಅಧ್ಯಯನ ಗಮನ ಹರಿಸಿದೆ.

ಪ್ರಕೃತಿಯ ಮಡಿಲಾದ ಕರಾವಳಿತೀರ ತನ್ನ ಸೌಂದರ್ಯಕ್ಕೆ ಹಾಗೂ ವಿಶಿಷ್ಟ ಸಂಸ್ಕೃತಿಗೆ ಸೆಲೆಯಗಿದೆ. ಹಾಗಾಗಿಯೇ ಇದು 'ಪ್ರಾದೇಶಿಕತೆ' ಎನ್ನುವ ಸೀಮಿತತೆ ಮೀರುವ ಸಾಧ್ಯತೆಗಳನ್ನು ಕಾರಂತರ ಕಾದಂಬರಿಗಳು ಬಿಂಬಿಸುವ ಬಗೆಯನ್ನು ಈ ಅಧ್ಯಯನ ಉಲ್ಲೇಖಿಸುತ್ತದೆ.

ತಮ್ಮ ವೈಯಕ್ತಿಕ ಜೀವನ, ಚಿಂತನೆ, ವೈಚಾರಿಕತೆಗಳಿಂದ ಕಾರಂತರು ತಮ್ಮ ಸಮಕಾಲೀನ ಕಾದಂಬರಿಕಾರರಿಂದ ಭಿನ್ನ ಎನಿಸಿಕೊಂಡಿದ್ದಾರೆ. ಈ ಭಿನ್ನತೆಯೂ ಹಿಂದಿನ 'ತಾತ್ವಿಕತೆ' ಏನೋ ಎಂಬುದಕ್ಕೆ ಈ ತಾತ್ವಿಕತೆಯ ಸ್ವರೂಪ ಹೇಗಿದೆ ಎಂಬುದನ್ನು ಈ ಅಧ್ಯಯನ ವಿಶ್ಲೇಷಿಸಿದೆ. ಬದಲಾದ ಕಾಲಮಾನ, ಸಾಮಾಜಿಕ ಪಲ್ಲಟಗಳು, ಶಿಕ್ಷಣ, ಅದರ ಪ್ರಭಾವ, ಸಾಮಾಜಿಕ ಆಚರಣೆಗಳು, ಅವುಗಳ ಹಿಂದಿನ ನಿಲುವುಗಳು, ಅವು ಕಾದಂಬರಿಗಳಲ್ಲಿ ಬಿಂಬಿತವಾದ ಬಗೆಯನ್ನು ಗುರುತಿಸುವ ಉದ್ದೇಶವನ್ನು ಈ ಅಧ್ಯಯನ ಒಳಗೊಂಡಿದೆ.

ಕನ್ನಡದಲ್ಲಿ ಸೃಜನಶೀಲ ಅಭಿವ್ಯಕ್ತಿ ನಿರಂತರವಾಗಿ ಸಂಸ್ಕೃತ, ವೈದಿಕತೆಗಳ ವಿರುದ್ಧ ಪ್ರತಿಭಟಿಸುತ್ತಲೇ ಬೆಳೆದ ಪರಿಯು ಸೋಜಿಗ ತರುವಂತದ್ದು. ಕಾರಂತರು ಈ ಪ್ರಕ್ರಿಯೆಯನ್ನು ಭಿನ್ನವಾಗಿ ಮುನ್ನಡೆಸಿದ್ದಾರೆ. ಕಾರಂತರಿಗೆ ವರ್ತಮಾನದ ಬದುಕಿಗಿಂತಲೂ ಆ ಬದುಕಿನ ದಾರಿ, ಅದನ್ನು ಸವೆಸಲು ಹಿಡಿದ ಮಾರ್ಗ ಕಾಡಿದೆ. ಈ ವಸ್ತುವೇ ಅವರ ಅನೇಕ ಕಾದಂಬರಿಗಳ 'ಭಿತ್ತಿ'ಯಾಗಿದೆ. 'ಕಾವ್ಯ' ನವೋದಯ ಕಾಲಘಟ್ಟದ ಮುಖ್ಯ ಮಾಧ್ಯಮ, ಕಾರಂತರು ಉದ್ದೇಶಪೂರ್ವಕವಾಗಿ 'ಗದ್ಯ'ವನ್ನು ಆಯ್ಕೆ ಮಾಡಿಕೊಂಡಂತೆ ಕಾಣುತ್ತದೆ. ಈ ಆಯ್ಕೆಯ ಹಿನ್ನೆಲೆಯಲ್ಲಿ ಕಾದಂಬರಿಕಾರನ 'ತಾತ್ವಿಕತೆ' ಇರುವುದು ಗಮನಾರ್ಹ.

ತನ್ನ ಕಾಲದ ಚಿತ್ರಣವನ್ನು ನೀಡುತ್ತಲೇ ಕಾರಂತರು 'ಗತ'ಕ್ಕೆ ಮತ್ತು 'ಭವಿಷ್ಯತ್'ಗೆ ಸ್ಪಂದಿಸಬಲ್ಲವರಾಗಿದ್ದರು. ಅದೇ ಕಾರಣಕ್ಕೆ ಅವರ ಕಾದಂಬರಿಗಳು ಕಾಲಾತೀತ ಗುಣ ಹೊಮ್ಮಿಸಿವೆ. ಕಾರಂತರ ಸ್ಪಂದನೆ 'ಅಸ್ತಿತ್ವ'ವನ್ನು ಗಮನಿಸಿದೆ. ಇದು ವ್ಯಕ್ತಿ, ಸಮಾಜ, ಸಂಸ್ಕೃತಿ, ಬದುಕನ್ನು

ಒಳಗೊಂಡ 'ಅಸ್ತಿತ್ವ' ಈ ಅಸ್ತಿತ್ವ ಧನಾತ್ಮಕ ನಿಲುವಿನಲ್ಲಿ ಅಭಿವ್ಯಕ್ತಿಗೊಂಡಿರುವುದು ಕಾರಂತರ ಕಾದಂಬರಿಗಳ ಹೆಗ್ಗಳಿಕೆ. ಈ ವಿಶೇಷವನ್ನು ಈ ಅಧ್ಯಯನ ಗುರುತಿಸಿದೆ.

'ಅಸ್ತಿತ್ವ' ಎಂದೊಡನೆ ನೆನಪಾಗುವುದೇ 'ಭೂಮಿ', 'ಭೂಮಿ' ಕುರಿತಂತೆ ಅನೇಕ ನಿಲುವುಗಳಿವೆ. ತಾತ್ವಿಕತೆಗಳಿವೆ. ಅವುಗಳ ಸ್ವರೂಪವನ್ನು ಈ ಅಧ್ಯಯನ ತನ್ನ ನಾಲ್ಕು ಮತ್ತು ಐದನೇ ಅಧ್ಯಾಯಗಳಲ್ಲಿ ಸ್ಪಷ್ಟೀಕರಿಸುತ್ತದೆ.

ಭೂಮಿ ಕುರಿತ ಗಾಂಧಿವಾದಿಗಳ ದೃಷ್ಟಿಕೋನ, ಅಂಬೇಡ್ಕರ್‌ವಾದಿಗಳ ದೃಷ್ಟಿಕೋನ, ಲೌಕಿಕ ದೃಷ್ಟಿಕೋನ, ಅಲೌಕಿಕ ಮತ್ತು ಪೌರಾಣಿಕ ಕಾಣ್ಕೆಗಳೂ ಇವೆ. ಅವುಗಳ ಸ್ವರೂಪ ಮತ್ತು ವೈಶಿಷ್ಟ್ಯಗಳನ್ನು ಮುಂದಿನ ಅಧ್ಯಾಯಗಳಲ್ಲಿ ವಿಶ್ಲೇಷಿಸಲಾಗಿದೆ.

ಕಾರಂತರದು ಅಪ್ಪಟ ದೇಸಿ ಪ್ರತಿಭೆ. ಆಧುನಿಕ ಶಿಕ್ಷಣ ಅವರನ್ನು ಬಾದಿಸಿಲ್ಲ. ಬಹುಶಃ ಇದು ಕಾರಂತರ ಸೃಜನತೆಗೆ ದೇಸೀಯತೆ ದಕ್ಕಲು ಕಾರಣ ಎನ್ನಬಹುದು. ಕಾರಂತರು ತಮ್ಮ 'ಅರಿವಿನ' ನೆಲೆಯಲ್ಲಿ ಬದುಕನ್ನು ನಿರ್ವಚಿಸಿದ್ದಾರೆ. ಒಂದು ಬಗೆಯಲ್ಲಿ ಇದು ಸ್ವತಂತ್ರವಾದ ಪ್ರಯತ್ನವಾಗಿದೆ. ಈ ಬಗೆಯ ನಿಲುವುಗಳನ್ನು ಈ ಅಧ್ಯಯನ ಗುರುತಿಸುತ್ತದೆ.

ಭೌತಿಕ, ಬೌದ್ಧಿಕ ಆಯಾಮಗಳು ಚಿಂತಕರ ಚಿಂತನೆಗಳ ಮೂಲ ಸೆಲೆ. ಬದುಕು ಇವುಗಳ ಕೇಂದ್ರ. ಸಮಾಜ ಇವುಗಳ ನೆಲೆ. ಕುಟುಂಬವೇ ಪ್ರಯೋಗ ವೇದಿಕೆ. ಇವೆಲ್ಲವೂ ರೂಪಿಸುವ 'ಗ್ರಹಿಕೆ'ಗಳು ಸೃಜನೆಯಾಗಿ ಮೂಡಿರುವ ಬಗೆಯನ್ನು ಕಾರಂತರ ಕೆಲ ಕಾದಂಬರಿಗಳ ಹಿನ್ನೆಲೆಯಲ್ಲಿ ಈ ಅಧ್ಯಯನ ವಿಶ್ಲೇಷಿಸಿಸುತ್ತದೆ.

ಕುಟುಂಬ, ವ್ಯಕ್ತಿ ಸಂಸ್ಕೃತಿ, ಸಮಾಜ–ಪ್ರಕೃತಿ, ವಾಸ್ತವ–ಭಾವುಕತೆ, ವರ್ತಮಾನ–ಭೂತ ಇವುಗಳ ಮೂಲ ಘಟಕಗಳನ್ನು ಕಾರಂತರು ಗ್ರಹಿಸಿರುವ, ಕಾದಂಬರಿಗಳಲ್ಲಿ ಮೂಡಿಬಂದಿರುವ ಬಗೆಯನ್ನು ಈ ಅಧ್ಯಯನ ವಿಷದೀಕರಿಸುತ್ತದೆ.

'ಚಿಂತನೆ'ಗಳು ಸೃಜನೆಯಾಗಿ ಹೊಮ್ಮಿದಾಗ ಭಾಷಿಕವಾಗಿ ಹೊಮ್ಮಿದ ಬಗೆ, ಅದಕ್ಕೆ ಪೂರಕವಾದ ಬಂಧ, ನಿರೂಪಣಾ ತಂತ್ರ, ಪಾತ್ರ ಪೋಷಣೆ, ಕಾದಂಬರಿಕಾರನ ತಾತ್ವಿಕತೆ ಅವು ಕಲೆಯಾಗಿ ಹೊಮ್ಮಿದ ಬಗೆಯನ್ನು ಈ ಅಧ್ಯಯನ ಬಿಂಬಿಸುತ್ತದೆ.

ಗಂಡು, ಹೆಣ್ಣು, ಕುಟುಂಬ ಸಂಸ್ಕೃತಿ ಅಂತಿಮವಾಗಿ 'ಮಾನವ ಪ್ರಕೃತಿ' ಹೊಮ್ಮಿಸುವ ನಿಸರ್ಗ ಪ್ರಕೃತಿಯನ್ನು ಕಾರಂತರು ಖಂಡಿರಿಸಿರುವ ಬಗೆ ಭಿನ್ನ. ಈ ಅಂಶವನ್ನು ಅವರ ಕೆಲ ಕಾದಂಬರಿಗಳ ವಿಶ್ಲೇಷಣೆಯ ಹಿನ್ನೆಲೆಯಲ್ಲಿ ಚರ್ಚಿಸಲಾಗುವುದು.

ಸಮಕಾಲೀನ ರಾಜಕೀಯ ಅಥವಾ ರಾಜಕಾರಣ, ಆರ್ಥಿಕತೆ, ಇವು ರೂಪಿಸುವ ಸಂಸ್ಕೃತಿ, ಅದನ್ನು ಬಿಂಬಿಸುವ ಬದುಕು ಇವನ್ನು ಕಾರಂತರು ತಮ್ಮ ಸಮಕಾಲೀನ ಕಾದಂಬರಿಕಾರರಿಗಿಂತ ಭಿನ್ನವಾಗಿ ಗ್ರಹಿಸಿದ್ದಾರೆ. ಈ ಗ್ರಹಿಕೆಯ ನೆಲೆ–ಬೆಲೆಗಳನ್ನು ಈ ಅಧ್ಯಯನ ವಿಶ್ಲೇಷಿಸುತ್ತದೆ.

ಮರಳಿ ಮಣ್ಣಿಗೆ, ಚೋಮನ ದುಡಿ, ಬೆಟ್ಟದ ಜೀವ ಈ ಕಾದಂಬರಿಗಳು ಕಾರಂತರ ಗ್ರಹಿಕೆಯ ಮೂರು ಮುಖಗಳನ್ನು ಬಿಂಬಿಸಿವೆ. ಅಂತ ಗ್ರಹಿಕೆಯ ಸ್ವರೂಪವನ್ನು ಈ ಅಧ್ಯಯನ ವಿಶ್ಲೇಷಿಸುತ್ತದೆ.

ಮಾನವೀಯ ಮೌಲ್ಯಗಳು, ಶ್ರಮ, ಸಹಕಾರ ಇವು ಒಂದು ಕಾಲಘಟ್ಟದ ಆಶಯಗಳು. ಕಾಲ ಬದಲಾದಂತೆ ಇವು ಬದಿಗೆ ಸರಿಯ ತೊಡಗಿದ್ದನ್ನು ಭಿನ್ನ ಪರಿಪ್ರೇಕ್ಷ್ಯಗಳ ಮೂಲಕ ಕಾರಂತರು ನಿರೂಪಿಸಿದ್ದಾರೆ. ಈ ಅಂಶವನ್ನು ಈ ಅಧ್ಯಯನ ಚರ್ಚಿಸುತ್ತದೆ. ಸಹಕಾರ, ಸಂಘರ್ಷ, ಆಕ್ರಮಣ, ಶರಣಾಗತಿ, ಸಂವಹನ ಇವೆಲ್ಲವೂ ಕಾರಂತರ ಕಾದಂಬರಿಗಳಲ್ಲಿ ಪರಸ್ಪರ ಪೂರಕ ನೆಲೆಗಳಲ್ಲಿ ಚಿತ್ರಿಸಲ್ಪಟ್ಟಿವೆ. ಅವುಗಳಲ್ಲಿ ಅತ್ಯಂತ ಮುಖ್ಯ ಎನಿಸುವುದು ಕಾರಂತರು 'ಭೂಮಿ' ಕುರಿತಂತೆ ಹೊಂದಿರುವ ನಿಲುವು. ಈ 'ನಿಲುವಿನ' ತಾತ್ವಿಕತೆ ಮತ್ತು ಅದರ ಸ್ವರೂಪವನ್ನು ಈ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ.

ಆಂಗ್ಲ ಶಿಕ್ಷಣ ಕರಾವಳಿಗೆ ಬಹುಬೇಗ ಕಾಲಿಟ್ಟಿತು. ಮತಾಂತರ ಕೂಡ. ಇದು ಸಂಸ್ಕೃತಿ ಪಲ್ಲಟಕ್ಕೂ ಕಾರಣವಾಯಿತು. ಸಾಮಾಜಿಕ ಎಚ್ಚರ 'ಹಕ್ಕಿಗಾಗಿ' ಪ್ರತಿಪಾದಿಸುವ ಮಾಧ್ಯಮವಾಯಿತು. ಜ್ಞಾನದ ಹಂಚಿಕೆ ಧನಾತ್ಮಕವಾಗಬೇಕಿದ್ದ 'ಹಂತ' ಮತ್ತೆ 'ಏಕೀಭವಿಸಿತೆ'? ಎಂಬ ಪ್ರಶ್ನೆಯೊಂದಿಗೆ ಈ ಅಧ್ಯಯನ ಕಾರಂತರ ಕಾದಂಬರಿಗಳನ್ನು ಅವಲೋಕಿಸಿದೆ.

'ಸಂತೋಷ' ಎನ್ನುವುದು ಸಾಪೇಕ್ಷ. ಈ ಸಂತೋಷ ನೀಡುವ ಸಂಗತಿಗಳೊಂದಿಗೆ ಮಾನವ ತನ್ನ ಸಂಬಂಧಗಳನ್ನು ಪುನರ್ ರಚಿಸಿಕೊಳ್ಳುತ್ತಾನೆ. 'ಭೂಮಿ' ಮನುಷ್ಯನಿಗೆ ಸಂತಸ ನೀಡುವ ನೆಲೆಯೇ ಆಗಿದೆ. ಇದೇ ಭೂಮಿ ಕೆಲವರ ಪಾಲಿಗೆ ಕೇವಲ ಕನಸಾಗಿಯೇ ಉಳಿದದ್ದೂ ಉಂಟು. ಈ ಅಂಶವನ್ನು ಕಾರಂತರ ಕೆಲ ಕಾದಂಬರಿಗಳ ಹಿನ್ನೆಲೆಯಲ್ಲಿ ಈ ಅಧ್ಯಯನ ಸ್ಪಷ್ಟೀಕರಿಸಿದೆ.

ಪ್ರಕೃತಿ ಮನುಷ್ಯನಷ್ಟು ಸಂಕುಚಿತವಲ್ಲ, ಸೀಮಿತ ಅಲ್ಲ, ಇದು ಅರಿವಾದಾಗ ಮಾತ್ರ ಮನುಷ್ಯನ ಕುತೂಹಲ ಇಮ್ಮಡಿಸುತ್ತದೆ. ಇಂತ ಕುತೂಹಲವೇ ಸೃಷ್ಟಿಯ ಒತ್ತಾಸೆಯಾಗುವುದು ಉಂಟು. ಕಾರಂತರ ಸೃಜನತೆಯ ನೆಲೆಯಗಿ 'ಪ್ರಕೃತಿ' ಇದೆ. ಅದು ಅವರನ್ನು ಬಹುವಾಗಿ ಕಾಡಿದೆ. ಈ ಕಾಡುವಿಕೆಯ ಪರಿಣಾಮವೇ ಅವರ ಬರಹ. ಇಂತ ಬರಹಗಳಲ್ಲಿನ ವಿಶೇಷವಾಗಿ ಕಾದಂಬರಿಗಳಲ್ಲಿನ ಸ್ವರೂಪ, ವಿಶೇಷ, ಧ್ವನಿಗಳನ್ನು ಗುರುತಿಸುವ ಉದ್ದೇಶ ಈ ಅಧ್ಯಯನದ್ದು.

ಮಹತ್ವ

ಸಾಹಿತ್ಯ ಕೃತಿ ಮೊದಲಿಗೆ ಒಂದು ಆಕೃತಿ. ಅದಕ್ಕೆ ತನ್ನದೇ ಆದ ಶಿಲ್ಪ, ಬಂಧಗಳಿರುತ್ತವೆ. ಇಂತ ಕೃತಿ ಸಾಮಾಜಿಕ ನೆಲೆಗಳನ್ನು ಅಭಿವ್ಯಕ್ತಿಸಿರಬಹುದು, ಇಲ್ಲದಿರಬಹುದು. ಆದರೆ ಕೃತಿಕಾರನ ತಾತ್ವಿಕತೆ ಇದ್ದೇ ಇರುತ್ತದೆ. ಮೇಲ್ನೋಟಕ್ಕೆ ಓದುಗರಿಗೆ ಅದು ಅರಿವಾಗುತ್ತದೆ.

ಒಬ್ಬ ಲೇಖಕ ತನ್ನನ್ನು ತಾನು ನಿರೂಪಿಸಿಕೊಳ್ಳುತ್ತಲೇ ತನ್ನ ಕಾಲದ ಅನೇಕ ಅಂಶಗಳನ್ನು ತನಗರಿವಿಲ್ಲದೇ ತನ್ನ ಕೃತಿಯಲ್ಲಿ ಅಭ್ಯಿವ್ಯಕ್ತಿಸಿರುತ್ತಾನೆ. ತನ್ನ ಹಿಂದಿನ ಮತ್ತು ಮುಂದಿನ ಬದುಕಿನ 'ನೆಲೆ'ಗಳನ್ನು ಶೋಧಿಸಿರುತ್ತಾನೆ.ಅಲ್ಲದೇ ಆತ 'ಸಂಸ್ಕೃತಿ'ಯ ವಿಶಿಷ್ಟ ಚಹರೆಗಳನ್ನು ದಾಖಲಿಸಿರುತ್ತಾನೆ. ಇವು ಕೃತಿಯ ಪ್ರಾಥಮಿಕ ಧ್ವನಿಯೂ ಆಗಿರಬಹುದು. ಅನುಷಂಗಿಕ ಧ್ವನಿಯೂ ಆಗಿರಬಹುದು. ಅಲ್ಲಿ ವ್ಯವಸ್ಥೆಯ ಅನುಮೋದನೆ, ಟೀಕೆ ಇದ್ದೇ ಇರುತ್ತವೆ. ವ್ಯವಸ್ಥೆಯ ಸಮರ್ಥನೆಯೂ ಇರಬಹುದು.

ಬದುಕಿನ ಹಠ, ಛಲ ವಿಚಿತ್ರ ಮನುಷ್ಯ ಭೂಮಿಯ ಮೇಲಿನ ಎಲ್ಲವೂ ನನ್ನದೇ ಎಂಬ ಭಾವ ಹೊಂದಿರುತ್ತಾನೆ ಅದಕ್ಕಾಗಿ ಅನೇಕ 'ಹೂಟ' ಹೂಡುತ್ತಾನೆ. ಇಂತ ಬಗೆಯನ್ನು ಈ ಅಧ್ಯಯನ ಅಗತ್ಯವಿದ್ದಲ್ಲಿ ಅನುಗಮನ, ನಿರ್ಗಮನ ಪದ್ಧತಿಗಳೆರಡನ್ನೂ ಆಶ್ರಯಿಸಿ ವಿಶ್ಲೇಷಿಸುತ್ತದೆ.

ಸಮಕಾಲೀನ ಅಭಿವ್ಯಕ್ತಿಗೆ ಅನೇಕ ಒತ್ತಾಸೆಗಳು ಇರುವಂತೆ ಆಂತರಿಕ ಸೃಜನೆ ಕೂಡ ಪೂರಕವಾಗಿರುತ್ತದೆ. ಈ ಸೃಜನತೆಯ ಧ್ವನಿ ಸಾಧ್ಯತೆ ಅನೇಕ ಆಯಾಮ ಹೊಂದಿರುತ್ತವೆ. ಪ್ರಸ್ತುತ ಅಧ್ಯಯನ ಕಾರಂತರ ಕಾದಂಬರಿಗಳ 'ಧ್ವನಿ'ಗಳನ್ನು ವಿಶ್ಲೇಷಿಸಲು ಯತ್ನಿಸಿದೆ. ಈ ಹಿಂದಿನ ಅಧ್ಯಯನಗಳನ್ನು ಸ್ಥೂಲವಾಗಿ ಗಮನಿಸಿ ಪ್ರಸ್ತುತ ಅಧ್ಯಯನ ತನ್ನದೇ ಆದ ನಿಲುವುಗಳೊಂದಿಗೆ ಅವುಗಳ ತುಲನೆ, ಸಮೀಕರಣ, ಪ್ರಾಮಾಣ್ಯಗಳೊಂದಿಗೆ ಮುಂದುವರೆದಿದೆ. ಅದಕ್ಕಾಗಿ ಸಾಹಿತ್ಯಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ದೃಷ್ಟಿಕೋನಕ್ಕೆ ಮಹತ್ವ ನೀಡಲಾಗಿದೆ. ಬಹುಶಿಸ್ತೀಯ ವಿಶ್ಲೇಷಣೆ ಅಗತ್ಯವಿದ್ದಲ್ಲಿ ಬಳಕೆಯಾಗಿದೆ. ಒಂದು ಬಗೆಯಲ್ಲಿ ಇದು ಖಂಡವೂ, ಅಖಂಡವೂ ಆದ ಚೌಕಟ್ಟು ಹೊಂದಿದ ಅಧ್ಯಯನವಾಗಿದೆ.

ಕಾರಂತರ ಗ್ರಹಿಕೆ ಅಭಿವ್ಯಕ್ತಿಗಳ ಪ್ರತಿಫಲನವೇ ಅವರ ಕಾದಂಬರಿಗಳು. ಈ ಕಾದಂಬರಿಗಳ ರೂಪ–ಸ್ವರೂಪಗಳನ್ನು ಗಮನಿಸುತ್ತಲೇ, ಅವುಗಳ ರಾಚನಿಕ ಮತ್ತು ಆಂತರಿಕ ನಿಲುವುಗಳನ್ನು ಈ ಅಧ್ಯಯನ ಗುರುತಿಸಿದೆ. 'ಸಮಾಜ' ಸಾಹಿತ್ಯದಲ್ಲಿ ತೆಳೆಯುವ ರೂಪಾಂತರಗಳನ್ನು ಗುರುತಿಸುತ್ತಲೇ ಅದು 'ಸಾಂಸ್ಕೃತಿಕ ದಾಖಲೆ' ಆಗಿರುವ ಬಗೆಯನ್ನು ಗಮನಿಸಲಾಗಿದೆ.

ಮನುಷ್ಯನ ಆಶೋತ್ತರ, ಬದುಕುವ ದಾರಿ, ಅದಕ್ಕಾಗಿ ಆಶ್ರಯಿಸಿದ ವಿಧಾನ, ಇವೆಲ್ಲವೂ ಕಾದಂಬರಿಯ ಚೌಕಟ್ಟಿಗೆ ಒಳಪಟ್ಟಿರುವ ರೀತಿಗಳನ್ನು ಅಧ್ಯಯನ ಪೃಥಕ್ಕರಿಸಿದೆ. ಮನುಷ್ಯನ ದೈಹಿಕ, ಮಾನಸಿಕ ಸ್ತರಗಳ ಸೂಕ್ಷ್ಮ ಅವಲೋಕನದಿಂದ ಕಾರಂತರ ಕಾದಂಬರಿಗಳಲ್ಲಿ ಮೂಡಿರುವ ಅವರ ಕನಸುಗಳನ್ನು ವಿಶ್ಲೇಷಿಸಲಾಗಿದೆ. ಅದೇ ನಿಟ್ಟಿನಲ್ಲಿ ಕಾರಂತರದೇ ಆದ ವೈಶಿಷ್ಟ್ಯಗಳು, ಅವು ಸೃಜನವಾಗಿ ಹೊಮ್ಮಿದ ಬಗೆ, ಅವರು ಸಮಕಾಲೀನ ಕಾದಂಬರಿಕಾರರಿಂದ ಹೊಂದಿರುವ ಸಾಮ್ಯತೆ, ಭಿನ್ನತೆಗಳನ್ನು ಸ್ಪಷ್ಟೀಕರಿಸಿದೆ. ಮೇಲ್ನೋಟಕ್ಕೆ ಸ್ಥೂಲ ಎನಿಸುವ ಈ ಅಧ್ಯಯನ ಆಂತರಿಕವಾಗಿ ಸೂಕ್ಷ್ಮ ಅವಲೋಕನಕ್ಕೆ ಕೈಚಾಚಿದೆ.

ವ್ಯಾಪ್ತಿ

ಕಾರಂತರು ಸುಮಾರು ಐವತ್ತೈದಕ್ಕೂ ಹೆಚ್ಚು ಕಾದಂಬರಿಗಳನ್ನು ರಚಿಸಿದ್ದಾರೆ. ಮಹಾಪ್ರಬಂಧದ ಗಾತ್ರ-ಸೂತ್ರಗಳನ್ನು ಅನುಸರಿಸಿ ಕೆಲವು ಆಯ್ದ ಕಾದಂಬರಿಗಳನ್ನು 'ಪರಿಪ್ರೇಕ್ಷ್ಯ'ಗಳನ್ನಾಗಿ ಈ ಅಧ್ಯಯನದಲ್ಲಿ ಆಯ್ಕೆ ಮಾಡಿಕೊಳ್ಳಲಾಗಿದೆ. ಹಾಗಾಗಿ ಮರಳಿ ಮಣ್ಣಿಗೆ, ಬೆಟ್ಟದ ಜೀವ, ಚೋಮನ ದುಡಿ, ಕುಡಿಯರ ಕೂಸು, ಇದ್ದರೂ ಚಿಂತೆ, ಧರ್ಮರಾಯನ ಸಂಸಾರ, ಗೆದ್ದದೊಡ್ಡಸ್ಥಿಕೆ, ಮೂಕಜ್ಜಿಯ ಕನಸುಗಳು, ಶನೀಶ್ವರನ ನೆರಳಿನಲ್ಲಿ, ನಂಬಿದವರ ನಾಕ ನರಕ, ಅಳಿದ ಮೇಲೆ, ಮೊಗ ಪಡೆದ ಮನ ಎಂಬ ಕಾದಂಬರಿಗಳನ್ನು ಈ ಅಧ್ಯಯನದ ಮೂಲ ಆಕರಗಳನ್ನಾಗಿ ಪರಿಗಣಿಸಲಾಗಿದೆ. ಉಳಿದಂತೆ ಅವರ ಇತರ ಕಾದಂಬರಿಗಳ ಚರ್ಚೆ ಸಾಂಧರ್ಭಿಕವಾಗಿ ಈ ಅಧ್ಯಯನದಲ್ಲಿ ಕಾಣಿಸಿಕೊಂಡಿದೆ.

ಕೇವಲ 'ಒಂದು ನೆಲೆ' ಯಾವುದೇ ಕಾದಂಬರಿಯಲ್ಲಿ ಧ್ವನಿತವಾಗುವುದು ಅಪರೂಪ ಮತ್ತು ಕೆಲ ಲೇಖಕರಲ್ಲಿ ಮಾತ್ರ. ಹಾಗೆ ನಿರ್ದಿಷ್ಟ ಉದ್ದೇಶ ಇಟ್ಟುಕೊಂಡು ಪ್ರಗತಿಶೀಲರು ತಮ್ಮ ಕಾದಂಬರಿಗಳನ್ನು ರಚಿಸಿರುವುದು ಉಂಟು. ಎಸ್.ಎಲ್.ಭೈರಪ್ಪನವರ ಕೆಲ ಕಾದಂಬರಿಗಳ 'ಧ್ವನಿ' ಏಕೋದ್ದೇಶ ಆಗಿರುವುದನ್ನು ವಿಮರ್ಶಕರು ಗುರುತಿಸಿದ್ದಾರೆ.

ಆದರೆ ಕಾರಂತರ 'ಅರಿವು' ಸೀಮಿತವಾದದ್ದಲ್ಲ. ಹಾಗಾಗಿ ಅವರ ಕಾದಂಬರಿಗಳಲ್ಲಿ ಎಲ್ಲವೂ ಇದೆ. ಕೆಲ ಅಂಶ ಮುಖ್ಯವಾಗಿದೆ ಅಷ್ಟೆ. ಕಾರಂತರ 'ಶೋಧ' ಅವರ ಕಾದಂಬರಿಗಳ ತಾತ್ವಿಕತೆ ಆಗಿದೆ. ಆ ಶೋಧದಲ್ಲಿ ವ್ಯಕ್ತಿ, ಸಮಾಜ, ಪ್ರಕೃತಿ, ಸಂಸ್ಕೃತಿ ಮತ್ತು ಕಾಲಗಳಿವೆ. ಪ್ರಕೃತಿಯ ಮೂಲಾಂಶವಾದ 'ಭೂಮಿ'ಯನ್ನು ಕಾರಂತರು ಮಂಡಿಸಿರುವ ಬಗೆ, ಅದರ ಹಿನ್ನೆಲೆಯನ್ನು ಈ ಅಧ್ಯಯನ ವಿಶ್ಲೇಷಿಸಿದೆ.

'ಭೂಮಿ' ಎಂಬ ಪದವೇ ಅನೇಕ ಭಾವಗಳನ್ನು ಉದ್ದೀಪಿಸುತ್ತದೆ. ಈ ಭಾವಗಳ ಹಿನ್ನೆಲೆ ಕೂಡ ಸಾಪೇಕ್ಷ. ಇದು ಕೆಲವರಿಗೆ ಕೇವಲ 'ನೆಲ' ಮತ್ತೆ ಕೆಲವರಿಗೆ 'ತಾಯಿ' ಇನ್ನು ಕೆಲವರಿಗೆ ಸ್ಥಳ, ರಾಜ್ಯ, ದೇಶ, ಅದನ್ನು ಮಿರಿದ ಅನುಭೂತಿಯೂ ಸಾಧ್ಯ.

ಭೂಮಿ ಮತ್ತು ಮನುಷ್ಯನ ಸಂಬಂಧಗಳಲ್ಲಿ ಅನೇಕ ಸ್ತರಗಳಿವೆ. ಅವು ನಲ್ಲೆ–ನಲ್ಲ, ಆಳು–ಒಡೆಯ ಮೇಲು–ಕೀಳು, ದಯೆ–ಕ್ರೌರ್ಯ, ಶ್ರಮ–ದಾನ ಕಾರಂತರು ಈ ಸಂಬಂಧಗಳನ್ನು ಗ್ರಹಿಸಿರುವ ರೀತಿ, ಈ ಗ್ರಹಿಕೆ ಉಳಿದ ಸಮಕಾಲೀನ ಕಾದಂಬರಿಕಾರರಿಗಿಂತ ಭಿನ್ನವಾಗಿರುವ ಬಗೆಯನ್ನು ಗುರುತಿಸುವುದು ಈ ಮಹಾಪ್ರಬಂಧದ ವ್ಯಾಪ್ತಿಯ ಮುಖ್ಯ ಸೆಲೆಯಾಗಿದೆ.

******

ಅಧ್ಯಾಯ–೨

ಹಿಂದಿನ ಅಧ್ಯಯನಗಳ ತಾತ್ವಿಕ ಸಮೀಕ್ಷೆ

ಆಧುನಿಕ ಕನ್ನಡ ಸಾಹಿತ್ಯವನ್ನು ಸರಿಸುಮಾರು ಅರ್ಧ ಶತಮಾನವನ್ನು ಕಾರಂತರು ಪ್ರಭಾವಿಸಿದ್ದಾರೆ. ಆ ದೃಷ್ಟಿಯಿಂದ ಅವರಿಗೆ ಹೋಲಿಸಬಹುದಾದ ಮತ್ತೊಬ್ಬ ಮಹತ್ವದ ಲೇಖಕರೆಂದರೇ ಕುವೆಂಪು, ಇಬ್ಬರೂ ಪ್ರಕೃತಿ ಪ್ರಿಯರು. ಕಾರಂತರದು ಬಹುಮುಖ ಆಸಕ್ತಿ, ಕುವೆಂಪು ಬಹುಮುಖ ಪ್ರತಿಭೆ ಉಳ್ಳವರು. ಈ ಇಬ್ಬರು ಬಗೆಬಗೆಯ ಅಧ್ಯಯನಗಳಿಗೆ ಒಳಗಾಗಿರುವುದೂ ವಿಶೇಷವೇ.

ಅಂತೆಯೇ ಕಾರಂತರ ಸಾಹಿತ್ಯ ಮತ್ತು ಪ್ರಯೋಗಶೀಲತೆ ಬಹುಮುಖಿ ಅಧ್ಯಯನಕ್ಕೆ ತೆರೆದುಕೊಂಡಿವೆ. ಯಕ್ಷಗಾನದಲ್ಲಿ ಕಾರಂತರ ಪ್ರಯೋಗಶೀಲತೆ, ಸಣ್ಣಕತೆಗಳಲ್ಲಿ ಅವರು ನಡೆಸಿದ ಪ್ರಯೋಗ, ವಿಜ್ಞಾನ ವಿಚಾರ ಕುರಿತಂತೆ ಅವರ ನಿಲುವು ಹೀಗೆ ಕಾರಂತರ ಬಹುತೇಕ ಅಭಿವ್ಯಕ್ತಿಗಳು ಕಾಲಕಾಲಕ್ಕೆ ಅಧ್ಯಯನಕ್ಕೆ ಒಳಗಾಗಿವೆ.

ಕಾರಂತರು ಪ್ರವಾಸ ಪ್ರಿಯರು. ಅವರ ಪ್ರವಾಸ ಕಥನಗಳೂ ಬಹಳಷ್ಟಿವೆ. ಅವುಗಳಲ್ಲಿ ಮೂಡಿರುವ 'ದರ್ಶನ' ಅನೇಕ ಅಧ್ಯಯನಗಳಿಂದ ಈಗಾಗಲೇ ದಾಖಲಾಗಿವೆ. ಅಂತೆಯೇ ಕಾರಂತರ ಕಾದಂಬರಿಗಳ ಅಧ್ಯಯನ ಕೂಡ.

ಮುನಿಯಪ್ಪನವರ 'ಕಾರಂತರ ಕಾದಂಬರಿಗಳಲ್ಲಿ ರಾಜಕೀಯ ಪ್ರಜ್ಞೆ', ಆರ್.ಮಂಜುನಾಥ್ ರವರ 'ಕಾರಂತರ ಸಾಮಾಜಿಕ ಕಾದಂಬರಿಗಳ ವಿಡಂಬನಾ ಸ್ವರೂಪ' ರೇವಯ್ಯ ಒಡೆಯರ್‌ರವರ' ಕಾರಂತರ ಕಾದಂಬರಿಗಳಲ್ಲಿ ಮಾನವೀಕರಣದ ನೆಲೆಗಳು.'ಶಿವರಾಜ್ ತುಕ್ಕಪ್ಪ ರವರ ಕಾರಂತರ 'ಅಳಿದ ಮೇಲೆ ಒಂದು ಅಧ್ಯಯನ' 'ಸುನೀತಾ ಎಂ. ಶೆಟ್ಟಿರವರ 'ಕಾರಂತರರ ಕಾದಂಬರಿಗಳಲ್ಲಿ ಸ್ತ್ರೀ', ನಾಗೇಂದ್ರಕುಮಾರ್ ಅವರ 'ಕಾರಂತರ ಸಂಸ್ಕೃತಿ ಪರಿಕಲ್ಪನೆಯ ನೆಲೆಗಳು', ಮಲ್ಲಿನಾಥ ಎಸ್. ತಾಳವಾರ್ ರವರ 'ಕಾರಂತರ ಕಾದಂಬರಿಗಳಲ್ಲಿ ಸ್ತ್ರೀ ಪ್ರಪಂಚ' ಮೊದಲಾಗಿ ವಿವಿಧ ಅಧ್ಯಯನಗಳು ಕಾರಂತರ ಸೃಜನ ವಿಶೇಷವನ್ನು ದಾಖಲಿಸಿವೆ.

ಈ ಅಧ್ಯಯನಗಳಲ್ಲಿ ಅಧ್ಯಯನದ ಅನುಕೂಲಕ್ಕಾಗಿ ಒಂದು ಬಗೆಯ 'ಖಂಡ' ದೃಷ್ಟಿ ಇದೆ. ಆದರೆ ಸರಿಸುಮಾರು ಒಂದು ಶತಮಾನವನ್ನು ಜೀವಿಸಿದ ಬಹುಮುಖ ಅಭಿವ್ಯಕ್ತಿಯುಳ್ಳ ಲೇಖಕರೊಬ್ಬರನ್ನು ಒಂದೊಂದೇ 'ಪರಿಕಲ್ಪನೆ' ಆಧರಿಸಿ ವಿಶ್ಲೇಷಿಸುವಾಗ 'ಅಧ್ಯಯನದ ಅಸಮಗ್ರತೆ' ಕಾಣಬಹುದು, ಕಾಡಬಹುದು.

ಕಾದಂಬರಿಗಳನ್ನು ಬಿಡಿ ಬಿಡಿ ಪರಿಕಲ್ಪನೆಗಳಿಗಾಗಿ ಪರಿಕಲ್ಪನೆಗಳಿಂದ ಓದಿದಾಗ ಅಧ್ಯಯನಕ್ಕೆ ಅನುಕೂಲತೆ ಒದಗಿಬಂದರೂ ಇಡಿಯಾಗಿ ಒಬ್ಬ ಕಾದಂಬರಿಕಾರನ 'ಅಖಂಡ

ತಾತ್ವಿಕತೆ' 'ಅಂತಿಮ ದರ್ಶನ' ದಕ್ಕದೆ ಹೋಗಬಹುದು. ಏಕೆಂದರೆ ಕೇವಲ ರಾಜಕೀಯ ಪ್ರತಿಜ್ಞೆ ಕುರಿತ ಅಧ್ಯಯನ ಕಾದಂಬರಿಕಾರನ ಉಳಿದ ಗ್ರಹಿಕೆ ಮತ್ತು ನಿಲುವನ್ನು ಲಕ್ಷಿಸದೇ ಹೋಗಬಹುದು. ವ್ಯಂಗ್ಯ, ಟೀಕೆ, ವಿಮರ್ಶೆಗಳನ್ನು ಗಮನಿಸಿ ಕೆಲವು ಕಾದಂಬರಿಗಳನ್ನು ಅಭ್ಯಾಸ ಮಾಡಿದಾಗ ಕೂಡ ಕಾದಂಬರಿಕಾರನ ಒಟ್ಟಾರೆ, ನಿಲುವು ಕಾಣಿಸದೆ ಇರಬಹುದು. 'ಮಾನವೀಕರಣ' ಎಂಬ ಪರಿಕಲ್ಪನೆಯಿಂದ ನೋಡಿದಾಗ ಕಾದಂಬರಿಕಾರ ಚಿತ್ರಿಸಿದ ಈ ಸಮಾಜದ ವ್ಯಕ್ತಿಗಳ ಅಮಾನವೀಯ ಸಹಜ ನೆಲೆಗಳು ತಪ್ಪಿಸಿಕೊಳ್ಳಬಹುದು. ಒಂದೇ ಕಾದಂಬರಿಯನ್ನು ಅಧ್ಯಯನಕ್ಕೆ ಒಳಪಡಿಸಿದಾಗ 'ವಸ್ತು' ವಿನ ಮಿತಿ ಅಧ್ಯಯನವನ್ನು ಬಾಧಿಸಬಹುದು. ಕೇವಲ 'ಸ್ತ್ರೀ' ಪಾತ್ರಗಳ ಚಿತ್ರಣವನ್ನಷ್ಟೇ ಗಮನಿಸಿದಾಗ ಅದು 'ಏಕಮುಖಿ' ಅಧ್ಯಯನ ಆಗಬಹುದು. ಕಾದಂಬರಿಗಳಲ್ಲಿ ಬಿಂಬಿತವಾಗಿರುವ 'ಸಂಸ್ಕೃತಿ' ಕುರಿತ ಚರ್ಚೆ ವೈಭವೀಕರಣಕ್ಕೆ ಇಲ್ಲವೇ ಸಾಮಾನ್ಯೀಕರಣದ ಅಪಾಯವೂ ಎದ್ದುಕಾಣುವ ಸಂಭವವಿದೆ.

ಸಾಹಿತ್ಯದ ಅಧ್ಯಯನವೇ ವಿಶಿಷ್ಟವಾದುದು. ಒಂದು ಕಲ್ಪಿತ ಜಗತ್ತು ವಾಸ್ತವ ಜಗತ್ತಿಗೆ ಪ್ರತಿಕ್ರಿಯಿಸಿದ ಬಗೆಯೇ ಸಾಹಿತ್ಯದ ಅಭಿವ್ಯಕ್ತಿ. ಈ ಕಲ್ಪಿತ ಜಗತ್ತಿನ ಸೃಷ್ಟಿಯ ಹಿಂದಿರುವ ಲೇಖಕನ ತಾತ್ವಿಕತೆ ಅಧ್ಯಯನ ಯೋಗ್ಯ. ಅಂತ ದೃಷ್ಟಿಕೋನದಿಂದ ಈ ಅಧ್ಯಯನ ಯೋಗ್ಯ. ಅಂತ ದೃಷ್ಟಿಕೋನದಿಂದ ಈ ಅಧ್ಯಯನ ಸಾಕಾರಗೊಂಡಿದೆ. ಅದನ್ನು ಯು.ಆರ್. ಅನಂತಮೂರ್ತಿ ಯವರ ಈ ಮಾತು ಸಮರ್ಥಿಸುತ್ತದೆ. *"ನಾವು ನಿಜ ಪ್ರಪಂಚದಲ್ಲಿ ಬದುಕುವಂತೆ ಕಾದಂಬರಿಯ ತನ್ನದೇ ಆದ ಪ್ರಪಂಚದಲ್ಲಿಯೂ ಬದುಕುತ್ತೇವೆ"*.[7]

ಕಾದಂಬರಿ ಒಂದು ಬಗೆಯ ಪ್ರತಿಸೃಷ್ಟಿ. ಅಲ್ಲಿ ದ್ವಂದ್ವ , ಪ್ರತಿಫಲನ, ಸಂಘರ್ಷ, ದರ್ಶನ ಮೊದಲಾದವು ಮೇಳೈಸಿರುತ್ತವೆ. ಕಾದಂಬರಿಯ ಒಳಜಗತ್ತು ಒಂದು ಬಗೆಯಲ್ಲಿ ಸ್ವಯಂ ಪೂರ್ಣ ಇಲ್ಲಿ ಮೌಲ್ಯಗಳ ಸಂಘರ್ಷವಿರುತ್ತದೆ. ಬದುಕಿನ ವೈರುಧ್ಯಗಳಿರುತ್ತದೆ. ನೈತಿಕತೆಯ ಶೋಧವಿರುತ್ತದೆ.

ಕಾರಂತರ ಮುಖ್ಯ ಕಾದಂಬರಿಗಳು ರಚಿತವಾಗಿರುವುದು ಸ್ವಾತಂತ್ರ್ಯ ಪೂರ್ವದಲ್ಲಿ ಇವುಗಳ ನೆಲೆ 'ವಾಸ್ತವವಾದಿ' ದೃಷ್ಟೀಕೋನ. ಈ ಕಾದಂಬರಿಗಳು ಸಮಾಜ ಮತ್ತು ಕುಟುಂಬದ ಬಹುಮುಖಗಳ ಅನಾವರಣಕ್ಕೆ ಯತ್ನಿಸಿವೆ. ಅದೇ ಕಾರಣಕ್ಕೆ ಈ ಕಾದಂಬರಿಗಳು ಸರಳ ರೇಖಾತ್ಮಕ ಎನಿಸುತ್ತವೆ. ಆದರೂ ವ್ಯಕ್ತಿಯ ಖಾಸಗೀ ವ್ಯಕ್ತಿತ್ವದ ವಾಸ್ತವ ಮತ್ತು ಅದು ಸಮಷ್ಟಿ ಜೊತೆ ಸಾಗುವ ಬಗೆಯಲ್ಲಿ ಒಂದು 'ನೈತಿಕ ಪ್ರಜ್ಞೆ' ಕಾರ್ಯ ನಿರ್ವಹಿಸಿದೆ. ಇದನ್ನು ಗುರುತಿಸುವುದೇ ಈ ಅಧ್ಯಯನದ ಕೇಂದ್ರ ಕಾಳಜಿಯಾಗಿದೆ.

ಕಾರಂತರ ಸಾಹಿತ್ಯ ಕುರಿತಂತೆ ಕನ್ನಡದ ಅನೇಕ ಮುಖ್ಯ ಲೇಖಕರು ಚರ್ಚಿಸಿದ್ದಾರೆ. ಯು.ಆರ್.ಅನಂತಮೂರ್ತಿ, ಟಿ.ಪಿ.ಅಶೋಕ, ಪಿ.ಲಂಕೇಶ್, ಡಿ.ಆರ್.ನಾಗರಾಜ್, ಸಿ.ಎನ್ ರಾಮ

7. [illegible]

ಚಂದ್ರನ್, ನಟರಾಜ ಹುಳಿಯಾರ್, ಕೆ.ವಿ.ನಾರಾಯಣ, ಸಮತೀಂದ್ರ ನಾಡಿಗ, ಮೊಗಳ್ಳಿ ಗಣೇಶ, ಮಾಲಿನಿ ಮಲ್ಯ, ಎಚ್.ಎಸ್.ಶ್ರೀಮತಿ, ಕೀರ್ತಿನಾಥ ಕುರ್ತುಕೋಟಿ, ಸುಮಿತ್ರಾಬಾಯಿ, ಬಿ.ಎನ್. ನರಹಳ್ಳಿ ಬಾಲಸುಬ್ರಮಣ್ಯ, ಜಿ.ಎಚ್.ನಾರಾಯಣ, ಚಂದ್ರಶೇಖರ ಐತಾಳ, ಬಿ.ಎ.ವಿವೇಕರೈ, ಶಂಕರ ಮೊಕಾಶಿ ಪುಣೇಕರ, ಕಿ.ರಂ. ನಾಗರಾಜು, ಪೋಲಂಕಿ ರಾಮಮೂರ್ತಿ ಮೊದಲದಂತೆ ಅನೇಕ ಹಿರಿ–ಕಿರಿಯ ಲೇಖಕರಿಂದ ಕಾರಂತರ ಕಾದಂಬರಿಗಳು ವಿಶ್ಲೇಷಿಸಲ್ಪಟ್ಟಿದೆ.

ಕಾರಂತರ ಕಾದಂಬರಿಗಳನ್ನು ಕುರಿತು ಕೈಗೊಂಡ ಅಧ್ಯಯನಗಳ ಹಿಂದಿನ ತಾತ್ವಿಕತೆಯನ್ನು ಈ ಕೆಳಗಿನಂತೆ ಸ್ಥೂಲವಾಗಿ ವಿವರಿಸಲಾಗಿದೆ. ಅವುಗಳಲ್ಲಿ ಮೂರು ಬಗೆ:

೧. ಶೈಕ್ಷಣಿಕ ಸಂಶೋಧನೆ.

೨. ವಿಶ್ಲೇಷಕ ಬರಹ–ಸಂಗ್ರಹಿತ ಅಭಿಪ್ರಾಯ.

೩. ವಿಮರ್ಶೆ

ಈ ಮೂರು ಬಗೆಗಳನ್ನು ವಿಲೋಮವಾಗಿ ಚರ್ಚಿಸಲಾಗಿದೆ.

೧. ಶೈಕ್ಷಣಿಕ ಸಂಶೋಧನೆಗಳು:

ಈಗಾಗಲೇ ತಿಳಿಸಿರುವಂತೆ ಈ ಅಧ್ಯಯನಗಳ ತಾತ್ವಿಕತೆ 'ಅಕಾಡಮಿಕ್' ನಿಲುವಿನದು, ಇವು ತಾಂತ್ರಿಕವಾಗಿ ಗಮನಸೆಳೆದ ಅಧ್ಯಯನ. ವಿಮರ್ಶೆಯ ಖಚಿತತೆ ಇಲ್ಲಿ ಕಡಿಮೆ, ಅಧ್ಯಯನದ ಗಾಂಭೀರ್ಯ ಮುಖ್ಯ ಎನಿಸಿ ಸಂಶೋಧಕ ಒಂದು ಬಗೆಯ ತಟಸ್ಥ ನಿಲುವು ತಾಳುವುದನ್ನು ಈ ಅಧ್ಯಯನ ಸ್ವಯಂ ದೃಢೀಕರಿಸುತ್ತದೆ.

ಶೈಕ್ಷಣಿಕ ಸಂಶೋಧನೆಗಳು ಸ್ವಚ್ಛಂದ ಅಧ್ಯಯನಗಳಾಗುವುದು ಬಲು ಅಪರೂಪ. ಕಾರಣ ಇವು ಒಂದು ಚೌಕಟ್ಟಿಗೆ ಬದ್ಧವಾಗಿರುತ್ತವೆ. ರಾಜಕೀಯ ಪ್ರಜ್ಞೆ, ಮಾನವೀಕರಣ, ಸ್ತ್ರೀ, ಸಾಮಾಜಿಕ ಸ್ವರೂಪ ಎಂಬಂತೆ ಬಿಡಿಬಿಡಿ 'ಕೇಂದ್ರ'ಗಳ ಮೂಲಕ ಅಧ್ಯಯನ ಕೈಗೊಂಡಾಗ 'ತಾಂತ್ರಿಕ' ವಾಗಿ ಇವು ಸರಿ ಎನಿಸಿದರೂ ಒಬ್ಬ ಲೇಖಕನ ಪೂರ್ಣ ದೃಷ್ಟಿಕೋನವನ್ನು ಮಂಡಿಸದೇ ಹೋಗುವ ಸಂಭವವೂ ಉಂಟು.

೨. ವಿಶ್ಲೇಷಕ ಬರಹ:

ಇವು ಒಬ್ಬ ಲೇಖಕನಿಗೂ ಅಥವ ಕೃತಿಗೆ ಐವತ್ತು, ಅರವತ್ತು, ಎಪ್ಪತ್ತು – ಹೀಗೆ ವಯಸ್ಸು ಆದಂತೆ ಅಭಿನಂದನ ಗ್ರಂಥಕ್ಕೂ, ಸ್ಮರಣ ಗ್ರಂಥಕ್ಕೂ ಬರೆದವಾಗಿರುತ್ತದೆ. ಇದರಲ್ಲಿ ವಿಮರ್ಶೆ ಪೂರ್ತಿ ಗೈರಾಗಿರುವುದು ಸಾಧ್ಯ. ಬರೆಯುವುದೇ ಸಾಧನೆ, ಬರಹಗಾರನದು ಬಹು ಸಾಧನೆ ಎಂಬ ಹೊಗಳಿಕೆ ಕುರಿತು ಇಂಥ ಬರಹ ತನ್ಮಯವಾಗಿರುತ್ತದೆ. ಇದನ್ನು ಟಿ.ಪಿ. ಅಶೋಕ, ಜಯಶ್ರೀ ದೇಶಪಾಂಡೆ, ಪಾ.ವೆಂ.ಆಚಾರ್ಯ, ಮೊದಲಾದವರ ಲೇಖನಗಳಲ್ಲಿ ಗಮನಿಸಬಹುದು.

೩. ವಿಮರ್ಶೆ

ವಿಮರ್ಶೆ ಒಂದು ಕೃತಿ, ಒಬ್ಬ ಕೃತಿಕಾರನ ನಿಜವಾದ ಮೌಲ್ಯಮಾಪನ ಒಳಗೊಂಡಿರಬೇಕು. ಇದೇ ವಿಮರ್ಶೆಯ ತಾತ್ವಿಕತೆ ಅಥವಾ ತಾತ್ವಿಕ ವಿಮರ್ಶೆ. ಈ ತಾತ್ವಿಕತೆ ಲೇಖಕನ ತಾತ್ವಿಕತೆಯನ್ನು ಒರೆ ಹಚ್ಚಬೇಕು. ನಿರ್ದೇಶನವಾಗಿ ಕಾರಂತರ ಮಾತುಗಳು ಹೀಗಿವೆ.

"ಮಾನವನ ಊಹೆ, ಆಶಯ, ಧ್ಯೇಯ, ಪರಲೋಕದ ಕಲ್ಪನೆ ಮತ್ತು ಬಯಕೆ ಮೊದಲಾದುವೇ ಸಾಹಿತ್ಯದ ಪ್ರೇರಣಾಶಕ್ತಿಗಳು, ಒಂದು ದೃಷ್ಟಿಯಿಂದ ಅವು ಕಲ್ಪನಾಲೋಕದವು ಎಂದು ನನಗೆ ಅನಿಸುತ್ತದೆ. ನಾನೂ ಅಂಥ ಕೆಲವು ಕಥೆಗಳನ್ನು ಬರೆದುದುಂಟು".[೧]

"ಇಂದಿನ ನಾವು ನಮ್ಮ ಕಾದಂಬರಿಗಳ ರಚನೆಗೆ ಇಂತಹ ವಸ್ತುಗಳನ್ನು ತೆಗೆದುಕೊಳ್ಳುವುದಿಲ್ಲ. ಪಾಶ್ಚಾತ್ಯರ ಪ್ರಭಾವದಿಂದಾಗಿ ಅದಷ್ಟು ಮಟ್ಟಿಗೆ ನಾವು ವಾಸ್ತವ ಲೋಕಕ್ಕೆ ಇಳಿದು, ಇಲ್ಲಿನ ವಸ್ತುಗಳನ್ನು ನಮ್ಮ ಕಾದಂಬರಿಗೆ ಆರಿಸುತ್ತಿದ್ದೇವೆ."[೩]

"ಸಂಸ್ಕೃತದಿಂದ ಪ್ರಭಾವಿತವಾದ ಆ ಬಗೆಯ ವಾಕ್ಯ ರಚನೆಗಳುಳ್ಳ ಅಲ್ಲಿನ ಕನ್ನಡವನ್ನು ಕೇವಲ ಭಕ್ತಿಯಿಂದ ಓದಿ ಪಾರಾಗಬೇಕೇ ಹೊರತು, ಇನ್ನಾವುದರಿಂದಲೂ ಅಲ್ಲ".[೪]

ಎಲ್ಲಿಯತನಕ ನಾವು ವಾಸ್ತವಿಕ ಲೋಕದಲ್ಲಿ ಬದುಕಿದ್ದರೂ, ಜೀವನದ ಅನುಭವ ಸಾಲದೆ ಹೋದಾಗ, ಬರೆಯಬೇಕೆನ್ನುವ ಹಂಬಲ ಬೆಳೆಯಿಸಿದವಾದರೆ ನಮ್ಮದು ಮನೋಲೋಕದ ವಿಹಾರ ವಾಗುತ್ತದೆ.

ಹಿಂದಣ ದಶಕಗಳ ಕಾದಂಬರಿಗಳನ್ನು ನಾವು ಬೇರೆ ಬೇರೆ ದೃಷ್ಟಿಗಳಿಂದ ನೋಡಬಹುದಾಗಿದೆ. ಇವತ್ತಿನ ಹಲವಾರು ಬರವಣಿಗೆಯ ತಂತ್ರವನ್ನಷ್ಟೆ ಸಾಹಿತ್ಯದ ಮೌಲ್ಯ ಮಾಪನೆಗೆ ಬಳಸುವುದನ್ನು ಕಾಣುತ್ತೇವೆ. ನಾನು ಇಂದಿಗೂ ಆ ವಿಷಯದಲ್ಲಿ ತಲೆ ಕೆಡಿಸಿ ಕೊಂಡವನಲ್ಲ.

ನನಗೆ ಯಾವುದು ಅನುಭವವಾಗಿತ್ತೋ, ಅಂತಹ ಅನುಭವ ಇಲ್ಲದ ಓದುಗರಿಗೆ ನನ್ನ ಚಿತ್ರಣ ಅಸಹಜ ಎನಿಸಲೂ ಬಹುದು

'ಕೇವಲ ವ್ಯಕ್ತಿಗತ ಹಂಬಲಗಳು ಕಾದಂಬರಿಯ ವಸ್ತುವಾದಾಗ ವಾಸ್ತವಿಕತೆಯಾಗಲಿ, ಸಾಧ್ಯಸಾಧ್ಯತೆಗಳಾಗಲಿ ಮುಖ್ಯವಾಗಿ ಕಾಣಿಸದೇ, ಒಂದು ಕನಸಿನ ಲೋಕ ಚಿತ್ರಿಸಲ್ಪಡುತ್ತದೆ'.

ಕಾರಂತರ ಮಾತುಗಳಿಗೆ ಸಮರ್ಥನೆ ಒದಗಿಸುವ ಈ ಹೇಳಿಕೆ ಗಮನಾರ್ಹ. "ಆದರ್ಶ ಮತ್ತು ವಾಸ್ತವಗಳ ನಡುವಿನ ಸಂಬಂಧವನ್ನು ರೂಪಿಸುವುದು ಕಾದಂಬರಿಯ ರೂಪ. ಇಲ್ಲಿ ರೂಪ ಎನ್ನುವುದು ಕೃತಿಯ ವಸ್ತು, ಅದರ ತತ್ವ ಮತ್ತು ಜೀವನಾದರ್ಶನಗಳ ನಡುವಿನ ಅಂತರ್ ಪ್ರಕ್ರಿಯೆಯಿಂದ ಸಿದ್ಧವಾಗುತ್ತದೆ".

೧. ಕನ್ನಡ ಕಾದಂಬರಿಯ ಮೊದಲ ಹೆಜ್ಜೆಗಳು, ಪು.ಟ-೩ [illegible]
೩. ಕನ್ನಡ ಕಾದಂಬರಿಗಳ ಮೊದಲ ಹೆಜ್ಜೆಗಳು ಡಿ.ಆರ್. ನಾಗರಾಜು, [illegible]
೪. ಕನ್ನಡ ಕಾದಂಬರಿಗಳ ಮೊದಲ ಹೆಜ್ಜೆಗಳು ಡಿ.ಆರ್. ನಾಗರಾ[illegible]

ಈ ಮಾದರಿಯ ಅಭಿಪ್ರಾಯಗಳು ವಿಮರ್ಶೆಯ ಮಾನದಂಡಗಳಿಂದ ಉದ್ದೀಪನೆಗೊಂಡಂತವು. ಇವು ಲೇಖನ, ತಾತ್ವಿಕತೆ, ಕೃತಿಯ ಆಯಾಮಗಳನ್ನು ಸಮಗ್ರವಾಗಿ ಹಿಡಿಯಲು ಪ್ರಯತ್ನಿಸುತ್ತವೆ.

ಆದರೆ 'ಇಡಿ' ಅಧ್ಯಯನಗಳಿಗೆ ಮಾತ್ರ ಇಂತ ಸಾಧ್ಯತೆ ಧಕ್ಕಬಹುದು. 'ಬಿಡಿ' ಅಧ್ಯಯನಗಳು ಕೃತಿ ಅಥವಾ ಕೃತಿಕಾರನ ತಾತ್ವಿಕತೆಯ ಒಂದೋ, ಎರಡೋ ಆಯಾಮ ಮಾತ್ರ ಹೊಮ್ಮಿಸುವ ಸಾಧ್ಯತೆಯೇ ಹೆಚ್ಚು.

ಕಾದಂಬರಿ ನಾಡಿನ ಜನಾಂಗದ ಚರಿತ್ರೆಯ ಸೂಕ್ಷ್ಮಗಳನ್ನು ಹೊಮ್ಮಿಸುವ ಸಮರ್ಥ ಪ್ರಕಾರ. ಅದೇ ಕಾರಣಕ್ಕೆ ಕಾದಂಬರಿ ಸ್ಥಳೀಯ ಹಾಗೂ ವಿಶ್ವಸ್ಥ. ಕಾರಂತರ ಕಾದಂಬರಿಗಳು ಅದೇ ಕಾರಣಕ್ಕೆ ನಿಸರ್ಗ, ದೇಶ, ಗಾಂಧಿವಾದ, ಸಾಮಾಜಿಕ ತಳಮಳಗಳನ್ನು ಬಿಂಬಿಸಿವೆ. ಅಲ್ಲಲ್ಲಿ ವೈಚಾರಿಕತೆಯೂ ಇದೆ.

ಅಖಂಡ ಅರ್ಧಶತಮಾನ ಓದುಗರನ್ನು ಪ್ರಭಾವಿಸಿದ ಕಾರಂತರ ಬರಹದ ನೆಲೆಗಳನ್ನು ಈ ಕೆಳಕಂಡಂತೆ ಗ್ರಹಿಸಬಹುದು.

೧. ಭಿನ್ನ ಪ್ರಕಾರಗಳಲ್ಲಿ ತಮ್ಮ ಅಭಿವ್ಯಕ್ತಿಯನ್ನು ಪ್ರಕಟಿಸಿದರೂ ಕಾರಂತರ ಕುರಿತ ಬರಹ ಅವರನ್ನು ಕನ್ನಡದ ಪ್ರಮುಖ ಕಾದಂಬರಿಕಾರ ಎಂದೇ ಗ್ರಹಿಸಿದೆ.

೨. ವಿಶ್ವದ ಹಾಗೂ ಸಮಾಜದ ಅನೇಕ ಸೂಕ್ಷ್ಮಗಳನ್ನು ಅಭಿವ್ಯಕ್ತಿಸಿರುವ ಕಾರಂತರ ಗ್ರಹಿಕೆಯ ಬುನಾದಿಯಾಗಿ "ಆಧುನಿಕ ಶಿಕ್ಷಣ" ದ ಹಿನ್ನೆಲೆ ಬಹು ಕಡಿಮೆ.

೩. ಕಾರಂತರ ಕಾದಂಬರಿ ಪ್ರಪಂಚ ಬಹುತೇಕವಾಗಿ ಬ್ರಾಹ್ಮಣ ಸಮಾಜವನ್ನೇ ತನ್ನ ಕೇಂದ್ರವಾಗಿ ಹೊಂದಿರುವುದು. ಅಲ್ಲಲ್ಲಿ ಈ ಮಾತಿಗೆ ಅಪವಾದ ಸಿಕ್ಕಿಸಿದರೂ ಅವು "ತಾತ್ವಿಕ"ವಾಗಿ ಬಂದದ್ದಲ್ಲ, ಸಾಂದರ್ಭಿಕ ಮಾತ್ರ ಎನ್ನಬಹುದು.

೪. ಕಾರಂತರು ಜನಸಂಘದ ಬೆಂಬಲಿಗರು, ರಾಮಮಂದಿರ ನಿರ್ಮಾಣಕ್ಕೆ ಅವರ ತಾತ್ವಿಕ ಬೆಂಬಲವಿತ್ತು.

೫. ಆನೆ ನಡೆದದ್ದೆ ದಾರಿ ಎಂಬಂತೆ ಕಾರಂತರ ಅಭಿವ್ಯಕ್ತಿ ಬಾಸವಾಗುತ್ತದೆ. ಸಮಸ್ತವನ್ನೂ ದಿಟ್ಟಿಸುವಾಗ ಹಲವು ಸೂಕ್ಷ್ಮಗಳು ಧಕ್ಕದೆ ಹೋಗಬಹುದು.

ಈ ವಿಚಾರಗಳ ಹಿನ್ನೆಲೆಯಲ್ಲಿ ಕಾರಂತರವನ್ನು ಕುರಿತು ಬಂದಿರುವ ಬರಹಗಳ ತಾತ್ವಿಕತೆ ಗಮನಿಸಿದಾಗ ಕಾರಂತರನ್ನು ಪ್ರಾಯೋಗಿಕವಾಗಿ (ವಿಮರ್ಶಾನೆಲೆ) ಚರ್ಚಿಸಿದವರು ಬಹುಸಃ

ಕೆಲವರು ಮಾತ್ರ : ಅವರೆಂದರೆ ಜಿ.ಎಚ್.ನಾಯಕ, ಸಿ.ಎನ್.ರಾಮಚಂದ್ರನ್ ಮತ್ತು ಲಂಕೇಶರು ಎನ್ನಬಹುದು.

ಉಳಿದಂತೆ ಅವರ ಸಾಹಿತ್ಯ ಕುರಿತು ಬಂದಿರುವ ಬಿಡಿ ಲೇಖನಗಳು ವಿಶ್ಲೇಷಣೆ ಒಳಗೊಂಡಿದ್ದರೂ ವಿಮರ್ಶೆಯ ಆಯಾಮದಿಂದ ಕೊಂಚ ಅಂತರ ಕಾಪಾಡಿಕೊಂಡಿವೆ ಎನಿಸುತ್ತದೆ.

*****

ಅಧ್ಯಾಯ-೩

ಪರಿಕಲ್ಪನೆಗಳ ಚರ್ಚೆ ಮತ್ತು ಸಮಸ್ಯೀಕರಣ

ಭೂಮಿ ಮತ್ತು ಮನುಷ್ಯರ ಸಂಬಂಧ ಅವಿನಾಭಾವದ್ದು, ಆದರೆ 'ಭೂಮಿ' ಕುರಿತಂತೆ ಕಲ್ಪನೆ ಮತ್ತು ಗ್ರಹಿಕೆಗಳನ್ನು ಗಮನಿಸಿದಾಗ ಅಚ್ಚರಿ ಮೂಡಿಸುವ ಅಂಶಗಳಿವೆ.

ಭಿನ್ನ ಜಾತಿಗೆ ಸೇರಿದ ಜನ ಭೂಮಿ ಕುರಿತು ಭಿನ್ನ ಅಭಿಪ್ರಾಯ ಹೊಂದಿರುತ್ತಾರೆ. 'ಭೂಮಿ' ಕುರಿತಂತೆ ಸಾಮಾಜಿಕ ಆಭಿಪ್ರಾಯ ಸಾಹಿತಿಗಿಂತ ಭಿನ್ನ. ವ್ಯಾಪಾರಿಯದು ಇನ್ನೂ ಭಿನ್ನ, ದಲಿತ ಮತ್ತು ಶೂದ್ರರ ನೆಲೆಯ ಗ್ರಹಿಕೆ ತೀರಾ ಭಿನ್ನ, ರೈತನದಂತೂ ತೀರಾ ಭಿನ್ನ.

ಟಾಲ್‌ಸ್ಟಾಯ್, ಕಾರ್ಲ್‌ಮಾರ್ಕ್ಸ್, ಶೇಕ್ಸ್‌ಪಿಯರ್, ಮೊದಲಾದವರ 'ಭೂಮಿ' ಕುರಿತ ಕಲ್ಪನೆಗಿಂತ 'ಭಾರತೀಯ ಲೇಖಕರ' ಅದರಲ್ಲೂ ಕನ್ನಡ ಲೇಖಕರ ಗ್ರಹಿಕೆ ಕುತೂಹಲ ಮೂಡಿಸುತ್ತದೆ. ಕನ್ನಡ ಸಾಹಿತ್ಯದ ವಿವಿಧ ಹಂತಗಳಾದ ಜೈನ, ಬೌದ್ಧ, ವೈದಿಕ ಯುಗಗಳ ವಚನ ಗ್ರಹಿಕೆಗಳಿಗೆ ಹೋಲಿಸಿದರೆ ಆಧುನಿಕ ಹಂತದ ಸ್ವಾತಂತ್ರ್ಯಪೂರ್ವ, ಸ್ವಾತಂತ್ರ್ಯೋತ್ತರ, ನವೋದಯ ಪೂರ್ವ, ನವೋದಯ, ಪ್ರಗತಿಶೀಲ, ನವ್ಯ ಬಂಡಾಯ ದಲಿತ ಸಾಹಿತ್ಯದ ತಾತ್ವಿಕತೆ 'ಭೂಮಿ'ಯನ್ನು ಗ್ರಹಿಸುವ ಬಗೆಯೇ ಭಿನ್ನ.

ಒಂದೇ ಕಾಲಘಟ್ಟದಲ್ಲಿ ಬರೆದ ಕುವೆಂಪು, ಬೇಂದ್ರೆ, ಕಾರಂತರ ಗ್ರಹಿಕೆಗಳಿಗೂ ಕೂಡ ಭೂಮಿ ಕುರಿತಂತೆ ಭಿನ್ನವಾಗಿರುವುದು ವಿಶೇಷ. 'ಶ್ರೇಣಿಕೃತ' ಸಮಾಜ ಭಾರತದ್ದಲ್ಲ. ಅದು ವರ್ಣೀಯ ವ್ಯವಸ್ಥೆಯೂ ಅಲ್ಲ. ನೇರವಾಗಿ ಹೇಳಬೇಕೆಂದರೇ ಅದು 'ಜಾತಿವ್ಯವಸ್ಥೆ' ಹೀಗಿರುವಾಗ ಜಾತಿವ್ಯವಸ್ಥೆಯಲ್ಲಿ ಮೇಲಿರುವವರ ಇವರು ಭೂಮಿ ಜೊತೆ ಹೊಂದಿರುವ ಸಂಬಂಧ ಕೇವಲ ಭಾವನಾತ್ಮಕ, ಆರಾಧನಾತ್ಮಕ, ಪುರಾಣಾತ್ಮಕ ಮಾತ್ರ ಗ್ರಹಿಕೆಗೂ ಕೆಳಗಿರುವವರು ಇವರು ಭೂರಹಿತರು, ಗೇಣಿದಾರರು, ಜೀತಗಾರರು ಗ್ರಹಿಕೆ ಮನುಷ್ಯತ್ಮಾಕವಾದುದು.

ಈ ನೆಲೆಯಲ್ಲಿ ಮನುಷ್ಯ ಮತ್ತು ಭೂಮಿಯ ಸಂಬಂಧಗಳ ಸಾಧ್ಯತೆಗಳನ್ನು ಒಂದು ವಿಶ್ಲೇಷಣಾತ್ಮಕ ಪರಿಕಲ್ಪನೆಯನ್ನಾಗಿಸಿಕೊಂಡು ಈ ಅಧ್ಯಯನ ಸಾಗಿದೆ. ಭೂಮಿಯೊಡನೆ ಮನುಷ್ಯ ಒಟ್ಟಾರೆಯಾಗಿರುವ ಸಂಬಂಧಕ್ಕೂ ಕುಟುಂಬ ವಾತ್ಸಲ್ಯನಾಗಿ ಹೊಂದಿರುವ ಸಂಬಂಧಕ್ಕೂ ಅದನ್ನು ಗ್ರಹಿಸುವ ಪುರುಷ-ಸ್ತ್ರೀ ದೃಷ್ಟಿಕೋನಗಳಲ್ಲಿ ಪರಿಭಾವಿಸುವ ಪ್ರಯತ್ನ ಈ ಅಧ್ಯಯನದ್ದು.

ಭಾರತೀಯ ಸಮಾಜ ಒಂದು ಕಾಲದಲ್ಲಿ 'ಮಾತೃ ಪ್ರಧಾನ ಕುಟುಂಬ ವ್ಯವಸ್ಥೆ' ಹೊಂದಿತ್ತು ಎಂಬ ನಿಲುವು ಈ ಪರಿಕಲ್ಪನೆಯನ್ನು ಒಂದು ಸಮಸ್ಯೆ ಎಂದು ಕೊಳ್ಳದ ಸಾಧ್ಯತೆಗಳಿವೆ. ಆದರೆ

'ಪುರುಷ ಪ್ರಧಾನ ವ್ಯವಸ್ಥೆ'ಯ ದೃಷ್ಟಿ ಗುರುತಿಸಲ್ಪಟ್ಟಾಗ ಈ ಪರಿಕಲ್ಪನೆ ಒಂದು 'ಸಮಸ್ಯೆ' ಆಗಿ ಸಮಷ್ಟಿಕರಣ ಕೋನಕ್ಕೆ ಓದುಗ–ವಿಶ್ಲೇಷಕನನ್ನು ದೂಡುವುದು ಗಮನಾರ್ಹ.

'ನಿಸರ್ಗ' ಸಹಜ ದೃಷ್ಟಿಕೋನ 'ಭೂಮಿಯ' ಸ್ವಾಮಿತ್ವಕ್ಕೆ ಅಷ್ಟು ಪ್ರಾಮುಖ್ಯ ನೀಡದು. ಅದೇ ಸ್ವಾರ್ಥ ಅಥವಾ ಮನುಷ್ಯ ನೆಲೆಯ ದೃಷ್ಟಿಕೋನ ಭೂಮಿ ಕುರಿತ ಸ್ವಾಮಿತ್ವವನ್ನು ಗರ್ಭೀಕರಿಸಿಕೊಂಡಿರುವುದು ವೇದ್ಯ. ಭೂಮಿ ಭೌತಿಕ, ಅಧ್ಯಾತ್ಮಿಕ, ಸೃಷ್ಟ್ಯಾತ್ಮಕ ನೆಲೆಗಳಲ್ಲಿ ನಿರ್ವಚಿತವಾಗಿದೆ. ಪ್ರಕೃತಿ, ಕೃತಿ, ಸ್ಥಿತಿಯಾಗಿ ನವೋದಯ ಬರಹ 'ಭೂಮಿ'ಯನ್ನು ಗ್ರಹಿಸಿದೆ. ಅದೇ ಕಾರಣಕ್ಕೆ ಅಲ್ಲಿ ರಮ್ಯತೆ, ಧ್ಯಾನ, ತನ್ಮಯತೆ, ಆರಾಧನೆ ಇಣುಕಿದೆ.

ಇವರೆಗಿನ ಗ್ರಹಿಕೆಗಳ ಪ್ರಕಾರ ಕಾರಂತರದು ವಾಸ್ತವ ಮಾರ್ಗ. ಅಲ್ಲಿ ಸಮಕಾಲೀನ ಜೀವನದ ಸಮಸ್ಯೆಗಳ ಮೇಲೆ ಬೆಳಕು ಚೆಲ್ಲಿದ್ದಾರೆ. ವಿಡಂಬನೆ, ಕಲ್ಪನೆ, ದಾಂಪತ್ಯ ಜೀವನದ ವಿಷಮತೆ ಕಾರಂತರ ಕಾದಂಬರಿಗಳ ಮುಖ್ಯನೆಲೆ. ಕಾರಂತರು 'ಲೌಕಿಕ ಸಮಸ್ಯೆಗಳಿಗೆ ಸಾಮಾಜಿಕ ಅವಿವೇಕತನ, ಸಂಪ್ರದಾಯಪಾಲನೆ ಕಾರಣ ಎನ್ನುತ್ತಾರೆ. ಆ ಹಿನ್ನೆಲೆಯಲ್ಲಿ ಕಾರಂತರದು ವಾಸ್ತವಮಾರ್ಗ. 'ಜೀವನಶ್ರದ್ಧೆ' ಯೇ ಕಾರಂತರ ಗ್ರಹಿಕೆಯ ತಾತ್ವಿಕತೆಯಾಗಿದೆ. ಆದರೆ 'ಮರಳಿ ಮಣ್ಣಿಗೆ' ಕೃತಿಯ ಆಶಯ ಹೀಮ್ಮುಕ ಹೊಂದಿರುವುದೂ ಗಮನಾರ್ಹ. ಇಲ್ಲಿ ನಿರ್ವಚಿತವಾಗಿರುವ 'ಜೀವನ ಗಹನತೆ', ಭೌಗೋಳಿಕ ಪರಿಸರ ವಿಶಿಷ್ಟ ಎನಿಸುತ್ತದೆ. ಇಲ್ಲಿನ ಹಿರಿಯ ಪಾತ್ರಗಳಿಗೆ 'ಪ್ರಕೃತಿಯೊಡನೆ ಹೋರಾಡಿಯೇ ಮನುಷ್ಯ ತನ್ನ ಅಸ್ತಿತ್ವ' ಉಳಿಸಿಕೊಳ್ಳಬೇಕು ಎಂಬ ಅನಿಸಿಕೆ ಇದೆ. ಆದರೆ ಎರಡನೇ ಪೀಳಿಗೆ ನೆಲದೊಡನೆ ತಮ್ಮ ಬಾಂದವ್ಯ ಏರ್ಪಡಿಸಿಕೊಳ್ಳುವುದರಲ್ಲಿ ಸೋಲುವುದು ವೈಚಿತ್ರ್ಯ! ಇದು ಆಧುನಿಕತೆಯ ಪರಿಣಾಮವೇ ಅಥವಾ ಸಹಜವಾಗಿ ಮನುಷ್ಯ ಭೂಮಿಯೊಡನೆ ಇದ್ದ ತನ್ನ ಸಂಬಂಧವನ್ನು ತೆಳುಗೊಳಿಸಿದ್ದೇ?

ಕಾರಂತರ ಕಾದಂಬರಿಗಳು 'ಸಾಮಾಜಿಕ ನೆಲೆ'ಗೆ ಹೆಚ್ಚು ಬದ್ಧವಾದವು. ಕಾರಂತರಿಗೆ ಮನುಷ್ಯ, ಅವನ ಸಾಮಾಜಿಕ ವ್ಯಕ್ತಿತ್ವ, 'ಕೇಂದ್ರ' ಎನಿಸಿದೆ. 'ವೈಚಾರಿಕತೆ' ಕಾರಂತರ ತಾತ್ವಿಕತೆಯ ಇನ್ನೊಂದು ಮುಖ, ಕಾರಂತರು ಮನುಷ್ಯನ ವಿವಿಧ ಸ್ವಭಾವ ಚಹರೆಗಳನ್ನು 'ವೈಚಾರಿಕವಾಗಿ' ಚಿತ್ರಿಸಲು ಯತ್ನಿಸಿ ಸಫಲ ರೆನಿಸಿದ ಎರಡು ಕೃತಿ: ಬೆಟ್ಟದ ಜೀವ, ಅಳಿದಮೇಲೆ. ಆದರೆ ಅವರ ಉಳಿದ ಕಾದಂಬರಿಗಳ ಬಗ್ಗೆ ಇದೇ ಮಾತು ಹೇಳುವಂತಿಲ್ಲ. ಕಾದಂಬರಿ ಪ್ರಕಾರ 'ರೂಪ–ಸ್ವರೂಪ'ಗಳ ಬಗ್ಗೆ ಕಾರಂತರು ಹೆಚ್ಚು ಚಿಂತಿಸಿದಂತೆ ಕಾಣದು. ಹಾಗಾಗಿ ಕೆಲವು ಕಾದಂಬರಿಗಳು ಸಿದ್ಧಾಂತಗಳಿಂದ ತುಂಬಿ ಹೋಗಿವೆ ಎನ್ನಿಸುತ್ತದೆ. ಲಂಕೇಶರ ಅಭಿಪ್ರಾಯದಲ್ಲಿ *"ಕಾರಂತರು ಕಾದಂಬರಿ ರೂಪದ ಬಗೆಗೆ ತಳೆದ ಅಲಕ್ಷ್ಯ ಅವರಲ್ಲಿ ಒಂದು ಬಗೆಯ ಅಸೂಕ್ಷ್ಮತೆ ಹುಟ್ಟಲು ಕಾರಣವಾಯಿತು"*[೧]

---

೧. ಪಿ.ಲಂಕೇಶ್, ಕಂಡದ್ದು ಕಂಡ ಹಾಗೆ ೧೬

'ಭೂಮಿ' ಕುರಿತ ಭಾವನಾತ್ಮಕ ನೆಲೆ ಸಾಹಿತ್ಯದ ಸೆಲೆಯೂ ಹೌದು. ಭಾರತೀಯ, ಕನ್ನಡ ಲೇಖಕರು ಭೂಮಿಯನ್ನು ಸಾಹಿತ್ಯದ ಚೌಕಟ್ಟಿನೊಳಗೆ ಧ್ವನಿಸಿದ್ದು ವಿಶೇಷ ಯತ್ನವೇ ಆಗಿದೆ. ಆದರೆ ಭೂಮಿ ಮತ್ತು ರೈತರ ಸಂಬಂಧ ಭಿನ್ನ, ಭೂಮಿ ಮತ್ತು ಭೂಮಾಲೀಕರ ಸಂಬಂಧ ಭಿನ್ನ, ಭೂಮಿ ಮತ್ತು ಕಾರ್ಮಿಕರ ಸಂಬಂಧ ಇನ್ನೂ ಭಿನ್ನ. ಇದೆಲ್ಲ ಲೌಕಿಕವಾಯ್ತು. ಆದರೆ ಕಾದಂಬರಿ 'ಭೂಮಿ ಮತ್ತು ಮನುಷ್ಯನ' ಚೌಕಟ್ಟಿಗೆ ಒಳಪಟ್ಟು ವ್ಯಂಜಿತವಾದಾಗ ಕುತೂಹಲಭರಿತ ವ್ಯಾಖ್ಯಾನ ರೂಪುಗೊಳ್ಳುತ್ತದೆ. ತತ್ವಶಾಸ್ತ್ರ, ಪುರಾಣ, ಧರ್ಮ(ಇವು ಮೂರು ಒಂದೇನೆ). ಏಕಕಾಲಕ್ಕೆ ಆಸ್ತಿ ಎರಡೂ ಆಗಿ ಭೂಮಿ ನಿರ್ವಚಿತವಾಗಿದೆ. ಚೋಮನಿಗೆ ಭೂಮಿ ಏನಾಗಿ ದಕ್ಕಬೇಕು? ಎಂಬ ಪ್ರಶ್ನೆ ಮೂಡುತ್ತದೆ.

'ಜೀವನ ಶ್ರದ್ಧೆ' ಯನ್ನೇ ತಮ್ಮ ತಾತ್ವಿಕತೆಯ ಮುಖ್ಯ ಆಯಾಮವನ್ನಾಗಿಸಿಕೊಂಡ ಕಾರಂತರು ಬದುಕು, ವ್ಯಕ್ತಿಗಳು ಅಲ್ಲಿ ಏರ್ಪಡುವ ಸಂಬಂಧಗಳನ್ನು ಶೋಧಿಸಿದರು. ಹಾಗಾಗಿ ಅವರ ಕಾದಂಬರಿಗಳ ವ್ಯಕ್ತಿಗಳು ಅಥವಾ ಪಾತ್ರಗಳು ದುಡಿಮೆಯೇ 'ಧರ್ಮ' ಎಂದು ನಂಬಿದವರು. ಈ ಧರ್ಮಕ್ಕೂ ಒಂದು ಮೌಲ್ಯವಿದೆ. ಘನತೆ, ಛಲ, ಶ್ರಮ ಇವು ವ್ಯಕ್ತಿ ಲಕ್ಷಣವಾಗಿ ಕಾರಂತರ ಅನೇಕ ಕಾದಂಬರಿಗಳಲ್ಲಿ ಸೂಚಿತವಾಗಿದೆ.

ದುಡಿಮೆಗೆ ಭೂಮಿಯೇ ಬೇಕು. ಕರಾವಳಿ ಪ್ರದೇಶದ ದುಡಿಮೆಗೆ ಕಡಲೂ ಇದೆ. ಭೂಮಿ ಎಂದರೇ ಕಾಡು, ಕಡಲು, ಬೆಟ್ಟಗಳ ಸಂಗಮ. ಭೌಗೋಳಿಕ ಪರಿಸರ ಮತ್ತು ನೆಲೆ ಭೂಮಿಯ ಇನ್ನೊಂದು ಆಯಾಮ. ಇವು ಸಾಹಿತ್ಯಿಕ ಪರಿಕರಗಳಾಗುವ ಬಗೆಯೇ ಸೋಜಿಗ. ಆಲನಹಳ್ಳಿ ಕೃಷ್ಣರವರ 'ಕಾಡು' ಕಾದಂಬರಿಯಲ್ಲಿ, 'ನಿಸರ್ಗ'ವನ್ನು ಬಗೆದ ಬಗೆ, ಕಾನೂರು ಹೆಗ್ಗಡತಿಯಲ್ಲಿ 'ಕುವೆಂಪು' ನಿಸರ್ಗವನ್ನು ಮಂಡಿಸಿದ ಬಗೆ ಕಾರಂತರಿಗಿಂತ ಭಿನ್ನ.

'ಸಾಂಘಿಕ' ಜೀವನ 'ಸ್ವಾಮಿತ್ವ' ರೂಪಿಸಿತು. ಸಂಘರ್ಷ ಆರಂಭವಾದದ್ದು ಇದೇ ಹಂತದಲ್ಲಿ. 'ಭೂಮಿ' ಇಲ್ಲಿ 'ಆಸ್ತಿ' ಆಯಿತು. 'ಒಡೆತನ'ಕ್ಕೆ ಒಳಗಾಗಿತ್ತು. ಇದೇ ಕಾರಣಕ್ಕೆ ಪುರಾಣಗಳಲ್ಲಿ ದೇವತೆಗಳ ಛಾಯೆಯಂತ ಮಾನವರು, ಕಾವ್ಯಗಳಲ್ಲಿ ಸೋದರ ವಧೆಗಿಳಿದರು. ನ್ಯಾಯ–ಅನ್ಯಾಯಗಳ ವಿಶ್ಲೇಷಣೆ ಆಯ್ತು. ಆದರೆ ಆಧುನಿಕ ಕಾಲ ಒಡೆತನವನ್ನು ಪ್ರಶ್ನಿಸತೊಡಗಿತು. ಟಾಲ್‌ಸ್ಟಾಯ್‌ನ ಕೃತಿಗಳು, ಗಾಂಧಿವಾದ, ಸ್ವಾತಂತ್ರ್ಯ, ಶಿಕ್ಷಣಗಳು ಮೌಲ್ಯ ಎನಿಸಿದ 'ಸರ್ವೋದಯ ಕಾಲ' ನಿಸರ್ಗವನ್ನು ಆರಾಧಿಸುತ್ತಲೇ 'ಸಮಾನತೆ'ಯ ಕನಸಕಾಣತೊಡಗಿತು. ಆಗ ಮೂಡಿದ ಪ್ರಶ್ನೆಯೇ 'ಭೂಮಿ' ಯಾರದ್ದು? ಯಾರಿಗೆ ಸೇರಬೇಕು? ಇಂತ ಸರಳ ಪ್ರಶ್ನೆಗಳಿಂದ ಆರಂಭಗೊಂಡ 'ಚಿಂತನೆ' ಸಾಹಿತ್ಯ ರೂಪಗಳಲ್ಲಿ 'ಕಲಾತ್ಮಕ'ವಾಗಿ ಮಂಡಿತವಾದವು.

ಇದೇ ಪ್ರಶ್ನೆಯನ್ನು ಕಾರಂತರು ತಮ್ಮ ಚೋಮನದುಡಿ, ಮರಳಿಮಣ್ಣಿಗೆ, ಕುಡಿಯರ ಕೂಸು, ಚಿಗುರಿದ ಕನಸು, ಬೆಟ್ಟದ ಜೀವ, ಕಾದಂಬರಿಗಳಲ್ಲಿ ಭಿನ್ನ ನೆಲೆಯಲ್ಲಿ ನಿರ್ವಚಿಸಿದ್ದಾರೆ.

'ಮಣ್ಣು' ಭೂಮಿಯ ಮೇಲ್ಪದರ, ಇದು ವಿಜ್ಞಾನದ ನಿರ್ವಚನ. ಆದರೆ ಮಣ್ಣು-ಚಿನ್ನ, ಇದು ರೈತನ ನಿರ್ವಚನ, ಭೂಮಿ-ತಾಯಿ ಇದು ಭಾವತ್ಮಕ ನಿರ್ವಚನ. 'ಮಣ್ಣು' ದುಡಿಮೆಯ ಕ್ಷೇತ್ರ.ಹಾಗಾಗಿ ಅದಕ್ಕೆ ಮರಳಬೇಕು. ಸತ್ತ ಮೇಲೆ ದೇಹ ಮಣ್ಣು ಸೇರಬೇಕು. ಅದು ಬೇರೆ! ಚೋಮನಿಗೆ ಭೂಮಿ ಬೇಕು. ಅದು ಬೇರೆ ಕನಸು!

ಕಾರಂತರ ದೃಷ್ಟಿಯಲ್ಲಿ ನಿಸರ್ಗದ ಚೆಲುವು ಹಾಗೂ ರೌದ್ರಗಳ ಸಂಗಮ. ಈ ಸ್ಪಂದನೆ ಅವರ ಕೆಲ ಕಾದಂಬರಿಗಳಲ್ಲಿ ದಟ್ಟವಾಗಿ ಕಾಣಿಸಿದೆ. ಅಂದರೆ ಈ ಸ್ಪಂದನೆ ನವೋದಯದ ತಾತ್ವಿಕತೆಯಾದ ರಮ್ಯತೆ ಹಾಗೂ ವ್ಯಕ್ತಿನಿಷ್ಟ ವಾಸ್ತವಗಳ ನೆಲೆಯಲ್ಲಿ ರೂಪುಗೊಂಡಿದೆ. ಮನುಷ್ಯ ಮತ್ತು ಭೂಮಿಯನ್ನು ಬಿಡದ ನಂಟು ಪೂರಕ ಮತ್ತು ಮಾರಕ ನೆಲೆಗಳಲ್ಲಿ ನಿರ್ವಚನಗೊಂಡಿದೆ. ನಿಸರ್ಗ ಮತ್ತು ಮಾನವನ ಸಂಘರ್ಷ ಪೂರ್ಣವು ಸ್ನೇಹಪೂರಕವೂ ಆದುದು. ಮಾನವ ನೆಲಸಿರುವ ಪರಿಸರ ಅವನ ಹೋರಾಟ, ನಡವಳಿಕೆ, ನಂಬಿಕೆಗಳನ್ನು ರೂಪಿಸುತ್ತದೆ. ನಿಸರ್ಗ ಮನುಷ್ಯನ ಬದುಕಿಗೆ ಪ್ರಚೋದನೆ ನೀಡುತ್ತದೆ. ಸಂವೇದನೆಗಳನ್ನು ರೂಪಿಸುತ್ತದೆ.

ಬದುಕಿನ ದಾರಿಯಲ್ಲಿ ನೆಲ, ನೀರು, ಕಾಡು, ಬೆಟ್ಟ ಸಹಜೀವಿಗಳಾಗಿವೆ. ಅವು ಕೇವಲ ಭೌತಿಕ ಆಯಾಮವಲ್ಲ, ಭಾವನಾ ನೆಲೆಯವೂ ಆಗಿವೆ. ಮಾನವ ಮತ್ತು ಭೂಮಿಯ ಸಂಬಂಧ ದ್ವಂದ್ವ ಆಯಾಮ ಉಳ್ಳದ್ದು. ಮಾನವ ಭೂಮಿಯ ಮಗ. ಅದಿಲ್ಲದೆ ಬದುಕಲಾರ. ಹಾಗಾಗಿ ಭೂಮಿ ಅವನ ಪ್ರೀತಿಯನ್ನು, ಸ್ವಾರ್ಥವನ್ನು, ಆಸೆಯನ್ನು ಕೆಣಕುತ್ತದೆ. ಅಸ್ಥಿತ್ವಕ್ಕಾಗಿ, ಹಠಕ್ಕಾಗಿ, ಮಾನವ ಭೂಮಿಗಾಗಿ ಕಾಡುತ್ತಾನೆ. ಭಯ, ಸ್ಫೂರ್ತಿ, ಕುತೂಹಲ, ಸಂಗಮ. ಭೂಮಿ, ಬೆಲೆ, ಮಲೆ, ಇಳೆ, ಅವಿನಾಭಾವ ಸಂಬಂಧವುಳ್ಳವು. ಇವನ್ನು 'ಸ್ವಾಮಿತ್ವ'ಕ್ಕೆ ಒಗ್ಗಿಸಲು ಅನಾದಿಕಾಲದಿಂದ ಮಾನವ ಹೋರಾಡಿದ್ದಾನೆ. ಆದರೆ ಸಾಫಲ್ಯ ಸಿಕ್ಕಿದೆ ಎನ್ನಲು ಬಾರದು. ಇದನ್ನು ಕಾರಂತರ ಅನೇಕ ಕಾದಂಬರಿಗಳಲ್ಲಿ ಗಮನಿಸಬಹುದು.

ಕಾರಂತರು ತಮ್ಮ ಕಾದಂಬರಿಗಳಲ್ಲಿನ ಪಾತ್ರಗಳು ಭೂಮಿಯೊಂದಿಗೆ ಸೆಣಸುವ ಭಿನ್ನ ಬಗೆಯ ರೋಚಕಗಳನ್ನು ಚಿತ್ರಿಸಿದ್ದಾರೆ. ಆ ಚಿತ್ರಣ ಕೆಲ ಪ್ರಶ್ನೆಗಳನ್ನು ತಾತ್ವಿಕ ನೆಲೆಯಾಗಿ ಹೊಂದಿದೆ. ಮಾನವ ನಿಸರ್ಗಕ್ಕೆ ಮಣಿಯಬೇಕೆ? ನಿಸರ್ಗ ಮಾನವನ ಅಣತಿಯಂತೆ ನಡೆಯುವುದೇ? ಎಂಬ ಶೋಧನೆ ಈ ಚಿತ್ರಣದ ಹಿಂದಿನ ಆಶಯ. ನಿಸರ್ಗ 'ಪ್ರೇರಕ' ಶಕ್ತಿ ಆಗಿರುವಲ್ಲಿ ಬದುಕು ಹಸನಾಗಿದೆ. ಅವರ ಕಾದಂಬರಿಗಳಲ್ಲಿ 'ರಸಚಿತ್ರಣ'ವಾಗಿ ಮೂಡಿಬಂದಿದೆ.

ಅಲ್ಲೆಲ್ಲಾ ಭೂಮಿಯು ತಾಯಿ, ಮಣ್ಣು, ಹುಟ್ಟು, ನೆಲೆ, ಆಗಿ ಸಂವೇದನಾ ಪ್ರಜ್ಞೆಯಲ್ಲಿ ನಿರೂಪಿತವಾಗಿದೆ. *"ಈ ಪ್ರಜ್ಞೆ ಮನುಷ್ಯ ಮತ್ತು ಭೂಮಿಯ ಸಂಬಂಧ ಚಿತ್ರಣವನ್ನು ನಿರೂಪಿಸಿದೆ. ಮರಳಿ ಮಣ್ಣಿಗೆ ಕಾದಂಬರಿ ಈ ಸಂಬಂಧವನ್ನು ಮೂರು ತಲೆಮಾರಿನ ನೆಲೆಯಲ್ಲಿ ಚಿತ್ರಿಸಿದೆ. ಇಲ್ಲಿನ ಚಿತ್ರಣಗಳು ನಿಸರ್ಗದ ಕಟುತ್ವ, ಮಾನವನ ಅಸಹಾಯಕತೆಯನ್ನು ಧ್ವನಿಸಿದೆ. ಜೋಗುಳ ಹಾಡುವ ಕಡಲು, ಉಕ್ಕಿ ಉಕ್ಕಿ ಬಲಿ ಪಡೆಯಬಹುದು. ಹಗಲು ಗೆಳೆಯ ಬೆಟ್ಟ ಇರುಳು ಭಯ ತರಬಹುದು. ಗಾಳಿ ಭೋರೆನ್ನಬಹುದು. ಇವು ನಿಸರ್ಗದ ಭಿನ್ನ ನ್ಯಾಯ ರೂಪಗಳು. ಇವುಗಳ ನಡುವೆಯೇ ಬದುಕು ಕಟ್ಟಿಕೊಳ್ಳುವ ಜನರದು ಸಂಘರ್ಷದ ಕಾಯಕ. ಇದು ಪ್ರಕೃತಿ ಶಕ್ತಿ ಮತ್ತು ಮಾನವ ಶಕ್ತಿಗಳ ನಡುವೆ ನಡೆಯುವ ಸಂಘರ್ಷವೂ ಹೌದು! ಗೋಪಾಲಯ್ಯ ನೆಲದೊಡನೆ ಹೋರಾಡಿ ಅದನ್ನು ಅರಿತು ಬಲತೋರಿ ಗೆಲ್ಲುತ್ತಾನೆ."*[೧]

ಹಾಗಾಗಿ ಕಾರಂತರು ನಿರೂಪಿಸಿರುವ ಮನುಷ್ಯ ಮತ್ತು ಭೂಮಿಯ ಸಂಬಂಧಗಳು ಒಂದು ಬಗೆಯ ಲೌಕಿಕ, ಅಲೌಕಿಕ, ಆಯಾಮ ಹೊಂದಿವೆ. ಈ ಆಯಾಮಗಳನ್ನು ಬಿಂಬಿಸುವ ಕಾರಂತರ ಚಿಂತನೆಗಳ ಹಿಂದಿನ ತಾತ್ವಿಕತೆಯನ್ನು ಕುರಿತು ಅವರೇ ಹೇಳಿರುವ ಮಾತುಗಳಿವು. *"ವಾಡಿಕೆಯ ಮಾತಿನಲ್ಲಿ ಮಣ್ಣಿಂದ ಬಂದಿತು ಈ ಶರೀರ: ಮಣ್ಣಿಗೆ ಹೋಗುತ್ತದೆ ಎನ್ನುವುದರಲ್ಲಿ ವಿಶಾಲವಾದ ಅರ್ಥ ಹುದುಗಿದೆ. ನಮ್ಮ ದೇಹ ನಿರ್ಮಾಣಕ್ಕೂ, ಅದರ ಪೋಷಣೆಗೂ ಬೇಕಾಗುವ ಎಲ್ಲಾ ಸಾಮಗ್ರಿಗಳು ನಮ್ಮ ಪಾಲಿಗೆ ಭೂಮಿಯಿಂದಲೇ ದೊರೆಯಬೇಕಾಗಿದೆ".*[೨] *"ನಾನು ಮತ್ತು ಭೂಮಿ ಎಂದಾಗ, ಆ ಭೂಮಿಯ ಯಾವುದೋ ಒಂದು ಮೂಲೆಯಲ್ಲಿ, ಆ ಮೂಲೆಯ ಮಿತ ವಿಸ್ತಾರದ ಕ್ಷೇತ್ರದಲ್ಲಿ ವಿಹರಿಸಿದ ನನ್ನ ಅನುಭವಗಳಿಗಷ್ಟೆ ಸೀಮಿತವಾಗುತ್ತದೆ. 'ಇರಲಿ, ಆದರೂ ನನಗೆ ನೆಲ ಸುಖವನ್ನು ಕೊಡಲಾರದೇನು'? ಹೀಗಿತ್ತು ನನ್ನ ಮತ್ತು ನನ್ನ ನೆಲದ ಪಾಲುಗಾರರಾದ ಪ್ರಾಣಿಗಳಿಗೂ ನನಗೂ ಇದ್ದ ಸಂಬಂಧ?"*[೩]

ಹೀಗೆ ಆರಂಭವಾಗುವ ಕಾರಂತರ ದೇಸೀ ಮಾತು ದಕ್ಷಿಣ ಕನ್ನಡ, ಕರಾವಳಿ ಪ್ರದೇಶ, ಕರ್ನಾಟಕ, ಭಾರತ, ಯೂರೋಪ್, ಅಫ್ಘಾನಿಸ್ಥಾನ ಮೊದಲಾಗಿ ಮನುಷ್ಯನ ಕುತೂಹಲದ ಕಣ್ತೆರಸುವ ಭಿನ್ನ ಸ್ಥಳಗಳನ್ನು ವರ್ಣಿಸುತ್ತಲೇ, ಎಲ್ಲೆಡೆ ಬದುಕುವ ಮಾನವ ತನ್ನೊಡನೆ ಇತರೆ ಪ್ರಾಣಿ ಸಂಕುಲ ಇರುವ ವಾಸ್ತವವನ್ನು ಮರೆತಿಲ್ಲ ಎನ್ನುತ್ತಾರೆ. ಹೀಗೆ ಭೂಮಿ ಸೀಮಿತವೂ ಹೌದು. ಅಸೀಮವೂ ಹೌದು ಎನ್ನುತ್ತಾರೆ. ಅಗಾಧ ಪ್ರಕೃತಿ ಸೌಂದರ್ಯದ ಮುಂದೆ ಮಾನವ ಹೇಗೆ ಕುತೂಹಲದ ಅಣುವಾಗುತ್ತಾನೆ ಎಂದು ಬಣ್ಣಿಸಿರುತ್ತಾರೆ. ಇಲ್ಲಿ ಮೂಡಿರುವ ಅವರ ಭಾವ, ರಮ್ಯತೆ, ಆರಾಧನೆ, ಶೋಧನೆ ವಿಶ್ಲೇಷಣೆಯ ಆಯಾಮ ಹೊಂದಿರುವುದು ವಿಶೇಷ. ಅದನ್ನು ಕುರಿತು ಕಾರಂತರು ಹೀಗೆ ಹೇಳುತ್ತಾರೆ. *"ಸಮುದ್ರ ತೀರದ ಕರಾವಳಿ ನನ್ನ ಹುಟ್ಟೂರು. ಅಲ್ಲಿನದು ಸಮತಟ್ಟಾದ ಭೂಮಿ. ಅಲ್ಲಿ ಹರಿಯುವ ನದಿಗಳು ಶಾಂತ ನದಿಗಳು, ಕರಾವಳಿಯ ಕಡಲು, ಸಮತಟ್ಟಾದ ಬಯಲು ಭೂಮಿಗಳಲ್ಲಿ ನಿಸರ್ಗ ಪ್ರೇರೆಪಿಸುತ್ತಿದ್ದ ಮನೋಭಾವ ಶಾಂತವೂ ಸುಂದರವೂ ಆದದ್ದು."*[೪]

---

೧ ಶಿವರಾಮ ಕಾರಂತ, ಬೆಟ್ಟದ ಜೀವ, ಪುಟ-೬೯

೨ ಅದೇ, ಪುಟ-[illegible]

೩ ನಿಸರ್ಗ ಮತ್ತು ನಾನು, ಸ್ಮೃತಿ ಪಟಲದಿಂದ, ಸಂಪುಟ-೧ ಪುಟ-[illegible]

೪ ಸ್ಮೃತಿ ಪಟಲದಿಂದ ಸಂಪುಟ-೨ ಪುಟ-[illegible]

ಮೇಲಿನ ಮಾತುಗಳ ಹಿನ್ನೆಲೆಯಲ್ಲಿ ಕಾರಂತರು ತಮ್ಮ ಕೃತಿಗಳನ್ನು ಕುರಿತು ಹೇಳಿರುವ ಮಾತುಗಳನ್ನು ಗಮನಿಸಬೇಕು. *"ಬದುಕನ್ನು ಕುರಿತು ನಾನು ಲಘುವಾದ ದೃಷ್ಟಿಯಿಂದ ನೋಡುವಂತೆಯೇ ಇರಲಿಲ್ಲ. ನನ್ನ ದೃಷ್ಟಿ ಪಾರಾಮಾರ್ಥಿಕ ವಾದುದ್ದಲ್ಲ. ಭೂಮಿಯ ಮೇಲೆ ಇರುವವರು ನಾವೊಬ್ಬರೇ ಅಲ್ಲವಷ್ಟೆ. ನಮ್ಮ ಅಸ್ತಿತ್ವನ್ನು ಸಾಧ್ಯವನ್ನಾಗಿ ಮಾಡಿದ ಪ್ರಕೃತಿ ಇದೆ. ಅದರ ಜಲ, ನೆಲ, ಅವರನ್ನು ನಮ್ಮ ಬದುಕಿನ ಮೇಲೆ ಪ್ರಭಾವ ಬಿರಿ ನಮ್ಮನ್ನು ಬೇಕಾದಂತೆ ಕಾಣಿಸಬಲ್ಲದು"*.[೧]

ಕಾದಂಬರಿಕಾರನ ನಿಲುವು, ಗ್ರಹಿಕೆಗಳು, 'ಆಕೃತಿ' ಯೊಳಗೆ ಬಿಂಬಿತವಾಗುವ ಬಗೆ ಕುರಿತ ಈ ಮಾತು ಕಾರಂತರ ಸೃಜನ ಕ್ರಿಯೆ ಅರಿಯಲು ಸಹಾಯಕವಾಗಿವೆ. *"ಕಾದಂಬರಿ ಮುಖ್ಯವಾಗಿ ಬದುಕಿನಲ್ಲಿ ನಿತ್ಯ ನಮ್ಮ ಅನುಭವ ಕಕ್ಷೆಯಲ್ಲಿ ಬಂದು ಹೋಗುವ ಜನರನ್ನು, ಸನ್ನೀವೇಶಗಳನ್ನು ಚಿತ್ರಿಸುತ್ತದೆ. ಹಾಗೆ ಚಿತ್ರಿಸುವಾಗ ಆ ಜನರ ಹಾಗೂ ಸನ್ನಿವೇಶಗಳ ಭಾವನಾತ್ಮಕ ಹಾಗೂ ನೈತಿಕ ಬಿಕ್ಕಟ್ಟುಗಳ ಮೇಲೆ ಒತ್ತು ಕೊಡುತ್ತದೆ. ಅದೇ ಕಾರಣಕ್ಕೆ ಕಾದಂಬರಿ ಲೇಖಕನ ವೈಚಾರಿಕತೆಯ ಪ್ರಮುಖ ಮಾಧ್ಯಮವಾಗಿವೆ. ಅನುಭವ ಸ್ವೀಕಾರ ಹಾಗೂ ಆಯ್ಕೆಗಳನ್ನು ಕೂಡ ಲೇಖಕನ ವೈಚಾರಿಕತೆಯೇ ನಿಯಂತ್ರಿಸುತ್ತದೆ"*.[೨]

ಪರಿಸರ ನಮ್ಮ ಸುತ್ತಲಿನ ಸಮೂಹ ಆವರಣ ನವೋದಯ ಸಾಹಿತ್ಯ ಮಾನವನ ಬದುಕಿನಲ್ಲಿ ಸೂಕ್ತ ಪರಿಸರ ಹೊಂದಿರುವ ಗಾಢ ಸಂಬಂಧಗಳನ್ನು ಬಿಂಬಿಸಿದೆ. ತನ್ನ ಪರಿಸರದ ನಡುವೆ ಮನುಷ್ಯನ ಬದುಕು ಸಾಗುವುದನ್ನು, ಅವುಗಳು ನಡುವಿನ ಸಂಘರ್ಷ–ಸಾಮರಸ್ಯಗಳನ್ನು ನವೋದಯ ಸಾಹಿತ್ಯ ಪ್ರಧಾನವಾಗಿ ಚಿತ್ರಸಿದೆ. ಕಾರಂತರು ಇದನ್ನು ತಮ್ಮ ಕಾದಂಬರಿಗಳಲ್ಲಿ ಭಿನ್ನವಾಗಿ ನಿರೂಪಿಸಿದ್ದಾರೆ. ಪರಂಪರಾಗತ ಸಾಮಾಜಿಕ ವ್ಯವಸ್ಥೆ ಮತ್ತು ಆಧುನಿಕ ಕಾಲದ ಮೌಲ್ಯಗಳು ಪರಸ್ಪರ ಎದುರಾದಾಗ ಆಗುವ ಬದಲಾವಣೆಗಳನ್ನು ಅವರು ತೀವ್ರವಾಗಿ ಪರಿಶೀಲಿಸಿದ್ದಾರೆ. ಈ ಪರಿಶೀಲನೆಯಲ್ಲಿ ಮನುಷ್ಯನ ವೈಯಕ್ತಿಕ ಹಂಬಲ, ಸಾಮಾಜಿಕ, ಆರ್ಥಿಕ ಸಂಗತಿಗಳು ಒಟ್ಟಿಗೆ ಸಾಗುವ, ವಿರುದ್ದವಾಗಿ ನಿಲ್ಲುವ ಸಂಗತಿಗಳನ್ನು ಕಾರಂತರು ಗಮನಿಸಿದ್ದಾರೆ. ಈ ಧ್ಯಾನದ ಸ್ಥಿತಿಯಲ್ಲಿ ಕಾರಂತರು ಒಂದು ಕಡೆ ಪರಂಪರೆಯಿಂದ ಕಳಚಿಕೊಳ್ಳುತ್ತಲೇ ಆಧುನಿಕತೆಯ ಪ್ರಭಾವ ಪರಿಣಾಮಗಳನ್ನು ತೀವ್ರವಾಗಿ ವಿಮರ್ಶಿಸಿದ್ದಾರೆ. ಈ ವಿಮರ್ಶೆ ಸಾತ್ವಿಕತೆಯಿಂದ ರೂಪುಗೊಂಡಿದ್ದು ಅಲ್ಲಿ ಕುತೂಹಲ, ಆತಂಕ, ಬೆರಗು, ವಿಷಾದದ ನೆಲೆಗಳಿವೆ. ಕಾರಂತರ ಸೃಜನಕ್ರಿಯೆಯು ಸಂದರ್ಭ ಚಾರಿತ್ರಿಕವಾಗಿ ವಿಶಿಷ್ಟವಾದದ್ದು.

೧ ಭಾರತ ಸ್ವಾತಂತ್ರ್ಯ ಗಳಿಸಿಕೊಳ್ಳುವ ಸಂದರ್ಭ.

೨ ವಸಾಹತು ಪ್ರಭಾವಿತ ಆಧುನಿಕ ಶಿಕ್ಷಣ ಮತ್ತು ಇಂಗ್ಲೀಷ್.

೩ ಬದಲಾಗುತ್ತಿದ್ದ ಜೀವನ ಶೈಲಿ ಮತ್ತು ಬದುಕು.

೪ ಗಾಂಧಿವಾದ, ಸಮಾಜವಾದ, ಸಮತಾವಾದ

೫ ಸಮಾನತೆ, ಸಂಪತ್ತಿನ ಹಂಚಿಕೆ.

---

೧. ಕಾದಂಬರಿಗಳಲ್ಲಿ ವೈಚಾರಿಕತೆ, ಗಿರಡ್ಡಿ ಗೋವಿಂದರಾಜು ಪು.-[illegible]

೨. ಕಾದಂಬರಿಗಳಲ್ಲಿ ವೈಚಾರಿಕತೆ, ಗಿರಡ್ಡಿ ಗೋವಿಂದರಾಜು ಪು.-[illegible]

ಮೇಲಿನ ಅಂಶಗಳು ಸಾಹಿತ್ಯಕ ವಲಯವನ್ನು ಕಾಡಿದ ದಟ್ಟ ಪರಿಣಾಮವೇ ನವೋದಯ ಸಾಹಿತ್ಯದ ವಿಶಿಷ್ಟ ಸೃಜನ ಕ್ರಿಯೆಯ ಫಲಿತಾಂಶ. ಹಾಗಾಗಿ ಕಾದಂಬರಿ ಒಂದು ಸಾಹಿತ್ಯ ಪ್ರಕಾರವಾಗಿ ಸಾಮಜಿಕ ಬದಲಾವಣೆಗಳನ್ನು ತನ್ನ ತೆಕ್ಕೆಗೆ ಒಗ್ಗಿಸಿಕೊಂಡಿತು. ಶಿಕ್ಷಣ, ಆರ್ಥಿಕ ವ್ಯವಸ್ಥೆಯಲ್ಲಿ 'ಮಧ್ಯಮವರ್ಗ' ಎಂಬ ಸ್ಥಿತಿ ಕಾಣಿಸಿ ಅದು ತನ್ನದೇ ಆದ ಚೌಕಟ್ಟಿನ ಬದುಕಿನಲ್ಲಿ ಸಾಹಿತ್ಯವನ್ನು ಪರಿಭಾವಿಸಿತು. ಪರಿಣಾಮವಾಗಿ ಕಾದಂಬರಿ ಬದುಕಿನ ಆಯಾಮಗಳನ್ನು ಅಭಿವ್ಯಜಿಸಿತು. ಸಹಜವಾಗಿಯೇ ಈ ಪ್ರಕಾರ ಆದರ್ಶವಾದ, ಮಾನವತಾವಾದ, ವಾಸ್ತವ ವಾದಗಳನ್ನು ತನ್ನ 'ಸಾತ್ವಿಕತೆ'ಯ ಬುನಾದಿಯನ್ನಾಗಿ ರೂಪಿಸಿಕೊಂಡಿತು.

ವಾಸ್ತವ ಮಾರ್ಗದ ಕಾದಂಬರಿಗಳ ಕರ್ತೃ ಆಗಿರುವ ಕಾರಂತರು ಸಮಕಾಲೀನ ಸಮಸ್ಯೆಗಳನ್ನು ಕಾದಂಬರಿಯ ಚೌಕಟ್ಟಿಗೆ ಕೈಚಾಚಿದ್ದಾರೆ. ನಿದರ್ಶನವಾಗಿ ಚೋಮನ ದುಡಿ, ಚಿಗುರಿದ ಕನಸು ಮತ್ತು ಮರಳಿ ಮಣ್ಣಿಗೆ ಕಾದಂಬರಿಗಳನ್ನು ಗಮನಿಸಬಹುದು. ಮರಳಿ ಮಣ್ಣಿಗೆ ಕಾದಂಬರಿ ಒಂದು ಸಿದ್ಧಾಂತದ ನಿರೂಪಣೆ ಆಗಿ ದೇಶಿ, ಭಾರತೀಯ ಎನಿಸಿಬಿಡುತ್ತದೆ. ಅಲ್ಲಿ ಬರುವ ತಲೆಮಾರು ಮತ್ತು ಭೂಮಿಯ ಸಂಬಂಧ ಭಾರತೀಯ ಮನಸ್ಥಿತಿಗೆ ಅನುಗುಣವಾಗಿಯೇ ಇದೆ.

ಆದರೆ 'ಚೋಮನ ದುಡಿ' ಕಾದಂಬರಿ ಅನೇಕ ಪ್ರಶ್ನೆಗಳನ್ನು ಉದ್ದೀಪಿಸಿದೆ ಈ ಕಾದಂಬರಿಯನ್ನು ಸ್ವತಹ ಪುತ್ತೂರಿನ ಸಮೀಪದ ಹಳ್ಳಿಗಳಲ್ಲಿ ಸರ್ವೆಮಾಡಿ ಈ ಕಾದಂಬರಿಯನ್ನು ಬರೆದಿದ್ದಾರೆ. ಕಲಾಕೃತಿಯೊಂದು ಸೃಜನಾತ್ಮಕವಾಗಿ ಎದುರಿಸುವ ಪ್ರಶ್ನೆಗಳಿಗೆ, ಬದಲಾಗಿ ಈ ಕೃತಿ ತನ್ನ ಸಾಮಾಜಿಕ ಆಯಾಮದಿಂದ ಕುತೂಹಲ ಮೂಡಿಸಿದೆ. ಈ ಕೃತಿಯ ನಿರೂಪಣೆ ಮೂಲಕ ಕಾರಂತರು ತಮ್ಮ ಸೂಕ್ಷ್ಮ ಅವಲೋಕನವನ್ನು ಮಂಡಿಸಿದರಾದರು 'ಭೂಮಿ'ಕುರಿತಂತೆ ಭೂ ರಹಿತರಿಗೆ ಇರುವ 'ಅಗತ್ಯ'ವನ್ನು ಅಥವಾ ಸಮಾನತೆ ಸಂಪತ್ತಿನ ಸಮಾನ ಹಂಚಿಕೆ ಕುರಿತ ಅವರ ಗ್ರಹಿಕೆ ಕಾರಂತರ ಸಾತ್ವಿಕತೆಯನ್ನು ಪ್ರಶ್ನಿಸುವಂತೆ ಮಾಡಿದೆ. ಆ ಹಿನ್ನಲೆಯಲ್ಲಿ ಸಮಾನತೆ ಮತ್ತು ಸಂಪತ್ತಿನ ಹಂಚಿಕೆ ಕುರಿತ ಕಾರಂತರ ಗ್ರಹಿಕೆ ಹೀಗಿವೆ.

೧. ಸ್ತ್ರೀ ಮತ್ತು ಭೂಮಿ

೨. ಭೂರಹಿತರು ಮತ್ತು ಭೂಮಿ.

೩. ಸ್ತ್ರೀ ಮತ್ತು ಸಂಪತ್ತು (ಭೂಮಿ–ಅಧಿಕಾರ–ಆರ್ಥಿಕತೆ)

೧. **ಸ್ತ್ರೀ ಮತ್ತು ಭೂಮಿ** : ಭಾರತೀಯ ಸಮಾಜ ಮಹಿಳೆಗೆ ಆಸ್ತಿ ಹಕ್ಕನ್ನು ಬಹುಕಾಲದವರೆಗೆ ನಿರಾಕರಿಸಿತು. ಭೂಮಿ ಹೇಗೆ ಫಲವಂತಿಕೆಯ ಸಂಕೇತವೋ, ಹೆಣ್ಣು ಕೇವಲ ಭೋಗಕ್ಕೆ ಸೀಮಿತಳಾದಳು. ಹೆಣ್ಣು ಸಂತಾನೋತ್ಪತ್ತಿ ಕ್ಷೇತ್ರವಾದಳು. ಭಾವನೆ, ರಕ್ಷಣೆ, ಪೂಜೆಗಳ ನೆಲೆಯಲ್ಲಿ

ಹೆಣ್ಣು ಮತ್ತು ಭೂಮಿಯನ್ನು ಸಮೀಕರಿಸಲಾಯಿತು. ಚರಿತ್ರೆಯ ಒಂದು ಹಂತದಲ್ಲಿ ಮಹಿಳೆ ಕುಟುಂಬದ ಮುಖ್ಯಸ್ಥಳಾಗಿದ್ದು, ಕೃಷಿ ಚಟುವಟಿಕೆಯ ಕೇಂದ್ರವೂ ಆಗಿದ್ದಳು. ಗಂಡು ಮತ್ತು ಹೆಣ್ಣಿನ ಸ್ಥಾನಮಾನಗಳ ಪ್ರಶ್ನೆ ಉದ್ಭವಿಸದ ಸ್ಥಿತಿ ಇದು. ಮನೆಯ ಹೊರಗೆ ಗಂಡು ದುಡಿದರೆ ಮನೆ, ಹೈನುಗಾರಿಕೆ, ವ್ಯವಹಾರ, ನೇಯ್ಗೆ ಇತ್ಯಾದಿಗಳು ಹೆಣ್ಣಿಗೆ ಅವಳ ದುಡಿಮೆಗೆ ಅವಕಾಶ ನೀಡಿದ್ದವು.

ಕಾಲ ಬದಲಾದಂತೆ ಪುರುಷ ಅಧಿಪತ್ಯ ಕಾಣಿಸಿ 'ಆರ್ಥಿಕತೆ' ಸಂಪೂರ್ಣವಾಗಿ ಅವನ ಹಿಡಿತಕ್ಕೆ ಒಳಪಟ್ಟಿತು. ಗೃಹ ಕೆಲಸ ಹೆಣ್ಣಿಗೆ ಸೀಮಿತವಾಯ್ತು. ಗಂಡು ಮಕ್ಕಳಿಗೆ ಉತ್ತರಾಧಿಕಾರತ್ವ ವರ್ಗಾವಣೆ ಆಗುವಂತೆ ಅಲಿಖಿತ ನಿಯಮ ರೂಪಿತವಾಯ್ತು.

ಇಂತ ಮೌಲ್ಯಗಳನ್ನು ಕುರಿತಂತೆ ನವೋದಯ ಸಾಹಿತ್ಯ ಉದಾರತೆಯ ದೃಷ್ಟಿಕೋನ ಹೊಂದಿತು. ಸ್ತ್ರೀಸ್ವಾತಂತ್ರ್ಯ, ಸ್ವಾವಂಲಬನೆ ಬದಲು 'ತ್ಯಾಗ, ಸಹನೆ'ಗಳಿಗೆ ಈ ಹಂತ ಒತ್ತು ನೀಡಿತು. ಇದು ಒಂದು ಸಾಮಾಜಿಕ–ರಾಜಕೀಯ ಒಪ್ಪಂದ. ಕಾರಂತರ ಕಾದಂಬರಿಗಳ ಸ್ತ್ರೀ ಪಾತ್ರ ಚಿತ್ರಣ ಇದನ್ನು ಪುಷ್ಟೀಕರಿಸುವಂತಿದೆ. 'ಚೋಮನದುಡಿ'ಯ ಬೆಳ್ಳಿ ಲೈಂಗಿಕತೆ ಸಕರಾವಾಗಿರುವುದನ್ನು ಈ ಹಿನ್ನಲೆಯಲ್ಲಿ ಗಮನಿಸಬಹುದು. ತಂದೆಯ ಸಾಲ ತೀರಿಸಲು ಅವಳು ಈ ಹಾದಿ ಹಿಡಿಯುವುದು ಗಮನಾರ್ಹ! 'ಬೆಳ್ಳಿ' ದಾಳವಾಗಿದ್ದಾಳೆ ಇಲ್ಲಿ. 'ಮರಳಿ ಮಣ್ಣಿಗೆ' ಕಾದಂಬರಿಯ ಸರಸೋತಿ, ಪಾರ್ವತಿಯರೂ ಆರ್ಥಿಕವಾಗಿ ಅಸಹಾಯಕರೇ ಆಗಿದ್ದಾರೆ. ಧಾರ್ಮಿಕ ನಂಬಿಕೆಗಳು ಅವರ ಪರಾಧೀನತೆಗೆ ಕಾರಣವಾಗಿವೆ. ರಾಮ ಐತಾಳರ 'ಮೂರು ಕಾಸಿನ ಹೆಂಗಸರಿಗೆಕೆ ಇದೆಲ್ಲದರ ಉಸಾಬರಿ' ಎಂಬ ಮಾತು ಚಾಲ್ತಿಯಲ್ಲಿದ್ದ ಪುರುಷ ಧೋರಣೆಗೆ ನಿದರ್ಶನವಾಗಿದೆ. ಒಟ್ಟಾರೆ ಪುರುಷರ ಬೆಳವಣಿಗೆಗೆ ಪೂರಕವಾಗಿ ಹೆಣ್ಣು ಚಿತ್ರಿತವಾಗಿದ್ದಾಳೆ.

೨. **ಭೂರಹಿತರು ಮತ್ತು ಭೂಮಿ :** ಈ ಅಂಶ ಕಾರಂತರ ಕಾದಂಬರಿಗಳಲ್ಲಿ ಅಲ್ಲಲ್ಲಿ ಗಮನಸೆಳೆಯುತ್ತದೆ. ಭೂ ರಹಿತರಿಗೆ ಭೂಮಿ ಕೊಡುವ ಪಡೆದುಕೊಳ್ಳುವ ಪ್ರಕ್ರಿಯೆ ಅಷ್ಟು ಸುಲಭವಲ್ಲ. ಸಮಾತವಾದ ಕುರಿತ ಕಾರಂತರ ಗ್ರಹಿಕೆಗಳು ಆಕ್ಷೇಪಾರ್ಹ. ಅವರ ಪ್ರಕಾರ ಇರುವವರಿಂದ ಇಲ್ಲದವರಿಗೆ ಕೊಡುಸುವ ಪ್ರಕ್ರಿಯೆ ಸರಿ ಇಲ್ಲ. ಈ ಮನೋಭಾವ ಊಳಿಗಮಾನ್ಯ ಮತ್ತು ಬಂಡವಾಳಶಾಹಿ ಪರ ನಿಲುವು ಕಾದಂಬರಿಕಾರರಾಗಿ ಕಾರಂತರು ಇದನ್ನು ನಿರ್ವಚಿಸಿರುವ ಬಗ್ಗೆ ಈಗಾಗಲೇ ಸಾಕಷ್ಟು ಚರ್ಚಿತ, ಚೋಮನಿಗೆ ಭೂಮಿ ಸಿಕ್ಕದಿರಲು ಉಳ್ಳವರ ಅನುದಾರತೆ ಕಾರಣವಾದಂತೆ, ಭೂರಹಿತ ಕಾರ್ಮಿಕರು ಸ್ವಂತ ದುಡಿಮೆಗೆ ನಿಂತರೆ ತಮ್ಮ ಕೆಲಸ ನಡೆಯುವುದಿಲ್ಲ ಎಂಬ ಸ್ವಾರ್ಥ ದೂರಾಲೋಚನೆ ಇದೆ.

ಈ ನೆಲೆಯಲ್ಲಿ ಕಾರಂತರ 'ತಾತ್ವಿಕತೆ' ರೂಪುಗೊಂಡಿರುವುದನ್ನು ಗಮನಿಸಬೇಕಿದೆ. 'ಸಮಾನತೆ' ಕುರಿತಂತೆಯೂ ಅವರ ನಿಲುವು ಭಿನ್ನ. ಇಲ್ಲದವರು ಹೇಗೆ ಬಾಳಬೇಕು? ಅದೇ 'ದೈನ್ಯದ" ಸ್ಥಿತಿಯೇ ಇರಬೇಕೆ ? ಸಂಪತ್ತಿನ ಹಂಚಿಕೆ ಹೇಗೆ ? ಇವು ಕಾರಂತರನ್ನು ಕಾಡಿದ್ದರೂ, ಕಾರಂತರು ಅದನ್ನು ಆತ್ಯಂತಿಕ ಸಮಸ್ಯೆ ಎಂದು ಭಾವಿಸಿಲ್ಲ. ಕಾದಂಬರಿಯ ಓದಿನ ಆಚೆಗೂ ಕೆಲವು ಪ್ರಶ್ನೆ ಉಳಿದು ಬಿಡುತ್ತವೆ. ಇದು ಸಿದ್ಧಾಂತದ 'ತತ್ವ'ದ ಪ್ರಶ್ನೆ. ಈ ಪ್ರಶ್ನೆಗೆ ಉತ್ತರ ಹುಡುಕುತ್ತಾ ಹೋದಂತೆ ಆ ಹುಡುಕಾಟ ಕಾರಂತರ ಸೃಜನಕ್ರಿಯೆಯೂ ಹಿಂದಿನ 'ತಾತ್ವಿಕತೆ' ಯನ್ನು ಬಿಂಬಿಸುತ್ತದೆ.

ಹಿನ್ನೆಲೆ–ತಾತ್ವಿಕತೆ

ಭಾರತೀಯ ಸಂದರ್ಭದಲ್ಲಿ ಕಾದಂಬರಿಯ ಉಗಮಕ್ಕೂ ಯೂರೋಪಿನಲ್ಲಿ ಕಾದಂಬರಿಯ ಉಗಮಕ್ಕೂ ನಿಕಟ ಸಂಬಂಧವಿದೆ. ಯೂರೋಪಿನಲ್ಲಿ ಕಾದಂಬರಿ ಹುಟ್ಟಿಕೊಂಡು ಅದು ಬಂಡವಾಳಶಾಹಿಯ ಪ್ರಭುತ್ವಕ್ಕೆ ನಿಕಟವಾದ ಸಮಬಂಧವಿಟ್ಟುಕೊಂಡಿತ್ತು. "ಔದ್ಯೋಗಿಕ ಕ್ರಾಂತಿಯ ನಂತರ ಫ್ಯೂಡಲ್ ಆರ್ಥಿಕ ಹಾಗೂ ಸಾಮಾಜಿಕ ವ್ಯವಸ್ಥೆ ಕುಸಿಯತೊಡಗಿ ಬೂರ್ಸ್ವಾವರ್ಗ ಮೇಲ್ಮೈ ಸಾದಿಸಿದ ನಂತರ ಕಾದಂಬರಿ ಅದರ ಆಶೋತ್ತರಗಳಿಗೆ ಪ್ರತಿಸ್ಪಂದಿಸತೊಡಗಿತು" ಆಗ ಅನೇಕ ಕಾದಂಬರಿಗಳು ಯೂರೋಪಿನಲ್ಲಿ ಹುಟ್ಟಿಕೊಂಡು ಜನಪ್ರಿಯವಾದವು. ಭಾರತೀಯ ಕಾದಂಬರಿಗಳು ಸಹ ವಸಾಹಾತು ಶಾಹಿಯನ್ನು ವಿರೋಧಿಸುತ್ತಲೇ ಹುಟ್ಟಿಕೊಂಡಿರುವುದು. ಭಾರತವು ಯೂರೋಪಿಯನ್ನರ ಆಡಳಿತಕ್ಕೆ ಒಳಪಟ್ಟಿತ್ತು. ಅದರಲ್ಲೂ ಬ್ರಿಟೀಷ್ ಆಡಳಿತ ದೀರ್ಘವಾಗಿ ಭಾರತವನ್ನು ಆಳಿತು. ಇದು ಭಾರತೀಯರ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಮತ್ತು ಆರ್ಥಿಕ ಸ್ಥಿತಿಗಳ ಮೇಲೆ ಗಾಢವಾದ ಪರಿಣಾಮ ಬೀರಿತು. ಇದರಿಂದ ಭಾರತೀಯ ವಿದ್ಯಾವಂತರು ಇದಕ್ಕೆ ಅತಿ ಬೇಗನೆ ಪ್ರತಿಕ್ರಿಯಿಸಿದರು. ಅದು ವಿವಿಧ ಪ್ರಕಾರದ ಸಾಹಿತ್ಯ ಪ್ರಕಾರಗಳಾಗಿ ಹುಟ್ಟಿಕೊಂಡಿತು.

ವಸಾಹತುಶಾಹಿಯು ಭಾರತೀಯರಿಗೆ ಆತ್ಮ ಪರೀಕ್ಷೆಯ ಅವಕಾಶಗಳನ್ನೊದಗಿಸಿ ಪ್ರಗತಿಗೆ ಕಾರಣವಾಯಿತು. ಈ ಅಂಶವನ್ನು ಹಲವಾರು ಭಾರತೀಯ ಚಿಂತಕರು ಒಪ್ಪಿಕೊಂಡರು. ಇದರ ಜೊತೆಗೆ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವ ಭಾರತೀಯ ಸಂಪ್ರದಾಯಸ್ಥರಲ್ಲಿ ತಲ್ಲಣವನ್ನು ಉಂಟುಮಾಡಿತು. ಈ ಆಶಯಗಳಿಗೆ ಭಾರತೀಯ ಕಾದಂಬರಿ ಪ್ರಕಾರ ಪ್ರತಿಕ್ರಿಯಿಸತೊಡಗಿತು. ಇಂತ ಸಂದರ್ಭದಲ್ಲಿ ಈ ಕಾದಂಬರಿ ಪ್ರಕಾರ ಎರಡು ರೀತಿಯಲ್ಲಿ ತನ್ನ ಪ್ರತಿಕ್ರಿಯೆ ತೋರತೊಡಗಿತು. ಮೊದಲನೆಯದು ವಾಸ್ತವವಾದ, ಎರಡನೆಯದು ರಮ್ಯವಾದ. ವಾಸ್ತವಾದವು

ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ, ರಾಜಕೀಯ ನೆಲೆಗಳನ್ನು ಒಳಗೊಂಡಿದ್ದರೆ, ರಮ್ಯವಾದವು ಮನುಷ್ಯನ ಕನಸು ಮತ್ತು ಸೌಂದರ್ಯ ಪ್ರಜ್ಞೆಯೊಂದಿಗೆ ನಿಸರ್ಗದ ಆಶಯಗಳಲ್ಲಿ ಬಲಗೊಂಡಿತ್ತು. ಭಾರತೀಯ ಸಂದರ್ಭದ ಕನ್ನಡ ಭಾಷೆಯಲ್ಲಿ ಕಾದಂಬರಿ ಪ್ರಕಾರವು ಸಹ ಸಾಮಾಜಿಕ, ಆರ್ಥಿಕ, ರಾಜಕೀಯ, ಮತ್ತು ಕೌಟುಂಬಿಕ ನೆಲೆಗಳಲ್ಲಿ ತೆರೆದುಕೊಂಡಿತು. ಇಲ್ಲಿ ಮುಖ್ಯವಾಗಿ ಕಾದಂಬರಿ ಪ್ರಕಾರ ಮತ್ತು ಇತರ ಭಾರತೀಯ ಭಾಷೆಗಳಲ್ಲಿ ಜನಿಸಿದ್ದು ಪಾಶ್ಚಾತ್ಯ ಪ್ರೇರಣೆಯಿಂದಲೆ ಆಗಿದೆ.

ಕನ್ನಡದಲ್ಲಿ ಕಥನ ಸಾಹಿತ್ಯ ಪ್ರಕಾರದ ಕಾದಂಬರಿಯ ಹುಟ್ಟನ್ನು ಗಮನಿಸಿದಾಗ, ಇದು ೧೮೯೨ ರಿಂದ ೧೯೩೦ ರೊಳಗೆ ಕಂಡು ಬರುತ್ತದೆ. ೧೮೯೨ ಪ್ರಕಟವಾದ ಲಕ್ಷ್ಮಣರಾವ್ ಗದಗರವರ 'ಸೂರ್ಯಕಾಂತ' ಕನ್ನಡದ ಮೊದಲ ಐತಿಹಾಸಿಕ ಕಾದಂಬರಿ. ನಂತರ ಬಂದ ಗಳಗನಾಥರ 'ಪ್ರಬುದ್ಧ ನಯನೆ' (೧೮೯೮), ಗುಲವಾಡಿ ವೆಂಕಟರಾಯರ 'ಇಂದಿರಾಬಾಯಿ' (೧೮೯೯) ಇವು ನೀತಿಕಥೆಯನ್ನು ಒಳಗೊಂಡಿರುವಂತಹವು. ಇದೇ ರೀತಿ ಎಂ.ಎಸ್. ಪುಟ್ಟಣ್ಣ ನವರ 'ಮಾಡಿದ್ದಣ್ಣೋ ಮಹಾರಾಯ (೧೯೦೫) ಇದು ಸಾಮಾಜಿಕ ಕಾದಂಬರಿ. ಹಾಗೆಯೇ ಕೆರೂರು ವಾಸುದೇವಾಚಾರ್ಯರ 'ಇಂದಿರೆ, (೧೯೦೮) ಇದು 'ಸ್ತ್ರೀ' ಸಮಸ್ಯೆಗಳನ್ನು ಕಟ್ಟಿಕೊಡುತ್ತದೆ. ಹೀಗೆ ಕನ್ನಡದ ಚಾರಿತ್ರಿಕ ಘಟ್ಟದಲ್ಲಿ ಅನೇಕ ಕಾದಂಬರಿಗಳು ೧೯೩೦ ರವರಿಗೆ ಹುಟ್ಟಿಕೊಂಡಿತು.

ಈ ಎಲ್ಲಾ ಕಾದಂಬರಿಗಳು ಮನುಷ್ಯನ ಸಂಬಂಧಗಳ ವಿವಿಧ ಮುಖಗಳನ್ನು ಪರಿಚಯಿಸಿವೆ. ಕನ್ನಡ ಸಾಹಿತ್ಯ ಪ್ರಕಾರದ ಘಟ್ಟಗಳನ್ನು, ಸಾಹಿತ್ಯ ಚರಿತ್ರಕಾರರು ಆಧುನಿಕ ನೆಲೆಯಲ್ಲಿ, ನವೋದಯ, ಪ್ರಗತಿಶೀಲ, ನವ್ಯ, ದಲಿತ ಮತ್ತು ಬಂಡಾಯ ಸಾಹಿತ್ಯ ಘಟ್ಟಗಳಾಗಿ ವಿಂಗಡಿಸಿದ್ದಾರೆ. ಈ ಕಾಲಗಳಲ್ಲಿ ಅನೇಕ ರೀತಿಯ ಸಾಹಿತ್ಯ ಪ್ರಕಾರಗಳು ಹುಟ್ಟಿಕೊಂಡವು. ಅದರಲ್ಲಿ ಕಾದಂಬರಿ ಪ್ರಕಾರ ಮುಖ್ಯವಾದುದಾಗಿದೆ. ಇಪ್ಪತ್ತನೆ ಶತಮಾನವನ್ನು ಮುಖ್ಯ ಸಾಹಿತ್ಯ ಘಟ್ಟಗಳಾಗಿ ವಿಂಗಡಿಸಿದ್ದಾರೆ. ಈ ಕಾಲಗಳಲ್ಲಿ ಅನೇಕ ರೀತಿಯ ಸಾಹಿತ್ಯ ಪ್ರಕಾರಗಳು ಹುಟ್ಟಿಕೊಂಡವು. ಅದರಲ್ಲಿ ಕಾದಂಬರಿ ಪ್ರಕಾರ ಮುಖ್ಯವಾದುದಾಗಿದೆ. ಕನ್ನಡ ಕಾದಂಬರಿ ಕ್ಷೇತ್ರವು ತುಂಬಾ ಗಮನಾರ್ಹವಾಗಿ ಬೆಳೆಯಿತು. ನವೋದಯ ಕಾದಂಬರಿಕಾರರಲ್ಲಿ ಆಧ್ಯಾತ್ಮಿಕತೆ ಮತ್ತು ಇದರೊಂದಿಗೆ ನಿಸರ್ಗದ ವರ್ಣನೆ ಹಾಗೂ ಮನುಷ್ಯನ ಅತಿ ಭಾವುಕತೆ ಕಂಡು ಬರುತ್ತದೆ.

ನವೋದಯ, ಪ್ರಗತಿಶೀಲ, ನವ್ಯ, ಮತ್ತು ದಲಿತಬಂಡಾಯ ಕಾದಂಬರಿಕಾರರು ವಾಸ್ತವ ಮಾರ್ಗವನ್ನೇ ಆಯ್ದುಕೊಂಡರು ಅದರಲ್ಲಿ ಮುಖ್ಯವಾಗಿ ಭೌತಿಕ ಪರಿಸರ ಮತ್ತು ಸಾಮಾಜಿಕ ಪರಿಸರವು ಮುಖ್ಯವಾಗಿತ್ತು. ಏಕೆಂದರೆ ಪರಿಸರ ಮನುಷ್ಯನ ಅಸ್ತಿತ್ವದ ಭಾಗವಾಗಿದೆ. ಇದನ್ನು ಕಾದಂಬರಿಕಾರರು ಪ್ರಮುಖವಾಗಿ ಅರಿತಿದ್ದರು. ಈ ವಾಸ್ತಾವ ಮಾರ್ಗವನ್ನು ಪರಿವರ್ತನೆಯ

ಹಾದಿಯಲ್ಲಿದ್ದ ಸಮಾಜ ಮತ್ತು ಪರಿಸರದ ನೆಲೆಯಲ್ಲಿ ಹೇಳಲು ಪ್ರಾರಂಭಿಸಿದರು. ಕನ್ನಡದ ಮಟ್ಟಿಗೆ ಅನೇಕ ಕಾದಂಬರಿಕಾರರು, ತಮ್ಮ ಕಾದಂಬರಿಗಳಲ್ಲಿ ನಿಸರ್ಗವನ್ನು ಮನುಷ್ಯನ ವಿವಿಧ ಮುಖಗಳ ಸಂಬಂಧದೊಂದಿಗೆ ಪ್ರತ್ಯಕ್ಷ ಅಥವಾ ಪರೋಕ್ಷ ನೆಲೆಯಲ್ಲಿ ದಾಖಲಿಸಿದ್ದಾರೆ. ಮತ್ತು ಪರಿಸರ ಅಥವಾ ನಿಸರ್ಗವು ಮನುಷ್ಯನಿಗೆ ಅನಿವಾರ್ಯವೆ ಹೊರತು ಇದನ್ನು ಬಿಟ್ಟು ಅವನು ಜೀವಿಸಲು ಸಾಧ್ಯವಿಲ್ಲವೆಂಬುದನ್ನು ಸ್ಪಷ್ಟೀಕರಿಸಿದ್ದಾರೆ.

ಸಮಾಜ ಮತ್ತು ನಿಸರ್ಗವು ಒಂದುಕ್ಕೊಂದು ಅವಿನಾಬಾವ ಸಂಬಂಧವನ್ನು ಇಟ್ಟುಕೊಂಡಿವೆ, ಸಮಾಜವು ನಿಸರ್ಗದ ಭಾಗ, ಈ ನಿಸರ್ಗವಿಲ್ಲದೆ ಸಮಾಜ ಮತ್ತು ಸಂಸ್ಕೃತಿಯನ್ನು ಊಹಿಸಿಕೊಳ್ಳಲು ಸಾಧ್ಯವಿಲ್ಲ. ಅದನ್ನು ಮನಗಂಡಿರುವ ತೇಜಸ್ವಿಯವರು ನಿಗೂಢ ಮನುಷ್ಯರು ಎಂಬ ಕಿರು ಕಾದಂಬರಿಯಲ್ಲಿ ಮನುಷ್ಯ ಸಂಬಂಧಗಳ ನಿಗೂಢತೆಯನ್ನು ನಿಸರ್ಗದ ನಿಗೂಢತೆಯಲ್ಲಿ ಕಂಡುಕೊಂಡಿದ್ದಾರೆ.

ಗೋಪಾಲಯ್ಯನಿಗೆ ಕಾಡಿನ ಬಗ್ಗೆ ಇರುವ ಸಹಜ ತಿಳುವಳಿಕೆಯು ನಮ್ಮ ಅರಿವಿಗೆ ಬರುತ್ತದೆ. ಈ ಗೋಪಾಲಯ್ಯನ ಪಾತ್ರದಲ್ಲಿ ಶಿವರಾಮಕಾರಂತರ 'ಬೆಟ್ಟದ ಜೀವ' ಕಾದಂಬರಿಯಲ್ಲಿ ಕಾಡನ್ನು ಕಡಿದು ಕಾಡಿನೊಂದಿಗೆ ಸಹ ಬಾಳ್ವೆ ಮಾಡುವ ಗೋಪಾಲಯ್ಯನ ಗುಣಗಳನ್ನು ಕಾಣಬಹುದಾಗಿದೆ.

ನಿಸರ್ಗವು ಮನುಷ್ಯನನ್ನು ಬೆಳೆಸುತ್ತದೆ ಮತ್ತು ಪೋಷಿಸುತ್ತದೆ. ಅದೇ ನಿಸರ್ಗ ಒಂದೊಂದು ಸಲ ಅವನಿಗೆ ಭೂತದಂತೆ ಕಾಡುತ್ತದೆ. ಇದು ನಿಸರ್ಗದ ವೈಚಿತ್ರ್ಯವಾಗಿದೆ. ಈ ವೈಚಿತ್ರ್ಯಕ್ಕೆ ಕೆಲವು ಸಲ ಮನುಷ್ಯ ತಲೆ ಬಾಗಲೇಬೇಕು. ಏಕೆಂದರೆ ಮನುಷ್ಯನಿಗೆ ಇದುವರೆಗೂ ನಿಸರ್ಗದ ನಿಗೂಢವನ್ನು ಅರಿಯಲು ಸಾಧ್ಯವಾಗದಿರುವುದೇ ಈ ಕಾರಣದಿಂದ.

ಮನುಷ್ಯ ನಿರ್ಮಿತ ಮತ್ತು ಅವನ ಸಾಹಸ ಕೇವಲ ಕ್ಷಣಿಕ. ಏಕೆಂದರೆ ನಿಸರ್ಗವೆನ್ನುವುದು ಪೆಡಂಭೂತ ಇದ್ದಂತೆ; ನಾವು ಪೆಡಂಭೂತವನ್ನು ಕಂಡಿಲ್ಲ. ಅದು ಕಲ್ಪನೆ, ಈ ಕಲ್ಪನೆಯಲ್ಲಿ ನಿಗೂಢವಿದೆ. ಇದು ವಿಶಾಲಾರ್ಥವನ್ನು ಒಳಗೊಂಡಿದೆ. ಈ ವಿಶಾಲತೆಯಲ್ಲಿ ಮನುಷ್ಯನು ಕೇವಲ ಒಂದು ಪ್ರಾಣಿ. ಈ ಪ್ರಾಣಿಯು ಭೌದ್ಧಿಕ ಶಕ್ತಿಯನ್ನು ಪಡೆದಿದೆ. ಈ ಭೌದ್ಧಿಕ ಶಕ್ತಿಯನ್ನು ಬಳಸಿದ ಮನುಷ್ಯನು ಭೂಮಿ ಆಕಾಶವನ್ನು ನಿಯಂತ್ರಣದಲ್ಲಿಡಲು ನಿರಂತರ ಪ್ರಯತ್ನದಲ್ಲಿ ತೊಡಗಿದ್ದಾನೆ. ಈ ಪ್ರಯತ್ನಕ್ಕೆ ನಿಸರ್ಗವು ಸೆಡ್ಡೊಡೆದು ಅವನನ್ನು ಅಸಹಾಯಕನ್ನಾಗಿ ಮಾಡುತ್ತಿದೆ. ಆದರೂ ಮಾನವ ಛಲ ಬಿಡದ ತ್ರಿವಿಕ್ರಮನಂತೆ ತನ್ನ ಕಾರ್ಯ ಚಟುವಟಿಕೆಗಳಲ್ಲಿ ನಿರತನಾಗಿದ್ದಾನೆ. ಈ ಅಂಶವು ಎಣ್ಣೆ ಹೊಳೆಯ ಭಯಂಕರತೆಯಲ್ಲಿ ಕಂಡು ಬರುತ್ತದೆ. ಗೋಪಾಲಯ್ಯ ಮುಂತಾದವರು ನಿರ್ಮಿಸಿದ ಅಣೆಕಟ್ಟು ಹೇಳುವುದಕ್ಕೆ ಹೆಸರಿಲ್ಲದಂತೆ ನಿರ್ನಾಮವಾಗಿತ್ತು. ಇದರಿಂದ ಅವರು ಹೊಳೆ

ದಾಟಿ ಮುನ್ನಡೆಯಲು ಅಸಾಧ್ಯಾವಾಗುತ್ತದೆ. ಇದು ನಿಸರ್ಗದ ಚಲನಶೀಲತೆಯ ಆಯಾಮವಾಗಿದ್ದು. ಇಂತಹ ಘಟನೆಗಳು ಪ್ರಕೃತಿಯಲ್ಲಿ ನಿರಂತರವಾಗಿದೆ.

ಕೆ.ಪಿ.ಪೂರ್ಣಚಂದ್ರ ತೇಜಸ್ವಿಯರ 'ಚಿದಂಬರ ರಹಸ್ಯ' ಕಾದಂಬರಿಯು ಮಾನವನ ಸೃಜನಶೀಲತೆಗೂ ಮತ್ತು ನಿಸರ್ಗದ ಸಂರಚನೆಗೂ ಸಂಬಂಧ ಕಲ್ಪಿಸಿಕೊಡುತ್ತದೆ. ಸೃಜನಶೀಲತೆ ಯೆಂದರೆ ಮಾನವನ ಪ್ರಜ್ಞಾ ಪೂರ್ವಕವಾದ ಚಟುವಟಿಕೆಗಳು. ಈ ಚಟುವಟಿಕೆಗಳಲ್ಲಿ ಸಾಮಾಜಿಕ, ರಾಜಕೀಯ ಆರ್ಥಿಕ ಮತ್ತು ಧಾರ್ಮಿಕ ಅಂಶಗಳು ಒಳಗೊಂಡಿರುತ್ತವೆ. ಈ ಅಂಶಗಳ ಮೇಲೆ ನಿಸರ್ಗದ ಪ್ರಭಾವವು ಸಾರ್ವಕಾಲಿಕವಾಗಿರುತ್ತದೆ. ಈ ಪ್ರಭಾವದಿಂದ ಮಾನವನ ಚಟುವಟಿಕೆಗಳ ಚಲನಶೀಲತೆ ಹೆಚ್ಚಾಗುತ್ತದೆ.

ಕುವೆಂಪು ಅವರ **'ಕಾನೂರು ಹೆಗ್ಗಡತಿ'** ಕನ್ನಡದ ಮಹತ್ವದ ಕಾದಂಬರಿ. ಈ ಕಾದಂಬರಿಯಲ್ಲಿ ತಮಗೆ ಪ್ರಿಯವಾದ ಮಲೆನಾಡಿನ ಒಂದು ಕಾಲದ ಸೊಬಗನ್ನು ಮನುಷ್ಯನ ಜೀವನದೊಂದಿಗೆ ತಳಕುಹಾಕಿ ವರ್ಣಿಸುತ್ತಾರೆ. ಈ ಕಾದಂಬರಿಯಲ್ಲಿ ಬರುವ ಮುಖ್ಯ ಊರುಗಳಾದ ಮುತ್ತಳ್ಳಿ, ಕಾನೂರು, ಕೆಳಕಾನೂರು, ಸೀತೆಮನೆ, ನೆಲ್ಲಹಳ್ಳಿ ಈ ಗ್ರಾಮಗಳ ನೆಲೆಯಲ್ಲಿ ಮಲೆನಾಡಿನ ನೈಸರ್ಗಿಕ ಮತ್ತು ಕೌಟುಂಬಿಕ ಹಾಗೂ ಸಾಮಾಜಿಕ ನೆಲೆಗಳ ಮುಖಗಳನ್ನು ತೆರೆದಿಡುತ್ತಾರೆ. ಇಲ್ಲಿ ಇರುವ ಮುಖ್ಯ ಪಾತ್ರಗಳೆಂದರೆ ಚಂದ್ರಯ್ಯಗೌಡ, ಸಿಂಗಪ್ಪಗೌಡ, ಶ್ಯಾಮಯ್ಯ ಗೌಡ, ಅಣ್ಣಯ್ಯಗೌಡ, ಪೆದ್ದೇಗೌಡ. ಹಾಗೂ ಇಲ್ಲಿರುವ ಇವರ ಒಕ್ಕಲುಗಳು ಅಲ್ಲದೆ ಈ ಮಲೆನಾಡಿನ ಜನತೆಯ ಆಚಾರ ವಿಚಾರಗಳನ್ನು ನಡೆಸಿಕೊಡುವ ಜೋಯಿಸರು ಇವರು ಸಮಾಜದ ವಿವಿಧ ಸ್ತರಗಳನ್ನು ಪ್ರತಿನಿಧಿಸುತ್ತಾರೆ.

ಕಾನೂರು ಹೆಗ್ಗಡತಿಯಲ್ಲಿ ಪ್ರಮುಖ ಸ್ತ್ರೀಪಾತ್ರಗಳೆಂದರೆ ಸುಬ್ಬಮ್ಮ ಮತ್ತು ಸೀತೆ ಇವರೊಂದಿಗೆ ಹೂವಯ್ಯ, ವಾಸು, ಚಿನ್ನಯ್ಯ, ರಂಗಪ್ಪಶೆಟ್ಟಿ, ತಿಮ್ಮ ಮುಂತಾದವರು ಇಲ್ಲಿದ್ದಾರೆ. ಮನುಷ್ಯನ ಅವಿಭಾಜ್ಯ ಅಂಗವಾದ ಪರಿಸರದೊಂದಿಗೆ ಹೊಂದಿಕೊಂಡು ಹೋಗುವ ಪ್ರಸಂಗಗಳನ್ನು ಪ್ರಾಸ್ತಾವಿಕವಾಗಿ ಹಾಗೂ ಸಂಕ್ಷಿಪ್ತವಾಗಿ ವಿವರಿಸಲಾಗಿದೆ.

ಪರಿಸರದ ಮುಖ್ಯ ಅಂಗಗಳಾದ ಕಾಡು, ಕೆರೆ, ಬೆಟ್ಟ, ಕಾಡು ಪ್ರಾಣಿಗಳು, ಸಾಕು ಪ್ರಾಣಿಗಳು ಇಲ್ಲಿ ಯತೇಚ್ಛವಾಗಿವೆ. ಈ ಕಾಡಿನ ಪರಿಸರದಲ್ಲಿ ಬೇಟೆಯಾಡುವುದು ಮತ್ತು ಬೇಸಾಯ ಮಾಡುವುದು ಪ್ರಮುಖವಾಗಿರುತ್ತದೆ. ಈ ಸಮಯದಲ್ಲಿ ಅವರು ಸಹಜವಾಗಿಯೇ ಪರಿಸರ ಲೋಕದ ಜೀವಿಗಳಾಗಿ ಕಂಡು ಬರುತ್ತಾರೆ. ಈ ಕಾಡು ಪರಿಸರದಲ್ಲಿ ಅತ್ತಿ, ಆಲ, ಕಾಡು, ಗುರುಗೆ, ಪನ್ನೇರಲು, ದೂಪ, ಬಿದಿರು, ಮುಂತಾದ ಮರಗಳು ಅನೇಕ ರೀತಿಯ, ಜೊಂಡುಹುಲ್ಲು

ಮುಂತಾದ ಸಸ್ಯಜಗತ್ತು ಹಾಗೂ ಇವುಗಳೊಂದಿಗೆ ಕಾಡುಕೋಳಿ, ಬೆಳ್ಳಕ್ಕಿ, ಕಾಜಾಣ, ಗಿಜಿಗಾರ್ಲು, ಪಿಕಳಾರ, ಮುಂಗಟ್ಟೆ, ಕಾಮಳ್ಳಿ, ಮುಂತಾದ ಪಕ್ಷಿಗಳನ್ನು ಕಾಣಬಹುದು.

ಕಾನೂರು ಹೆಗ್ಗಡಿತಿಯ ಐದು ಗ್ರಾಮಗಳ ಸುತ್ತಲು ಇರುವ ನಿಸರ್ಗವನ್ನು ಕುವೆಂಪು ಮನತುಂಬಿ ವರ್ಣಿಸಿದ್ದಾರೆ. ಬೇಸಿಗೆಯ ಮಧ್ಯಾಹ್ನದಲ್ಲಿ ತುಂಗಾ ನದಿಯ ಕಲ್ಲುಸಾರದ ಮೇಲಿನಿಂದ ಹೂವಯ್ಯ ಮತ್ತು ರಾಮಯ್ಯರು ಗಾಡಿಯಲ್ಲಿ ಬರುತ್ತಾರೆ. ಆಗ ಅವರು *"ಕಲ್ಲು ಸಾರವನ್ನು ದಾಟುವಾಗ ಹರಿಯುವ ನದಿ ನೀರನ್ನು, ಈಜಾಡುವ ಮಕ್ಕಳ ನೀರಾಟವನ್ನು ನೋಡಿದ ಹೂವಯ್ಯನಿಗೆ, ತಾವೂ ಬಾಲ್ಯದಲ್ಲಿ ಹಿಂದೆ ಇದೇ ಬೆಟ್ಟಗಳ ನಡುವೆ ಇದೇ ತೆರನಾಗಿ ಈಜಾಟ ಆಡಿದುದು, ದಿನಗಳೆದುರು ನೆನೆಪಾಗುತ್ತದೆ. ಪರ್ವತಗಳ ಸಂದಿಯಲ್ಲಿ ಕಾಣಿಸಿಕೊಂಡು ಹರಿದು ಬಂದ ಹೊಳೆಯ ಅಂದಿನಂತೆಯೆ ಅರಣ್ಯಗಳು ಮಾಲೆ ಮಾಲೆಯಾಗಿ ನಿಂತಿದ್ದವು."*[೮]

ಇದು ಹೂವಯ್ಯನಲ್ಲಿ ಕಂಡುಬರುವ ಪ್ರಕೃತಿ ಪ್ರೇಮ, ತಾನು ಅಲ್ಲಿನ ಜನೆತೆಗಿಂತ ಹೆಚ್ಚಾಗಿ ವಿದ್ಯಾಭ್ಯಾಸ ಮಾಡಿದ್ದರು ಸಹ ಆತ ನಿಸರ್ಗದಿಂದ ವಿಮುಖನಾಗುವುದಿಲ್ಲ. ಅವನು ಮತ್ತೆ ಪ್ರಕೃತಿಯ ಮಡಿಲಿಗೆ ಬರುತ್ತಾರೆ ಮತ್ತು ಆಸ್ವಾಧಿಸುತ್ತಾರೆ. ಕಾನೂರು ಕಡೆಗೆ ಮುಖ ಮಾಡಿ ಹೊರಟು ಗಾಡಿಯ ಒಳಗಿನವರ ಮಾತುಕತೆಯನ್ನು ಆಸ್ವಾಧಿಸುತ್ತಾನೆ. ಎಲೆಯಡಿಕೆ ಹಾಕಿಕೊಳ್ಳುವಾಗ *"ಬೇಸಿಗೆಯ ಮಧ್ಯಾಹ್ನದ ಸೂರ್ಯನ ನಿರ್ಲಿಪ್ತ ತಾಮ್ರ ಬಿಂಬವು ಕಠೋರ ನಿಷ್ಕಾರುಣದಿಂದ ಕರೆಯುತ್ತಿದ್ದ ಪ್ರಖರ ಕಿರಣ ವರ್ಷದಲ್ಲಿ ದಟ್ಟವಾಗಿ ಕಾಡು ಬೆಳೆದು ತೆರೆತೆರೆಯಾಗಿ ಹಬ್ಬಿದ ಮಲೆನಾಡಿನ ಬೆಟ್ಟಗುಡ್ಡ ಹೊಳೆಯುತ್ತಿತ್ತು."*[೯] ಪ್ರಯಾಣದ ಸಂಧರ್ಭದಲ್ಲಿ ಸೂರ್ಯನ ಬಿಸಿಲು ಅವರನ್ನು ಧಗಧಗಿಸುತ್ತಾ ಬರಮಾಡಿ ಕೊಂಡಿತು.

ಮಲೆನಾಡಿನ ಹಸಿರು, ಇಲ್ಲಿನ ಜನ ಜೀವನಕ್ಕೆ ಬಹುತೇಕವಾಗಿ ಸ್ಫೂರ್ತಿ ನೀಡಿದೆ. ನದಿಯ, ಹಳ್ಳದ ಹೊಂಡದ ನೀರು ಕೃಷಿಗೆ ಮೀನು ಏಡಿ ಬೇಟೆಗೆ ಉಪಯೋಗವೆನಿಸಿದೆ. ಸಾಮಾನ್ಯರ ಎದೆಗೂ ಸೌದರ್ಯ ಒದಗಿಸಿದ ಪ್ರಕೃತಿಯು ಅಲ್ಲಲ್ಲಿ ರಮಣೀಯವಾಗಿ ಬಂದಿದೆ. ಪ್ರತಿದಿನವು ಪ್ರಕೃತಿಯ ತೊಟ್ಟಿಲಲ್ಲಿ ಬದುಕಿರಬೇಕಾದ ಮನುಷ್ಯ ಕಥೆಯ ವಿಭಿನ್ನ ಮಗ್ಗುಲುಗಳನ್ನು ಕಾಣುವ ಜನರ ಕಥೆಯಿದೆ. ನಿಸರ್ಗದಲ್ಲಿ ತಲೆಮಾರುಗಳಿಂದ ಜೀವಿಸುತ್ತಾ, ತಮ್ಮ ಸಾಂಸ್ಕೃತಿಕ ಅಸ್ತಿತ್ವವನ್ನು ಕಾಪಾಡಿಕೊಂಡು ಬಂದಿರುವುದುಂಟು.

ಕಾಡಿನಲ್ಲಿಯ ಬದುಕೆಂದರೆ ಕಾಡನ್ನು ಅವಲಂಬಿಸಿದ ಬದುಕೇ ಸರಿ. ಜನರ ದುಡಿಮೆ, ಉತ್ಪತ್ತಿ, ಹಂಚಿಕೆ, ಉದ್ಯೋಗ, ಹವ್ಯಾಸಗಳು, ಪ್ರಕೃತಿಯ ಸಂಬಂಧವನ್ನು ಹೊಂದಿವೆ. ಇಂತಹುದರಲ್ಲಿ ಚನ್ನಯ್ಯ ಮತ್ತು ಹೂವಯ್ಯ ಬೇಟೆಯಾಡುವುದು ಸಹಜವಾಗಿ ನಿಸರ್ಗದ ಪ್ರೇರಣೆಯಾಗಿದೆ. *"ಗಂಟೆ ಒಂಬತ್ತಾಗಿದ್ದರೂ ಬೇಸಿಗೆಯ ಬಿಸಿಲು ಕೋಲುಗಳು ಕನ್ನಡಿಯಂತೆ ನೀಲಾಕಾಶವನ್ನು*

---

೮ ಕುವೆಂಪು ಕಾದಂಬರಿಗಳು, ಕಾನೂರು ಹೆಗ್ಗಡತಿ, ಪುಟ-೧೦೭

೯. ಅದೇ, ಪುಟ-೧೩

ಬೆಳ್ಳಗಿಲುಗಳನ್ನೂ ಪ್ರತಿ ಬಿಂಬಿಸುತ್ತಿದ್ದ ಕೆರೆಯ ಸಲಿಲ ಹರ್ಷದಲ್ಲಿ ನಲಿದಾಡುತ್ತಿದ್ದವು. ಕೆರೆಯ ತುಂಬಾ ಪಾಚಿ ಬೆಳೆದಿತ್ತು ಆದರೆ ಆಳವಾಗಿದ್ದ ಕೆಲವು ಭಾಗಗಳಲ್ಲಿ ಪಾಚಿ ತಲೆಯೆತ್ತಿ ಕಾಣುತ್ತಿರಲಿಲ್ಲವಾಗಿ ನಿರ್ಮಲವಾಗಿದ್ದಂತೆ ತೋರುತ್ತಿತ್ತು. ಮೂಲೆ ಮೂಲೆಗಳಲ್ಲಿ ಕೆಸರು, ಜೊಂಡ, ಅವಲ ಮೊದಲಾದ ಜಲ ಸಸ್ಯಗಳು ಬೆಳೆದ ಅರಣ್ಯವಾಗಿತ್ತು. ಅವುಗಳ ಮಧ್ಯೆ ಹುಂಡು ಕೋಳಿಗಳೂ ಬೆಚ್ಚಿ ಬೆದರಿ ಚಲಿಸುತ್ತಿದ್ದವು"[೧೦] ಇದು ನಿಸರ್ಗ, ಇದರಲ್ಲಿ ವೈವಿಧ್ಯತೆಯುಂಟು ಇಂತಹ ವೈವಿಧ್ಯತೆಯಲ್ಲಿ ಅನೇಕ ಪ್ರಾಣಿ ಪಕ್ಷಿ, ಕೀಟಗಳು ತಮ್ಮ ಆಹಾರಕ್ಕಾಗಿ ಬೇಟೆಯಾಡುವುದು ಸಾಮಾನ್ಯ. ಚೆನ್ನಯ್ಯ ಬೇಟೆಗಾಗಿ ಕೂತಿದ್ದಾಗ, ಗಿಡದ ನೀರಿನಲ್ಲಿ ಚಿಕ್ಕ ಮೀನುಗಳ ಹಾರಾಟ, ಹಳದಿ ಬಣ್ಣದ ಸಿಳ್ಳೆ, ನೀರ ಆಳದಲ್ಲಿ ಆಡುವ ಅವಲು ಮೀನುಗಳು, ಸುತ್ತಲಿನ ಹೆಮ್ಮರಗಳು ಅಲ್ಲಿನ ಪರಿಸರಕ್ಕೆ ಜೀವ ತುಂಬಿದ್ದವು, ಇದೇ ಸಮಯಕ್ಕೆ ಬೇಲರ ಬೈರ ತನ್ನ ಮಗನಾದ ಗಂಗನೊಂದಿಗೆ ಹೋಂಡದಲ್ಲಿ ಮೀನು ಹಿಡಿಯುವುದು ಅವರ ಬೇಟೆ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ.

ಹೂವಯ್ಯ ಮತ್ತು ಸೀತೆ ಪ್ರೇಮಿಗಳು; ಇವರು ನಿಸರ್ಗ ಪ್ರೇಮಿಗಳು ಹೌದು. ಪರಸ್ಪರ ಪ್ರೀತಿಸುತ್ತಿದ್ದ ಹೂವಯ್ಯ ಮತ್ತು ಸೀತೆಯ ಮಾತುಗಳಲ್ಲಿ ನಿಸರ್ಗ ಪ್ರೇಮವನ್ನು ಗುರ್ತಿಸಬಹುದು. ಸೀತೆ ತನ್ನ ಕೆಲಸದಲ್ಲಿ ನಿರತಳಾಗಿದ್ದಾಗ ಆಕೆಯಲ್ಲಿ ಉಂಟಾಗುವ ಭಾವನೆಗಳನ್ನು ಕುವೆಂಪು ನಿಸರ್ಗದ ಉಪಮೆಗಳೊಂದಿಗೆ ಚಿತ್ರಿಸುತ್ತಾರೆ. *"ಸುಂದರವಾದ ಗುಲಾಬಿ ತೋಟದಲ್ಲಿ ಹೂ ಸಂಗ್ರಹಿಸುತ್ತಿದ್ದ ಸೀತೆಯ ಮನದಲ್ಲಿ ಹೂವಯ್ಯನ ಸಿಹಿ ನೆನಪು ತುಂಬಿ ಬಂದು ಮೈಮರೆತಾಗ, ಸನಿಹದ ಕೊಂಬೆಯಲ್ಲಿ ಹಾಡುತ್ತಿದ್ದ ಪಿಕಳಾರ ಹಕ್ಕಿಯ ಹಾಡು ಅವಳ ಸಂತೋಷ ಸಂಭ್ರಮಗಳ ಅಭಿವ್ಯಕ್ತಿಯಂತಿದೆ. ಹೆಡಲುಗಳ ಬುಡದಲ್ಲಿದ್ದ ಕಾಡು ಹಸುರು ದಿಂಡಿಗೆ ದೂರಾಗಿ ತಾಯಿಯ ಒಲ್ಮೆ ಹಸುಳೆಯ ಹೃದಯವನ್ನು ಹರಿಸುವಂತೆ ಒಳಗಿದ್ದ ಮೃದುವಾದ ಹಿಂಗಾರವನ್ನು ಅಪ್ಪಿದ ಬಿಳಿ ಹಳದಿ ಬಣ್ಣದ ಹೊಂಬಾಳೆ ಇವುಗಳಿಂದ ಅಲಂಕೃತವಾಗಿ ನಿಂತು ಹೂವಯ್ಯನನ್ನು ಸ್ಮರಣೆ ತರುತ್ತಿದ್ದ ಆ ಅಡಕೆಯ ಮರದ ಬುಡದಲ್ಲಿ ಬಾಳೆಯ ಸೀತೆಗೆ ತನ್ನನ್ನೇ ಜ್ಞಾಪಕಕ್ಕೆ ತರುವಂತಿತ್ತು."*[೧೧] ಹೀಗೆ ಸೀತೆಯ ಕನಸು ಸ್ವಚ್ಛವಾಗಿದೆ ನಿಸರ್ಗದ ವಸಂತ ಋತುವಿನ ಕೋಗಿಲೆ ಮತ್ತು ಮಾವಿನ ಚಿಗುರಿನ ಸಂಬಂಧದಂತೆ ಸ್ವಚ್ಛವಾಗಿದೆ. ಇಂತಹ ಸನ್ನಿವೇಶಗಳು ಕಾದಂಬರಿಯ ಉದ್ದಕ್ಕೂ ಹೇರಳವಾಗಿ ಕಂಡು ಬರುತ್ತವೆ.

ನಿಸರ್ಗದಲ್ಲಿ ಮನುಷ್ಯನಿಂದ ಪ್ರಾರಂಭಿಸಿ ಸಕಲ ಜೀವರಾಶಿಗಳು ಮುಖ್ಯ ಪಾತ್ರವಹಿಸುತ್ತವೆ. ಸೇರೆಗಾರ ರಂಗಪ್ಪಶೆಟ್ಟಿ ಕಾಡು ಕೊಳಿಯನ್ನು ಬೇಟೆಯಾಡುವ ಸಂದರ್ಭದಲ್ಲಿ ಕಾಡು ಕೋಳಿಯು ಸೂರ್ಯನನ್ನು ಕಂಡು ನೀಡುವ ಪ್ರತಿಕ್ರಿಯೆ ಹೀಗಿದೆ. *"ತನಂಗಿತ ಸಹ್ಯಾದ್ರಿ ಶ್ರೇಣಿಗಳಿಂದ ರಚಿತವಾದ ಬಹುದೂರದ ದಿಗಂತ ರೇಖೆಯ ದೀರ್ಘ ಸರ್ಪವಿನ್ಯಾಸವು ಸದ್ಯಃ ಪ್ರಫುಲ್ಲಿತವಾದ ಉಷಃಕಾಂತಿಯಿಂದ ತಕ್ಕಮಟ್ಟಿಗೆ ಸ್ಪಷ್ಟವಾಗಿದ್ದರೂ ಬೇಗಬೇಗನೆ ಪ್ರಸ್ಫುಟವಾಗುತ್ತಿದ್ದರೂ ಕಾನೂರು ಬೆಟ್ಟದ ಕಾನನಾಂತರದಲ್ಲಿ ಮಾತ್ರ ಇನ್ನೂ ದಟ್ಟವಾಗಿ ಮುತ್ತಿ ಕೊಂಡಂತ್ತಿತ್ತು. ಗಿರಿಶಿಖರದಲ್ಲಿ ಎಲೆಗಳ ಮರೆಯ ಕತ್ತಲೆಯ ಗಬ್ಬದಲ್ಲಿ 'ಗೊತ್ತು ಕೂತು'*

---

೧೦. ಕುವೆಂಪು, ಕಾದಂಬರಿಗಳು, ಕಾನೂರು ಹೆಗ್ಗಡತಿ, ಪುಟ-೨೧

೧೧. ಅದೇ, ಪುಟ-೨೫

ಹುದುಕಿಕೊಂಡಿದ್ದ ಕಾಡು ಕೋಳಿಯ ಹುಂಜ ನೊಂದು ಪೂರ್ವದಿಕ್ಕಿನ ಕಡೆಗೊಮ್ಮೆಯೂ, ಕಾಡಿನ ಕತ್ತಲೆಯ ಕಡೆ ಹೊಮ್ಮೆಯೂ ನೋಡಿ ಇಮ್ಮನಸ್ಸು ಮಾಡಿಕೊಂಡಿತ್ತು."[೧೨]

ಕುವೆಂಪು ಬೇಟೆ, ವ್ಯವಸಾಯ, ಮುಂತಾದ ಮಾನ ವನ ಸಂಸ್ಕೃತಿಯ ನೆಲೆಗಳನ್ನು ಕುರಿತು ಹೇಳುತ್ತಾರೆ, ಅದರೊದಿಗೆ ಪ್ರಾಣಿ-ಪಕ್ಷಿಗಳ ಚಲನವಲನ ಮತ್ತು ಅವು ನಿಸರ್ಗದೊಂದಿಗೆ ಹೊಂದಿರುವ ನಿಕಟ ಸಂಬಂಧಗಳನ್ನು ಹೇಳುತ್ತಾರೆ. ಈ ಕಾದಂಬರಿಯ ತುಂಬಾ ಮಲೆನಾಡಿನ ನಿಸರ್ಗವನ್ನು ಮನತುಂಬಿ ವರ್ಣಿಸುವಾಗ ಸೂರ್ಯನ ವೈವಿಧ್ಯಮಯವಾದ ಬಿಸಿಲಿನ ಸನ್ನಿವೇಶವನ್ನು ಕುರಿತು, ವರ್ಣಿಸುತ್ತಾರೆ. *"ಸಹ್ಯಾದ್ರಿಯ ಕತ್ತಲೆಯ ಮೇಲೆ ಮಟ ಮಟ ಮಧ್ಯಾಹ್ನದಲ್ಲಿ ಮಾತ್ರ ಬಿಸಿಲು ಬೀಳುತ್ತಿತ್ತು. ಆ ಬಿಸಿಲಿಗೂ ಮರಗಳ ನೆತ್ತಿಯ ಮೇಲಿಲ್ಲದ ಒಳಗೆ ಪ್ರವೇಶ ಮಾಡಲು ಅವಕಾಶವಿರಲಿಲ್ಲ."*[೧೩] ಈ ಬಿಸಿಲಿನ ಕಣ್ಣಾ ಮುಚ್ಚಾಲೆಗೆ ಮೋಡಗಳು ಕಾರಣವಾದರೆ ಕೆಲವು ಸಲ, ಈ ಬಿಸಿಲು ತನ್ನ ಪ್ರಚಂಡ ಪ್ರತಾಪವನ್ನು ತೋರಿಸುತ್ತದೆ. ಹೀಗೆ ನಿಸರ್ಗವು ಮಾನವನ ಚಟುವಟಿಕೆಯನ್ನು ನಿಯಂತ್ರಿಸುತ್ತದೆ. ಇದು ನಿಸರ್ಗದ ಹಿರಿತನವಾಗಿದೆ.

ಹೂವಯ್ಯನು ಪ್ರಕೃತಿಯನ್ನು ಕಂಡು ಇದರ ನಿರ್ಮಾತೃ ದೇವರು ಎನ್ನುತ್ತಾನೆ, *"ದೇವರು ಈ ಜಗತ್ತನ್ನು ಸೃಷ್ಟಿ ಮಾಡಿದ್ದಾನೆ. ಅವನು ಎಲ್ಲಲ್ಲಿಯು ಇದ್ದಾನೆ. ಬೆಳಗ್ಗೆ ಸೂರ್ಯನಾಗಿ ಮೂಡಿ ಬರುತ್ತಾನೆ. ರಾತ್ರಿ ಕತ್ತಲೆಯ ರೂಪದಿಂದ ಬರುತ್ತಾನೆ. ಅವನೇ ಗಾಳಿಯಾಗಿ ಬೀಸುತ್ತಾನೆ. ಮಳೆಯಾಗಿ ಸುರಿಯುತ್ತಾನೆ. ಮಿಂಚಾಗಿ ಹೊಳೆಯುತ್ತಾಳೆ."*[೧೪] ಹೀಗೆ ಹೂಮಯ್ಯ ದುಃಖದಲ್ಲಿದ್ದ ಸೀತೆಗೆ ದೈವ ಶಕ್ತಿಯನ್ನು ಪ್ರಕೃತಿಯ ನೆಲೆಗಳಿಗೆ ಹೋಲಿಸಿ ದೇವರಂತಹ ನಿಸರ್ಗದ ಮಹಿಮೆಯನ್ನು ಹೇಳುತ್ತಾನೆ. ಹೂವಯ್ಯನು ಪ್ರಕೃತಿಯ ಮಡಿಲಲ್ಲಿ ಕೆಲವು ಸಲ ಕೆಳಕಾನೂರು ಬೇಟೆಗಾರರೊಂದಿಗೆ ಬೇಟೆಗೆ ಹೋಗುವುದುಂಟು. ಆಗ ಅವನು ಪ್ರಕೃತಿಯ ಮಡಿಲಲ್ಲಿ ಧ್ಯಾನ ಮಗ್ನನಾಗುತ್ತಾನೆ. ಸೀತೆಯನ್ನು ಹೂವಯ್ಯನಿಂದ ಬೇರ್ಪಡಿಸಲು ಪ್ರಯತ್ನಿಸಿದ ಸಿಂಗಪ್ಪಗೌಡರು, ನಂತರ ಹೂವಯ್ಯನ ಪ್ರೇಮದ ಮಾತುಗಳನ್ನು ಕೇಳಿದಾಗ ಅವನಲ್ಲಿ ಉಂಟಾಗುವ ಮನಸ್ಸಿನ ನಿರ್ಭಾವುಕತೆಯ ಮೆಚ್ಚುತ್ತಾರೆ.

ನಿಸರ್ಗವನ್ನು ಹೂವಯ್ಯ ಗುರ್ತಿಸುವುದರಲ್ಲಿ ವಿಶೇಷವಿದೆ. ಕಾನೂರು ಹೆಗ್ಗಡತಿಯಲ್ಲಿ ಸಂದಿಗ್ಧ ಮತ್ತು ದುರಂತದ ಪ್ರಸಂಗಗಳು ಮೇಲಿಂದ ಮೇಲೆ ಬರುತ್ತವೆ. ಈ ಸಂದರ್ಭದಲ್ಲಿ ನಿಸರ್ಗದ ವರ್ಣನೆ ಸಾಂದರ್ಭಿಕವಾಗಿ ವಿವರವಾಗಿ ಬಂದಿದೆ. ತೀರ್ಥಹಳ್ಳಿಯಿಂದ ಬರುವ ಹೂವಯ್ಯ, ರಾಮಯ್ಯರು ದಾರಿಯಲ್ಲಿ ಅಪಘಾತಕ್ಕೆ ಒಳಗಾಗುವುದು. ಇದರ ನಡುವೆ ನಿಸರ್ಗವನ್ನು ಹೂವಯ್ಯ ಕಂಡು ಭಾವ ಪರವಶನಾಗುವುದನ್ನು ಕಾಣುತ್ತೇವೆ. ಚನ್ನಯ್ಯನು ಮೀನಿನ ಶಿಕಾರಿಯ ಸಂದರ್ಭದಲ್ಲಿ ಅಲ್ಲಿನ ವಾತಾವರಣ ಮತ್ತು ಬಾಡುಕಳ್ಳ ಸೋಮನ ಶಿಕಾರಿಯ ಬಗ್ಗೆ ಆಗ ಅವನ ಸಾಹಸ ಮತ್ತು ಕಾನೂರಿನ ಸುತ್ತಲು ಇರುವ ಹಸಿರು ತುಂಬಿದ ಕಾಡು, ಅದರಲ್ಲಿ

೧೨. ಕುವೆಂಪು ಕಾದಂಬರಿಗಳು, ಕಾನೂರು ಹೆಗ್ಗಡತಿ, ಉದಯ ರವಿ ಪ್ರಕಾಶನ-೧೯೭೪ ಪುಟ-೪೩
೧೩. ಅದೇ, ಪುಟ-೧೪೦
೧೪. ಅದೇ, ಪುಟ-೧೭೬

ಕಾಡು ಪ್ರಾಣಿ ಮತ್ತು ಪಕ್ಷಿಗಳು ಪ್ರಮುಖವಾಗಿವೆ. ಭೈರನು ತನ್ನ ಮಗನೊಡನೆ ಏಡಿ ಶಿಕಾರಿಗೆ ಬಂದಿದ್ದು. ಸೇರೆಗಾರ ರಂಗಪ್ಪ ಸೆಟ್ಟಿಯ ಬೇಟೆಯ ಸಂದರ್ಭದ ಪ್ರಕೃತಿಯ ವರ್ಣನೆ ಮತ್ತು ಚಂದ್ರಯ್ಯಗೌಡರ ಮತ್ತು ಸುಬ್ಬಮ್ಮರ ನಡುವಿನ ವಿಷಮ ದಾಂಪತ್ಯ ಕಾನೂರು ಮನೆಯ ಹಿಸ್ಸೆಯಾಗುವುದು. ನಂತರ ಹೂವಯ್ಯ ಕೆಳ ಕಾನೂರಿನಲ್ಲಿ ವಾಸ ಮಾಡುವುದು ಚಂದ್ರಯ್ಯ ಗೌಡರ ಮರಣ ಸುಬ್ಬಮ್ಮನ ಅಧಿಕಾರ ಇವು ಮುಖ್ಯ ಘಟನೆಗಳಾಗಿವೆ.

ಹೀಗೆ ನವೋದಯ ಕಾಲಘಟ್ಟದ ನಂತರದ ಕೆಲ ಕಾದಂಬರಿಕಾರರು ತಮ್ಮ ಕಾದಂಬರಿಗಳಲ್ಲಿ ನಿಸರ್ಗದೊಡನೆ ನಡೆಸಿದ ಅನುಸಂದಾನವನ್ನು ವಿವರಿಸಿಕೊಳ್ಳಬಹುದು. ತೇಜಸ್ವಿಯವರ ಚಿದಂಬರ ರಹಸ್ಯ, ಗೀತಾ ನಾಗಭೂಷಣರವರ ಆಸರೆಗಳು, ಆಲನಹಳ್ಳಿ ಕೃಷ್ಣರವರ ಕಾಡು, ಎಂ.ಕೆ ಇಂದಿರಾರವರ ತುಂಗಭದ್ರೆ, ಕುವೆಂಪುರವರ ಕಾನೂರು ಸುಬ್ಬಮ್ಮ ಹೆಗ್ಗಡತಿ, ಬರಗೂರು ರಾಮಚಂದ್ರಪ್ಪನವರ ಶಬರಿ, ಮೊದಲಾದ ಕಾದಂಬರಿಗಳನ್ನು ವಿಶ್ಲೇಷಿಸಿ ತೌಲನಿಕ ದೃಷ್ಟಿಕೋನದಿಂದ ಪರಿಶೀಲಿಸಬಹುದು.

ಆದರೆ ಅಧ್ಯಯನದ ಚೌಕಟ್ಟು, ಪುಟಮಿತಿ, ಅವಧಿಮಿತಿಗಳನ್ನು ಗಮನಿಸಿ ಕೇವಲ ಉಲ್ಲೇಖಗಳ ಮೂಲಕ ಈ ಕೃತಿಗಳು ಹೊಮ್ಮುವ ತಾತ್ವಿಕತೆಯ ನೆಲೆಗಳನ್ನು ಕಾರಂತರ ತಾತ್ವಿಕತೆಯೊಂದಿಗೆ ಚರ್ಚಿಸಿ ಈ ಅಧ್ಯಯನ ಮುಂದೆ ಸಾಗಿದೆ. ಹೀಗೆ ಭಾರತೀಯ–ಕನ್ನಡ–ಸಮಾಜ–ಭೂಮಿಯೊಂದಿಗೆ ಹೊಂದಿರುವ ಭಿನ್ನ ಆಯಾಮದ ಸಂಬಂಧಗಳನ್ನು ಮುಂದಿನ ಅಧ್ಯಾಯದಲ್ಲಿ ನಿದರ್ಶನಗಳೊಂದಿಗೆ ವಿವರಿಸಲಾಗಿದೆ.

****

ಅಧ್ಯಾಯ–೪

ಭೂಮಿಯ ಪರಿಕಲ್ಪನೆಯ ನೆಲೆಗಳು

ಭೂಮಿ ಮಾನವನ ಅಗತ್ಯವಾದ 'ಆದಿಭೌತಿಕ' ನೆಲೆಯಾಗಿದೆ. ಮನುಷ್ಯನ ಹುಟ್ಟು-ಬದುಕು–ಸಾವು–ಈ ಮೂರನ್ನು ಭೂಮಿಯೊಂದಿಗೆ–ಜನಪದರು ಭೂತಾಯಿ ಎನ್ನುತ್ತಾರೆ. ಭೂಮಿ ಒಂದು ದೊಡ್ಡ ಪ್ರಯೋಗಾಲಯ. ಭೂಮಿಯನ್ನು ಹೆಣ್ಣಿಗೆ ಹೋಲಿಸಿರುವುದು ಫಲವಂತಿಕೆಗಾಗಿ ಎಂದು ಕೊಂಡರೆ ಇಲ್ಲೂ ಪುರುಷ ದೃಷ್ಟಿಕೋನವಿದೆ. ಭೂಮಿ ಪೂಜೆ, ಬಲಿ, ಆರಾಧಾನೆ ಅಸ್ತಿತ್ವದಲ್ಲಿವೆ. ಭೂಮಿ ಮನುಷ್ಯರ ಜೀವನದ ಆಧಾರ ನೆಲೆ. ಭೂಮಿ ಲೌಕಿಕ.

ಇಹ–ಪರ ಎಂದು ವಿಭಾಗಿಸಿಕೊಂಡು, ಭೂಮಿಯನ್ನು ಬದುಕಿನ ಸೆಲೆ ಮಾಡಿಕೊಂಡ ಕೃಷಿ ಸಮುದಾಯಕ್ಕೆ ಭಿನ್ನವಾದ ಗ್ರಹಿಕೆ ಅಸ್ತಿತ್ವದಲ್ಲಿದೆ. ಜೈನರು ವೈದಿಕರು 'ಪರ'ಕ್ಕೆ ಆದ್ಯತೆ ನೀಡಿರುವುದನ್ನು ಪಂಪನಿಂದ ಕುಮಾರವ್ಯಾಸನ ಕಾವ್ಯದವರೆಗೂ ಅಧ್ಯಯನದಲ್ಲಿ ಗುರುತಿಸಬಹುದು. ಇದರಲ್ಲಿ ಯಾವ ದೃಷ್ಟಿಕೋನ ಸರಿ ಎಂಬುದೂ ಅಧ್ಯಯನ ಯೋಗ್ಯವೇ ಆಗಿದೆ. 'ತಾಯಿ' ಎಂದು ಕೊಂಡವರೇ 'ಉಳುವ' ಕೆಲಸವನ್ನು ಮಾಡುತ್ತಾರೆ. ಇದು ಬೆರಗಿನ ವಿಚಾರ ! ಇದು 'ದ್ಯಾವಾ ಪೃಥವೀ' ಆಗಿಯೂ ಅಭಿವ್ಯಕ್ತಗೊಂಡಿದೆ.

ವೈಧಿಕ ಪುರಾಣಗಳಲ್ಲಿ ಆಕಾಶ, ಗಂಡು, ಭೂಮಿ, ಹೆಣ್ಣು, ಅಂತೆಯೇ ಜನಪದರು ಮಾಡುವ ಕೊಂತಿಪೂಜೆ, ಗೌರಿಪೂಜೆ, ಬಲೀಂದ್ರ ಪೂಜೆ ಕೂಡ ಫಲವಂತಿಕೆ ಕುರಿತ ಆಚರಣೆಗಳೇ, ಭೂಮಿ 'ಆಧಾರ' ಆಗಿರುವಲ್ಲಿ ಹೆಣ್ಣು ಹೌದು! ಗಂಡು ಹೌದು! ಹಾಗಾಗಿ ನೆಲವೇ ಆದಿ, ಅಂತ್ಯ.

"ಋಗ್ವೇದದಲ್ಲಿ ಪೃಥ್ವಿಯ ಆರಾಧನೆ ಇದೆ. ಬಹುಶಃ ಇದೇ ಭೂಮಿ ಕುರಿತ ಆರಂಭಿಕ ಚರ್ಚೆ ಇರಬೇಕು! ಪೃಥ್ವಿ ಪದದಲ್ಲಿ 'ಪೃಥ್' ಎನ್ನುವುದು 'ವಿಸ್ತಾರತೆ'ಯ ಸೂಚಕ. ಹಾಗಾಗಿ ಭೂಮಿ ಸರ್ವವ್ಯಾಪಿ"[೧] ಭೂಮಿ ಹೆಣ್ಣು, ಅನ್ನದಾತೆ, ಆಶ್ರಯದಾತೆ! ಈ ಕಲ್ಪನೆ ಭಾರತೀಯ ಸಂಸ್ಕೃತಿಯ ಲಕ್ಷಣವಾಗಿದೆ. ಭೂಮಿ ಚೈತನ್ಯದ ಸಂಕೇತ, ಆದಿಮ ಕಲ್ಪನೆ 'ಪೃಥವಿ' ಅಥವಾ ಪೃಥ್ವಿ ಮುಂದೆ 'ಪ್ರಕೃತಿ' ಆಗಿ ನೆಲೆನಿಂತಿತು.

ಭೂ ಆರಾಧನೆ ಅತ್ಯಂತ ಪ್ರಾಚೀನವಾದುದು. ಒಂದು ಹಂತದಲ್ಲಿ ಇದು ಧರ್ಮವಾಯಿತು. ಮುಂದೆ ತತ್ವವೂ ಆಯಿತು. ಇದರ ವಿರಾಟ್ ಸ್ವರೂಪ ಮಾತೃ ಪ್ರಧಾನ ಕುಟುಂಬ ವ್ಯವಸ್ಥೆಯಲ್ಲಿ ಕವಲೊಡೆಯಿತು. *"ಉತ್ತರದ ದಾಳಿಕೋರರ ಸಾಂಸ್ಕೃತಿಕ ಮಿಲನದ ನಂತರವೇ ಪುರುಷ ಪ್ರಧಾನತೆ ಭಾರತೀಯ ಆಲೋಚನ ಕ್ರಮದ ಬುನಾದಿ ಆಗಿದ್ದು! ಬ್ರಹ್ಮ ಕಮಲದ ಮೇಲೆ ಕುಳಿತ: ಕಮಲ ಭೂಮಿಯ ಸಂಕೇತ, ಲಕ್ಷ್ಮೀ ವಿಷ್ಣುವಿನ ದಾಸಿ ಆದಳು"*[೨]

---

೧. ಡಿ.ಆರ್. ನಾಗರಾಜು: ಶಕ್ತಿ ಶಾರದೆಯ ಮೇಳ ಪುಟ-೨೧

೨. ಟಿ. ಹನುಮಂತರಾವ್ : ಋಗ್ವೇದ ಸೂಕ್ತಿಗಳು, ಪುಟ ಸಂಖ್ಯೆ ೧೬೪

ನಂತರ ದೇಸೀ ಮತ್ತು ಅನ್ಯ ಸಂಸ್ಕೃತಿಯ ಸಾಂಸ್ಕೃತಿಕ ಸಂಘರ್ಷ ನಡೆದು ಭೂಮಿ ಜೀವನದ ಅವಿಭಾಜ್ಯ ಅಂಗ ಎನಿಸಿತು. ಬೌದ್ಧ ಧರ್ಮದಲ್ಲಿಯೂ ಅಲ್ಲಲ್ಲಿ ಈ ಕಲ್ಪನೆ ಕಾಣಿಸಿತು. ಹೆಣ್ಣಿಗೆ ಬೋಧಿಸಿದ ಎಲ್ಲ 'ಲಕ್ಷಣ'ಗಳು ಮೊದಲಿಗೆ ಭೂಮಿಗೆ ಅನ್ವಯಗೊಂಡವು! ಭೂಮಿ ಸೃಷ್ಟಿ ಸಂಕೇತ ಆದಂತೆ ರಕ್ಷಕ ಕಲ್ಪನೆಗೂ ಒಳಪಟ್ಟಿತು. 'ಭೂಮಿ' ಎಂಬ ಹೆಣ್ಣು ತಾಯಿ–ರಕ್ಕಸಿ ಎಂಬ ಎರಡು ಮುಖಗಳನ್ನು ಪಡೆದಳು. ವಾತ್ಸಲ್ಯ–ಹಿಂಸೆಗಳು ಆಕೆಯ ರೂಪಕಗಳಾದವು. ಆದರೆ ಗಾಂಧೀಜಿಯವರ ಈ ಮಾತು ಅತ್ಯಂತ ಧ್ವನಿಯುಕ್ತ ಎನಿಸುವುದೇ ಆಶ್ಚರ್ಯ; 'ಭೂಮಿ ಇರುವುದು ಮನುಷ್ಯರ ದುರಾಸೆಗಳನ್ನು ಈಡೇರಿಸಲು ಅಲ್ಲ'.

ಭೂಮಿ ಒಳ್ಳೆಯ ಮತ್ತು ಕೆಟ್ಟದ್ದರ ಸಂಕೇತವಾಗಿದೆ. ಅದು ಸಂಘರ್ಷದ ತವರು, ಸಂಸ್ಕೃತಿಯ ಚಿಗುರು! ನಿಸರ್ಗ ಮತ್ತು ಬದುಕು ಭೂಮಿಯ ಎರಡು ರೂಪ. ಮನುಷ್ಯನ ಕೆಟ್ಟ ಆಸೆಗಳಿಗೆ, ನಡತೆಗಳಿಗೆ ಭೂಮಿಯನ್ನು ಬೊಟ್ಟು ಮಾಡಿ ತೋರಿಸುವವರು ಮನುಷ್ಯರೇ ಆಗಿದ್ದಾರೆ! ಇದು ಧರ್ಮ–ತತ್ವ ಆಧಾರಿತವಾಗಿ ಚರ್ಚೆ ಆದರೆ ಅದು ಬೇರೆ ಮಾತು. ಸಾಹಿತ್ಯ ಈ ಅಂಶವನ್ನು ಹೇಗೆ ನಿರ್ವಚಿಸಿದೆ ಎಂಬುದು ಕುತೂಹಲದ ವಿಚಾರವಾಗಿದೆ.

ಪುರಾಣ, ಚರಿತ್ರೆ ಬೇರೆ. 'ಸಂಸ್ಕೃತಿ' ಬೇರೆ. ಸಂಸ್ಕೃತಿಯೊಂದು ತನ್ನ ಅಭಿವ್ಯಕ್ತಿಯಾಗಿ ಸಾಹಿತ್ಯವನ್ನು ರೂಪಿಸುತ್ತದೆ. ನಿರ್ದೇಶಿಸುತ್ತದೆ, ನಿರ್ವಚಿಸುತ್ತದೆ. ಪಾಶ್ಚಾತ್ಯ ಸಾಹಿತ್ಯದಲ್ಲಿ ಪ್ರಕೃತಿ 'ರಮ್ಯ'ವಾಗಿ ನಿರೂಪಿಸಲ್ಪಟ್ಟಿದೆ. ಷೆಲ್ಲಿ, ವರ್ಡ್ಸ್‌ವರ್ತ್ ಮೊದಲಾದವರ ಕಾವ್ಯ ಇದಕ್ಕೆ ನಿದರ್ಶನ. ಆದರೆ ಕನ್ನಡ ಸಾಹಿತ್ಯ ಪರಂಪರೆ 'ಭೂಮಿ'ಯನ್ನು ಗ್ರಹಿಸಿರುವ, ನಿರ್ವಚಿಸಿರುವ ಬಗೆ ಅದಕ್ಕಿಂತ ಭಿನ್ನ. ಬೇಂದ್ರೆ, ಕುವೆಂಪು, ಕಾರಂತರ ಅಭಿವ್ಯಕ್ತಿಯಲ್ಲಿ 'ಭೂಮಿ' ಪಡೆದಿರುವ 'ರೂಪ'ದ ವಿಶ್ಲೇಷಣೆ ಇನ್ನಷ್ಟೆ ಆಗಬೇಕಿದೆ.

"ಭೂಮಿ ನಿಸರ್ಗದ ರೂಪವಾದಾಗ ಅದನ್ನು ವಿವರಿಸಿರುವ ನೆಲೆ ಸೌಂದರ್ಯ, ದೃಷ್ಟಿ ಕೋನದ್ದು. ಅಲ್ಲಿ ದೈವತ್ವದ ಆರೋಪವೂ ಇರುತ್ತದೆ. ಭೂಮಿ ಪ್ರಕೃತಿ ಆದಾಗ ಅದು ವಿನಾಶದ ಮುಖವನ್ನು ತೋರುತ್ತದೆ!"[೩] ಅದನ್ನು ಎರಡು ಬಗೆಯಲ್ಲಿ ಈ ಕೆಳಕಂಡಂತೆ ವಿಶ್ಲೇಷಿಸಬಹುದು.

೧. ಮಾನವ ಮತ್ತು ಭೂಮಿ ಕುರಿತ ರಮ್ಯ ನಿರ್ವಚನ.

೨. ಮಾನವ ಮತ್ತು ಭೂಮಿ ಕುರಿತ ತಾತ್ವಿಕ ನಿರ್ವಚನ.

೧. **'ಸತ್ಯಂ ಶಿವಂ ಸುಂದರಂ'** ಎಂಬ ಹೇಳಿಕೆಯೇ ರಮ್ಯನಿರ್ವಚನದ ಬುನಾದಿಯಾಗಿದೆ. ಕಾಡು ಆದಿ ಮಾನವನ ಮೂಲ. ಅಲೆಮಾರಿ ಮಾನವ ಬೇಟೆಗಾರನಾದ, ಕೃಷಿಕನಾದ. ಭಾಷೆ, ಲಿಪಿ ಕಲಿತ. ಸಾಮಾಜಿಕನಾದ, ನಾಗರಿಕನಾದ. ಇದೆಲ್ಲದರ ನಡುವೆ ತನ್ನ ಮತ್ತು ಭೂಮಿಯ

೩. [illegible]

ಸಂಬಂಧದ ಆಯಾಮಗಳನ್ನು ಕಾಲಕಾಲಕ್ಕೆ ಪರಿಷ್ಕರಿಸುತ್ತಲೇ ನಡೆದ. ಈ ಪರಿಷ್ಕಾರ 'ದೈವ' ನಿಯಮ ಹಂತದಿಂದ ವಿಜ್ಞಾನದೆಡೆಗೆ ಸಾಗಿದೆ. ಏಕಕಾಲಕ್ಕೆ ಗಂಡು–ಹೆಣ್ಣು ಎರಡು ಆಯಿತು. ಭಾವಾವೇಶ, ರಸಾವೇಷ ಕಾಣಿಸಿತು. ಪ್ರಕೃತಿಯ ಭಿನ್ನರೂಪಗಳು ಮಾನವ ಪ್ರಕೃತಿಯ ರೂಪಕಗಳ ಆದವು. ಪ್ರಕೃತಿಯ ಸೌಂದರ್ಯ, ಕ್ರೌರ್ಯಗಳು ಮಾನವನ ಸ್ವಭಾವದಲ್ಲಿ ಅಡಕವಾಗಿ ನಿರೂಪಿತವಾದವು. ಒಂದು ಮುಖ ಕೋಮಲ, ಇನ್ನೊಂದು ಕಠೋರ! ಅದು ಹೆಣ್ಣು, ಗಂಡು ಕೂಡ ಆಗಬಹುದು.

ಈ ಹಂತದಲ್ಲಿ ಪ್ರಕೃತಿ–ಭೂಮಿ ದೈವರೂಪಕ್ಕೆ ಆರೋಪಿಸಲ್ಪಟ್ಟ ಅತೀಂದ್ರಿಯ ಕಲ್ಪನೆ ರೂಪುಗೊಂಡಿತು. ವೇದ, ಉಪನಿಷತ್ತುಗಳಲ್ಲಿ ಆರಾಧನಾ ಸ್ತೋತ್ರಗಳು ಕಂಡುಬಂದವು. ಲೋಕದ ಪೋಷಕ, ರಕ್ಷಕ ಸ್ಥಾನದಲ್ಲಿರುವ ಭೂಮಿ– ಪ್ರಕೃತಿ ರೂಪ– ಸಮೃದ್ಧತೆಯ ಸಂಕೇತವೂ ಆಗಿದೆ. ಸೃಜನಶೀಲತೆಯ ಪ್ರೇರಕವೂ ಹೌದು. ಹಾಗಾಗಿ ಮಾನವ ಮತ್ತು ಭೂಮಿಯ ಸಂಬಂಧ ಅಪೂರ್ವ, ಅನಾದಿ, ಚಿರಂತನ ಆಗಿದೆ. ಹಾಗೆಯೇ ಗಾಢವೂ, ಆಪ್ತವೂ ಆದ ಆಯಾಮ ಹೊಂದಿದೆ.

ಭೂಮಿ ತಾಯಿಯಾಗಿ, ವಾತ್ಸಲ್ಯಮಯಿ ಆಗಿ ಚಿತ್ರಿತವಾಗಿರುವುದು ವೇದ್ಯ. ಬೇಂದ್ರೆಯವರು ತಮ್ಮ ಕವಿತೆಯೊಂದರಲ್ಲಿ ಹೀಗೆ ಹೇಳಿದ್ದಾರೆ.

"ಮೈ ತುಂಬ ಬಾಯಿ ನೀನು
ತುಟಿ ಮದ್ದು ನಿನ್ನ ಪಾಲು
ಎದೆಯೊಳ ಮೊಲೆಯು ನೀನು
ಮೈ ತುಂಬ ನನಗೆ ಹಾಲು
ಕಂಡಲ್ಲಿ ನಿನ್ನ ಮುಖವು
ಕಣ್ತುಂಬ ನನಗೆ ಸುಖವು
ನೆಲದುದ್ದ ತೊಡೆಯು ನಿನಗೆ
ಮನಸಾರೆ ನಿದ್ದೆ ನನಗೆ"[೧] (ಭೂಮಿ ತಾಯಿ)

ಭೂಮಿ 'ಪ್ರಕೃತಿ ರಾಕ್ಷಸಿ'ಯಾಗಿ ಚಿತ್ರಿತವಾಗಿರುವುದುಂಟು 'ಜಡವಾಡಿ' ಕವಿತೆಯಲ್ಲಿ ಕುವೆಂಪು ಅದನ್ನು ಹೀಗೆ ನಿರೂಪಿಸಿದ್ದಾರೆ.

"ಎಲೆ ಭೂಮಿ ರಾಣಿ
ನೀನಲು ಹೊರೆ ಹೊರುವ
ಬರಿ ದೊಡ್ಡ ದೋಣಿ
ತಾಯಿಂತೆ. ತಾಯಂತೆ
. . . .
ಸವಿಗನಸುಗಳ ಸಿಡಿದು
ಜಾಳಾಗುತಿರಲಿ
ಹಗಲಿರುಳು ಉರುಳುರುಳು
ಓ ಭೂಮಿ ರಾಕ್ಷಸಿಯೇ"[೨]

೧. ನಮನ ದ.ರಾ. ಬೇಂದ್ರೆ, ಪುಟ–೧೭
೨. ಜಡವಾಡಿ ಪಾಂಚಜನ್ಯ, ಕುವೆಂಪು, ಪುಟ–೨೬

ಇತಿಹಾಸದ ಒಡಲಲ್ಲಿ ಸೋಲು, ವಿನಾಶ, ಸಾವುಗಳು ಸಂಭವಿಸಿ ಭೂತಾಯಿ ಅದನ್ನು ತನ್ನೊಡಲಲ್ಲಿ ಹೊಂದಿದ್ದಾಳೆ. ಹಾಗಾಗಿ ಅದು ದೊಡ್ಡ ಸ್ಮಶಾನವೂ ಹೌದು. ಶಾಂತಿ, ಸಹನೆ, ಸಮೃದ್ಧ, ಶಕ್ತಿಶಾಲಿ ಭೂಮಿ ಜ್ವಾಲಾಮುಖಿಯನ್ನು ಹೊತ್ತವಳು! ಕೆ.ಎಸ್.ನರಸಿಂಹಸ್ವಾಮಿ ಹೇಳುವಂತೆ:

"ನಿನಗಿಟ್ಟ ಹೆಸರು ಸಹನೆ
ನೀನೇಕೆ ಮುನಿವೆ?
ಹಗೆ ಯಾರು ನಿನಗೆ
ಇದು ಯಾವ ಯುಗದ ಬೇನೆ?"[೬]

ಕನ್ನಡ ನವೋದಯ ಸಾಹಿತ್ಯ ಕುರಿತು ಈ ಮಾತು ಮೇಲಿನ ಹೇಳಿಕೆಯನ್ನು ಸಮರ್ಥಿಸುವಂತಿದೆ. 'ಕನ್ನಡ ನವೋದಯದಲ್ಲಿ ಅತ್ಯಂತ ಮುಖ್ಯ ಅಂಶವೆಂದರೆ ಪ್ರಕೃತಿಯ ದೈವೀಕರಣ. ಪ್ರಕೃತಿಯ ಪ್ರತಿಯೊಂದು ವಿಲಾಸವೂ, ವಿದ್ಯಮಾನವೂ, ಮತ್ತಾವುದೋ ಶಕ್ತಿಯ, ದೈವೀಶಕ್ತಿಯ ಸಾಕ್ಷಾತ್ಕಾರದಂತೆ ಕಾಣುತ್ತದೆ. ಬೇಂದ್ರೆಯವರ ಕವಿತೆಗಳು ಭೂಮಿ ಮತ್ತು ಮಾನವರ ಸಂಬಂಧದ ವಿವಿಧ ಆಯಾಮಗಳನ್ನು ಬಿಂಬಿಸಿವೆ. ಭೂಮಿಯನ್ನು ಧಿಕ್ಕರಿಸಿದ ಮಾನವರ ಅಧೋಗತಿಯನ್ನು ಈ ಕವಿತೆಗಳು ಚಿತ್ರಿಸಿವೆ ಭೂಮಿ ಮತ್ತು ಮಾನವರದು ತಾಯಿ ಮಕ್ಕಳ ಸಂಬಂಧವಾಗಿದೆ. ಅಲ್ಲಲ್ಲಿ ಭೂ ಆಕ್ರಮನಾದ ಮಾನವನ ವಿವಿಧ ನೆಲೆಗಳ ಅನಾವರಣವೂ ಇದೆ, ಭೂಮಿಯ ಸಮೃದ್ಧತೆ ಹೀಗಿದೆ ಎನ್ನುತ್ತಾರೆ ಬೇಂದ್ರೆ.

"ಇಳೆಯೆಂದರೆ ಬರಿ ಮಣ್ಣಲ್ಲ.
ನಮಗೋ ನೋಡುವ ಕಣ್ಣಿಲ್ಲ.
ಏಸು ತಿಂದರೂ ತೀರದಿದೆ.
ಏನು ತುಂಬಿಯೂ ಮೀರದಿದೆ".[೭]

ಈ ಹಂತದ ಸಾಹಿತ್ಯ ಭೂಮಿ ಕುರಿತು ಈ ಕೆಳಕಂಡಂತೆ ಗ್ರಹಿಕೆ ಹೊಂದಿದೆ. ಭೂಮಿ ಬಿಟ್ಟರೆ ಅನ್ಯಾಶ್ರಮ ಇಲ್ಲ. ಹಾಗಾಗಿ ಒಮ್ಮೊಮ್ಮೆ ಈ ಗ್ರಹಿಕೆ ಭೂಮಿ ಮತ್ತು ಮನುಷ್ಯ ಸಂಬಂಧದ ಭೌತಿಕತೆಯಿಂದ ಅಧ್ಯಾತ್ಮದ ಕಡೆಗೆ ಕೈಚಾಚಿದೆ.

೨. **ಮಾನವ ಮತ್ತು ಭೂಮಿ ಸಂಬಂಧದ ತಾತ್ವಿಕತೆ :** ಕಾರಂತರ ಕಾದಂಬರಿಗಳು ಮಾನವ ಮತ್ತು ನಿಸರ್ಗದ ಸಮಬಂಧಗಳ ರೂಪಕಗಳಾಗಿವೆ. ಈ ರೂಪಕಗಳು ಈ ನೆಲೆಗಳ ಹೋರಾಟದಿಂದ ಕೂಡಿವೆ. ಈ ಹೋರಾಟ ಒಮ್ಮೆ ಸೋಲಾಗಿದೆ, ಇನ್ನೊಮ್ಮೆ ನೋವಾಗಿದೆ. ಇಲ್ಲಿ ಮಾನವ ನಿಸರ್ಗವನ್ನು ಶೋಷಿಸಿದ್ದಾನೆ. ಅಲ್ಲಲ್ಲಿ ನಿಸರ್ಗ ನಲುಗುವಂತೆ ಭಾಸವಾಗುತ್ತದೆ. ಈ ನಿಸರ್ಗಕ್ಕೆ ಜೈವಿಕ ಮತ್ತು ಅನುಭಾವಿಕ ಮುಖಗಳಿವೆ.

ನಾಗರಿಕತೆಗೂ ಮುನ್ನ ಮಾನವನ ಬದುಕು ಸರಳವಾಗಿತ್ತು ಎನ್ನುವ ಒಂದು ತರ್ಕವಿದೆ. ಪ್ರಾಣಿಗಳ ಒಡನಾಟ, ಕೃಷಿ ಮಾನವನ ಸಹಜ ಲಕ್ಷಣಗಳಾದವು. ಅರಣ್ಯ ತಾಣಾವಾಗಿತ್ತಲ್ಲದೆ,

---

೬. ಶಿಲೆಗೆ ಹೂವಿನ ವಂಕಿ, ಆಯ್ದ ಕವನಗಳು ಕೆ.ಎಸ್.ನರಸಿಂಹಸ್ವಾಮಿ. ಪುಟ-೯೦
೭. ಶಕ್ತಿ ಶಾರದೆಯ ಮೇಳ. ಡಿ.ಆರ್ ನಾಗರಾಜ್ ಪುಟ-೧೮

ಸಂಪತ್ತಿನ ಕೇಂದ್ರವೂ ಆಗಿತ್ತು. ಮುಂದಿನ ಹಂತ ಅರಣ್ಯ ನಾಶ, ಪರಿಣಾಮ ಪ್ರಕೃತಿ ವಿಕೋಪ! ಇಲ್ಲಿಂದ ಮಾನವನದು ನಿಸರ್ಗದೊದಿಗಿನ ಸಂಬಂಧ ಋಣಾತ್ಮಕ ಚಲನೆಯಾಗಿದೆ.

ಭೂಮಿ ನೀರಿನ ತಾಣ. ಇದು 'ಜಲಸಂಪನ್ಮೂಲ' ಎಂದು ಕರೆಸಿಕೊಂಡಿದೆ. 'ವಿಸ್ಮಯ' ಕ್ಕೆ ಕಾರಣವಾಗಿದ್ದ ಪ್ರಕೃತಿ ವಿಶ್ಲೇಷಣೆಗೆ ಒಳಪಟ್ಟು ವಿಜ್ಞಾನ ಮುಂದುವರೆದಂತೆ ಶೋಷಣೆ ಆರಂಭವಾಯಿತು. ಇದರಿಂದಾಗಿ ಹವಾಮಾನ ವೈಪರೀತ್ಯ ಕಾಣಿಸಿತು. ಅಣುಸ್ಥಾವರಗಳು ಆರಂಭಗೊಂಡವು. ಭೂಮಿ ತಾಪಕ್ಕೆ ಈಡಾಯಿತು.

ಇವೆಲ್ಲ ಅಂಶಗಳನ್ನು ಕಾರಂತರು ತಮ್ಮ ಕಾದಂಬರಿಗಳ ರಚನೆಯ ಒಳ ಸಾತ್ವಿಕತೆಯನ್ನಾಗಿಸಿಕೊಂಡಿದ್ದಾರೆ. ಅಲ್ಲಿ ಮಾನವ ಬದುಕಿನೊಡನೆ ನಿಸರ್ಗದ ಬದಲಾವಣೆಗಳ ಸಮೀಕರಣವಿದೆ. ಇಲ್ಲಿ ಚಲನಶೀಲತೆ ಎಂಬುದು ಬದಲಾವಣೆ ಎಂಬ ನೆಲೆಯಲ್ಲಿ ಗ್ರಹಿಸಲ್ಪಟ್ಟಿದೆ. ಇದು 'ಬೆಟ್ಟದ ಜೀವ' ಕಾದಂಬರಿಯಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ. ಶಿವರಾಮಯ್ಯನ ಪಯಣ ಈ ದಿಸೆಯಲ್ಲಿ ಗಮನಾರ್ಹ. ಈ ಪಯಣ ಅನೇಕ ಪ್ರಶ್ನೆ, ಕುತೂಹಲ, ಉತ್ತರ, ಹುಡುಕಾಟಗಳನ್ನು ಬಿಂಬಿಸಿದೆ. ಅದನ್ನು ಹೀಗೆ ವಿವರಿಸಿಕೊಳ್ಳಬಹುದು. *"ಕಾದಂಬರಿಯ ವಸ್ತುವನ್ನು ಹರಿಯುವಲ್ಲಿ ಹಾಗೂ ವಿನ್ಯಾಸವನ್ನು ರೂಪಿಸುವಲ್ಲಿ ಕಾರಂತರು ವಾಸ್ತವ ಮಾರ್ಗವನ್ನು ಅನುಸರಿಸುವರು. ವಾಸ್ತವ ಮಾರ್ಗದಲ್ಲಿ ವಸ್ತುನಿಷ್ಠ ವಾಸ್ತವ ಮಾರ್ಗವೇ ಅವರ ಹಲವು ಕಾದಂಬರಿಗಳಲ್ಲಿ ಕಂಡು ಬರುವಂತದ್ದು. ಅವರ ಕಾದಂಬರಿಗೆ ಮೂಲ ಸಾಮಾಗ್ರಿಯನ್ನು ಒದಗಿಸುವ ಪ್ರಪಂಚಕ್ಕೂ ಕಾದಂಬರಿಯ ಒಳಪ್ರಪಂಚಕ್ಕೂ ಇರುವ ನಿಕಟತೆಯ ಸ್ವರೂಪವನ್ನು ಗಮನಿಸಿದರೆ ಒಂದು ಮುಖ್ಯ ವಿಚಾರಗಮನಕ್ಕೆ ಬರುವುದು. ಹೊರಗಿನ ಲೋಕದ ಕಾಲ ಹಾಗೂ ಕಾದಂಬರಿ ಕಾಲ ಇವುಗಳಲ್ಲಿ ಯಾವ ವೆತ್ಯಾಸವನ್ನು ಕಾದಂಬರಿಕಾರ ಮಾಡಿಕೊಳ್ಳುವುದಿಲ್ಲ"*[೮] ಕಾರಂತರು ಈ ಕಾದಂಬರಿ ಮೂಲಕ ಮನುಷ್ಯ ಮತ್ತು ಭೂಮಿಯ ಸಂಬಂಧ ಸಕಾರಾತ್ಮಕವಾಗಿರಬೇಕು ಎಂದು ಹೇಳುತ್ತಾರೆ. ನಿಸರ್ಗದ ಚಲನಶೀಲತೆಯಲಿ ಉಪಯೋಗಿ ಮತ್ತು ಅಪಾಯಕಾರಿ ಅಂಶಗಳಿವೆ. ಇದು ಲೇಖಕ ಪ್ರಜ್ಞಾಪೂರ್ವಕವಾಗಿ ಬಿಂಬಿಸಿದ್ದಾರೆ. ಮನುಷ್ಯ ನಿಸರ್ಗ ಬಿಟ್ಟು ಜೀವಿಸಲು ಸಾಧ್ಯವಿಲ್ಲ. ಅವನು ನಿಸರ್ಗದ ಚಲನಶೀಲತೆಯನ್ನು ಒಪ್ಪಿಕೊಂಡೇ ಸಾಗಬೇಕು. ಇಂತ ಚಿತ್ರಣ 'ಕುಡಿಯರ ಕೂಸು' ಕಾದಂಬರಿಯಲ್ಲಿದೆ. ಹಾಗಾಗಿ ಕಾಡು, ಬೆಟ್ಟ, ಹೊಳೆ, ಅರ್ಥಗರ್ಭಿತ ಸಂಕೇತಗಳಾಗಿವೆ ಇಲ್ಲಿ.

ಚೋಮನ ದುಡಿ ಈ ಅಂಶವನ್ನು ಭಿನ್ನವಾಗಿ ಪರಿಭಾವಿಸಿದೆ. ಇಲ್ಲಿ ಭೂಮಿಗಾಗಿ ಪರಿತಪಿಸುವ ಮಾನವ ಇದ್ದಾನೆ. *"ಶ್ರಮಿಕರು ಭೂ ರಹಿತರಾದಾಗ ಎದುರಿಸುವ ನೋವು-ಅವಮಾನ-ಸಂಕಟಗಳ ಚಿತ್ರಣ ಇಲ್ಲಿದೆ. ಧರ್ಮವೂ ಇಲ್ಲಿದೆ. ಧರ್ಮವೂ ಇಲ್ಲಿ ಪ್ರಮುಖ ಪಾತ್ರ ವಹಿಸಿದೆ. ಬೇಸಾಯ ಯಾರದು? ಇದು ಜಾತಿಗೆ ಸೀಮಿತವಾದದ್ದೇ?"*[೯] ಎಂಬ ಪ್ರಶ್ನೆ ಇಲ್ಲಿ ಕಾಡುತ್ತದೆ. ಚೋಮನ ಆಸೆ ಅಮಾನವೀಯ ಅಲ್ಲ! ಈ ಪ್ರಶ್ನೆ ಹುಟ್ಟು ಹಾಕಿದ ಕಾದಂಬರಿಕಾರರು ಸಮಕಾಲೀನ ಪ್ರಜ್ಞೆ ಬಿಂಬಿಸಿದ್ದಾರೆ.

---

೮. ಟಿ.ಪಿ. ಅಶೋಕ (ಸಂ), ಈ ಶತಮಾನದ ನೋಟ ಶಿವರಾಮಕಾರಂತ, ಪುಟ ೧೬-೧೭

೯. ಬಿ.ಮಾಲಿನಿ ಮಲ್ಯ (ಸಂ), ಶಿವರಾಮ ಕಾರಂತ ಸಾಹಿತ್ಯ ಶ್ರೇಣಿ, ಪುಟ-೫೪.

ಕಾರಂತರ ಕಾದಂಬರಿಗಳಲ್ಲಿ ಸದೃಢವಾದ ಜೀವನದ ನೆಲೆಗಳು ಇವೆ. ಇವು ಸಾಮಾಜಿಕವಾಗಿ ವಿವಿಧ ಮುಖಗಳನ್ನು ಪ್ರತಿನಿಧಿಸುತ್ತವೆ. ಕಾರಂತರ ಅನುಭವದ ಪ್ರತಿಬಿಂಬವಾಗಿವೆ. ಈ ಅನುಭವಗಳು ನಿಸರ್ಗದ ನೆಲೆಯಲ್ಲಿ ತೆರೆದುಕೊಳ್ಳುತ್ತವೆ. ಆದರೆ ಅವರು ತಮ್ಮ ಅನುಭವಗಳನ್ನು ಓದುಗರ ಮೇಲೆ ಬಲವಂತವಾಗಿ ಹೇರುವುದಿಲ್ಲ. ಅದು ಸಹಜವಾಗಿ ಮನುಷ್ಯನ ಬಾಳಿನೊಂದಿಗೆ ಹಾಸು ಹೊಕ್ಕಾಗಿರುತ್ತದೆ. ಕಾರಂತರ ಕಾದಂಬರಿಗಳಲ್ಲಿ ನಿಸರ್ಗವು ಕೆಲವು ಸಲ ಮಾನವನನ್ನು ಮಣಿಸುತ್ತದೆ. ಕೆಲವು ಸಲ ಮನುಷ್ಯ ಅದರೊಂದಿಗೆ ಹೋರಾಡುತ್ತಾ ಬದುಕನ್ನು ಕಟ್ಟಿಕೊಳ್ಳುತ್ತಾನೆ. ಕೆಲವು ಪಾತ್ರಗಳು ಇದನ್ನು ಮಾಡದೆ ಫಲಾಯನವಾದಿಗಳಾಗಿ ನಿಸರ್ಗದಿಂದ ದೂರವಾಗುತ್ತಾರೆ. ಆದರೂ ಸಹ ಅವರು ಯಾವುದೇ ರೀತಿಯಿಂದಲಾದರು ನಿಸರ್ಗದ ಮೇಲೆ ಅವಲಂಬಿಸಿರುತ್ತಾರೆ. ನಿಸರ್ಗವು ಮನುಷ್ಯನ ಪೋಷಕವಾಗಿದ್ದು, ಅದರ ಭಾಗಗಳಾದ ಕಾಡು ನದಿ, ಕಡಲು, ಗಾಳಿ ಮತ್ತು ಸೂರ್ಯ ಇವೆಲ್ಲವೂ ಇಡೀ ಜೀವ ಸಂಕುಲದ ಪೋಷಕಗಳೆಂದು ಕಾರಂತರು ಹೇಳುತ್ತಾರೆ. ಈ ನೆಲೆಗಳ ನಡುವೆ ಬದುಕು ಕಟ್ಟಿಕೊಂಡಿರುವ ಮಾನವ ಸೋಲು-ಗೆಲುವುಗಳ ಮೂಲಕ ಜೀವನವನ್ನು ಸಾರ್ಥಕಪಡಿಕೊಳ್ಳುವುದು ಮುಖ್ಯವಾಗಿದೆ. ಶಿವರಾಮ ಕಾರಂತರು ತಮ್ಮ ಕಾದಂಬರಿಗಳಲ್ಲಿ ನಿಸರ್ಗವನ್ನು ಮಾನವನು ವಿವಿಧ ನೆಲೆಗಳ ಮೂಲಕ ಅವಲಂಬಿಸಿರುವುದನ್ನು ಹೇಳುತ್ತಾರೆ. ಅಂತ ಪ್ರಮುಖ ನೆಲೆಗಳೆಂದರೆ ಜೈವಿಕ ನೆಲೆ, ಅನುಭಾವಿಕ ನೆಲೆ, ಮಾನವೀಯ ಮತ್ತು ಸಾಂಸ್ಕೃತಿಕ ನೆಲೆ ಈ ನೆಲೆಗಳ ಮುಖಾಂತರ ಮಾನವ ನಿಸರ್ಗದೊಂದಿಗೆ ಹೊಂದಿರುವ ಸಂಬಂಧಗಳನ್ನು ಅವರ ಕೆಲವು ಕಾದಂಬರಿಗಳ ಮೂಲಕ ಗ್ರಹಿಸುವ ಪ್ರಯತ್ನ ಇಲ್ಲಿದೆ.

ಜೈವಿಕ ನೆಲೆ:

ಕಾರಂತರು ತಮ್ಮ ಕಾದಂಬರಿಗಳಲ್ಲಿ ನಿಸರ್ಗದ ನೆಲೆಗಳಾದ ಕಾಡು, ಕಡಲು, ನದಿ, ಭೂಮಿ, ಬೆಳಕು ಮತ್ತು ಗಾಳಿ ಇವುಗಳ ಮುಖಾಂತರ ಮನುಷ್ಯ ಹೊಂದಿರುವ ವಿವಿಧ ಸಂಬಂಧಿತ ನೆಲೆಗಳನ್ನು ಶೋಧಿಸುತ್ತಾರೆ. ನಿಸರ್ಗವಿಲ್ಲದೆ, ಜೀವಸಂಕುಲದ ಅಸ್ತಿತ್ವವನ್ನು ಊಹಿಸಿಕೊಳ್ಳಲು ಸಾಧ್ಯವಿಲ್ಲ. ಇಂತಹ ನಿಸರ್ಗದಲ್ಲಿ ಮನುಷ್ಯನು ತನ್ನ ಸಂಸ್ಕೃತಿಯನ್ನು ಕಟ್ಟಿಕೊಂಡು ಬದುಕುತ್ತಿದ್ದಾನೆ. ಈ ಬದುಕಿನಲ್ಲಿ ಅವನ ಕುಟುಂಬ, ಸಮಾಜ ಮುಂತಾದವುಗಳು ಒಳಗೊಂಡಿವೆ. ಹೀಗೆ ನಿಸರ್ಗದೊಂದಿಗೆ ವಿವಿಧ ಪರಿಯಲ್ಲಿ ಮನುಷ್ಯ ಹೊಂದಿರುವ ಸಂಬಂಧಗಳನ್ನು ಜೈವಿಕ ನೆಲೆಗಳು ಎಂದು ಪರಿಗಣಿಸಲಾಗಿದೆ. ಇಂತಹ ಜೈವಿಕ ನೆಲೆಗಳನ್ನು ಕಾರಂತರ ಪ್ರಾತಿನಿಧಿಕ ಕಾದಂಬರಿಗಳ ಮುಖಾಂತರ ಅದಷ್ಟು ಮಟ್ಟಿಗೆ ಗ್ರಹಿಸುವ ಪ್ರಯತ್ನ ಮಾಡಲಾಗಿದೆ. ಅಂತಹ ಕಾದಂಬರಿಗಳೆಂದರೆ 'ಬೆಟ್ಟದ ಜೀವ', 'ಕುಡಿಯರ ಕೂಸು', 'ಚೋಮನ ದುಡಿ', 'ಮರಳಿ ಮಣ್ಣಿಗೆ, ಇದ್ದರು ಚಿಂತೆ, ಧರ್ಮರಾಯನ ಸಂಸಾರ, ಚಿಗುರಿದ ಕನಸು, ಮೊದಲಾದವು.

'ಬೆಟ್ಟದ ಜೀವ' ಕಾದಂಬರಿಯನ್ನು ಬರೆಯಲು ಕಾರಣವಾದ ನೆಲೆಗಳನ್ನು ಕುರಿತು ಶಿವರಾಮ ಕಾರಂತರು ಹೇಳುತ್ತಾರೆ. ಅವರು ಕೊಡಗಿನ ಸುಂಟಿಕೊಪ್ಪ ಮಂಜುನಾಥಯ್ಯನವರ ಮನೆಗೆ ಹೋದಾಗ, ಅವರ ಸ್ಥಳವು ಮಲೆನಾಡ ಪ್ರದೇಶವಾಗಿರುತ್ತದೆ. ಇಂತಹ ಪ್ರದೇಶಕ್ಕೆ ಹೋಗುವ ದಾರಿಯಲ್ಲಿ ಬಸ್ಸು ಕೆಟ್ಟು ಕೂತ ಕಾರಣವಾಗಿ ಬೆಟ್ಟಗಳ ಹಾದಿಯಲ್ಲಿ ಹೋಗುತ್ತಾರೆ. ಆಗ ಅವರಿಗೆ ನಿಸರ್ಗದ ಮುಂದೆ ಮನುಷ್ಯನ ನೆಲೆಯ ಬಗ್ಗೆ ಅರಿವಾಗುತ್ತದೆ. ಆಗ ಅದನ್ನು ಕುರಿತು–"*ನನಗೆ ಬೆಟ್ಟಗಳನ್ನು ಕಂಡಾಗಲೆಲ್ಲ ಅವುಗಳು ಧೀಮಂತಿಕೆಯೇ ಹೊಡೆದು ಕಾಣಿಸುತ್ತದೆ. ಅವು ಅರಡಿ ಪೂರ್ತಿ ಬೆಳೆಯದ ನಮ್ಮಂತಹರನ್ನು ಕಂಡು ನೀನೆಷ್ಟರವ? ಎಂದು ಕೆಣಕುವಂತೆ ತೋರುತ್ತಿತ್ತು. ಬೆಟ್ಟದ ಉನ್ನತಿಯಾಗಲಿ ದೀರ್ಘಾಯುಷ್ಯವಾಗಲಿ ಮನುಷ್ಯರಿಗಿಲ್ಲ ನಿಜ. ಮನುಷ್ಯನಿಗೆ ಅಲ್ಪ ಆಯುಷ್ಯದಲ್ಲಿ ಅವಕ್ಕಿರುವ ಧಿಮಾಕು ಏತಕ್ಕೆ ಬರಬಾರದು. ಬಂದಿಲ್ಲವೇ ಕೆಲವರಿಗಾದರೂ? ಎಂಬೊಂದು ಪ್ರಶ್ನೆ ಕಾಣಿಸಿಕೊಂಡು, ಥಟ್ಟನೆ ಒಂದು ಆಯ್ಕೆ ಹೊಳೆಯಿತು 'ಬೆಟ್ಟದ ಜೀವ' ಎಂಬ ಮಾತದು*".[೧೦] ಬೆಟ್ಟದ ಜೀವ ಕಾದಂಬರಿಯು ಬರೆಯಲು ಸ್ಫೂರ್ತಿಯ ಬಗ್ಗೆ ಹೇಳಿದ್ದಾರೆ.

ಬೆಟ್ಟದ ಜೀವದ ಪಾತ್ರಗಳಾದ ನಿರೂಪಕ ಶಿವರಾಮಯ್ಯ, ಗೋಪಾಲಯ್ಯ, ನಾರಾಯಣಯ್ಯ, ದೇರಣ್ಣಗೌಡ ಮುಂತಾದವರು ನಿಸರ್ಗದ ಜೈವಿಕ ನೆಲೆಯಲ್ಲಿ ತಾವು ಜೀವನ ನಡೆಸುವುದು ಹೇಗೆಂಬುದನ್ನು ಕಂಡುಕೊಂಡಿರುವ ಬಗೆಯು ಮುಖ್ಯವಾಗಿದೆ. ಈ ಕಾದಂಬರಿಯ ಮುಖ್ಯ ಪಾತ್ರಗಳಾದ ಗೋಪಾಲಯ್ಯ ಮತ್ತು ಶಂಕರಮ್ಮ ಕಾಡನ್ನೆ ನಾಡಾಗಿ ಪರಿವರ್ತಿಸಿ ತಮ್ಮ ಜೈವಿಕ ಅಸ್ತಿತ್ವವನ್ನು ಕಟ್ಟಿಕೊಂಡಿದ್ದಾರೆ. ಗೋಪಾಲಯ್ಯನು ನಿಸರ್ಗದಲ್ಲಿ ಕಾಡನ್ನು ಮಣಿಸಿ ಕಾಡಿನಲ್ಲಿ ತಮ್ಮ ಸಂಸ್ಕೃತಿಯನ್ನು ಕಟ್ಟಿಕೊಂಡ ಧೀಮಂತ ವ್ಯಕ್ತಿಯಾಗಿದ್ದಾನೆ. ಶಿವರಾಮಯ್ಯ ಆಕಸ್ಮಿಕವಾಗಿ ದಾರಿ ತಪ್ಪಿ ಕಾಡನ್ನು ಸೇರಿ ದೇರಣ್ಣಗೌಡನ ಸಹಾಯದಿಂದ ಬಂದ ಇವನು ಗೋಪಾಲಯ್ಯನು ನಿಸರ್ಗದೊಂದಿಗೆ ಹೊಂದಿದ್ದ ಸಂಬಂಧವನ್ನು ಮತ್ತು ಅನುಭವಗಳನ್ನು ತಿಳಿದು ಬೆರಗಾಗುವುದು ಪ್ರಮುಖ ಸಂಗಾತಿಯಾಗಿದೆ.

ಗೋಪಾಲಯ್ಯ ಮತ್ತು ಇತರರು ಕಾಡಿನಲ್ಲಿ ವಿವಿಧ ಅನುಭವಗಳನ್ನು ಪಡೆಯುತ್ತಾ, ಜೀವನ ಕಟ್ಟಿಕೊಳ್ಳುವುದು ಗಮನಾರ್ಹವಾಗಿದೆ. ಈ ಸಂಬಂಧ ಎಂದೂ ಬಿಡಿಸಲಾಗದ ಸಂಬಂಧವಾಗಿರುವುದು ಸ್ಪಷ್ಟವಾಗಿದೆ. ಅದುವರೆಗೂ ಎಲ್ಲೂ ಕಂಡರಿಯಾದ ಈ ಸಂಬಂಧಗಳನ್ನು ಕಂಡು ಶಿವರಾಮಯ್ಯ ಆಶ್ಚರ್ಯ ಪಡುತ್ತಾನೆ. ದೇರಣ್ಣನೊಂದಿಗೆ ಗೋಪಾಲಯ್ಯನ ಮನೆ ಸೇರಲು ಹೋಗುವ ದಾರಿಯಲ್ಲಿ ಕಾಣಸಿಕ್ಕುವ ಕಾಲುವೆಯನ್ನು ದಾಟುವ ಸಂದರ್ಭದಲ್ಲೂ ಶಿವರಾಮಯ್ಯ ಅದರ ಮೇಲೆ ಹಾಕಿದ್ದ ಅಡಿಕೆಯ ಮರಗಳ ಸೇತುವೆಯನ್ನು ದಾಟಬೇಕಾಯಿತು. ಅದು "*ಜಿಮುಕು ಜಿಮುಕು ಕುಣಿಯುವ ಆ ಅಡಿಕೆ ಮರದ ಸೇತುವೆಯ ಮೇಲೆ ಜಿಗಿದು ಸರಿದ ನಾನು ಜೀವ ಹಿಡಿದು ನಿಂತೆ.*

---

೧೦. ಶಿವರಾಮ ಕಾರಂತ, ಬೆಟ್ಟದ ಜೀವ, ಪುಟ ೦೪

ಕುಳಿತೆ, ಕೊನೆಗೆ ಚತುಷ್ಪಾದ ಪ್ರಾಣಿಯಂತೆ ಅತೀವ ಸಾಹಸದಿಂದ ಆ ನಾಲ್ಕು ಗಜ ದೂರವನ್ನು ದಾಟಿ, ತಿರುಗಿ ಮನುಷ್ಯನಾದೆ”[೧೧] ಪ್ರಕೃತಿಯ ನಡುವೆ ಜೀವಿಸಬೇಕಾದರೆ ಅನೇಕ ಆತಂಕಗಳನ್ನು ನಿಸರ್ಗ ಸೃಷಿಸುತ್ತದೆ. ಇಂತಹ ಆತಂಕಗಳನ್ನು ಮೆಟ್ಟಿ ನಿಲ್ಲುವುದೇ ಜೀವನ. ಕಾರಂತರು ನಿಸರ್ಗವನ್ನು ಮತ್ತು ಅದರ ವೈಚಿತ್ರವನ್ನು ಅದ್ಭುತವಾಗಿ ಕಟ್ಟಿಕೊಡುವುದರಲ್ಲಿ ಪ್ರಮುಖರು. ನಿಸರ್ಗದಲ್ಲಿ ಆತಂಕವಿರುತ್ತದೆ. ಅದರ ಜೊತೆಗೆ ಜೀವನೋತ್ಸವ ಮಡುಗಟ್ಟಿರುತ್ತದೆ. ಇಂತ ಸುಖ ಸಂತೋಷವನ್ನು ಪಡೆಯಲು ಮಾನವ ನಿಸರ್ಗದಲ್ಲಿ ನಿರಂತರ ಹೋರಾಟ ಮಾಡುತ್ತಿರುತ್ತಾನೆ. ಇದೇ ಅವನ ಜೀವನದ ಸರಿಯಾದ ನೆಲೆಯಾಗಿದೆ. ಈ ನೆಲೆಯಲ್ಲಿ ಹೋರಾಟ ಮತ್ತು ಅಸ್ತಿತ್ವದ ಪ್ರಶ್ನೆ ಅಡಗಿದೆ. ಹಾಗೆಯೇ ಗೋಪಾಲಯ್ಯ ಹೋರಾಡುತ್ತಾ ಜೀವನವನ್ನು ಕಟ್ಟಿಕೊಳ್ಳುವುದು. ಇದು ಆತನ ದಿಟ್ಟತನದ ಪ್ರತೀಕ. ಇಂತಹ ದಿಟ್ಟತನದ ಅನುಭವವನ್ನು ಕಂಡು ಶಿವರಾಮಯ್ಯ ಚಕಿತರಾಗುತ್ತಾರೆ. ಇದು ಹೊರಗಿನವರ ಮಟ್ಟಿಗೆ ಕುತೂಹಲಕರವಾಗಬಹುದು. ಆದರೆ ಗೋಪಾಲಯ್ಯನಿಗೆ ಇದು ಅನಿವಾರ್ಯವಾಗಿದೆ. ಈ ಅನಿವಾರ್ಯತೆಯು ಅವನನ್ನು ನಡೆಸುತ್ತದೆ. ಕಾಡನ್ನು ಕಡಿದು ನಾಡನ್ನಾಗಿಸಿ ಆತನು ಬದುಕುತ್ತಿದ್ದಾನೆ. ಇದು ಮಾನವನ ಜೈವಿಕ ಪ್ರಕ್ರಿಯೆ ಆಗಿದೆ.

ಗೋಪಾಲಯ್ಯ ವಾಸಿಸಯತ್ತಿರುವ ಸ್ಥಳವು ನಿಸರ್ಗ ರಮಣೀಯವಾದ ತಾಣವಾಗಿತ್ತು. ಅದನ್ನು ಕುರಿತು ಶಿವರಾಮಯ್ಯ– ಮುಂದೆ ಸಂಧಿಸಿದುದು ಅಡಿಕೆ ತೋಟವೆಂದು, ಆ ಸುಬ್ರಹ್ಮಣ್ಯ ಸೀಮೆಯ ಚಳಿಯೆಲ್ಲವೂ ಆ ತೆಂಗಿನ ತೋಟದ ಆಸರೆಯನ್ನು ಸೇರಿರಬೇಕು ಎಂದೆನಿಸಿತು. ಆ ತೋಟದ ನಡುವೆ ನೇರವಾಗಿ ಸಾಗಿದೆವು. ಎದುರೊಂದು ಬಚ್ಚಲ ಮನೆ ಬಂದಿತು. ಇದರ ಬಳಿಯಲ್ಲೇ ಗುಳುಗಳು ಸದ್ದು ಮಾಡಿ ಹರಿಯುವ ದಂಬೆ ನೀರು, ಬಚ್ಚಲು ಮನೆಯಲ್ಲಿ ಬೆಂಕಿ ಒಟ್ಟುತ್ತ ಒಬ್ಬರು ಮುದುಕರು ಕುಳಿತ್ತಿದ್ದರು. ಇಂತ ಕಟ್ಟುಮಸ್ತಾದ ಜಾಗದಲ್ಲಿ ಗೋಪಾಲಯ್ಯ ಕಾಡನ್ನು ಸವರಿ ಮನೆ ಕಟ್ಟಿಕೊಂಡಿದ್ದನು. ಇದರೊಂದಿಗೆ ತಾನು ವ್ಯವಸಾಯ ಮಾಡಲು ಭೂಮಿಯನ್ನು ಮಾಡಿಕೊಂಡಿದ್ದನು ಅಲ್ಲಿಗೆ ಬಂದು ಸೇರಿದ ಶಿವರಾಮಯ್ಯನಿಗೆ ಅವನ ಸಾಹಸ ಕಂಡು ವಿಸ್ಮಯ ಮೂಡುತ್ತದೆ. ಅದಕ್ಕೆ ಅವನು ಈ ಕಗ್ಗಾಡಿನ ಸಂಧಿನಲ್ಲಿ ನೀವೆಲ್ಲ ಮನೆ ಮಾಡಿಕೊಂಡಿರುವುದನ್ನು ನೋಡಿದರೆ ನನಗೆ ಆಶ್ಚರ್ಯವಾಗುತ್ತಿದೆ. ಇಲ್ಲಿ ಹರಿದಾರಿಗೊಂದು ಒಕ್ಕಲು ಮನೆ ಇದೆಯೋ’ ಇಲ್ಲವೋ! ಅಲ್ಲಿ ಇಲ್ಲಿ ಹುಲಿಯ ಉಪದ್ರ, ಕಾಡಾನೆಗಳ ಸಂಚಾರ ಇದೆ ಎನ್ನುತ್ತಾರೆ. ಕಾಡಿನಲ್ಲಿರುವ ಜೀವ ಜಂತುಗಳು ಆ ಪರಿಸರದೊಂದಿಗೆ ಹೊಂದಿಕೊಂಡು ಹೋಗುತ್ತಿರುತ್ತವೆ. ಅಲ್ಲಿ ಕಾಣ ಸಿಗುವ ಜಿಂಕೆ, ಕಾಡು ಕೋಣ, ಆನೆ ಮುಂತಾದ ಪ್ರಾಣಿಗಳು

೧೧. ಶಿವರಾಮ ಕಾರಂತ, ಬೆಟ್ಟದ ಜೀವ, ಪುಟ ೦೫.

ಹುಲ್ಲನ್ನು ಮತ್ತು ಮರಗಿಡಗಳ ಸೊಪ್ಪನ್ನು ಆಶ್ರಯಸಿರುವುದು ಸಾಮಾನ್ಯ ಸಂಗತಿ. ಇಂತಹ ಪ್ರಾಣಿಗಳನ್ನು ಆಹಾರಕ್ಕಾಗಿ ಹುಲಿ, ಸಿಂಹ, ನರಿ ಮುಂತಾದವು ಉಪಯೋಗಿಸುತ್ತವೆ.

ಗೋಪಾಲಯ್ಯ ವಾಸಿಸುವ ಸ್ಥಳದಲ್ಲಿ ದೇರಣ್ಣಗೌಡನ ಹಸುಗಳನ್ನು ಹಾಗೂ ಗೋಪಾಲಯ್ಯನ ಹಸುಗಳನ್ನು ಹುಲಿಯೊಂದು ತಿನ್ನುತ್ತಿರುತ್ತದೆ. ಅಲ್ಲದೆ, ಆಗಾಗ ಮನುಷ್ಯರ ಮೇಲೆಯು ದಾಳಿ ಮಾಡುತ್ತದೆ. ಇದು ನಿಸರ್ಗದ ನೆಲೆ ಮತ್ತು ಜೈವಿಕ ನೆಲೆಗಳ ನಡುವೆ ನಡೆಯುವ ಘರ್ಷಣೆಯಾಗಿದೆ. ಈ ಘರ್ಷಣೆ ಕೇವಲ ಪ್ರಾಣಿಗಳಲ್ಲಿ ಎನ್ನುವಂತಿಲ್ಲ. ಮನುಷ್ಯನ ಇತಿಹಾಸದಲ್ಲಿ ಈ ಕ್ರಿಯೆ ಆಡಗಿದೆ. ಕಾರಂತರು ಚಿತ್ರಿಸಿರುವ ಹುಲಿ ಪ್ರಸಂಗವನ್ನು ನೋಡಬಹುದು. ಹಾಗೂ ಒಂದು ಪಂಜರವನ್ನು ಭಟ್ಯ, ದೇರಣ್ಣ ತಯಾರಿಸಿದ ನಂತರ ಅದರಲ್ಲಿ ಎರಡು ನಾಯಿಗಳನ್ನು ಕಟ್ಟಿಹಾಕಿದ್ದಾಗ ತಿನ್ನಲು ಬಂದ ಹುಲಿ ಪಂಜರಕ್ಕೆ ಸಿಕ್ಕಿಹಾಕಿಕೊಂಡಿರುತ್ತದೆ. ಇದನ್ನು ಬಟ್ಯ ಮತ್ತು ದೇರಣ್ಣಗೌಡರು ಕೋವಿಯಿಂದ ಗುಂಡುಹಾರಿಸಿ ಸಾಯಿಸುತ್ತಾರೆ. ಇದಲ್ಲದೆ ಕಾಡಿನಲ್ಲಿ ಕಾಟಿ, ಆನೆ, ಶಾರ್ದುಲ, ಜಿಂಕೆ, ಮಂಗಗಳು ಮುಂತಾದ ಪ್ರಾಣಿಗಳು ಹಲವಾರು ಚಿಕ್ಕ ಪ್ರಾಣಿಗಳು ಹಾಗೂ ಅಸಂಖ್ಯಾತ ಪಕ್ಷಿ ಪ್ರಭೇದಗಳು ವಾಸಿಸುತ್ತವೆ. ಇಂತಹ ಪ್ರಾಣಿ ಪಕ್ಷಿಗಳು ತಮ್ಮ ಅವಾಸ ಸ್ಥಾನವನ್ನು ಆಕ್ರಮಣ ಮಾಡಿ ಜೀವಿಸುತ್ತಿರುವ ಮನುಷ್ಯರ ತೋಟಗಳ ಮೇಲೆ ದಾಳಿ ಮಾಡುತ್ತವೆ. ಅವುಗಳಲ್ಲಿ ಮುಖ್ಯವಾಗಿರುವಂತಹವು ಆನೆಗಳು ಮತ್ತು ಮಂಗಗಳು ಇವು ಮಲೆನಾಡಿನಲ್ಲಿ ಬೆಳೆಯುವ ಅಡಿಕೆ, ಕಬ್ಬು, ಮುಂತಾದ ಬೆಳೆಗಳ ಮೇಲೆ ದಾಳಿ ಮಾಡಿ ಬೆಳೆ ನಾಶ ಮಾಡುತ್ತವೆ. ಇದು ನಿಸರ್ಗದಲ್ಲಿ ನಡೆಯುವ ಜೈವಿಕ ಜಾಲದ ಚಲನಶೀಲತೆ.

ಗೋಪಾಲಯ್ಯ ಮಾಡಿರುವ ತೋಟಕ್ಕೆ ಹಾಗೂ ಕಾಡಿನ ಇನ್ನೊಂದು ಮೂಲೆಯಾದ ಕಾಟುಮೂಲೆಯಲ್ಲಿರುವ ನಾರಾಯಣನ ತೋಟಕ್ಕೆ ಆನೆಗಳು ದಾಳಿ ಮಾಡುವುದುಂಟು. ಇದರೊಂದಿಗೆ ಕಾಟಿಗಳ ದಾಳಿಯು ಸೇರಿದೆ. ಇದನ್ನು ಕುರಿತು ಗೋಪಾಲಯ್ಯ *"ಅದೊಂದರದ್ದೇ ಅಂದರೇನು? ಆನೆಗಳ ಲೂಟಿ ಕಡಿಮೆಯಿದೆಯೇ? ಆನೆಯ ಹಿಂಡು ಬಂದು ನುಗ್ಗಿದ್ದರೆ, ಅಡಿಕೆ ತೋಟ ಒಂದು ರಾತ್ರಿಯಲ್ಲಿಯೇ ನೆಲಸಮ." ಇತ್ತೀಚೆಗೆ ಕಾಟು ಮೂಲೆಗೆ ಆಸ್ತಿ ಬಂದಿತ್ತು ಎಂದನಲ್ಲ ನಾರಾಯಣ. ದೇವರು ಮಾಡುವ ಅನ್ಯಾಯ ಎಂದರೆ ಇದು! ಅವಕ್ಕೆ ಕಾಡು ಗುಡ್ಡೆಯಲ್ಲಿ ಸೊಪ್ಪಿಗೆ ಬರಗಾಲವೇ? ಹುಲ್ಲು ತಿಂಡಿ, ನೀರುಗಳಿಗೆ ಕೊರತಯೇ ನೆಟ್ಟು ಬೆಳೆಸಿದ ತೋಟಕ್ಕೆ ನುಗ್ಗಿ, ಅದರನ್ನು ಮುರಿಯಬೇಕೆಂದೇನು"?*[೧೨]

ಅಲ್ಲ ನಿಮ್ಮ ಹಾಗೆ ಒಬ್ಬೊಬ್ಬಟ್ಟಿಗೆ, ಒಂದೇ ಕಡೆ ಚೆನ್ನಾಗಿ ತೆಂಗು, ಬಾಳೆಗಳನ್ನು ಬೆಳೆಯಿಸುತ್ತಾರೆಯೆ? ಎನ್ನುತ್ತಾನೆ. ಇದು ನಿಸರ್ಗದ ನಡುವೆ ಜೀವಗಳು ಬದುಕಿಗಾಗಿ ಗೋಪಾಲಯ್ಯ ನಾರಾಯಣಯ್ಯನಂತಹ ಕೃಷಿಕರಿಗೆ ಇದು ನಷ್ಟವನ್ನೊಂಟು ಮಾಡುತ್ತದೆ. ಆದರೂ ಗೋಪಾಲಯ್ಯ ಬೆಟ್ಟದ ತಡಿಯಲ್ಲಿ ಹುಟ್ಟಿ ನಿಸರ್ಗದೊಂದಿಗೆ ಬೆಟ್ಟದಂತಹ ಜೀವನ ನಡೆಸುತ್ತಾನೆ.

೧೨. ಶಿವರಾಮ ಕಾರಂತ, ಬೆಟ್ಟದ ಜೀವ, ಪುಟ ೦೬.

'ಬೆಟ್ಟದ ಜೀವ' ಪ್ರಕೃತಿ ಮತ್ತು ಮಾನವ ಶಕ್ತಿಯ ಅನಾದೃಶ್ಯ ನಿರೂಪಣೆಯಾಗುತ್ತದೆ. ಗ್ರಾಮ್ಯ ಹಾಗೂ ನಾಗರಿಕ ಮೌಲ್ಯಗಳ ಮುಖಾಮುಖಿಯ ಮೂಲಕ ಜೀವಿಗಳು ಬಂಧನವನ್ನು ಕಡಿದು ಬಿಡುಗಡೆಯನ್ನು ಹೊಂದುವಂತಾಗುತ್ತದೆ. ಮಾನವ ಜೀವಿಗಳ ಮಾಗುವಿಕೆಯ ಅನುಪಮ ಕಥನವಾಗುತ್ತದೆ. ಬದುಕುವುದು ಹೊನ್ನಿಗಾಗಿ ಅಲ್ಲ ಎನ್ನುವ ಗೋಪಾಲಯ್ಯನ ಮಾತಿನ ಮೂಲಕ ಬಾಳಿನ ಉದ್ದೇಶವೂ ಕಾದಂಬರಿಯ ಒಟ್ಟು ಧ್ವನಿಯಾಗಿ ಹೊರ ಹೊಮ್ಮುವಂತಾಗುತ್ತದೆ ಅಂದರೆ ಮಾನವ ಶಕ್ತಿಯನ್ನು ಬಳಸುತ್ತಾನೆ. ಅಂದರೆ ಇಲ್ಲಿ ಬುದ್ಧಿ ಶಕ್ತಿ ಮತ್ತು ದೈಹಿಕ ಶಕ್ತಿಯ ಮೇಳೈಸುವಿಕೆ ಇರುತ್ತದೆ. ಇದರ ಮೂಲಕ ಅವನು ಪ್ರಕೃತಿಯನ್ನು ಜಯಿಸುತ್ತಾನೆ. ಅದರೆ ಜಯದಲ್ಲಿ ಪ್ರಕೃತಿಯೊಂದಿಗೆ ಪೂರಕ ಸಂಬಂಧವಿರುತ್ತದೆ. ಆಗ ನಿಸರ್ಗದಲ್ಲಿ ಏನೇ ಅಡೆ ತಡೆ ಬಂದರೂ ಸಹ ಅದನ್ನು ಜಯಿಸಬಹುದಾಗಿದೆ. ಈ ಸಮಯದಲ್ಲಿ ಅವನ ಜೈವಿಕ ನೆಲೆಯ ಚಟುವಟಿಕೆಯು ದೀರ್ಘವಾಗಿ ನಿಸರ್ಗದಲ್ಲಿ ನಿರಾಯಾಸವಾಗಿ ಮುಂದುವರೆಯುತ್ತದೆ. ನಿಸರ್ಗದಲ್ಲಿ ಪ್ರತಿಯೊಂದು ಜೀವಿಗೂ ಅದರದೇ ಆದ ಸ್ಥಾನ ಮಾನವಿದೆ. ಈ ಸ್ಥಾನಮಾನಕ್ಕಾಗಿ ಅದು ಹವಣಿಸುತ್ತದೆ. ಅದು ಗೋಪಾಲಯ್ಯನ ತೋಟದ ಮೇಲೆ ದಾಳಿ ಮಾಡುವ ಆನೆ, ಮಂಗ, ಕಾಟಿ ಮುಂತಾದ ಜೀವಿಗಳ ಮೂಲಕ ಪ್ರಕಟವಾಗುತ್ತದೆ. ಕಾಡು, ಪ್ರಾಣಿಗಳ ವಾಸಸ್ಥಾನ ಅಲ್ಲಿ ಮಾನವ ವಾಸಿಸುವುದರಿಂದ ಕಾಡಿನ ಪ್ರಾಣಿ ಸಂಸ್ಕೃತಿಗೆ ದಕ್ಕೆ ಬರುವ ಕಾರಣ ಅವು ದಾಳಿ ಮಾಡುತ್ತವೆ.

ಗೋಪಾಲಯ್ಯ ಇಂತ ಕಾಡಿನಲ್ಲಿ ವಾಸಮಾಡುವ ಕಾರಣವನ್ನು ಶಿವರಾಮಯ್ಯ ಪ್ರಶ್ನಿಸಿದಾಗ ಗೋಪಾಲಯ್ಯನ ವಂಶಾವಳಿಯು ನಿಸರ್ಗದಲ್ಲಿ ಸ್ಥಾಪಿಸಿದ್ದ ವಾಸ ಸ್ಥಾನದ ಜೈವಿಕ ನೆಲೆಯ ಮಹತ್ವ ತಿಳಿಯುತ್ತದೆ. *"ನಮ್ಮ ಅಜ್ಜನ ಕಾಲದಿಂದಲೂ ಇಲ್ಲಿ ಬೆಳೆದು ಕಥೆ ನನಗೆ ಚೆನ್ನಾಗಿ ಗೊತ್ತು. ಅಲ್ಲಿಂದ ಇಲ್ಲಿಯ ತನಕವೂ ಹೀಗಿಯೇ ನಡೆದಿದೆ. ನಮ್ಮ ಕುಲ ಮಾತ್ರ ಕವಲು ಒಡೆದಂತಿಲ್ಲ. ಈಗಿರುವ ಮನೆ ನಮ್ಮ ಪಿಜ್ಜನ ಕಾಲದ್ದು. ನಾವು ಅದರಲ್ಲಿಯೇ ಇದ್ದೇವಲ್ಲ"*[೧೩] ಎಂದು ತಮ್ಮ ಮತ್ತು ನಿಸರ್ಗದ ಒಡನಾಟದ ಬಗ್ಗೆ ಹೇಳುತ್ತಾರೆ. ಒಡನಾಟವೆಂದರೆ ಜೈವಿಕ ಅಸ್ತಿತ್ವ ಜೈವಿಕ ಅಸ್ತಿತ್ವವೆಂದರೆ ನಿಸರ್ಗದ ನೆಲೆಯಲ್ಲಿ ಜೀವಿಸುವುದು ಆಗಿದೆ. ಶಿವರಾಮಯ್ಯ ಮುಂದುವರೆದು ನಿಮಗಾಗಿ ಬೇರೆ ಕಡೆ ಆಸ್ತಿಯನ್ನು ಕೊಡಿಸುತ್ತೇನೆ ಎಂದಾಗ ಗೋಪಾಲಯ್ಯನ ನಿಜವಾದ ಕಾಡಿನ ಪ್ರೇಮ ಈ ಸಂದರ್ಭದಲ್ಲಿ ತಿಳಯುತ್ತದೆ. "ಹೌದು ಶಿವರಾಮಯ್ಯ, ಈ ಜಾಗಕ್ಕೇನಾಗಿದೆ? ಇಂಥಾ ನೀರಿನ ಬಲವಿರುವ ತೋಟವು ಸಾಮಾನ್ಯ ಎಲ್ಲೂ ಸಿಗಲಾರದು. ಅದೂ ನಿಮ್ಮ ಪುತ್ತೂರು, ವಿಟ್ಲದಂಥ ಸೀಮೆಗಳಲ್ಲಿ ಸಿಕ್ಕೀತೆ ಎಂದು ತಿಳಿಯಲೇಬೇಡಿ. ಇಲ್ಲಿ ಯಾವುದಕ್ಕೆ ಕೊರತೆಇದೆಯಂತೆ? ನೀರು ಕಟ್ಟಿಯಾಯಿತಲ್ಲ– ಅವನ್ನ ನಾವು ನಿಮಗೆ ಕೊಟ್ಟಿರರುಂಟು. ಜಾನುವಾರುಗಳಿಗಾದರೂ ಮೇಪಿನ ತಗಾದೆಯುಂಟೆ? ವರ್ಷದ ಹನ್ನೆರಡೂ ತಿಂಗಳು ಹಸುರು ಹುಲ್ಲಿಗೆ ಬರಗಾಲವಿಲ್ಲ. ಹುಲಿಯ

೧೩. ಶಿವರಾಮ ಕಾರಂತ, ಬೆಟ್ಟದ ಜೀವ, ಪುಟ ೦೬.

ಉಪದ್ರ, ಕಾಟಿಹುಳ ಉಪದ್ರ ಇದೆ ನಿಜ. ಆ ರೀತಿ ಎಣಿಕೆ ಹಾಕಿದರೆ ಒಂದೊಂದು ಕೊರತೆಯಿದ್ದೇ ಇದೆ. ಇಲ್ಲಿನ ಒಂದು ಸಹಿಸಲಾರದ ಉಪದ್ರವವೆಂದರೆ 'ಚಳಿಜ್ವರ' ಹೀಗೆ ನೈಸರ್ಗಿಕ ನೆಲೆಯಲ್ಲಿ ಜೀವಿಗಳ ಅಸ್ತಿತ್ವಕ್ಕೆ ಬೇಕಾದ ಸೌಲಭ್ಯಗಳನ್ನು ಕುರಿತು ಗೋಪಾಲಯ್ಯ ಹೇಳುತ್ತಾನೆ. ಏಕೆಂದರೆ ಮನುಷ್ಯನಿಗೆ ಮೂಲಭೂತವಾಗಿ ಬೇಕಾಗಿರುವುದು ಶುದ್ಧಗಾಳಿ ಮತ್ತು ಶುದ್ಧ ನೀರು ಹಾಗೂ ಪೋಷಣೆ ಮಾಡುವ ಪ್ರಾಣಿ ಸಂಕುಲಕ್ಕೆ ಬೇಕಾದ ಹಸಿರು ಹುಲ್ಲು, ಇದರೊಂದಿಗೆ ಅವನು ಬದುಕಲು ಫಲವತ್ತಾದ ಭೂಮಿ ಇದ್ದರೆ ಮನುಷ್ಯನಿಗೆ ಯಾವುದೇ ಆತಂಕವಿಲ್ಲ. ಅದನ್ನು ನಿಸರ್ಗ ಕೊಟ್ಟಿದೆ. ಆದರೆ ಮಾನವ ಕೆಲಸವು ಸಲ ದುರಾಸೆಗೆ ಈಡಾಗಿ ನಿಸರ್ಗವನ್ನು ದೋಚಲು ಪ್ರಯತ್ನಿಸುತ್ತಾನೆ. ಆಗ ತನ್ನ ಅಸ್ತಿತ್ವವನ್ನು ನಿಸರ್ಗದಲ್ಲಿ ಜೈವಿಕವಾಗಿ ಕಳೆದುಕೊಳ್ಳುತ್ತಾನೆ.

ನಿಸರ್ಗದ ವೈವಿಧ್ಯತೆಯ ಬಗ್ಗೆ ನಾವು ಜೈವಿಕ ನೆಲೆಯಲ್ಲಿ ಚರ್ಚೆ ಮಾಡಿದರೂ ಸಹ, ಅದರ ನಿಗೂಢತೆಯನ್ನು ಅರಿಯಲು ಸಹ ಪ್ರಯತ್ನಿಸಬೇಕಾಗುತ್ತದೆ. ಶಿವರಾಮಯ್ಯನು, ಗೋಪಾಲಯ್ಯ ನೊಂದಿಗೆ ಅವರ ತೋಟಕ್ಕೆ ಹೋದಾಗ, ಅನೇಕ ವಿಸ್ಮಯಗಳು ಕಂಡು ಬರುತ್ತವೆ. ಅದನ್ನು ಕಂಡು "ನಮ್ಮ ಹಾದಿಯುದ್ದಕ್ಕೂ ಹಬ್ಬಿದ ಲಾಸ್ಯವೇ ಲಾಸ್ಯ. ಅವುಗಳನ್ನು ನೋಡುತ್ತಾ, ಬಂಡೆಗಳಿಂದ ಬಂಡೆಗಳಿಗೆ ಜಿಗಿಯುತ್ತಾ, ನಮ್ಮ ಹಾದಿಗೆ ಅಡ್ಡವಾಗುತ್ತಿದ್ದ ಓಟೆ, ಬಿದಿರುಗಳ ಕಾಂಡಗಳನ್ನು ಬದಿಗೆ ತಳ್ಳುತ್ತ ಸಾಗುತ್ತಿದ್ದ ನನಗೆ, ಮೈಯೆಚ್ಚರವಿರಲಿಲ್ಲ. ಗೋಪಾಲಯ್ಯ *"ನೋಡಿ ಈ ಹಪ್ಪಳ ಕರಿದ ವಾಸನೆಯುಂಟಲ್ಲ. ಅದು ಕನ್ನಡಿ ಹಾವಿನದ್ದು"*[೧೪] ಎಂದರು. ನಿಸರ್ಗದ ಬಗ್ಗೆ ಗೋಪಾಲಯ್ಯ ನಲ್ಲಿರುವ ಅಳವಾದ ಅನುಭ ಇದರಿಂದ ತಿಳಿಯುತ್ತದೆ.

ಜೈವಿಕ ನೆಲೆಯಲ್ಲಿ ಮನುಷ್ಯನಿಗೆ ಕೆರೆ, ನದಿ, ಜರಿ, ಜಲಪಾತ ಆಕರ್ಷಣೆಗಳು ಇವೆಲ್ಲವು ಅವನನ್ನು ಪ್ರೇರೇಪಿಸುತ್ತವೆ. ಈ ಪ್ರೇರಣೆಯಿಂದ, ಅವನು ಈಜುತ್ತಾನೆ, ಆಡುತ್ತಾನೆ ಮತ್ತು ಜೀವಿಸುತ್ತಾನೆ. ಅದೇ ರೀತಿ ಗೋಪಾಲಯ್ಯನು ನಾರಾಯಣನನ್ನು ಕಾಟು ಮೂಲೆಯಲ್ಲಿ ಬಂದು ನೆಲೆಸಿದ್ದಕ್ಕೆ ಸಂಬಂಧಿಸಿದಂತೆ ಶಿವರಾಮಯ್ಯನಿಗೆ ಹೇಳುತ್ತಾ – *"ನನಗೆ ಅವರು ಏನಾಗುವುದು ಬೇಡ, ನನಗೆ ಸಮೀಪವೂ ಅಲ್ಲ, ಯಾವ ಸಂಬಂಧವೂ ಅಲ್ಲ, ಅಪ್ಪ ಅಜ್ಜ ಇಲ್ಲದಂಥ ನಾನು, ಹುಡುಗನಿರುವಾಗಲೇ ಹೊಳೆಯಲ್ಲಿ ತೇಲುವ ಕಟ್ಟಿಗೆ ಬಳಿದು ದಂಡೆಯನ್ನು ಸೇರುವಂತೆ, ಅವರನ್ನು ಬಂದು ಸೇರಿದೆ. ಅವರಿಂದಲೇ ಈಗ ಹೀಗಿದ್ದೇನೆ. ದುಡಿಯಲು ನೆಲ ತೋರಿಸಿದರು. ಇರಲು ಮನೆಯನ್ನು ಕೊಟ್ಟರು ಅವರು ಮದುವೆಯನ್ನು ಮಾಡಿಸಿದರು"*[೧೫] ಈ ಮಾತುಗಳಲ್ಲಿ ನಾರಾಯಣನು ಬದುಕುವ ನೆಲೆಗಾಗಿ ಪರಿತಪಿಸುವ ಮತ್ತು ಅಂತಹ ಸಂದರ್ಭದಲ್ಲಿ ಗೋಪಾಲಯ್ಯ ಆಸರೆಯಾಗಿ ಭೂಮಿಯನ್ನು ವ್ಯವಸಾಯಕ್ಕೆ ಕೊಡುವುದು ಈ ಮೂಲಕ ಅವನು ಜೀವನ ಸಾಗಿಸುವುದು. ಇವೆಲ್ಲವು ಅವನು ನಿಸರ್ಗ ನೆಲೆಯೊಂದಿಗೆ ಹೊಂದಿರುವ ಜೈವಿಕ ಸಂಬಂಧವಾಗಿದೆ.

೧೪. ಟಿ.ಪಿ. ಅಶೋಕ (ಸಂ), ಈ ಶತಮಾನದ ನೋಟ ಶಿವರಾಮ ಕಾರಂತ, ಪುಟ-೧೩೭.
೧೫. ಶಿವರಾಮ ಕಾರಂತ, ಬೆಟ್ಟದ ಜೀವ, ಪುಟ-೧೬.

ನಾರಾಯಣಯ್ಯ, ಲಕ್ಷ್ಮೀ, ಶಂಕರಿ, ಗೋಪಾಲಯ್ಯ, ದೇರಣ್ಣಗೌಡ, ಬಟ್ಯ ಮುಂತಾದ ಪಾತ್ರಗಳು ನಿಸರ್ಗದ ನೆಲೆಯಲ್ಲಿ ತಮ್ಮ ಬದುಕನ್ನು ಕಟ್ಟಿ ಕೊಂಡವರು. ಅದರಲ್ಲಿ ಕೃಷಿ, ಬೇಟೆ, ಸಂಚಾರ, ಸಂಸಾರ ನಡೆಸುವುದು ಸೇರಿಕೊಂಡಿದೆ. ಇದು ದಟ್ಟವಾದ ಕಾಡು ಮತ್ತು ದೊಡ್ಡ ಪರ್ವತಗಳ ನಡುವೆ ಅವರು ತಮ್ಮ ಸಂಸ್ಕೃತಿಯನು ಕಟ್ಟಿಕೊಂಡಿರುವುದಾಗಿದೆ. ಕಾರಂತರು ಇಡೀ ವಿಶ್ವಕ್ಕೆ ಬೆಳಕು ನೀಡಿ ಜೀವಕ್ಕೆ ಪ್ರಾಣಧಾರೆ ಮಾಡುವ ಸೂರ್ಯನನ್ನು ಕುರಿತು ಹೇಳುತ್ತಾರೆ. ಸೂರ್ಯನನ್ನು ಅದು ದಿನ ನಿತ್ಯದ ಜೀವನದ ಸೆಲೆಯಾಗಿದೆ ಎಂದು ಪ್ರಕೃತಿಯನ್ನು ವರ್ಣಿಸುತ್ತಾರೆ. *"ಬೆಳಗಾಗುವಾಗ ತೆಂಗಿನ ಮರಗಳಲ್ಲಿ ನೀಳ ಅಂಗನೆಯರಂತೆ ಮಂಜಿನ ಸೀರೆಯನ್ನುಟ್ಟು ನಿಂತಿದ್ದುವು. ಹಾಸುಗೆಯಿಂದ ಮೂಡಣ ಬಾನು ಹಿಮದ ಬಿಳುಪನ್ನು ಬೆಳ್ಳಿಯಾಗಿ ಮೂಡಿತ್ತು. ಆಗ ಸೂರ್ಯ ಮೂಡಿದುದು ಖಚಿತವಾಯಿತು. ನಾನು ಬಯಲಿನಿಂದ ಹಿಂದಿರುಗುವಾಗ ತಂಗಿನ ಅಂಗನೆಯ ಶಿರಗಳೆಲ್ಲವೂ ಸಿಂಗಾರವೇ ಕೆಂಪರಿದ ಸೂರ್ಯನ ಹೊಂಬೆಳಕು ಅವುಗಳ ಕುಡಿಯನ್ನು ಸುಂದರವಾಗಿ ಚುಂಬಿಸುತ್ತಿತ್ತು"*[೧೬] ಮನುಷ್ಯನ ಜೈವಿಕ ಕ್ರಿಯೆಗಳು ನಡೆಯಲು ಪ್ರೇರಕ ಶಕ್ತಿಯಾಗಿ ಸೂರ್ಯನಿಲ್ಲದೆ ಯಾವುದೇ ಕಾರ್ಯ ನಡೆಯಲಾರದು.

ಬಟ್ಯ ಗೋಪಾಲಯ್ಯನ ಆಳು, ಅವನು ಬಿಡುವಿದ್ದಾಗ ಬೇಟೆಗೆ ಬರುವುದುಂಟು, ಬಂದವನು ಮೊಲ, ಬರ್ಕ ಮುಂತಾದ ಪ್ರಾಣಿಗಳ ಶಿಕಾರಿಯಾಡುವುದು ಅವನಲ್ಲಿರುವ ಹವ್ಯಾಸ. ಆ ಮೂಲಕ ನಿಸರ್ಗದೊಂದಿಗೆ ತುಂಬಾ ಆತ್ಮೀಯ ಸಂಬಂಧವನ್ನು ಹೊಂದಿರುತ್ತಾನೆ. ಶಿವರಾಮಯ್ಯನು ಶಾಂತ ವಾತಾವರಣದಲ್ಲಿ ನೀರಿನ ಮೊರೆತವನ್ನು ಕೇಳಿ, ಅಲ್ಲಿಗೆ ಹೋಗಲು ಇಚ್ಚಿಸಿದಾಗ ಅವನು *"ಕತ್ತಿ ಇದ್ದರೆ ದಾರಿ ಇದೆ. ನಾವು ಯಾವಾಗಲೂ ಬೀಳು ಗೀಳುಗಳನ್ನು ತರಲಿಕ್ಕೆ ಮತ್ತು ಬರ್ಕ ಮೊಲಗಳ ಶಿಕಾರಿಗೆ ಈ ಕಡೆಗೆ ಬರುವುದುಂಟು. ನೀರು ಬೀಳುವಲ್ಲಿಗೆ ಅದೇನು ಬಹಳ ದೂರವಿಲ್ಲ. ಹೊಳೆಯ ಮಗ್ಗುಲಿನಿಂದಲೇ ಹೋಗಲು ಬರುತ್ತದೆ"*[೧೭] ಎಂದನು. ಇದು ಅವನು ಕಾಡಿನೊಂದಿಗೆ ಹೊಂದಿರುವ ಜೈವಿಕ ಸಂಬಂಧ ವಾಗಿದೆ ಮತ್ತು ಅವನೊಂದಿಗೆ ಇದ್ದ ಇನ್ನಿತರರ ಸಂಬಂಧವು ಇದಕ್ಕೆ ಹೊರತಲ್ಲ.

ಶಿವರಾಮಯ್ಯ ನಿಸರ್ಗದ ಹಿರಿತನದ ಬಗ್ಗೆ ಹೇಳುತ್ತಾನೆ. ಅದು *"ಭಟ್ಟರೇ, ಈ ದೆವ್ವನ ಹಾಗಿರುವ ಮರಗಳು, ಅವುಗಳನ್ನು ನುಂಗುವಂತೆ ಕಾಣುವ ಈ ಬೆಟ್ಟಗಳು ಇವನ್ನೆಲ್ಲ ನೋಡಿದರೆ ಮನುಷ್ಯ ಎಷ್ಟು ಸಣ್ಣ ಪ್ರಾಣಿಯಾಗಿ ಕಾಣುತ್ತಾನೆ! ಅಲ್ಲವೇ"*[೧೮] ಇದು ನಿಸರ್ಗದ ನೆಲೆಯಲ್ಲಿ ಮನುಷ್ಯನ ಸ್ಥಾನವನ್ನು ತೋರಿಸುತ್ತದೆ. ನಿಸರ್ಗದಲ್ಲಿರುವ ಜೀವಜಾಲವು ಕ್ಷಣ ಕ್ಷಣಕ್ಕೂ ನಿಸರ್ಗದಿಂದ ಪ್ರಭಾವಿತವಾಗುತ್ತಿರುತ್ತದೆ. ಈ ಜೀವ ಜಾಲದಲ್ಲಿ ಮನುಷ್ಯನು ಸಹ ಒಂದು ಪ್ರಾಣಿ ಈ ಪ್ರಾಣಿಗೆ ಬೌದ್ಧಿಕ ಶಕ್ತಿ ಇರುವುದರಿಂದ ಕೆಲವು ಸಲ ನಿಸರ್ಗವನ್ನು ಇವನು ಮಾರ್ಪಡಿಸುತ್ತಾನೆ, ಆದರೆ ಇದು ಶಾಶ್ವತವಲ್ಲ. ಆದರೆ ಜೈವಿಕ ನೆಲೆಯನ್ನು ಹೊಂದಿರುವ ನಿಸರ್ಗದ ನಡುವೆ ಮಾನವನು ತನ್ನ ಜೀವನವನ್ನು ಎಚ್ಚರಿಕೆಯಿಂದ ಕಟ್ಟಿಕೊಳ್ಳಬೇಕಾಗಿದೆ. ಇಂತಹ ನಿಸರ್ಗದ ಮುಂದೆ ಗೋಪಾಲಯ್ಯ ನಿಸರ್ಗಕ್ಕೆ ಪೂರಕವಾಗಿ ಅದನ್ನು ನಿಯಂತ್ರಿಸುತ್ತಾನೆ. ಬೆಟ್ಟದಡಿಯಲ್ಲಿ ಬೆಟ್ಟದಂತ ಎತ್ತರವಾದ

---

೧೬. ಅದೇ, ಪುಟ-೧೭
೧೭. ಅದೇ, ಪುಟ-[illegible]
೧೮. ಅದೇ, ಪುಟ-೩೦

ಜೀವನವನ್ನು ಸಾಗಿಸುತ್ತಾನೆ. ಇಲ್ಲಿ ಅವನು ಭೂಮಿಯನ್ನು ಪಡೆದು ಉಳುಮೆ ಮಾಡಿ ಬೆಳೆ ಬೆಳೆಯುತ್ತಾನೆ. ಬೆಳೆಯಿಂದ ಲಾಭ ಪಡೆಯುತ್ತಾನೆ. ಇದು ಆತನು ಜೈವಿಕವಾಗಿ ನಿಸರ್ಗದೊಂದಿಗೆ ಹೊಂದಿರುವ ಸಂಬಂಧ ಅದೇ ರೀತಿಯಾಗಿ ದೇರಣ್ಣಗೌಡ, ಭಟ್ಯ ಗೋಪಾಲಯ್ಯನ ಒಕ್ಕಲುಗಳಾಗಿ ದುಡಿಯುತ್ತಾರೆ. ಕಾಡಿನಲ್ಲಿರುವ ಜೀವಿಗಳನ್ನು ಬೇಟೆಯಾಡುತ್ತಾರೆ. ಈ ಮೂಲಕ ಅವರು ಜೈವಿಕವಾಗಿ ನಿಸರ್ಗದೊಂದಿಗೆ ಸಂಬಂಧ ಹೊಂದಿದ್ದಾರೆ. ಅದೇ ರೀತಿಯಾಗಿ ಪೇಟೆಯಿಂದ ಬಂದ ಶಿವರಾಮಯ್ಯ ನಿಸರ್ಗದ ಮಡಿಲಲ್ಲಿ ಹೊಸ ಅನುಭವವನ್ನು ಪಡೆಯುತ್ತಾನೆ. ಗೋಪಾಲಯ್ಯ, ಭಟ್ಯ ದೇರಣ್ಣಗೌಡ ಮತ್ತು ನಾರಾಯಣ ಕೃಷಿಜೀವನ ಮತ್ತು ನಿಸರ್ಗ ಜೀವನವನ್ನು ಪರಿಚಯಿಸಿಕೊಳ್ಳುವ ಮುಖೇನ ಪಡೆದುಕೊಳ್ಳುತ್ತಾನೆ. ಇಲ್ಲಿ ಬರುವ ಎಲ್ಲಾ ಪಾತ್ರಗಳು ಮುಖ್ಯ ಅವುಗಳಲ್ಲಿ ಬರುವ ಸ್ತ್ರೀಪಾತ್ರಗಳಾದ ಗೋಪಾಲಯ್ಯನ ಹೆಂಡತಿ ಪಾರ್ವತಿ, ನಾರಾಯಣನ ಹೆಂಡತಿ ಲಕ್ಷ್ಮೀ ಮತ್ತು ನಿಸರ್ಗದಂತೆ ಎಲ್ಲರನ್ನು ರಕ್ಷಿಸಿ ಸಲಹುವವರು.

'ಕುಡಿಯರ ಕೂಸು' ಕಾದಂಬರಿಯಲ್ಲಿ ಕಾರಂತರು ಜೈವಿಕ ನೆಲೆಗಳನ್ನು ವಿವಿಧ ರೀತಿಯಲ್ಲಿ ಗುರ್ತಿಸುತ್ತಾರೆ. ಕುಡಿಯರು ನಿಸರ್ಗದಲ್ಲಿ ಬದುಕನ್ನು ರೂಪಿಸಿಕೊಂಡಿರುವ ಬಗೆಯನ್ನು ಚಿತ್ರಿಸಿದ್ದಾರೆ. ಈ ಕಾಡಿನಲ್ಲಿ ಸಿಗುವ ಉತ್ಪನ್ನಗಳ ಮೇಲೆ ಅವರು ಅವಲಂಬಿಸಿ ಬದುಕು ಸಾಗಿಸುವುದು ಮುಖ್ಯವಾಗಿದೆ. ಇಂತಹ ಚಟುವಟಿಕೆಗಳ ಮೂಲಕ ಕುಡಿಯರು ನಿಸರ್ಗಕ್ಕೆ ಹತ್ತಿರವಾಗಿರುತ್ತಾರೆ. ಇಂತಹ ವಿಷಯದಲ್ಲಿ ಅವರ ಸಾಂಸ್ಕೃತಿಕ ನೆಲೆ ಅಡಗಿದೆ. ಅವರು ಕಾಡಿನ ನೆಲೆಯಲ್ಲಿ ಜೈವಿಕವಾಗಿ ವಿವಿಧ ರೀತಿಯಲ್ಲಿ ಮುಖಾಮುಖಿಯಾಗುತ್ತಾರೆ. ಬೈಕಾಡಿ ವೆಂಕಟರಾಯರು ಹೇಳುವುದೇನೆಂದರೆ–"*ಕುಡಿಯರು ನಿಸರ್ಗದೊಂದಿಗೆ ಹೋರಾಡುತ್ತಾ ನಿಸರ್ಗದ ಬಳಿಯಲ್ಲಿಯೇ ಇದ್ದರೂ ಅದನ್ನೂ ಅರಿತು ಕೊಳ್ಳುವುದು ಇಲ್ಲ. ಅರಿತುಕೊಳ್ಳುವಷ್ಟು ಜಾಣರೂ ಅಲ್ಲ. ಅನೇಕ ವೇಳೆ ನಿಸರ್ಗದ ವಸ್ತುಗಳಿಗೆ ಆತ್ಮ ಕಲ್ಪಿಸಿ, ಭೂತ, ಪ್ರೇತ ಪಿಶಾಚಿ ಎಂದುಕರೆದು, ಅದೇ ನಿಸರ್ಗಕ್ಕೆ ಅಡಿಯಾಳಾಗಿ ನಡೆವ ಸ್ವಭಾವದವರು, ಇದರಿಂದಲೇ ಅವರ ಬಾಳು ಪರಿಪೂರ್ಣತೆ ತಾಳಿಲ್ಲ ಎಂಬ ಅಂಶ ಕಾದಂಬರಿಯಲ್ಲಿ ಸಹಜವಾಗಿ ಕಾಣುತ್ತದೆ. ಕರಿಯ ಮಾತ್ರ ನಿಸರ್ಗವನ್ನು ಅರಿತುಕೊಳ್ಳಲು ಪ್ರಯತ್ನಿಸುತ್ತಾನೆ. ಅವನ ಅರಿವಿನಿಂದ ದೂರವಿದ್ದರೂ, ಅದು ಸಫಲವಾಗಿ, ಅವನ ಬಾಳಿಗೊಂದು ಪೂರ್ಣತೆ ಬರುತ್ತದೆ*"[೧೯] ಇದನ್ನು ಗಮನಿಸಿದಾಗ ಮಲೆಕುಡಿಯರು ಮುಗ್ಧ ಜೀವಿಗಳು ಎನಿಸುತ್ತದೆ.

ಕಾಡಿನ ನೆಲೆಗಳ ಬಗ್ಗೆ ಅವರಲ್ಲಿರುವ ಅಪಾರ ಜ್ಞಾನದ ಮೂಲವನ್ನು ಅವರು ನಿಸರ್ಗದಲ್ಲಿ ಬದುಕುವುದಕ್ಕೆ ಸಹಜವಾಗಿ ನೆಲೆಸಿರುವ ಬಗೆಯಾಗಿದೆ. ಕುಡಿಯರ ಕೂಸು ಕಾದಂಬರಿಯ ಮುಖ್ಯ ಪಾತ್ರಗಳಾದ ಕೆಂಚ, ಕರಿಯ, ಕಾಳ, ಬೂದ, ತುಕ್ರ, ತಿಮ್ಮ, ಕೆಂಪಿ, ಗಿಡ್ಡ, ತಿರುಮಲಭಟ್ಟ, ರಾಮಚಂದ್ರಯ್ಯ ಇವರೆಲ್ಲರು ನಿಸರ್ಗದ ನೆಲೆಯಲ್ಲಿ ಜೀವನ ಕಟ್ಟಿಕೊಳ್ಳುವವರು. ಆದರೆ ಅವರ

೧೯. ಕೇಶವ ಶರ್ಮ.ಕೆ (ಸಂ), ಬಹುಮುಖಿ, ಪುಟ-೧೬೮

ಜೈವಿಕ ಸಂಬಂಧ ವಿವಿಧ ಬಗೆಯಲ್ಲಿದೆ. ಕುಡಿಯರು ಸಹಜವಾಗಿ ಭೂಮಿಯಲ್ಲಿ ಕೃಷಿ ಚಟುವಟಿಕೆಗಳನ್ನು ಬೇಸಿಗೆ ಸಮಯದಲ್ಲಿ ಮಾಡುತ್ತಾರೆ. ತಿರುಮಲಭಟ್ಟರು ಮಲೆಕುಡಿಯರ ಧನಿಯಾದ ಮೇಲೆ ಏಲಕ್ಕಿಯ ವ್ಯಾಪಾರದ ಮೂಲಕ ಆತ ನಾಗರಿಕ ಪ್ರಪಂಚದ ಪ್ರತೀಕವಾಗಿ ನಿಸರ್ಗದಲ್ಲಿ ತನ್ನ ಅಸ್ತಿತ್ವವನ್ನು ಈ ಮೂಲಕ ಪಡೆಯುತ್ತಾನೆ. ಆದರೆ ಕುಡಿಯರು ಸಹಜವಾಗಿ ದೊರಕುವ ಏಲಕ್ಕಿಯನ್ನು ಸಂಗ್ರಹಿಸಿಕೊಡುವುದಕ್ಕೆ ತಿರುಮಲ ಭಟ್ಟರಿಗಾಗಿ ಮಲೆಯ ಅಡಿಯಲ್ಲಿ ಕೆಲಸದಲ್ಲಿ ನಿರತರಾಗುತ್ತಾರೆ. ಬಿಡುವಿನ ಕಾಲದಲ್ಲಿ ಕುಡಿಯರು ನಿಸರ್ಗವನ್ನು ಕಾಣುತ್ತ ಸಹಜವಾಗಿ ಅವರು ಕಾಡಿನ ಉತ್ಪನ್ನಗಳನ್ನು ಸಂಗ್ರಹಿಸುವುದು., ಬೇಟೆಯಾಡುವುದರಲ್ಲಿ ನಿರತರಾಗಿರುತ್ತಾರೆ. ಈ ಸಂಬಂಧದಲ್ಲಿ ಮನುಷ್ಯನ ಬದುಕುವ ಅದಮ್ಯ ಉತ್ಸಾಹ ಕಂಡು ಬರುತ್ತದೆ. ಈ ಬದುಕುವ ನೆಲೆಗಳಿಗೆ ಸಂಬಂಧಿಸಿದಂತೆ ಕೆ.ಕೇಶವಶರ್ಮ ರವರು ಹೇಳುವ ಮಾತೆಂದರೆ *"ಕುಡಿಯರಿಗೂ ನಿಸರ್ಗಕ್ಕೂ ಇರುವ ಸಂಬಂಧ ಮತ್ತು ಅವರ ಜೀವನದಲ್ಲಿ ಬದಲಾವಣೆಯನ್ನು ಉಂಟು ಮಾಡುತ್ತಿರುವುದು ಆರ್ಥಿಕ ಬದಲಾವಣೆ"*[೨೦] ಕಾರಂತರು ಈ ಕಾದಂಬರಿಗೆ ಮುನ್ನುಡಿ ಬರೆಯುತ್ತಾ ನನ್ನ ಹಿಂದಿನ ಬರವಣಿಗೆ ಬೆಟ್ಟದ ಜೀವ ಬರೆದಾಗಲೆ ಘಟ್ಟದ ಪ್ರವೇಶಗಳಲ್ಲಿ ವಾಸಿಸುವ ನಿಸರ್ಗದ ಮಕ್ಕಳಾದ ಮಲೆಯ ಕುಡಿಯರನ್ನು ಪರಿಚಯ ಮಾಡಿಕೊಡಬೇಕೆಂದಿದ್ದೆ. ಇಲ್ಲಿ ಕಾಣಬಹುದಾದ ಸ್ಥೂಲ ಚಿತ್ರ. ಅವರಿಗೂ ನಿಸರ್ಗಕ್ಕೂ ಇರುವ ಸಂಬಂಧವನ್ನೂ ಅವರ ಜೀವನದಲ್ಲಿ ಮಾರ್ಪಾಡಾಗುತ್ತಿರುವ ಆರ್ಥಿಕ ಬದಲಾವಣೆಗಳನ್ನು ತೋರಿಸುತ್ತದೆ.

ಅವರಲ್ಲಿ ಬೆಳೆದುಬಂದಿರುವ ನಂಬಿಕೆಗಳ ಪ್ರಭಾವವನ್ನು ಸ್ವಲ್ಪವಾಗಿಯಾದರೂ ಚಿತ್ರಿಸಲು ಪ್ರಯತ್ನಿದ್ದೇನೆ. ಅಲ್ಲದೆ ಮಲೆಯ ಕೂಸೊಂದು ಮಲೆಯ ಮೃಗಗಳಲ್ಲಿರಿಸಿದ ಮಮತೆಯನ್ನು ಕುರಿತಾದ ಅಂಶವನ್ನು ಜತೆಗೆ ಚಿತ್ರಿಸಲು ಪ್ರಯತ್ನಿಸಿದ್ದೇನೆ. ಇದು ದಕ್ಷಿಣ ಕನ್ನಡದ ಜೀವನ ಚಿತ್ರಣಗಳಲ್ಲಿ ಒಂದಾದರೂ ಉಳಿದ ಜನಜೀವನ ಚಿತ್ರಣಗಳಿಗಿಂತ ಇದು ಬೇರೆ ಸ್ಥಾನವಿದೆ ಎಂದು ಹೇಳುತ್ತಾರೆ. ಕಾದಂಬರಿಯ ಎಲ್ಲಾ ಪಾತ್ರಗಳು ಕಾಡಿನೊಂದಿಗೆ ಅವಿನಾಭಾವ ಸಂಬಂಧ ಹೊಂದಿದ್ದು, ನಿಸರ್ಗದಲ್ಲಿ ಸಿಗುವ ಗೆಡ್ಡೆ, ಗೆಣಸು, ಜೇನು, ಗೋಂದು ಮುಂತಾದ ಕಾಡಿನ ಪದಾರ್ಥಗಳನ್ನು ಅವರು ಉಪಯೋಗಿಸುವುದಲ್ಲದೆ, ಅವನ್ನು ಮಾರಾಟ ಮಾಡಿ ತಮಗೆ ಅವಶ್ಯಕತೆಯಿರುವ ಉಪ್ಪು, ಬಟ್ಟೆ, ಮುಂತಾದ ವಸ್ತುಗಳನ್ನು ಪಡೆಯುತ್ತಾರೆ.

ಕೆಂಚ ಮಲೆಯರಾಯನ್ನು ಬೇಡಿಕೊಳ್ಳಲು ತನ್ನ ಮೊಮ್ಮಗ ಕರಿಯನೊಂದಿಗೆ ಹೊರಡುತ್ತಾನೆ. ಅವನು ಬೆಟ್ಟದಲ್ಲಿ ಹತ್ತಿ ಇಳಿಯುತ್ತಾ ತನ್ನ ಹಳೆ ನೆನಪುಗಳನ್ನು ನೆನಸಿಕೊಳ್ಳುವುದು ಮತ್ತು ಕರಡಿಯ ಗುಹೆಗಳನ್ನು ನೋಡುವುದು ಮತ್ತು ಅವನ ಭಕ್ತಿ ಭಾವವನ್ನು ತಾಳುವುದರ ಕುರಿತು ಕಾರಂತರು ಹೀಗೆ ಹೇಳುತ್ತಾರೆ. *"ಈ ಮಲೆ ಕುಡಿಯರು ಜೀವನ ನಡೆಸಲು ಕೊರೆದು ಮಾಡಿದ*

೨೦. ಅದೇ, ಪುಟ-೧೯೬

ಮಣ್ಣನ್ನು ಮಳೆಯ ನೀರು ಕೊರೆದು ಸ್ವಾಭಾವಿಕವಾಗಿ ಉಂಟಾದ ನಿಸರ್ಗದ ಮನೆಗಳಿವು. ಮಾನವ ಯುಗ ಬರುವ ಮುನ್ನ ನಿಸರ್ಗವು ಕುಡಿಯರಿಗೆ ನಿರ್ಮಿಸಿಕೊಟ್ಟ ಅರಮನೆಗಳು"[೨೧] ಕುಡಿಯರ ಜೈವಿಕ ಅವಾಸ ಸ್ಥಾನದ ಇತಿಹಾಸವನ್ನು ತಿಳಿಸುವ ಕಾದಂಬರಿಕಾರರು, ಅವರು ನಿಸರ್ಗದ ನೆಲೆಯಲ್ಲಿ ನಡೆಸುತ್ತಿರುವ ಜೈವಿಕ ನೆಲೆಗಳನ್ನು ಹೇಳುತ್ತಾರೆ" ಅವರ ಕೃಷಿ, ಏಲಕ್ಕಿ ಸಂಗ್ರಹಣೆ, ಬೇಟೆ ಇವುಗಳೊಂದಿಗೆ ನಿಯಮಿತವಾಗಿ ಪ್ರಾಣಿ ಪ್ರಪಂಚ ಮತ್ತು ನಿಸರ್ಗದ ವರ್ಣನೆಯನ್ನು ಪೂರಕವಾಗಿ ಹೇಳುತ್ತಾರೆ.

ಕರಿಯ ಮತ್ತು ಕೆಂಚ ಬೆಟ್ಟ ಇಳಿದು ಹತ್ತಿದ್ದರಿಂದ ಕರಿಯನಿಗೆ ಆಯಾಸವಾಗಿತ್ತು. ಕುಡಿಯರು ಕುಮರಿಯಿಂದ ಮರಳುತ್ತಿದ್ದರು. ಕೇರಿ ಸಮೀಪಿಸುತ್ತಲೇ ಕಾಲು ತಡವರಿಸಿತು. ಕೆಂಚನ ಸೊಸೆಗೆ ಅಪಘಾತ ಸಂಭವಿಸಿ ತಾವು ಬರುತ್ತಲೇ, ಎಲ್ಲರ ದನಿಗಳೂ ಉಡುಗಿದವು. ಅಲ್ಲಿಂದ ತುಸು ದೂರ ಬರಲು, ಕಲ್ಪ ವೃಕ್ಷ ಸಂಧಿಸಿತು. ಬಯನಿ ಮರ! ಅವರಲ್ಲಿ ಒಬ್ಬನು ಸರಸರನೆ ದೆವ್ವದಂಥ ಆ ಮರವನ್ನೇರಿದ, ದಣಿದು ಮಂಡಲಾಕೃತಿಯಲ್ಲಿ ಕುಳಿತು ನಿರೀಕ್ಷಿಸುವುದರೊಳತೆ, ಮೇಲಿಂದ ದಣಿದ ಜೀವಕ್ಕೆ ಅಮೃತ ಬಂದೇ ಬಂದಿತು. ದುಡಿದು ದಣಿದ ಶರೀರಕ್ಕೆ ನಿಸರ್ಗದಲ್ಲೇ ಕಳ್ಳು ಕುಡಿಯುವುದರ ಮುಖೇನ ತೃಪ್ತಿ ತಂದುಕೊಳ್ಳುತ್ತಾರೆ. ಇದು ಮಾನವನ ಮಾನಸಿಕ ಮತ್ತು ಸಾಂಸ್ಕೃತಿಕತೆಯ ಪ್ರತಿಬಿಂಬವಾಗಿದೆ. ಕುಡಿಯರಿಗೆ ಜೀವನ ಮುಖ್ಯ. ಅವರು ಅದಕ್ಕಾಗಿ ನಿಸ್ವಾರ್ಥದಿಂದ ನಿಸರ್ಗದಲ್ಲಿ ಕಲೆತು ಬಾಳುತ್ತಾರೆ. ಕುಡಿಯರಿಗೆ ಬೆಟ್ಟ, ಗುಡ್ಡ, ಕಾಡು, ಜಲಪಾತ, ನದಿ, ಪ್ರಾಣಿ, ಪಕ್ಷಿಗಳ ನಡುವೆ ಜೀವಿಸುವುದು ಸಾಮಾನ್ಯ ಹವ್ಯಾಸ, ತುಕ್ರ ತನ್ನ ಹೆಂಡತಿ ಚನ್ನಿಯ ಜೊತೆ ವಿಹಾರದಲಿದ್ದಾಗ, ಇಬ್ಬರು ಬೆಟ್ಟದ ನಡುವೆ ಒರಟು ಹಸಿ ಹುಲ್ಲುಗಳನ್ನು ತಮ್ಮ ಎರಡು ಕೈಗಳಿಂದ ಆಚೀಚೆ ಸರಿಸುತ್ತಾ ಸಾಗಿದರು. *"ಬಲಿತ ಕಾಟಿಯ ಮರಿಗಳು ಹೊಲವೊಂದನ್ನು ಹೊಕ್ಕಂತೆ ಕಾಣಬೇಕು ಆ ನೋಟ. ಬಂಡೆ ಕಾಣಸಿದ್ದೇನೋ ಸಮೀಪಕ್ಕೆ ಆದರೂ ಅದು ಅವರೆಣಿಸಿದಷ್ಟು ಸಮೀಪದಲ್ಲಿರಲಿಲ್ಲ ಹುಲಿ ದಾರಿ ಮಾಡಿಕೊಂಡು ಅದನ್ನು ಸಮೀಪಿಸುವಾಗ ಸಾಕಷ್ಟು ದಣಿವಾಗಿತ್ತು. ಇಬ್ಬರೂ ಬಂಡೆಯ ಬುಡಕ್ಕೆ ತುಸು ದೂರದಲ್ಲಿ ಹೋಗಿನಿಂತರು. ಅದನ್ನೇ ದಿಟ್ಟಿಸಿ ನೋಡಿದರು, ದೂರದಲ್ಲಿ ನಿಂತು ನೋಡಿದಾಗ ಕಾಣಿಸಿದ ಗಾತ್ರದ ನಾಲ್ಮಡಿಯಷ್ಟಿತ್ತು. ಅದರ ನಿಜವಾದ ಗಾತ್ರ, ಆ ಜೇನು ತಟ್ಟಿಗಳು ತೂಗುತ್ತಿದ್ದ ಸ್ಥಳ, ನಿಜಕ್ಕೂ ಹೆಬ್ಬಿದಿರಿನ ಎಟುಕಿಗೂ ಸಿಗದಷ್ಟು, ಎತ್ತರವಾಗಿತ್ತು. ಒಂದೆರಡೂ ತಟ್ಟಿಗಳಿದ್ದಿರಲಿಲ್ಲ! ನಾಲ್ಕೆಂಟು ತಟ್ಟೆಗಳು, ಆನೆಯ ಕಿವಿಗಳಂತೆ ಬಂಡೆಯ ಸೆರಗಿಗೆ ಅಲಂಕಾರವಾಗಿ ತೂಗಿಕೊಂಡಿದ್ದವು. ಕೆಲವು ವಸತಿಯಿಲ್ಲದ ಹಳೆಯ ತಟ್ಟೆಗಳು, ಇನ್ನೂ ಕೆಲವು ಜೇನ್ನೊಣ ತುಂಬಿದ್ದವು. ಬಾಯಿ ನೀರೂರಿತು ತುಕ್ರನಿಗೆ"*[೨೨] ಕಾರಂತರು ತುಕ್ರ ಕರಿಯ, ಕಾಳ, ತಿಮ್ಮರ ಪಾತ್ರಗಳ ಮುಖೇನ ಬೇಟೆಯ ಸಂದರ್ಭ ತರುತ್ತಾರೆ. ಈ ಬೇಟೆಯನ್ನು ಕೆಂಚ, ಬೂದನಿಂದ ಕರಿಯ ಮತ್ತು ಬೂದನ ತಂಗಿಯ ಮಗ ಕಾಳ ಕಲಿಯುತ್ತಾರೆ. ಇವರು ಕಾಡಿನಲ್ಲಿ ಉರುಳು ಹಾಕುವುದು ತುಂಬಾ ಪ್ರಮುಖವಾಗಿರುತ್ತದೆ. ಇವೆಲ್ಲವನ್ನೂ, ಕಾರಂತರೂ ಆದಿವಾಸಿಗಳ ಜೀವನ

೨೧. ಶಿವರಾಮ ಕಾರಂತ, ಕುಡಿಯರ ಕೂಸು, ಪುಟ-೨೧
೨೨. ಅದೇ, ಪುಟ-೨೫

ವಿಧಾನಗಳ ನೆಲೆಗಳಲ್ಲಿ ಶೋಧಿಸಿರುತ್ತಾರೆ. ಇದೆಲ್ಲವು ಪ್ರಕೃತಿಯ ನೆಲೆಯಲ್ಲಿ ನಡೆಯುವುದು ವಿಶೇಷವಾಗಿದೆ. ತುಕ್ರ ಬೆಟ್ಟದಲ್ಲಿ ಜೇನನ್ನು ಕೀಳುತ್ತಿದ್ದರೆ, ಅಲ್ಲಿಯೇ ನೋಡುತ್ತಿದ್ದ ಚೆನ್ನಿಯನ್ನು ಕರಡಿ ಹಿಡಿದುಕೊಂಡಿತು. ಆಗ ತುಕ್ರ ಕರಡಿಯನ್ನು ಕೊಲ್ಲುತ್ತಾನೆ. ಈ ಮೂಲಕ ಅವನು ಕರಡಿ ತುಕ್ರನಾಗುತ್ತಾನೆ.

ಕಾರಂತರು ಕುಡಿಯರ ಜೈವಿಕ ನೆಲೆಯನ್ನು ಕುರಿತು ಲಘುವಾಗಿ ಹೇಳುತ್ತಾರೆ. ಕಿರಿಮಲೆಯ ಕುಡಿಯರ ಜೀವನದಲ್ಲಿ ಸ್ವಾಭಾವಿಕವಾಗಿ ಬೆಳೆದು ಬರಬಹುದಾದ ಇಂಥ ವಿಷಯ ಸಮಸ್ಯೆಗಳು ಇರುವಾಗಲೇನೆ ಇತರ ಅಂಶಗಳೂ ಅಲ್ಲಿ ತಮ್ಮ ಪ್ರಭಾವ ತೋರುತ್ತಲಿದ್ದವು. ಆ ಮಲೆಯು ಸುಮಾರು ನೂರು ವರ್ಷಗಳಿಂದೀಚೆ ಅಥವಾ ಅದರ ಹಿಂದಿನಿಂದಲೇ ದಕ್ಷಿಣ ಕನ್ನಡ ಜಿಲ್ಲೆಯ ಒಂದು ಜೈನ ಮನೆತನಕ್ಕೆ ಸೇರಿತ್ತು. ಆ ಜೈನರ ಬೀಡು ಹತ್ತಿಯಡ್ಕ ಎಂಬಲ್ಲಿಗೆ ಸಮೀಪವಾಗಿದ್ದ ಮೂಲಕೆ ಗುಂಪು ಎಂಬಲ್ಲಿದೆ. ಮೂಲೆಗುಂಪು ಅರಣ್ಯ ಪ್ರದೇಶ ಕಾಡಿಂದ ತುಂಬಿದ ಭೂಮಿ, 'ಗುಂಪು' 'ಗುಡ್ಡೆ' ಎನಿಸಿಕೊಂಡಿತ್ತು. ಒಂದು ಕಾಲದಲ್ಲಿ ಗುಪ್ಪೆ ಜೈನರ ಬೀಡಿನ ಹಿಂದಕ್ಕಿರುವ ಉತ್ಪನ್ನವಾದ ಒಂದು ಬೆಟ್ಟದ ಹೆಸರು. *"ಗುಪ್ಪೆ ಗುಂಪು ಆದರಂತೆಯೇ ಮೂಲೆಗುಂಪಿನ ಬೀಡಿನ ಮನೆ, ಹಿಂದಿನ ದಿನಗಳಲ್ಲಿ ಅದಕ್ಕಿದ್ದ ಕೀರ್ತಿ ವೈಭವಗಳು ಕಾಲಕ್ರಮೇಣ ಹೆಸರಿಗೆ ಅನ್ವರ್ಥವಾಗಿ ಮೂಲೆಗುಂಪು ಅದವು. ಆ ಮನೆಯ ಮುಂಗಡೆಯಲ್ಲಿ ಎರಡು ಮೈಲುದ್ದದ ಸುಂದರವಾದ ಒಂದು ಕಣಿವೆಯಿದೆ. ಕಣಿವೆಯಲ್ಲವೂ ಭತ್ತದ ಪೈರುಗಳಿಂದ ಸೊಗಯಿಸುವ ಹಸುರು ಭೂಮಿ. ಅಲ್ಲಿನ ಗದ್ದೆಯ ಅಂಚುಗಳಲ್ಲಿ ಸಾಲು ಸಾಲಾಗಿ ಕಂಗೊಳಿಸುವ ತೆಂಗಿನ ಮರಗಳ ಸೊಬಗನ್ನು ಹೇಳತೀರದು. ಜಲ ಸಮೃದ್ಧಿ ಅನರ್ಘ್ಯವಾಗಿತ್ತು. ಬೀಡಿನ ಮುಂದಿನ ಬಯಲು ಭೂಮಿಯನ್ನು ದಾಟಿದರೆ ಸಿಗುವುದೇ ಕಿರಿ ಮಲೆ. ಮಲೆ ಕಿರಿದಾದ್ದು, ಅದು ಅಂಟಿಕೊಂಡ ಸಹ್ಯಾದ್ರಿ ಪರ್ವತಾವಳಿಯ ಹಿರಿತನ ಭವ್ಯತೆಗಳಿಂದಲೇ ಹೊರತು, ಮಲೆ ಚಿಕ್ಕದೆಂಬುದರಿಂದಲ್ಲ. ಅದು ನಾಲ್ಕಾರು ಮೈಲು ಉದ್ದವಾಗಿದ್ದು, ಎರಡು ಸಾವಿರ ಅಡಿಗಳಿಗಿಂತಲೂ ಉನ್ನತವಾಗಿದೆ. ಇಕ್ಕಡೆಗಳಲ್ಲೂ ದಟ್ಟವಾದ ಕಾನನದಿಂದ ತುಂಬಿದ ಆ ಮಲೆ, ಅನಾದಿ ಕಾಲದಿಂದಲೂ ಮೂಲೆ ಗುಂಪು ಬೀಡಿಗೆ ಸೇರಿತ್ತು. ಲೆಕ್ಕಕ್ಕೆ ಆ ಮಲೆ ನಿವಾಸಿಗಳಾದ ಕುಡಿಯರೆಲ್ಲರೂ ಬೀಡಿನ ಮೂಲಕ ಆಳುಗಳಿದ್ದಂತೆ. ಮೂಲದ ಆಳುಗಳೆಂದರೇ, ಗುಲಾಮರಲ್ಲ, ಬೀಡಿನ ಒಕ್ಕಲುಗಳಂತೆ ಹೆಚ್ಚಿನ ನಿರ್ಬಂಧ ಇದ್ದವರಲ್ಲ. ಅವರೆಲ್ಲ ಬಹುಕಾಲದಿಂದ ಬೀಡಿನ ಬಲ್ಲಾಳರ ಒಡೆತನ ಒಪ್ಪಿ, ಬಂದವರಷ್ಟೆ"*[೨೩] ಕಾರಂತರು ಮಲೆಕುಡಿಯರ ಪರಿಸರವನ್ನು ಸೊಗಸಾಗಿ ವರ್ಣನೆ ಮಾಡುವುದರಲ್ಲಿ ಜೀವ ಸೆಲೆಗಳನ್ನು ಗುರ್ತಿಸುತ್ತಾರೆ. ಈ ಜೀವ ಸೆಲೆಗಳು ಪ್ರಕೃತಿಯ ನಡುವೆ ಇರುವುದೆಂಬುದು ವಿಶೇಷ. ಅವರ ಇತಿಹಾಸ ಮತ್ತು ಜೀವನ ವಿಧಾನಗಳನ್ನು ಹೇಳುತ್ತಾರೆ. ಅವರ ಬೀಡಿನ ಆಳುಗಳಲ್ಲಿ ಆಸರೆ 'ಗುಲಾಮರಲ್ಲ' ಎಂಬ ಮಾತಿನಲ್ಲಿ ಅವರ ಜೀವನ ವಿಧಾನ ಅಡಗಿದೆ.

ಕೆಂಚನ ತಾತ ಮುತ್ತಾತಂದಿರ ಕಾಲದಿಂದಲೂ ಗವಿ ಮನುಷ್ಯರಾಗಿ ಬಾಳುತ್ತಿದ್ದ ಕುಡಿಯರ ಮನೆತನಗಳೂ, ಊರು ಕೇರಿ ಮಾಡಿಕೊಂಡು ಬದುಕಲು ಪ್ರಾರಂಭಿಸಿದ ಮೇಲೆ ಅವರು

೨೩. ಅದೇ, ಪುಟ-೬೫

ನಿಸರ್ಗದೊಂದಿಗೆ ವಿವಿಧ ರೀತಿಯಲ್ಲಿ ತೊಡಗಿಸಿಕೊಂಡರು. ಬಲ್ಲಾಳರು ಬೀಡಿಗೆ ಸಾಲ ಹೆಚ್ಚಾದಾಗ ಅದನ್ನು ತಿರುಮಲಭಟ್ಟ ಎಂಬುವವರು ಕೊಂಡುಕೊಂಡರು. ಅವರು ಕೊಂಡ ನಂತರ ಊರಿನ ಆಳುಗಳನ್ನು ಕರೆತಂದರು. ಕುಡಿಯರನ್ನು ಕರೆಯಿಸಿ ಕಾನನವನ್ನು ಹೊಕ್ಕು, ಕುಡಿಯರ ಕೇರಿಗೆ ಸಮೀಪ ಮನೆಯನ್ನು ಕಟ್ಟಿಕೊಂಡು ಜೀವಿಸುತ್ತಾರೆ. ಈ ಕಾಡಿನ ನೆಲೆಯಲ್ಲಿ ಜೀವಿಸುವ ಕಾಡು ಮಕ್ಕಳಾದ ಮಲೆಕುಡಿಯರ ಬಗ್ಗೆ ಟಿ.ಪಿ. ಅಶೋಕರವರು *"ಕಾಡಿನ ಮಕ್ಕಳಾದ ಕುಡಿಯರು ಇಲ್ಲಿ ಪ್ರಕೃತಿಯ ಒಂದು ಭಾಗವೆಂಬ ಬದುಕುತ್ತಿದ್ದಾರೆ. ಇವರಿಗೆ ತಮ್ಮದೇ ಆದ ಸಾಮಾಜಿಕ ರಾಜಕೀಯ ವ್ಯವಸ್ಥೆ ಇದೆ. ಧಾರ್ಮಿಕ ಆಚರಣೆಗಳು ಕಟ್ಟು ಪಾಡುಗಳು ಇವೆ. ತಮ್ಮದೇ ಆದ ಲಯವಿದೆ. ವಿನ್ಯಾಸವಿದೆ. ವಿರೋಧಭಾಸಗಳೂ ಇವೆ. ಇವರನ್ನು ಕಾಯುವ ದೈವ ಇದೆ. ಬದುಕುವ ಹಲವು ದಾರಿಗಳನ್ನೂ ಸಮೃದ್ಧವಾದ ಅರಣ್ಯವೇ ತೋರಿಸಿಕೊಟ್ಟಿದೆ"*[೨೪] ಇದು ಸತ್ಯದ ಮಾತು-ಏಕೆಂದರೇ ಅರಣ್ಯ ಇವರಿಗೆ ಬದುಕಲು ಕಲಿಸಿಕೊಟ್ಟಿದೆ. ಇಂತಹ ಬದುಕಿನಿಂದ ಅವರು ಸುಖವಾಗಿದ್ದಾರೆ. ಈ ಮಾತು ಕೇವಲ ಕುಡಿಯರಿಗೆ ಸಂಬಂಧಿಸಿದ್ದಲ್ಲ. ಬದಲಾಗಿ ನಾಗರಿಕರೆನಿಸಿದ ಆಧುನಿಕ ಮಾನವನಿಗೂ ಅನ್ವಯಿಸುತ್ತದೆ. ಕಾರಂತರು ಕುಡಿಯರ ಜೈವಿಕ ನೆಲೆಯನ್ನು ಕುರಿತು ಹೇಳುವಾಗ ನಿಸರ್ಗದ ನೆಲೆಗಳನ್ನು ಹೇಳುತ್ತಾರೆ. ಅವರ ಬದುಕುವ ಮತ್ತು ವಿಧಾನಗಳನ್ನು ಹೇಳುತ್ತಾರೆ. ಸೂರ್ಯನ ಬೆಳಕು ಮೂಡಿ, ಶಖೆಯಾದ ನಂತರ ಮುಂಗಾರು ಬಿತ್ತನೆ ಸರಿಯಾಗಿ ಮಳೆ ಬಡಿಯಿತು. ಇವು ದಟ್ಟಣಿಸಿ ಕಾರ್ಮುಗಿಲುಗಳಾಗಿದ್ದವು. ಗಾಲಿಯ ಮರಗಳನ್ನು ತೂಗಿಸಿದ್ದೇ ತೂಗಿಸಿದ್ದು. ಮುಂಗಾರು ಮಳೆ ರೌದ್ರಾವತಾರ ತಾಳುತ್ತದೆ. ಈ ರೀತಿಯ ಮಳೆಯ ಆರ್ಭಟ ಮತ್ತು ಮಲೆಗಳಲ್ಲಿರುವ ಅಬ್ಬಿಗಳು ದುಮ್ಮಿಕ್ಕಿ, ರೌದ್ರ ರೂಪ ತಾಳಿ ಬಂಡೆಗಳನ್ನು ಒಂದಕ್ಕೊಂದು ಮಸೆದು ಆವೇಶದಿಂದ ಹರಿದು ಬರುವುದು. ಮಳೆಯು ಬರುವಾಗ ಎದೆ ನಡುಗಿಸುವಂತಹ ಸಿಡಿಲು ಗುಡುಗುಗಳು ಹಿರಿಮಲೆ ಮತ್ತು ಕಿರಿಮಲೆಯು ನೈಸರ್ಗಿಕವಾಗಿ ವಿಶ್ವರೂಪವನ್ನು ತಾಳುತ್ತದೆ. ಇದು ಚಿತ್ರ ಪೂರ್ಣಮೆಗೆ ತೊಡಗಿ, ಪ್ರಾರಂಭವಾಗಿ ಒಂದೇ ಸಮನೆ ಸುರಿಸುತ್ತದೆ. ಆಗ ಕುಡಿಯರು ಮಲೆಯಲ್ಲಿ ಅಡರು, ಕಟ್ಟಿಗೆ ಮೊದಲಾದವನ್ನು ಶೇಖರಿಸುತ್ತಾರೆ. ಇದು ಅಲ್ಲದೆ ಕುಮರಿ ಬೆಳೆಯ ಸಂದರ್ಭದಲ್ಲಿ ಕಟ್ಟಿದ್ದ ಗುಡಿಸಲುಗಳನ್ನು ಸ್ಥಳಾಂತರಿಸುತ್ತಾರೆ.

"ಆಗ ನೀರು ಅಲ್ಲಲ್ಲಿ ಕುಣಿಗಳಲ್ಲಿ ನಿಂತು ಕೊಳೆತ ಎಲೆಗಳ ಮೇಲೆ ಆಟವಾಡುತ್ತಾ ಮೆಲ್ಲಗೆ ಹರಿಮ ಜಿನುಗಿ, ಅದೃಶ್ಯವಾಗುವಷ್ಟು ಕ್ಷೀಣವಾಗಿ ಬಂಡೆಗಳ ಎಡೆಯಿಂದ ತೊಟ್ಟಿಗೆ ಹರಿದು ಹಿಂದಿನಂತೆಯೇ ಇನ್ನೊಂದು ಕುಡಿ ಸೇರಿ ಅಲ್ಲಿಂದ ಮುಂದುವರಿಯುತ್ತದೆ. ಈ ನೀರು ಕುಣಿಗಳು ಅಚೀಚೆಗೆ ವಾಸಿಸುತ್ತಿರುವ ವನ್ಯ ಮೃಗಗಳ ನೀರಡಿಕೆ ಹಿಂಗಿಸುವ ಕೊಳಗಳಾಗುತ್ತವೆ. ಮಳೆ ಕಳೆದು, ತೊರೆ ತುಂಬಿ ಹರಿಯುವಾಗಲೂ ಕುಡಿಯರಿಗೆ ಅದರಿಂದ ಲಾಭವಿದೆ. ಬೆಟ್ಟದ ತೊರೆ ಅವರ ಅನ್ನ ದೇವತೆ. ಬೆಟ್ಟದಲ್ಲಿ ಅನ್ನಕ್ಕೆ ಕೊರೆತ ಎಂದಲ್ಲ. ಕುಮರಿ ಬೆಳೆಯುತ್ತಾರೆ. ಕುಮರಿಯಲ್ಲಿ ಭತ್ತ, ರಾಗಿ ಎರಡೂ ಸೊಂಪಾಗಿ ಬೆಳೆಯುತ್ತವೆ. ಆದರೆ ಒಮ್ಮೊಮ್ಮೆ ಸೊಕ್ಕಿದ ಆನೆಯ ಹಿಂಡೋ

೨೪. ಟಿ.ಪಿ ಅಶೋಕ, ಶಿವರಾಮ ಕಾರಂತ, ಎರಡು ಅಧ್ಯಯನಗಳು, ಪುಟ-೯೪

ಕಾಟಿಯ ಹಿಂಡೋ ಕುಮರಿ ಹೊಲಗಳನ್ನು ನುಗ್ಗಿಬಿಟ್ಟರೆ, ಹೊರಗಿನ ಮುಳ್ಳು ಬೇಲಿ ಅವಕ್ಕೆ ಈಡಲ್ಲ. ಎಲ್ಲ ಕುಡಿಯರು ಸೇರಿ ತಮಟೆ ಬಾರಿಸಿ, ಅರ್ಭಟಿಸಿ, ಕೂಗಿ ಎಷ್ಟು ಬೆದರಿಸದರೂ ಪ್ರಯೋಜನವಾಗದ ಗಳಿಗೆಯುಂಟು. ಅವುಗಳು ಹಿಂಡಾಗಿ ಬಂದು ಮನುಷ್ಯರನ್ನು ಅಲಕ್ಷಿಸುವುದೂ ಉಂಟು. ಹಾಗೆಂದು ಮಲೆಗಳಲ್ಲಿ ಹುಲ್ಲಿಗೆ ಅಭಾವವೇ? ಸೊಪ್ಪಿಗೆ ಅಭಾವವೇ? ಸೊಕ್ಕಿದ ವನ್ಯ ಮೃಗಗಳಿಗೆ ಇದೊಂದು ಚೇಷ್ಟೆ. ಬರುತ್ತವೆ: ಬಂದೂ ತಿನ್ನುವುದಕ್ಕಿಂತಲೂ ಹೆಚ್ಚಾಗಿ ಹೊಲಗಳನ್ನು ನುಗ್ಗಿ, ಎರಡು ಗಳಿಗೆ ಕಾಲ ಆಟವಾಡಿ ಹೊರಟುಹೋಗುತ್ತವೆ. ಈ ಮಲೆಯ ಜನ ಕುಮರಿಯೊಂದನ್ನೆ ನಂಬಿಕೊಂಡಿರುವುದಿಲ್ಲ. ತೆರ ತೆರನ ಬೇಟೆಯಾಡುತ್ತಾರೆ. ಮೇಲೆ ಯಾವ ಕಾಲದಲ್ಲೂ ಹೆಗ್ಗಣಸು ಸಿಗುತ್ತದೆ. ಅಲ್ಲಿ ತಾಳೆಯ ಮರಗಳಿವೆ. ಬಯನಿಯ ದಿಂಡುಗಳಿವೆ. ಇವೆಲ್ಲವು ಅವರ ಆಹಾರವೇ"[೨೫] ಕಾರಂತರು ಕುಡಿಯರು ನೈಸರ್ಗಿಕ ನೆಲೆಯಲ್ಲಿ ಅವರು ಜೈವಿಕವಾಗಿ ಕಾಡು ಪ್ರಾಣಿಗಳೊಂದಿಗೆ ಹಾಗೂ ಅವುಗಳ ಉಪಟಳದ ನಡುವೆ ಜೀವಿಸುತ್ತಾರೆ ಎಂಬುದನ್ನು ವರ್ಣಿಸಿದ್ದಾರೆ. ನಿಸರ್ಗದಿಂದಲೇ ಅದರ ಸಂತಾನ ಅಭಿವೃದ್ಧಿಯಾಗುತ್ತಿದೆ. 'ಬೆಟ್ಟದ ಜೀವ' ಕಾದಂಬರಿಯಲ್ಲಿಯೂ ಸಹ ಕಾರಂತರು ಇದೇ ರೀತಿಯ ಮಾನವನ ಕೃಷಿ ಬೆಳೆಗಳ ಮೇಲೆ ಪ್ರಾಣಿಗಳ ದಾಳಿ ಮಾಡಿ ಕೆಡುಸುವುದನ್ನು ಗೋಪಾಲಯ್ಯ ಶಿವರಾಮಯ್ಯನಿಗೆ ಹೇಳುತ್ತಾರೆ. ಇದೇ ಬೆಟ್ಟಗಳಡಿಯಲ್ಲಿಯೇ ಕುಡಿಯರು ವಾಸ ಮಾಡುತ್ತಿರುವುದರಿಂದ ಅವರು ಸಹ ಆಗಾಗ ತೊಂದರೆ ಅನುಭವಿಸುತ್ತಾರೆ. ಇದು ನಿಸರ್ಗದಲ್ಲಿ ನಡೆಯುವ ನಿರಂತರ ಪ್ರಕ್ರಿಯೆ ಆಗಿದೆ. ಇದು ಜೈವಿಕ ನೆಲೆಗಳ ವಿವಿಧ ಮುಖಗಳಲ್ಲಿ ಒಂದು ಬಗೆಯಾಗಿದೆ.

"ಮಳೆಗಾಲದಲ್ಲಿ ಮಾತ್ರ ಅವರ ಬೆಟ್ಟದ ತೊರೆ ಹಿರಿ, ಕಿರಿ ಮಲೆಗಳ ನಡುವಣ ಸಂಬಂಧವನ್ನು ಕಡಿಯುವುದೇ ಹೆಚ್ಚು ಎಷ್ಟೆಂದರೂ ಮುಗಿಲಿನ ಮುಸುಕಿನಲ್ಲಿ ಬಾಳಬೇಕಾದ ಜನಕ್ಕೆ ಬೇಸರ ಎಂಬುದುಂಟು ವೇಳೆ ಹೋಗಬೇಕಲ್ಲ! ನಂಟರ ಮನೆ ಅರಸಿಕೊಂಡು ಹೋಗಬೇಕಾದರೆ ಮಳೆಗಾಲವೇ ಉತ್ತಮ ಸಮಯ. ಅರಸಿಕೊಂಡು ಹೋಗಬೇಕಾದರೆ ಈ ತೊರೆಯನ್ನು ದಾಟದೆ ಗತ್ಯಂತರವಿಲ್ಲ. ಒಮ್ಮೊಮ್ಮೆ ತೊರೆಯ ನೀರು ನಡುವಿಗೆ ಬರುತ್ತದೆಂದು ಇಳಿದರೆ, ಒಂದು ಕ್ಷಣದಲ್ಲಿ ಮೇಲಿಂದ ಮೊರೆದು ಬರುವ ಪ್ರವಾಹ ಅವನನ್ನು ಕೊಚ್ಚಿಕೊಂಡು ಹೋಗಬಹುದು. ಅಂಜಿ, ತೊರೆ ಸೇತುವೆ ಹಾಕುತ್ತಾರೆ. ಹಿಂದಿನ ವರ್ಷ ತೊರೆ ದಾಟುವ ಜಾಗದಲ್ಲಿ ಹಾಕಿದ್ದ ಸೇತುವೆ, ಅಂದರೆ, ನೀಳವಾಗಿ ಅಡ್ಡನೆ ಕೆಡವಿದ ಮರದ ದಿಂಡು, ಪ್ರವಾಹಕ್ಕೆ ಬಳಿದು ಹೋಗಿತ್ತು. ಹೀಗಾಗಿ, ಈ ವರ್ಷ! ಆಚೆ ದಾಟುವುದು ಕಷ್ಟ"[೨೬] ಹೀಗೆ ನಿಸರ್ಗದ ನೆಲೆಯಲ್ಲಿ ಜೀವಿಸಿರುವ ಕುಡಿಯರು ಆಗಾಗ ಬರುವ ವಿಪರೀತ ಮಳೆ ಪ್ರವಾಹ ಇವುಗಳಿಂದ ಕಿರುಮಲೆ ಮತ್ತು ಹಿರಿಮಲೆಯ ನಡುವೆ ಸಂಬಂಧ ಕಡೆದುಕೊಳ್ಳುತ್ತಾರೆ. ಆಗ ಅವರು ಈ ರೀತಿಯ ಸೇತುವೆ ಕಟ್ಟುವುದರ ಮೂಲಕ ಊರುಗಳ ನಡುವೆ ಸಂಬಂಧ ಕಲ್ಪಿಸಿಕೊಳ್ಳುತ್ತಾರೆ.

ಕೆಂಚ ಮತ್ತು ಕರಿಯ ಬೂದನ ಮನೆಯಲ್ಲಿರುತ್ತಾರೆ. ಅಡುಗೆ ಕೆಲಸ ಬೂದನ ಮುದಿ ತಾಯಿ ಮಾಡುವುದುಂಟು. ಕೆಂಚನ ಮೊಮ್ಮಗ ಕರಿಯ ಮತ್ತು ಬೂದನ ತಂಗಿಯ ಮಗ ಕಾಳನು ನಿಸರ್ಗದ ನೆಲೆಯಲ್ಲಿ ಸಂತೋಷ ಪಡುವ ಮತ್ತು ಬೇಟೆಯಾಡುವುದರಲ್ಲಿ ಕಾಲ ಕಳೆಯುತ್ತಾರೆ.

೨೫. ಶಿವರಾಮ ಕಾರಂತ, ಕುಡಿಯರ ಕೂಸು, ಪುಟ-೯೦-೯೧

೨೬. ಅದೇ, ಪುಟ-೯೧

ಇವರಿಗೆ ಬೂದ ಎಲ್ಲಾ ರೀತಿಯ ಬೇಟೆಯನ್ನು ಕಲಿಸುತ್ತಾನೆ. ಇವನ ರಾಜ್ಯ ಲಲಿತ ಲಾವಣ್ಯ ರೀತಿಯ ಕರಿಯ ವಿಲಾಸದೊಳಗೆ ಮಲೆಯ ಸೆರೆಗಿನಲ್ಲಿ ಕುಳಿತು, ಮುಗಿಲುಗಳ ಚಲನೆ ಹಿಂಬಾಲಿಸಿ, ಅವುಗಳೊಡನೆ ತೇಲಿ, ಈಜಲೆಂದು ಆಸೆಯನ್ನು ಪಡುತ್ತ ಸಂತೋಷಪಡುತ್ತಾನೆ.

"*ಎಳೆಯರಾದ ಕಾಳ ಕರಿಯನಿಗೆ ಬೆಳಗು, ಮುಂಜಾನೆಗಳಲ್ಲಿ ಇದೇ ಕೆಲಸ- ಮುಗಿಲ ಮಾಯೆಯನ್ನು ಕಾಣುವ ಆಟ-ಕೇರಿಯನ್ನು ಬಿಟ್ಟು...... ಬಂದರೆ, ಬೆಟ್ಟ ಅಲ್ಲಿಂದಲೇ ಕೆಳಕ್ಕೆ ಕಡಿದಾಗಿ ಇಳಿದು ಕಣಿವೆಯನ್ನು ಸೇರುತ್ತದೆ. ಆ ತುದಿಯಲ್ಲಿ ಹಾಸಿರುವ ಬಂಡೆಗಳ ಮೇಲೆ ಇಬ್ಬರೂ ಬಂದು ಕುಳಿತುಕೊಳ್ಳುತ್ತಾರೆ. ಬಿಸಿಲಿಗೆ ತಮ್ಮ ಬೋಳು ವೈರಿಗಳನ್ನು ಹಾಗಾಗಿ ಹಿಡಿಯುತ್ತಾರೆ. ಮುಂದೆ ಅಸ್ಪಷ್ಟ ರಾಜ್ಯದ –ಗಾಳಿ ಮುಗಿಲು, ಬಾನು, ಅರಣ್ಯ, ಬೆಟ್ಟ ಕಣಿವೆಗಳ ಸೊಬಗನ್ನು ನೂರಾರು ಲೀಲೆ, ವಿಲಾಸಗಳನ್ನು ಅವರಿಗೆ ಕಂಡಷ್ಟೂ ಸಾಲದು. ಅವುಗಳ ಸವಿಯನ್ನು ಉಂಡಷ್ಟೂ ಸಾಲದು*"[೨೭] ಹೀಗೆ ನಿಸರ್ಗವನ್ನು ಸವಿಯುತ್ತಾ ಕರಿಯ ವೈಜ್ಞಾನಿಕವಾಗಿ ನಿಸರ್ಗದೊಂದಿಗೆ ಸಂಬಂಧವನ್ನು ಪಡೆಯುತ್ತಾನೆ. ಹಿರಿಮಲೆ ಮತ್ತು ಕಿರಿಮಲೆಯ ಕಾಡುಗಳಲ್ಲಿ ಅನೇಕ ಜೀವ ಜಂತುಗಳು ವಾಸಿಸುತ್ತವೆ. ಅವುಗಳಿಗೆ ಈ ಕಾಡು ಹುಟ್ಟು ಸಾವಿನ ಶಾಶ್ವತ ನೆಲೆಯಾಗಿದೆ, ಅದೇ ರೀತಿಯಾಗಿ ಕುಡಿಯರಿಗೂ ಸಹ, ಇಂತಹ ನಿಸರ್ಗದಲ್ಲಿ ಅನೇಕ ಕಾಡು ಪ್ರಾಣಿಗಳು ಮತ್ತು ಪಕ್ಷಿಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿವೆ. ಕೋತಿ, ಬರ್ಕ, ಎಮ್ಮೆ, ಕಡವೆ, ಕಾಟಿ, ಹಂದಿ, ಅಳಿಲು, ಹಾವು, ಹುಲಿ, ಕರಡಿ, ಆನೆ ಮುಂತಾದ ಜೀವ ಸಂಕುಲ ಹಾಗೂ ಅನೇಕ ಪಕ್ಷಿಗಳು ತಮ್ಮ ಅವಾಸ ಸ್ಥಾನವಾಗಿಸಿಕೊಂಡು ಬದುಕುತ್ತಿವೆ. ಕಾರಂತರು ಈ ನೆಲೆಯಲ್ಲಿ ಕುಡಿಯರ ಜೀವನನ್ನು ಕುರಿತು ಹೇಳುತ್ತಾರೆ.

ಒಂದು ದಿನ ಕರಿಯ, ಕಾಳರಿಬ್ಬರೂ ನಿತ್ಯದಂತೆ ಶಿಕಾರಿಗೆ ಹೊರಟರು. "*ದೊರೆಗಳ ಹಿಂದೆ ಉಗ್ರಾಣಿ ಹೊರಡುವಂತೆ. ಕರಿಯನ ಹಿಂದಕ್ಕೆ ಕಾಟು ಹೊರಟಿತು. ಆಮೆ ಹಿಡಿಯುವ ಹುಚ್ಚಿನಿಂದ ಬೆಟ್ಟವೆಲ್ಲ ಅಲೆದರು. ಅಣೆದರು. ಒಂದಡೆ ಹೋಗಿ ಕುಳಿತರು ಅಲ್ಲಿಂದ ಕಾಲಿಗೆ ಅಂಟಿದ ಜಿಗಣೆಗನ್ನು ಒಂದೊಂದಾಗಿ ಎಳೆದು ಕಿತ್ತು, ಎಸೆದರು. ರಕ್ತ ಸುರಿಯುವ ಗಾಯಕ್ಕೆ ಸೊಪ್ಪಿನ ರಸ ಹಚ್ಚಿದರು.*"[೨೮] ಕುಡಿಯರು ಆಗಾಗ ಪ್ರಾಣಿಗಳಿಂದ ಮೊದಲುಗೊಂಡು, ಹುಳು ಹುಪ್ಪಟಗಳಿಂದ ತೊಂದರೆ ಅನುಭವಿಸುತ್ತಾರೆ. ಈ ಅನುಭವಗಳಿಂದ ಮತ್ತು ಪ್ರಾಣ ರಕ್ಷಣೆಗಾಗಿ ನಿಸರ್ಗದ ನೆಲೆಯನ್ನೇ ಅವಲಂಬಿಸಿದ್ದಾರೆ. ನಿಸರ್ಗದಲ್ಲಿ ದೊರೆಯುವ ಔಷದ ಗಿಡಮೂಲಿಕೆಗಳನ್ನು ಬಳಸುತ್ತಾರೆ. ಈ ಔಷಧ ಸಸ್ಯಗಳು ಆಧುನಿಕ ಜಗತ್ತಿನಲ್ಲಿ ತುಂಬಾ ಮಹತ್ವ ಪಡೆದಿವೆ. ಇವುಗಳಿಂದ ಮನುಷ್ಯನಿಗೆ ಜೀವ ರಕ್ಷಕಗಳನ್ನು ತಯಾರಿಸುವುದು ಆಗಿದೆ. ಆದ್ದರಿಂದ ನಾವು ಅಮೂಲ್ಯವಾದ ನಿಸರ್ಗವನ್ನು ರಕ್ಷಿಸಬೇಕಾಗಿದೆ. ಈ ರೀತಿಯ ವೈವಿಧ್ಯಮಯ ಅನುಕೂಲವಿರುವ ನಿಸರ್ಗದಲ್ಲಿ ವೈವಿಧ್ಯಮಯ ಜೀವಿಗಳು ತಮ್ಮ

೨೭. ಅದೇ, ಪುಟ-೭೨
೨೮. ಅದೇ, ಪುಟ-೭೨

ನೆಲೆಯಾಗಿಸಿಕೊಂಡಿವೆ, ಇದು ನಿಸರ್ಗದ ವಿಸ್ಮಯ. ಇಂತಹ ಅಪೂರ್ವವಾದ ನೆಲೆಯಲ್ಲಿ ನೆಲೆಸಿರುವ ಕುಡಿಯರ ಜೀವನವು ಸಂಪದ್ಭರಿತವಾದ ಜೀವನವಾಗಿದೆ.

ತಿರುಮಲಭಟ್ಟರು ಮಲೆಯ ಒಡೆಯನಾದ ಮೇಲೆ ಅಲ್ಲಿ ಕುಡಿಯರು ಏಲಕ್ಕಿ ತೋಟಗಳಲ್ಲಿ ದುಡಿಯುತ್ತಾರೆ. ಈ ಏಲಕ್ಕಿ ಕಾಡಿನಲ್ಲಿ ತಾನಾಗೆ ಬೆಳೆಯುವಂತಹುದು. ತಿರುಮಲಭಟ್ಟ ಅಂತಹದರ ಒಡೆಯನಾಗುತ್ತಾನೆ. ಅಲ್ಲಿ ತನ್ನ ಮನೆಯನ್ನು ಕಟ್ಟಿಕೊಂಡು ವಾಸಮಾಡುತ್ತಾನೆ. ಅದರೊಂದಿಗೆ ಈ ಏಲಕ್ಕಿಯನ್ನು ಮಾರಿ ಲಾಭ ಸಂಪಾದಿಸಿಕೊಳ್ಳುತ್ತಾನೆ. ಇದು ನಿಸರ್ಗದ ಕೊಡುಗೆಯಾಗಿದೆ. ಹಿಂಗಾರು ಮಳೆ ಬಂದು ಹೋಗಿಯಾಯಿತು. ಮಲೆಯ ಸುತ್ತಲಿನ ಬಾನು ಬೆಟ್ಟಗಳೆಲ್ಲೂ ಶುಭ್ರವಾಗಿ ನೀಲ,ಹಸುರು ಬಣ್ಣಗಳಿಂದ ಕಂಗೊಳಿಸುತ್ತಿದೆ. ಇಂತಹ ಸಂದರ್ಭದಲ್ಲಿ ನಿಸರ್ಗವು ನಲಿಯುತ್ತಿರುತ್ತದೆ. ಕಿರಿಮಲೆಯ ನೀರಿನ ಅಬ್ಬಿಗಳು ಅಲ್ಲಿಲ್ಲ ಕುಣಿದು, ಹಾರಿ, ನಡು, ನಡುವೆ ಮಿಶ್ರಮಿಸಿ ಕಣಿವೆಯ ನಡುವಣ ತೊರೆಯನ್ನು ಸೇರುತ್ತಿವೆ. ಈ ತೊರೆಯು ಕಿಲಕಿಲನೆ ನಗುತ್ತಾ ಬಂಡೆಗಳನ್ನು ಸುತ್ತಿಸುಳಿದು, ಅಲ್ಲಲ್ಲಿ ತಗ್ಗಿ ವಿರಮಿಸಿ, ಮುಂದಕ್ಕೆ ಹರಿದು ಕೊರಕಲುಗಳಿಗೆ ಧುಮುಕುತ್ತಲೋ, ಇಳಕಲುಗಳಲ್ಲಿ ಹಾದಿಯಾಗಿ ನೇತ್ರಾವತಿ ನದಿಯನ್ನು ಸೇರುತ್ತದೆ. ಅಮೇಲೆ ಕುಡಿಯರ ಜೀವನೋತ್ಸಾಹ ಹೇಳಲು ಸಾಲದು, ಅವರು ನದಿಯಲ್ಲಿ ಸಿಗುವ ಏಡಿ, ಮೀನುಗಳನ್ನು ಹಿಡಿಯುತ್ತಾರೆ.

ಮಲೆಯ ಧನಿಗಳಾದ ತಿರುಮಲ ಭಟ್ಟರು ಮಲೆಯಲ್ಲಿ ತನ್ನ ಆಡಳಿತವನ್ನು ಮಾಡುತ್ತಾ, ಏಲಕ್ಕಿಯನ್ನು ಸಂಗ್ರಹಣೆ ಮಾಡುತ್ತಾನೆ. ಅವನ ನಂಬಿಕೆಯ ಆಳಾಗಿ ತುಕ್ರ, ನಿಸರ್ಗದಲ್ಲಿ ದುಡಿಯುತ್ತಾನೆ. ಕಾರಣ ಭಟ್ಟರು ಬೂದನ ಹೆಂಡತಿಯ ಮೇಲೆ ಕಣ್ಣು ಹಾಕಿರುವುದು ಕಾರಣವಾಗಿರುತ್ತದೆ. ಆದರೆ ಇದನ್ನೂ ಅರಿಯದ ತುಕ್ರ ಸಹಜವಾಗಿ ನಿಸರ್ಗದ ನೆಲೆಯಲ್ಲಿ ದುಡಿಯುತ್ತಾನೆ. *"ಮೂಲೆಗುಂಪಿನ ಬಳಿಯಲ್ಲಿ, ಅವರದೇ ಭೂಮಿಯಲ್ಲಿ ಮರ ಕಡಿಯುವ ಕೆಲಸ, ನಾಟ ಸಾಗಿಸುವ ಕೆಲಸ ನಡೆಯುತ್ತದೆ. ಆ ಕೆಲಸಕ್ಕೆ ಹೆಚ್ಚಾಗಿ ತಮ್ಮ ಊರಿನಿಂದಲೆ ೧೫ ಆಳುಗಳನ್ನು ಬರಮಾಡಿಕೊಳ್ಳುತ್ತಿದ್ದರೂ, ಅವರ ಮೇಲು ತನಿಖೆಗೆ ತುಕ್ರವನ್ನು ನೇಮಿಸಿದ್ದಾರೆ, ಹೀಗಾಗಿ, ಈ ಬೇಸಿಗೆಯಲ್ಲಿ ಹತ್ತೆಂಟು ದಿನ ಕೂಡ ತುಕ್ರ ಮಲೆಯಲ್ಲಿರಲಿಲ್ಲ. ಧನಿಗಳು ಮಕರ ಸಂಕ್ರಾಂತಿಯು ಕಳೆದ ಮೇಲೆ ಮಲೆಗೆ ಬಂದು ತಿಂಗಳ ಕಾಲವೇ ಇದ್ದರು. ಮಲೆಯಲ್ಲಿ ಇದ್ದು, ದಿನ, ಎರಡೂ ದಿನಗಳಿಗೊಮ್ಮೆ ನಾಲ್ಕಾರು ಮೈಲು ಬೆಟ್ಟವನ್ನು ಹತ್ತಿ ಇಳಿದು,ಕಾಡಿನ ಕೆಲಸ ನೋಡಿಕೊಂಡು ಬರುತ್ತಿದ್ದ ಧನಿಗಳು ಮಲೆಯ ಮನೆಗೆ ಆಗಾಗ ಹೋಗಿ ಬರುತ್ತಿದ್ದರು ಧನಿಗಳು, ತುಕ್ರ ಅವರ ಜೊತೆಗೆ ಬರುತ್ತಿರಲಿಲ್ಲ ಅವರು ಬೇಸಿಗೆಯಲ್ಲಿ ಮಲೆಯಲ್ಲಿರಬೇಕಾದ ಕೆಲಸವೂ ಹೆಚ್ಚಿಲ್ಲ ಏಲಕ್ಕಿ ಬೆಳೆಯನ್ನು ತುಸು ವಿಸ್ತರಿಸಬೇಕೆಂಬ ಆಸೆ ಇದ್ದುದರಿಂದ ಅಲ್ಲಿನ ಬೆಟ್ಟದ ಕೆಲವು ಭಾಗಗಳಲ್ಲಿ ಬೆಳೆದ ಮರದ ದಟ್ಟಣೆ ಕಡಿಮೆ ಮಾಡುವ ಕೆಲಸವಿತ್ತು. ಅದೊಂದು ಕೆಲಸದವರೂ ವೇಳೆ ತುಂಬುವ ಕೆಲಸವೇ ಅಲ್ಲಲ್ಲಿ ನೆರಳು*

ಹೆಚ್ಚಾಗದಂತೆ ಇರುವ ದಾಸ್ತಾನು ಮಾಡಿಸಬೇಕು. ಏಲಕ್ಕಿ ಒಣಗಿಸಲು ಎಷ್ಟು ಕಟ್ಟಿಗೆಯಿದ್ದರೂ ಸ್ವಲ್ಪವೇ ಕಡಿದ ಕಟ್ಟಿಗೆ ದೂರದಲ್ಲಿದ್ದುರಿಂದ ಅವನ್ನು ಸಾಗಿಸುವ ಕೆಲಸ ಹೆಚ್ಚಾಗಿತ್ತು"[೨೯]

ತುಕ್ರನು ನಿಸರ್ಗದ ನೆಲೆಯಲ್ಲಿ ತಿರುಮಲ ಭಟ್ಟನಿಗಾಗಿ ದುಡಿಯುತ್ತಾನೆ. ಇದೇ ರೀತಿಯಾಗಿ ಇತರ ಕುಡಿಯರು ಏಲಕ್ಕಿ ತೋಟಗಳಲ್ಲಿ ದುಡಿಯುತ್ತಾರೆ. ಹೀಗೆ ತಿರುಮಲಭಟ್ಟ, ಮತ್ತು ಮಲೆ ಕುಡಿಯರು ನಿಸರ್ಗದ ನೆಲೆಯಲ್ಲಿ ತಮ್ಮ ನೆಲೆ ಸ್ಥಾಪಿಸಿಕೊಂಡು ಜೈವಿಕ ನೆಲೆಯನ್ನು ಕಂಡು ಕೊಳ್ಳುತ್ತಾರೆ. ತಿರುಮಲ ಭಟ್ಟನಲ್ಲಿರುವ ನಿಸರ್ಗದೊಂದಿಗಿನ ಸಂಬಂಧದಲ್ಲಿ ಕೇವಲ ಸ್ವಾರ್ಥತೆಯ ನೆಲೆಕಂಡು ಬಂದರೆ, ಕುಡಿಯರ ನೆಲೆಯ ನಿಸರ್ಗದಲ್ಲಿನ ಅವಿನಾಭವ ಸಂಬಂಧ ಜೈವಿಕ ನೆಲೆಯಾಗಿದೆ. ಆದ್ದರಿಂದ ಕಾರಂತರು ಕುಡಿಯರನ್ನು ನಿಸರ್ಗದ 'ಕೂಸು'ಗಳು ಎನ್ನುತ್ತಾರೆ. ಕಾರಂತರ ಕಾದಂಬರಿಯಲ್ಲಿ ಪ್ರತಿಯೊಂದು ಪಾತ್ರ ಹೊಂದಿರುವ ಜೀವನ - ಶ್ರದ್ಧೆಗಳ ಬಗ್ಗೆ ಜಿ.ಹೆಚ್.ನಾಯಕ್ ಅವರು–*"ಜೀವನ ಶ್ರದ್ಧೆ ಶಿವರಾಮ ಕಾರಂತ ಕಾದಂಬರಿಗಳ ಕೇಂದ್ರ ವಸ್ತುವಾಗಿದೆ. ಆದರೆ ಈ ಶೋಧನೆ ಕಾದಂಬರಿಕಾರ ಕಾರಂತರ ಪ್ರಧಾನ ಕಾಳಜಿಯಾಗಿದೆ. ಶ್ರದ್ಧೆ ಎಂದರೆ ಪರಿಸರದಲ್ಲಿ ಮನುಷ್ಯನು ಜೀವಿಸಲು ನೆಲೆಗಳೆಂದು ಹೇಳಬಹುದಾಗಿದೆ ಎನ್ನುತ್ತಾರೆ ಏಕೆಂದರೆ ಮನುಷ್ಯನಾಗಲೀ ಅಥವಾ ಪ್ರಾಣಿ, ಪಕ್ಷಿ ಕೀಟಗಳಾಗಲೀ ಅವುಗಳಿಗೆ ಅವುಗಳದೇ ಆದ ಪರಿಸರವಿದೆ ಮತ್ತು ಪ್ರಭಾವವಿದೆ"*[೩೦] ಇದನ್ನೇ ನೈಸರ್ಗಿಕ ನೆಲೆಗಳೆಂದು ಕರೆಯುವುದು. ಈ ನೆಲೆಗಳಲ್ಲಿ ಪ್ರತಿಯೊಂದು ಜೀವಿಯು ಬದುಕುವ ಉತ್ಕಟಾ ಕಾಂಕ್ಷೆಯನ್ನು ತೋರಿಸುತ್ತಿರುತ್ತದೆ. ಅಂತ ಉತ್ಕಟಕಾಂಕ್ಷೆಯ ಜೈವಿಕ ನೆಲೆಯನ್ನು ಕುಡಿಯರ ಪಾತ್ರಗಳಲ್ಲಿ ಕಾರಂತರು ಗುರ್ತಿಸುತ್ತಾರೆ, ಕುಡಿಯರು ನೆಲೆಸಿರುವ ನಾಡು ಕಾಡಿನಿಂದ ಮತ್ತು ಬೆಟ್ಟಗಳಿಂದ ಆವರಿಸಿರುವ ಸ್ಥಳ, ಈ ಸ್ಥಳದಲ್ಲಿ ಅವರು ಜೀವನ ಶ್ರದ್ಧೆಯನ್ನು ಕಟ್ಟಿಕೊಂಡಿರುವವರು. ಅವರ ಕೃಷಿ ವಾಸಸ್ಥಾನ ಮತ್ತು ಶ್ರದ್ಧಾಭಕ್ತಿಗಳು ನಿಸರ್ಗದ ನೆಲೆಯಲ್ಲಿ ಕಂಡುಬರುವುದು ವಿಶೇಷ. ಇಂತಹ ವಿಶೇಷತೆಯಲ್ಲಿ ಅವರ ಜೀವನವು ಅಡಗಿದೆ.

ಮಳೆಗಾಲ ಕಳೆದು, ಬೇಸಿಗೆಕಾಲ ಬಂತೆಂದರೆ ಅವರಿಗೆ ನಿಸರ್ಗ ನೆಲೆಯಲ್ಲಿ ಕುಮರಿ ಬೇಸಾಯ ಮಾಡುವ ಸಮಯ. ಇದನ್ನು ಕುರಿತು ಕಾರಂತು – *"ವರ್ಷ ವರ್ಷ ಕಾಡುಗಳನ್ನು ಸುಟ್ಟು ಕುಮರಿ ಬೆಳೆಯುವ ಭೂಮಿ, ಕೇರಿಯಿಂದ ದೂರ ದೂರ ಹೋಗುತ್ತಿತ್ತು. ಈ ವರ್ಷ ದೂರವಾಗದೆ ಗಂಡು ಹೆಣ್ಣುಗಳೆನ್ನದೆ ದುಡಿದರು; ಕಾಡು ಕಡಿದರು, ಬಿದ್ದ ಮರಗಳನ್ನು ಸುಟ್ಟರು. ನೆಲದ ಅಗತೆ ಮಾಡಿದರು. ಸುತ್ತಲು ಬೇಲಿ ನೆಟ್ಟರು, ಮಳೆಗಾಲದ ಮನೆ ಹೂಡಿದರು"*.[೩೧]

ಇದು ಕುಡಿಯರು ನಿಸರ್ಗದ ನೆಲೆಯಲ್ಲಿ ಜೀವನಕ್ಕಾಗಿ ನಡೆಸುತ್ತಿರುವ ಹೋರಾಟವಾಗಿದೆ. *"ದಂಡೆಗೆ ಮೂತಿ ಚಾಚಿ ಮಲಗಿಕೊಂಡು ಅವಳಿ ಜವಳಿ ಮೊಸಳೆಗಳಂತೆ ಸಹ್ಯಾದ್ರಿಯ ಉನ್ನತ ಶ್ರೇಣಿಯಿಂದ ಕವಲೊಡೆದು, ಚಾಚಿ ನಿಂತವು - ಹಿರಿ, ಕಿರಿಯ ಮಲೆಗಳು ಆ ಎರಡು ಮಲೆಗಳಲ್ಲಿ ಹಿರಿಮಲೆ ಹೆಸರಿಗೆ ತಕ್ಕಂತೆ*

---

೨೯. ಅದೇ, ಪುಟ-೧೪೭

೩೦. ಜಿ.ಎಚ್.ನಾಯಕ, ವಿನಯ ವಿಮರ್ಶೆ, ಪುಟ-೧೩೦

೩೧. ಶಿವರಾಮ ಕಾರಂತ, ಕುಡಿಯರ ಕೂಸು, ಪುಟ ೧೬೧-೧೬೨

ಕಿರಿ ಮಲೆಗಿಂತ ತುಸು ಉನ್ನತವೂ ನೀಳವೂ ಆದದ್ದು ಅದರ ಒಂದು ಮೈ ಇನ್ನಷ್ಟು ಕಡಿದಾಗಿದ್ದು ಅರಣ್ಯದ ದಟ್ಟಣೆ ತುಸು ಹೆಚ್ಚಾಗಿತ್ತು. ತೀರ ಕಡಿದಾದ ಮೈಗಳಲ್ಲಿ ಹೆಬ್ಬಂಡೆಗಳು ದೆವ್ವಗಳಂತೆ ಮೂಡಿ ಕಾಣಿಸುತ್ತಿದ್ದವು. ಆ ಬಂಡೆಗಳು ಸೆರಗ ಜೀವ ಜಂತುಗಳ ಓಡಾಟಕ್ಕೆ ಸಲ್ಲದ್ದು, ನೀರಿನ ಅಬ್ಬರ ಮೈಮಾತ್ರ ಕಾಣಿಸುತ್ತದೆ. ಅಂಚುಗಳ ಮೇಲೆ ಬೆಳೆದಿರುವ ಉನ್ನತ ವೃಕ್ಷಗಳಿಗೂ ಅವುಗಳಿಗೂ ಎಷ್ಟೊಂದು ಅಂತರ! ಈ ಅರಣ್ಯದಲ್ಲಿ ಹುಲ್ಲುಗಾವಲಿಗೆ ಬರಗಾಲವಿಲ್ಲ, ಅಳೆತ್ತರಕ್ಕೆ ಹುಲ್ಲು ಬೆಳೆಯುತ್ತದೆ; ವರ್ಷಕ್ಕೊಮ್ಮೆ ನಿಯಮವೆಂಬಂತೆ, ಕಾಡ್ಗಿಚ್ಚು ಆ ಹುಲ್ಲುಗಾವಲುಗಳನ್ನು ನುಂಗಿ ಕುಣಿದಾಡುತ್ತದೆ. ಕಿರಿಮಲೆಯಿಂದ ಕಾಣುವಾಗ ಆ ರುದ್ರಭಯಾನಕ ದೃಶ್ಯ ಬಣ್ಣಿಸ ತೀರದು. ಮರುದಿನವೇ ಬೆಟ್ಟದ ಹಸುರೆಲ್ಲ ಮಾಯಾವಾಗಿ, ಬಂಡೆಗಳಂತೆಯೆ ಬೆಟ್ಟದ ಮೈಯೂ ಕರಿದಾಗುತ್ತದೆ. ರಸಿಕನಾದ ವ್ಯಕ್ತಿಗೆ ಈ ಅರಣ್ಯ ಸೌಂದರ್ಯವೆಲ್ಲ ಮನಮೋಹಕವಾಗಿ ಕಾಣಿಸಬಹುದಾದರೂ ಅದರಲ್ಲೇ ಬಾಳಿ, ಜೀವ ಸಂಕುಲ ಸಾಗಿಸುವ ಮಲೆ ಕುಡಿಯರಿಗೆ ಯಾವ ಕಾವ್ಯ ಕೃಷಿ ಬರಬೇಕು! ಬದಲು ಬೆಟ್ಟದ ಕೋಡುಗಳು ಬಂಡೆಯ ನಿಲುವುಗಳು ಆಗಾಗ ತಲೆ ದೋರುವ ಕಾಡ್ಗಿಚ್ಚುಗಳು, ಕೊಲೆ, ದೆವ್ವ, ಪ್ರೇತ ಮೊದಲಾದ ಹಲವಾರು ಅಶರೀರ ಪಿಶಾಚಿಗಳ ನೆನಪುಗಳನ್ನು ಮಾತ್ರ ಕೆರಳಿಸುತ್ತವೆ"[೩೨] ಎನ್ನುತ್ತಾರೆ.

ಇಂತ ನೈಸರ್ಗಿಕ ನೆಲೆಯಲ್ಲಿ ಕುಡಿಯರು ಬಾಳುತ್ತಾ; ಬದುಕುತ್ತಿದ್ದಾರೆ. ಇವರಿಗೆ ಇದೇ ಸಾಮ್ರಾಜ್ಯ. ಇಂತಹ ಸಾಮ್ರಾಜ್ಯದಲ್ಲಿ ಹಿರಿಮಲೆಯ ಧನಿ ಬ್ರಾಂಜ ಎಂಬವನು. ಇವನು ಸಹ ನಿಸರ್ಗದಲ್ಲಿ ಸಹಜವಾಗಿ ದೊರೆಯುವ ಏಲಕ್ಕಿ ಬೇಸಾಯ ಮಾಡಿಸುತ್ತಾನೆ. ಆದರೆ ಇಂತಹ ಪ್ರದೇಶದಲ್ಲಿ ವಾಸಿಸುವ ಕುಡಿಯರ ಹೆಚ್ಚಾಗಿ ಹೊರಗಿನ ಪ್ರಪಂಚಕ್ಕೆ ಬರಲಾರದು. ಇದರ ಬಗ್ಗೆ ಕಾರಂತರು. *"ಈ ಮಲೆ ಕುಡಿಯರು ತಮ್ಮ ದಣಿಗಳಿಗಾಗಿ ಏಲಕ್ಕಿ ತೋಟದಲ್ಲಿ ಕೆಲಸ ಮಾಡಿಕೊಂಡು, ತಮ್ಮ ಹೊಟ್ಟೆಗಾಗಿ ಕುಮರಿಯ ಬೇಸಾಯ ಮಾಡುತ್ತಾರೆ. ತಮ್ಮ ಹಸಿವೆಗಾಗಿ ಬಾಯಿ ಚಪಲಕ್ಕಾಗಿ ಮಿಗ, ಬರ್ಕ, ಕೆಮ್ಮ ಬೇಟೆಯಾಡುತ್ತಾರೆ, ಅವರು ಮಲೆಯನ್ನು ಬಿಟ್ಟು ತಿರುಗುವುದು ತೀರ ಕಡಿಮೆ, ಅದಕ್ಕೆ ಬೇರೊಂದು ಕಾರಣವೂ ಉಂಟು, ನೇರವಾಗಿ ಗ್ರಾಮಗಳ ಜನ ವಸತಿ ಇರುವಲ್ಲಿಗೆ ಹೋಗಿ ಬರುವ ಸೌಕರ್ಯ ಆ ಬೆಟ್ಟಕ್ಕಿಲ್ಲ, ಕನ್ನಡ ಜಿಲ್ಲೆಗೆ ಹೋಗಬೇಕಾದರೆ ಕಿರಿಮಲೆಗೆ, ಅಲ್ಲಿಂದ ಮೂಲೆಗುಂಪಿಗೆ ಬಂದೇ ಹೋಗಬೇಕು ಮೈಸೂರು ಸೀಮೆಯನ್ನು ಸೇರಬೇಕಾದರೆ – ಕಿರುದಾರಿ ಹಿಡಿದು, ಹರದಾರಿ ಹರಿದಾರಿಗಳ ತನಕ ನಡೆದು, ಮನುಷ್ಯರ ಸುಳಿವಿಲ್ಲದ ಪರ್ವ ತಾವಳಿಗಳನ್ನು ಹತ್ತಿ, ಇಳಿದು, ಹೋಗಬೇಕು"*[೩೩] ಎನ್ನುತ್ತಾರೆ.

ಈ ಪ್ರಕಾರವಾಗಿ ಕುಡಿಯರು ನಿಸರ್ಗದ ನೆಲೆಯಲ್ಲಿ ವಾಸ ಮಾಡುತ್ತಾರೆ. ಅವರು ಮಳೆಗಾಲ, ಚಳಿಗಾಲ ಮತ್ತು ಬೇಸಿಗೆ ಕಾಲ ಹೀಗೆ ಋತು ಮಾನಗಳಿಗೆ ತಕ್ಕಂತೆ ತಮ್ಮ ಜೀವನವನ್ನು ನಡೆಸುತ್ತಾರೆ. ಇದು ಕುಡಿಯರ ಸಾಮಾಜಿಕ, ಆರ್ಥಿಕ, ರಾಜಕೀಯ ಕ್ಷೇತ್ರಗಳ ಮೇಲೆ ಪ್ರಭಾವ ಬೀರುತ್ತದೆ. ಇದರಿಂದ ಅವರ ಜೀವನ ವಿಧಾನಗಳಲ್ಲೂ ಹಲವಾರು ಮಾರ್ಪಾಡಾಗಿರುವುದನ್ನು ಗಮನಿಸಬಹುದು. ಈ ಮಲೆಯನ್ನು ನೋಡಿಕೊಳ್ಳುವ ಧನಿಗಳಲ್ಲಿ ಕಿರುಮಲೆಗೆ ತಿರುಮಲಭಟ್ಟರಾದರೆ, ಹಿರಿಮಲೆಯ ಧನಿಗಳು ಸಕಲೇಶ್ವರದಲ್ಲಿದ್ದಾರೆ. ಇವರು ಸಹ ಮಲೆಗಳಲ್ಲಿ ಸಾಗುವಳಿ ಮಾಡಿಸಿ, ತಮ್ಮ ಸುಖವಾದ ಬದುಕನ್ನು ಕಟ್ಟಿಕೊಂಡವರು. ಹೀಗೆ

೩೨. ಅದೇ, ಪುಟ-೧೬೨
೩೩. ಅದೇ, ಪುಟ-೧೩೧-೧೩೨

ಮನುಷ್ಯನಿಗೆ ಇಲ್ಲಿ ಎಷ್ಟೇ ಉಪಯೋಗಗಳಿದ್ದರೂ ಸಹ ಕೆಲವು ಸಲ ನಿಸರ್ಗವು ಅವನಿಗೆ ವಿರೋಧಿಯಾಗಿ ಕಂಡು ಬರುತ್ತದೆ.

ಅದೇ ರೀತಿಯಾಗಿ, ಇದರ ಮರ್ಮ ಅರಿತು ಬಾಳಿದಾಗ, ಅವನ ಜೀವನಕ್ಕೆ ಯಾವುದೇ ರೀತಿಯ ತೊಂದರೆಯಿರುವುದಿಲ್ಲ. ಅವನ ಜೈವಿಕ ನೆಲೆಯು ಸುಭದ್ರವಾಗುತ್ತದೆ. ತಿಮ್ಮ ಕಿರುಮಲೆಯನ್ನು ಬಿಟ್ಟು ಹೋಗಿ ಯಾರಿಗೂ ತಿಳಿಯದಂತೆ ಕುಕ್ಕರಹಳ್ಳಿ ಬಳಿಯಿರುವ ಮಲೆಯಲ್ಲಿ ವಾಸಿಸುತ್ತಾನೆ. ಕರಿಯ ಇವನನ್ನು ಹುಡುಕಲು ಹೋದಾಗ ಶಿಶಿಲ ಗ್ರಾಮ ಕಾಣಿಸುತ್ತದೆ. ಅಲ್ಲಿ ಅವನು ಹುಲ್ಲಿನಡೆಯ ಬಂಡೆಯ ಮೇಲೆ ಮಲಗಿಕೊಂಡು ನೋಡಿದಾಗ, ಅವನಿಗೆ ಬೆಟ್ಟದಡಿಯಿಂದ ದೂರದಲ್ಲಿ ಬಯಲು ಕಾಣಿಸಿತು. ಅದು ಶಿಶಿಲದ ಬಯಲು ಭೂಮಿ ಮೈದಾನದಲ್ಲಿ ಮೇಯುತ್ತಿರುವ ದನಕರುಗಳನ್ನು ನೋಡಿದನು. ಅದರಿಂದ ಸ್ವಲ್ಪ ದೂರದಲ್ಲಿ ಗ್ರಾಮದ ಹೊಲಗದ್ದೆಗಳು ಕಾಣಿಸಿದವು. ಈ ಸಮಯದಲ್ಲಿ ಯಾರದೋ ಕೂಗು ಕೇಳಿಸಿದಾಗ, ಆ ಕೂಗು ಬಂದ ಕಡೆ ಹುಡುಕುತ್ತಾ, ಮುನ್ನಡೆಯುತ್ತಾನೆ. ಆ ಸಂದರ್ಭದಲ್ಲಿ ಅವನಿಗೆ ಪ್ರಕೃತಿಯ ವಿವಿಧ ಅನುಭವಗಳು ಆಗುತ್ತವೆ. ಬೆಟ್ಟದ ಮೈಯನ್ನು ಹಾದು ಬರುವ ಗಾಳಿ, ಒಮ್ಮೆ ದೂರದ ಹಬ್ಬಿಗಳ ಮೊರವ ಶಬ್ದ, ವಿಶಾಲವಾದ ದೆವ್ವದಂತಹ ಬಂಡೆ. ಈ ಬೆಟ್ಟಕ್ಕೆ ಮುಳ ಮಾಡಿ, ಹುಲ್ಲಿನ ಬುಡಗಳಿಕೆ ಕೈಕೊಟ್ಟು ಏಣಿ ಇಳಿಯುವಂತೆ ಇಳಿದಾಗ ತಿಮ್ಮ ಮತ್ತು ಗಿಡ್ಡಿಯರು ಕಾಣಿಸಿಕೊಂಡರು. ನಿಸರ್ಗದ ಮಡಿಲಿಲ್ಲ ಅವರ ನೆಲೆ ಹೇಗಿತ್ತು, ಎಂದರೆ ಅಲ್ಲಿಗೆ ಕರಿಯ ಲಾಘುವದಿಂದ ಅಲ್ಲಿಗೆ ಹೋಗಿ ಸೇರಿದ ನಂತರ, ಕೆಲ ದಿವಸದ ನಂತರ ಬೇರೆಡೆ ಕರಿಯ ನೆಲೆಯನ್ನು ಹುಡುಕಿದನು.

ಆ ನೆಲೆಯನ್ನು ಕುರಿತು ಕಾರಂತರು, ಕರಿಯ, ಸಹ್ಯಾದ್ರಿಯಿಂದಿಳಿದು, ಆ ಸೆರಗನ್ನೇರಿ ಅದರ ತುದಿಯ ತನಕವೂ ನಡೆದು ಹೋಗಿ ನಿಂತರೆ, ಬೆಟ್ಟ ಒಮ್ಮೆಗೆ ನಾನೂರು ಐನೂರು ಅಡಿ ಇಳಿಯುವಂತೆ ಕಂಡಿತು. ಅಲ್ಲಿಂದ ನಿಂತು ನೋಡಿದರೆ ತಿಮ್ಮ ವಾಸವಾಗಿರುವ ಬಂಡೆಯೂ ಕಾಣಿಸುತ್ತಿತ್ತು. ಅಲ್ಲಿಂದ ಹೇಗೋ ಬೆಟ್ಟ ಮಗ್ಗುಲನ್ನು ಇಳಿದು ಹೋದಂತೆಲ್ಲ, ಅವೇ ಬಂಡೆಗಳು ಕೆಳಗಿನ ಒಂದು ವಿಶಾಲ ಸ್ಥಳದಿಂದ ಮೇಲಕ್ಕೆದ್ದು, ನಿಂತಂತೆ ಕಾಣಿಸುತ್ತಿತ್ತು. ನಾಲ್ಕೆಂಟು ಎಕರೆ ವಿಸ್ತೀರ್ಣವಾದ ಸ್ಥಳ ಬಂಡೆಗಳ ಬುಡದಲ್ಲಿದೆ. ಅಲ್ಲಿ, ಒಂದಲ್ಲ ಹತ್ತೆಂಟು ಗುಹೆಗಳಿವೆ. ಬಂಡೆಯ ಸೆರಗಿನಿಂದ ಸದಾ ಜಿನುಗುತ್ತಿರುವ ನೀರಿನ ಪ್ರವಾಹವು ಇತ್ತು. ಆ ಗವಿಗಳ ಎದುರಿಗೇನೆ ಗಾಳಿಯ ಬಿರುಸನ್ನು ತಡೆಯಲು ನಿಂತ ಮರಗಳಿವೆ ಇಂತಹ ಸ್ಥಳವನ್ನು ಗಮನಿಸಿದ ಕರಿಯ ಇಲ್ಲಿ ವಾಸಿಸಲು ಯೋಗ್ಯವೆಂದು ನಿರ್ಣಯಿಸುತ್ತಾನೆ. ಇಂತಹ ಪ್ರಾಕೃತಿಕ ನೆಲೆಯಲ್ಲಿ ಅವರು ವಾಸ ಮಾಡಿದರು. ಇಲ್ಲಿ ವಾಸಿಸಿದರೆ ಯಾವುದೇ ಆನೆ, ಕಾಟಿ ಕಡವೆಗಳ ಕಾಟ ಇರಲಾರದು. ಹೀಗಾಗಿ ಎಲ್ಲ

ರಕ್ಷಣೆಗಳುಂಟು ಇಲ್ಲಿ ಭೂಮಿಯನ್ನು ನಂಬಿ ಮತ್ತು ಬೇಸಾಯ ಮಾಡುಬಹುದಿತ್ತು. ಆಪತ್ಕಾಲದಲ್ಲಿ ಮಾತ್ರ ಎಲ್ಲಿಗೆ ಎಷ್ಟು ದೂರ ಹೋಗಬೇಕೆಂಬ ಭಯ ಕಾಡುತ್ತಿತ್ತು.

ಈ ಎಲ್ಲಾ ನೈಸರ್ಗಿಕ ನೆಲೆಗಳನ್ನು ಕಾರಂತರು ಪರಿಚಯಿಸುತ್ತಿರುವುದನ್ನು ನೋಡಿದಾಗ ಕರವಾಳಿ ಮತ್ತು ಮಲೆನಾಡಿನ ಬಗ್ಗೆ ಅವರಿಗಿದ್ದ ಅನುಭವ ತೆರೆದುಕೊಳ್ಳುತ್ತದೆ. ಅವರು ಕಂಡು ಅನುಭವಿಸಿದ್ದನ್ನೆ ಈ ಕಾದಂಬರಿಯಲ್ಲಿ ಚಿತ್ರಿಸಿದ್ದಾರೆ.

'ಚೋಮನದುಡಿ' ಕಾದಂಬರಿ ಹೆಚ್ಚಿನ ವಿಮರ್ಶೆಗೊಳಪಟ್ಟಿದೆ. ಈ ಕಾದಂಬರಿಯ ಮುಖ್ಯ ಕೇಂದ್ರ ಪಾತ್ರವಾದ 'ಚೋಮ', ಹಿಂದೂ ಸಮಾಜದಲ್ಲಿ ಶ್ರೇಣೀ ಕೃತ ವ್ಯವಸ್ಥೆಯಲ್ಲಿ ಕಟ್ಟ ಕಡೆಯ ನಿರ್ಲಕ್ಷಿತ ಜಾತಿಗೆ ಸೇರಿದ ಅಸ್ಪೃಶ್ಯ ಜಾತಿಗೆ ಸೇರಿದವನು. ಇವನು ಭೂಮಿಯನ್ನು ಪಡೆಯಲು ಪ್ರಯತ್ನಿಸುವ ಮೂಲಕ ನಿಸರ್ಗದ ನೆಲೆಯಲ್ಲಿ ತನ್ನ ಅಸ್ತಿತ್ವವನ್ನು ಕಂಡುಕೊಂಡು, ಜೈವಿಕವಾಗಿ ಗುರ್ತಿಸಿಕೊಳ್ಳುವುದು ಇಲ್ಲಿ ಪ್ರಮುಖವಾಗಿದೆ. ಅದೇ ರೀತಿಯಾಗಿ ಅವನ ಮಕ್ಕಳಾದ ಬೆಳ್ಳಿ, ಗುರುವ, ಚನಿಯರು ಪ್ರಕೃತಿಯ ನೆಲೆಯಾದ ಭೂಮಿಯಲ್ಲಿ ದುಡಿಯುವುದು, ಆ ಮೂಲಕ ತಮ್ಮ ಕಷ್ಟಗಳನ್ನು ನಿವಾರಿಸಿಕೊಳ್ಳಲು ಪ್ರಯತ್ನಿಸುವುದನ್ನು ಕಾಣಬಹುದು.ಈ ಕಾದಂಬರಿಯಲ್ಲಿ ಮುಖ್ಯವಾಗಿ ನಿಸರ್ಗದ ವರ್ಣನೆಯೊಂದಿಗೆ, ಕಾರಂತರು ಭೂಮಿಯ ಒಡೆತನದ ಪ್ರಶ್ನೆಯನ್ನು ಎತ್ತಿದ್ದಾರೆ. ಆ ಮೂಲಕ ಮನುಷ್ಯ ನಿಸರ್ಗದ ಭಾಗವಾದ ಭೂಮಿಯೊಂದಿಗೆ ಸಂಬಂಧ ಹೊಂದಲು ಜೈವಿಕ ನೆಲೆಯ ಮೂಲಕ ನಡೆಸುವ ಪ್ರಯತ್ನ ಕಾಣಬಹುದು. ಇಲ್ಲಿ ದೈಹಿಕ ಮತ್ತು ಮಾನಸಿಕ ಶ್ರಮವಿದ್ದು, ದೈಹಿಕ ಶ್ರಮವು ಬೆವರನ್ನು ಪ್ರತಿಬಿಂಬಿಸಿದರೆ, ಮಾನಸಿಕ ಶ್ರಮವು ಮೌನ ಮತ್ತು ಆಯಾಸವನ್ನು ಪ್ರತಿಬಿಂಬಿಸುತ್ತದೆ. ಇವೆಲ್ಲವನ್ನು ಒಟ್ಟುಗೂಡಿಸಿ ಚೋಮ ಮತ್ತ ಅವನ ಮಕ್ಕಳು ಪರಿತಪಿಸಿತ್ತಾರೆ. ಈ ಪರಿತಪಿಸುವಿಕೆಯಿಂದ ಬಿಡುಗಡೆ ಹೊಂದಲು ಚೋಮನ ಮಗ ಗುರುವ ಧರ್ಮಾಂತರ ಹೊಂದುವುದು ಪ್ರಮುಖವಾಗಿದೆ ಸಾಲಕ್ಕಾಗಿ ಚಿನಿಯ ಮತ್ತು ಬೆಳ್ಳಿ ಮಂಗೇಲ ದೊರೆಗಳ ಕಾಫಿ ತೋಟಗಳಲ್ಲಿ ದುಡಿಯುವುದು ಅವರು ನಿಸರ್ಗದ ನೆಲೆಯಾದ ಭೂಮಿಯೊಂದಿಗೆ ಹೊಂದಿರುವ ಜೈವಿಕ ಸಂಬಂಧದ ನೆಲೆಯಾಗಿದೆ.

ಈ ಕಾದಂಬರಿ ಕುರಿತು ಡಿ.ಆರ್.ನಾಗರಾಜ್ ಅವರು ಹೇಳುತ್ತಾರೆ – "ಚೋಮ ಒಬ್ಬ *ಜೀತದಾಳು; ಜೊತೆಗೆ ಅಸ್ಪೃಶ್ಯ ತಾನು ಬೆವರು ಸುರಿಸಿ ದುಡಿಯುತ್ತಿರುವ ನೆಲದ ಮೇಲೆಯೇ ಆತನಿಗೆ ಒಡೆತನವಿಲ್ಲ. ಇದು ನಮ್ಮ ನಾಡಿನ ಚಾರಿತ್ರಿಕ ಸತ್ಯ. ತಾನು ಸ್ವಂತಕ್ಕೆ ಗೇಣುನೆಲ ಸಂಪಾದಿಸಬೇಕೆಂಬ ಹಂಬಲ, ಅದಕ್ಕಾಗಿ ಹೋರಾಟ ಇದರ ವಸ್ತು. ಕೊನೆಗೆ ಆ ಪ್ರಯತ್ನದಲ್ಲಿ ಚೋಮ ವಿಫಲನಾಗುತ್ತಾನೆ*"[೩೪] ಈ ಮಾತಿನ ಮೂಲಕ ನಮ್ಮ ಭಾರತೀಯ ಸಮಾಜದ ಸಾಂಸ್ಕೃತಿಕ ದಿವಾಳಿತನದ, ಅರಿವು ನಮಗಾಗುತ್ತದೆ. ಈ ದಿವಾಳಿ ತನದಿಂದ ಇಲ್ಲಿ ಚೋಮ ಭೂಮಿಯನ್ನು ಪಡೆಯುವುದಿಲ್ಲ. ಇದಕ್ಕೆ ಕಾರಂತರು ಪರಿಹಾರವನ್ನು

೩೪. ಜಿ.ಎಸ್.ಶಿವರುದ್ರಪ್ಪ (ಸಂ), ಸಾಹಿತ್ಯ ಮತ್ತು ಸಾಮಾನ್ಯ ಮನುಷ್ಯ, ಪುಟ-೬೦

ಸೂಚಿಸುವುದಿಲ್ಲ ಎನ್ನುವಂತಿಲ್ಲ; ಬದಲಾಗಿ ಸಮಾಜದ ಮಾನಸಿಕ ಬದಲಾವಣೆಗೆ ಈ ಮೂಲಕ ದಾರಿ ತೋರಿಸಿದ್ದಾರೆ.

ಭೋಗನಹಳ್ಳಿಯ ದಲಿತ ಕೇರಿಯಲ್ಲಿ ಚೋಮ ಕುಳಿತು ದುಡಿ ಭಾರಿಸುತ್ತಿದ್ದಾನೆ. ಇದಕ್ಕೆ ಆವೇಶವಿದೆ. ಈ ಆವೇಶಕ್ಕೆ ಭೂಮಿಯ ಆಸೆಯಾಗಿದೆ. ಆದೆ ಒಡೆಯ ಸಂಕಪ್ಪಯ್ಯ ಗೊಡ್ಡು ಸಂಪ್ರದಾಯಕ್ಕೆ ಹೆದರಿ ಭೂಮಿಯನ್ನು ಕೊಡಲಾರ. ಈ ರೀತಿಯ ಭೂಮಿ ವಿಚಾರವನ್ನು ಕೇಳಲು ಸಂಕಪ್ಪಯ್ಯನ ಮನೆಯ ಹತ್ತಿರ ಕುಳಿತಾಗ ಸಂಕಪ್ಪಯ್ಯ ಮತ್ತೇಕೆ ಕುಳಿತಿದ್ದೀಯ? ಎಂದರು. ಆಗ ಚೋಮನು ಇನ್ನೇನಿಲ್ಲ ಧನಿಗಳಿಗೆ ಇಷ್ಟೆಲ್ಲ ಒಕ್ಕಲು ಮಕ್ಕಳಿದ್ದಾರೆ. ಈ ಚೋಮನಿಗೂ ಒಂದು ಹಾಳು ಕೊಂಪೆಯನ್ನು ಗೇಣಿಗೆ ಕೊಟ್ಟಿದ್ದರೆ, ನಿಮ್ಮ ಹೆಸರು ಹೇಳಿ ಬದುಕುತಿದ್ದ.

ಚೋಮನ ಮಾತನ್ನು ಕೇಳಿ ಸಂಕಪ್ಪಯ್ಯನವರಿಗೆ ಆಶ್ಚರ್ಯವೇ ಆಯಿತು. ಅವರಲ್ಲಿ ಬಂಜರು ಬಿದ್ದ ಎಷ್ಟೋ ಜಮೀನುಗಳಿದ್ದವು. ಅದನ್ನೇಕೆ ಅವನು ಸಾಗುವಳಿ ಮಾಡಬಾರದೆಂದು ತೋಚಿದುದರಿಂದ, ಅದೇ ವಿಷಯವನ್ನು ಪ್ರಸ್ತಾಪಿಸಲು ಒಳಕ್ಕೆ ತಾಯಿಯ ಬಳಿಗೆ ಹೋದರು. ಚೋಮ ಆಸೆಯಿಂದ ಹೊರಕ್ಕೆ ಕಾದು ಕುಳಿತ, ತಾನು ಬೇಸಾಯಗಾರನಾಗುವ ಸುದಿನ ಬಂತೆಂದು ಎದೆಯು ಉಲ್ಲಾಸದಿಂದ ಬಡಿಯಿತು. ಕಾಫಿತೋಟ ಮರೆಯಾಯಿತು. ಧನಿಗಳು ತಿರುಗಿ ಬಂದರು. "*ಚೋಮ ಇದುವರೆಗೆ ನಮ್ಮ ಹಿರಿಯರು ನಿಮ್ಮವರಿಗೆ ಗೇಣಿಗೆ ಗದ್ದೆ ಕೊಟ್ಟಿದ್ದಿಲ್ಲ. ಈಗ ಹಾಗೆ ಕೊಡಲಿಕ್ಕೆ ಬರುವುದು ಇಲ್ಲ ಎಂದರು. ಇದನ್ನು ಕೇಳಿಕೊಂಡು ಹಿಂತಿರುಗಿದ ಚೋಮ ಹಾದಿಯುದ್ದಕ್ಕೂ ಏನು ಬಂದವು, ಯಾರನ್ನೆಲ್ಲ ಸಂಧಿಸಿದ. ಎಂಬುದರ ಪರಿವೆ ಅವನಿಗೆ ಉಂಟಾಗಲಿಲ್ಲ. ಅವನ ಮನಸ್ಸು ಉದ್ವೇಗದಿಂದ ಕುದಿಯುತ್ತಲಿತ್ತು. ತನ್ನ ಹಣೆಯಲ್ಲಿ ನೇಗಿಲಿನ ಯೋಗ ಬರೆಯಲಿಲ್ಲವೆಂದು ಅವನು ಚಿಂತಿಸುತ್ತಿದ್ದ*"[೩೫] ಹೀಗೆ ಚೋಮನು ನಿಸರ್ಗದ ನೆಲೆಗಾಗಿ ಪರಿತಪಿಸುತ್ತಾನೆ.

ಚೋಮನ ಈ ಆಸೆಯು ಕೈಗೂಡದಿದ್ದರು ಸಹ; ಇಂತಹ ಆಸೆ ಶೋಷಿತರ ಆಸೆಯಾಗಿದೆ, ನಿಸರ್ಗ ಮನುಷ್ಯನಿಗೆ ಅಗತ್ಯವಿರುವ ಎಲ್ಲಾ ಸಂಪತ್ತ ನಿಸರ್ಗದ ನೆಲೆಯು ನೀಡಿದೆ. ಇದೆ ನಿಸರ್ಗ ಮನುಷ್ಯನಿಗೆ ಸಮಾಜದಲ್ಲಿ ಪ್ರತಿಷ್ಠೆ ನೀಡುತ್ತದೆ. ದುಡ್ಡಿದ್ದವನೆ ದೊಡ್ಡಪ್ಪ ಎಂಬ ಗಾದೆಯ ಮಾತು ಎಷ್ಟು ಸರ್ವಕಾಲೀಕ ಸತ್ಯವೋ, ಅದೇ ರೀತಿಯಾಗಿ ಭೂಮಿ ಒಡೆತನವಿರುವನೆ ಪ್ರಸ್ತುತ ಆರ್ಥಿಕ ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ತಮ್ಮ ಪ್ರಭಾವವನ್ನು ತೋರಿಸುತ್ತಿರುವುದು. ಇದು ಎಲ್ಲರಿಗೂ ಅನ್ವಯಸದ ಮಾತಾಗಿರಬಹುದು ಆದರೆ ಭೂಮಿ ಒಡೆತನವೆಂಬುದು ಮೇಲೆ ಹೇಳಿದ ನೆಲೆಗಳನ್ನು ನಿಯಂತ್ರಿಸುತ್ತಿರುವುದು ಎಲ್ಲರಿಗೂ ತಿಳಿದಿರುವ ಸಂಗತಿ, ಇಂತಹ ಸಂಗತಿಯೇ ಚೋಮನನ್ನು ಕಾಡುತ್ತಿರುವುದು, ಇಂತಹ ನೆಲೆಯನ್ನು ಪಡೆದು ತಾನು ಜೈವಿಕವಾಗಿ ಅದರೊಂದಿಗೆ ಅನುಸಂಧಾನ ಪಡೆದು ದುಡಿಯುವುದಕ್ಕಾಗಿ; ಆದೆ ಅವನಿಗೆ ಸಿಗುವುದಿಲ್ಲ.

೩೫. ಶಿವರಾಮ ಕಾರಂತ, ಚೋಮನದುಡಿ, ಪುಟ ೨೧-೨೨

ಚೋಮನ ಒಡೆಯ ಸಂಕಪ್ಪಯ್ಯ ಭೂಮಿ ಒಡೆಯ ಆದ ಕಾರಣದಿಂದ ಅವನಿಗೆ ಸಾಮಾಜಿಕ ಆರ್ಥಿಕ ರಾಜಕೀಯ ಬೆಂಬಲವಿದೆ ಎನ್ನಬಹುದು. ಭಾರತೀಯ ಸಮಾಜದಲ್ಲಿ ಇಂದು ಜಾತಿರಾಜಕಾರಣ, ಮತ್ತು ಭೂರಾಜಕಾರಣ ಎಲ್ಲವನ್ನು ನಿಯಂತ್ರಿಸುತ್ತಿರುವುದು. ಆದ್ದರಿಂದಲೇ ನಿಸರ್ಗದ ನೆಲೆಯಾದ ಭೂಮಿಯನ್ನು ಪಡೆದು ಜೈವಿಕವಾಗಿ ತನ್ನ ನೆಲೆಯನ್ನು ಕಂಡುಕೊಳ್ಳಲು ಚೋಮ ಪ್ರಯತ್ನಿಸುವುದು ಗಮನಾರ್ಹವಾದ ಅಂಶವಾಗಿದೆ.

"ಈಗ ಮಳೆಗಾಲ ಪ್ರಾರಂಭವಾಗಿದೆ. ನಿಷ್ಕುರಣೆಯಿಂದ ಮಳೆ ಎಡೆ ಬಿಡದೆ ಬಡಿಯುತ್ತಲೇ ಇದೆ. ಅದರಲ್ಲೇ ಬೆಳ್ಳಿಯೂ, ಅವಳ ತಮ್ಮಂದಿರೂ ಸೊಪ್ಪನ್ನು ತರುವುದಕ್ಕೆ ಹೋಗಿರಬೇಕು ಮಳೆಗಾಲದಲ್ಲಿ ದೂರಕ್ಕೇನೂ ಹೋಗಬೇಕಿಲ್ಲ; ಮನೆಯ ಸುತ್ತು ಮುತ್ತ ಎಲ್ಲಿ ಸವರಿದರೂ ಸೊಪ್ಪೇ, ಇತ್ತ ಹೊಲಗಳಲ್ಲಿ ನೀರು ನಿಲ್ಲಲು ತೊಡಗಿದೆ. ಗದ್ದೆಗಳೆಲ್ಲ ಉತ್ತು, ಅಗೆಯನ್ನು ನೆಡುವ ಸಿದ್ಧತೆಯಾಗಬೇಕು ಎಲ್ಲೆಲ್ಲಿಯೂ ಕೂಲಿಗಳ ಅಭಾವ, ಎಲ್ಲರ, ಬೇಸಾಯವೂ ಒಂದೇ ಸಮಯದಲ್ಲಾಗಬೇಕು"[೩೬] ಮಳೆ ನಿಸರ್ಗದ ನೆಲೆಯಲ್ಲಿ ಪ್ರಮುಖವಾದ ಅಂಶ. ಇಂತಹ ಮಳೆಯಿಂದ ಮಾನವ ವ್ಯವಸಾಯ ಮಾಡುವುದರ ಮೂಲಕ ತನ್ನ ಜೈವಿಕ ನೆಲೆಯನ್ನು ಸ್ಥಾಪಿಸಿಕೊಳ್ಳುತ್ತಾನೆ.

ಈ ಕುರಿತು ಕೀರ್ತಿನಾಥ ಕುರ್ತಕೋಟಿಯವರು – *"ಬೆಟ್ಟದ ಜೀವ'ದ ಗೋಪಾಲಯ್ಯನ ವ್ಯಕ್ತಿತ್ವ ಇಂಥದೇ ಚೋಮ ಮತ್ತು ಗೋಪಾಲಯ್ಯ ಒಂದಕ್ಕೊಂದು ವಿರುದ್ಧವಾದ ಪಾತ್ರಗಳು. ಚೋಮ ಸಂಪೂರ್ಣವಾಗಿ ಪರಾವಲಂಬಿಯಾಗಿದ್ದರೆ ಗೋಪಾಲಯ್ಯ ಸ್ವಾವಲಂಬಿ. ಒಂದು ತುಂಡು ಭೂಮಿಗಾಗಿ ಚೋಮ ಬಾಯಿ ಬಿಡುತ್ತಿದ್ದರೆ, ಗೋಪಾಲಯ್ಯ ಬೆಟ್ಟದೊತ್ತಿನ ಕಾಡನ್ನೇ ಕಡಿದು ಉತ್ತಿ ಬಿತ್ತಿದ್ದರೂ ಕೇಳುವವರಿಲ್ಲ. ಭೂಮಿ ಇಲ್ಲಿ ವಸುಂಧರೆ, ಮನುಷ್ಯರ ರಟ್ಟೆಯಲ್ಲಿ ಬಲವಿದ್ದರೆ ಭೂಮಿ ಅವನದು, ಚೋಮನ ದುಡಿಯಲ್ಲಿಯೇ ಆಗಲಿ ಬೆಟ್ಟದ ಜೀವನದಲ್ಲಿಯೇ ಆಗಲಿ ಭೂಮಿಯ ಒಡೆತನದ ಪ್ರಶ್ನೆ ಮುಖ್ಯವಾಗುತ್ತದೆ. ಚೋಮನಿಗೆ ದಕ್ಕದಿದ್ದುದ್ದು ಗೋಪಾಲಯ್ಯನಿಗೆ ಅನಾಯಾಸವಾಗಿ ದೊರೆಯುವುದಕ್ಕೆ ಗೋಪಾಲಯ್ಯನ ಜಾತಿಯೇ ಕಾರಣವಾಗಿರಬಹುದು. ಚೋಮನಿಗೆ ಭೂಮಿ ದೊರೆತರೆ ಅವನೂ ಹಾಗೆಯೇ ದುಡಿಯ ಬಹುದಾಗಿತ್ತು".*[೩೭]

ಅನುಭಾವಿಕ ನೆಲೆ:

ಕಾರಂತರು ಬಹುಮುಖ ಪ್ರತಿಭೆಯುಳ್ಳ ಲೇಖಕರು, ಇವರ ಕಾದಂಬರಿಗಳು ಮುಖ್ಯವಾಗಿ ಮನುಷ್ಯ ಜೀವನದ ಹಲವಾರು ಆಯಾಮಗಳನ್ನು ಕುರಿತು ಹೇಳುವಂಥವು ಸಾಮಾಜಿಕ ಆರ್ಥಿಕ, ರಾಜಕೀಯ ಮತ್ತು ಧಾರ್ಮಿಕ ಮುಂತಾದ ವಿಷಯಗಳು ಕಾರಂತರ ಕಾದಂಬರಿಗಳಲ್ಲಿ ಚರ್ಚಿತವಾಗಿದೆ. ಇಂಥ ಆ ನೆಲೆಗಳಲ್ಲಿ ಒಂದಾಗಿರುವ ನೆಲೆಯೆಂದರೆ 'ಅನುಭಾವಿಕ ನೆಲೆ'ಯಾಗಿದೆ.

ಅನುಭಾವಿಕವೆಂದರೆ ಮನಸ್ಸಿನಲ್ಲಿರುವ ಮತ್ತು ಅರ್ಪಣಾ ಮನೋಭಾವ ಸಮಾಜ ಮತ್ತು ವ್ಯಕ್ತಿಗಳು ತಮ್ಮ ಮನಸ್ಸಿನ ಶಾಂತಿಗಾಗಿ ಪ್ರಕೃತಿಯ ವೈಚಿತ್ರ್ಯಗಳನ್ನು ಕಂಡು; ಅದಕ್ಕೆ ದೇವರು ಎಂಬ ಕಲ್ಪನೆಯನ್ನು ಕಟ್ಟಿ ಪೂಜಿಸುವ ಕಲ್ಪನೆಯು ಕಂಡುಬರುತ್ತದೆ. ಈ ಕಲ್ಪನೆ ಒಬ್ಬೊಬ್ಬರಲ್ಲಿ

೩೬. ಶಿವರಾಮ ಕಾರಂತ, ಚೋಮನದುಡಿ, ಪುಟ ೪೧

೩೭. ಕೀರ್ತಿನಾಥ ಕುರ್ತುಕೋಟಿ, ನೂರು ಮರ ನೂರು ಸ್ವರ, ಪುಟ-೧೧೨-೧೧೩

ಒಂದೊಂದು ತೆರನಾಗಿರುತ್ತದೆ. ನಂತರ ಅದು ವೈಯಕ್ತಿಕ, ಕುಟುಂಬ, ಪ್ರಾದೇಶಿಕ ನೆಲೆಯಲ್ಲಿ ವೈವಿಧ್ಯಮಯವಾಗಿ ಕಂಡುಬರುತ್ತದೆ. ಇಂತಹ ಅನುಭಾವಿಕ ನೆಲೆಯು ಧಾರ್ಮಿಕ ಸೊಗಡನ್ನು ಒಳಗೊಂಡಿರುವುದು ಪ್ರಮುಖವಾಗಿರುತ್ತದೆ. ದೇವರ ಕಲ್ಪನೆಯನ್ನು ಇತಿಹಾಸವು ಸಿಂಧೂ ಬಯಲಿನ ನಾಗರಿಕತೆಯ ನೆಲೆಯಲ್ಲಿ ಗುರುತಿಸಿದೆ. ಸಿಂಧೂ ಬಯಲಿನ ಸಂಸ್ಕೃತಿಯ ಜನರು ನಿಸರ್ಗವನ್ನು ಅನುಭಾವಿಕ ನೆಲೆಯಲ್ಲಿ ಪೂಜನೀಯ ಭಾವನೆಯಿಂದ ಆರಾಧಿಸುತ್ತಿದ್ದರು. ಈ ರೀತಿಯ ಇತಿಹಾಸದ ನೆಲೆಯಲ್ಲಿ ನೋಡಿದ ಸಂದರ್ಭದಲ್ಲಿ ಮಾನವರಲ್ಲಿ ಈ ಅನುಭಾವಿಕ ನೆಲೆಯಲ್ಲಿ ಮನುಷ್ಯನು ನಿಸರ್ಗವನ್ನು ನೋಡಿ ಆನಂದಿಸುತ್ತಾನೆ. ಕೆಲವು ಸಲ ದೈವಿಕ ಸ್ವರೂಪವನ್ನು ಕೊಟ್ಟು ಆರಾಧಿಸುತ್ತಾನೆ. ಈ ಹಿನ್ನಲೆಯಲ್ಲಿ ಕಾರಂತರ ಕೆಲವು ಕಾದಂಬರಿಗಳನ್ನು ಗಮನಿಸಬಹುದು.

ನಷ್ಟದಿಗ್ಗಜಗಳು ಕಾದಂಬರಿಯಲ್ಲಿ ಸ್ವತಂತ್ರ್ಯ ದೊರೆತ ಮಾಂಗಾವ್ ಮಾಹಾನಗರದ ವಿಚಾರವನ್ನು ಲೇಖಕರು ರೈಲಿನಲ್ಲಿ ಪ್ರವಾಸ ಹೊರಟಾಗ ಒಬ್ಬ ವ್ಯಕ್ತಿಯಿಂದ ತಿಳಿಯುತ್ತಾರೆ. ಆಗ ನಡೆಯುವ ಸಂಭಾಷಣೆಯಲ್ಲಿ ನಿಸರ್ಗದ ಅನುಭಾವಿಕ ನೆಲೆಗಳು ಕಂಡು ಬರುತ್ತವೆ. ಈ ಭಾರಿ ಹೋದಾಗ ದಿನಕ್ಕೆ ಎರಡು ಬಾರಿಯಾದರು ರೋಮಿನ ವ್ಯಾಟಿಕನ್ ಭಾಗದ ಮೂಲಕ ಹಾಯುತ್ತಿದ್ದಾಗ ಅಲ್ಲಿ ನಿಲ್ಲಿಸಿದ ಅಸಂಖ್ಯ ಚಂದ್ರಕಾಂತ ಶಿಲಾಮೂರ್ತಿಗಳನ್ನು ರೋಮನ್ ವೈಭವದ ಕಾಲದ ಸಾಮ್ರಾಟರಿಂದ ತೊಡಗಿ, ಗ್ಯಾರಿಬಾಲ್ಡಿಯವರೆಗೆ ಪ್ರತಿಮೆಗಳನ್ನು ನೋಡಿ ಕಾರಂತರು ವಿಸ್ಮಯದಿಂದ *"ಆ ನಗರದ ಮೂಲ ಹರಿಯುವ ತೇಬರ ನದಿಯು ಕನ್ನಡನಾಡಿನ ನನ್ನ ಪಾಲಿಗೆ ಕೇವಲ ಒಂದು ಹಳ್ಳ ಅನಿಸಿತು. ಆದರೆ ಅಲ್ಲಿನ ಜನತೆ ತಮ್ಮ ಮನಸ್ಸಿನಲ್ಲಿ ನಮ್ಮ ಗಂಗಾ ಯಮುನೆಯರಿಗಿಂತ ಆಫ್ರಿಕಾದ ನೈಲ್, ದಕ್ಷಿಣ ಅಮೇರಿಕಾದ ಅಮೇಜಾನ್ ನದಿಗಳಿಗಿಂತಲು ಬೃಹತ್ತಾಗಿ ಹಿಗ್ಗಿಸಿಕೊಂಡಿದ್ದರು"* [೩೮] ಎನ್ನುತ್ತಾರೆ. ಆದರೆ ಆ ನದಿ ಎಷ್ಟೇ ಚಿಕ್ಕದಾಗಿದ್ದರೂ ಸಹ ಅಲ್ಲಿನ ಜನರು ಪ್ರಕೃತಿಯ ಮೇಲೆ ಇಟ್ಟಿರುವ ನಂಬಿಕೆ, ಶ್ರದ್ಧೆ ಮತ್ತು ಭಕ್ತಿ ಭಾವಗಳು ತುಂಬಾ ಪ್ರಮುಖವಾಗಿದೆ.

ಕಾರಂತರು ನಿಸರ್ಗದೊಂದಿಗಿನ ಅನುಭಾವಿಕ ನೆಲೆಯನ್ನು ಮಾನಡಿ ನಗರದ ಸುತ್ತ ಮುತ್ತಲಿನ ವಾತಾವರಣದ ಮೂಲಕ ವ್ಯಕ್ತಪಡಿಸುತ್ತಾರೆ. *"ಅದು ಉತ್ತರ ಪಥವೂ ಅಲ್ಲದ ದಕ್ಷಿಣಾ ಪಥಕ್ಕೂ ಸೇರದಂಥ ಒಂದು ಪ್ರದೇಶದ ಹಳ್ಳಿ. ಹಿಮಾಚಲದ ಉತ್ತರಕ್ಕೆ ಅದಿಲ್ಲ. ಅದಿರುವುದು ವಿಂಧ್ಯ ಮತ್ತು ಸಾತ್ಪರ ಬೆಟ್ಟಗಳ ನಡುವಿನ ಕಣಿವೆಯಲ್ಲಿ ಈ ಎರಡು ಪರ್ವತ ಶ್ರೇಣಿಗಳನ್ನು ನರ್ಮದಾ ನದಿ ವಿಂಗಡಿಸಿ ಕಾಂಬೆ ಕೊಲ್ಲಿಗೆ ಸೇರಿದಂತೆ ನರ್ಮದೆಯೊಡನೆ ಪೈಪೋಟಿ ನಡೆಸುತ್ತ, ಅದೇ ಕಡಲನ್ನು ಸೇರುವ ತಪತಿ ನದಿ, ಮಾನಡಿ ಜಿಲ್ಲೆಯ ಮೇರೆಯಾಗಿದೆ. ಮಾನಡಿ ಅಲ್ಲಿಂದ ಒಂದೆಡರು ಹರಿದಾರಿ ದೂರದಲ್ಲಿ ನರ್ಮದೆಯ ಒಂದು ನಾಲೆಯು ಹರಿಯುತ್ತದೆ. ಇದು ಆ ಹಳ್ಳಿಯ ಪಾವಿತ್ರಕ್ಕೆ ಸಾಕ್ಷಿ ಮಾನಡಿಯ ಹಿರಿಮೆ ಅದಲ್ಲ. ಅದರ ಸುತ್ತ ವಿಶಾಲ ಬಯಲು ಪ್ರದೇಶವಿದೆ. ಅದರ ಪಡುವು, ತೆಂಕು, ಮೂಡಣ ದಿಕ್ಕುಗಳಲ್ಲಿ ಅನಂತ ದೂರಕ್ಕೆ ಹಬ್ಬಿದ ಬೆಟ್ಟಗಳು, ಕಾಡುಗಳ*

೩೮. ಶಿವರಾಮ ಕಾರಂತ, ನಷ್ಟ ದಿಗ್ಗಜಗಳು, ಪುಟ-೨೪೦

ಸಮೃದ್ಧವಾಗಿದೆ. ಮಾನಡಿಯ ನೆಲವೆಲ್ಲ ಒಂದು ಕಾಲದಲ್ಲಿ ದಟ್ಟ ಕಾನನಗಳಿಂದ ತುಂಬಿತ್ತು. ಈ ಕಾಡಿನ ದಟ್ಟಣೆ ಅಷ್ಟಿಲ್ಲವಾದರು ಅಲ್ಲಿನ ಉದುರೆಲೆ ಕಾಡುಗಳಲ್ಲಿ, ಕುರುಚಲು ಕಾಡುಗಳಲ್ಲಿ ಓಡಾಡುವ ಚಿರಪರಿಚಿತ, ಜಿಂಕೆ, ನೀಲಗಾಯಿ, ಎರಳೆಗಳನ್ನು ಇಂದೂ ಕಾಣಲು ಸಾಧ್ಯ"[೩೯]

ಈ ಸಂದರ್ಭದಲ್ಲಿ ಅನೇಕ ಕಡೆ ನಿಸರ್ಗದ ನೆಲೆಗಳನ್ನು ಮತ್ತು ಅದರ ವೈವಿಧ್ಯಮಯವಾದ ಸನ್ನಿವೇಶಗಳನ್ನು ಸಹಜವಾಗಿ ಆರಾಧನೆಯ ನೆಲೆಯಲ್ಲಿ ಕಾರಂತರು ನೋಡುತ್ತಾರೆ. ರೈಲಿನ ಪ್ರಯಾಣದ ಸಂದರ್ಭದಲ್ಲಿ ಲೇಖಕರು ಮಾಂಗಾವ್ ಬಗ್ಗೆ ತನ್ನ ಜೊತೆಯಲ್ಲಿ ಸಹ ಪ್ರಮಾಣಿಕನಾಗಿದ್ದು, ಒಬ್ಬ ವ್ಯಕ್ತಿಯಿಂದ ತಿಳಿಯುತ್ತಾರೆ. ಅದು *"ಆ ಮಾಂಗಾವ್ ತುಂಬ ಚಂದದ ಊರು! ರಾಮಾಯಣದ ಪಂಚವಟಿಯೇ ನಮ್ಮ ಊರು. ನಮ್ಮ ಊರಿನ ಸುತ್ತ ಮುತ್ತಲು ವನಸಂಮೃದ್ಧವಾದ ಕಾಡು ಮೇಡುಗಳಿವೆ. ಅವುಗಳಲ್ಲಿ ಹರಿಣಿಗಳಿವೆ. ಬಾರಾ, ಸಿಂಗಗಗಳಿವೆ, ನವಿಲುಗಳಿವೆ. ಇಂದ್ರ ಮುನಿಸಗೊಳ್ಳದ ಕಾಲದಲ್ಲಿ ನಮ್ಮ ನಾಡಿನ ಕೊಳಗಳು, ಸರೋವರಗಳು ನೀರಿನಿಂದ ತುಂಬಿಕೊಳ್ಳುತ್ತವೆ. ಅಲ್ಲಿ ಸಾವಿರ ಜಾತಿಯ ಜಲ ಪಕ್ಷಿಗಳು ಬಂದು ಸೇರುತ್ತವೆ. ಮಳೆರಾಯ ಮೋಸ ಮಾಡದ ವರ್ಷಗಳಲ್ಲಿ ನಮ್ಮ ಊರಿನ ರೈತರಿಗೆ ಎಂದಿಗೂ ಹೊಟ್ಟೆಗೆ ಕಡಿಮೆಯಾದುದಿಲ್ಲ. ಬಟ್ಟೆಗೆ ಬೇಕಾದ ಹತ್ತಿ ಬೆಳೆಯುತ್ತದೆ. ಜೋಳ, ಗೋಧಿ, ತೋರದಾಳ್, ಮುಂಗ್ ಮೊದಲಾದ ಧಾನ್ಯಗಳು ಬೆಳೆಯುತ್ತವೆ. ಅಂಥ ಒಳ್ಳೆಯ ಎರೆ ಮಣ್ಣಿನ ನೆಲ ನಮ್ಮ ಪ್ರದೇಶದ್ದು"*[೪೦] ಎಂದು ಹೇಳುತ್ತಾನೆ ಆತನ ಮನಸ್ಸಿನಲ್ಲಿ ನಿಸರ್ಗದ ವರ್ಣನೆಯಿದೆ. ಈ ನಿಸರ್ಗವಿಲ್ಲದೆ, ಜೀವಸಂಕುಲವಿಲ್ಲ. ಈ ನಿಸರ್ಗ ದೈವಕ್ಕೆ ಸಮಾನವಾಗಿದ್ದು ನಮ್ಮನ್ನು ಅದು ಪೋಷಿಸುತ್ತದೆ ಎಂದು ನಿಸರ್ಗವನ್ನು ಕುರಿತು ಹೇಳುವ, ಈತನ ಮಾತುಗಳಲ್ಲಿ ಅನುಭಾವಿಕ ನೆಲೆಯು ಕಂಡು ಬರುತ್ತದೆ. ಇದು ಲೇಖಕರ ದೃಷ್ಟಿಕೋನವೆಂದು ಹೇಳಬಹುದಾಗಿದೆ.

ಕಾರಂತರು ಶಿವಶಂಕರಗುಪ್ತರೊಂದಿಗೆ ಹೋಗಿ ಸ್ಥಳಗಳ ಪರಿಚಯ ಮಾಡಿಕೊಳ್ಳುವ ಸಂದರ್ಭದಲ್ಲಿ 'ಅರಣ್ಯಗಳು ಗಿಡ, ಮರಗಳ, ನೈಸರ್ಗಿಕ ಸೊಂಪನ್ನು ಕಂಡು ಹುಚ್ಚನಾಗುವ ತನಕವೂ ಹೋಗಿ ನೋಡಬೇಕು ಅನಿಸುತ್ತದೆ' ಎನ್ನುತ್ತಾರೆ. ಇದು ಕಾರಂತರಿಗೆ ನಿಸರ್ಗದ ಬಗ್ಗೆ ಇರುವ ಉತ್ಕಟ ಅಭಿಲಾಷೆಯಾಗಿದೆ. ಈ ಅಭಿಲಾಷೆಯು ಅವರ ಕಾದಂಬರಿಗಳ ಪಾತ್ರಗಳ ಮುಖೇನ ವ್ಯಕ್ತವಾಗಿದೆ ಏಕೆಂದರೆ ಕಾರಂತರು ದಕ್ಷಿಣ ಕನ್ನಡ ಜಿಲ್ಲೆಯ ನೈಸರ್ಗಿಕ ಸನ್ನಿವೇಶಗಳನ್ನು ಮತ್ತು ಮನುಷ್ಯ ನಿಸರ್ಗದಲ್ಲಿ ಸಹಜವಾಗಿ ಬದುಕುವ ನೆಲೆಗಳನ್ನು ಕಂಡರು ಅಲ್ಲಿ ಮನುಷ್ಯನು ಸಹಜವಾಗಿ ನಿಸರ್ಗದೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿರುತ್ತಾನೆ. ಈ ಸಂಬಂಧವು ಅನುಭಾವಿಕ ದೃಷ್ಟಿಕೋನವನ್ನು ಒಳಗೊಂಡಿದೆ. ಈ ಬಗ್ಗೆ ಅನಂತಮೂರ್ತಿಯವರು ಕಾರಂತರನ್ನು ಸಂದರ್ಶನ ಮಾಡಿದಾಗ; ಆಡುವ ಮಾತುಗಳು ಈ ಹಿನ್ನೆಲೆಯಲ್ಲಿ ತುಂಬಾ ಮಹತ್ವದ್ದಾಗಿವೆ. ಅದು *"ನಾನು ಕುಣಿದಿದ್ದೇನೆ ಹೊಳೆಯಲ್ಲಿ ಆಡಿದ್ದೇನೆ ಅದೂ ಇದು ಮಾಡಿದ್ದೇನೆ. ಆದರೆ ಇವೆಲ್ಲ ಸೌಂದರ್ಯ ಪ್ರಜ್ಞೆಯಿಂದ ಮಾಡಿದ್ದು ಅಂತ ನಾನು ಗಟ್ಟಿ ಹೇಳಲಾರೆ. ಎಲ್ಲಾ ಮಕ್ಕಳ ಹಾಗೆ ನಾನು ಕೆರೆ ಹಳ್ಳಹಾರಿದ್ದೇನೆ. ಕಡಲಲ್ಲಿ. ಈಜಿ ಈ ಸೌಂದರ್ಯ ಪ್ರಜ್ಞೆಯ ಅಂಶ ಅರಿವಿಗೆ ಬಂದಿದ್ದು ಇಪ್ಪತ್ತು ಇಪ್ಪತ್ತೆರಡನೆ ಇಸವಿಯ ಮೇಲೆ.*

೩೯. ಅದೇ, ಪುಟ-೨೫೧

೪೦. ಅದೇ, ಪುಟ-೨೫೮

ಅನಂತಮೂರ್ತಿ ಅಂದ್ರೆ ಅವಾಗ ನಿಮಗೆ ಎಷ್ಟು ವಯಸ್ಸು ಸುಮಾರು ಕಾರಂತ ಇಪ್ಪತ್ತೆರಡನೇ ಇಸವಿ ಅಂದ್ರೆ ನನಗೆ ಇಪ್ಪತ್ತೊಂದು ವರ್ಷ, ಈ ಇಪ್ಪತ್ತು ವರ್ಷ ಕಾಲೇಜು ಬಿಟ್ಟ ಮೇಲೆ ನಾನು ಒಂಟಿಯಾಗಿ ಕುಂದಾಪುರ ತಾಲ್ಲೂಕನ್ನು ತಿರುಗಾಡಲಿಕ್ಕೆ ತೊಡಗಿದೆ. ಬೇಕೆನ್ನುವಷ್ಟು ಗುಡ್ಡ ಹತ್ತಿದೆ, ಇಳಿದೆ. ಉತ್ತರ ಕರ್ನಾಟಕದ ದಕ್ಷಿಣ ಕರ್ನಾಟಕದಲ್ಲೆಲ್ಲಾ ಕೆಲಸದ ಮೇಲೆ ಸುತ್ತಾಡಿದೆ ಆ ಕಾಲದಲ್ಲೇ ನಮ್ಮ ದೇಶದ ಶಿಲ್ಪ ಇಂಥಾದ್ದನ್ನು ಓದಿಕೊಂಡೆ, ನಾನಗಿಯೇ ಒಂಟಿಯಾಗಿ ನಿಸರ್ಗದಲ್ಲಿ ಅಲ್ಲಾಡತಕ್ಕಂಥಾದ್ದು ಒಂದು ಕಾಲದಲ್ಲಿ ಮೊದಲು ಅನಾಧರಕ್ಕೆ ಗುರಿಯಾದಂತಹ ಆ ಗುಡ್ಡ ನದಿಗಳು ನನಗೆ ನನ್ನ ಮಾನಸಿಕ ಸಂತೋಷಕ್ಕೆ ಪೆಟ್ಟು ಕೊಡ್ತಾ ಹೋದವು. ಮುಂದೆ ಆ ಬಗ್ಗೆ ಹಸಿವು ಬೆಳೆದ ಹಾಗೆ ಅದಕ್ಕೆ ಪ್ರೇರಕವಾಗಿ ಓದ್ಕೊಂಡ ಹಾಗೆ, ನೋಡಿದ ಹಾಗೆ ಆಸಕ್ತಿಯು ಬೆಳೀತಾ ಹೋಯ್ತು' ಆದರೆ ಆರಂಭದಲ್ಲಿ ಎಲ್ಲಾ ಮಕ್ಕಳಿಗಿದ್ದ ಹಾಗೆನೇ ಅಲ್ಲೊಂದು ಗುಡ್ಡ ಇದೆ. ಈಜಾಡಲಿಕ್ಕೆ ಕೆರೆಯಿದೆ ಅಥವಾ ಮುಳುಗಿ ಏಳಲಿಕ್ಕೆ ಸಮುದ್ರ ಇದೆ. ಅಂತ ಅಷ್ಟೆ ನಿತ್ಯವೂ ಹೋಗ್ತಿದ್ದೆ"[೪೧] ನಿಸರ್ಗದ ವರ್ಣನೆಯನ್ನು ಸಹಜ ರೀತಿಯಾಗಿ ಪಾತ್ರಗಳ ಮೂಲಕ ಕಾರಂತರು ವ್ಯಕ್ತಿಪಡಿಸುತ್ತಾರೆ. ಇದು ಅವರಲ್ಲಿ ಬೆಳೆಯಲು ಕಾರಣವೆಂದರೆ, ಅವರ ಮೇಲೆ ಸಹಜವಾಗಿ ಬಾಲ್ಯದಿಂದಲು ದಕ್ಷಿಣ ಕನ್ನಡ ಜಿಲ್ಲೆಯ ಕೋಟಾ ಗ್ರಾಮದ ಸುತ್ತಮುತ್ತಲಿನ ನಿಸರ್ಗ ಬೀರಿದ ಪ್ರಭಾವವಾಗಿದೆ.

ಡಾ॥ ಜೈನಿಯವರು ತಮ್ಮ ಸುತ್ತಲಿದ್ದ ಪರಿಸರ ಕುರಿತು ಕಾರಂತರು ಹಾಡುವ ಮಾತಿನಲ್ಲಿ ವಿಷಾದ ಮತ್ತು ಅವರಲ್ಲಿರುವ ಪರಿಸರ ಪ್ರಜ್ಞೆ ಹಾಗೂ ಆನುಭಾವಿಕ ನೆಲೆಯು ಕಂಡು ಬರುತ್ತದೆ. ಅದು *"ನಾನು ಎಳೆಯವನಿದ್ದಾಗ ನವಿಲು, ಹರಿಣಿಗಳನ್ನು ಸುತ್ತಮುತ್ತಲೆಲ್ಲ ಕಂಡಿದ್ದೆ. ಆಗ ಕಾಡಿಗೆ ಬಂದದ್ದೇ ನೆನಪಾಗುವುದಿಲ್ಲ. ಈ ಉದ್ಯಾನ ರಚಿತವಾಗಿ ಬಳಿಕ ಇಲ್ಲೇ ಸಮೀಪದಲ್ಲಿ ನವಿಲುಗಳ ಕೇಕೆ ಕೇಳಿದ್ದೆ! ನಮ್ಮ ಊರಿನ ಹಿರಿಯರನ್ನು ಕೇಳಿದರೆ ಅವರು ಮಾಗಾಂವ್ ನಿಂದ ಹೊರಕ್ಕೆ ಕಾಲಿರಿಸಿದದೆಲ್ಲಾ ಹರಿಣ, ಜಿಂಕೆಗಳ ದರ್ಶನವಾಗುತ್ತಿತ್ತು ಅನ್ನುತ್ತಾರೆ. ಮನೆಯ ಹಿಂದಿನ ತಿಪ್ಪೆ ರಾಶಿಗಳ ತನಕವೂ ಸವಿಲುಗಳು ಬರುತ್ತಿದ್ದವು, ಅನ್ನುತ್ತಿದ್ದರು. ಈ ಕಾಡುಗಳು ಕಡಿಮೆಯಾಗುತ್ತಿವೆ. ಜನರಿಗೂ ವಾಹನ ಸಂಚಾರಕ್ಕೂ ಬೆದರಿ ಜಿಂಕೆ, ಹರಿಣಿಗಳು ಸಾತ್ಪುರ ಬೆಟ್ಟಗಳಿಂದ ಕೆಳಕ್ಕೆ ಇಳಿಯುತ್ತಲ್ಲಿಲ್ಲ."*[೪೨] ನಿಸರ್ಗದಲ್ಲಿ ಮನುಷ್ಯ ಅದಕ್ಕೆ ಕಂಟಕನಾಗಿದ್ದಾರೆ. ಎಂದು ತಮ್ಮ ಬಾಲ್ಯದಲ್ಲಿ ಕೇಳಿದ ಕಂಡ ಕಾಡು; ಅದರಲ್ಲಿನ ಪ್ರಾಣಿ ಪಕ್ಷಿಗಳು, ಇಂದು ಮಾಯವಾಗಿವೆ. ಇದಕ್ಕೆ ಮನುಷ್ಯನ ಚಟುವಟಿಕೆ ಬಗ್ಗೆ ಡಾ. ಜೈನಿಯವರು ವಿಷಾದ ವ್ಯಕ್ತಪಡಿಸುವ ನೆಲೆಯಲ್ಲಿ ನಿಸರ್ಗ ಪ್ರೇಮ ಮತ್ತು ಆನುಭಾವಿಕ ತನವನ್ನು ಗುರ್ತಿಸಬಹುದು.

ಕಾರಂತರು ಈ ಕಾದಂಬರಿ ಕುರಿತು, ಇದು ಕಥೆಯೂ ಅಲ್ಲ, ಕಾದಂಬರಿಯಲ್ಲಿ, ಪ್ರವಾಸ ಕಥೆಯಲ್ಲಾ ಎಂದು ಹೇಳುತ್ತಾರೆ. ಆದರೆ ಇದು ಪ್ರವಾಸ ಕಥೆಯಾಗಿಯೇ ತಿಳಿಯುತ್ತದೆ. ಕಾರಂತರು ಈ ಕಾದಂಬರಿಯ ಉದ್ದಕ್ಕೂ ತಮ್ಮ ಅನುಭವಗಳನ್ನು ದಾಖಲಿಸುವ ಪರಿಯಲ್ಲಿ ನಿಸರ್ಗದ ಬಗ್ಗೆ ಅವರಿಗಿದ್ದ ಅನುಭಾವಿಕತನ ನಮಗೆ ತಿಳಿಯುತ್ತದೆ. ಕಾರಂತರು ಶಿವಶಂಕರಗುಪ್ತರೊಂದಿಗೆ ಸಾರೋಟದಲ್ಲಿ ಹೋಗುತ್ತಾ, ಅವರಿಗೆ ಆ ಸಂದರ್ಭದಲ್ಲಾದ ಅನುಭವದ ಬಗ್ಗೆ ಹೇಳುತ್ತಾರೆ.

---

೪೧ ಯು.ಆರ್.ಅನಂತಮೂರ್ತಿ: ಸಮಕ್ಷಮ, ಪುಟ-೪೫ -೪೬

೪೨ ಶಿವರಾಮ ಕಾರಂತ, ನಷ್ಟ ದಿಗ್ಗಜಗಳು, ಪುಟ-೨೬೦-೨೬೧

ಆಗ ನಮ್ಮ ಕಣ್ಣಿಗೆ ಒಂದು ಸ್ವಪ್ನಲೋಕವೆ ಕಾಣಿಸಿತು. ನನ್ನ ಊರಲ್ಲಿ ಕೃತಕ ಕೊಳಗಳೆಷ್ಟೋ ಇವೆ. ಚಿಕ್ಕ ಪುಟ್ಟ ನೈಸರ್ಗಿಕ ಕೊಳಗಳೂ ಇವೆ . ಅವು ಮಾತ್ರ ನಾಲ್ಕೆಂಟು ಎಮ್ಮೆ ಕೋಣಗಳ ಜಲಕ್ರೀಡೆಗು ಸಾಲದವು. ಇದು ಹಾಗಲ್ಲ; ಸರಸ್ಸು ಎಂಬ ಬಿರುದಿಗೆ ತಕ್ಕದ್ದು! ಆ ಸರೋವರ, ಅಚೀಚಿನ ಎರಡು ಬೆಟ್ಟಗಳ ಸಾಲುಗಳ ನಡುವೆ ನಿಂತ ಒಂದು ಕಣಿವೆಯ ತಗ್ಗಿನಲ್ಲಿದೆ. ಅದರ ವೈಶಾಲ್ಯ ಒಂದೆರಡು ಚದರ ಮೈಲಿಗಿಂತಲೂ ಹೆಚ್ಚಿರಬೇಕು. ಈ ಪ್ರದೇಶದಲ್ಲಿ ಸಾಕಷ್ಟು ಮಳೆ ಬೀಳುತ್ತಿದ್ದರಿಂದ ಅಚೀಚಿನ ಎರಡೂ ಬೆಟ್ಟದ ತಪ್ಪಲುಗಳಿಂದ ನೀರು ಹರಿದು ಒಂದು, ನಡುವಣ ತಗ್ಗಿನಲ್ಲಿ ಕಲೆತು, ಬಾನಿನ ನೀಲವನ್ನು ಓಡಾಡುವ ಮುಗಿಲುಗಳನ್ನು ಬಣ್ಣಗಳನ್ನು ಮನೋಹರವಾಗಿ ಪ್ರತಿಬಿಂಬಿಸುವ ವಿಶಾಲ ದರ್ಪಣದಂತಿತ್ತು. ನಾವು ಏರಿ ಕುಳಿತ ದಂಡೆ ಕೃತಕವೆಂದೂ ಕಾಣಿಸಲಿಲ್ಲಿ. ಅನತಿ ದೂರದಲ್ಲಿ ಸರೋವರದ ಹೆಚ್ಚಿದ ನೀರು ಹರಿದು ಸಾಗುವ ಒಂದು ಹಳ್ಳವೂ ಇತ್ತು. "*ನನ್ನನ್ನು ಮರುಳುಗೊಳಿಸಿದ್ದು, ಸರಸ್ಸಿನ ನೀರು ಮಾತ್ರವಲ್ಲ; ದೂರದ ತನಕ ಕಾಣಿಸುವ ಕೊಂಬಿನ ಆಕೃತಿಯ ಅದರ ಎರಡು ಮಗ್ಗುಲುಗಳಿಗೆ ಕಾರಣವಾದ ಬೆಟ್ಟದ ಇಳಿಕಲ್ಲು ಮೈಗಳು, ಅವುಗಳ ಮೇಲೆ ಹೊದೆದ ಹಸುರು ಹುಲ್ಲು ಮತ್ತು ನಡು ನಡುವೆ ಬೆಳದ ಹಸುರು ಪೊದೆಗಳಲ್ಲಿ ಜನ ಪಕ್ಷಿಗಳಿಗೆ ಆಸರೆ ಕೊಡುತ್ತಿದ್ದ, ಸರೋವರದ ದಂಡೆಯ ಅಂಚಿನಂತೆ ಬೆಳೆದ ಜೊಂಡುಕಲ್ಲಿನ ಹರವು. ಆ ದಂಡೆಯ ಆಚೀಚೆ ಬೆಳೆದ ಮರಗಳ ಮೇಲೆ ಕೊಕ್ಕರೆಗಳು, ನಾರಾಯಣಿಗಳು!*"[೪೨]

ಕಾರಂತರು ತಮ್ಮ ಅನುಭವಧಾರೆಯನ್ನು ಹಾಗೂ ನಿಸರ್ಗದ ಬಗ್ಗೆ ತಮಗೆ ಇರುವ ಆನುಭಾವಿಕತನವನ್ನು ನಿಸರ್ಗದ ಬಗ್ಗೆ ವರ್ಣಿಸುವ ಮೂಲಕ ವ್ಯಕ್ತಪಡಿಸುತ್ತಾರೆ. ಕಾರಂತರು ರೂಪಚಂದ ಮತ್ತು ಧುನಿಚಂದ ಎಂಬ ಅಧ್ಯಾಯದಲ್ಲಿ ಶಿವಶಂಕರಗುಪ್ತರು ತಮಗೆ ಹೇಳಿದ ಕಥೆಯನ್ನು ಹೇಳುತ್ತಾರೆ. ಆದರೆ ಇಲ್ಲಿ ಕಾರಂತರು ತಾವು ಶಿವಶಂಕರರೂಂದಿಗೆ ಹೋಗಿ ನೋಡುತ್ತಿರುವ ಕಾಡು ಪ್ರತಾಪ್‌ಸಿಂಗ್ ಎಂಬ ಬಿಹಾರ ಮೂಲಕ ವ್ಯಕ್ತಿಯ ನಡುವೆ ಕಥೆ ತೆರೆದುಕೊಳ್ಳುತ್ತದೆ. ಆದಿವಾಸಿಗಳು ಹಿರಿಯರಿಗೆ ಆಗುತ್ತಿರುವ ನೋವನ್ನು ಕುರಿತು ಕಾರಂತರು ಹೇಳುತ್ತಾರೆ.

ಸಿಂಗದೇವರು ಅವರನ್ನು ಮಗ್ಗುಲ ಬೆಟ್ಟದಿಂದ ಇಲ್ಲಿಗೆ ಕರೆಯಿಸಿ, ಇಲ್ಲಿ ಕೇರಿಯನ್ನು ಕಟ್ಟಿಸಿಕೊಟ್ಟರೆಂದು, ಅದರಿಂದಾಗಿ ಜೀವನ ಮೊದಲಿನಂತೆ ಬೇಟೆ, ಗಡ್ಡೆಗೆಣಸು, ಮೊದಲಾದವನ್ನು ಹೊಂದಿಕೊಂಡಿಲ್ಲ. ಅವರ ಹೆಚ್ಚು ಶ್ರಮವನ್ನು ಧನಿಯ ಸೇವೆಯಲ್ಲಿ ಎಂದರೆ ಕಾಡು ನಡುವುದರಲ್ಲಿ, ಸಸಿಗಳಿಗೆ ನೀರೆರೆಯುವುದರಲ್ಲಿ, ಅಲ್ಲಿನ ನೌಕರರ ಸೇವೆಯಲ್ಲಿ ಕಳೆಯುತ್ತಾರೆ. ಅವರ ಒಡೆಯರಾದ ಸಿಂಗದೇವರೆ ಅವರಿಗೆ ದವಸ ಧಾನ್ಯ ಒದಗಿಸುವುದರಿಂದ ಅವರು ಬೇಸಾಯ ಮಾಡುವುದನ್ನು ಬಿಟ್ಟು ಕೆಲವು ವರ್ಷಗಳಾದುವಂತೆ ಇದನ್ನು ಅರಿತಿರುವ "*ಆದಿವಾಸಿಯ ಹಿರಿಯ ವ್ಯಕ್ತಿ ತನ್ನ ನಿಸರ್ಗದೊಂದಿಗಿನ ಅವಿನಾಭಾವ ಸಂಬಂಧದ ನೆಲೆಯನ್ನು ಕುರಿತು ಈಗಿನ ಮಕ್ಕಳಿಗೆ ಬರೆದ ಜೀವನ. ಸುಳಿಫ.*

೪೨. ಅದೇ. ಪುಟ-೨೯೯-೩೦೦

ಅನುಕೂಲ ಅನಿಸುತ್ತದೆ! ನನಗೆ ಮಾತ್ರ ಏಕೊ ನಮ್ಮ ಬೆಟ್ಟದಿಂದ ಇಲ್ಲಿಗೆ ಬಂದದ್ದೆಂಬುದು ಹಾರಾಡುವ ಮೈನಾ ಹಕ್ಕಿಯನ್ನು ಗೂಡಿನಲ್ಲಿ ತುರುಕಿದ ಹಾಗಾಗಿದೆ"[೪೪] ಎನ್ನುತ್ತಾನೆ. ನಮ್ಮ ಮೂಲ ನೆಲೆಯ ಬಗ್ಗೆ ಆದಿವಾಸಿಗಳ ಹಿರಿಯ ತಲೆಗಳಿಗೆ ಇರುವ ಒಲವು ಮತ್ತು ಭಕ್ತಿಯು ಈ ಮಾತುಗಳಲ್ಲಿ ಕಂಡು ಬರುತ್ತದೆ.

ಕಾರಂತರು ತನ್ನ ಪ್ರವಾಸದ ಕಡೆಯಲ್ಲಿ ಮಹಾನಗರವನ್ನು ತೊರೆಯುವಾಗ ಮತ್ತೆ ಶಿವಶಂಕರ ಗುಪ್ತರೊಂದಿಗೆ 'ಸೀತಾ ಕೊಂಡ'ಕ್ಕೆ ಬೇಟಿ ನಿಡುತ್ತಾರೆ. ಆಗ ಅಲ್ಲಿ ಜಲಪಕ್ಷಿಗಳ ವಿಹಾರ, ಪ್ರಶಾಂತ ಜಲಾಶಯದ ಸುತ್ತ ಚಾಚಿ ಹಬ್ಬಿದ ಜೊಂಡು ಹುಲ್ಲು ಮತ್ತು ಮರಗಿಡಗಳನ್ನು ನೋಡಿ ತಮ್ಮ ಕರ್ನಾಟಕದ ನಿಸರ್ಗ ಸೌಂದರ್ಯವನ್ನು ಆನುಭಾವಿಕ ನೆಲೆಯಲ್ಲಿ ನೆನೆಯುತ್ತಾರೆ. *"ಕರ್ನಾಟಕದಲ್ಲಿಯು ಇಂತ ಒಂದು ಸ್ಥಳ ಇದೆ. ಈಗ ಅದನ್ನು ಹಂಪಿ ಎಂದು ಕರೆಯುತ್ತಾರೆ. ಅದರ ಸುತ್ತಲು ದೆವ್ವ ಗಾತ್ರದ ಬಂಡೆಗಳದ್ದೆ ಹಲವು ಗುಡ್ಡಗಳ:ಇವೆ. ಮೌಲ್ಯವಂತ, ಋಷ್ಯ ಮೂಕ ಇತ್ಯಾದಿ ರಾಮಾಯಣ ಕಾಲದ ಹೆಸರುಗಳನ್ನು ಹೊತ್ತ ಪರ್ವತಗಳು ಅಲ್ಲಿಂದ ತುಸು ದೂರದಲ್ಲಿ ಒಂದು ಸಾಮಾನ್ಯ ಕೊಳ ಇದೆ. ನಾನು ಹೋದಾಗ ಅದರಲ್ಲಿ ತಾವರೆ ಗಿಡಗಳು ತುಂಬಿಕೊಂಡಿದ್ದು. ಅವುಗಳ ಎಲೆಗಳು ಅರ್ದಮರ್ದ ಕೊಳದ ದೃಶ್ಯವನ್ನು ಕಂಡಿದ್ದೆ. ಅದನ್ನು ಪಂಪ ಸರೋವರ ಎಂದು ಕರೆಯುತ್ತಾರೆ. ನಮ್ಮವರು, ನಮ್ಮವರಿಗೆ ಪುರಾಣ ಕಾಲದ ಹೆಸರನ್ನ ಸೇರಿಸದಿದ್ದರೆ ಏನೂ ಸಮಾಧಾನಿವಿಲ್ಲ. ಹಾಗಾಗಿ ಸೇರಿಸಿದ್ದಾರೆ. ಅವೆಲ್ಲ ಇರುವ ಪ್ರದೇಶವನ್ನು ಕಿಷ್ಕಿಂದೆ ಎಂದು ಕರೆಯುತ್ತಾರೆ. ರಾಮಚಂದ್ರನಿಗೆ ಸುಗ್ರಿ ವನ ದರ್ಶನಾವಾದದು ಅಲ್ಲಿಯಂತೆ ವಾಲಿಯು ವಧೆಯಾದದ್ದೂ ಅಲ್ಲೆ ಅದರೆ ಈ ಸರೋವರದ ಚೆಲುವು ನಮ್ಮದಕ್ಕೆ ಎಂದೆಂದು ಬರಲಾರದು."*[೪೫]

ಕಾರಂತರು ಹೀಗೆ ನಿಸರ್ಗ ನೆಲೆಯ ಪಾತ್ರಗಳ ಮುಖಾಂತರ ಆನುಭಾವಿಕ ನೆಲೆಯನ್ನು ಮಧ್ಯಪ್ರದೇಶದ 'ಮಾಂಗಾವ್' ಪ್ರದೇಶಕ್ಕೆ ಭೇಟಿ ನೀಡಿ ವ್ಯಕ್ತಪಡಿಸುತ್ತಾರೆ. ಕಾರಂತರು ಈ ಕಾದಂಬರಿಯ ಮುನ್ನುಡಿಯಲ್ಲಿ ಹೇಳಿದಂತೆ *"ತಾವು ಪಾಶ್ಚಾತ್ಯ ಲೋಕವನ್ನು ಕಂಡ ಬಗೆಯನ್ನು ನಮ್ಮ ಭಾರತವು ಸಾತಂತ್ರ್ಯ ಪಡೆದ ಮೇಲೆಷ್ಟು ಬದಲಾವಣೆಗಳಿಗೆ ಒಳಪಟ್ಟಿದೆ ಎಂಬರ್ಥವನ್ನು ಬರುವ ಹಾಗೆ ಇಲ್ಲಿ ತಮ್ಮ ಅನುಭವದ ಕಥೆಯನ್ನು 'ನಷ್ಟ ದಿಗ್ಗಜಗಳು' ಕಾದಂಬರಿ ಮುಖಾಂತರ ವ್ಯಕ್ತಪಡಿಸಿದ್ದಾರೆ".*[೪೬]

'ಮೊಗ ಪಡೆದ ಮನ' ಕಾದಂಬರಿ ಕಲಾವಿದನೊಬ್ಬನ ಸುಖ-ದುಃಖಗಳನ್ನು ಕುರಿತು ಹೇಳುತ್ತದೆ. ಈ ಸುಖ-ಕಷ್ಟಗಳ ನಡುವೆ ಕಲಾವಿದರು ಪರಿಸರವನ್ನು ಕಾಣುವ ರೀತಿ ಮುಖ್ಯವಾಗಿದೆ. ಇಲ್ಲಿ ಬರುವ ಪಾತ್ರಗಳಲ್ಲಿ ಮುಖ್ಯ ಪಾತ್ರದ ನೃತ್ಯಗಾರ ವ್ಯಾಸ ತಮ್ಮ ಕಷ್ಟ ಸುಖಗಳ ನಡುವೆ ನಿಸರ್ಗವನ್ನು ಆನುಭಾವಿಕ ನೆಲಯಲ್ಲಿ ಕಾಣುವುದು ಮುಖ್ಯವಾಗಿದೆ. ತಮ್ಮ ನೃತ್ಯಕ್ಕೆ ನಿಸರ್ಗದ ನೆಲೆಯನ್ನು ಪ್ರೇರಕ ಶಕ್ತಿಯಾಗಿಸಿಕೊಳ್ಳುತ್ತಾರೆ.

ಕಾರಂತರು ಸ್ವತಃ ಕಲಾವಿದರು ಮತ್ತು ಪರಿಸರ ತಜ್ಞರು ಕಲಾವಿದರಾಗಿ ಕಾರಂತರು, ನಾಟಕ, ಯಕ್ಷಗಾನವನ್ನು ಮಾಡಿ ತೋರಿಸಿಕೊಟ್ಟವರು, ತಮ್ಮ ಅನುಭವಗಳ ಟೀಕೆ, ಮೆಚ್ಚುಗೆ

೪೪. ಅದೇ, ಪುಟ-೧೭೮
೪೫. ಅದೇ, ಪುಟ-೨೭೯
೪೬. ಬಿ. ಮಾಲಿನಿ ಮಲ್ಯ (ಸಂ), ಶಿವರಾಮ ಕಾರಂತ ಸಾಹಿತ್ಯ ಶ್ರೇಣಿ, ಪುಟ-೯೬

ಹಾಗೂ ನಿಸರ್ಗದ ದೃಷ್ಟಿಕೋನಗಳನ್ನು ಈ ಕಾದಂಬರಿಯಲ್ಲಿ ಒಡ ಮೂಡಿಸಿದ್ದಾರೆ. ಈ ಬಗ್ಗೆ ಕಾರಂತರು ಸ್ವತಃ ನೃತ್ಯ ಕಲೆಯನ್ನು ಕುರಿತು ಅಭಿರುಚಿ, ಪರಿಶ್ರಮ, ಇದ್ದವರು ಆ ಕಾಲದಲ್ಲಿ ನನಗೆ ಗುರುವಾಗಿ ಅನೇಕ ಪ್ರಯೋಗಗಳನ್ನು ನಡೆಸಿದ್ದೆ. ಸೃಷ್ಟಿಕಾರರ ಪ್ರೇರಣೆಗೂ ವಸ್ತುವಿಗೂ (ಅದು ತಾಳಿ ಬರುವ ಆಕೃತಿಗೂ) ಇರುವ ಸಂಬಂಧವನ್ನು ಮನಗಂಡಿದ್ದೇನೆ.

ಆದ್ದರಿಂದ ಕಾರಂತರು ಕಲಾವಿದ ವ್ಯಾಸನಲ್ಲಿ ನೃತ್ಯ ಕಲೆಯ ವಿವಿಧ ಆಯಾಮಗಳನ್ನು ವ್ಯಕ್ತ ಪಡಿಸುತ್ತಾರೆ. ಈ ಆಯಾಮಗಳ ನಡುವೆ ಬರುವ ಇಲ್ಲಿನ ಪಾತ್ರಗಳೆಂದರೆ ವ್ಯಾಸ, ಇವನ ತಂದೆ ಅನಂತರಾಯ, ತಾಯಿ, ನಂದಿನಿ, ತಮ್ಮ ವ್ಯಾಸನಾರಾಯಣ, ತಂಗಿ ಯಮುನೆ, ರಾಮರಾಯ, ಶ್ರೀನಿವಾಸರಾಯ, ಇವರ ಮಗ ಕೃಷ್ಣ ಮಗಳು ವಿಮಲೆ, ನಾಟಕ ಕಂಪನಿಯ ಸುಧಾಚಂದ್ರ, ಈತನ ತಂಗಿ ಇಂದುಮತಿ ಫ್ರೆಂಚ್ ನೃತ್ಯಗಾರ್ತಿ ಟೂಬಾ, ರಾಜಗೋಪಾಲ, ಇವನ ಪತ್ನಿ ಯಮುನೆ, ನಟಿ ಕೀರ್ತಿ ಇವರು ಪ್ರಮುಖರು.

ವ್ಯಾಸನ ತಂದೆ ಅನಂತರಾಯ ದುರ್ನಾತದಿಂದ ಸತ್ತ ನಂತರ, ರಾಮರಾಯನ ಸಹಾಯದಿಂದ, ಮಂಗಳೂರಿನಲ್ಲಿ ರಾಮರಾಯನ ತಮ್ಮ ಶ್ರೀನಿವಾಸರಾಯರ ಮನೆಯಲ್ಲಿ ಓದುತ್ತಾನೆ. ಇವರ ಮಗ ಕೃಷ್ಣನ ಇಚ್ಛೆಯಂತೆ ಮುಬೈಗೆ ಹೋಗುವುದು, ಫ್ರೆಂಚ್ ನಟಿ ಟೂಬಾಳ ಪರಿಚಯ, ನೃತ್ಯದ ಆಸೆ, ನಂತರ ಹುಬ್ಬಳ್ಳಿಯಲ್ಲಿ 'ಕನ್ನಡ ಟೈಮ್ಸ್' ಪತ್ರಿಕೆಯ ಸಂಪಾದಕನಾಗಿ. ನಂತರ ಸುಧಾಚಂದ್ರ ಮತ್ತು ಇಂದುಮತಿಯ ನಾಟಕ ಕಂಪನಿಯಲ್ಲಿ ನಟ ಮತ್ತು ನೃತ್ಯಗಾರನಾಗಿ ತನ್ನ ಜೀವನವನ್ನು ರೂಪಿಸಿಕೊಳ್ಳುವ ಸಂದರ್ಭದಲ್ಲಿ ಅವನು ನಿಸರ್ಗದ ನೆಲೆಯಲ್ಲಿ ಅವನು ಕಂಡು ಕೊಂಡ ಆನುಭಾವಿಕ ನೆಲೆಯನ್ನು ಪ್ರಸ್ತುತ ಸ್ಥೂಲವಾಗಿ ತಿಳಿಯುವುದು ಇಲ್ಲಿ ಪ್ರಮುಖವಾಗಿದೆ. ವ್ಯಾಸನ ಕಲೆಯನ್ನು ಕುರಿತು ಕೆ.ವಿ. ನಾರಾಯಣರವರು *"ಮೊಗ ಪಡೆದ ಮನ ಕಾದಂಬರಿಯು ವ್ಯಾಸನಿಗೆ ಜೀವನದ ವಿವಿಧ ಅನುಭವಗಳು ತಂದುಕೊಡುವ ಭಾವ ಸಮುಚ್ಚಯಗಳನ್ನು ನರ್ತನದ ಮೂಲಕ ಹೊರಹಾಕಲು ತಕ್ಕ ರೂಪ ದೊರಕುವುದು ಮತ್ತೆ ವಾಸ್ತವ ಜಗತ್ತಿನ ವಿವರವಾದ ಮಯೂರಗಳ ಕುಣಿತದಲ್ಲಿ ಎನ್ನುತ್ತಾರೆ".*[೪೭] ವ್ಯಾಸ ಅನುಭವಗಳ ಮೂಲಕವೇ ನಿಸರ್ಗವನ್ನು ಕಂಡು ಆನುಭಾವಿಕತನವನ್ನು ನಿಸರ್ಗವನ್ನು ನಿಸರ್ಗದೊಂದಿಗೆ ಸಾಧಿಸುತ್ತಾನೆ. ಇವನೊಂದಿಗೆ ಬರುವ ಕೆಲವು ಪಾತ್ರಗಳು ಸಹ ಆನುಭಾವಿಕವಾಗಿ ನಿಸರ್ಗದ ನೆಲೆಯೊಂದಿಗೆ ಸಂಬಂಧವನ್ನು ಹೊಂದಿರುವುದನ್ನು ನೋಡಬಹುದು.

ವ್ಯಾಸ ಮಂಗಳೂರಿನಲ್ಲಿ ಶ್ರೀನಿವಾಸರಾಯರ ಮನೆಯಲ್ಲಿ ವಾಸಮಾಡುತ್ತಾನೆ. ವ್ಯಾಸಂಗ ಮುಂದುವರೆಸಿದಾಗ ಶ್ರೀನಿವಾಸರಾಯರ ಮಗ ಕೃಷ್ಣನನ್ನು ಸ್ನೇಹಿತನಾಗಿಸಿಕೊಂಡು, ಅವನೊಂದಿಗೆ ತಿರುಗಾಡುವಾಗ ನಿಸರ್ಗವನ್ನು ಆರಾಧನೆಯ ದೃಷ್ಟಿಯಲ್ಲಿ ನೋಡುತ್ತಾನೆ. "ಪಡುವಣದ ವಿಶಾಲವಾದ

೪೭. ಜಿ.ಎಸ್.ಶಿವರುದ್ರಪ್ಪ (ಸಂ), ಕಾದಂಬರಿಕಾರನಾಗಿ ಕಾರಂತ: ಪುಟ-೩೫

ದಿಗಂತವನ್ನು, ಸಾಗರದ ಅಲೆಗಳನ್ನು ಕಾಣುತ್ತಲೇ ಮನಸ್ಸು ಮಾತ್ರ ಯಾವುದೋ ರಾಜ್ಯಕ್ಕೆ ಹೋಗುತ್ತದೆ. ಎದುರಿನ ಕಡಲಿನ ಹಾಳೆಯು ಸಂಜೆ ಬೆಳಕಿಗೆ ಎಷ್ಟೆಲ್ಲ ವಿಚಿತ್ರ ಬಣ್ಣವನ್ನು ತಾಳಬಹುದೋ ಅಷ್ಟೆಲ್ಲ ಬಣ್ಣಗಳು ಅವನ ಭಾವನೆಗಳಿಗೂ ಬರುತ್ತವೆ. ಒಂದು ಮೈಲು ದೂರದಲ್ಲಿ ಶಾಂತವಾದ ಸಾಗರವು ಕಾಣಿಸಿದರೂ, ಅದರ ಅಂಚಿನಲ್ಲಿ ನಿಮಿಷ ನಿಮಿಷಕ್ಕೂ ಹೊರಳಿ, ಉರುಳಿ, ನಕ್ಕು ಮಾಯವಾಗುತ್ತಿರುವ ನೀರಿನ ತೆರೆಗಳು, ಸಾವಿರ ಬಾಳ್ವೆಗಳ ಸಮ್ಮೇಳನದಂತೆ ಕಾಣಿಸುತ್ತದೆ".[೪೮]

ಹೀಗೆ ತನ್ನ ತಂದೆಯ ಸಾವು, ತನ್ನ ತಾಯಿಯ ಕನಸು ಇವೆಲ್ಲವನ್ನು ಹೇಗೆ ನನಸು ಮಾಡಬೇಕು ಎಂದು ವ್ಯಾಸ ಚಿಂತಿಸುತ್ತಾನೆ. ಈ ಚಿಂತನೆಯನ್ನು ನಿಸರ್ಗದ ವೈಚಿತ್ರ್ಯಗಳನ್ನು ಕಾಣುವುದರ ಮೂಲಕ ನಿಸರ್ಗದೊಂದಿಗೆ ಅನುಸಂದಾನ ಸ್ಥಾಪಿಸುತ್ತಾನೆ. ಈ ಮೂಲಕ ಮನಸ್ಸಿಗೆ ನೆಮ್ಮದಿಯನ್ನು ತಂದುಕೊಳ್ಳುತ್ತಾನೆ. ವ್ಯಾಸನು ತನ್ನ ತಂಗಿಯಾದ ಯಮುನೆಯನ್ನು ಮಲ್ಪೆಗೆ ಕರೆದುಕೊಂಡು ಹೋಗುತ್ತಾನೆ. *"ಆಗ ಯಮುನೆಯು ನಿಸರ್ಗವನ್ನು ಕಂಡು 'ಎಷ್ಟು ಚಂದ, ಎಷ್ಟು ಚಂದ ಎಂದು ಉದ್ಗರಿಸುತ್ತಿದ್ದಳು. ವ್ಯಾಸನ ಮನಸ್ಸು ಮಾತ್ರ ಆ ಸೊಗಸನ್ನು ಉಣ್ಣುತ್ತಲೇ ಇತ್ತು. ವಡಭಾಂಡೇಶ್ವರದ ಕಡಲ ದಂಡೆಯನ್ನು ಅವರಿಬ್ಬರೂ ಸೇರಿದಾಗ, ಆತನ ಮನಸ್ಸು ತುಂಬ ಏಕಾಗ್ರವಾಗಿತ್ತು. ಯಮುನೆ ಮರಳಿನಲ್ಲಿ ಓಡಾಡ ತೊಡಗಿದಳು. ಕಡಲಿನ ಚಿಪ್ಪುಗಳನ್ನು ಆರಸತೊಡಗಿದಳು, ಆ ನಿಸರ್ಗದಲ್ಲಿ ಮೈ ಮರೆತು ಹುಚ್ಚಾದಳು, ವ್ಯಾಸ ಒಮ್ಮೊಮ್ಮೆ ನೆಲ ನೋಡುತ್ತಾನೆ. ತನ್ನ ಬೆನ್ನಿಗಿದ್ದ ಗಾಳಿಯ ಮರಗಳ ತೋಪನ್ನು ನೋಡುತ್ತಾನೆ. ಅವುಗಳ ಎಲೆಗಳ ಝೇಂಕಾರವನ್ನು ಕೇಳುತ್ತಾನೆ. ಎದುರಿಗೆ ವಿಶಾಲವಾಗಿ ಹಾಸಿದ ಕಡಲನ್ನು ನೋಡುತ್ತಾನೆ. ಎಡ ಬಲಗಳಲ್ಲಿ ಕಡಲಿನಲ್ಲಿ... ಆ ಗಳಿಗೆಯಲ್ಲಿ, ಕಣ್ಣು ಒಂದೇ ಸಮನೆ ನೀಲ ಅಂಚನ್ನು ನೋಡತೊಡಗಿತು. ಬಾನು ಕೆಂಪಡರಿತು. ಸೂರ್ಯ ಬೆಂಕಿಯಂತೆ ಕೆಂಪಾದ ಜ್ವಾಲೆಯ ಬಿಂಬವಾದ, ವ್ಯಾಸನ ಕಣ್ಣು ಆ ಸೂರ್ಯ ಬಿಂಬದಲ್ಲಿ ಬೆರೆಯಿತು, ಹೊತ್ತು ಕಳೆದಿತ್ತು. ಕೊನೆಯ ಬಾರಿಗೆ ಆತ, ಸೂರ್ಯ ಬಿಂಬದ ನೆರಳನ್ನು ಕಂಡು, ನಗುವಂತೆ ಕಂಡಿತು. ಮಂಗಳೂರಿನಲ್ಲಿ ತಾನು ದೂರದಿಂದ ಕಂಡ ಕಡಲ ನೋಟಕ್ಕಿಂತ ಈ ಸಮೀಪದ ನೋಟ ಇನ್ನಷ್ಟು ಪ್ರಬಲವಾಗಿ ಅವನ ಮನಸ್ಸನ್ನು ನಾಟಿತು. ನಿತ್ಯವು ಬರಹುದ್ದಾಗಿದ್ದ ಆ ತಾವಿಗೆ ಏಕೆ ಬರಲಿಲ್ಲ ಎನಿಸಿತು."*[೪೯]

ವ್ಯಾಸ ಬಾರಕೂರಿನ ನಿಲಾವರದ ಸದಾಶಿವನ ಮನೆಗೆ ಹೋದಾಗ ಅಲ್ಲಿ ನಿಸರ್ಗದ ಚೆಲುವನ್ನು ಕಂಡು *"ಬಾರಕೂರು ಮೊದಲೇ ಹೆಸರಾದ ಊರು. ಅನೇಕ ಪ್ರಾಚೀನ ರಾಜವೈಭವಗಳಿರುವ ಊರು. ಅಲ್ಲಲ್ಲಿ ಕೊಳಗಳು ಐತಿಹಾಸಿಕ ಭಗ್ನವಶೇಷಗಳಿರುವ ಊರು. ನೋಡುತ್ತಾ ಅಲೆದಾಡಿದರೆ ಪ್ರಾಚೀನ ವೈಭವದ ಕಲ್ಪನೆಗಳು ಮನಸ್ಸಿಗೆ ಬರುತ್ತದೆ. ನದಿಯ ನಡು ನಡುವೆ ಹಸುರಾದ ದ್ವೀಪಗಳಿವೆ. ಭೂಮಿಯ ಮೇಲೆ ಕುಳಿತ ಬೆಳದಿಂಗಳಲ್ಲಿ ಅಲೆದಾಡಿದರೆ ಸ್ವಪ್ನ ರಾಜ್ಯದಲ್ಲಿ ಅಲೆದಂತಾಗುತ್ತದೆ. ವಿರಹ ವೈರಾಗ್ಯಗಳಿಗೆ ಮೀಸಲಾಗಿಲ್ಲ ಎಂದು ಅಲ್ಲಿ ಕಂಗೊಳಿಸುತ್ತಿದ್ದ ನಿಸರ್ಗ ಪಾಠ ಹೇಳಬೇಕಾಗಿತ್ತು"*[೫೦] ಈ ರೀತಿಯಾಗಿ ನಿಸರ್ಗವನ್ನು ವ್ಯಾಸ ಅಂತರ ಮುಖಿಯಾಗಿ ಮತ್ತು ಕೆಲವು ಸಲ ಬಹಿರಂಗವಾಗಿ ನಿಸರ್ಗದ ನೆಲೆಯಲ್ಲಿ ಅದನ್ನು ಮನಸ್ಸಲ್ಲಿ ಸವಿಯುತ್ತಾ ಆರಾಧನೆಯನ್ನು ಮಾಡುವ ಮೂಲಕ ಆನುಭಾವಿಕ ನೆಲೆಯಲ್ಲಿ ತನ್ನನ್ನು ತೊಡಗಿಸಿಕೊಳ್ಳುತ್ತಾನೆ.

೪೮ ಶಿವರಾಮ ಕಾರಂತ, ಮೊಗ ಪಡೆದ ಮನ, ಪುಟ-೨೪೨
೪೯. ಅದೇ, ಪುಟ-[illegible]
೫೦. ಅದೇ, ಪುಟ-[illegible]

ಮಿತ್ರ ರಾಜಗೋಪಾಲನ ಮುಖಾಂತರ ಹುಬ್ಬಳ್ಳಿಯ 'ಕನ್ನಡ ಟೈಮ್ಸ್' ಪತ್ರಿಕೆಯಲ್ಲಿ ಸಂಪಾದಕರಾಗಿ ಈ ಮೂಲಕ ನಾಟಕ ಕಂಪನಿಯ ಸುಧಾಚಂದ್ರ ಮತ್ತು ಇಂದುಮತಿಯ ಪರಿಚಯದ ನಂತದ ಅವನ ಜೀವನದಲ್ಲಿ ಹೊಸ ತಿರುವುಗಳನ್ನು ಪಡೆದುಕೊಳ್ಳುತ್ತಾನೆ. ಈ ಪ್ರಸಿದ್ಧತೆಗೆ ಮುಂಚೆ ಆತನು ಇಂದುಮತಿಯ ನಾಟಕ ಕಂಪನಿಯಲ್ಲಿ ನೃತ್ಯಕಲಿಸುತ್ತಿದ್ದ ಟೂಳಸಲಹೆ ಮೇರೆಗೆ ಬಹುವಿಧವಾದ ನೃತ್ಯವನ್ನು ಕಲಿಯುತ್ತಾನೆ. ಅದರಲ್ಲಿ ಮಯೂರ ನೃತ್ಯ ಒಂದಾಗಿದೆ. ಇದನ್ನು ಕಲಿಯಲು ಹುಬ್ಬಳ್ಳಿಯಿಂದ ಹಲಸಂಗಿಗೆ ಹೋಗುತ್ತಾನೆ. ಅಲ್ಲಿ ಮಾಸ್ತರನಾದ ಚನ್ನಪ್ಪರೊದಿಗೆ ಬೆಟ್ಟ ಗುಡ್ಡವನ್ನು ಸುತ್ತಾಡಿ ನವಿಲುಗಳನ್ನು ಕಾಣುತ್ತಾನೆ. ಅವುಗಳನ್ನು ಕಂಡಾಗ, ವಾತಾವರಣದಲ್ಲಿ *"ಇದ್ದಕ್ಕಿಂದ್ದಂತಯೇ ಧೂಳನ್ನೆಬ್ಬಿಸುತ್ತ ಬಿರುಗಾಳಿ ಬೀಸತೊಡಗಿತು. ಕಣ್ಣು ಕೈ ಮುಖಗಳೆಲ್ಲ ಧೂಳು ಅಲ್ಲಿಯೇ ಕಣ್ಮುಚ್ಚಿಕೊಂಡು ಬೇವಿನ ಮರದ ದಿಂಡೆಗೆ ಒರಗಿಕೊಂಡು ಕುಳಿತ. ಬಿರುಗಾಳಿಯ ಮೊರೆತಕ್ಕೆ ಸರಿಯಾಗಿ ಆ ಬೇವಿನ ಮರಗಳೂ ತೂಗಿದವು. ಒಮ್ಮೆಗೆ ನವಿಲುಗಳ ಕಲರವ ಕೇಳಿಸಿ ಏನೋ ಆಪತ್ತನ್ನು ಸೂಚಿಸುವಂತೆ ಕಾಣಿಸಿತು. ಬಾನನ್ನು ಕಣ್ಣೆತ್ತಿ ನೋಡುತ್ತಾನೆ. ಮುಗಿಲು ದಟ್ಟವಾಗುತ್ತ ಬಂದು, ತೀರ ಕಪ್ಪು ಛಾಯೆ ತಾಳಿತ್ತು. ಒಮ್ಮಿಂದೊಮ್ಮೆ ಗುಡುಗಿನ ಮೊರೆವು ಕೆಳಿಸಿತು. ನೋಡ ನೋಡುವುದರೂಳಗಾಗಿ ಊರಿನ ನವಿಲುಗಳೆಲ್ಲಾ ಸಂತೆ ಸೇರಿದಂತೆ ಕಳೆಯ ತೊಡಗಿದವು. ಆಗ ವ್ಯಾಸ ಮನಸ್ಸಿನ ಉಬ್ಬನ್ನಂತು ಹೇಳ ತೀರದು"*[೫೧] ಹೀಗೆ ವ್ಯಾಸ ಆ ಮೋಡ ಗಾಳಿಗಳ ನಡುವೆ ನವಿಲುಗಳು ಕೇಕೆ ಹಾಕುತ್ತಾ ನಟಿಸುವುದನ್ನು ಕಂಡು ಅದೇ ರೀತಿಯಾಗಿ ನೃತ್ಯವನ್ನು ಕಲಿಯುತ್ತಾನೆ.

ಮನುಷ್ಯನು ನಿಸರ್ಗದ ನೆಲೆಯಲ್ಲಿ ಪ್ರಾಣಿ ಪಕ್ಷಿಗಳ ವರ್ತನೆ, ಕೂಗನ್ನೂ ಕಂಡು ಕೇಳಿ ಅವುಗಳಂತೆ ಅನುಕರಿಸುತ್ತಾನೆ. ಇವೆಲ್ಲವೂ ಕಲಿಯಬೇಕಾದರೆ, ನೋಡಬೇಕಾದರೆ ಮನುಷ್ಯನಿಗೆ ನಿಸರ್ಗದ ಬಗ್ಗೆ ಗಾಢವಾದ ಒಲವು ಇರಬೇಕು. ಈ ಮೂಲಕ ಅವನು ನಿಸರ್ಗದೊಂದಿಗೆ ಆನುಭಾವಿಕ ನೆಲೆಯನ್ನು ಬೆಳೆಸಿಕೊಂಡು ನಿಸರ್ಗದ ನೆಲೆಗೆ ತುಂಬಾ ಹತ್ತಿರವಾಗಿ ಬದುಕುತ್ತಾರೆ. ಇದೇ ಮಾದರಿಯಲ್ಲಿ ವ್ಯಾಸ ತನ್ನ ಬದುಕನ್ನು ಆನುಭಾವಿಕ ನೆಲೆಯಲ್ಲಿ ಅನುಕರಿಸುವುದರ ಮುಖಾಂತರ ಬದುಕನ್ನು ಕಟ್ಟಿಕೊಳ್ಳುತ್ತಾನೆ.

ಮುಂಬೈಯಲ್ಲಿಯು ಸಹ ವ್ಯಾಸ ನಾಟಕ ಕಂಪನಿಯನ್ನು ಸ್ಥಾಪಿಸುವುದರ ಮುಖಾಂತರ ಈ ನಿಸರ್ಗದ ನೆಲೆಯಲ್ಲಿ ಆನುಭಾವಿಕ ದೃಷ್ಟಿಯಿಂದ ತಾನು ಕಲಿತ ಕಲೆಯನ್ನು ರೂಢಿಸಿಕೊಂಡು ತನ್ನ ಪತ್ನಿ ವಿಮಲೆಯೊಂದಿಗೆ ಜೀವಿಸುತ್ತಾನೆ. ಇಲ್ಲಿ ಬರುವ ಪಾತ್ರಗಳಾದ ಟೂಬಾ, ಇಂದುಮತಿ, ಸುಧಾಚಂದ್ರ ಇವರೆಲ್ಲರೂ ನಾಟಕವನ್ನು ಪ್ರಯೋಗಿಸುತ್ತಿದ್ದರೂ ಸಹ ನಿಸರ್ಗದ ನೆಲೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲಿಲ್ಲ. ವ್ಯಾಸನಂತಹ ವ್ಯಕ್ತಿಗಳು ನಿಸರ್ಗದ ನೆಲೆಯಲ್ಲಿ ತಮ್ಮ ಶ್ರಮದಿಂದ ಬದುಕುವ ಮತ್ತು ಕಾರಂತರು ನಿಸರ್ಗವನ್ನು ಬಣ್ಣಿಸುವ ಪರಿಯನ್ನು ಕುರಿತು ಅನ.ಕೃ.ಅವರು

೫೧. ಅದೇ. ಪುಟ-೪೧೨

"ಅವರ ಸಾಹಿತ್ಯದ ಸಿದ್ಧಿ ಕಂಡುಬರುವುದು. ಅವರ ಕಾದಂಬರಿಗಳಲ್ಲಿ 'ಮರಳಿ ಮಣ್ಣಿಗೆ', 'ಸನ್ಯಾಸಿಯ ಬದುಕು', 'ಮೊಗಪಡೆದ ಮೊನ' ಒಂದಲ್ಲ ಹತ್ತು ಬಾರಿಗೆ ಓದಿಸಿಕೊಳ್ಳುವ ಕಾದಂಬರಿಗಳು ಪಾತ್ರ ನಿರೂಪಣೆ, ಸಂಭಾಷಣೆ, ಕಾರಂತರ ಪ್ರಬಲಾಯುಧಗಳಲ್ಲ. ಆದರೆ 'ಮರಳಿ ಮಣ್ಣಿಗೆ' ಯಲ್ಲಿ ಬರುವ ಪ್ರತಿಯೊಂದು ಪಾತ್ರವೂ ಖಚಿತವಾಗಿ ನಮ್ಮ ಮನಸ್ಸಿನಲ್ಲಿ ನಿಲ್ಲುತ್ತವೆ. ಶ್ರಮಜೀವಿಗಳ ನಿತ್ಯಜೀವನವನ್ನು ಬಿಡಿಬಿಡಿಯಾಗಿ ವರ್ಣಿಸುವಾಗ ನಿಸರ್ಗದ ಅನಂತ ವಿಲಾಸದ ತೆಗೆಯುವಾಗ ಕಾರಂತರ ಲೇಖನಿಗೆ ವಿಚಿತ್ರ ಸಮ್ಮೋಹನ ಶಕ್ತಿ ಬರುತ್ತದೆ" [೫೨]

ಹೌದು, 'ಮೊಗ ಪಡೆದ ಮನ'ದ ವ್ಯಾಸ ಶ್ರಮಜೀವಿ, ತನ್ನ ತಂದೆ ಅನಂತರಾಯ ಸತ್ತ ನಂತರ, ಅದೇ ದುಃಖದಲ್ಲಿ ಅಸಹಾಯಕನಾಗಲಿಲ್ಲ. ಬದಲಾಗಿ ಶ್ರಮವಹಿಸಿ ಓದಿದ, ನಿಸರ್ಗದ ನೆಲೆಯಲ್ಲಿ ಆನುಭಾವಿಕ ದೃಷ್ಟಿಕೋನದಲ್ಲಿ ನೃತ್ಯ ಕಲಿತ, ಅದನ್ನು ಸರಿಯಾಗಿ ಬಳಸಿಕೊಂಡು ಪ್ರಸಿದ್ಧಿ ಪಡೆದ. ಈ ಸಂದರ್ಭದಲ್ಲಿ ಕಾರಂತರು ವ್ಯಾಸನ ಪಾತ್ರದ ಮುಖಾಂತರ ನಿಸರ್ಗವನ್ನು ಮನಬಿಚ್ಚಿ ವರ್ಣಿಸಿದ್ದಾರೆ. ಆದ್ದರಿಂದ ಅ.ನ.ಕೃ.ಹೇಳುವ ಮಾತು ಸರಿಯಾಗಿದೆ.

'ಅಳಿದಮೇಲೆ' ಕಾದಂಬರಿ ಸಾಮಾಜಿಕ ನೆಲೆಯಲ್ಲಿ ಒಬ್ಬ ವ್ಯಕ್ತಿಯು ಯಾವ ರೀತಿ ಗೌರವಾದರಗಳಿಗೆ ಪಾತ್ರಾನಾಗುತ್ತಾನೆ. ಅಲ್ಲಿನ ಸಂಬಂಧಗಳಲ್ಲಿ ಮಾನವೀಯತೆ ಹೇಗಿರುತ್ತದೆ ಎಂದು ತಿಳಿಯುತ್ತದೆ. ಇದರಲ್ಲಿ ಮುಖ್ಯವಾಗಿ ಆರ್ಥಿಕವಾದ ವಿಚಾರವಾಗಿರುವುದು ತಿಳಿದುಬರುತ್ತದೆ. ಈ ಆರ್ಥಿಕವಾದ ನೆಲೆಯಲ್ಲಿ ವಾಗ್ವಾದಗಳು ಮತ್ತು ಸಹಾಯದ ನೆಲೆಗಳು ಕಂಡು ಬರುತ್ತದೆ. ಈ ಕಾದಂಬರಿಯ ಕೇಂದ್ರ ಪಾತ್ರವಾದ ಯಶವಂತರು, ಈ ಸಮಸ್ಯೆಗಳ ನೆಲೆಯಲ್ಲಿ ಸಿಕ್ಕಿ ನಂತರ ಕಾಯಿಲೆಯಿಂದ ಮರಣ ಹೊಂದುತ್ತಾರೆ. ಇವರಿಗೆ ಅಪ್ತರೆನಿಸಿದ ನಿರೂಪಕ ಕಾರಂತರು. ಅವರ ಸಂಕೇತಗಳ ಮುಖಾಂತರ ಸೂಚಿಸಿದ ಸಂಬಂಧಗಳು ಊಯಿಲನ್ನು ಅರ್ಥೈಸಿಕೊಂಡು ಯಶವಂತರ ಮಡದಿಯರನ್ನು ಮತ್ತು ಮಕ್ಕಳನ್ನು ಸಂಧಿಸಿ ಮಾತುಕತೆ ನಡೆಸುವ ಸಂದರ್ಭಗಳು ಈ ಕಾದಂಬರಿಯಲ್ಲಿ ಬರುತ್ತವೆ. ಈ ಕಾದಂಬರಿಯ ಇನ್ನುಳಿದ ಪಾತ್ರಗಳೆಂದರೆ ಕಮಲ,ಸರಸಿ, ಸೀತಾರಾಮಹೆಗ್ಗಡೆ, ಜಲಜ, ಧಾನೇಸ್ವರಸೀನ, ಇಂದುಮತಿ, ಮಂಜಯ್ಯ ಪಾರ್ವತಮ್ಮ, ಸಭಾವಂತ, ವಿಷ್ಣುಪಂತಘಾಟಿಯವರು ಪ್ರಮುಖರು, ಯಶವಂತರ ಮಡದಿ ಕಮಲ, ಮಕ್ಕಳು ಸೀತಾರಾಮ ಹೆಗ್ಗಡೆ, ಮಗಳು, ಜಲಜಯ, ವೇಶ್ಯಾ ಮಡದಿ ಸರಸಿ, ಇವಳಮಕ್ಕಳು ಧಾನೇಶ್ವರ ಸೀನ, ಇಂದುಮತಿ.

ಶಿವರಾಮಕಾರಂತರು ಈ ಕಾದಂಬರಿಯ ಮುನ್ನುಡಿಯಲ್ಲಿ ಈ ಯಶವಂತನಂತೆ ಜನ ಹುಟ್ಟುತ್ತಾರೆ, ಬಾಳುತ್ತಾರೆ, ಸಾಯುತ್ತಾರೆ. ಬಾಳಿದವರು ತಮ್ಮ ಸಂಪರ್ಕಕ್ಕೆ ಬಂದ ಕೆಲವರಿಗೆ ಹಿತವರು! ಹಲವರಿಗೆ ತಿಳಿಯದವರು. ಬದುಕಿನ ಸಂಪರ್ಕದಲ್ಲುಂಟಾದ ಹಿತಾ ಹಿತ ಪ್ರಭಾವಗಳನ್ನು ಮೇಳೈಸಿ, ಯಶವಂತರ ಬಾಳು ಎಂಥದಿತ್ತೆಂದು ಹುಡುಕಲೆತ್ನಿಸಿದ್ದೇನೆ. ಇಲ್ಲಿ ಇದು ಅವರ ಬಿಟ್ಟ ಹೆಜ್ಜೆಯ ಜಾಡನ್ನು ಹಿಂಬಾಲಿಸಿ ಹೋದಂತೆ. ದಾರಿಸಾಗಿದವರು ಅವರು ತುಸುವೆ ಪರಿಚಯದಿಂದ

೫೨. ಟಿ.ಪಿ.ಅಶೋಕ (ಸಂ), ಈ ಶತಮಾನದ ನೋಟ ಶಿವರಾಮ ಕಾರಂತ ಪುಟ-೦೪-೦೫

ಕುತೂಹಲ ತಾಳಿದವನಾಗಿ ಜಾಡನ್ನು ಆರಿಸಿ ಹೋಗುವವನು ನಾನು ನನ್ನ ಅಳತೆಯ ಕೋಲಿನಿಂದ ಅಳೆಯುವುದಕ್ಕೆ ಪ್ರಯತ್ನಿಸುತ್ತಿದ್ದೇನೆ. ನನ್ನದು ನಿರೀಕ್ಷಕನ ಪಾತ್ರ, 'ಬೆಟ್ಟದ ಜೀವ'ದಲ್ಲಿ ಅಂತಹ ಪಾತ್ರ ವಹಿಸಿದಂತೆಯೇ ಇನ್ನೊಮ್ಮೆ ಇಲ್ಲಿಯೂ ವಹಿಸಿದ್ದೇನೆ. ಅದೊಂದು ತರ, ಇದೊಂದು ತರ, ಅದು ಬದುಕಿದ್ದಾಗ ಕಂಡದ್ದು ಇದು ಸಾವಿನ ಬಳಿಕ ಅರಸಿದ್ದು ಅಂದರೆ ಯಶವಂತರ ಸಾವಿನ ನಂತರ ನಿರೂಪಕರಾಗಿ ಮತ್ತು ಪತ್ತೆಧಾರಿಗಳಾಗಿ ಶಿವರಾಮಕಾರಂತರು ಇಲ್ಲಿ ಕಥೆಯನ್ನು ಹೇಳುತ್ತಾರೆ.

ಯಶವಂತರಾಯರ ಮರಣದ ತರುವಾಯು ಅವರ ಮುಂಬೈ ಮನೆಯ ಕೊಠಡಿಯಲ್ಲಿ ಸಾಂಕೇತಿಕ ಚಿತ್ರಗಳು ಸಿಗುತ್ತವೆ. ಆ ಸಂಕೇತ ಮಾದರಿಯ ಚಿತ್ರಗಳ ಮುಖಾಂತರ, ಯಶವಂತರ ಹಿನ್ನಲೆಯನ್ನು ಕಾರಂತರು ಕಂಡು ಹಿಡಿಯುತ್ತಾರೆ. ಯಶವಂತರ ಊರು 'ಎಲ್ಲಾಪುರ' ತಾಲ್ಲೂಕಿನ ಬೆನಕನಹಳ್ಳಿ ಇವರನ್ನು ಸಾಕಿದವಳು ಪಾರ್ವತಮ್ಮ. ಶಂಕರ ಹೆಗ್ಗಡೆ ತಂದೆಗೂ ಯಶವಂತರ ತಂದೆಗೂ ದಾಯಾದಿ ಮತ್ಸರ ಇದ್ದ ಕಾರಣವಾಗಿ ಶಂಕರ ಹೆಗ್ಗಡೆಯವರ ತಂದೆ ಇವರಿಗೆ 'ನಿಮ್ಮ ಮನೆ ನಾಶವಾಗಿ ಅದರ ಮೇಲೆ ಬಿದಿರು ಮಳೆ ಬೆಳೆಯಲಿ' ಎಂದು ಶಾಪಕೊಡುತ್ತಾರೆ. ಕಾಲಾನಂತರ ಯಶವಂತರ ತಂದೆ, ತಾಯಿ ತೀರಿಕೊಂಡಾಗ, ಹೆಂಡತಿಯ ಬಾಯಿ ಬಡುಕುತನ: ತನ್ನವರ ದಾಯಾದಿ ಮತ್ಸರದಿಂದ ಕುಮಟೆಯ ಮಾವನ ಮನೆಗೆ ಬಂದು ವ್ಯಾಪಾರ ಮಾಡಿಕೊಂಡಿದ್ದು, ಹೆಂಡತಿ ಗಂಡನ ನಡುವೆ ಜಗಳವಾಗಿ ಯಶವಂತರು ಮುಂಬೈ ಸೇರಿ ಜಿಮ್‌ಸಟ್ಜಯವರ ಮನೆಯಲ್ಲಿರುತ್ತಾರೆ. ಯಶವಂತರಿಗೆ ಬ್ರೈನ್ ಮಲೇರಿಯಾ ಬಂದು ಆಸ್ಪತ್ರೆ ಸೇರಿದಾಗ, ನಿರೂಪಕರಿಗೆ ಅವರು ಪತ್ರ ಬರೆಯುತ್ತಾರೆ. ಪತ್ರ ನೋಡಿ ನಿರೂಪಕರು ಹೋಗಿ ನೋಡುವಷ್ಟರಲ್ಲಿ ತೀರಿಕೊಂಡಿರುತ್ತಾರೆ ಯಶವಂತರು. ಇವರ ಇಚ್ಚೆಯಂತೆ ಅವರ ಟ್ರಂಕ್, ಪತ್ರಗಳು ಬ್ಯಾಂಕ್ ಪುಸ್ತಕ ಮುಂತಾದವನ್ನು ತನ್ನ ಮನೆಗೆ ಯಶವಂತರು ಕಳುಹಿದ್ದ (೧೫೦೦೦) ರೂ.ಗಳ ಮನಿಡ್ರಾಫ್ಟ್ ತಿಳಿದು ಅವರ ಇಚ್ಚೆಯಂತೆ ತಿಂಗಳಿಗೆ ಇಪ್ಪತ್ತೈದು ರೂಪಾಯಿಗಳಂತೆ ಕಳುಹಿಸಿಕೊಡುತ್ತಾರೆ. ಈ ಹಣವನ್ನು ಪಡೆಯುತ್ತಿರುವ ವ್ಯಕ್ತಿಗಳ ಪೂರ್ವಾಪರ ತಿಳಿಯಲು ನಿರೂಪಕರು ಅನ್ವೇಷಣೆ ಕೈಗೊಳ್ಳತ್ತಾರೆ. ಆಗ ಮೊದಲ ಅನ್ವೇಷಣೆ ಯಶವಂತರನ್ನು ಸಾಕಿ ಸಲಿಹಿದ ಪಾರ್ವತಮ್ಮನು ಬೆನಕನಹಳ್ಳಿಯಲ್ಲಿ ಒಂದು ಗುಡಿಸಿಲಿನಲ್ಲಿ ವಾಸಿಸುತ್ತಿರುತ್ತಾಳೆ. ಅಲ್ಲಿಗೆ ನಿರೂಪಕರು ಬೇಟಿಕೊಟ್ಟಾಗ ಚೊಚ್ಚಲ ಮನೆ ಶಂಕರಹೆಗ್ಗಡೆ ಇವರ ಶಂಭು ಹೆಗ್ಗಡೆ ಮತ್ತು ರಾಮ ಹೆಗ್ಗಡೆಯ ಮನೆಯವರ ಪರಿಚಯವಾಗುತ್ತದೆ. ಇವರೆಲ್ಲರೂ ಮಲೆನಾಡಿನ ನಿಸರ್ಗದಲ್ಲಿ ಅವರ ವಾಸ ಆ ಪ್ರದೇಶದ ನಿಸರ್ಗವನ್ನು ಕುರಿತ ಕಾರಂತರು ಹೇಳುತ್ತಾರೆ.

"ಆ ಪ್ರದೇಶದ ಬೆಟ್ಟಗುಡ್ಡಗಳೆಲ್ಲವೂ ಹಸುರು ಹೊದಿಕೆಯಿಂದ ಅತ್ಯಂತ ಮನೋಹರವಾಗಿ ಕಾಣಿಸುತ್ತಿದ್ದವು. ಎಲ್ಲಿ ನೋಡಿದರೂ ಕಾಡು. ಮೇಡು ಹಚ್ಚಹಸುರಿನ ಹೊದಿಕೆ ಎಲ್ಲೆಂದರಲ್ಲಿ ಹರಿಯುವ ನೀರಿನ ತೊರೆಗಳು.

ತೋಡುಗಳು ನೀರು ಕಲೆತು ಉಂಟಾದ ಕೊಳಗಳು, ಸರೋವರ ಅಲ್ಲಿಂದ ಮೀರಿ ಹರಿಯುವ ಪ್ರವಾಹಗಳು ಯಾವ ಪ್ರದೇಶಕ್ಕೆ ಹೋದರೂ, ಹರಿಯುವ ನೀರಿನ ಕಿಲಕಿಲಗಾನ ಕಿವಿಯನ್ನು ಮುದ್ದಿಸುತ್ತಿತ್ತು. ಅಂಥ ನೋಟ ನನಗೆ ಸದಾ ಮೆಚ್ಚಿಕೆಯದು.ನನ್ನ ಮೆಚ್ಚಿಕೆಯ ರೀತಿ ಮೆಲ್ಲನೆ ನಡೆದು ಅಚೀಚೆ ಕಣ್ಣು ಹರಿಯನೆ ಆಸ್ವಾದಿಸುವ ಅಲಸಿಯದು. ಈ ಮಲೆನಾಡು ನನಗಿಂತಲೂ ಅಲಸ್ಯ ಪ್ರವೃತ್ತಿಯ ಜನಗಳಿಂದ ತುಂಬಿತ್ತು. ಜನಜೀವನವನ್ನು ಬಿಟ್ಟರೆ ಉಳಿದ ಜೀವ ಹಾಗಿಲ್ಲ. ಆನೆಗಳ ನಡೆಗೂ, ಇಲ್ಲಿಂದ ದನಕರುಗಳ ನಡೆಗೂ ಹೊಂದಿಕೆ ಬಹಳ. ಅದರಲ್ಲಿಯೂ ಮಲೆನಾಡಿನ ಎಮ್ಮೆಗಳು, ಕೋಣಗಳು, ಮಳೆಗಾಲ ಬಂದಿತೆಂದರೆ, ಹಸುರು ಮೇವಿಗೆ ಬರಗಾಲವಿಲ್ಲ".[೫೩]

ಕಾರಂತರ ಈ ಮಾತುಗಳನ್ನು ಪ್ರಸ್ತಾಪಿಸಲು ಮುಖ್ಯ ಹಿನ್ನಲೆಯೆಂದರೆ ಇಂತಹ ಸ್ಥಳದಲ್ಲಿ ಕಾದಂಬಕಾರರು ನಿಸರ್ಗವನ್ನು ತನ್ಮಯರಾಗಿ ಆಸ್ವಾದಿಸುವ ರೀತಿ, ಪಾರ್ವತಿ ಅಜ್ಜಿಯು ತುಳಸಿ ಕಟ್ಟೆಗೆ ಪೂಜೆ ಮಾಡುತ್ತಿರುವ ಪ್ರಸಂಗ, ನಮ್ಮ ಸಂಪ್ರದಾಯದ ಸಂಸ್ಕೃತಿಯ ಪ್ರತಿಬಿಂಬವಾಗಿ ಕಂಡು ಬರುತ್ತದೆ. ತುಳಸಿ ಅನೇಕ ರೋಗನಿವಾರಕ ಶಕ್ತಿಯುಳ್ಳ ಔಷಧಿ ಸಸ್ಯ ಮನೆಯ ಮುಂದೆ ಇದ್ದರೆ ಶುಭ ಸೂಚಕ ಎಂದು ಇಂದಿಗೂ ಭಾರತೀಯ ಕುಟುಂಬಗಳಲ್ಲಿ ನಂಬಿಕೆಯಿದೆ. ಈ ನಂಬಿಕೆಯೇ ಜನರಲ್ಲಿ ಪ್ರಕೃತಿಯನ್ನು ಅನುಭಾವಿಕ ದೃಷ್ಟಿಯಲ್ಲಿ ನೋಡಲು ಕಾರಣವಾಗಿದೆ. ಈ ದೃಷ್ಟಿಯಿಂದಲೇ ಕಾರಂತರುಪಾರ್ವತಿ ಅಜ್ಜಿಯ ಪಾತ್ರದಲ್ಲಿ ನಿಸರ್ಗರಾಧನೆಯ ನೆಲೆಯನ್ನು ತರುತ್ತಾರೆ.

ಒಟ್ಟಾರೆ ಈ ಕಾದಂಬರಿಯ ನಿರೂಪಕನು ತನ್ನ ಸ್ನೇಹಿತನ ಇಚ್ಛೆ ಮತ್ತು ಅವನ ಮಾನವೀಯ ಗುಣಗಳನ್ನು ಸಾಕಾರಗೊಳಿಸಲು ಪಡುವ ಪ್ರಯತ್ನಗಳು ಮತ್ತು ಸಫಲತೆಗಳನ್ನು ತಿಳಿಸುತ್ತದೆ. ಈ ಹಿನ್ನೆಲೆಯಲ್ಲಿ ಕಾರಂತರು ಮನುಷ್ಯನ ಭಾವನೆಗಳ ಜಂಜಾಟವನ್ನು ಕುರಿತು ಹೇಳುತ್ತಾರೆ.

'ಮರಳಿ ಮಣ್ಣಿಗೆ' ಕಾದಂಬರಿಯಲ್ಲಿ ಶಿವರಾಮಕಾರಂತರು ಮೂರು ತಲೆಮಾರುಗಳ ಕಥೆಯನ್ನು ಕುರಿತು ಹೇಳುತ್ತಾರೆ. ಒಂದು ತಲೆಮಾರಿನಿಂದ ಮತ್ತೊಂದು ತಲೆಮಾರಿನವರೆಗೆ ಅವರು ನಿಸರ್ಗದೊಂದಿಗೆ, ಭೂಮಿಯೊಂದಿಗೆ ಹೊಂದುವ ಸಂಬಂಧವು ವಿವಿಧ ರೀತಿಯಲ್ಲಿ ಕಂಡುಬರುತ್ತದೆ. ಕಾರಂತರು ತಮ್ಮ ಜನರ ಬಡತನದ ಜೀವನವನ್ನು ಈ ಕಾದಂಬರಿಯಲ್ಲಿ ಚಿತ್ರಿಸುತ್ತಾರೆ. ಮೂರು ತಲೆಮಾರಿನೊಳಗೆ ಕಾರಂತರು ಜೀವನದ ವಿವಿಧ ಮೌಲ್ಯಗಳನ್ನು ಅನ್ವೇಷಣೆ ಮಾಡಿದ್ದಾರೆ. ಈ ಅನ್ವೇಷಣೆಯಲ್ಲಿ ನಿಸರ್ಗದ ನೆಲೆಯಲ್ಲಿ ಮನುಷ್ಯನು ಹೊಂದಿರುವ ಅನುಭಾವಿಕ ನೆಲೆಯು ಮುಖ್ಯವಾಗಿದೆ.

ರಾಮಾ ಐತಾಳ, ಲಚ್ಚ, ಪಾರೋತಿ, ಸತ್ಯಭಾಮ, ಸರಸೋತಿ, ನಾಗವೇಣಿ, ರಾಮ, ಇವರು ಪ್ರಮುಖ ಪಾತ್ರಗಳು ರಾಮ ಐತಾಳ ಪಾರೋತಿ, ಸತ್ಯಭಾಮೆ, ಸರಸೋತಿಯ ಮೊದಲತಲೆಮಾರಿನ ಜನರು ಇವರು ಭೂಮಿಯೊಂದಿಗೆ ಸಂಬಂಧ ಹೊಂದಿರುತ್ತಾರೆ. ಅದೇ ರೀತಿಯಾಗಿ ಮೂರನೇ

---

೫೩. ಶಿವರಾಮ ಕಾರಂತ, ಮೂಕಜ್ಜಿಯ ಕನಸುಗಳು, ಪುಟ-೬೦

ತಲೆಮಾರಿನ ರಾಮ ವಿದ್ಯಾಭ್ಯಾಸದ ಸಲುವಾಗಿ ನಗರವನ್ನು ಸೇರಿ ನಂತರ ಮರಳಿ ಮನೆಗೆ ಬಂದಾಗ ಅವನ ಆನುಭಾವಿಕ ನೆಲೆಯನ್ನು ಸ್ಥಾಪಿಸಿಕೊಳ್ಳುವುದು ಮುಖ್ಯವಾಗಿದೆ.

ಮೂರನೇ ತಲೆಮಾರಿನ ರಾಮ ತನ್ನ ತಾಯಿಯೊಂದಿಗೆ ಮಗುವಾಗಿದ್ದಾಗಿನಿಂದಲೂ ಕಡಲಿನ ಬಗ್ಗೆ ಕೇಳುತ್ತಾನೆ. ಅದು–'ಕಡಲು ಎಂದರೆ ಎಂಥದ್ದು? ಎಂದು ಕೇಳುತ್ತಾರೆ. ಆಗ ನಾಗವೇಣಿ 'ದೊಡ್ಡಕೆರೆ ಎಂದು ಹೇಳುತ್ತಾಳೆ. ರಾಮ ಮಲಗಿದ್ದಾಗಲೂ ಕಡಲಿನ ಬಗ್ಗೆ ಕನವರಿಸುತ್ತಾನೆ. ಅದಕ್ಕೆ ನಾಗವೇಣಿ ಕಡಲಿನ ಬಳಿ ದಿನವು ಕರೆದೊಯ್ಯಲೇಬೇಕು. ಆಗ "ಅಂಗಳದಲ್ಲಿ ಕುಳಿತು, ತಾಯಿ ನಾಗವೇಣಿ ಆಕಾಶದಲ್ಲಿ ತೇಲುವ ತೆಳು ಮೋಡಗಳನ್ನು ದಿಟ್ಟಿಸುತ್ತಿದ್ದಾಳೆ. ರಾಮ ಅವಳನ್ನು 'ಅಮ್ಮ ಸಮುದ್ರಕ್ಕೆ ಹೋಗುವ ಎಂದನು. 'ಮಗು ಮುಸ್ಸಂಜೆಯಾಯಿತಲ್ಲ; ನಾಳೆ ಹೋದಾರಾಗದೇ! ಎಂದಳು ಆಕೆ. ಇಲ್ಲ ಈಗಲೇ ಹೋಗುವ ನನಗೆ ಇಲ್ಲಿ ಬೇಸರವಾಗುತ್ತದೆ. ನೀನು...ಆ ಪುಟ್ಟ ಕಾಲುಗಳು ಮರಳಿನ ಚುಂಬಿಸುವ ತನಕ ಅವನ ಕಾಲುಗಳು ನಿಂತಲ್ಲಿ ನಿಲ್ಲಲಿಲ್ಲ – ತಾಯಿಯ ಬಳಿ ಓಡೋಡಿ ಬಂದನು....ಅಮ್ಮಾ ಎಷ್ಟು ಚಂದ! ಅಲ್ಲವೇ ಅಮ್ಮಾ? ಎಂದು ಮೈಮರೆವಿನಲ್ಲೆ ನುಡಿಯುತ್ತಿದ್ದ.

ಇಬ್ಬರು ಕಡಲಿನ ದಂಡೆಯ ಬಳಿಗೆ ಬಂದರು "*ಮಗು ತನ್ನ ಕಪೋಲಗಳನ್ನು ತಾಯಿಯ ಕೈಗಿರಿಸಿಕೊಂಡು, ಕಡಲನ್ನು ಇಳಿಯುತ್ತಿದ್ದ, ಹೊನ್ನ ಸೂರ್ಯನನ್ನು ಕಾಣುತ್ತಿತ್ತು. ಆ ಗೊಂಬೆಯ ಮಗುವಿನ ಕಾಲ ಬುಡದಿಂದ ದಿಗಂತದ ಅಂಚಿನ ತನಕ ಒಂದು ಸುವರ್ಣ ಸ್ತಂಭವನ್ನು ನಟ್ಟಿತ್ತು. ನಾಗವೇಣಿಯು ಸೂರ್ಯದೇವರನ್ನು ಕಾಣುತ್ತಾ ಕಣ್ಮುಚ್ಚಿದಳು. ಅವಳ ಕೈಗಳು ಭಕ್ತಿಯಿಂದ ಅವನ ಕಡೆಗೆ ಒಡ್ಡಿದವು.*"[೫೪] ರಾಮ ಮತ್ತು ನಾಗವೇಣಿ ಇಬ್ಬರು ಕಡಲನ್ನು ಕಂಡು ಸಂತೋಷ ಪಡುತ್ತಾರೆ. ರಾಮ ಇಲ್ಲಿ ಮುಗ್ಧ. ತಾಯಿ ನಾಗವೇಣಿ ತನ್ನ ಬೇಸರ ಮತ್ತು ದುಃಖವನ್ನು ಕಳೆಯಲು ಕಡಲು ಮತ್ತು ಸೂರ್ಯನನ್ನು ದೇವರೆಂದು ಭಾವಿಸಿ ಅವುಗಳ ಬಳಿ ಅಂತರ್ಯದಲ್ಲಿ ಹೇಳಿಕೊಳ್ಳುತ್ತಾ; ಆನುಭಾವಿಕ ನೆಲೆಯನ್ನು ಹೊಂದುತ್ತಾಳೆ.

ರಾಮ ವಿದ್ಯಾಭ್ಯಾಸಕ್ಕಾಗಿ ಹೋಗುವ ಸಂದರ್ಭದಲ್ಲಿ ಕೋಡಿ ಕಡಲನ್ನು ಕಂಡು ಅವನು ಸಂತೋಷ ಪಡುತ್ತಾನೆ. ಬೊಂಬಾಯಿ ಕಡಲನ್ನು ಕಂಡು ನೋವಿನಿಂದ ಹೇಳುವ ಮಾತಿನಲ್ಲಿ ನಮ್ಮ ಮನೆ ಇರುವುದು ಕಡಲ ತೀರದಲ್ಲಿ ಆ ಕಡೆ ನದಿ ಎಂದು ಬಣ್ಣಿಸಿದನು. ಕಡಲಿನ ವಿಚಾರ ಹೇಳುವಾಗಲೆಲ್ಲ 'ಮುಂಬಯಿಯ ಮಲೀನ ಸಮುದ್ರವು ನನಗೆ ವ್ಯಥೆಯನ್ನು ಕೊಡುತ್ತದೆ ಎನ್ನುತ್ತಿದ್ದ.' ಇದರಿಂದ ಅವನಲ್ಲಿರುವ ನಿಸರ್ಗ ಪ್ರೇಮ ತಿಳಿಯುತ್ತದೆ.

ಕಾರಂತರು ರಾಮನು ಮುಂಬೈಯಿಂದ ಕೋಡಿಗೆ ಉದ್ಯೋಗವಿಲ್ಲದೆ ತನ್ನ ಸ್ವಂತ ಉದ್ಯೋಗಕ್ಕಾಗಿ ಒಂಟಿರುಗಿದಾಗ ರಾಮನು ನಿಸರ್ಗದ ನೆಲೆಯಾದ ಕಡಲಿನ ಮೇಲೆ ಇಟ್ಟಿರುವ

---

೫೪. ಶಿವರಾಮ ಕಾರಂತ, ಮರಳಿಮಣ್ಣಿಗೆ, ಪುಟ-೨೭೦

ಪ್ರೀತಿಯನ್ನು ಹೇಳುತ್ತಾನೆ. ಆತನು ಚಿತ್ರ ಬರೆಯುವುದನ್ನು ಅರ್ಧಕ್ಕೆ ನಿಲ್ಲಿಸಿದ್ದನು. ಅದು ಕಡಲಿನ ಸುಂದರ ಚಿತ್ರ ಅದಕ್ಕೆ ನಾಗವೇಣಿಗೆ ಹೇಳಿ ಬರುತ್ತಾನೆ. ರಾಮನು "ಮರಳಿನಲ್ಲಿ ಕುದುರೆ ಓಡಿದಂತೆ ಓಡಿದನು. ಅದರ ದಂಡೆ ಬರಲು ದಬಕ್ಕನೆ ಕುಳಿತು ಬಿಟ್ಟನು. ಮುಂದೆ ಆ ಹನಿ ಗಾಳಿಗಳಿಗೆ ಮುದುರಿಕೊಂಡು ಕಡಲಿನ ಅಲೆಗಳನ್ನು ಎಣಿಸತೊಡಗಿದನು.

"ಬಾನನ್ನೂ, ಹನೆ ಮರಗಳನ್ನು ತಲೆ ಕೆಳಗಾಗಿ ಬಿಂಬಿಸಿತ್ತು ಅ ಶಾಂತ ನೆರಳಿನ ಆಟವು ಅಲ್ಲಿನ ಕಡಲಿನ ಎದುರಿಗೆ ಪಡಗಡಲು, ತನ್ನ ಆವೇಶಕ್ಕೆತಾನೆ ನಕ್ಕು ಉರುಳುವಂತೆ ಕಾಣಿಸುತ್ತಿತ್ತು. ರಾಮ ಈ ಚಿಂತೆ ಆಚೆಗೆ ನಿಸರ್ಗದ ಶಾಂತಿಯಿಂದ ಕೂಡಿ ತಿರುಗಿಸಿ ನೋಡುತ್ತಲೇ ಇದ್ದನು".[೫೫] *ಹೀಗೆ ರಾಮ ಕಡಲನ್ನು ನೋಡಿ ಅದನ್ನು ಆನುಭಾವಿಕ ನೆಲೆಯಲ್ಲಿ ದೇವರೆಂದು ಭಾವಿಸಿಕೊಂಡು ಅದರಲ್ಲಿ ತನ್ಮಯನಾಗುವುದನ್ನು ಗುರುತಿಸಬಹುದು.* ಈ ಕುರಿತು ಪೋಲಂಕಿ ರಾಮಮೂರ್ತಿಯವರು ಹೇಳುವುದೇನೆಂದರೆ "ರಾಮ *ನಿಜಕ್ಕೂ ಮಣ್ಣಿನವನಲ್ಲ; ಕಡಲಿನ ಬಗ್ಗೆ ಹುಟ್ಟಿನಿಂದಲೇ ಕಡಲನ್ನು ಕನವರಿಸುತ್ತಿದ್ದ ರಾಮ ಬೆಳೆಯುವುದು ಕಡಲ ಮಡಿಲಲ್ಲೇ, ಕಡಲಿನ ಕಾಣ್ಕೆಯಲ್ಲೆ, ಕೋಡಿ, ಕಡಲು ಬಿಟ್ಟರೆ, ಮದ್ರಾಸಿನ ಕಡಲು; ಅದನ್ನು ಬಿಟ್ಟರೆ ಬೊಂಬಾಯಿ ಕಡಲು.*[೫೬]

ರಾಮನ ತಾಯಿಯು ಪ್ರಕೃತಿಯನ್ನು ಸವಿಯುವ, ಪ್ರಸಂಗದಲ್ಲಿ ಆನುಭಾವಿಕ ನೆಲೆಯನ್ನು ಗುರ್ತಿಸಬಹುದು. ಲಚ್ಚನೊಂದಿಗೆ ತಿರುಗಾಡಲೂ ಹೋದಾಗ ಸುತ್ತಲಿನ ಕಾಡು ಗುಡ್ಡಗಳನ್ನು, ಆ ಕಪಿ ರಾಜ್ಯವನ್ನು ಕಂಡು ಎಷ್ಟು ಚೆಂದದ ಉರು ಇದು!ಎಂದು ಉದ್ಗಾರ ತೆಗೆಯುತ್ತಾಳೆ. ಕೋಡಿಯಿಂದ ಕೊಕ್ಕರಣೆಗೆ ಗುರಿಕಾರರ ಮನೆಯ ಮದುಮಗ, ಶಿವಯ್ಯ ಪುರೋಹಿತರು ಮಳೆಗಾಲದ ಸಮಯದಲ್ಲಿ ನದಿಯಲ್ಲಿ ದೋಣಿಯ ಪ್ರಯಾಣದಲ್ಲಿ ದಿಬ್ಬಣಹೊರಟರು. ಆಗ ಪ್ರತಾಪನಾದ ಗಾಳಿ ಬೀಸಿತು. ಇದನ್ನು ಕಂಡು ದಿಬ್ಬಣಿಗರು *"ಒಂದೇ ಒಂದು ಕೊರತೆ ಮಳೆ. ಮನಸ್ಸು ಮಾಡಿದರೆ, ಗಾಳಿ ರುಮುರುಮು ಬೀಸಿದರೆ, ಜೀವ ಸಹಿತವಾಗಿ ಕೊಕ್ಕರಣೆ ಸೇರುವುದೂ ಸಮ. ಕಾಶಿಯಾತ್ರೆಯನ್ನು ಮುಗಿಯುವುದು ಸಮ ಆದರೂ ಅಣೆಗುಡ್ಡೆಯ ವಿನಾಯಕನಿಗೆ ಸಾವಿರ ತೆಂಗಿನ ಕಾಯಿಗಳ ಹರಕೆಯನ್ನು ಹೇಳಿ, ಅದೇ ಎದೆ ಧೈರ್ಯದಿಂದ ದಿಬ್ಬಣ ಹೊರಟಿತು.*[೫೭]

ಹೀಗೆ ದಿಬ್ಬಣಿಗರು ಪ್ರಕೃತಿಯ ವೈಪರೀತ್ಯಕ್ಕೆ ದೇವರನ್ನು ಬೇಡಿಕೊಳ್ಳುವುದರಲ್ಲಿ ನಿಸರ್ಗದ ಬಗ್ಗೆ ಮಾನವನಿಗಿರುವ ಭಯ ತಿಳಿಯುತ್ತದೆ. ಈ ಭಯವೇ ಮನುಷ್ಯನು ದೇವರನ್ನು ಪೂಜಿಸಲು ಕಾರಣವಾಯಿತು. ಹೀಗೆ ಮರಳಿಮಣ್ಣಿಗೆ ಕಾದಂಬರಿಯಲ್ಲಿ ಮೂರು ತಲೆಮಾರಿನ ಪಾತ್ರಗಳಲ್ಲಿ ಮೊದಲ ತಲೆಮಾರು ಮತ್ತು ಮೂರನೇ ತಲೆಮಾರಿನಲ್ಲಿ ನಿಸರ್ಗದ ನೆಲೆಯಲ್ಲಿ ಆನುಭಾವಿಕ ಪ್ರಜ್ಞೆಯನ್ನು ಬೆಳೆಸಿಕೊಂಡಿರುವುದನ್ನು ಗುರುತಿಸಬಹುದು.

---

೫೫. ಅದೇ. ಪುಟ ೨೯೫, ೪೦೮.
೫೬. ಟಿ.ಪಿ.ಅಶೋಕ (ಸಂ), ಕಾರಂತ ಮಂಥನ, ಪುಟ-೩೯೫, ೪೦೮
೫೭. ಶಿವರಾಮ ಕಾರಂತ, ಮರಳಿ ಮಣ್ಣಿಗೆ, ಪುಟ-೧೨೦

'ಶನೀಶ್ವರನ ನೆರಳಿನಲ್ಲಿ' ಕಾದಂಬರಿಯಲ್ಲಿ ಕಾಡು ಜೀವನವನ್ನು ನಡೆಸುತ್ತಿರುವ ಜನಗಳಲ್ಲಿ ಪ್ರಮುಖರೆಂದರೆ ಕಾವೇರಮ್ಮ, ಪಾಟಾಳಿಶಿವಣ್ಣ, ಶಂಕರ ಜೋಯಿಷರು. ಈ ಪಾತ್ರಗಳು ನಿಸರ್ಗದ ನೆಲೆಯಲ್ಲಿ ತಮ್ಮ ಅನುಭಾವಿಕ ನೆಲೆಯನ್ನು ಸ್ಥಾಪಿಸಿಕೊಂಡಿರುವ ಬಗೆ ಇಲ್ಲಿ ಪ್ರಮುಖವಾಗಿದೆ ನಿರೂಪಕನು ಇಲ್ಲಿ ಮುಖ್ಯಪಾತ್ರವಾಗಿ ಕಂಡುಬರುತ್ತಾರೆ. ನಿರೂಪಕರು ಈ ಬಗ್ಗೆ ಹೇಳುತ್ತಾರೆ. ಪಶ್ಚಿಮ ಘಟ್ಟದ ಸೆರಗು ನಿಸರ್ಗಪ್ರಿಯರಿಗೂ, ಕವಿಗಳಿಗೂ ವಾಸಕ್ಕೆ ಅಲ್ಲದಿದ್ದರೂ ನೋಡುವುದಕ್ಕೆ, ಕಣ್ಮನಗಳನ್ನು ತಣಿಸುವುದಕ್ಕೆ ನಂದನವನ.ಇದು ನಿಸರ್ಗ ದತ್ತವಾದ ವನ. ವರ್ಷದ ಆರು ತಿಂಗಳು ಮೇಘರಾಜನಿಂದ ಬೆದರಿಸಿಕೊಂಡರೂ, ಅಭಿಷೇಕ ಮಾಡಿಕೋಳ್ಳುವ ವನ ಎಲ್ಲೆಂದರಲ್ಲಿ ಪರ್ವತ, ಕಾಡು, ಜರಿ, ಅಬ್ಬಿಗಳು ಬೆಡಗನ್ನು ಭವ್ಯತೆಯೊಂದಿಗೆ ಮೇಳವಿಸಿ ತೋರಿಸುವ ಸುಂದರ ಧಾಮ. ಎಂದು ತಮ್ಮ ನಿಸರ್ಗಪ್ರೇಮವನ್ನು ತಿಳಿಸುತ್ತಾರೆ.

"ನಾನು ಆಗಂತುಕನಾಗಿ, ಸೀತಾನದಿಯ ಜಲಪಾತವನ್ನು ಕಾಣಲು ತವಕಿಸಿ, ಕೆಲವು ಗೆಳೆಯರೊಂದಿಗೆ ಈ ಪ್ರದೇಶಕ್ಕೆ ಹೋಗಿದ್ದೆ, ಅಲ್ಲಿನ ಸುಂದರ ಜಲಪಾತವನ್ನು ಕಂಡಿದ್ದೆ. ಅಲ್ಲಿಗೆ ವರ್ಷದ ಯಾವುದೋ ಒಂದು ಅಮವಾಸ್ಯೆಯಲ್ಲಿ ಭಕ್ತಾಧಿಗಳು ಬಂದು ಸ್ನಾನ ಮಾಡಿ ಹೋಗುತ್ತಾರೆಂದು ಕೇಳಿದ್ದೆ"[೫೮] ಎಂದು ಅಲ್ಲಿನ ಅನುಭಾವಿಕ ನೆಲೆಯನ್ನು ನಿಸರ್ಗದ ನೆಲೆಯಲ್ಲಿ ಗುರ್ತಿಸುತ್ತಾರೆ.

ಈ ಕಾದಂಬರಿ ಕುರಿತು ಕೀರ್ತನಾಥ ಕುರ್ತಕೋಟಿರವರು *"ಶನೀಶ್ವರನ ನೆರಳಲ್ಲಿ ಕಾದಂಬರಿಯಲ್ಲಿ 'ಬೆಟ್ಟದ ಜೀವ' ದಲ್ಲಿಯಂತೆ ಇಲ್ಲಿಯೂ ಲೇಖಕರು ನಾಗರಿಕತೆಯ ಸೊಂಕಿನಿಂದ ದೂರವಾದ ಒಂದು ಊರು ಸೇರುತ್ತಾರೆ. ಶನೀಶ್ವರನ ಸೇವೆಗೆ ನಿಂತ ಪರಮೇಶ್ವರ ಅಡಿಗಳ ಸಂಸಾರದೊಡನೆ ಆತ್ಮೀಯವಾದ ಸಂಬಂಧವನ್ನು ಬೆಳೆಸುತ್ತಾರೆ, ಕಾವೇರಮ್ಮ, ಪಾಟಾಳಿ ಶಿವಣ್ಣ, ಶಂಕರ ಜೋಯಿಸರು, ಇಂತಹ ವ್ಯಕ್ತಿಗಳೊಡನೆ ಗಾಡವಾದಗ ಕ್ರಮೇಣ ಅಲ್ಲಿಯ ಪರಿಸ್ಥಿಯ ಅರಿವಾಗುತ್ತದೆ. ಅಣ್ಣತಮ್ಮಂದಿರಲ್ಲಿಯ ಬದುಕು,ಆಸ್ತಿಯ ಸಲುವಾಗಿ ಕಾದಾಟ ಬಡತನ, ಆಲಸ್ಯ, ಗತ್ತುಗಾರಿಕೆ ಇವೆಲ್ಲ ಸಾಮಾಜಿಕವಾಗಿ ಅವನರಿಯುವ ಲಕ್ಷಣಗಳಾಗಿವೆ, ಆದರೆ ಅವುಗಳ ಮಧ್ಯದಲ್ಲಿಯೂ ವ್ಯಕ್ತಿಗತವಾದ ಕೆಲವು ಮೌಲ್ಯಗಳಿವೆ. ಕಾವೇರಮ್ಮನ ಮನಸ್ಸಿನ ಔದಾರ್ಯ, ಪಾಟಾಳಿ ಶಿವಣ್ಣನ ಮನುಷ್ಯ ಸಹನೆಯನ್ನು ಮೀರಿದ ಕಾರುಣ್ಯ, ಪರಮೇಶ್ವರ ಅಡಿಗಳ ಕಲೆಯ ನೈಪುಣ್ಯ ಒಕ್ಕಲು ಮಕ್ಕಳ ಅಕೃತ್ರಿಮಯವಾದ ಪ್ರೀತಿ-ಇಂಥ ಮೌಲ್ಯಗಳೂ ಅದೇ ಜೀರ್ಣವಾದ ಜಗತ್ತಿಗೆ ಸೇರಿದವುಗಳಾಗಿವೆ".*[೫೯] ನಾರಾಯಣ ಅಡಿಗಳ ಹೊರಚಾವಡಿಯಲ್ಲಿ ಕುಳಿತು ನಿರೂಪಕರು, ಹೊರಗಣ ಗದ್ದೆಗಳು, ಕಿರಿಯ ಕೊಳ, ಅಂಗಳ, ತೆಂಗಿನ ಮರಗಳು, ಅವುಗಳ ಮೇಲೆ ಕುಣಿದಾಡುತ್ತಿದ್ದ ಇಳಿ ಬಿಸಿಲು ನನ್ನಲ್ಲಿ ಮೊದಲಿನ ಉತ್ಸಾಹವನ್ನೇ ತುಂಬಿಸಿದವು. ಹೀಗೆ ಕಾರಂತರು ನಿಸರ್ಗವನ್ನು ಕುರಿತು ಬರೆಯುತ್ತಾರೆ. ನಿರೂಪಕರು ಪರಮೇಶ್ವರ ನಿಸರ್ಗದ ನೆಲೆಯಲ್ಲಿ ಬರುವ ಸೂರ್ಯ, ನದಿ, ಬೆಟ್ಟ, ಮರಗಿಡಗಳನ್ನು ಕಂಡು ಸಂತೋಷಪಡುತ್ತಾರೆ. ಆಗ ಅವರು ಅಡಿಗಳು ಬಾರದಿದ್ದ ಕಾರಣವಾಗಿ ತೀರ ನಿರಾಶನಾಗುತ್ತಾರೆ. ಆಗ *"ಬೆಟ್ಟವನ್ನು ಇಳಿದು ನದಿಯ ತನಕ ಹೋಗಿ, ನದಿ ದಂಡೆಯ ಮುಗ್ಗುಲಲ್ಲಿ ತಪಸ್ಸು*

---

೫೮. ಶಿವರಾಮ ಕಾರಂತ, ಶನೀಶ್ವರನ ನೆರಳಿನಲ್ಲಿ, ಪುಟ-೦೭
೫೯. ಟಿ.ಪಿ. ಅಶೋಕ (ಸಂ), ಶಿವರಾಮ ಕಾರಂತ, ಪುಟ-೧೪೯

ಮಾಡುತ್ತಾ ಕುಳಿತನೆಂದರೂ ತಪ್ಪಿಲ್ಲ ಎನ್ನುತ್ತಾ; ನಿರ್ಮಲ ಜಲೆಯಾದ ಸೀತಾ ನದಿಯು ದೊಡ್ಡ ದೊಡ್ಡ ಉರುಟು ಬಂಡೆಗಳ ಮೇಲೆ ನಕ್ಕು ನೋಡುವ ನೋಟ ನನ್ನ ಮನಸ್ಸನ್ನು ಬಹಳ ಹೊತ್ತು ಆಕರ್ಷಿಸಿ ಹಿಡಿಯಿತು. ಏನು ಅದರ ಒಯ್ಯು! ಕಾಲುಗಂಟು ಮುಳುಗುವ ಊರಲ್ಲಿ ನಿಂತರು ನನ್ನನ್ನೂ ಸೆಳೆಯುವಷ್ಟು ಧಿಮಾಕು ಅದಕ್ಕಿದ್ದಿತ್ತು. ಆಚೀಚೆ ಹರಡಿ ಬಿದ್ದಿದ್ದ ಉರುಟಾದ ಕಲ್ಲುಗಳು ನೀರಿನಿಂದ ತೊಳೆ ತೊಳೆದು ಎಷ್ಟೊಂದು ಸ್ವಚ್ಛವಾಗಿದ್ದವು. ಮಾನವ ಜೀವನ ಇಷ್ಟೊಂದು ಶಕ್ತಿಯುತವೂ, ಸುಂದರವೂ, ಶುಚಿಯುಳ್ಳದ್ದೂ ಆಗಿದ್ದರೆ ಇನ್ನೇನು ಬಯಸಬೇಕಾಗಿದೆ ಎನಿಸಿತು ಮನಸ್ಸಿಗೆ".[೬೦]

ಹೀಗೆ ಕಾರಂತರು ಕಾದಂಬರಿಯ ಉದ್ದಕ್ಕೂ ನಿಸರ್ಗವನನ್ನು ನೋಡಿ ಅದರ ವರ್ಣನೆಯನ್ನು ಮನತುಂಬಿ ಮಾಡುತ್ತಾರೆ. ಹಾಗೆ ಮಾಡುವುದರ ಮುಖಾಂತರ ತಾವೇ ನಿರೂಪಕ ರಾಗಿ ಅನುಭವಿಸುವುದು ನಮಗೆ ಇಷ್ಟವಾಗುತ್ತದೆ. ಕಾವೇರಮ್ಮ ತನ್ನ ಮಕ್ಕಳಿಗೆ ಭೂಮಿಯನ್ನು ಹಿಸ್ಸೆ ಮಾಡುವಾಗ ಭೂಮಿಯನ್ನು ದೇವರಿಗೆ ಬಿಡಲು ಕೋರುತ್ತಾಳೆ. *"ಲಕ್ಷ್ಮೀನಾರಾಯಣ ದೇವರಿಗೆ ಸಲ್ಲುವಂತಾಗಲಿ ಶಿವಣ್ಣಿನಿಗೆ ದೇವರಿಗೆ ವಾರಕ್ಕೊಮ್ಮೆ ಮಂಗಳಾರತಿ ಉತ್ಸವ ಮಾಡಿಸಿ ಬರಲಿ"*[೬೧] ಎನ್ನುತ್ತಾರೆ. ಹೀಗೆ ಕಾವೇರಮ್ಮ ದೇವರಿಗೆ ಅನುಭಾವಿಕ ನೆಲೆಯಲ್ಲಿ ಭೂಮಿಯನ್ನು ಕೊಟ್ಟಿರುವ ರೀತಿಯಲ್ಲಿ ನಮ್ಮ ಭಾರತೀಯ ಸಮಾಜದಲ್ಲಿ ಈ ನಂಬಿಕೆಯನ್ನು ಗುರ್ತಿಸಬಹುದು.

'ಮೂಕಜ್ಜಿಯ ಕನಸುಗಳು' ಕಾದಂಬರಿಯಲ್ಲಿ ಕಾರಂತರು ಐತಿಹಾಸಿಕ, ಮತ್ತು ಪುರಾಣ ನೆಲೆಗಳನ್ನು ತರುತ್ತಾರೆ. ಇಲ್ಲಿ ಮೂಕಜ್ಜಿಯೆಂದರೆ ಮೂಕಾಂಬಿಕೆ. ಇವಳು ಚಿಕ್ಕವಯಸ್ಸಿನಲ್ಲೇ ಮದುವೆಯಾಗಿ ವಿಧವೆಯ ಪಟ್ಟ ಪಡೆದವಳು. ಇವಳ ಮೊಮ್ಮಗ ಸುಬ್ರಾಯ ಇವರಿಬ್ಬರು ಸಂಶೋಧನಾ ಪ್ರಜ್ಞೆಯುಳ್ಳವರು. ಮೂಕಜ್ಜಿ ಅಶ್ವತ್ಥ ಕಟ್ಟೆಯ ಮೇಲೆ ಕುಳಿತ ತನ್ನ ಒಳಗಣ್ಣಿನಿಂದ ಭೂತ, ವರ್ತಮಾನ ಮತ್ತು ಭವಿಷತ್ಕಾಲಗಳ ವಿಷಯಗಳನ್ನು ಗ್ರಹಿಸಿ ಹೇಳುತ್ತಾಳೆ. ಇದಕ್ಕೆ ತಕ್ಕಂತೆ ಮೊಮ್ಮಗ ಸುಬ್ರಾಯ ಕಾಡಿನಲ್ಲಿ ತಿರುಗಾಡುವುದು ಇತಿಹಾಸ ದಾಖಲೆಗಳನ್ನು ಸಂಗ್ರಹಿಸುವುದರ ಮೂಲಕ ನಿಸರ್ಗದ ನೆಲೆಯಲ್ಲಿ ತನ್ನನ್ನು ಗುರುತಿಸಿಕೊಳ್ಳುತ್ತಾನೆ. ಮುಕಜ್ಜಿ ನಿಸರ್ಗದ ನೆಲೆಗಳನ್ನು ತಮ್ಮ ದೃಷ್ಟಾಂತಗಳ ಮುಖಾಂತರ ಹೇಳುತ್ತಾ ಮನುಷ್ಯನ ಅನುಭವಿಕ ನೆಲೆಗಳನ್ನು ಗುರ್ತಿಸುತ್ತಾಳೆ. ಈ ಕಾದಂಬರಿ ಕುರಿತು ಡಿ.ಎ.ಶಂಕರ್ ಅವರು. *"ಕಾರಂತರಿಗೆ ಹೇಗೊ ಹಾಗೆ ಈ ಮೂಕಜ್ಜಿಗು ಬಾಳ್ವೆಯೇ ಆದಿ; ಅಂತ್ಯ' ಅದರಲ್ಲೇ ಅವರಿಗೆ ಅಗಾಧ ವಿಶ್ವಾಸ ಈನೆಲದ ಬದುಕು, ಈ ನೆಲದ ಜನರ ಸುಖ ದುಃಖ ಅವರಿಗೆ ಅತ್ಯಂತ ಮುಖ್ಯವಾದವು. ಸಹನ ಶಕ್ತಿ, ಬದುಕುವ ಛಲ, ನಿಸರ್ಗಶಕ್ತಿಯ ನಿಗೂಢತೆಯನ್ನು ಒಪ್ಪಿ ಅವರ ಬೆಳಕಿನಲ್ಲಿ ಹಿತವಾಗಿ ಬಾಳುವುದು ಅವರ ಧೈರ್ಯ".*[೬೨]

ಅಂದರೆ ನಿಸರ್ಗದ ನೆಲೆಯಲ್ಲಿ ಬದುಕುತ್ತಿರುವ ಮನುಷ್ಯನಿಗೆ ಅದೇ ಮುಖ್ಯ. ಆದ್ದರಿಂದ ಮನುಷ್ಯ ಇದನ್ನು ಆನುಭಾವಿಕ ದೃಷ್ಟಿಯಲ್ಲಿ ನೋಡುತ್ತಾನೆ ಇಲ್ಲಿ ಮೂಕಜ್ಜಿಯು ಸಹ ನಿಸರ್ಗವನ್ನು

೬೦. ಶಿವರಾಮಕಾರಂತ, ಶನೀಶ್ವರನ ನೆರಳಿನಲ್ಲಿ ಪುಟ-೧೧೪
೬೧. ಅದೇ, ಪುಟ-೧೮೮
೬೨. ಜಿ.ಎಸ್.ಶಿವರುದ್ರಪ್ಪ, ಕಾದಂಬರಿಕಾರರಾಗಿ ಕಾರಂತ, ಪುಟ-೮೪

ಮಾಡುತ್ತಾ ಕುಳಿತನೆಂದರೂ ತಪ್ಪಿಲ್ಲ ಎನ್ನುತ್ತಾ; ನಿರ್ಮಲ ಜಲೆಯಾದ ಸೀತಾ ನದಿಯು ದೊಡ್ಡ ದೊಡ್ಡ ಉರುಟು ಬಂಡೆಗಳ ಮೇಲೆ ನಕ್ಕು ನೋಡುವ ನೋಟ ನನ್ನ ಮನಸ್ಸನ್ನು ಬಹಳ ಹೊತ್ತು ಆಕರ್ಷಿಸಿ ಹಿಡಿಯಿತು. ಏನು ಅದರ ಒಯ್ಯಾ! ಕಾಲುಗಂಟು ಮುಳುಗುವ ಊರಲ್ಲಿ ನಿಂತರು ನನ್ನನ್ನೂ ಸೆಳೆಯುವಷ್ಟು ಧಿಮಾಕು ಅದಕ್ಕಿದ್ದಿತ್ತು. ಆಚೀಚೆ ಹರಡಿ ಬಿದ್ದಿದ್ದ ಉರುಟಾದ ಕಲ್ಲುಗಳು ನೀರಿನಿಂದ ತೊಳೆ ತೊಳೆದು ಎಷ್ಟೊಂದು ಸ್ವಚ್ಛವಾಗಿದ್ದವು. ಮಾನವ ಜೀವನ ಇಷ್ಟೊಂದು ಶಕ್ತಿಯುತವೂ, ಸುಂದರವೂ, ಶುಚಿಯುಳ್ಳದ್ದೂ ಆಗಿದ್ದರೆ ಇನ್ನೇನು ಬಯಸಬೇಕಾಗಿದೆ ಎನಿಸಿತು ಮನಸ್ಸಿಗೆ".[೬೦]

ಹೀಗೆ ಕಾರಂತರು ಕಾದಂಬರಿಯ ಉದ್ದಕ್ಕೂ ನಿಸರ್ಗವನನ್ನು ನೋಡಿ ಅದರ ವರ್ಣನೆಯನ್ನು ಮನತುಂಬಿ ಮಾಡುತ್ತಾರೆ. ಹಾಗೆ ಮಾಡುವುದರ ಮುಖಾಂತರ ತಾವೇ ನಿರೂಪಕರಾಗಿ ಅನುಭವಿಸುವುದು ನಮಗೆ ಇಷ್ಟವಾಗುತ್ತದೆ. ಕಾವೇರಮ್ಮ ತನ್ನ ಮಕ್ಕಳಿಗೆ ಭೂಮಿಯನ್ನು ಹಿಸ್ಸೆ ಮಾಡುವಾಗ ಭೂಮಿಯನ್ನು ದೇವರಿಗೆ ಬಿಡಲು ಕೋರುತ್ತಾಳೆ. *"ಲಕ್ಷ್ಮೀನಾರಾಯಣ ದೇವರಿಗೆ ಸಲ್ಲುವಂತಾಗಲಿ ಶಿವಣ್ಣಿನಿಗೆ ದೇವರಿಗೆ ವಾರಕ್ಕೊಮ್ಮ ಮಂಗಳಾರತಿ ಉತ್ಸವ ಮಾಡಿಸಿ ಬರಲಿ"*[೬೧] ಎನ್ನುತ್ತಾರೆ. ಹೀಗೆ ಕಾವೇರಮ್ಮ ದೇವರಿಗೆ ಅನುಭಾವಿಕ ನೆಲೆಯಲ್ಲಿ ಭೂಮಿಯನ್ನು ಕೊಟ್ಟಿರುವ ರೀತಿಯಲ್ಲಿ ನಮ್ಮ ಭಾರತೀಯ ಸಮಾಜದಲ್ಲಿ ಈ ನಂಬಿಕೆಯನ್ನು ಗುರ್ತಿಸಬಹುದು.

'ಮೂಕಜ್ಜಿಯ ಕನಸುಗಳು' ಕಾದಂಬರಿಯಲ್ಲಿ ಕಾರಂತರು ಐತಿಹಾಸಿಕ, ಮತ್ತು ಪುರಾಣ ನೆಲೆಗಳನ್ನು ತರುತ್ತಾರೆ. ಇಲ್ಲಿ ಮೂಕಜ್ಜಿಯೆಂದರೆ ಮೂಕಾಂಬಿಕೆ. ಇವಳು ಚಿಕ್ಕವಯಸ್ಸಿನಲ್ಲೇ ಮದುವೆಯಾಗಿ ವಿಧವೆಯ ಪಟ್ಟ ಪಡೆದವಳು. ಇವಳ ಮೊಮ್ಮಗ ಸುಬ್ರಾಯ ಇವರಿಬ್ಬರು ಸಂಶೋಧನಾ ಪ್ರಜ್ಞೆಯುಳ್ಳವರು. ಮೂಕಜ್ಜಿ ಅಶ್ವತ್ಥ ಕಟ್ಟೆಯ ಮೇಲೆ ಕುಳಿತ ತನ್ನ ಒಳಗಣ್ಣಿನಿಂದ ಭೂತ, ವರ್ತಮಾನ ಮತ್ತು ಭವಿಷತ್ಕಾಲಗಳ ವಿಷಯಗಳನ್ನು ಗ್ರಹಿಸಿ ಹೇಳುತ್ತಾಳೆ. ಇದಕ್ಕೆ ತಕ್ಕಂತೆ ಮೊಮ್ಮಗ ಸುಬ್ರಾಯ ಕಾಡಿನಲ್ಲಿ ತಿರುಗಾಡುವುದು ಇತಿಹಾಸ ದಾಖಲೆಗಳನ್ನು ಸಂಗ್ರಹಿಸುವುದರ ಮೂಲಕ ನಿಸರ್ಗದ ನೆಲೆಯಲ್ಲಿ ತನ್ನನ್ನು ಗುರುತಿಸಿಕೊಳ್ಳುತ್ತಾನೆ. ಮುಕಜ್ಜಿ ನಿಸರ್ಗದ ನೆಲೆಗಳನ್ನು ತಮ್ಮ ದೃಷ್ಟಾಂತಗಳ ಮುಖಾಂತರ ಹೇಳುತ್ತಾ ಮನುಷ್ಯನ ಆನುಭವಿಕ ನೆಲೆಗಳನ್ನು ಗುರ್ತಿಸುತ್ತಾಳೆ. ಈ ಕಾದಂಬರಿ ಕುರಿತು ಡಿ.ಎ.ಶಂಕರ್ ಅವರು. *"ಕಾರಂತರಿಗೆ ಹೇಗೊ ಹಾಗೆ ಈ ಮೂಕಜ್ಜಿಗು ಬಾಳ್ವೆಯೇ ಆದಿ; ಅಂತ್ಯ' ಅದರಲ್ಲೇ ಅವರಿಗೆ ಅಗಾಧ ವಿಶ್ವಾಸ ಈನೆಲದ ಬದುಕು, ಈ ನೆಲದ ಜನರ ಸುಖ ದುಃಖ ಅವರಿಗೆ ಅತ್ಯಂತ ಮುಖ್ಯವಾದವು. ಸಹನ ಶಕ್ತಿ, ಬದುಕುವ ಛಲ, ನಿಸರ್ಗಶಕ್ತಿಯ ನಿಗೂಢತೆಯನ್ನು ಒಪ್ಪಿ ಅದರ ಬೆಳಕಿನಲ್ಲಿ ಹಿತವಾಗಿ ಬಾಳುವುದು ಅವರ ಧೈರ್ಯ".*[೬೨]

ಅಂದರೆ ನಿಸರ್ಗದ ನೆಲೆಯಲ್ಲಿ ಬದುಕುತ್ತಿರುವ ಮನುಷ್ಯನಿಗೆ ಅದೇ ಮುಖ್ಯ. ಆದ್ದರಿಂದ ಮನುಷ್ಯ ಇದನ್ನು ಆನುಭಾವಿಕ ದೃಷ್ಟಿಯಲ್ಲಿ ನೋಡುತ್ತಾನೆ ಇಲ್ಲಿ ಮೂಕಜ್ಜಿಯು ಸಹ ನಿಸರ್ಗವನ್ನು

೬೦. ಶಿವರಾಮಕಾರಂತ, ಶನೀಶ್ವರನ ನೆರಳಿನಲ್ಲಿ ಪುಟ-೧೧೪

೬೧. ಅದೇ, ಪುಟ-೧೮೮

೬೨. ಜಿ.ಎಸ್.ಶಿವರುದ್ರಪ್ಪ, ಕಾದಂಬರಿಕಾರರಾಗಿ ಕಾರಂತ, ಪುಟ-೮೪

ಅನುಭಾವಿಕ ನೆಲೆಯಲ್ಲಿ ನೋಡುವ ಕೆಲವು ಅಂಶಗಳನ್ನು ಇಲ್ಲಿ ಪರಿಶೀಲಿಸಲಾಗಿದೆ. ಸುಬ್ರಾಯನಿಗೆ ಕಾಡು ಎಂದರೆ ಪ್ರೀತಿ ಅವನು ಕಾಡನ್ನು ಸುತ್ತಿ ಅದರರೊಂದಿಗೆ ಹೊಂದುವಸಂಬಂಧ ಅನುಭಾವಿಕ ಸಂಬಂಧ. ಅವನು ದೇವರ ನೆಲೆಯ ಬಗ್ಗೆ ಕೇಳಿದಾಗ ಅಜ್ಜಿಯು *"ನಾನಿಲ್ಲವೇ? ನೀನಿಲ್ಲವೇ? ಇದ್ದೇವೆ' 'ನಮ್ಮ ಪಾಲಿಗೆ ಅವನಿದ್ದಾನೆ' ನೀವು ನಂಬುತ್ತೀರಿ, ಹಾಗಾದರೆ ದೇವರನ್ನು ನಂಬುವರಿದ್ದರೆ ಮಾತ್ರವೇ ಅವನಿರುವುದು; ಗಿಡ, ಮರ, ಕಲ್ಲು, ಮಣ್ಣು ಎಲ್ಲವೂ ಇವೆ. ಅವಕ್ಕೆ ನಂಬುವ ಶಕ್ತಿ ಇಲ್ಲ' ನಂಬಲಾರವು. ಅವಕ್ಕೆ ದೇವರು ಇಲ್ಲ; ಹೆಂಡಿರು ಇಲ್ಲ; ಅದರ ಬದಲು ನಾವಿರುವುದು ಸೃಷ್ಟಿಯ ಚಂದ ನೋಡಲಿಕ್ಕಾಗಿಯೇ; ಅವನೇ ಹುಟ್ಟಿಸಿದ ಸೃಷ್ಟಿಯಿದು ಎಂದು ಇದ್ದದ್ದನ್ನು ನಂಬಿದರೇನಾಗುತ್ತದೆ? ಇರುವ ನಾಲ್ಕು ದಿನ ಚಂದವಾಗಿ ಇರುವುದಪ್ಪ' ಹೋಗುವ ಕಾಲ ಬಂದರೆ ಹೋಗುವುದು, ಉಳಿದೆಲ್ಲ ಮಾತುಕತೆ ನಮ್ಮ ಬುದ್ಧಿಗೆ ಮೀರಿದ ಅಧಿಕ ಪ್ರಸಂಗವಾಗಿ ನನಗೆ"*[೬೩] ಎನ್ನುತ್ತಾಳೆ.

ನಿಸರ್ಗದ ಸತ್ಯವನ್ನು ಮೂಕಜ್ಜಿಯ ಅನುಭಾವಿಕ ನೆಲೆಯ ಚೌಕಟ್ಟಿನಲ್ಲಿ ತಿಳಿಸುವುದರಿಂದ ನಮಗೆ ಬೆಲೆಯು ಅರ್ಥವಾಗುತ್ತದೆ. ಇದರಿಂದ ಈ ನಿಸರ್ಗವಿಲ್ದೆ ನಾವು ಏನು ಸಾಧಿಸಲು ಸಾಧ್ಯವಿಲ್ಲ ಎಂಬ ಅರ್ಥವು ತಿಳಿಯುತ್ತದೆ. ಅವರು ದೈವ ಪ್ರಜ್ಞೆಯನ್ನು ವಿಗ್ರಹ ರೂಪದಲ್ಲಿ ಇಟ್ಟು ಪೂಜೆ ಮಾಡುವುದನ್ನು ಅಜ್ಜಿ ಕಟುವಾಗಿ ಟೀಕಿಸುತ್ತಾಳೆ. ಬದಲಾಗಿ ನಮ್ಮ ನೀರು,ನೆಲ, ಬೆಂಕಿ, ಬಾನುಗಳನನ್ನು ಕೊಟ್ಟವನ ಹತ್ತಿರ, ಜೀವನವನ್ನೇ ಕೊಟ್ಟವನ ಹತ್ತಿರ ಯಾವುತ್ತು ಅದನ್ನು ಕೊಡು, ಇದನ್ನು ಕೊಡು, ಎಂದು ಬೇಡಿದರೆ ನಮಗೆ ಬುದ್ದಿ ಉಂಟು ಎಂದ ಹಾಗಾಯಿತೇ? ಎನ್ನುವ ಪ್ರಕೃತಿಯೇ ನಮಗೆ ಜೀವನ ಕೊಟ್ಟಿರುವುದು ಅದನ್ನು ನಾವು ಆರಾಧನೆ ಮಾಡಬೇಕು. ಅದನ್ನೇ ನಮಗೆ ಅದುಕೊಡು, ಇದುಕೊಡು ಎಂದು ಕೇಳುವುದರಲ್ಲಿ ಅರ್ಥವಿಲ್ಲ ಎನ್ನುತ್ತಾಳೆ. ಈ ಮಾತಿನ ಅರ್ಥವೆಂದರೆ ನಾವು ಪ್ರಕೃತಿಯನ್ನು ರಕ್ಷಿಸಬೇಕು, ಅದನ್ನು ಬಳಸಿಕೊಳ್ಳುವುದನ್ನು ನಿಲ್ಲಿಸಬೇಕು.

ಸುಬ್ರಾಯ ಮನೆಯಲ್ಲಿದ್ದಾಗ ಮಳೆಯು ಜೋರಾಗಿ ಬಂದು :ಬಾನು ತರರವಾಗಿ ಸಂಜೆಯ ಬಿಸಿಲು ತೊಯ್ದು ನೆಲದ ಮೇಲೂ, ನಿಂತ ಗಿಡ ಮರಗಳ ಮೇಲೂ ಹೊಂಬಣ್ಣವನ್ನು ಚೆಲ್ಲಿದವರು ಯಾರಪ್ಪ ಇದು ನಮ್ಮ ಊರಿಗೆ ಕನಕಾಭಿಷೇಕ ಮಾಡಿಸಿದವರು? ಈ ಒಂದೆರಡು ಗಳಿಗೆಯಲ್ಲಿ ಏನೆಲ್ಲ ಅದ್ಭುತ ನಡೆದು ಹೋಯಿತು ಎಂದುಕೊಂಡನು. ಈ ಆಶ್ಚರ್ಯ ಭಾವನೆಯಲ್ಲಿ ನಾವು ಭಯವನ್ನು ಮಾನಸಿಕವಾಗಿ ಕಾಣಬಹುದು ಮನುಷ್ಯನ ನಿಸರ್ಗದ ನೆಲೆಗಳ ವೈಚಿತ್ರಗಳಿಗೆ ಬೆರಗಾಗುತ್ತಾನೆ. ಈ ಬೆರಗು ಅವನಲ್ಲಿ ಆಶ್ಚರ್ಯವನ್ನು ಮೂಡಿಸುತ್ತದೆ. ಕಾರಂತರು ಸುಬ್ರಾಯ ಮತ್ತು ಮೂಕಜ್ಜಿಯ ಮೂಲಕ ನಿಸರ್ಗ ನೆಲೆಗಳ ಸತ್ಯಸಂಗತಿಗಳನ್ನು ಹೇಳುತ್ತಾರೆ.

ಭೂಮಿ, ಸ್ವರ್ಗಗಳ ಬಗ್ಗೆ ಸುಬ್ರಾಯ ಅಜ್ಜಿಯನ್ನು ಕೇಳಿದಾಗ, ವೈಕುಂಠ, ಕೈಲಾಸ, ದೇವರ ಬಿಡಾರವಾಯಿತು, ಅಲ್ಲಿಗೆ ಅವನು ನಮ್ಮ ಕರೆಯಿಸುವುದರಾಯಿತು; ನಾವು ನಾವೇ ಕಲ್ಪಿಸಿಕೊಂಡ,

---

೬೩. ಶಿವರಾಮ ಕಾರಂತ, ಮೂಕಜ್ಜಿಯ ಕನಸುಗಳು, ಪುಟ-೬೪

ಇನ್ನೊಂದೇ ವ್ಯಾಮೋಹ, ಭೂಮಿಯ ಮೇಲಿನ ಮೋಹಬೇಡ, ವೈಕುಂಠದ ಮೇಲಣ ಮೋಹಬೇಕು ಅಂದಹಾಗಿದ್ದು. ಪಾರಾಮಾರ್ಥಿಕರೆನಿಸಿಕೊಂಡುವರು ಈ ಭೂಮಿ ಬೇಡ ವೈಕುಂಠ ಬೇಕು ಎನ್ನುವುದು ಮುರ್ಖತನ ನಾವು ಇಲ್ಲಿ ಇರುವ ಭೂಮಿಯನ್ನು ಪ್ರೀತಿಸಬೇಕು, ಇಲ್ಲಿ ನಮಗೆ ಪ್ರಕೃತಿ ಸಿಕ್ಕಿದೆ. ಆದ್ದರಿಂದ ನಾವು ಇದನ್ನು ಆರಾಧಿಸಬೇಕು ಎನ್ನುತ್ತಾಳೆ ಇದು ಸರಿಯಾದ ಜೀವನ ಎನ್ನುತ್ತಾಳೆ.

ಸುಬ್ರಾಯ ಅಜ್ಜಿಯನ್ನು ಕುರಿತು ಈ ಮಡೂರಿನಲ್ಲಿ ಏನು ಕೆಲಸವೆನ್ನುತ್ತಾನೆ, ಆಗ ಅಜ್ಜಿ, 'ಅವರು ಪಡುವಣ ಬೈಂದರೂ ಒಡೆಯರು ಅವರೆಲ್ಲರೂ ಕಡಲ ಬದಿಯವರು, ಮೊದಲಿನಿಂದಲೂ ಅವರ ಕೆಲಸ ಮೀನು ಹಿಡಿಯುವುದು, ಭೂದೇವಿ ಅವರು ದೇವರಲ್ಲ; ಕಡಲದೇವಿ ಅವರ ದೇವರು ಅವರಿಗೆ ಅನ್ನ ಕೊಡುವವಳು ಅವಳಲ್ಲವೆ', *"ದೇವರೆಂಬ ಮಾತು ಅಷ್ಟಕ್ಕೆ ಬರುತ್ತದೆ ಅವರನ್ನು ಹುಟ್ಟಿಸಿದವನು ದೇವರು, ಹೊಟ್ಟೆಗೆ ಅನ್ನ ಹಾಕುವನುದೇವರು, ಯಾವುದೋ ಒಂದು ದಿವಸ ಅವರ ಊರಿನ ಸುತ್ತ-ಮುತ್ತಲೂ ಮೈಲಿಗೆ ರೋಗ ಹಬ್ಬಿಕೊಂಡಿತು ಅದು ಕುಲದ ಒಂದೇ ಒಂದು ಪಳ್ಳಿ ಇಲ್ಲೆ ಹಾಗೆಯೇ ಮಾತನಾಡಿತು, ಆಗ ಅವರು ಹಿಂದಿನವರು ಸಮುದ್ರ ದೇವರ ಪೂಜೆ ಮಾಡಿ ಮಳೆಗಾಲದ ಕೊನೆಯಲ್ಲಿ ಬಲೆ ಬೀಸಲಿಕ್ಕೆ ಕಡಲಿಗೆ ಹೋಗುತ್ತಿದ್ದರು. ಇಲ್ಲಿ ಕಲ್ಲು ಹತ್ತಿರದಲ್ಲಿ ಇಲ್ಲವಲ್ಲ, ಇಲ್ಲೇ ಒಂದು ಹೊಂಡ ಮಾಡಿ ಅವರು ಅದನ್ನೇ ಸಮುದ್ರ ಎಂದು ಕರೆದರು. 'ಹೌಂದ್ರಾಯ' ಅವರಿಗೆ ಒಬ್ಬ ದೇವರಾದ".*[೬೪]

ಹೀಗೆ ಮೂಕಜ್ಜಿಯು ಸುಬ್ರಾಯನು ಕೇಳುವ ಪ್ರತಿಯೊಂದು ಪ್ರಶ್ನೆಗೂ ವೈಜ್ಞಾನಿಕ ಪರಿಹಾರಗಳನ್ನು ನೀಡುತ್ತಾಳೆ. ಅಲ್ಲಿ ನೆಲೆಯಲ್ಲಿ ನಿಸರ್ಗದ ನಿಗೂಢಗಳನ್ನು ಕುರಿತು ತಿಳಿಸುವುದು ಆಶ್ಚರ್ಯವೆನಿಸುತ್ತದೆ. ಈ ಮೂಲಕ ಕಾರಂತರು ಮನುಷ್ಯನ ಆನುಭಾವಿಕತೆಯನ್ನು ನಿಸರ್ಗದ ನೆಲೆಯಲ್ಲಿ ಗುರ್ತಿಸುತ್ತಾ, ಅದನ್ನು ಅಜ್ಜಿಯಮೂಲಕ ತ್ರಿಕಾಲಜ್ಞಾನಿಗಳಂತೆ ಹೇಳಿಸಿದ್ದಾರೆ.

'ಧರ್ಮರಾಯನ ಸಂಸಾರ' ಕಾದಂಬರಿಗೆ ಅವರೇ ಮುನ್ನುಡಿಯಲ್ಲಿ ಬರೆದ ಒಂದು ಮನೆಯಲ್ಲೇ ಅದರ ಹಿರಿಯರ ಗೋಚರ, ಅಗೋಚರ ನಡವಳಿಕೆಗಳ ಪ್ರಭಾವ ಮುಂದಣ ಸಂತಾನದ ಮೇಲೆ ಯಾವ ರೀತಿಯಿಂದಾಯಿತು – ಎಂಬುದು ಈ ಕಥೆಯ ಒಂದು ಸೆರಗು, ಇಲ್ಲಿನ ಸರಸ್ವತಿ, ಮಹಾಬಲರ ಜೀವನ ದಾರುಣವಾದ, ವಿಚಿತ್ರವಾದ, ಭೀಕರವಾದ ಒಂದು ದಾಂಪತ್ಯದ ಸಮಸ್ಯೆಯನ್ನು ತಮ್ಮ ಮುಂದಕ್ಕಿರಿಸುತ್ತದೆ. ಹೇಳುವ ನೀತಿ, ಬದುಕುವ ರೀತಿ, ಜೀವನ ನರಕದಲ್ಲಿರುವವರ ಪಾಲಿಗೆ ಹೇಗೆ ಕಾಣಿಸಿತು ಎಂಬುದನ್ನು ಅನುಕಂಪವುಳ್ಳವರಿಗೆ ಅದು ತೋರಿಸಬಹುದು.

ಬಾರಕೂರಿನ ನಾರಾಯಣ ಹೆಬ್ಬಾರರು ಧರ್ಮ ಕಾರ್ಯಗಳಿಂದ ತಮ್ಮ ಪ್ರತಿಷ್ಠೆಯನ್ನು ಹೆಚ್ಚಿಸಿಕೊಂಡು ಪರಿಣಾಮ ಧನಿಕರಾಗುತ್ತಾರೆ. ಆದರೆ ಕೊಕ್ಕರಣಿ ರಾಮಪ್ಪಯ್ಯ ಧರ್ಮದ ಹೆಸರಿನಲ್ಲಿ ಎಲ್ಲವನ್ನು ಕಳೆದು ಕೊಂಡು ತನ್ನ ಮಗ ನಾಗಪ್ಪಯ್ಯ ಮತ್ತು ಪತ್ನಿ ಪದ್ಮಾವತಿಯನ್ನು

೬೪. ಅದೇ, ಪುಟ-೭೩

ಅನಾಥರಾಗಿಸುತ್ತಾನೆ. ರಾಮಪ್ಪಯ್ಯ ಸತ್ತ ನಂತರ ಹೆಬ್ಬಾರರು, ರಾಮಪ್ಪಯ್ಯನ ಮನೆಯನ್ನು ವಶಪಡಿಸಿಕೊಳ್ಳುತ್ತಾನೆ. ಹೆಬ್ಬಾರರ ಪತ್ನಿ ಮಹಾಲಕ್ಷ್ಮಿ, ಇಬ್ಬರು ಸರಸ್ವತಿ, ರಾಮದೇವರು, ಕೃಷ್ಣದೇವರು, ಸರಸ್ವತಿಯ ಗಂಡ ಅರಬಳ್ಳಿ ರಾಮಪ್ಪಯ್ಯನ ಮಗ ಮಹಾ ಬಲಯ್ಯ ನಾರಾಯಣ ಹೆಬ್ಬಾರರ ಇನ್ನೊಬ್ಬ ಪ್ರೇಯಸಿ ಚಂದು; ಈ ಪಾತ್ರಗಳು ವಿವಿಧ ರೀತಿಯಾಗಿ ನಿಸರ್ಗದ ನೆಲೆಗಳಲ್ಲಿ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿರುವುದನ್ನು ಗುರ್ತಿಸಬಹುದು. ಅಂತಹ ನೆಲೆಗಳಲ್ಲಿ 'ಅನುಭಾವಿಕ ನೆಲೆ'ಯು ಒಂದಾಗಿದ್ದು, ಈ ನೆಲೆಯಲ್ಲಿ ಪಾತ್ರಗಳು ಹೊಂದಿರುವ ಸಂಬಂಧವನ್ನು ಸಂಕ್ಷಿಪ್ತವಾಗಿ ಹೇಳಬಹುದಾಗಿದೆ.

ನಾರಾಯಣ ಹೆಬ್ಬಾರರಿಂದ ಪಡೆದ ಸಾಲದ ಪರಿಣಾಮವಾಗಿ ಕೊಕ್ಕರಣಿ ರಾಮಪ್ಪಯ್ಯನ ಅಸ್ತಿ (ಭೂಮಿ) ಹೆಬ್ಬಾರರವ ಕೈ ಸೇರುತ್ತದೆ, ನಂತರ ರಾಮಪ್ಪಯ್ಯನ ಪತ್ನಿ ಪದ್ಮಾವತಿ ಮತ್ತು ಮಗ ನಾಗಪ್ಪಯ್ಯ ದೇಶಾಂತರ ಹೋಗುವ ಸಂದರ್ಭದಲ್ಲಿ ಕಾರಂತರು ಮುಗ್ಧ ಮಗು ನಾಗಪ್ಪಯ್ಯನು ನಿಸರ್ಗವನ್ನು ಕಂಡು ಸಂತೋಷ ಪಡುವ ನೆಲೆಗಳನ್ನು ಗುರ್ತಿಸುತ್ತಾರೆ.

ಪದ್ಮಾವತಿ ಮತ್ತು ನಾಗಪ್ಪರು ಘಟ್ಟದ ಕೆಳಗಿನ ಬಿಸಿಲಿನ ಬೇಗೆ ಕಾಣಿಸಲಿಲ್ಲ. ಹೊತ್ತೇರಿದರೂ ಆಚೀಚಿನ ಕಾಡುಗಳ ಮರಗಳ ತಂಪು ಈ ಸೀಮೆಯೇ ವಾಸಿಯೆಂದು ಅನಿಸಿತು. ದಾರಿಯ ಮಗ್ಗುಲು ಗುಡ್ಡವೊಂದರಲ್ಲಿ ಹುಳು ಹುಪ್ಪಟೆಗಳನ್ನು ಮೇಯುತ್ತಿದ್ದ ನಾಲ್ಕಾರು ನವಿಲುಗಳು ನಾಗಪ್ಪಯ್ಯನ ಕಣ್ಣನ್ನು ಸೆಳೆದವು. ಅಮ್ಮಾ ಅದುನೋಡು ನವಿಲು ಎಂದು ಹಿಗ್ಗಿಕುಣಿದು ಆಚೀಚೆ ಆಕರ್ಷಣೆ ಅವನಿಗೆ ಅಷ್ಟೊಂದಿಲ್ಲ. ಎರಡು ಹರದಾರಿ ದೂರ ಕಳೆಯುತ್ತಲೇ ಮೂಡಣ ದಿಕ್ಕಿನಲ್ಲಿ ಗಗನ ಚುಂಬಿಯಂತೆ ನಿಂತಿದ್ದ ಕುಂದಾದ್ರಿ ಬೆಟ್ಟವು ಇದಿರಾದಾಗ ಪದ್ಮಾವತಿಯ ತುಟಿಯಲ್ಲಿ ನಗು ಮೊಳಗಿತು.

ನಾಗಪ್ಪಯ್ಯ ಅರೆಬೈಲಿನ ಕುಟುಂಬದಲ್ಲಿ ಸೇರಿಕೊಂಡು ವ್ಯವಸಾಯವನ್ನು ಮಾಡಿಸುವಾಗ: ಕೆರೆಯ ನೀರು ತುಂಬುವುದನ್ನು ಕಂಡು, ಆಳೊಬ್ಬನನ್ನು ಕರೆದ ಮಹಾಬಲಯ್ಯನವರ ಮನೆಯವರನ್ನು ಕರೆತರಲು ಹೇಳುತ್ತಾನೆ. ಆಗ ಗಂಗಕ್ಕ ಮತ್ತು ಸರಸ್ವತಿ ಒಂದು ಅರ್ಧ ಕೆರೆ ನೀರಿಂದ ತುಂಬಿಕೊಂಡಿತ್ತು. ಗಂಗಕ್ಕ *"ಇದು ದೇವರಾಣೆ ಭಾಗೀರಥಿಯೇ"! ಎಂದು ಉದ್ಗರಿಸಿದಳು. ಅವಳಲ್ಲಿ ಅನನ್ಯ ಭಕ್ತಿ ಆ ವಿಷಯದಲ್ಲಿ ಅಂಕುರಿಸಿತು. ಸರಸ್ವತಿಗೆ ಅಲ್ಲಿನ ನೀರಿನ ಸೊಬಗನ್ನು ಕಂಡು ನಿಜಕ್ಕೂ ಮೈ ಮರವೆಯಾಗಿತ್ತು ಅಂಥ ಒಂದು ಜಲ ನಿಕ್ಷೇಪ ಈ ಗಳಿಗೆಯಲ್ಲಿ ತನ್ನ ಸಾನಿಧ್ಯವನ್ನು ಅವರ ಮುಂದೆ ಪ್ರಕಟಿಸಿತೆಂಬ ಅಚ್ಚರಿ ನಾಗಪ್ಪಯ್ಯ ಮೆಲ್ಲಗೆ ಅವರ ಬಳಿಗೆ ಸುಳಿದು ಬಂದು. ಸರಸ್ವತಿಯ ಮುಖವನ್ನು ನೋಡುತ್ತ "ಯಜಮಾನಿ ಭಾಗೀರಥಿ ಬಂದಾಗ ಕಾಯಿ ಒಡೆಯಬೇಕಲ್ಲ" ಎಂದು ಗಂಗಕ್ಕ "ಹೌದು ಮಗು ಅವಳು ಒಲಿದು ಬಂದಾಗ ಮರ್ಯಾದೆ ಸಲ್ಲಿಸದೆ ಹೋದರೆ ಹೇಗೆ!"*[೬೫]

---

೬೫. ಶಿವರಾಮಕಾರಂತ, ಧರ್ಮರಾಯನ ಸಂಸಾರ ಪುಟ-[illegible]

ಹೀಗೆ ಜಲವನ್ನು ಪೂಜೆ ಮಾಡುವುದರ ಮೂಲಕ ಗಂಗಕ್ಕ, ಸರಸ್ವತಿ ಮತ್ತು ನಾಗಪ್ಪಯ್ಯ ತಮ್ಮ ಆನುಭಾವಿಕ ಸಂಬಂಧವನ್ನು ನಿಸರ್ಗದ ನೆಲೆಯಲ್ಲಿ ಗುರುತಿಸಿಕೊಳ್ಳುವುದು ಪ್ರಮುಖ, ಕಾರಂತರು ತಮ್ಮ ಕಾದಂಬರಿಗಳಲ್ಲಿ ನಿಸರ್ಗವನ್ನು ವರ್ಣಿಸುತ್ತಾ ತಾವು ಸಹ ಅದರಲ್ಲಿ ಪಾಲ್ಗೊಂಡು ನಿಸರ್ಗದಲ್ಲಿ ದೈವಿಕತೆಯನ್ನು ಕಾಣುವುದರಿಂದ ನಿಸರ್ಗ ಪ್ರೇಮದ ಉತ್ಕಟತೆ ತಿಳಿಯುತ್ತದೆ. ಒಟ್ಟಾಗಿ ಅವರು ತಮ್ಮ ದಕ್ಷಿಣ ಕನ್ನಡ ಜಿಲ್ಲೆಯ ನಿಸರ್ಗವನ್ನು ಮತ್ತು ಅಲ್ಲಿನ ಜನರ ಜನ ಜೀವನವನ್ನು ತಾನು ಕಂಡ ರೀತಿಯಲ್ಲೇ ಹೇಳುವುದು, ಅವರಲ್ಲಿರುವ ವಾಸ್ತವಿಕ ದೃಷ್ಟಿಕೋನದ ಅರಿವು ನಮಗೆ ಆಗುತ್ತದೆ. ಈ ರೀತಿಯ ವಾಸ್ತವತೆಯ ನೆಲೆಯಲ್ಲಿ ಒಂದಾದ ಆನುಭಾವಿಕ ನೆಲೆಯನ್ನು 'ಧರ್ಮರಾಯನ ಸಂಸಾರ' ಕಾದಂಬರಿಯಲ್ಲಿ ಪಾತ್ರಗಳ ಮುಖೇನ ವ್ಯಕ್ತಪಡಿಸುತ್ತಾರೆ.

ಮಾನವೀಯ ನೆಲೆ :

ಕಾರಂತರು ತಮ್ಮ ಕಾದಂಬರಿಗಳಲ್ಲಿ ವೈವಿಧ್ಯಮಯವಾಗಿ ನಿಸರ್ಗದ ನೆಲೆಯಲ್ಲಿ ಸನ್ನಿವೇಶಗಳನ್ನು ತರುತ್ತಾರೆ. ಈ ಸನ್ನಿವೇಶಗಳಲ್ಲಿ ಪಾತ್ರಗಳ ಕಾರ್ಯ ತುಂಬಾ ಮುಖ್ಯವಾಗಿರುತ್ತದೆ. ಕಾರಂತರು ದಕ್ಷಿಣ ಕನ್ನಡದ ಜನ ಜೀವನಕ್ಕೆ ಸಂಬಂಧಿಸಿದಂತೆ ಹೇಳುತ್ತಾರೆ. ಆದರೆ ಇದು ಕಾರಂತರ ಉದ್ದೇಶವಾಗಿಲ್ಲ, ಅವರ ನಿಸರ್ಗದ ದೃಷ್ಟಿಕೋನ ವಿಶ್ವಮಟ್ಟದ್ದಾಗಿದೆ. ಇದನ್ನು ಅರಿಯಲು ಅವರ ಸಾಹಿತ್ಯವು ಮುಖ್ಯವಾದ ಆಧಾರವಾಗಿದೆ. ಕಾರಂತರು ತಮ್ಮ ಕಾದಂಬರಿಗಳಲ್ಲಿ ಪ್ರಮುಖವಾಗಿ ನಿಸರ್ಗವನ್ನು ಒಡಮೂಡಿಸುತ್ತಾರೆ. ಅಲ್ಲದೆ ಈ ನಿಸರ್ಗದ ನಡುವೆ ಮಾನವೀಯ ಸಂಬಂಧಗಳ ನೆಲೆಗಳನ್ನು ಹೇಳುತ್ತಾರೆ.

ಕಾರಂತರ ಸೃಜನಶೀಲತೆಯ ಸಾಮರ್ಥ್ಯವು ಅವರ ಕಾದಂಬರಿಗಳಲ್ಲಿ ವ್ಯಕ್ತವಾಗುವ ನದಿ, ಹಬ್ಬಿ, ಕಡಲುಗಳ ಮೊರೆತಗಳಂತೆ ವೈವಿಧ್ಯಮಯವಾಗಿದೆ ಮತ್ತು ಸಂಮೃದ್ಧವಾಗಿದೆ. ಇದನ್ನು ಅವರು ನಿಸರ್ಗದ ವರ್ಣನೆಯಲ್ಲಿ ಪ್ರಕಟಿಸುತ್ತಾರೆ. ಕಾರಂತರು ಮಾನವನ ಬದುಕಿನ ಸಮಸ್ತ ಅನುಭವಗಳನ್ನು ವಾಸ್ತವಿಕ ನೆಲೆಯಲ್ಲಿ ನೋಡುತ್ತಾರೆ. ಈ ನೆಲೆಯಲ್ಲಿ ಮನುಷ್ಯನು ನಿಸರ್ಗದೊಂದಿಗೆ ಮಾನವೀಯವಾಗಿ ಹೇಗೆ ತನ್ನ ನೆಲೆಯನ್ನು ಸ್ಥಾಪಿಸಿಕೊಂಡಿರುವನು ಎಂಬುದು ಪ್ರಮುಖವಾಗುತ್ತದೆ.

ಮಾನವೀಯ ನೆಲೆಗಳೆಂದರೆ ಮನುಷ್ಯನು ವಿವಿಧ ರೀತಿಯಲ್ಲಿ ಸಂಬಂಧವನ್ನು ಹೊಂದಿರುವುದೇ ಆಗಿದೆ. ಸಾಮಾಜಿಕ ಮನುಷ್ಯನು ನಿಸರ್ಗದ ಭಾಗವಾದ ಭೂಮಿ, ನದಿ, ಕಡಲು, ಸೂರ್ಯನ ಬೆಳಕು ಮುಂತಾದ ಸಂಗತಿಗಳ ನಡುವೆ ತನ್ನ ಜೀವನವನ್ನು ಕಟ್ಟಿಕೊಂಡಿರುವುದು ಮುಖ್ಯವಾಗಿದೆ.

"ಶನೀಶ್ವರ ನೆರಳಲ್ಲಿ" ಕಾದಂಬರಿಯಲ್ಲಿನ ಪಾತ್ರಗಳು ಕಾವೇರಮ್ಮನ ಮಾನವೀಯತೆಯ ಸಾಕಾರ ಮೂರ್ತಿಯಂತಿರುವ ಅವಳು ತಾನು ಬದುಕಿರುವ ಕಡೆಯವರೆಗೂ ಭೂಮಿಯನ್ನು ತನ್ನ ಮಕ್ಕಳಾದ ಪರಮೇಶ್ವರ ಅಡಿಗಳಿಗೆ, ನಾರಾಯಣ ಅಡಿಗಳಿಗೆ ಕೊಟ್ಟಿರಲಿಲ್ಲ. ಏಕೆಂದರೆ ನಾರಾಯಣ ಅಡಿಯು ತನ್ನ ಮಾನವನ ಮನೆಯಲ್ಲಿ ತಳವೂರಿದ್ದ ಮತ್ತು ಅವನಲ್ಲಿ ಮಾನವ ಸಹಜ ದುಷ್ಟ ಗುಣವಿತ್ತು. ನಯವಂಚಕ ಶಂಕರಜೋಯಿಸರ ಅಡಿಯಾಳಾಗಿದ್ದನು. ಶಂಕರಜೋಯಿಸ ಸಾಲಕೊಟ್ಟು, ನಂತರ ಕೊಡದಿದ್ದಾಗ, ಬಡ್ಡಿ ಏರಿಸಿ ಭೂಮಿಯನ್ನು ಸ್ವಾಧೀನ ಮಾಡಿಕೊಳ್ಳುತ್ತಿದ್ದ. ಇದನ್ನು ಅರಿತಿದ್ದ ಕಾವೇರಮ್ಮನನ್ನು ನಾರಾಯಣ ಅಡಿಯು ಎಷ್ಟು ಕೇಳಿದರು ಭೂಮಿಯನ್ನು ಹಿಸ್ಸೆ ಮಾಡಿಕೊಳ್ಳುವುದಿಲ್ಲ. ಆದರೆ ದೊಡ್ಡ ಮಗ ಪರಮೇಶ್ವರ ಅಡಿ ಮಾತ್ರ ತಾಯಿಯ ಹಂಚಿಕೆಯಂತೆ, ಅವಳ ಮಾತನ್ನು ಕೇಳಿಕೊಂಡು ತಾಯಿಯ ಬಳಿಯೇ ಇರುತ್ತಾನೆ. ಈ ರೀತಿಯ ಗುಣವುಳ್ಳ ಕಾವೇರಮ್ಮ ತಮ್ಮ ಒಕ್ಕಲು ಗೇಣಿದಾರರಿಗೆ ಮನವೀಯ ನೆಲೆಯಲ್ಲಿ ಭೂಮಿಯನ್ನು ಒದಗಿಸಿಕೊಟ್ಟು ಸಹಾಯ ಮಾಡುವ ಕಾರ್ಯದಲ್ಲಿ ಮಾನವೀಯ ನೆಲೆಯನ್ನು ಗುರ್ತಿಸಬಹುದು.

ಪಾಟಾಳಿ ಶಿವಣ್ಣನಿಗೆ ಭೂಮಿ ಕೊಟ್ಟಿರುವುದನ್ನು ಕುರಿತು ಕಾವೇರಮ್ಮ ನಿರೂಪಕರಿಗೆ ಹೇಳುತ್ತಾ "*ಈಗ ಸ್ವಲ್ಪ ಹೊಲಗದ್ದೆಗಳನ್ನು ಆಚೆ ಮನೆಯ ಮಕ್ಕಳಿಗೂ ಕೊಟ್ಟಿದ್ದೇನೆ. ಒಂದು ಮೂರು ಮುಡಿಯಷ್ಟು ಭೂಮಿಯನ್ನು ಶಿವಣ್ಣಯ್ಯನಿಗೂ ಕೊಟ್ಟಿದ್ದೇನೆಂದನಲ್ಲ, ಒಕ್ಕಲು ಮಕ್ಕಳಿಗೆ ಕೊಟ್ಟ ಭೂಮಿಯಿಂದ ಗೇಣಿಯೂ ಬರುತ್ತಾ ಇದೆ. ಶಿವಣ್ಣಯ್ಯನಿಂದಲೂ, ಆಚೆಮನೆಯ ಮಕ್ಕಳಿಂದ ನಾನು ಗೇಣಿ ಕೇಳಿಲ್ಲ. ಶಿವಣ್ಣ ಕೊಟ್ಟರೂ ಬೇಡ ಎಂದಿದ್ದೇನೆ. ಅವರಿಗೆ ಅದು ಧರ್ಮಕ್ಕೆ ಎಂದೂ ನಾನು ಹೇಳಿಲ್ಲ. ಅಲ್ಪ ಸ್ವಲ್ಪ ಗೇಣಿ ಬಂದಿದ್ದಾರೆ. ನಾನು ಬದುಕಿರುವಾಗಲೇ ಮೂರನೆಯವರ ಪ್ರೇರಣೆಯಿಂದ ಇಲ್ಲಿನ ಬದುಕು ಕೆಡಬಾರದು, ನನ್ನ ಕಿರಿಮಗನ ಬುದ್ಧಿಯನ್ನು ಕಂಡರೆ, ನನಗೆ ಹೆದರಿಕೆಯಾಗುತ್ತದೆ. ಒಂದೊಂದು ಸಾರಿ ನನಗೆನಿಸುತ್ತದೆ, ಎಲ್ಲವನ್ನು ಪರಮೇಶ್ವರನ ಹೆಸರಿಗೆ ಮಾಡಿ ಬಿಡಬೇಕು ಎಂತ ಆದರೆ ಈ ನಾರಾಯಣನು ನನ್ನ ಮಗನಷ್ಟೆ ಅವನು ದುಷ್ಟ ಎಂಬುದು ಗೊತ್ತಿದೆ. ಆದರೆ ಅವನಿಗೆ ಏನನ್ನೂ ಕೊಡದೆ ಹೋದರೆ ನ್ಯಾಯವಾಗುತ್ತದೆಯೋ? ಒಮ್ಮೊಮ್ಮೆ ನೆನದರೆ, ನಾನು ಬೆಳೆಯಿಸಿದ ಆ ಎರಡು ಮಕ್ಕಳು ಚಂದ್ರ, ಸೋಮ-ಅವರಗೂ ಒಂದೊಂದು ಚೂರು ಕೊಟ್ಟರೆ ತಪ್ಪೇನು ಎಂದೂ ಅನಿಸುತ್ತದೆ*".[೬೬]

ಕಾವೇರಮ್ಮ ಭೂಮಿಯನ್ನು ಹಂಚಿಕೆ ಮಾಡಬೇಕೆಂದು ಚಿಂತಿಸುವ ಬಗೆಯನ್ನು ನೋಡಿದಾಗ ಅವಳಲ್ಲಿ ಮಡುಗಟ್ಟಿರುವ ಮಾನವೀಯ ನೆಲೆಗಳನ್ನು ಗುರುಸಬಹುದು. ಭೂಮಿ ನಿಸರ್ಗದ ಮೂಲವಾಗಿದೆ. ಈ ಭೂಮಿಯನ್ನು ತನಗಾಗಿ ಬಳಸುತ್ತಾನೆ. ಇದನ್ನು ಅವನು ಭೂಮಿಯೊಂದಿಗೆ ಹೊಂದಿರುವ ಮಾನವೀಯ ಮತ್ತು ಅನುಭಾವಿಕ ನೆಲೆಯೆಂದು ಹೇಳಬಹುದು. ಇಂತಹ ಭೂಮಿಯನ್ನು ಕಾವೇರಮ್ಮ ತನಗಾಗಿ ಮತ್ತು ಮುಂದೆ ಭವಿಷ್ಯದಲ್ಲಿ ತನ್ನ ಮಕ್ಕಳಿಗಾಗಿ ತಮ್ಮ ಭೂಮಿಯ ಒಡೆತನವನ್ನು ಸಂರಕ್ಷಣೆ ಮಾಡಿಕೊಂಡು ಬರುವ ಸಂಗತಿಯು ಅವಳಲ್ಲಿರುವ ಮಾನವೀಯ ದೃಷ್ಟಿಕೋನದ ಪ್ರಜ್ಞೆ ಎನ್ನಬಹುದು.

---

೬೬. ಶಿವರಾಮ ಕಾರಂತ, ಶನೇಶ್ವರ ನೆರಳಿನಲ್ಲಿ, ಪುಟ-೨೪

ಕಾವೇರಮ್ಮನ ಮನೆಗೆ ವಕೀಲರು ಬಂದಾಗ ಭೂಮಿ ಹಿಸ್ಸೆಯಾಗುತ್ತದೆ. ಆಗ ಕಾವೇರಮ್ಮ ಇಲ್ಲಿನ ಹುಟ್ಟುವಳಿ ಇನ್ನೂರೈವತ್ತು ಮಾನಿಗೆ ಅಕ್ಕಿಯಾಗುವಷ್ಟು ಹೊಲಗದ್ದೆಗಳಿರುವುದು-ತೋಟದ ಬಡಗು ಸೆರಗಿನಲ್ಲೊಂದಿಷ್ಟು, ತೆಂಕು ಸೆರಗಿನಲ್ಲೊಂದಿಷ್ಟು ತೋಟವನ್ನು ನಿತ್ಯವೂ ಚೆನ್ನಾಗಿ ನೋಡಿಕೊಳ್ಳುವವರು ಬೇಕು. ಅದನ್ನು ಮೊದಲಿಗೆ ನೀವು ಊರಲ್ಲಿರುವ ಪರಮೇಶ್ವರನಿಗೇ ಹಾಕಿ ಚಂದ್ರನಿಗೂ, ಸೋಮನಾಥನಿಗೂ ಅವರಿಬ್ಬರೂ ಈಗ ಬೇಸಾಯ ಮಾಡುತ್ತಿರುವ ಜಾಗವನ್ನು ಮೂಲಗೇಣಿಗೆ ಕೊಟ್ಟು ಹಾಗೆ ಮಾಡುವ ಅದರ ಗೇಣಿಯ ದರ ಎಷ್ಟು ಏನು ಎಂದು ಶಿವಣ್ಣ ಪರಮೇಶ್ವರ ಯೋಚಿಸಿ ಹೇಳುವುದರ ಆ ಹುಟ್ಟುವಳಿಯನ್ನು ಇನ್ನು ಮುಂದೆ ಅವರು ನಮಗೆ ಕೊಡುತ್ತಾ ಬರಲಿ ಆದರೆ ಅದು ನನ್ನ ಮಕ್ಕಳಿಗೆ ಬೇಡ: ಲಕ್ಷ್ಮೀನಾರಾಯಣ ದೇವರಿಗೆ ಸಲ್ಲುವಂತಾಗಲಿ, ಶಿವಣ್ಣನಿಗೆ ಕೊಟ್ಟ ಮೂರು ಮುಡಿಗದ್ದೆಗೂ ಒಂದು ಗೇಣಿ ನಿಶ್ಚಯ ಮಾಡಿ ಬರಲಿ, ಶಿವಣ್ಣ ಆ ಜಮೀನಿನಿಂದ ನೂರು ಮುಡಿಯಷ್ಟು ಅಕ್ಕಿ ಉತ್ಪನ್ನ ಬಂದಿತು. ಅದು ನನ್ನ ನಾರಾಯಣನಿಗಿರಲಿ, ಬಡಗಣ ಸೆರಗು ದೊಡ್ಡವನಿಗೆ, ಇನ್ನು ಉಳಿಯುವುದೆಂದರೆ, ಮನೆ ಅಡಿ ಮತ್ತು ಹಾಡಿ, ಹಕ್ಕಲು, ಮನೆಯ ಅಡಿಯನ್ನು ಹಂಚಿಕೊಟ್ಟು ಸುಖವಿಲ್ಲ, ಸೋಮನಾಥನೂ, ಚಂದುನೂ, ಅವರವರ ಗದ್ದೆಗಳಿಗೆ, ಸಮೀಪವಾಗಿ ಬೇರೆ ಮನೆಯನ್ನು ಕಟ್ಟಿಕೊಂಡಾರು: ಕಟ್ಟಿಕೊಳ್ಳುವುದಕ್ಕೊಂದು ಮೂರು ವರ್ಷ ವಾಯಿದೆ ಕೊಡಿ, ಇದೇ ಮನೆಯೊಳಗೆ ಎಲ್ಲರೂ ಇದ್ದು, ಕಾದಾಡುತ್ತ ಕುಳಿತರೆ ಹಿರಿಯರ ಶಾಪ ನಮಗೆ ಬಂದೀತು.

ಆ ವ್ಯಾಪರ ಬೇಡವೆ ಬೇಡ. ಬಡಗಣ ಕಾಡಿನ ತಪ್ಪಲು ಇದೆಯಲ್ಲ- ಇವರು ಅವಸರ ಮಾಡದಿದ್ದರೆ, ಅದು ನಾಳೆ ಏನಾದರೂ ಒಂದು ಪ್ರಯೋಜನಕ್ಕೆ ಬಂದೀತು. ಅದರಲ್ಲಿ ಸಮ ಮೂರು ಪಾಲು ಮಾಡಿ: ಒಂದು ಪಾಲು ಪರಮೇಶ್ವರನಿಗೆ, ಎರಡು ಪಾಲು ಸಣ್ಣವನಿಗಿರಲಿ ಇಲ್ಲವೆ ನಾಲ್ಕು ಪಾಲನ್ನು ಮಾಡಿ, ಒಂದು ಪರಮೇಶ್ವರನಿಗೆ ,ಎರಡು ಪಾಲು ಸಣ್ಣವನಿಗಿರಲ್ಲಿ. ಮನೆಯಲ್ಲಿ ಅವನಿಗೆ ಹಿಸ್ಸೆಯಿಲ್ಲದಿದ್ದರೂ, ಕಾಡಿನಿಂದ ಸಾವಿರಾರು ರೂಪಾಯಿ ಸಿಗುತ್ತದೆ ಎನ್ನುತ್ತಾನಲ್ಲ: ಅವನಿಗೆ ಅದರಲ್ಲಿ ದೊಡ್ಡದಾದ ಪಾಲಿರಲಿ, ಇದೇನು ತಕ್ಕಡಿಯ ತೂಕವಲ್ಲ; ಹೀಗೆ ಮಾಡುವುದರಿಂದ, ಅವರಿವರೊಳಗೆ ನಾಳೆ ಜಗಳ ಬಾರದಿರಲಿ ಎಂದು ಹೇಳುವುದು ನಾನು. ಕಾವೇರಮ್ಮ ಹೀಗೆ ತಾನು ಸಾಯುವ ಮೊದಲು ತಮ್ಮ ಮಕ್ಕಳಿಗೂ ಮತ್ತು ನಂಬಿದವರಿಗೆ ನಿಸರ್ಗದ ನೆಲೆಯ ಪ್ರಮುಖ ನೆಲೆಯಾದ ಭೂಮಿಯನ್ನು ತನ್ನ ಮಕ್ಕಳು ಬದುಕುವುದಕ್ಕಾಗಿ ಹಂಚುತ್ತಾಳೆ. ಭೂಮಿಯ ಒಡೆತನ ಯಾರಿಗೂ ಶಾಶ್ವತವಲ್ಲ, ಆದರೆ ಮನುಷ್ಯ ಅದನ್ನು ನಂಬಿ, ಅದರಲ್ಲಿ ಬೆಳೆದು, ಅದರ ಮೇಲೆಯೇ ತನ್ನ ಜೀವನವನ್ನು ಕಟ್ಟಿಕೊಂಡಿರುವುದು. ಈ ಕಾರಣವಾಗಿಯೇ ಮನುಷ್ಯ ಇದರ ಮೇಲೆ ತನ್ನ ಮೇಲೆ ತನ್ನ ಹಕ್ಕು ಸ್ಥಾಪಿಸಲು ಹವಣಿಸುತ್ತಾನೆ. ಆದರೆ ಹವಣಿಕೆ ನಿಸರ್ಗಕ್ಕೆ ಪೂರಕವಾಗಿರಬೇಕು. ಆಗ ಅವನ ಬಾಳು ಸುಖಮಯ.

‘ಬೆಟ್ಟದ ಜೀವ’ ಕಾದಂಬರಿಯಲ್ಲಿ ಕಾರಂತರು ನಿಸರ್ಗದೊಂದಿಗೆ ಮಾನವನು ಹೊಂದಿರುವ ಸಂಬಂಧಗಳನ್ನು ಹೇಳುತ್ತಾರೆ. ಈ ಕಾದಂಬರಿಯಲ್ಲಿ ನಿಸರ್ಗವು ಪ್ರಮುಖವಾಗಿದ್ದು, ಇದು ಮನುಷ್ಯನ ಜೀವನವನ್ನು ನಿರ್ಣಯಿಸುವ ಬಗೆಯನ್ನು ಹೇಳುತ್ತದೆ. ಇದಲ್ಲದೆ ಇಲ್ಲಿ ಬರುವ ಪಾತ್ರಗಳು ನಿಸರ್ಗದೊಂದಿಗೆ ಹೋರಾಡುವ ಮೂಲಕ ತಮ್ಮ ಮಾನವೀಯ ಮೌಲ್ಯಗಳನ್ನು ರೂಪಿಸಿಕೊಳ್ಳುವುದು ಪ್ರಮುಖವಾಗಿದೆ. ಕಾರಂತರೆ ನಿರೂಪಕರಾಗಿ ಕಾಣಿಸಿಕೊಂಡಂತೆ, ಈ ಕಾದಂಬರಿಯಲ್ಲಿ ಕಂಡು ಬರುತ್ತದೆ. ಈ ಕಾದಂಬರಿಯ ಮುಖ್ಯ ಪಾತ್ರಗಳಾದ ಗೋಪಾಲಯ್ಯ, ಶಂಕರಮ್ಮ, ದೇರಣ್ಣಗೌಡ ಮತ್ತು ನಾರಾಯಣಯ್ಯ, ಭಟ್ಯ ಇವರೆಲ್ಲ ಬೆಟ್ಟ ಮತ್ತು ಕಾಡಿನ ನಡುವೆ ತಮ್ಮ ನೆಲೆಯನ್ನು ಮಾಡಿಕೊಂಡು ಜೀವನವನ್ನು ಕಟ್ಟಿಕೊಳ್ಳುತ್ತಿರುವವರು. ಇಂತಹ ನಿಸರ್ಗದ ನೆಲೆಯಲ್ಲಿ ಅವರು ಇಟ್ಟುಕೊಂಡಿರುವ ಮಾನವೀಯ ಸಂಬಂಧಗಳು ಇಲ್ಲಿ ಮುಖ್ಯವಾಗಿದೆ. ಕಾರಂತರು ಈ ಕಾದಂಬರಿಯನ್ನು ಕುರಿತು ‘ಬಾಳು ನನಗೆ ಮುಖ್ಯ, ಬಾಳನ್ನು ತಿಳಿಯಬೇಕಾದ ಸಾಧನಗಳೂ ಅಷ್ಟೇ ಮುಖ್ಯ’ ಎನ್ನುವ ಸಂದೇಶವನ್ನು ನೀಡುತ್ತಾರೆ.

ಗೋಪಾಲಯ್ಯ ನಿಸರ್ಗದಡೆಯಲ್ಲಿ ಕಾಡುಗಳಲ್ಲಿ ಸೆಣಸಾಡಿ ಜೀವನನ್ನು ಕಟ್ಟಿಕೊಳ್ಳುತ್ತಾನೆ. ಇಂತಹ ನೆಲೆಗೆ ಶಿವರಾಮಯ್ಯ ಆಕಸ್ಮಿಕವಾಗಿ ಬೇಟಿ ನೀಡುತ್ತಾನೆ. ಆ ಸಂದರ್ಭದಲ್ಲಿ ಶಿವರಾಮಯ್ಯನಿಗೆ ಗೋಪಾಲಯ್ಯ ತನ್ನ ಇಡೀ ನೈಸರ್ಗಿಕ ನೆಲೆಯ ಪ್ರಪಂಚವನ್ನು ಪರಿಚಯಿಸುತ್ತಾನೆ. ಗೋಪಾಲಯ್ಯ ತಮ್ಮ ಮನೆಗೆ ಬಂದ ಅತಿಥಿಗಳನ್ನು ಪ್ರೀತಿಯಿಂದ ಸತ್ಕರಿಸಿದ್ದು ಅವರಲ್ಲಿರುವ ಮಾನವೀಯ ನೆಲೆಗಳನ್ನು ತೋರುತ್ತದೆ. ಶಿವರಾಮಯ್ಯನು ಗೋಪಾಲಯ್ಯನಿಂದ ಕಾಟುಮೂಲೆಯ ವಿಷಯವನ್ನು ತಿಳಿದು ಅದನ್ನು ಕುರಿತು ಕೇಳುತ್ತಾನೆ. ಆಗ ಗೋಪಾಲಯ್ಯ “*ಅದು ನಮ್ಮದೇ ಒಂದು ಜಾಗ ಆದರೆ ನೋಡಿ ಈ ಇಡೀ ವಟಾರದಲ್ಲಿ ಬೇರೊಂದು ಬ್ರಾಹ್ಮಣರ ಮನೆಯಿಲ್ಲ. ಹಾಗಾಗಿ ನಾನೇ ನಮ್ಮವರ ಒಬ್ಬ ಹುಡುಗನನ್ನು ಅಲ್ಲಿ ತೋಟದಲ್ಲಿ ತಂದು ಸ್ಥಾಪನೆ ಮಾಡಿ ಬಿಟ್ಟಿದ್ದೇನೆ. ಅಲ್ಲಿ ನನಗೆ ಏಳೆಂಟು ಖಂಡಿ ಅಡಿಕೆಯಾಗುವಷ್ಟು ದೊಡ್ಡ ತೋಟವಿದೆ. ನಮ್ಮ ಕಾಟುಮೂಲೆಯೆಂದರೆ ಇಲ್ಲಿಗೆ ಸಮೀಪ; ಏನು ಒಂದು ಗಳಿಗೆಯ ದಾರಿಯೂ ಇಲ್ಲ, ನಾನೇ ಕಡಿಸಿ, ಇಡಿಸಿ ನೆಟ್ಟು ಮಾಡಿದಂಥ ತೋಟವದು. ನಾರಾಯಣ ನಮ್ಮದೇ ಜಾತಿಯವ ಅಷ್ಟೇ. ಪಾಪ, ಎಲ್ಲೂ ಗತಿ ಗೋಮೂತ್ರವಿಲ್ಲದೆ ಅಲೆಯುತ್ತಿದ್ದ ಮೊದಲಿಗೆ ನಾನೇ ಅವನನ್ನು ಕರೆತಂದು ಅವನಿಗೊಂದು ಲಗ್ನ ಮಾಡಿಸಿದೆ ಅಲ್ಲಿನ ಮನೆಯಲ್ಲಿದ್ದು ತೋಟ ನೋಡಿಕೊಂಡಿರು ಎಂದು ಬಿಟ್ಟೆ ಹತ್ತಿರವಿರಲಿ ಎಂದು ಹಾಗೆ ಮಾಡಬೇಕಯಿತು*”[೬೭] ಎನ್ನುತ್ತಾರೆ.

ಹೀಗೆ ಗೋಪಾಲಯ್ಯ ನಿಸರ್ಗದ ಮಗುವಾಗಿ, ನಿಸರ್ಗದಲ್ಲೇ ತಮ್ಮ ನೆಲೆಯನ್ನು ಹುಟ್ಟಿನಿಂದ ಸಾವಿನವರೆಗೂ ತಮ್ಮ ಜೀವನವನ್ನು ನಡೆಸಲು ಇಚ್ಛೆ ಪಡುವವನು ಇಂತಹ ವಿಶಾಲ ಹೃದಯದ ವ್ಯಕ್ತಿ ಗೋಪಾಲಯ್ಯ ದಿಕ್ಕಿಲ್ಲದ ನಾರಾಯಣನನ್ನು ಕರೆದುಕೊಂಡು ಬಂದು ಅವನಿಗೆ ನಿಸರ್ಗದ ನೆಲೆಯಲ್ಲಿ ಒಂದು ಆಶ್ರಯವನ್ನು ಕಲ್ಪಿಸಿಕೊಟ್ಟಿರುವ ಸಂಗತಿ. ಇವರ ಮಾನವೀಯತೆ

೬೭. ಶಿವರಾಮಕಾರಂತ, ಬೆಟ್ಟದ ಜೀವ, ಪುಟ-೨೬

ನೆಲೆಗೆ ಹಿಡಿದ ಕನ್ನಡಿಯಾಗಿದೆ. ಶಿವರಾಮಯ್ಯ, ಗೋಪಾಲಯ್ಯ ಮತ್ತು ಶಂಕರಮ್ಮ ದಂಪತಿಗಳ ಮಗ 'ಶಂಭು' ಓದಲು ಮುಂಬೈಗೆ ಹೋಗಿ ಬಾರದೇ ಹೋಗಿರುವ ಸಂಗತಿಯನ್ನು ಅವರಿಂದಲೇ ತಿಳಿಯುತ್ತಾನೆ. ಶಿವರಾಮಯ್ಯ ನಗರ ಜೀವನದ ಪ್ರತೀಕವಾಗಿದ್ದರೂ ಕಾಡು ಜೀವನದ ದುಃಖದೊಂದಿಗೆ ಸಮಪಾಲು ಹಂಚಿಕೊಳ್ಳುವ ಪ್ರಸಂಗದಲ್ಲಿ ಶಿವರಾಮಯ್ಯನ ಮಾನವೀಯತೆ ತಿಳಿಯುತ್ತದೆ. ಒಂದು ಸಂದರ್ಭದಲ್ಲಿ ಶಿವರಾಮಯ್ಯ 'ಹಾಗಾದರೆ ಭಟ್ಟರೇ ಈ ಮೂಲೆಯಲ್ಲಿ ನೀವೂ ನಿಮ್ಮ ಹಿರಿಯರು ಇಷ್ಟೆಲ್ಲ ನೆಲವನ್ನು ಕುಡಿದು, ಬೆವರು, ರಕ್ತಗಳನ್ನೂ ಧಾರೆಯೆರೆದು ಮಾಡಿದ ಈ ನಂದನವನ ನಾಳೆಯಾರ ಪಾಲಿಗೆ ಸೇರಬೇಕು? ಯಾರಿಗಾಗಿ ಇದನ್ನೆಲ್ಲ ಮಾಡಿದಿರಂತೆ?' ಎಂದಾಗ ಶಂಭುವಿನ ವಿಷಯ ತಿಳಿದು ನಂತರ ತಾನು ಪುಣೆಯಲ್ಲಿ ಕಂಡ ಎಸ್.ಕೆ.ಶರ್ಮರ ವಿಚಾರ ಹೇಳಿ ಗೋಪಾಲಯ್ಯ ಮತ್ತು ಶಂಕರಮ್ಮ ದಂಪತಿಗಳಿಗೆ ಮನಸ್ಸಿಗೆ ನೆಮ್ಮದಿ ತರುತ್ತಾರೆ. ಆ ಮೂಲಕ ಶಂಭುಭಟ್ಟನ ಸುಳಿವು ನೀಡಿ, ನಂತರ ಗೋಪಾಲಯ್ಯನನ್ನು ಪುಣೆಗೆ ಶಿವರಾಮಯ್ಯ ಹುಡುಕಲು ಕರೆತರುತ್ತಾರೆ. ಹೀಗೆ ಶಿವರಾಮಯ್ಯನು ಆಧುನಿಕ ವ್ಯಕ್ತಿಯಾಗಿ ಹಳ್ಳಿಯ ಸೊಗಡಿನ ನಿಸರ್ಗದ ನೆಲೆಯಲ್ಲಿ ಅನುಭವ ಪಡೆದು ಅಲ್ಲಿನ ಪಾತ್ರಗಳೊಂದಿಗೆ ಬೆರೆತು, ಅವರ ಸುಖ ದುಃಖಗಳಲ್ಲಿ ಭಾಗಿಯಾಗಿ ತನ್ನ ಮಾನವೀಯ ನೆಲೆಯನ್ನು ಪ್ರಕಟ ಪಡಿಸುವುದು ಪ್ರಮುಖವಾಗಿದೆ.

ಮರಳಿ ಮಣ್ಣಿಗೆ ಕಾದಂಬರಿ ಕುರಿತು ಅನೇಕ ವಿಮರ್ಶಕರು ತಮ್ಮದೇ ದೃಷ್ಟಿಕೋನದಲ್ಲಿ ನೋಡಿದ್ದಾರೆ. ಅವರೆಲ್ಲರೂ ಮಣ್ಣಿನ ವಾಸನೆ ಮತ್ತು ನಗರದ ವಾಸನೆಯ ನಡುವೆ ಮನುಷ್ಯನ ದ್ವಂದ್ವ ಮನಸ್ಸುಗಳನ್ನು ಗುರುತಿಸುತ್ತಾರೆ. ಜಿ.ಎಸ್. ಅಮೂರವರು ಈ ಕಾದಂಬರಿಯ ಪಾತ್ರಗಳನ್ನು ಕುರಿತು *"ಈ ಕಾದಂಬರಿಯ ವಿಕಾಸದ ಕ್ರಮದಲ್ಲಿ ಮೂರು ಅವಸ್ಥೆಗಳನ್ನು ನಾವು ಗುರ್ತಿಸಬಹುದು. ಪ್ರಥಮ ಅವಸ್ಥೆಯಲ್ಲಿ ನಾವು ಕಾಣುವ ಗ್ರಾಮೀಣ ಸಮಾಜ ಗಟ್ಟಿಯಾಗಿ ಬೇರುರಿದೆ. ನಿರ್ದಿಷ್ಟವಾದ ಆರ್ಥಿಕ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ಹೊಂದಿದ, ಶಾಶ್ವತ ಮೌಲ್ಯಗಳನ್ನು ನಂಬಿದ ಸಮಾಜ, ಪರಂಪರೆ, ಸಂಪ್ರದಾಯ ಈ ಸಮಾಜದ ಜೀವಾಳ, ಇಲ್ಲಿ ಬಾಳುವ ಎಲ್ಲಾ ವ್ಯಕ್ತಿಗಳೂ ಸರಸೋತಿ, ರಾಮೈತಾಳ, ಪಾರೋತಿ, ಸತ್ಯಭಾಮೆ, ಶೀನಮಯ್ಯ, ನಾರಾಯಣಯ್ಯ ಇತ್ಯಾದಿ ತಮ್ಮ ಆವರಣದೊಂದಿಗೆ ಹೊಂದಿಕೊಳ್ಳುವುದರಲ್ಲಿಯೇ ಧನ್ಯತೆಯನ್ನು ಕಂಡು ಕೊಳ್ಳುತ್ತಾರೆ".*[೬೮]

ನಿರ್ದಿಷ್ಟವಾಗಿ ಹೊಂದಿರುವ ಶಾಶ್ವತ ಮೌಲ್ಯಗಳಲ್ಲಿ ಮಾನವೀಯ ಮೌಲ್ಯ ಒಂದಾಗಿದ್ದು, ಇದು ನಿಸರ್ಗದ ನೆಲೆಯಲ್ಲಿ ಪ್ರಕಟಗೊಳ್ಳುವುದು ಪ್ರಮುಖವಾಗಿದೆ. ರಾಮ ಐತಾಳ ಪೌರೋಹಿತ್ಯಕ್ಕಾಗಿ ಹೋಗುವಾಗ ತುಂಬಿ ಹರಿಯುತ್ತಿದ್ದ ನದಿಯನ್ನು ದಾಟುವಾಗ 'ಥತ್', ಇಂಥ ಹೊಳೆ ಸಾವಿರ ದಾಟಿಯೇನು ಎಂದು ಹಿಗ್ಗಿ ಮುಂದೆ ನಡೆದರು. ಆದರೆ ಸಂಜೆಗೂ ಹೀಗೆ ನೀರಿದ್ದರೆ ಮನೆಗೆ ಆ ರಾತ್ರಿ ಬರುವುದಿಲ್ಲ ಎಂದು ನಿಶ್ಚಯ ಮಾಡಿಕೊಂಡರು.

೬೮. ಟಿ.ಪಿ.ಅಶೋಕ (ಸಂ), ಈ ಶತಮಾನದ ನೋಟ ಶಿವರಾಮ ಕಾರಂತ, ಪುಟ-೧೭

ರಾಮ ಐತಾಳರ ನದಿ ದಾಟುವ ಸಾಹಸವನ್ನು ಪಾರೋತಿ, ಸರಸೋತಿಯರು ನೋಡುವುದು, ಅದರಲ್ಲೂ ಸರಸೋತಿ ತನ್ನ ಅಣ್ಣ ಕಣ್ಣಿಗೆ ಕಾಣಿಸುವವರೆಗೂ ನೋಡುವುದು. ನಿಸರ್ಗದ ನೆಲೆಯಲ್ಲಿ ಅಣ್ಣ ತಂಗಿಯರ ಮಾನವೀಯ ನೆಲೆಯಾಗಿದೆ. ಐತಾಳರ ಮಗ ಲಚ್ಚ, ಹೆಂಡತಿ ನಾಗವೇಣಿ ಮತ್ತು ಮಗ ರಾಮನನ್ನು ಬಿಟ್ಟು ಹೋಗುತ್ತಾನೆ. ಈ ಸಂಗತಿಯು ಅವನಲ್ಲಿರುವ ಅಮಾನವೀಯತೆ ಮತ್ತು ನಿಸರ್ಗದ ನೆಲೆಯಲ್ಲಿ ಹೊಂದಿಕೊಳ್ಳಲಾರದ ಗುಣವನ್ನು ಕಾಣಬಹುದು. ಆದರೆ ಈತನ ಮಗ ರಾಮ ಹುಟ್ಟಿದಾಗಲೆ ಕಡಲಿನ ಮೊರೆತದ ಬಗ್ಗೆ ಕನವರಿಸುತ್ತಿರುವನು.

'ಸ್ವಪ್ನದ ಹೊಳೆ' ಕಾದಂಬರಿಯನ್ನು ಕುರಿತು 'ರಂಗ ಭೂಮಿಯ ಕ್ಷೇತ್ರದಲ್ಲಿ ಪ್ರಯೋಗ ನಡೆಸಿದ ಒಬ್ಬ ವಿದ್ಯಾವಂತ ತರುಣನ ಬಾಳು ಬಾಲ್ಯದಿಂದ ಯೌವನದ ತನಗ ಚಿತ್ರಿತವಾಗಿದೆ ಹಾಗೆಯೇ ಕಾರಂತರು ಈ ಕಾದಂಬರಿಯ ಮುನ್ನುಡಿಯಲ್ಲಿ ಸ್ವಪ್ನಗಾರನ ಮನಸ್ಸೊಂದರ ಪರಿಚಯವನ್ನು ಮಾಡಿಕೊಟ್ಟಂತೆ, ಒಂದು ಪ್ರಲಬ್ದ ಸಮಸ್ಯೆಯ ವಿರಾಟ ರೂಪವನ್ನು ಅದರ ಹಿಂದು, ಮುಂದನ್ನು ಕಲಾವಿದನ ಕಣ್ಣಿನಿಂದ ತೋರಿಸಲು ಪ್ರಯತ್ನಿಸಿದ್ದೇನೆ. ಹಳೆಯ ಭೂತ ಎಷ್ಟು ಸುಂದರವೂ ಎಷ್ಟು ಭೀಕರವೋ ಎಷ್ಟು ಪುರಾತನವೋ ಅಷ್ಟು ಅರ್ವಾಚೀನ' ಎನ್ನುತ್ತಾರೆ. ಅಂದರೆ ಇಲ್ಲಿ ಬರುವ ಪಾತ್ರಗಳಾದ ಸೊಪ್ಪಿನ ಹಳ್ಳಿ ಪರಮೇಶ್ವರಯ್ಯನ ಮಗ ಕಿಟ್ಟಣ್ಣ, ನಿಸರ್ಗದ ನೆಲೆಯಲ್ಲಿ ತನ್ನ ಸ್ನೇಹಿತರೊಂದಿಗೆ ಅನುಭವಗಳನ್ನು ಪಡೆಯುತ್ತಾನೆ. ನಿಸರ್ಗದಿಂದ ದೂರ ಸರಿದು ನಗರಕ್ಕೆ ಹೋಗಿ ನಂತರ ಹಿಂತಿರುಗಿ ಬಂದಾಗಲೂ ನಿಸರ್ಗ ಇನ್ನೂ ಹಚ್ಚ ಹಸಿರಾಗಿ ಹೊಸ ರೂಪ ತಾಳಿ ಆಹ್ವಾನಿಸುತ್ತದೆ. ಈ ನಡುವೆ ಕಾಣಿಸಿಗುವ ಪಾತ್ರಗಳೆಂದರೆ ಕೃಷ್ಣನ ತಂಗಿ ರುಕ್ಮಿಣಿ, ಪರಮೇಶ್ವರಯ್ಯನ ಒಕ್ಕಲು ತಿಮ್ಮನ ಮಗ ಮಾದ, ಸಣ್ಣಪ್ಪ, ಗಣಪತಿ ಕುಲಕರ್ಣಿ ಬನ್ನಿ ಮುಂತಾದವರು, ಕೃಷ್ಣ ಮಂಗಳೂರಿನಲ್ಲಿ ಓದನ್ನು ಮುಗಿಸಿ ನಂತರ ಮುಂಬೈನಲ್ಲಿ ಪ್ರಾಧ್ಯಪಕನಾಗಿ ಅಲ್ಲಿ ತನ್ನ ಕಲಾ ಶಿಷ್ಯೆ ಬನ್ನಿಯು ಒಬ್ಬ ಗೃಹಸ್ಥ ಮಡಗಾಂವಕರ್‌ಗೆ ಮನಸೋತು ಗರ್ಭಿಣಿಯದಾಗ ಔದಾರ್ಯಕ್ಕೆ ಮತ್ತು ಕರುಣೆಗೆ ಒಳಗಾಗಿ ಆಕೆಯನ್ನು ಮದುವೆಯಾಗಿ ಮನೆಗೆ ಕರೆ ತರುವುದು ಇಲ್ಲಿನ ಕಥೆ.

ಕೃಷ್ಣ ಶಾಲೆಯನ್ನು ಬಿಟ್ಟ ತಕ್ಷಣ ನಿಸರ್ಗದ ಮಡಿಲನ್ನು ಸೇರುತ್ತಿದ್ದ. ಮಾದ ಮತ್ತು ಕೃಷ್ಣರು ಕಾಡಿನಲ್ಲಿ ಕಾಗೆಗಳು ಕುಕ್ಕು ಹಾರಲಿಕ್ಕೆ ಬಾರದ ಕೋಗಿಲೆಯ ಮರಿ ಕಾಣಿಸುತ್ತದೆ. ಅದನ್ನು ಹಿಡಿದು ಕಾಗೆಗಳಿಗೆ ಸಿಗದಂತೆ ಹಳುವಿನ ಬುಡದಲ್ಲಿ ಬಿಟ್ಟರು, 'ಅದು ಒಂದು ಮಾರು ಕುಪ್ಪಳಿಸಿ ನಿಂತಿತು: ಅದರ ಮೈ ಹೊಂಗತ್ತಲಿತ್ತು. ಮುಂದಕ್ಕೆ ಅದು ಹಾರಲಿಲ್ಲ. ಅಲ್ಲೇ ತಂಪಿನಲ್ಲಿ ನಿಂತಿತ್ತು: ಇವರನ್ನು ಕಂಡು ಅದಕ್ಕೆ ಭಯವೂ ಆಗಲಿಲ್ಲ. 'ಬಾಬಾ' ಎಂದು ಮಾದ ಕರೆದ. ಕಿಟ್ಟಣ್ಣ ಮೆಲ್ಲಗೆ ಅದನ್ನು

ತಿರುಗಿ ಸಮೀಪಿಸಿ ಬೆನ್ನಿನ ಮೇಲಕ್ಕೆ ಕೈಯಾಡಿಸಿದ ಅದು ಕದಲಿಲ್ಲ. ಅದಕ್ಕೆ ನಿದ್ದೆ ಬರುತ್ತಿರಬೇಕು. ಅದು ಮರಿಯೋ ಏನೋ ಅದರ ಅಬ್ಬೆ ಎಲ್ಲೋ ಏನೋ! ಈ ದರಿದ್ರ ಕಾಗೆಗಳಿಗೆ ಕೇಳುವವರಿಲ್ಲ' ಎಂದು ಕಿಟ್ಟ, 'ಇಲ್ಲ ಮಾದ, ಅದು ಉಳಿಯುವ ಹಾಗಿಲ್ಲ, ಅದರ ಗಳಿಗೆ ಬಂತು' ಎಂದು ತಿರುಗಿ ಅದರ ಮೈ ಮೇಲೆ ಕೈಯಾಡಿಸಿದ, ಅದು ಕಣ್ಣನ್ನು ತೆರೆಯಲಿಲ್ಲ, ಅದನ್ನೆತ್ತಿ ತೊಡೆಯ ಮೇಲೆ ಮಲಗಿಸಿ ಹಿಡಿದು ಆಗ ಅದರ ಜೀವ ಹಾರಿ ಹೋದುದು ತಿಳಿಯಿತು. ಕಿಟ್ಟುವಿನ ಕಣ್ಣುಗಳಿಂದ ನೀರು ಧಾರೆಯಾಗಿ ಇಳಿಯಿತು. ಮಾದನಿಗೂ ದುಃಖ ಬಂದಿತ್ತು. ಕಿಟ್ಟಣ್ಣ ಮಾದ ನಿಸರ್ಗದ ನೆಲೆಯನ್ನು ಕಂಡು ಅಸ್ವಾದಿಸುತ್ತಾ ತಮ್ಮ ಮಾನವೀಯ ನೆಲೆಗಳನ್ನು ಮರ, ಗಿಡ, ಪ್ರಾಣಿ ಮತ್ತು ಪಕ್ಷಿಗಳಲ್ಲಿ ಪ್ರಕಟಿಸುತ್ತಾ, ನಿಜವಾದ ನಿಸರ್ಗದ ವ್ಯಕ್ತಿಗಳಾಗುತ್ತಾರೆ.

'ಕುಡಿಯರ ಕೂಸು' ಕಾದಂಬರಿಯಲ್ಲಿ ಶಿವರಾಮಕಾರಂತರು ಆದಿವಾಸಿಗಳ ಸಂಸ್ಕೃತಿಯನ್ನು ಹೇಳಿದ್ದಾರೆ. ಈ ಕಾದಂಬರಿಯ ಪಾತ್ರಗಳ ಕಥೆಯು ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದ್ದಾಗಿದೆ. ನಿಸರ್ಗ ಪ್ರಿಯರಾದ ಕಾರಂತರು ಸಹಜವಾಗಿ ಘಟನೆಗಳನ್ನು ಹೇಳುತ್ತಾರೆ. ಈ ಕಾದಂಬರಿ ಮೂರು ತಲೆ ಮಾರಿನ ಕಥೆಯನ್ನು ಒಳಗೊಂಡಿದೆ. ಈ ಮೂಲಕ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನೆಲೆಗಳನ್ನು ಕಾರಂತರು ನಿಸರ್ಗದ ನೆಲೆಯಲ್ಲಿ ಹೇಳುತ್ತಾರೆ. ಈ ನೆಲೆಗಳಲ್ಲಿ ಮಾನಿವೀಯ ನೆಲೆಗಳು ಪ್ರಮುಖವಾಗಿದೆ. ಇಲ್ಲಿ ಬರುವ ಪ್ರಮುಖ ಪಾತ್ರಗಳೆಂದರೆ ಕೆಂಚ, ತಿಪ್ಪ, ಕರಿಯ, ಬೂದ, ತಿಮ್ಮ, ಕೆಂಪಿ, ಗಿಡ್ಡಿ ಮುಂತಾದವರು ಪ್ರಮುಕರು.

ಕೆಂಚನಿಗೆ ಭಯವಾಗಿದೆ. ಏಕೆಂದರೆ ಅವನ ಮಗ ತಿಪ್ಪ ಮರಕ್ಕೆ ಹತ್ತಿ ತನ್ನ ಕಣ್ಣು ಮುಂದೆ ಬಿದ್ದು ಮರಣ ಹೊಂದುತ್ತಾನೆ. ಇದಕ್ಕೆ ಊರ ದೈವವಾದ ಕಲ್ಕುಡಕನೆ ಕಾರಣ. ಏಕೆಂದರೆ ಅವನಿಗೆ ಕೋಲ ಜರುಗಿಸಿಲ್ಲ. ಬದಲಾಗಿ ದೊಡ್ಡ ದೈವ, ಮಲೆರಾಯ ಸ್ವಲ್ಪ ಮಟ್ಟಿಗೆ ಕುಡಿಯರ ಕುಲಕ್ಕೆ ಸಲ್ಲುವ ದೈವಕ್ಕಿಂತ ಬೇರೆಯೇ ದೈವ ನಿಸರ್ಗದ ಶಕ್ತಿಯಲ್ಲ. ತಿಪ್ಪ ಸೊಸೆ ಸಾವನ್ನು ಅಪ್ಪಿದ್ದನ್ನು ಕಂಡು ಇದಕ್ಕೆಲ್ಲ ನಮ್ಮ ಕಲ್ಕುಡನೆ ಕಾರಣವೆಂದು ತಿಳಿಯುತ್ತಾನೆ. ಅದಕ್ಕಾಗಿ ತನ್ನ ಮೊಮ್ಮಗ ಕರಿಯನ್ನು ಉಳಿಸಿಕೊಳ್ಳಲು ಭಯಪಟ್ಟು ಕೂಸು ಹುಟ್ಟಿದಾಗಲೇ ಸುಬ್ರಹ್ಮಣ್ಯ ದೇವರ ಹೆಸರನ್ನು ಇಡುತ್ತಾನೆ. ನಂತರ ಮಗುವನ್ನು ಉಳಿಸಿಕೊಳ್ಳಲು ಅವನು 'ಬೆದರಿಕೊಂಡು ಮನಸ್ಸಿನಲ್ಲಿ ಸುಬ್ರಮಣ್ಯನನ್ನು ನೆನೆದು ಶರಣು ಹೋದ, ನೆನೆದ ಮರುಕ್ಷಣ, ಕುಲ ದೇವತೆಯಾಗಿದ್ದ ಮಲೆರಾಯನ ನೆನಪಾಯಿತು, ದೈವಕ್ಕೆ ದೈವ ಇದಿರೆಂದು ತಿಳಿದೋ ಏನೋ, ಇಲ್ಲಿಗೂ ಬಂದು ಶರಣಾಗತನಾದ. ದುಃಖ ತುಂಬಿದ ಅಜ್ಜನ ಮುಖವೇ ಕರಿಯನನ್ನು ಸುಮ್ಮಗಿರಿಸಿತು. ತನಗಿಂತ ಅಜ್ಜ...ಕೆಂಚ ಇಷ್ಟೂ ಕದಲದೆ, ದೈವದ ಮುಂದೆ ದೀನವದನನಾಗಿ ಮೊರೆಯಿಡುತ್ತಿದ್ದಾನೆ.' 'ದೈವವೇ ಈ ಒಂದು ಬದುಕನ್ನು ಉಳಿಸಿಕೊಂಡು ಕಲ್ಲುಡನ ಸಿಟ್ಟಿನಿಂದ ಕಾಯಿ, ನಿನ್ನ ಸಾವನ್ನು ಬಿಟ್ಟು ಹೋದವೆಂದು

ನಿನ್ನ ಮಕ್ಕಳ ಮೇಲಿನ ಕರುಣೆ ಕಡಿಮೆ ಮಾಡುತ್ತೀಯಾ? ಇನ್ನು ನಾನಿರುವ ತನಕವೂ ತಪ್ಪದೆ ವರ್ಷಕ್ಕೊಮ್ಮೆ ಒಂದೊಂದು 'ಹಾರ'ವನ್ನೂ, ಚರುವನ್ನು ಕೊಡುತ್ತೇನೆ"[೧೯] ಎಂದು ಬೇಡಿಕೊಳ್ಳುತ್ತಾನೆ.

ಸಗುರಿಕಾರ ಕೆಂಚ ತುಂಬಾ ದುಃಖಿತನಾಗಿ ಅನುಭಾವಿಕ ನೆಲೆಯಲ್ಲಿ ಮಾನವೀಯ ನೆಲೆಯನ್ನು ನಿಸರ್ಗದ ನೆಲೆಯಲ್ಲಿ ವ್ಯಕ್ತಪಡಿಸುತ್ತಾನೆ. ಇಲ್ಲಿ ನಿಸರ್ಗವೆಂದರೆ ಅವರು ಪೂಜಿಸುವ ಕಲ್ಕುಡ ಮತ್ತು ಮಲೆರಾಯರಾಗಿದ್ದಾರೆ. ಕರಿಯ ದೊಡ್ಡವನಾದ ಮೇಲೆ ಕಿರುಮಲೆಯ ಗುರಿಕಾರನಾಗುತ್ತಾನೆ. ಅವನಿಗೆ ಆನೆ ಬೇಟೆಯೆಂದರೆ ತುಂಬಾ ಆಸೆ. ಆದರೆ ತಿಮ್ಮ ಕಾರಾಣಾಂತರಗಳಿಂದ ಕಿರುಮಲೆಯನ್ನು ಬಿಟ್ಟಾಗ, ಅವನಿಗಾಗಿ, ಒಳ್ಳೆಯ ಕುಮರಿ ಬೇಸಾಯ ಮಾಡಲು ಸಹ್ಯಾದ್ರಿ ಬೆಟ್ಟದ ಸೆರಗಿನಲ್ಲಿ 'ನಾಲ್ಕೆಂಟು ಎಕರೆ ವಿಸ್ತೀರ್ಣವಾದ ಸ್ಥಳ ಬಂಡೆಗಳ ಬುಡದಲ್ಲಿದೆ. ಅಲ್ಲಿ ಒಂದಲ್ಲ ಹತ್ತೆಂಟು ಗುಹೆಗಳಿವೆ. ಬಂಡೆಯ ಸೆರಗಿನಿಂದ ಸದಾ ಜಿನುಗುತ್ತಿರುವ ನೀರಿನ ಪ್ರವಾಹವು ಇತ್ತು. ಮೇಲಿಂದ ಅಲ್ಲಿಗೆ ಇಳಿಯುವುದು ಕಷ್ಟ. ಹೀಗಾಗಿ ಎಲ್ಲಾ ವಿಧಗಳಿಂದಲೂ ಅಲ್ಲಿ ರಕ್ಷಣೆಯುಂಟು ಅಲ್ಲಿ ಕುಮಾರಿ ಬೆಳೆ ಬೆಳೆಯಬಹುದು' ಎಂದು ತಿಳಿದು, ನಿಸರ್ಗದ ನೆಲೆಯಲ್ಲಿ ಆಧಾರ ಮಾಡಿಕೊಡುವ ಮೂಲಕ ತನ್ನ ಮಾನವೀಯ ಗುಣವನ್ನು ಮೆರೆಯುತ್ತಾನೆ. ಇದು ಅವರ ಸಂಸ್ಕೃತಿಯಾಗಿದೆ.

ನಿಸರ್ಗ ನೆಲೆಯೆನಿಸಿದ ಕಲ್ಕುಡಕ ದೆವ್ವ ಬರುವ ಪೂಜಾರಿಯ ಮೇಲೆ ಬಂದು ಮಲೆಯಲ್ಲಿ ನಡೆಯುತ್ತಿರುವ ಅನ್ಯಾಯಗಳನ್ನು ಹೇಳುತ್ತದೆ. ನಂತರ ಈ ಅನ್ಯಾಯಗಳನ್ನು ಮೊದಲೆ ಅರಿತಿದ್ದ ಕರಿಯ 'ಇದಕ್ಕೆಲ್ಲಾ ಆ ದೇವರೆ ನೋಡಿಕೊಳ್ಳುತ್ತಾನೆ' ಎಂದು ಗುರಿಕಾರಿಕೆ ತ್ಯಜಿಸಿ ಕಿರುಮಲೆಯನ್ನು ಬಿಟ್ಟು ಹೊರಡುತ್ತಾನೆ. ಇದನ್ನು ದೈವದ ಆದೇಶವನ್ನು ಕೇಳಿ ತಿಳಿದುಕೊಂಡ ಕೆಂಪಿ ಮಾನಸಿಕ ರೋಗಕ್ಕೆ ತುತ್ತಾಗಿ, ಕಾಯಿಲೆ ಬೀಳುತ್ತಾಳೆ. ಕೆಂಪಿಯ ವಿಷಯ ತಿಳಿದ ಕರಿಯ ಅಕ್ಕನನ್ನು ನೋಡಲು ಬಂದು, *"ಕರಿಯ ಗದ್ಗದಿತ ಕಂಠದಿಂದ ಅವಳ ತೋಳನ್ನು ಹಿಡಿದು ಅಕ್ಕ ಏನಾಯಿತು ನಿನಗೆ ಹೇಳು ಎಂದು ದುಃಖದಿಂದ ನುಡಿದ ಕೆಂಪಿಗೆ ಆ ನುಸು ಬೆಳಕಿನಲ್ಲೆ ಕರಿಯನ ಮುಖ ಸ್ಪಷ್ಟವಾಗಿ ಕಾಣಿಸದಿದ್ದರೂ, ಧ್ವನಿ ಕೇಳಿಸಿತು. ಗುರುತು ಹತ್ತಿತ್ತು. ಅವಳೆಂದ ಮಾತಿಷ್ಟೆ: "ಗುರಿಕಾರ, ನನ್ನದು ತಪ್ಪು ನಾನು ಕಡು ಪಾಪಿ" ಎಂದು ಪಳಪಳನೆ ಕಣ್ಣೀರು ಅವಳ ಎರಡು ಕಪೋಲಗಳಿಂದಲೂ ಹರಿಯ ತೊಡಗಿತು. ಮುಂದೆ ಅವಳ ಬಾಯಿಂದ ಮಾತು ಹೊರಡಲಿಲ್ಲ. ಕರಿಯ ಸ್ತಂಭಿತನಾಗಿ, ಅಲ್ಲಿ ಬಳಿಯಲ್ಲೇ ಕುಳಿತ, ತನಗೆ ನಾಲ್ಕು ದಿನಗಳ ಕಾಲ ಅನ್ನಕೊಟ್ಟು ಪಾಲಿಸಿದವಳ ಕೊನೆಗಾಲಕ್ಕಾದರೂ ತಾನು ಬಂದೆನಲ್ಲ ಎಂದೆಷ್ಟೆ ಸಮಾಧಾನ ಅವನಿಗೆ"*[೨೦] ಕರಿಯ ಹೀಗೆ ನಿಸರ್ಗದ ನೆಲೆಯಲ್ಲಿ ತನ್ನ ಮಾನವೀಯ ನೆಲೆಯನ್ನು ಪ್ರಕಟಿಸುತ್ತಾನೆ. ಇನ್ನೂ ಮಿಕ್ಕ ಪಾತ್ರಗಳು ಸಹ ನಿಸರ್ಗದ ನೆಲೆಯಲ್ಲಿ ಇದ್ದು, ಅವರು ತಮ್ಮದೇ ಆದ ರೀತಿಯಲ್ಲಿ ಬೇಸಾಯ, ಜಾತ್ರೆ, ಕಾಡು ಉತ್ಪನ್ನಗಳ ಸಂಗ್ರಹ, ಬೇಟೆ ಮುಂತಾದ ಕಾರ್ಯಗಳಲ್ಲಿ ನಿರತವಾಗಿರುವುದು ಮುಖ್ಯವಾಗಿದೆ

೧೯. ಶಿವರಾಮ ಕಾರಂತ, ಕುಡಿಯರ ಕೂಸು, ಪುಟ-೫೯

೨೦. ಅದೇ, ಪುಟ-೯೪

'ಚೋಮನ ದುಡಿ' ಕಾದಂಬರಿಯು ಭೂಮಿಯ ಒಡೆತನಕ್ಕಾಗಿ ನಡೆಸುವ ಹೋರಾಟ ಮತ್ತು ಈ ಹೋರಾಟವು ಜಾತಿಯ ಘರ್ಷಣೆಯನ್ನು ಹುಟ್ಟು ಹಾಕುವ ಬಗೆಯನ್ನು ಹೇಳುತ್ತದೆ. ಕಾರಂತರ ಕಾದಂಬರಿಗಳಲ್ಲಿ ಜೀವನ ದೃಷ್ಟಿಯಿರುತ್ತದೆ. ಈ ಜೀವನ ದೃಷ್ಟಿಯು ಸಾಮಾಜಿಕ ದೃಷ್ಟಿಕೋನವನ್ನು ಒಳಗೊಂಡಿದೆ. ಈ ಸಮಾಜಿಕ ದೃಷ್ಟಿಯ ವಿವಿಧ ನೆಲೆಗಳನ್ನು ಕಾರಂತರು 'ಚೋಮನ ದುಡಿ' ಕಾದಂಬರಿಯಲ್ಲಿ ಹೇಳುತ್ತಾರೆ. ಈ ನೆಲೆಗಳು ಆರ್ಥಿಕ, ರಾಜಕೀಯ ಸ್ಥಿತಿಗತಿಗಳನ್ನು ಒಳಗೊಂಡಿವೆ. ಈ ಎಲ್ಲಾ ನೆಲೆಗಳ ಮೂಲವೆಂದರೆ ನಿಸರ್ಗವಾಗಿದೆ. ಈ ನಿಸರ್ಗದ ನೆಲೆಯು ಮನುಷ್ಯನನ್ನು ವಿವಿಧ ದೃಷ್ಟಿಕೋನಗಳಿಗೆ ಒಳಗಾಗುವಂತೆ ರೂಪಿಸುತ್ತದೆ. ಅದನ್ನು ಅವನು ಪಾಲಿಸುವುದರ ಮೂಲಕ ತನ್ನ ಜೀವನವನ್ನು ಕಟ್ಟಿಕೊಳ್ಳುತ್ತಾನೆ. ಅಂತಹ ಕಟ್ಟಿಕೊಳ್ಳುವ ರೀತಿಯಲ್ಲಿ 'ಮಾನವೀಯ ನೆಲೆ'ಯು ಮುಖ್ಯವಾಗಿದೆ. ಇಲ್ಲಿ ಮಾನವೀಯ ನೆಲೆಯನ್ನು ಕೇವಲ ನಿಸರ್ಗದ ಸಂಬಂಧದಲ್ಲಿ ಪರಿಗಣಿಸಲಾಗಿದೆ.

ಭೋಗನಹಳ್ಳಿಯ ಚೋಮ ಈ ಕಾದಂಬರಿಯ ಮುಖ್ಯ ಪಾತ್ರಧಾರಿ. ಈತನ ಒಡೆಯ ಸಂಕಪ್ಪಯ್ಯ, ಚೋಮನ ಮಗಳು ಬೆಳ್ಳಿ ಇನ್ನು ಗಂಡು ಮಕ್ಕಳಾದ ಚೆನಿಯ, ಗುರುವ, ನೀಲ ಮತ್ತು ಕಾಳ ಪ್ರಮುಖರು. ಚೋಮನದು ಆಧುನಿಕ ಮನಸ್ಸು, ಅವನು ತನ್ನ ಸ್ವಂತ ದುಡಿಮೆಗಾಗಿ ಮತ್ತು ಆಸ್ತಿಯ ಒಡೆತನಕ್ಕಾಗಿ ಹಂಬಲಿಸುತ್ತಾನೆ. ಅದಕ್ಕಾಗಿ ತಾನು ಭೂಮಿಯ ಒಡೆಯನಾಗಲು ಕನಸು ಕಾಣುವುದು. ಅಸ್ಪೃಶ್ಯನಾಗಿ ಆಶ್ಚರ್ಯವೆನಿಸುತ್ತದೆ. ಆ ಕನಸು ಕಾಣಲು ಕಾರಣ ತನಗೆ ಕಾಡಿನಲ್ಲಿ ಸಿಕ್ಕ ಗಿಡ್ಡಗಳಿಂದ (ಹಸುಗಳಿಂದ) ಎಂಬುದು ಪ್ರಮುಖವಾಗಿದೆ. ಚೋಮನು ಅವನ್ನು ಬೆಳೆಸಿ, ತಾನು ಸ್ವತಃ ದುಡಿಯಬೇಕು ಎಂದುಕೊಳ್ಳುವುದು ಪ್ರಮುಖವಾಗಿದೆ.

ಸಂಕಪ್ಪಯ್ಯನ ಮನೆಯ ಮುಂದೆ ಕುಳಿತು 'ಧನಿಗಳಿಗೆ ಇಷ್ಟೆಲ್ಲ ಒಕ್ಕಲು ಮಕ್ಕಳಿದ್ದಾರೆ. ಈ ಚೋಮನಿಗೂ ಒಂದು ಹಾಳು ಕೊಂಪೆಯನ್ನು ಗೇಣಿಗೆ ಕೊಟ್ಟಿದ್ದರೆ. ನಿಮ್ಮ ಹೆಸರು ಹೇಳಿ ಬದುಕುತ್ತಿದ್ದ' ಚೋಮನ ಮಾತನ್ನು ಕೇಳಿದ ಸಂಕಪ್ಪಯ್ಯನವರಿಗೆ ಆಶ್ಚರ್ಯವೇ ಆಯಿತು. ಹೊಲೆಯರು ಬೇಸಾಯಗಾರರಾಗುವುದುಂಟೆ? ಎನಿಸಿತು ಆದರೆ, ಅವರಲ್ಲಿ ಬಂಜರು ಬಿದ್ದ ಎಷ್ಟೋ ಜಮೀನುಗಳಿದ್ದವು ಅದನ್ನೇಕೆ ಅವನು ಸಾಗುವಳಿ ಮಾಡಬಾರದೆಂದು ತೋಚಿದುದರಿಂದ, ಅದೇ ವಿಷಯವನ್ನು ಪ್ರಸ್ತಾಪಿಸಲು ಒಳಕ್ಕೆ ತಮ್ಮ ತಾಯಿಯ ಬಳಿಗೆ ಹೋದರು. ಚೋಮ ಆಸೆಯಿಂದ ಹೊರಗೆ ಕಾದುಕುಳಿತು. ತಾನು ಬೇಸಾಯಗಾರನಗುವ ಸುದಿನ ಬಂತೆಂದು ಎದೆಯು ಉಲ್ಲಾಸದಿಂದ ಬಡಿಯಿತು. ಕಾಫಿತೋಟದ ಮರವೆಯಾಯಿತು. ಧನಿಗಳು ತಿರುಗಿ ಬಂದು *"ಚೋಮ, ಇದುವರೆಗೆ ನಮ್ಮ ಹಿರಿಯರು ನಿಮ್ಮವರಿಗೆ ಗೇಣಿಗೆ ಗದ್ದೆ ಕೊಟ್ಟಿದ್ದಿಲ್ಲ. ಈಗ ಹಾಗೆ ಕೊಡಲಿಕ್ಕೆ ಬರುವ ಹಾಗೆ ಇಲ್ಲ".*[೭೧] ಇದನ್ನು ಕೇಳಿದ ಚೋಮನಿಗೆ ನಿರಾಶೆಯಾಗಿರಬಹುದು: ಆದರೆ ಧನಿ ಸಂಕಪ್ಪಯ್ಯ

೭೧. ಶಿವರಾಮಕಾರಂತ, ಚೋಮನದುಡಿ, ಪುಟ–೫೩

ಮನಸ್ಸಿನಲ್ಲಿ ಮರುಕವಿದೆ. ತಲತಲಾಂತರಗಳಿಂದ ಭೂಮಿಯಿಲ್ಲದೆ ದುಡಿಯುತ್ತಿರುವ ಚೋಮನಂತಹ ಕಟ್ಟಕಡೆಯ ವ್ಯಕ್ತಿಗೆ 'ಭೂಮಿ' ಕೊಡಬೇಕು ಎಂದು ಯೋಚಿಸುವ ನೆಲೆಯಲ್ಲಿ ಮಾನವೀಯತೆ ತಿಳಿಯುತ್ತದೆ.

'ಕನ್ನಡಿಯಲ್ಲಿ ಕಂಡಾತ' ಕಾದಂಬರಿಯನ್ನು ಕಾರಂತರು ೧೯೭೭ರಲ್ಲಿ ಪ್ರಕಟ ಪಡಿಸಿದರು. ಈ ಕಾದಂಬರಿಯು ಒಬ್ಬ ಸಂಸಾರಿಗನ ಅಹಂಕಾರ ಮತ್ತು ಈ ಅಹಂಕಾರ ಭಂಗವಾದ ಬಗೆಯನ್ನು ಹೇಳುತ್ತದೆ. ಇದರ ಮುಖ್ಯ ಪಾತ್ರ ಮಂಗಲಪಾಡಿಯ ಪರಮೇಶ್ವರಯ್ಯ: ಇವನು ಮಹಾಗರ್ವಿ: ಹೆಂಡತಿ ಮಕ್ಕಳನ್ನು ದನಕ್ಕೆ ಬಡೆಯುವಂತೆ ಬಡಿಯುತ್ತಿದ್ದ. ಸಹ ಶಿಕ್ಷಕಿ ಚಂದ್ರಿ, ಇವಳು ಗುಂಡಣ್ಣರ್ಯ ಎಂಬುವವನ ತೆಕ್ಕಿಗೆ ಬಿದ್ದಾಗ: ಮಾನಸಿಕ ಉದ್ವೇಗಕ್ಕೆ ಒಳಗಾಗುತ್ತಾನೆ. ಕೊನೆಗೆ ಊರು ಬಿಟ್ಟು ದೇಶ ಪರ್ಯಟನೆಯನ್ನು ಉಚ್ಚನಂತೆ ತಿರುಗುತ್ತಾನೆ. ಕೊನೆಗೆ ಮಲೆಮನೆ ಮಂಜಪ್ಪನವರ ಪ್ರೋತ್ಸಾಹದಿಂದ ಮತ್ತೇ ಹೊಸ ಮನುಷ್ಯನಾಗಿ ಪರಿವರ್ತನೆಯಗುತ್ತಾನೆ. ಎಂಬುದೇ ಈ ಕಾದಂಬರಿಯ ಕಥೆ. ಕಾದಂಬರಿಯ ಉಳಿದ ಪಾತ್ರಗಳೆಂದರೆ ಕಾಮೇರಮ್ಮ, ಜಾನಕಿ, ಜಯರಾಮ, ನಾಗಪ್ಪಯ್ಯ ಮಾಸ್ತರ ಪ್ರಮುಖರು.

ಪರಮೇಶ್ವರಯ್ಯನು ದೇಶ ಪರ್ಯಟನೆಯ ಮುಖಾಂತರ ತನ್ನ ಜೀವನವನ್ನು ಮರುಭೂಮಿಯಾಗಿಸಿಕೊಳ್ಳುತ್ತಾನೆ. ಈ ಕಾದಂಬರಿ ಕುರಿತು ಪಾ.ವೆಂ. ಆಚಾರ್ಯರವರು ಹೇಳುವ ಮಾತೆಂದರೆ ಅದಕ್ಕೆ ಹೆಸರು ಕೊಟ್ಟ ಮನುಷ್ಯ ದ್ವೇಷಿ ಪರಮೇಶ್ವರನಾಗಲಿ, ಅವನ ಭ್ರಮಣಗಳಾಗಲೀ ಒಂದಿಷ್ಟು ನನಗೆ ಮರು ಹೊಳೆಯಲೇ ಇಲ್ಲ. ಕಾರಂತರ ಕಾದಂಬರಿ ಜಗತ್ತಿನ ಅಪರೂಪ ಪಾತ್ರಗಳಲ್ಲಿ ಅವನೊಬ್ಬನಾದರೂ ಅವನು ತನ್ನ ಮನಸ್ಸಿನಲ್ಲಿ ಏಕೆ ನಿಲ್ಲಿಲ್ಲ? ಅದಕ್ಕೆ ಕಾರಣ ಮಂಜಯ್ಯನವರ ವ್ಯಕ್ತಿತ್ವ ಅವರಲ್ಲಿ ಹೇಳಿಕೊಳ್ಳಬಹುದಾದ ಯಾವ ವಿಚಿತ್ರ ಗುಣವೂ ಇಲ್ಲದಿದ್ದರೂ ನನ್ನ ಮನಸ್ಸಿನಲ್ಲಿ ಹಸಿಗೋಡೆಗೆ ಎಸೆದ ಕಲ್ಲಿನಂತೆ ಗಟ್ಟಿಯಾಗಿ ನಿಂತು ಬಿಟ್ಟಿದ್ದು ಅದು ನನ್ನಲ್ಲಿ ಪರಮೇಶ್ವರನನ್ನು ಸಂಪೂರ್ಣ ಮರೆ ಮಾಡಿ ಬಿಟ್ಟಿತು. ಪರಮೇಶ್ವರನ ಪಾತ್ರವು ಒಂದು ರೀತಿಯಲ್ಲಿ ವಿಚಿತ್ರವಾದದು ಅವನು ಹೆಣ್ಣಿನ ಮೋಹಕ್ಕೆ ಬಲಿಯಾಗಿ ತನ್ನ ಜೀವನವನ್ನು ತಾನೇ ಹಾಳು ಮಾಡಿಕೊಳ್ಳುವ ಮೂಲಕ ದುರಂತ ಪಾತ್ರವಾಗಿ ಕಂಡು ಬರುತ್ತಾನೆ. ಈ ಸಂಗತಿ ಪ್ರತಿಯೊಬ್ಬ ಮನುಷ್ಯನ ಏಳು ಬೀಳಿನ ಜೀವನವನ್ನು ಪ್ರತಿಬಿಂಬಿಸುತ್ತದೆ.

ಪರಮೇಶ್ವರಯ್ಯ ಕಾಡು, ಬೆಟ್ಟ, ಗುಡ್ಡ, ನದಿ, ಬಯಲು, ಹಳ್ಳ, ಹೀಗೆ ಎಲ್ಲಂದರಲ್ಲಿ ತಿರುಗಾಡುತ್ತಾನೆ. ಕಡೆಗೆ ಮಲೆಮನೆ ಮಂಜಯ್ಯನವರು ಇರುವ ಮನೆಯ ಹತ್ತಿರದ ಕಾಡಿನಲ್ಲಿ ದಾರಿ ತಪ್ಪಿ *"ಓ ಅಣ್ಣ, ಓ ಅಪ್ಪ ಯಾರಾದರೂ ಇದ್ದಾರೆಯೇ? ಎಂಬ ಆರ್ತನಾದ ಹೊರಡಿಸುತ್ತ ಆ ಕಾಡಿನಲ್ಲಿ ಕಂಗಾಲಾಗಿ ಅಲೆದಾಡಿದ ಹಾಗೆ ಎಷ್ಟೋ ಹೊತ್ತು ಕಿರಿಚಿದ. ಎಷ್ಟು ಅವನ್ನೊಂದು ಕಂಗೆಟ್ಟ ಪ್ರಾಣಿಯನ್ನಾಗಿ*

ಮಾಡಿಸಿತು. ಅಂಥ ಸ್ಥಿತಿಯಲ್ಲಿ ಆತ ಎಷ್ಟೋ ಗಳಿಗೆಗಳನ್ನು ಕಳೆಯ ತೊಡಗಿದ"[೭೨] ಈ ಸ್ಥಿತಿಯನ್ನು ಕಂಡ ಮಂಜಪ್ಪನವರ ಆಳುಗಳು ಅವನನ್ನು ಕಾಪಾಡುತ್ತಾರೆ. ಮಲೆಮನೆಯ ಮಂಜಪ್ಪನವರು ವಾಸಿಸುವ ಪ್ರದೇಶ ಸಾಮಾನ್ಯಾವಾದುದಲ್ಲ. ಅದು ಸಹ್ಯಾದ್ರಿ ಬೆನ್ನಿನಲ್ಲಿರುವ ಮಾವಿನ ಗುಂಡಿಯಿಂದ ಕೋಗಾರದ ತನಕವು ಘಟ್ಟದ ಗೋಡೆಯನ್ನು ಸೀಳುವ ಹೆದ್ದಾರಿಗಳಿಲ್ಲದಿದ್ದುದರಿಂದಲೂ ಏನೋ, ಅಲ್ಲಿ ವನಪ್ರದೇಶ ಇನ್ನು ಸಂರಕ್ಷಿತವಾಗಿದೆ. ಅಂತಹ ಸ್ಥಳದಲ್ಲಿ ಮಂಜಪ್ಪನವರ ಮನೆಯಿದ್ದು, ಇಲ್ಲಿಗೆ ಪರಮೇಶ್ವರಯ್ಯನನ್ನು ಕರೆತಂದು ಚಿಕಿತ್ಸೆ ಕೊಡಿಸಿ ನಂತರ ಮಲೆಮನೆಯಲ್ಲಿ ಶಿಕ್ಷಕನನ್ನಾಗಿ ನೇಮಿಸುತ್ತಾರೆ. ಈ ಮೂಲಕ 'ಮಲೆಮನೆಮಂಜಪ್ಪ'ನವರು ತಮ್ಮ ಮಾನವೀಯತೆಯನ್ನು ಮೆರೆಯುತ್ತಾರೆ.

ಸಾಂಸ್ಕೃತಿಕ ನೆಲೆ :

ಕಾರಂತರು ತಮ್ಮ ಕಾದಂಬರಿಗಳ ಮುಖಾಂತರ ಮಾನವ ಸಂಸ್ಕೃತಿಯನ್ನು ಹೇಳುತ್ತಾರೆ. ಸಂಸ್ಕೃತಿಯೆಂದರೆ ಸಾಮಾನ್ಯ ಅರ್ಥದಲ್ಲಿ 'ಮನುಷ್ಯನ ಆಚಾರ ವಿಚಾರ' ಎನ್ನಲಾಗುತ್ತದೆ. ಆದರೆ ಈ ಆಚಾರ ವಿಚಾರಗಳು ಮನುಷ್ಯನ ನಡುವಳಿಕೆಯಲ್ಲಿ ಅಡಗಿರುತ್ತದೆ. ಅದು ಅವನ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ನೆಲೆಗಳ ಮೇಲೆ ಪ್ರಭಾವ ಬೀರುತ್ತದೆ. ಇದನ್ನು ಕಾರಂತರು ನಿಸರ್ಗದ ನೆಲೆಗಳಲ್ಲಿ ಗುರ್ತಿಸುವುದು ಪ್ರಮುಖವಾಗಿದೆ. ಸಾಂಸ್ಕೃತಿಕ ನೆಲೆಯನ್ನು ಅರಿಯಲು ಪರಗಣಿಸಿರುವ ಕಾದಂಬರಿಗಳೆಂದರೆ–'ಕನ್ನಡಿಯಲ್ಲಿ ಕಂಡಾತ', 'ಅಂಟಿದ ಅಪರಂಜಿ,' 'ಮೊಗಪಡೆದ ಮನ', ಗೆದ್ದ ದೊಡ್ಡಸ್ತಕೆ', 'ಗೊಂಡಾರಣ್ಯ', 'ಇನ್ನೊಂದೇ ದಾರಿ', 'ಶನೀಶ್ವರನ ನೆರಳಲ್ಲಿ', 'ಮರಳಿ ಮಣ್ಣಿಗೆ', ನಷ್ಟ ದಿಗ್ಗಜಗಳು', 'ಧರ್ಮರಾಯನ ಸಂಸಾರ', 'ಬೆಟ್ಟದ ಜೀವ', 'ಕುಡಿಯರ ಕೂಸು', 'ಚೋಮನ ದುಡಿ', 'ಅಳಿದ ಮೇಲೆ' ಆಗಿದೆ.

'ಕನ್ನಡಿಯಲ್ಲಿ ಕಂಡಾತ' ಕಾದಂಬರಿಯು ಮುಖ್ಯವಾಗಿ ನಿಸರ್ಗದ ನೆಲೆಯಲ್ಲಿ ಸಾಮಾಜಿಕ ವಿಪ್ಲವಗಳನ್ನು ಕುರಿತು ಮಾತನಾಡುತ್ತದೆ. ಈ ಕಾದಂಬರಿಯ ಕಥಾನಾಯಕನ ಮಾನಸಿಕ ಉದ್ವೇಗಳನ್ನು ಗುರ್ತಿಸುತ್ತಾರೆ. ಕಾರಂತರು ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿಯ ಊರಾದ ಮಂಗಳ ಪಾಡಿಯಲ್ಲಿ ವಿಶಾಲ ಹಿಂದೂ ಸಾಗರದ ದಂಡೆಯ ಮೇಲಕ್ಕೆ ಇರುವ ಒಂದು ಹಳ್ಳಿ ಮಂಗಲಪಾಡಿ ಅರಬ್ಬೀ ಸಮುದ್ರದ ಅಂಚು, ಮಂಗಲ ಪಾಡಿಯ ನೆಲೆಯನ್ನು ಸದಾ ಚುಂಬಿಸುತ್ತಿರುತ್ತದೆ. "*ಒಂದು ಅರ್ಧ ಮೈಲು ಕೂಡ ಅಗಲವಿಲ್ಲದ, ಮರಳಿನ ಬೇಲಿ ಕಳೆದೊಡನೆಯೇ ಊರಿನ ಬಯಲು, ಗದ್ದೆಗಳು ಸುಂದರವಾಗಿ ಅಬ್ಬಿಕೊಂಡಿವೆ ಇಂತಹ ನೆಲೆಯಲ್ಲಿ ವಾಸಿಸುತ್ತಿರುವಲ್ಲಿ ಪರಮೇಶ್ವರಯ್ಯನ ಮನೆಯಿದೆ. ಇವರಿಗೆ ನಿಸರ್ಗದ ನೆಲೆಯಾದ 'ಭೂಮಿ'ಯಿದ್ದು ಪರಮೇಶ್ವರ ಯ್ಯನು ಸ್ವತಃ ವ್ಯವಸಾಯ ಮಾಡಲು ಇದು ಕೃಷಿ ಸಂಸ್ಕೃತಿ. ಕಡೆಗೆ ಜೀವನದಲ್ಲಿ ಹೆಣ್ಣು ಮತ್ತು ಹಣದ ವ್ಯವಹಾರದಲ್ಲಿ ಪರಿತಪಿಸಿ ಕಡೆಗೆ ದೇಶಾಂತರ ಹೊರಟು ಕೃಷಿ ಸಂಸ್ಕೃತಿಯಿಂದ ತಪ್ಪಿಸಿಕೊಳ್ಳುತ್ತಾನೆ. ಪಲಾಯನ ಮಾಡಿದ ಪರಮೇಶ್ವರಯ್ಯ ಸನ್ಯಾಸಿಯಾಗಿ ತಿರುಗುತ್ತಾನೆ. ಕಡೆಗೆ*

೭೨. ಶಿವರಾಮ ಕಾರಂತ, ಕನ್ನಡಿಯಲ್ಲಿ ಕಂಡಾತ, ಪುಟ–೧೦೬.

ಮಲೆ ಮನೆ ಮಂಜಪ್ಪನವರ ಮನೆ ಸೇರುತ್ತಾನೆ. ಮಲೆಮನೆ ಮಂಜಪ್ಪನವರ ಮನೆತನದ ಬಗ್ಗೆ ಕಾರಂತರು ಕಳೆದ ಶತಮಾನದಿಂದಲೂ ಕೇಳಿ ಬಂದು ಒಂದು ಪುರಾತನ ಬ್ರಾಹ್ಮಣ ಮನೆತನ ಮೇಲೆ ಮನೆ ಮಂಜಪ್ಪನವರದು ಮಂಜಪ್ಪನವರು ಮೂರೋ ನಾಲ್ಕೊ ತಲೆಮರಿನ ಹಿಂದಿನವರು ಮಲೆಮನೆ ಎಂಬಲ್ಲಿ ಹುಟ್ಟಿ ಬೆಳೆದರು. ಸಹ್ಯಾದ್ರಿ ಪರ್ವತದ ಮೂಡಣ ತಪ್ಪಲಲ್ಲಿ ಹುಟ್ಟಿ ಬೆಳೆದವರು".[೭೩] ಹೀಗೆ ಮಂಜಪ್ಪನವರು ಗುದ್ದಲಿಯನ್ನು ಹಿಡಿದು ನೆಲ ಅಗೆದು, ಹೊಲ ಮಾಡಿ ತೋಟ ನೆಟ್ಟು ಮುಂದೆ ಆಳುಗಳನ್ನು ಸೇರೆಗಾರರನ್ನು ಬರಮಾಡಿಕೊಂಡು ಒಂದೇ ಸಮನೆ ಜಮೀನನ್ನು ವಿಸ್ತರಿಸಿದರು. ಹೀಗೆ ಅನೇಕ ಬ್ರಾಹ್ಮಣ ಕುಟುಂಬಗಳು ಅಲ್ಲಿ ಬಂದು ನೆಲೆಸಿ ಕೃಷಿಯಲ್ಲಿ ತೊಡಗಿ ನಿಸರ್ಗದೊಂದಿಗೆ ಸಂಬಂಧ ಬೆಳೆಸಿಕೊಂಡು ತಮ್ಮ ಸಾಂಸ್ಕೃತಿಕ ನೆಲೆಯನ್ನು ಭದ್ರಪಡಿಸಿಕೊಳ್ಳುತ್ತಾರೆ.

ಅಂಟಿದ ಅಪರಂಜಿ ಕಾದಂಬರಿಯು ನಮ್ಮ ಸಮಾಜದಲ್ಲಿ ಧಾರ್ಮಿಕ ಮತ್ತು ಸಾಮಾಜಿಕ ರಂಗಗಳಲ್ಲಿ ಬೇರು ಬಿಟ್ಟಿರುವ ಮಾನವನ ದಿವಾಳಿತನದ ನೆಲೆಗಳನ್ನು ಹೇಳುತ್ತದೆ. ಇದರೊಂದಿಗೆ ಮನುಷ್ಯನ ಸಾಂಸ್ಕೃತಿಕ ನೆಲೆಯನ್ನು ನಿಸರ್ಗದ ನೆಲೆಯಲ್ಲಿ ನೋಡಲಾಗಿದೆ. ಹಿಂದೆ ನಗರವಾಗಿದ್ದಂತ ಗುಡಿ, ಗುಡಾರ, ಕೆರೆ, ಕುಂಟೆ, ದೇಗುಲದ ಮೊದಲಾದ ಅವಶೇಷಗಳು ಬಹಳ ವಿಸ್ತಾರಕ್ಕೆ ಹರಡಿರುವ ಈ ಪ್ರದೇಶದಲ್ಲಿ ಕೆಲವು ನೂರು ವರ್ಷಗಳ ಕಾಲ ಒಂದಿತ್ತು. ಮುಂದೆ ಬರಗಾಲ ಬಂದೋ, ರೋಗ ರುಜಿನಗಳು ಹಬ್ಬಿಯೋ ಮುಂದಣ ಕೆಲವು ಶತಮಾನಗಳ ಕಾಲ ಇಲ್ಲಿ ಮನುಷ್ಯರೆ ಸುಳಿದಾಡದೆ ಹೋಗಿ ಈ ತಾವು ಕಾಡು ಹಂದಿ, ಚಿರತೆ, ಚಿಗುರ, ಕಾಟೆಗಳ ವಸತಿಯಾದ ಚಹರೆಗಳು ಇವೆ.

ಈ ಕಾದಂಬರಿಯಲ್ಲಿ ಬರುವ ಪಾತ್ರಗಳಾದ ದಿವಾಕರ ಧನ್ಯ, ಹಯವದನ ಮತ್ತು ಅನಂತರಾಯರು ನಿಸರ್ಗದಲ್ಲಿ ವಿವಿಧ ತೆರನಾಗಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ. ಈ ಮೂಲಕ ತಮ್ಮ ಸಾಂಸ್ಕೃತಿಕ ನೆಲೆಯನ್ನು ಗಟ್ಟಿಗೊಳಿಸಿ ಕೊಂಡಿರುವುದು ಪ್ರಮುಖವಾಗಿದೆ. ದಿವಾಕರ ಧನ್ಯರಿಗೆ ತಮ್ಮ ಹೊಲದಲ್ಲಿ ತಾಮ್ರ ಶಾಸನ ಸಿಕ್ಕಿದಾಗ, ಅವರಿಗೆ ಅದೃಷ್ಟ ಕೂಡಿ ಬಂದಂತೆ ಆಯಿತು. ಇದನ್ನು ಅವರು ಸುಳ್ಳುಗಳನ್ನು ಹೇಳುವ ಮೂಲಕ ಅದೃಷ್ಟವನ್ನು ತನ್ನದಾಗಿಸಿಕೊಳ್ಳುತ್ತಾರೆ. ಅವರಿಗೆ ಬಂದ ಕನಸಿನ ಬಗ್ಗೆ ಹೇಳುತ್ತಾರೆ. ಮೊನ್ನೆ ದಿನ ನನ್ನ ಕನಸಿನಲ್ಲಿ ಈ ಶಾಸನದಲ್ಲಿ ಅಮ್ಮನವರ ಸೇವೆಗಾಗಿ ಆಲೂಪದೊರೆ ದತ್ತಿ ಬಿಟ್ಟ ಯಾವತ್ತು ಉಂಬಳಿ ಜಮೀನು ತನ್ನದೇ ಪೂರ್ವಜರದ್ದು ಎಂದು ಕನಸಾಯಿತು.

ದಿವಾಕರಶರ್ಮರು ದೇವಾಲಯ ಕಟ್ಟಿಸಿ ತನ್ನ ಭಕ್ತಿಯ ಸಾಂಸ್ಕೃತಿಕ ಒಲವನ್ನು ಪ್ರಚಾರ ಪಡಿಸುತ್ತಾನೆ. ಅದಕ್ಕಾಗಿ ದೇವಾಲಯದ ಮುಂದೆ ಒಂದು ಕೆರೆಯನ್ನು ತೋಡಿಸಿದರು. ಆಗ ಅನೇಕ ಮನೆಗಳು ಕೆರೆಯ ಪಕ್ಕದಲ್ಲಿ ಹುಟ್ಟಿಕೊಂಡವು. ಆ ದೃಷ್ಟಿಯಿಂದ ಮುಂದೆ ಸುಡಿಮಂಗಲ

೭೩. ಶಿವರಾಮಕಾರಂತ, ಕನ್ನಡಿಯಲ್ಲಿ ಕಂಡಾತ, ಪುಟ-೬೪

ನಗರವೆಂದು ಮೆರೆದ ಹಿಂದೆ ಪೆಡನಿಡಿಯೂರು ಎನಿಸಿದ್ದ ನೆಲ ಇನ್ನಷ್ಟು ಪವಿತ್ರ ಪ್ರದೇಶವಾಯಿತು. ಅಲ್ಲಿ ಕಾಲದ ಹಾವಳಿಯಿಂದ ಕಾಡು ಕವಿದು, ಅಲ್ಲಿನ ಒಬ್ಬಳು ದೇವಿಗೆ ತಾತ್ಕಾಲಿಕ ಗ್ರಹಣ ಕವಿಯಿತು, ಆದರೆ ಆಗಲೂ ಮುಂದೆಯೂ ತ್ರಿಕಾಲ ಜ್ಞಾನದ ಸಂಕೇತವಾದ ಒಂದು ಅಶ್ವತ್ಥವೃಕ್ಷ ಚ್ಯುತಿಯಿಲ್ಲದೆ ಅಲ್ಲಿ ನಿಂತದನ್ನು ಕಾಣಬಹುದು.

ಹೀಗೆ ಕಾರಂತರು ದಿವಾಕರ ಶರ್ಮನು ದೇವಾಲಯವನ್ನು ಕಟ್ಟಿಸುವ ಮೊದಲು ಆ ಪ್ರದೇಶದ ನಿಸರ್ಗದ ವೈಚಿತ್ರ್ಯಗಳನ್ನು ಹೇಳುತ್ತಾರೆ. ದಿವಾಕರ ಶರ್ಮ ಜನರನ್ನು ವಂಚಿಸಿ ತನ್ನ ಉದರ ಪೋಷಣೆಗಾಗಿ 'ನುಡಿ ಮಂಗಲಮ್ಮ'ನ ದೇವಾಲಯವನ್ನು ಕಟ್ಟಿಸಿ ಸಾಂಸ್ಕೃತಿಕವಾಗಿ ತನ್ನ ಕಪಟ ಭಕ್ತಿಯನ್ನು ನಿರೂಪಿಸುತ್ತಾನೆ. ನುಡಿಮಂಗಲಮ್ಮನ ದೇವಾಲಯ ಮತ್ತು ಆಸ್ತಿಗಾಗಿ ದಿವಾಕರಶರ್ಮನ ಮಕ್ಕಳಾದ ಸೂರ್ಯನಾರಾಯಣಶರ್ಮ ಮತ್ತು ಚಂದ್ರಶೇಖರ ಶರ್ಮರು ಆಸ್ತಿಗಾಗಿ ಕೋರ್ಟು ಕಛೇರಿ ಎಂದು ತಿರುಗಿ ಕೊನೆಗೆ ಚಂದ್ರಶೇಖರರಿಗೆ ಆಸ್ತಿಯ ಹಕ್ಕು ಬಂದು, ಅವರ ಮಗನಾದ ಇಮ್ಮಡಿ ಕುಮಾರ ದಿವಾಕರಶರ್ಮ ಆಸ್ತಿಯ ಒಡೆಯನಾದನು. ನುಡಿಮಂಗಲ ಬೆಳದಂತೆ ನಗರ ತನ್ನ ಪೂರ್ವದ ಅಸ್ತಿತ್ವವನ್ನು ಕಳೆದುಕೊಂಡು ಸಾಂಸ್ಕೃತಿಕ ವೈಭವದೊಂದಿಗೆ ನಗರವಾಗಿ ಬೆಳೆಯಿತು.

ಪೇಜೆತ್ತಾಯನ ಹೋಟೆಲ್ ನಲ್ಲಿ ಸೇವೆ ಸಲ್ಲಿಸುತ್ತಿದ್ದ ಹಯವದವನು ತುಂಬಾ ಮೋಸಗಾರ ಮತ್ತು ತನ್ನ ಮೋಡಿ ಮಾತುಗಳಿಂದ ಜನರನ್ನು ಆಕರ್ಷಿಸಿ, ಆ ಮೂಲಕ ದುಡ್ಡನ್ನು ಸಂಪಾದಿಸಿ ಜೀವನ ಸಾಗಿಸುತ್ತಾನೆ. ಈ ಕಾದಂಬರಿಯಲ್ಲಿ ಬರುವ ಪಾತ್ರಗಳು ನಿಸರ್ಗದ ನೆಲೆಯಲ್ಲಿ ಸಾಂಸ್ಕೃತಿಕ ಸಂಬಂಧವನ್ನು ರೂಢಿಸಿಕೊಂಡಿರುವುದು ಪ್ರಮುಖವಾಗಿದೆ.

'ಮೊಗಪಡೆದ ಮನ' ಕಾದಂಬರಿ ಮುಖ್ಯ ಪಾತ್ರಗಳೆಂದರೆ – ವ್ಯಾಸ, ಕೃಷ್ಣ, ವಿಮಲೆ, ನಂದಿನಿ, ಅನಂತರಾಯ, ರಾಮರಾಯ, ಟೂಬಾ, ಸುಧಾಚಂದ್ರ, ಇಂದ್ರಮತಿ, ರಾಜಗೋಪಾಲ ಮತ್ತು ಯಮುನೆ ಪ್ರಮುಖರು.

ಸಿ.ಎನ್.ರಾಮಚಂದ್ರನ್‌ರವರು ಈ ಕಾದಂಬರಿಯ ಪಾತ್ರಗಳ ಬಗ್ಗ *"ಮೊಗಪಡೆದ ಮನ. ಕಾದಂಬರಿಯಲ್ಲಿವುದ್ಧಕ್ಕೂ ಕಾರಂತರು ಶೋಧಿಸುವ ಪ್ರಶ್ನೆಗಳಲ್ಲಿ ಮುಖ್ಯವಾದವು ಇವು. (೧) ಕಲಾವಿದನೆಂದರೆ ಯಾರು? (೨) ಕಲಾಸೃಷ್ಟಿ ಹೇಗಾಗುತ್ತದೆ.? (೩) ಮತ್ತು ಕಲೆ ಹಾಗೂ ಸಮಾಜ ಇವುಗಳ ಪರಸ್ಪರ ಕಂಡುಕೊಳ್ಳುವಿಕೆ ಹೇಗೆ ಇರಬೇಕು? ಈ ದೃಷ್ಟಿಯ ಪ್ರಶ್ನೆ.ಗಳಿಗೆ ಕಲಾವಿದ ಎಲ್ಲಾ ರೀತಿಯಾಗಿ ತೆರೆದುಕೊಳ್ಳುತ್ತಾನೆ. ಕಾರಂತರು ವ್ಯಾಸನ ಬಡತನ ಮತ್ತು ಅವನ ಏಕಾಗ್ರತೆಯ ಸಾಧನೆಯನ್ನು ಗುರ್ತಿಸುತ್ತಾರೆ".*[೭೪]

ಮಂಗಳೂರಿನಿಂದ ಮುಂಬೈಗೆ ಪ್ರಯಾಣ ಮಾಡುವ ಮೊದಲು ಹುಬ್ಬಳ್ಳಿಯಲ್ಲಿ "ಕನ್ನಡ ಟೈಮ್ಸ್" ಪತ್ರಿಕೆಯ ಸಂಪಾದಕನಾಗಿ, ಈ ನಡುವೆ ಸುಧಾಚಂದ್ರ ಮತ್ತು ಇಂದುಮತಿಯ ನಾಟಕ

೭೪. ಟಿ.ಪಿ. ಅಶೋಕ (ಸಂ). ಈ ಶತಮಾನದ ನೋಟ ಶಿವರಾಮಕಾರಂತ, ಪುಟ–೧೧೧

ಕಂಪನಿಗೆ ಸೇರುತ್ತಾನೆ. ನಂತರ ಅಲ್ಲಿ ನೃತ್ಯವನ್ನು ವಿವಿಧ ಪ್ರಕೃತಿ ನೆಲೆಗಳಲ್ಲಿ ಕಲಿಯುತ್ತಾನೆ. ಇಂದುಮತಿಯ ಕಿರುಕುಳದಿಂದ ಟೂಬಾ ಮತ್ತು ವ್ಯಾಸ ಅವಳ ನಾಟಕ ಕಂಪನಿಯನ್ನು ಬಿಡಬೇಕೆಂದು ನಿಶ್ಚಯ ಮಾಡಿಕೊಂಡಾಗ, ಇಂದುಮತಿ ವ್ಯಾಸನನ್ನು ಸವಿಯುತ್ತಾನೆ. ನಂತರ ಮಯೂರ ನೃತ್ಯವನ್ನು ಕಲಿಯಲು ಹೋಗುವಾಗ ಟೂಬಾ ಕೊಡುವ ಸಲಹೆ ವ್ಯಾಸನ ಮೇಲೆ ತುಂಬಾ ಪರಿಣಾಮ ಬೀರುತ್ತದೆ ಕಲಾವಿದನಾದ ಜೀವಿ ಅನುಕರಣ ವ್ಯಕ್ತಿಯಲ್ಲ. ಕಸುಬುಗಾರಿಕೆ ದೊಡ್ಡ ಕೆಲಸವಲ್ಲ ಬದಲು ಕಲಾವಿದನು ತನ್ನ ಅನುಭವಗಳಿಂದ ಹೊರ ಹೊಮ್ಮುವ ಭಾವನೆಗಳಿಗೆ ತಕ್ಕ ರೂಪವನ್ನು ಕೊಡುವುದೇ ಮುಖ್ಯ ಇದು ಟೂಬಾಳಲ್ಲಿದ್ದ ಕಲೆಯ ಬಗೆಗಿನ ಸಾಂಸ್ಕ್ರತಿಕ ಅನುಭವ ಅರಿವು ನಮಗಾಗುತ್ತದೆ.

ವ್ಯಾಸ ಹಲಸಂಗಿ ಊರಿಗೆ ಹಿಪ್ಪರಗಿ ಮಾಸ್ತರರೊಂದಿಗೆ ಹೋಗುತ್ತಾನೆ. ಬೆಟ್ಟವನೇರಿದ ಕೆರೆಯನ್ನು ಸುತ್ತಾಡಿದ. ಗುಡ್ಡಗಳಲ್ಲಿ ಅಲೆದಾಡಿದ, ಆಗ ಕಾರ್ಮುಗಿಲು ಮುಚ್ಚಿಕೊಂಡಾಗ ನವಿಲುಗಳು ಕೇಕೇ ಹಾಕಿ ಕುಣಿದವು. ಅದನ್ನು ವ್ಯಾಸ ಅನುಕರಿಸುವುದನ್ನು ಕಲಿತ. ರೈಲಿನಲ್ಲಿ ಹೊರಡುವಾಗ ನಿದ್ದೆ ಎಂಬುದು ಬರಲಿಲ್ಲ, ನರ್ತಕನಿಗೆ ನಿಸರ್ಗದಂತಹ ಗುರು ಯಾರು ಎಂದು ಅವನ ಮನಸ್ಸು ಹೇಳುತ್ತಿತ್ತು

ವ್ಯಾಸನ ಮನಸ್ಸು ಮತ್ತು ಕಾರಂತರ ಮನಸ್ಸು ಒಂದೇ ಆಗಿದೆ. ಏಕೆಂದರೆ ಕಾರಂತರು ಸಾಂಸ್ಕ್ರತಿಕ ನಾಟಕ, ಯಕ್ಷಗಾನ, ಸಿನಿಮಾ, ಸಾಹಿತ್ಯ ಮುಂತಾದ ಕ್ಷೇತ್ರಗಳಲ್ಲಿ ಗುರುತಿಸಿಕೊಂಡವರು. ಅವರ ಅನುಭವಗಳನ್ನು ನಿಸರ್ಗದೊಂದಿಗೆ ಸಮೀಕರಿಸಿಕೊಂಡವರು.ಇದನ್ನು ವ್ಯಾಸನ ನೃತ್ಯಕಲೆಯಲ್ಲಿ ವ್ಯಕ್ತಪಡಿಸುತ್ತಾರೆ. ಟುಬಾ, ಸುಧಾಚಂದ್ರ, ಇಂದುಮತಿ, ಇವರೆಲ್ಲರೂ ನಗರ ಕೇಂದ್ರಿತವಾದ ಕಲೆಯನ್ನು ಪ್ರದರ್ಶಿಸುತ್ತಾರೆ. ಆದರೆ ವ್ಯಾಸ, ಮೀಯಾ, ಭಗನ್ ಬಾಯಿ, ಮುಂತಾದವರು ನಿಸರ್ಗದಲ್ಲಿಯೇ ತಮ್ಮ ನೃತ್ಯ ಕಲೆಯನ್ನು ಕಲಿತು ಅದನ್ನು ವಿಸ್ತರಿಸಕೊಳ್ಳ ತೊಡಗುತ್ತಾರೆ.

'ಉಕ್ಕಿನ ನೊರೆ' ಕಾದಂಬರಿಯಲ್ಲಿ ಕಾರಂತರು ದಕ್ಷಿಣ ಕನ್ನಡ ಜಿಲ್ಲೆಯ ಸಾಮಾಜಿಕ ಪರಿಸ್ಥಿತಿಗಳನ್ನು 'ಬ್ರಹ್ಮಾವರ' ಎಂಬ ಹಳ್ಳಿಯ ನೆಲೆಯಲ್ಲಿ ಗುರುತಿಸಿ ಈ ಕಥೆಯನ್ನು ಹೇಳುತ್ತಾರೆ. ಈ ಕಾದಂಬರಿಯ ಮುಖ್ಯ ಪಾತ್ರಗಳಾದ ಶೀನಭಟ್ಟ, ಸರಸಾಸಾನಿ, ಗುಲಾಬಿ, ಚೆನ್ನಕ್ಕ, ವಾಸು, ಬಿಲ್ಲಾಡಿ ಮೋನಪ್ಪ ಪ್ರಮುಖರು. ಶೀನಭಟ್ಟರು ತಮ್ಮ ಪಿತ್ರಾರ್ಜಿತ ಭೂಮಿಯಲ್ಲಿ ವ್ಯವಸಾಯ ಮಾಡುತ್ತಾ. ತನ್ನ ಸಂಸ್ಕೃತಿಯನ್ನು ಸ್ಥಾಪಿಸಿಕೊಳ್ಳುತ್ತಾನೆ. ಈ ಕುರಿತು ಕಾರಂತರು "*ತೆಂಗಿನ ಮರಗಳನ್ನು ನೆಟ್ಟು ವ್ಯವಸಾಯ ಮಾಡುತ್ತಿದ್ದರು. ಮಕ್ಕಳೊತ್ತಾಯಕ್ಕೆ ಹಿತ್ತಲಿನ ತೀರ ಹೊರ ಹಂಚಿನಲ್ಲಿ ನಾಲ್ಕೆಂಟು ಹೊಸ ಸಸಿಗಳನ್ನು ನೆಟ್ಟದ್ದಾದರೆ ಬಾರಕೂರ ಹೊಳೆ ಬರುತ್ತದೆ. ಅದರ ತಡಿಯಲ್ಲಿರುವ ತೋಟಗಳು ಎಷ್ಟು ಸೊಂಪಾಗಿವೆ ಅನ್ನುತ್ತೀರಿ? ಅಲ್ಲಿನ ಚೆಲುವಾಗಲಿ ಫಸಲಾಗಲೀ ಶೀನಭಟ್ಟರ ಮರಗಳಲ್ಲಿ ಕಾಣಸಿಗ್ಗಿಲ್ಲ. ಅಲ್ಲಿ ಒಂದು*

ಮರದಿಂದ ವರ್ಷ ವರ್ಷ ಒಂದರ ಐವತ್ತು ಕಾಯಿ ಸಿಕ್ಕಿದರೇನೆ ಪುಣ್ಯ. ಸಿಕ್ಕಿದ ಅವೇ ಕಾಯಿಗಳಿಂದ ಮನೆಯ ಸಂಸಾರ ಸಾಗಬೇಕು. ಊಟಕ್ಕೂ ಅದೆ ಎಣ್ಣೆಗೂ ಅದೆ ಇನ್ನೂ ಅವರ ಹಿತ್ತಲಿನ ಬಳಿಯಲ್ಲಿ ಅರ್ಧ ಬಳಿಯಲ್ಲಿ ಅರ್ಧ ಎಕ್ರೆಯಷ್ಟು ಹಾಡಿಯಿದೆ."[೭೫]

ಹೀಗೆ ಪ್ರಕೃತಿಯ ನೆಲೆಯಲ್ಲಿ ಶೀನಭಟ್ಟರು ಮತ್ತು ಅವರ ಕುಟುಂಬದವರು ಕೃಷಿ ಸಂಸ್ಕೃತಿಯನ್ನು ಅಳವಡಿಸಿಕೊಂಡು ಬದುಕುತ್ತಿದ್ದಾರೆ. ಅವರಿಗೆ ಬಿಡುವು ಇದ್ದಾಗ ಬ್ರಹ್ಮಾವರದ ಪಂಚಲಿಂಗೇಶ್ವರ ಜಾತ್ರೆಗೆ ಹೋಗುತ್ತಾರೆ. ಆದರೆ ಮಳೆಗಾಲ ಬಂತೆಂದರೆ ಸದಾ ಭೂಮಿಯಲ್ಲಿ ಕೆಲಸ ಮಾಡಬೇಕು. ಹೀಗೆ ಶಿನಭಟ್ಟರು ಬಿಡುವಿನ ಸಮಯದಲ್ಲಿ ಮನರಂಜನೆ ಪಡೆಯುವುದು ನಂತರ ಕೃಷಿ ಚಟುವಟಿಕೆಯಲ್ಲಿ ಪಾಲ್ಗೊಳ್ಳುವುದು ಅವನು ಸಾಂಸ್ಕೃತಿಕವಾಗಿ ನಿಸರ್ಗ ನೆಲೆಯೊಂದಿಗೆ ಹೊಂದಿರುವ ವಿವಿಧ ಬಗೆಗಳಲ್ಲಿ ಒಂದಾಗಿದೆ.

ಬಿಲ್ಲಾಡಿ ಮೋನಪ್ಪ ಚುನಾವಣೆ ಕಾಲದಲ್ಲಿ ಆಸ್ಪತ್ರೆ, ರಸ್ತೆ ಮುಂತಾದ ಪೊಳ್ಳು ಆಶ್ವಾಸನೆ ಗಳನ್ನು ನೀಡುವುದು, ಚೆನ್ನಕ್ಕನು ವೇಶ್ಯಾ ಚಟುವಟಿಕೆ ನಡೆಸಿ ತಾನು ಸಂಪಾದಿಸಿದ ಹಣವನ್ನು ಬಡ್ಡಿಗೆ ಕೊಡುವುದು ಅವರವರ ಮನೋಧರ್ಮದ ಸಂಸ್ಕೃತಿ. ಚೆನ್ನಕ್ಕ ರಾಜಾಜಿಯವರ **'ಡೆಟ್ ರಿಲೀಫ್'** ಕಾಯಿದೆಯಿಂದಾಗಿ ನಷ್ಟ ಅನುಭವಿಸುತ್ತಾಳೆ. ಆದ್ದರಿಂದ ಸಮಾಜಕ್ಕೆ ಒಂದು ಸಾರ್ಥಕ ಕೆಲಸ ಮಾಡಬೇಕೆಂದು ನಿಶ್ಚಯಿಸುತ್ತಾಳೆ. ಅದಕ್ಕಾಗಿ ಬ್ರಹ್ಮಾವರದಲ್ಲಿ ಸುಸುಜ್ಜಿತ 'ಕಲ್ಯಾಣ ಮಂಟಪ' ಕಟ್ಟಿಸುವುದರ ಮೂಲಕ ಸಾಂಸ್ಕೃತಿಕವಾಗಿ ಗುರ್ತಿಸಿಕೊಳ್ಳತೊಡಗುತ್ತಾಳೆ, ವೇಶ್ಯೆ ಗುಲಾಬಿ ತನ್ನ ಮಗಳ ಮದುವೆಯನ್ನು ಚೆನ್ನಕ್ಕನು ಕಟ್ಟಿಸಿದ ಕಲ್ಯಾಣಮಂಟಪದಲ್ಲಿ ಪ್ರಪ್ರಥವಾಗಿ ಮಾಡುತ್ತಾಳೆ. ಈ ಮದುವೆಯನ್ನು ಶೀನಭಟ್ಟರ ಮಗ ವಾಸುವಿನ ಸಹಾಯದಿಂದ ನಡೆಯುತ್ತದೆ, 'ಉಕ್ಕಿನ ನೊರೆ' ಕಾದಂಬರಿಯಲ್ಲಿ ಕಾರಂತರು ಕೃಷಿ, ವೈಶ್ಯಾ ಸಮಸ್ಯೆ, ರಾಜಕೀಯ ಮುಂತಾದ ಸಾಂಸ್ಕೃತಿಕ ನೆಲೆಗಳನ್ನು ಸಾಂಸ್ಕೃತಿಕವಾಗಿ ನೈಸರ್ಗಿಕ ದೃಷ್ಟಿ ಕೋನದಲ್ಲಿ ನೋಡುತ್ತಾರೆ.

'ಗೆದ್ದ ದೊಡ್ಡಸ್ತಿಕೆ' ಕಾರಂತರು ಸಾಮಾಜಿಕ ನೆಲೆಯಲ್ಲಿ ವ್ಯಕ್ತಿಗಳು ರೂಪುಗೊಳ್ಳುವುದರ ಸತ್ಯ ಸಾಮಾಜಿಕ ನೆಲೆಯಲ್ಲಿ ಆಗುತ್ತಿದ್ದ ಅನ್ಯಾಯಗಳ ವಿರುದ್ದ ಸಿಡಿದೇಳುವ ಮನಸ್ಸು ಇರುವ ಮದ್ದೂರು ನಾರಾಯಣಯ್ಯನ ಮಗ ನಾಗೇಂದ್ರ ತನ್ನ ಜೀವನದಲ್ಲಿ ಗೆದ್ದ ಕಥಾಂಶವನ್ನು ಈ ಕಾದಂಬರಿ ಒಳಗೊಂಡಿದೆ. ಇಲ್ಲಿ ಮಿಕ್ಕ ಪ್ರಮುಖ ಪಾತ್ರಗಳೆಂದರೆ ಸಂಕಣ್ಣ, ಹಾಂಡ, ಬೀರೂರು ಮನೆತನದ ನಾಗಾನಂದನ, ಬಾಲಕೃಷ್ಣಯ್ಯ, ಮೀನಾಕ್ಷಿ, ನಳಿನಿ ಪದ್ಮನಾಭಯ್ಯ ಪ್ರಮುಖರು.

ಮೂಡಣ ಕರಾವಳಿಯ ಜನಜೀವನ, ಸಂಸ್ಕೃತಿ, ಉದ್ಯೋಗ ಹಾಗೂ ಬಾರಾಕೂರಿನ ಸುತ್ತಣ ನಿಸರ್ಗದ ವರ್ಣನೆಯೊಂದಿಗೆ, ಈ ಕಾದಂಬರಿಯನ್ನು ಕಾರಂತರು ಪ್ರಾರಂಭಿಸುತ್ತಾರೆ. ಬಾರಕೂರಿನಿಂದ ಪಡುವಣಕ್ಕೆ ಎಂದರೆ, ಹರದಾರಿ ದೂರದ ಕಡಲ ತೀರದ ತನಕವು ತೆಂಕು

೭೫. ಶಿವರಾಮಕಾರಂತ, ಉಕ್ಕಿನ ನೊರೆ, ಪುಟ-೪೩

ಬಡಗಣಕ್ಕೆ ಚಾಚಿಕೊಂಡ ನೆಲ; ಸಮುದ್ರ ಮಟ್ಟಕ್ಕಿಂತ ಮೂವತ್ತು ಅಡಿಗಳಷ್ಟು ಕೂಡ ಎತ್ತರ ವಾಗಿಲ್ಲದ ಭೂಮಿ ಇಲ್ಲಿ ಜನ ವಸತಿ ಹೆಚ್ಚು.

ಕಾರಂತರು ಇಂತ ಊರಿನಲ್ಲಿ ಪೂಜೆ ಮಾಡುವ ಸಾಂಸ್ಕೃತಿಕ ನೆಲೆಯ ಬಗೆಯನ್ನು ವ್ಯಕ್ತಪಡಿಸುತ್ತಾರೆ. ಮುದ್ದಿಸುವುದಕಲ್ಲವಾದರೂ ಜನರು ಭಕ್ತಿ, ವಿಶ್ವಾಸಗಳನ್ನು ಸೆಳೆದು ಅವರ ಕೆಲವು ದಂತ ಕತೆಗಳು ಇವೆ. ಹಿಂದಿನ ಕಾಲದಲ್ಲಿ ಸುರಾಲು ಸೀಮೆಯ ಜೈನ ಅರಸರು ಅವನಿಗೆ ಭಕ್ತಿಯಿಂದ ನಡೆದುಕೊಳ್ಳುತ್ತಿದ್ದರಂತೆ ಆ ಗಣೇಶನಿಗೆ ನಿಜವಾದ ತಲೆಗೂದಲಿತ್ತೆಂಬ ಕತೆಯೂ ಇದೆ ಅವನಿರುವ ದೇಗುಲ ಅಂಥ ದೊಡ್ಡ ದೇಗುಲವೇನಲ್ಲ: ಅದು ಸಣ್ಣದಾದೊಂದು ಗುಡಿ; ಆಚೀಚಿನ ದಶವತಾರ ಮೇಳಗಳಿಗೆ ಅವನ ಮೇಲೆ ಅಪಾರ ಭಕ್ತಿ ಊರಿನ ನಾರಾಯಣಯ್ಯನಂಥವರು ತಮ್ಮ ಯಾವತ್ತು ಕಷ್ಟ ಸುಖಗಳನ್ನು ಅವನ ಮುಂದೆಯೇ ತೋಡಿಕೊಳ್ಳುವಂಥವರು.

ಮನುಷ್ಯ ಸಂಸ್ಕೃತಿಯು ನಂಬಿಕೆಗಳನ್ನು ಅವಲಂಬಿಸಿದೆ. ಇಂತ ನಂಬಿಕೆಯು ಅವನ ಅಭಿವೃದ್ಧಿಗೆ ಪೂರಕವಾಗಿದೆ. ಈ ನಂಬಿಕೆಯು ಧರ್ಮ, ಸಮಾಜ, ರಾಜಕೀಯ ಮುಂತಾದ ಕ್ಷೇತ್ರಗಳಲ್ಲಿ ಹಂಚಿಹೋಗಿದೆ. ವ್ಯಕ್ತಿ ನಿಸರ್ಗದ ನೆಲೆಯಲ್ಲಿ ಇವನೆಲ್ಲಾ ತಮ್ಮ ಜೀವನದ ಮಾರ್ಗಗಳೆಂದು ಒಪ್ಪಿಕೊಳ್ಳುವ ಮೂಲಕ ತನ್ನ ಸಾಂಸ್ಕೃತಿಕ ನೆಲೆಯನ್ನು ಭದ್ರಪಡಿಕೊಂಡಿದ್ದಾನೆ. ಇಲ್ಲಿ ಮದ್ದೂರು ನಾರಾಯಣ ಗಣಪತಿಯ ಮೇಲೆ ನಂಬಿಕೆ ಇಟ್ಟಿರುವುದು ಇದೇ ಕಾರಣದಿಂದ ಆಗಿದೆ.

ಸಂಕಣ್ಣ ದೌರ್ಜನ್ಯದಿಂದ ಮದ್ದೂರಿನಲ್ಲಿ ಬದುಕುವುದು ಅವನ ವಿಚಿತ್ರ ನಡುವಳಿಕೆಯಾಗಿದೆ. ಅಂದರೆ, ರೈತರು ಬೆಳೆದಿರುವ ಬೆಳೆಗಳನ್ನು ತನ್ನ ಮನಸ್ಸಿಗೆ ಬಂದಂತೆ ಕಿತ್ತುಕೊಂಡು ಹೋಗಿ ಉಪಯೋಗಿಸುವುದು ಅವನ ವಾಡಿಕೆ. ಒಂದು ಸಲ ನಾರಾಯಣಯ್ಯ ಇವರ ಮಗ ನಾಗೇಂದ್ರರು ಕೂಡಿ ತರಕಾರಿ ನೆಡುವುದಕ್ಕೆ ಕಟ್ಟೆ ಕಟ್ಟುತ್ತಿದ್ದರು. ಅಗೆತ ಮಾಡುತ್ತಿದ್ದರು. ಅಲ್ಲಿಗೆ ಬಂದ ಸಂಕಣ್ಣ ಅಯ್ಯಾ, ನಿಮ್ಮ ಕಬ್ಬು ನೋಡಿ ನನಗೆ ಬಾರಿ ಖುಷಿಯಾಗಿದೆ! ಎಂದ. ಅನಂತರ ಹಿತ್ತಿಲ ಬಗೆದು ಆಚೀಚೆ ಸರಿಯಿಸಿ, ಸೊಂಟದಿಂದ ಕತ್ತಿಯನ್ನು ತೆಗೆದು, ನಾಲ್ಕು ಕಬ್ಬಿನ ಕಾಂಡಗಳ ಬುಡವನ್ನು ಕತ್ತರಿಸಿದ. ಅವನು ಈಚೆಗೆ ಇಳಿದು ಸೋಗೆಯನ್ನು ಸವರ ತೊಡಗಿದ. ಇದನ್ನು ನಾರಾಯಣಯ್ಯ ಪ್ರಶ್ನಿಸಿದಾಗ ಕಷ್ಟ ಪಡದೆ ಎಷ್ಟು ಲಾಯಕ್ಕು ಕಬ್ಬು ಬೆಳೆಯಲಿಕ್ಕೇ ಇಲ್ಲ. ಅಂಥ ಒಳ್ಳೆಯ ಕಬ್ಬನ್ನು ನನ್ನಂಥವರು ತಿನ್ನಬಾರದೆಂದಲ್ಲ ಎಂದ.

ಇಲ್ಲಿ ಸಂಕಣ್ಣನ ಮನೋಧರ್ಮಗಳಲ್ಲಿ ನಿಸರ್ಗ ವಿರೋಧಿ ಹಾಗೂ ಜನವಿರೋಧಿ ಗುಣ ತಿಳಿಯುತ್ತದೆ. ತಾನು ಕಷ್ಟ ಪಡದಿದ್ದರು ಬೇರೆಯವರು ಬೆಳೆದ ಬೆಳೆಯನ್ನು ದೌರ್ಜನ್ಯದಿಂದ ಉಪಯೋಗಿಸುವುದರ ಮೂಲಕ ತನ್ನ ಲಜ್ಜೆಗೇಡಿತದ ಸಂಸ್ಕೃತಿಯನ್ನು ಪ್ರದರ್ಶಿಸುತ್ತಾನೆ

ಬ್ರಹ್ಮಾವರದ ಶಾಲೆಯಲ್ಲಿ ವಿವಿಧ ಜಾತಿಯ ಮಕ್ಕಳು ನಾಗೇಂದ್ರನೊಂದಿಗೆ ವಿದ್ಯಾಭ್ಯಾಸ ಮಾಡುತ್ತಾರೆ. ಈ ಜಾತಿ ವ್ಯವಸ್ಥೆಯ ಬಗ್ಗೆ ನಾಗೇಂದ್ರನಲ್ಲಿ ಜಿಜ್ಞಾಸೆ ಮೂಡುತ್ತದೆ. ಕಾರಂತರು ಈ ಕುರಿತು ಬ್ರಿಟಿಷರು ಹಿಂದುಸ್ಥಾನವನ್ನು ಗೆದ್ದ ಮೇಲೆ ಕ್ಷತ್ರಿಯರ ಕುಲವೆ ಉಳಿದಿಲ್ಲ ಭಾರತದಲ್ಲಿ ಅಲ್ಲಿಗೆ ಉಳಿಯಿತು ಎಂದು ಆತ ತಿಳಿದುಕೊಂಡಿದ್ದರೆ ಇಲ್ಲಿ ಇನ್ನೂ ತಮ್ಮ ಜಿಲ್ಲೆಯಲ್ಲಿ ಹಲವಾರು ಕ್ಷತ್ರಿಯರು ಉಳಿದುಕೊಂಡಿದ್ದಾರೆ: ಎಂಬ ಭಾವನೆ...... ಏನೋ, ಹುಡುಗರ ಆಟ, ವಿನೋದ, ಮಾತುಕತೆಗಳ ಭರದಲ್ಲಿ ಅಷ್ಟೆಲ್ಲ ಜಾತಿಗಳಿದ್ದರೂ, ಅದರ ನಂಜು, ದ್ವೇಷ ಎಲ್ಲೂ ಕಾಣಿಸಲಾರದು ಎನಿಸಿದ್ದುಂಟು ಆದರೆ ಒಂದೇ ಕೋಮಿನ ಬಾಲಕರು ಒಂದೆಡೆ ಸೇರಿದ್ದಾಗ ಅವರಲ್ಲಿ ಉಳಿದ ಬಳಗದವರ ವಿಚಾರದಲ್ಲಿ ಕಹಿ, ಕುತ್ಸಿತ ಬಾವ ಇರುವುದೂ ಕಾಣಿಸುತ್ತದೆ. ನಾಗೇಂದ್ರನ ಪಾಲಿಗೆ ನುಂಗಲು ತೀರ ಕಷ್ಟವಾಗಿ ಕಾಣಿಸುತ್ತಿರುವ ಸಮಾಜ ವ್ಯವಸ್ಥೆ ಈ ಬಗೆಗೆ ಸಂಬಂಧಪಟ್ಟಿದ್ದು.

ಭಾರತೀಯ ಸಂಸ್ಕ್ರತಿಯಲ್ಲಿ ಬೆಳೆದು ಬಂದಿರುವ ಕೆಟ್ಟ ಪದ್ದತಿ ಜಾತಿ ವ್ಯವಸ್ಥೆ ಆಯಾ ಕಸುಬಿಗೆ ಸಂಬಂಧಪಟ್ಟಿದ್ದು ಇದು ಕಾಲಕ್ರಮೇಣ ಕಟ್ಟುಪಾಡುಗಳಿಗೆ ಒಳಗಾಗಿ ಇಂದು ಸಮಾಜವನ್ನು ಕ್ರೂರವಾಗಿ ಆಳುತ್ತಿದೆ. ಇಂತಹ ಕ್ರೂರ ವ್ಯವಸ್ಥೆಯನ್ನು ಕಂಡ ಕಾರಂತರ ಪಾತ್ರವಾದ ನಾಗೇಂದ್ರನಿಗೆ ಇದರ ವಿರುದ್ಧ ಹೋರಾಡುವ ಮನಸ್ಸು ಬೆಳೆಯುತ್ತದೆ. ಆದ್ದರಿಂದ ಆ ಅಸ್ಪೃಶ್ಯ 'ಹಾಂಡ'ನ ಸ್ನೇಹ ಬೆಳೆಸಿ ಅವನಿಂದ ಈಜು ಕಲಿಯುತ್ತಾನೆ ಇವನು ಅವನಿಗೆ ಗಣಿತ ಲೆಕ್ಕಗಳನ್ನು ಹೇಳಿಕೊಡುತ್ತಾನೆ. ಹೀಗೆ ಸಾಂಸ್ಕೃತಿಕವಾಗಿ ನಾಗೇಂದ್ರ ಕೆಳವರ್ಗದವರೊಂದಿಗೆ ಅನುಸಂಧಾನ ಬೆಳೆಸುವುದರ, ಮೂಲಕ ತನ್ನ ಮಾನವೀಯ ಧರ್ಮವನ್ನು ಎತ್ತಿ ಹಿಡಿಯುತ್ತಾನೆ.

ನಾರಾಯಣಯ್ಯ ಮರಣದ ತರುವಾಯು ಅವರ ಅಸ್ಥಿಯನ್ನು ಗೋಕರ್ಣದಲ್ಲಿ ವಿಸರ್ಜಿಸಬೇಕೆಂದು ಅವನ ಮಕ್ಕಳು ನಿರ್ಣಯಿಸುತ್ತಾರೆ. ಈ ರೀತಿಯ ಭಾರತೀಯ ನಂಬಿಕೆಯನ್ನು ಕುರಿತು ಕಾರಂತರು ಹೇಳುತ್ತಾರೆ. "ಇಲ್ಲಿನ ಶಿವರಾತ್ರಿಯ ಕಾಲಕ್ಕೆ ಅಸಂಖ್ಯಾ ಯಾತ್ರಿಕರು ದೂರದ ಪ್ರಾಂತ್ಯಗಳಿಂದ ಬರುತ್ತಾರೆ. ಅಂಥವರ ಮನಸ್ಸಿಗೆ ಈ ಶಿವದರ್ಶನ ಇಲ್ಲಿನ ಕಡಲ ಸ್ನಾನ ಇಲ್ಲದೆಯೂ ಇಲ್ಲಿರುವ ಅನ್ಯ ತೀರ್ಥಗಳು ತುಂಬ ತೃಪ್ತಿಕೊಡುವ ಸಂಪ್ರದಾಯಗಳಾಗಿ ಬಂದಿವೆ. ಕೇವಲ ಎರಡು ಶತಮಾನಗಳಷ್ಟು ಹಿಂದಿನ ತನಕವೂ ಈ ಕ್ಷೇತ್ರ ಧರ್ಮಶಾಸ್ತ್ರಗಳ ಅಭ್ಯಾಸಕ್ಕೆ ಹೆಸರಾಗಿದ್ದ ಒಂದು ವಿದ್ಯಾಕ್ಷೇತ್ರವೂ ಆಗಿತ್ತು.

ಕಾರಂತರು ಭಾರತೀಯ ಅನುಭಾವಿಕ ನಂಬಿಕೆಯನ್ನು ನಿಸರ್ಗದ ನೆಲೆಯಲ್ಲಿ ಹೇಳುತ್ತಾರೆ. ಏಕೆಂದರೆ ಹಿಂದೂ ದೇವಾಲಯಗಳು ಹೆಚ್ಚಾಗಿ ನದಿ, ಕೆರೆ, ಕಡಲು, ದಂಡೆಗಳ ಮೇಲೆ ನಿರ್ಮಾಣವಾಗಿರುವುದನ್ನು ಗಮನಿಸಿದಾಗ, ಮನುಷ್ಯನಲ್ಲಿರುವ ನಿಸರ್ಗ ಆರಾಧನೆಯ ನೆಲೆಯಾಗಿದೆ. ಇದು ಅವನ ಸಾಂಸ್ಕೃತಿಕ ಮನಸ್ಸಿನ ಪ್ರತಿಬಿಂಬವಾಗಿದೆ.

ಸಮುದ್ರದ ನೀರಿಗೆ ಸಿಕ್ಕಿ ಹಾಕಿಕೊಂಡಿದ್ದ ನಾಗಾನಂದನನ್ನು ನಾಗೇಂದ್ರ ರಕ್ಷಿಸಿದನು. ಆಗ ಅಲ್ಲಿದ್ದ ಪುರೋಹಿತರೊಬ್ಬರು ಉಪದೇಶಿಸುವ ಮಾತುಗಳೆಂದರೆ, *"ಈ ಊರಿಗೆ ಬಂದ ಮೇಲೆ, ನಿಮ್ಮೆಲ್ಲ ಕೆಲಸಗಳನ್ನು ಮುಗಿಸಿದ ಮೇಲೆ, ಗುಡ್ಡ ಹತ್ತುವುದು, ಇಳಿಯುವುದು, ತದಡಿ ಬಂದರಕ್ಕೆ ಹೋಗಿ ಬರುವುದು ಸಾಣೆಕಟ್ಟೆಯ ಉಪ್ಪು ಅಳೆಯುವುದು, ಇಳಿಯುವುದು, ತದಡಿ ಬಂದರಕ್ಕೆ ಹೋಗಿ ಬರುವುದು ಮುಗಿಸಿದ ಮೇಲೆ, ಆ ಮಹಾಬಲೇಶ್ವರನಿಗೆ ಒಂದು ಪ್ರದಕ್ಷಣೆ ಬಂದು ಹೋದರೆ ಜೀವನವನ್ನು ಕಾಪಾಡಿದ್ದಕ್ಕೆ ಒಂದು ಹಣ್ಣುಕಾಯಿ ಮಾಡಿಸಿಕೊಂಡು ಹೋಗಿ"*[೭೬] ಎಂದನು. ಈ ಮಾತುಗಳಲ್ಲಿ ನಿಸರ್ಗ ನೆಲೆ ಮತ್ತು ಸಾಂಸ್ಕೃತಿಕ ನೆಲೆಯು ಕಂಡುಬರುತ್ತದೆ.

ಬಿರೂರು ಕುಟುಂಬದ ಅನಂತಯ್ಯನ ಮಗ ಪದ್ಮನಾಭಯ್ಯ. ಈತನ ಮಗ ನಾಗಾನಂದ ಇವರು ಉದ್ಯಮಿಗಳು. ಪದ್ಮನಾಬಯ್ಯನವರು ವ್ಯಾಪಾರೋದ್ಯಮವೆ ತಮ್ಮ ಧರ್ಮವೆಂದು ಬದುಕುತ್ತಿದ್ದರು. ಇವರು ಅನಾಥಾಶ್ರಮ, ಭೂತದಗುಡಿ, ದೇವರಗುಡಿ, ಶಾಲೆ, ಹಾಸ್ಟೇಲು ಮುಂತಾದ ಸೇವೆ, ಮಾಡುವ ಮಾನವೀಯತೆಯೆನ್ನುವುದು ನಮ್ಮ ಭಾರತೀಯ ಸಂಸ್ಕೃತಿಯ ಮೂಲ ಬೇರು ಆಗಿದೆ. ಕಾರಂತರು ಹೀಗೆ ನಿಸರ್ಗದ ನೆಲೆಯಲ್ಲಿ ಸಾಂಸ್ಕೃತಿಕ ನೆಲೆಯನ್ನು ನಿಯಮಿತವಾಗಿ ತರುತ್ತಾರೆ.

'ಗೊಂಡಾರಣ್ಯ' ಕಾದಂಬರಿ ಮುಖ್ಯವಾಗಿ ರಾಜಕೀಯ ಪಲ್ಲಟಗಳನ್ನು ಹೇಳುತ್ತದೆ. ಇಲ್ಲಿ ಬರುವ ಪಾತ್ರಗಳೆಂದರೆ, ವಾಮನರಾಯ, ಅರುಣಾಚಲಯ್ಯ, ಕಾಂಚನ ಮಾಲೆ, ಮಕ್ಕಣ್ಣ ಮುಂತಾದವರು, ಕಾರಂತರು ಇಲ್ಲಿ ರಾಜಕೀಯ ನೆಲೆಗಳಲ್ಲಿ ಮನುಷ್ಯನು ನಿಸರ್ಗದ ನೆಲೆಯಲ್ಲಿ ತನ್ನನ್ನು ರೂಪಿಸಿಕೊಂಡಿರುವುದನ್ನು ಹೇಳುತ್ತಾರೆ. ಇದನ್ನು ಕುರಿತು ರಾಜ್ಯದ ಬಹುಭಾಗ ಅರಣ್ಯ ಪ್ರದೇಶ ಇಲ್ಲಿನ ಅರಸುಗಳಿಗೂ ಶಿಕಾರಿಯ ಮರಳು, ರೆಸಿಡೆಂಟನಿಗೂ ಅದೆ ಮರಳು; ಇಬ್ಬರು ಈ ಬೇಟೆಯ ಹುಟ್ಟು ಆಪ್ತ ವ್ಯವಸಾಯ ಇನ್ನು ದೇಶದ ಒಳ ಆಡಳಿತದ ವಿಚಾರದಲ್ಲಿ ರೆಸಿಡೆಂಟ್ ಕೈ ಹಾಕುತ್ತಿರಲಿಲ್ಲ. ಈ ಗೊಂಡಾರಣ್ಯವನ್ನು ವಿಕ್ರಮ ಚಿದಂಬರರಾಜ ಆಳುತ್ತಿದ್ದನು. ನಂತರ ಪ್ರತಾಪಚಂದ್ರ ಆಳ್ವಿಕೆ ಮಾಡುತ್ತಿದ್ದರು. ಹೀಗೆ ರಾಜಕೀಯ ಆಳ್ವಿಕೆಯು ನಿಸರ್ಗ ನೆಲೆಯಲ್ಲಿ ಬೆಳೆದಿರುವುದು ಗಮನಾರ್ಹ ಸಂಗತಿಯಾಗಿದೆ.

ರಾಜರ ಆಳ್ವಿಕೆ ಹೋಗಿ ಪ್ರಜಾಪ್ರಭುತ್ವದ ಆಳ್ವಿಕೆ ಬಂದಾಗ ಮೌಲ್ಯಗಳು, ಅಪಮೌಲ್ಯ ಗಳಾಗುತ್ತವೆ. ಈ ಅಪಮೌಲ್ಯಗಳ ಪ್ರಮುಖ ರುವಾರಿ ವಾಮನರಾಯ ಇವನು ನಿಸರ್ಗದ ನೆಲೆಯನ್ನು ಸೂರೆಗೊಳ್ಳುತ್ತಾನೆ. ಇದನ್ನು ಕುರಿತು ಕಾರಂತರು ಗೊಂಡಾರಣ್ಯದ ಪರ್ವತಾವಳಿಗಳಲ್ಲಿ ಮಾರ್ಗಗಳು ನಿರ್ಮಾಣವಾಗುತ್ತಿದೆ. ಅವೇ ಹೊಸ ದಾರಿಗಳಿಂದಾಗಿ ನಾಡಿನ ಈತನಕ ಕಾದಿಟ್ಟ ಅರಣ್ಯ ಸಂಪತ್ತು ವ್ಯಾಪಾರಕ್ಕೆ ಸೂರೆಗೆ, ಸುಲಿಗೆಗೆ ತೆರವಾಗಿ ರಾಜಾದಾಯ ಹೆಚ್ಚುತ್ತಿದ್ದರೂ ನಿಜ

೭೬. ಶಿವರಾಮಕಾರಂತ, ಗೆದ್ದ ದೊಡ್ಡಸ್ಥಿಕೆ , ಪುಟ-೧೧೭

ಕಳ್ಳವ್ಯಾಪಾರದಿಂದ ಹಲವರು ಶ್ರೀಮಂತವಾಗುತ್ತಿದ್ದದ್ದು ನಿಜ ಮನುಷ್ಯ ಸಾಂಸ್ಕೃತಿಕವಾಗಿ ರಾಜಕೀಯ ಭಾವದಿಂದ ನಿಸರ್ಗದ ನೆಲೆಯನ್ನು ಸ್ವಾರ್ಥಕ್ಕಾಗಿ ಬಳಸುವುದು ಕಂಡು ಬರುತ್ತದೆ.

ಪ್ರತಾಪರಾಯರ ಮನೆಯ ಆಳು ಮುಕ್ಕಣ್ಣ ತಾನು ನಂಬಿದ ಒಡೆಯನಿಗಾಗಿ ಪ್ರಾಣವನ್ನಾದರು ಕಳೆದುಕೊಳ್ಳುವ ಮಟ್ಟಿಗೆ ಯೋಚಿಸುವ ವ್ಯಕ್ತಿ 'ಇವನು ರಾಯರು ಕಿಗ್ಗಳ್ಳಿಯಿಂದ ವಿಕ್ರಮನಗರಕ್ಕೆ ವಲಸೆ ಹೋದಾಗ; ಅವರ ಭೂಮಿಯ ಜವಾಬ್ದಾರಿಯನ್ನು ಕರುಣಿಕ ನಾರಾಯಣಪ್ಪ ನೋಡುತ್ತಾನೆ. ಮುಕ್ಕಣ್ಣ ಧನಿಯ ಕೃಪೆಯಿಂದ ದೊರೆತನಕ್ಕೆ ದೊರೆಯಿಲ್ಲದೆ ಮತ್ತೊಂದು ಗೌರವ ಅವನ ಜೀವನಕ್ಕೆ ಅಂಜಿ ಬಂದಿತು. ಮುಕ್ಕಣ್ಣ ಪಟ್ಟೇದಾರನಾಗಿ ಜೀವಿಸುತ್ತಿದ್ದನು.' ಇದು ಭಾರತೀಯ ಜನ ಸಮುದಾಯದಲ್ಲಿ ಇರುವ ಮಾನವೀಯತೆಯ ಸಂಸ್ಕೃತಿಯನ್ನು ಬಿಂಬಿಸುತ್ತದೆ. 'ಇವನ ಆಶ್ರಯದಲ್ಲಿ ಒಕ್ಕಲುತನ ಮಾಡಿಕೊಂಡು ನಾಲ್ಕು ಸಾವಿರ ಮಂದಿ ಆದಿವಾಸಿಗಳಾದ, ದೊಂಡಾಲರೆಂಬುವರು ವಾಸಿಸುತ್ತಿದ್ದರು. ಆ ಆದಿವಾಸಿಗಳು ಬೇಸಿಗೆಯಲ್ಲಿ ಕಿಗ್ಗಳ್ಳಿ ಮನೆಗೆ ಬಂದು ಕುಮರಿ ಕುಡಿಯಲು ಅಪ್ಪಣೆಯಾಗಬೇಕು' ಎಂದು ಬೇಡಿ ಸಮ್ಮತಿ ಪಡೆದು, ಯುಗಾದಿಯ ಹಚ್ಚಡಗಳನ್ನು ಪಡೆದು ಹೋದರೆ ತಿರುಗಿ ಬರುವುದು ಮಳೆಗಾಲ ಕಳೆದ ಮೇಲೆ ಆಗ ಧನಿಯರಿಗೆ ಕಾಡಿನ ಉತ್ಪನ್ನಗಳನ್ನು ಕಾಣಿಕೆಯಾಗಿ ತರುತ್ತಾರೆ.

ಕಾಡಿನ ಸಂಸ್ಕೃತಿಯನ್ನು ಕಾರಂತರು ಆದಿವಾಸಿಗಳ ಮತ್ತು ಧನಿಗಳ ವಿಚಾರದಲ್ಲಿ ಹೇಳುತ್ತಾರೆ. ಏಕೆಂದರೆ ಆದಿ ವಾಸಿಗಳ ನೆಲೆ ಕಾಡು. ಇದು ಅವರ ಸಂಸ್ಕೃತಿಯ ಮೂಲ. ಆದರೆ ಆಧುನಿಕ ಜಗತ್ತು ಆ ಮುಗ್ಧತೆಯನ್ನು ಬಂಡವಾಳ ಮಾಡಿಕೊಂಡು ಜೀವಿಸುವುದು ಆಧುನಿಕತೆಯ ಕ್ರೂರತ್ವದ ಪ್ರತಿಬಿಂಬವಾಗಿದೆ.

ಜನವಾದಿ ಪಕ್ಷದ ನಾಯಕ ಅರುಣಾಚಲಯ್ಯ ಕ್ಷಾಮದ ಸಮಯದಲ್ಲಿ ಗೊಂಡಾರಣ್ಯದಲ್ಲಿ ಪ್ರವಾಸ ಮಾಡುತ್ತಾನೆ. ಇದು ಅವರ ರಾಜಕೀಯ ಮಾನವೀಯ ಸಂಸ್ಕೃತಿಯಾಗಿದೆ. ಅವರು ಅರಣ್ಯಗಳನ್ನು ಸುತ್ತಿ ಬಂದರು ಕಷ್ಟದಲ್ಲಿ ನೀತಿಗೆಡದೆ ಬಾಳುತ್ತಿರುವ ಕುರುಬರ, ದೊಂಡಾಲರ ಸರಳ ಜೀವನ ಕಂಡರು. ಕಂಡು ಮರುಳುತ್ತಾ ತಮ್ಮ ಗೆಳೆಯರೊಡನೆ ಅರುಣಾಚಲಯ್ಯ ನಿಜವಾದ ಪ್ರಜಾ ರಕ್ಷಕ, ಅವರು ನಿಸರ್ಗದ ವ್ಯಕ್ತಿ ಅದಕ್ಕಾಗಿ ಚಿಂತಿಸುತ್ತಾರೆ. ಅವರು ಮೊದಲು ಹೋದುದೇ ದೊಂಡಾಲರ ಸೀಮೆಗೆ ಅಲ್ಲಿಯು ಮಳೆಯಿಲ್ಲದೆ ಕುಮರಿ ಬೆಳೆ ನಾಶವಾಗಿತ್ತು. ಗಿಡಗಳು ಒಣಗಿ, ಕಾಡ್ಗಿಚ್ಚುಗಳು ಹೆಚ್ಚಿ ಗೆಡ್ಡೆ ಗೆಣಸುಗಳಿಗೂ ಕೊರತೆ ಬಂದಿತ್ತು. ಗೊಂಡಾರಣ್ಯದ ಆದಿವಾಸಿಗಳ ಸ್ಥಿತಿ ಇನ್ನಷ್ಟು ಕಠಿಣವಾಗಿತ್ತು. ಈ ಆದಿವಾಸಿಗಳ ಕಷ್ಟವನ್ನು ಕಂಡು ಅರುಣಾಚಲಯ್ಯ ಮರುಗುವರು. ಕಾರಂತರು 'ಗೊಂಡಾರಣ್ಯ' ಕಾದಂಬರಿಯ ಮುಖ್ಯ ಪಾತ್ರಗಳು ಬೆಳೆಸಿಕೊಂಡಿರುವ ಸಾಂಸ್ಕೃತಿಕ ನೆಲೆಗಳಾದ ಕುಟುಂಬ, ಸಮಾಜ, ರಾಜಕಾರಣದ ಅಂಶಗಳನ್ನು ಹೇಳುತ್ತಾರೆ.

'ಇನ್ನೊಂದೇ ದಾರಿ' ಕಾದಂಬರಿ ನಿಸರ್ಗದ ನೆಲೆಯಲ್ಲಿ ವಿವಿಧ ಪಾತ್ರಗಳು ವೈವಿಧ್ಯಮಯವಾಗಿ ತೆರೆದುಕೊಳ್ಳುವುದನ್ನು ಚಿತ್ರಸುತ್ತದೆ. ಕಾರಂತರು ಇಲ್ಲಿ ನಾಲ್ಕು ತಲೆಮಾರುಗಳ ಕಥೆಯನ್ನು ಹೇಳುತ್ತಾರೆ. ಮೊದಲ ಮೂರು ತಲೆಮಾರುಗಳು ನಿಸರ್ಗದೊಂದಿಗೆ ಅನಿವಾರ್ಯವಾಗಿ ದುಡಿಯುವ ಪರಿಸ್ಥಿತಿಯಿದೆ. ಏಕೆಂದರೆ ಅವರ ಬಡತನ ನಾಲ್ಕನೇಯ ತಲೆಮಾರಿನ ಜನತೆ ನಗರ ಮುಖಿಗಳಾಗಿ ಜೀವಿಸುವುದನ್ನು ಗುರುತಿಸಬಹುದು. ಈ ನಾಲ್ಕು ತಲೆಮಾರುಗಳಲ್ಲಿ ಮೊದಲನೆಯ ತಲೆಮಾರಿನ ವ್ಯಕ್ತಿಗಳು ಲಕ್ಷ್ಮೀರಮಣ ಮತ್ತು ಪತ್ನಿಹೊನ್ನಮ್ಮ ಇವರ ದಾಂಪತ್ಯ ಜೀವನ ಅಷ್ಟೇನು ಸುಖಮಯವಾಗಿರುವುದಿಲ್ಲ. ಲಕ್ಷ್ಮೀರಮಣ ಮತ್ತು ಹೊನ್ನಮ್ಮನ ಮಗ ಮಹದೇವ ಈತನ ಪತ್ನಿ ಪದ್ಮಾವತಿ ಇವರು ಎರಡನೇ ತಲೆಮಾರಿಗೆ ಸಂಬಂಧಿಸಿದವರು. ಇವರ ಜೀವನದಲ್ಲಿಯು ಬಡತನ ತಾಂಡವಾಡುತ್ತಿರುತ್ತದೆ. ಇವರ ಮಕ್ಕಳಾದ ಸೂರ್ಯ ಮತ್ತು ನರಸಿಂಹ ಮೂರನೇ ತಲೆಮಾರಿನವರು. ನರಸಿಂಹನ ಪತ್ನಿ ಜಾನಕಿಯಮ್ಮ. ಇವರ ಮಕ್ಕಳೆ ನಾಲ್ಕನೇ ತಲೆಮಾರಿನ ಶ್ರೀರಾಮ ಮತ್ತು ಜಯರಾಮರು, ಕಾರಂತರು ಈ ಕಾದಂಬರಿಯ ಮುನ್ನುಡಿಯಲ್ಲಿ ಸೃಷ್ಟಿಯ ಪ್ರಶ್ನೆ ಇನ್ನೂ ರೂಪುಗೊಳ್ಳುತ್ತಿರುವ, ತಾನು ನಾಳೆ ಏನಾಗುವೆನೆಂದು ನಿಸರ್ಗ ಪ್ರವಾಹವೇ ನಿರ್ಣಯಿಸಬೇಕಾದ ಅಪೂರ್ವ ಪ್ರಶ್ನೆಯೆಂಬ ಈ ದೃಷ್ಟಿ ಹಳೆ ತೀರ್ಮಾನಗಳನ್ನು ಒಪ್ಪಲು ಇಷ್ಟ ಪಡೆದಿರುವುದನ್ನು ಕಾಣುತ್ತೀರಿ. ನಿಸರ್ಗದ ನೆಲೆಯಲ್ಲಿ ಬದಲಾವಣೆಗಳಿಂದ ಮನುಷ್ಯನ ಬದುಕು ಬದಲಾವಣೆಗೆ ಒಳಪಡುತ್ತಿರುತ್ತದೆ. ಇದು ನಿಸರ್ಗದ ನಿಯಮ. ಈ ನಿಯಮವು ಕಾದಂಬರಿಯ ನಾಲ್ಕನೇ ತಲೆಮಾರಿನಲ್ಲಿ ತೀವ್ರವಾಗಿ ಕಂಡುಬರುತ್ತದೆ. ಮೊದಲ ಮೂರು ತಲೆ ಮಾರುಗಳು ಸಂಪ್ರದಾಯದ ಕೋಟೆಯೊಳಗೆ ತೊಳಲಾಡುವುದು ಪ್ರಮುಖವಾಗಿದೆ. ಕಾರಣ ಇದಕ್ಕೆ ಅವರ ಜೀವನದಲ್ಲಿ ಧರ್ಮ ಮತ್ತು ನಿಸರ್ಗದ ಎರಡು ನೆಲೆಗಳನ್ನು ಒಪ್ಪಿಕೊಂಡು ಬದುಕುವುದೆ ಪ್ರಮುಖವಾಗಿದೆ.

ಈ ಕಾದಂಬರಿಯ ಪಾತ್ರಗಳಿಗೆ ಸಂಬಂಧಿಸಿದಂತೆ ಅರವಿಂದ ಉಪಾಧ್ಯರವರು – "ಹೊನ್ನಿ *ಅಥವಾ ಹಿರಿಯಳೆಂದು ಕರೆಸಿಕೊಳ್ಳುವ ಹೊನ್ನಜ್ಜಿ, ಹಳೆಯ ತಲೆಮಾರಿನ ಪ್ರಜ್ಞೆಯ ಪ್ರತಿನಿಧಿಯಾದರೆ, ಜಯರಾಮ ಹೊಸ ಪ್ರಜ್ಞೆಯ ಪ್ರತಿನಿಧಿ ಕ್ಷಣಿಕ ಸುಖಕ್ಕಿಂತ ಮುಖ್ಯ ವೆಂಬ ಮೌಲ್ಯವನ್ನು ಮನಸಾರೆ ನಡೆಸಿಕೊಂಡು ಬಂದ ಹೊನ್ನಜ್ಜಿ ಜೀವನದ ಕಷ್ಟಗಳನ್ನು ಎದುರಿಸುವ ಶಕ್ತಿ ಸಂಪಾದಿಸಿದ್ದಾಳೆ. ಇದಕ್ಕೆ ಪ್ರತಿಯಾಗಿ ಹೊಸ ಪ್ರಜ್ಞೆಯನ್ನು ಪ್ರತಿನಿಧಿಸುವ ಪಾತ್ರಗಳ ಮೌಲ್ಯವೇ ಬೇರೆ ಅವರು ಜೀವನದಿಂದ ಅಪೇಕ್ಷಿಸುವ ಹಾಗೂ ಅನುಭವಿಸುವ ದಾರಿಯೇ ಬೇರೆ. ಆದುದರಿಂದ ಈ ಕೃತಿಯ ಶೀರ್ಷಿಕೆ 'ಇನ್ನೊಂದೆ ದಾರಿ"*[೨೨] ಎಂಬುದು ಅರ್ಥ ಗರ್ಭಿತವೂ, ಸೂಕ್ತವೂ ಆಗಿದೆ.

ನಾಲ್ಕು ತಲೆಮಾರುಗಳ ಕಥೆಯನ್ನು ಒಳಗೊಂಡಿರುವ ಈ ಕಾದಂಬರಿಯಲ್ಲಿ ಸಾಂಸ್ಕೃತಿಕ ಅಂಶಗಳಾದ ಸಾಮಾಜಿಕ ಮತ್ತು ಆರ್ಥಿಕ ನೆಲೆಗಳು, ನಿಸರ್ಗದ ನೆಲೆಯಲ್ಲಿ ತೆರೆದುಕೊಳ್ಳುವ ಬಗೆಯನ್ನು ಸಂಕ್ಷಿಪ್ತವಾಗಿ ನೋಡಬಹುದಾಗಿದೆ.

---

೨೨. ಜಿ.ಎಸ್.ಶಿವರುದ್ರಪ್ಪ (ಸಂ) ಕಾದಂಬರಿಕಾರರಾಗಿ ಕಾರಂತ, ಪುಟ-೧೪೬

ಚಿಕ್ಕ ವಯಸ್ಸಿನಲ್ಲಿ ಮದುವೆಯಾದ ಹೊನ್ನಮ್ಮ ಸಂಪ್ರದಾಯ ಮನಸ್ಸುಳ್ಳವಳು ಲಕ್ಷ್ಮೀ ರಮಣನನ್ನು ಕಟ್ಟಿಕೊಂಡ ಮೇಲೆ ಅವನ ಅನಾಚಾರಗಳ ಬಗ್ಗೆ ತಲೆಕೆಡಿಸಿಕೊಳ್ಳದೆ ಮೌನ ವಹಿಸುತ್ತಾಳೆ. ಇದಕ್ಕೆಲ್ಲ ಆ ದೇವರೇ ಕಾರಣವೆಂದು ಒಡ್ಡರೆಸಿಯ ಶಿವಾಲಯಕ್ಕೆ ಹೋಗಿ ಧ್ಯಾನ ಮಗ್ನಳಾಗುತ್ತಾಳೆ. ಇವಳ ಸಂಪ್ರದಾಯದ ಬಗ್ಗೆ ಕಾರಂತರು ಒಪ್ಪೊತ್ತು ಊಟವನ್ನಾದರೂ ಅವನು ಕೊಡುತ್ತಿದ್ದಾನಲ್ಲ ನಮ್ಮ ಕರ್ಮ ಧರ್ಮ ಸಮನಾಗಿರುವಷ್ಟು ದಿವಸ ಮಳೆ, ಬೆಳೆ, ಕೊಡುತ್ತಿರುತ್ತಾನೆ. ಇವರಿಗೆ ಇರುವ ಒಂದೂವರೆ ಮುಡಿ ಗದ್ದೆಯಲ್ಲಿ ಬರುವಷ್ಟು ಭತ್ತ ಬರುತ್ತದೆ. ಗಂಜಿಯಾದರೆ ಗಂಜಿ ಅನ್ನವಾದರೆ ಅನ್ನ ಇರಬಹುದು ಇರುವಷ್ಟು ದಿನ ಮೂರು ಹೊತ್ತು ಅವನ ಕಣ್ಮುಚ್ಚಿದರಾಯಿತು ಎಂದಳು ಅವಳು.

ಹೊನ್ನಜ್ಜಿ ಜೀವನ ಪೂರ್ತಿ ದೇವರನ್ನು ನಿಸರ್ಗದಲ್ಲಿ ಕಾಣುತ್ತಾಳೆ. ನಿಸರ್ಗವನ್ನು ನೆನೆದು ವಡ್ಡರಸೆ ಶಿವಾಲಯಕ್ಕೆ ಹೋಗುವುದು ಅವಳ ಆಧ್ಯಾತ್ಮಿಕತೆಗೆ ಹಿಡಿದ ಕೈಗನ್ನಡಿ, ಹೊನ್ನಜ್ಜಿಯ ಮಗ ಮಹದೇವಯ್ಯ ಮತ್ತು ಸೊಸೆ ಪದ್ಮಾವತಿಯರು ತಮ್ಮ ಮಗ ನರಸಿಂಹಯ್ಯ ಹೆಸರು ಗದ್ದೆ ನಾರಾಯಣಪ್ಪಯ್ಯನಿಗೆ ದತ್ತು ಕೊಟ್ಟು ಅದಕ್ಕೆ ಬದಲಾಗಿ ಹೆಸರು ಗದ್ದೆ ಸಾಹುಕಾರರ ಆಗುಂಬೆಯ ಬಳಿಯಿರುವ ಜಮೀನು ಪಡೆಯುತ್ತಾರೆ. ಇದನ್ನು ಕಾರಂತರು 'ಇತ್ತ ಮುಂದಿನ ಮಳೆಗಾಲ ಕಳೆಯುತ್ತಲೇ ಹೊನ್ನಮ್ಮಗೆ ತೆಂಕು ಬಯಲಿನ ನೀರಿನ ಋಣವು ಕಳೆಯಿತು. ಅದೇ ಊರಲ್ಲಿ ಇರಬೇಕು. ಎಂಬ ಹಂಬಲ ಮಾದೇವನಿಗೆ ಹೊರಟು ಹೋಗಿತ್ತು ಹೆಸರು ಗದ್ದೆಯವರೆಗೆ ಸೇರಿದ ಪಡು ಜಮೀನೊಂದು ಮಾದೇವನಿಗೆ ಉಚಿತವಾಗಿ ದೊರೆಯಿತು. ಇದು ಕಡಲ ಕರಾವಳಿಯಲ್ಲದ ಮೂಡಣ ಸೀಮೆಯ ಒಂದು ಬಯಲು' ತೊಟ್ಟಿಲು ಬಯಲನ್ನು ಸೇರಿ ಸುಮಾರು ಇಪ್ಪತ್ತೈದು ವರ್ಷಗಳು ಕಳೆದ ನಂತರ, ಮಾದೇವ, ಅಲ್ಲಿ ತೋಟ ಮಾಡಿದ್ದಾನೆ. ತೆಂಕು ಬಯಲಿನಿಂದ ಇಲ್ಲಿಗೆ ಬರುವಾಗ ಇವನಿಗೆ ಮೂವತ್ತಾರು ವರ್ಷ ಮತ್ತು ಐದು ಮಕ್ಕಳಾಗಿದ್ದರು. ಹೊನ್ನಮ್ಮ ತನ್ನ ಮಗನಿಗೆ 'ತಮ್ಮದಲ್ಲದ ಒಡವೆ ಅಮೃತವಾಗಿದ್ದರೂ ತಮ್ಮ ಪಾಲಿಗೆ ಅದು ಎಂಜಲೇ' ಎನ್ನುವ ಪಾಠ ಕಲಿಸಿದ್ದಳು ಹಾಗೆಯೇ ನಮಗೆ ದಣಿದವರನ್ನು ಒಂದು ಹೊತ್ತಿಗೆ ಕರೆದು ಅನ್ನ ಕೊಡುವ ತ್ರಾಣವಿಲ್ಲದೆ ಇರಬಹುದು. ನೀರಾದರು ಕೊಡುವ ಅದು ಆಗದಿದ್ದರೆ ಸುಮ್ಮನಿರುವ. ಆದರೆ ಪರರು ದುಡಿದದ್ದನ್ನು ಕದಿಯುವುದು ವಂಚಿಸುವುದು ಈ ಮನುಷ್ಯ ಜನ್ಮಕ್ಕೆ ಸಲ್ಲದ ಕೆಲಸ!' ಎಂದು ಬುದ್ಧಿ ಕಲಿಸಿದ್ದಳು.

ಈ ಮಾತುಗಳಲ್ಲಿ ಹೊನ್ನಜ್ಜಿಯ ಶೀಲ, ಸಂಸ್ಕಾರವನ್ನು ಹೇಳುತ್ತವೆ. ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಶೀಲ, ಸಂಸ್ಕಾರ, ಸತ್ಯ, ನ್ಯಾಯ, ಅಹಿಂಸೆಗೆ ಮೊದಲ ಸ್ಥಾನವಿದೆ. ಈ ಸಂಗತಿಗಳು ಹೊನ್ನಜ್ಜಿಯಲ್ಲಿ ವ್ಯಕ್ತವಾಗುತ್ತವೆ. ಈ ಮಾತುಗಳನ್ನು ಕೇಳಿದ ಮಾದೇವನಿಗೆ ನರಸಿಂಹನನ್ನು ದಾನ

ಮಾಡಿದ ಸಂಗತಿ ನೆನಪಿಸಿಕೊಂಡು ದುಃಖವಾಗುತ್ತದೆ. ಕಾರಂತು ಈ ಕಾದಂಬರಿಯ ಪಾತ್ರಗಳ ಮೂಲಕ, ಸಾಮಾಜಿಕ ಮತ್ತು ಆರ್ಥಿಕ ದೃಷ್ಟಿಕೋನಗಳ ಅಂತಸ್ತನ್ನು ಗುರುತಿಸುವುದು ಅದರೊಂದಿಗೆ, ಸಾಂಸ್ಕೃತಿಕ ಅಂಶಗಳನ್ನು ಹೇಳಿರುವುದು ತುಂಬಾ ಗಮನಾರ್ಹವಾದ ಅಂಶವಾಗಿದೆ.

"ಶನೇಶ್ವರನೆರಳಿನಲ್ಲಿ" ಕಾದಂಬರಿಯಲ್ಲಿ ನಿರೂಪಕರಾಗಿ ಕಾರಂತರು ಕಾಣಿಸಿಕೊಂಡಿರುವುದು ವಿಶೇಷ ಸಂಗತಿ. 'ಬೆಟ್ಟದ ಜೀವ' ಕಾದಂಬರಿಯ ಶಿವರಾಮಯ್ಯನ ರೀತಿಯಲ್ಲಿ ಇಲ್ಲಿ ನಿರೂಪಕರು ಉಳಿದ ಪಾತ್ರಗಳೊಂದಿಗೆ ಅವರ ಕೌಟುಂಬಿಕ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನೆಲೆಗಳ ವಿಚಾರಕ್ಕೆ ಸಂಬಂಧಿಸಿದಂತೆ ಸಲಹೆಗಾರರಾಗಿ ಕಾಣಿಸಿಕೊಳ್ಳುತ್ತಾರೆ. ಕಾರಂತರು "ಶನೀಶ್ವರ'ನ ಮುಂದೆ ನಡೆಯುವ ಜನರ ಮನಸ್ಸಿನ ಕಾದಾಟ ಮತ್ತು ವಾಗ್ವಾದಗಳನ್ನು ಪರಿಚಯಿಸುತ್ತಾರೆ. ಈ ಕಾದಾಟ ಮತ್ತು ವಾಗ್ವಾದಗಳು ನಿಸರ್ಗ ಭಾಗದ ಮೂಲವಾದ ಭೂಮಿಯ 'ಒಡೆತನಕ್ಕಾಗಿ' ಎಂಬುದು ಮುಖ್ಯವಾಗಿದೆ. ಇಲ್ಲಿ ಬರುವ ಪಾತ್ರಗಳಲ್ಲಿ ಪ್ರಮುಖ ಪಾತ್ರವನ್ನು ಕಾವೇರಮ್ಮ ವಹಿಸುತ್ತಾಳೆ. ಭೂಮಿಯೊಂದಿಗೆ ಇಲ್ಲಿನ ಪಾತ್ರಗಳು ಹೊಂದಿರುವ ಸಾಂಸ್ಕೃತಿಕ ಸಂಬಂಧ ಇಲ್ಲಿ ಪ್ರಮುಖವಾಗಿದೆ. ಮಿಕ್ಕ ಪಾತ್ರಗಳಾದ ಪರಮೇಶ್ವರ ಅಡಿ, ನಾರಾಯಣ ಅಡಿ, ಶಂಕರ ಜೋಯಿಷ, ಪಾಟಾಳಿ ಶಿವಣ್ಣಯ್ಯ ಪ್ರಮುಖರು.

ಕಾವೇರಮ್ಮ ತನ್ನ ಗಂಡನಿಂದ ಬಂದಿದ್ದ ಆಸ್ತಿಯನ್ನು ತನ್ನ ಮಕ್ಕಳಿಗೆ ಹಿಸ್ಸೆ ಮಾಡಿಕೊಡುವುದಿಲ್ಲ. ಇದಕ್ಕೆ ಕೊಡುವ ಉತ್ತರಗಳಲ್ಲಿ ಸಾಂಸ್ಕೃತಿಕ ಚಲನಶೀಲತೆಯಲ್ಲಿ ಆಕೆಯ ಮನಸ್ಸಿನ ಪಕ್ವತೆಯ ಬೆಲೆ ಗೊತ್ತಾಗುತ್ತದೆ. ಆದರೆ, ಕಾವೇರಮ್ಮನ ಕಿರಿಯ ಮಗ ನಾರಾಯಣ ಅಡಿ ಇದನ್ನು ಅರ್ಥಮಾಡಿಕೊಳ್ಳದೆ ಆಕೆಗೆ ಸಂಬಧಪಟ್ಟಂತೆ ಅಮ್ಮನಿಗೆ ಇಂಥ ಸಂದರ್ಭವನ್ನು ಬಿಡಬಾರದಂತೆ ನನ್ನ ಹೆಂಡತಿ ಮಕ್ಕಳಿಗೆ ಇಷ್ಟವಿಲ್ಲದಿದ್ದರೂ ಇಲ್ಲಿಗೆ ಬಂದರೆ ಅವರಿಗೆ ಕಾಯಿಲೆ ಕಸಾಲೆ ಆಗುವುದಾದರು ಚಿಂತೆಯಿಲ್ಲ. ನಾನು ಒಂದು ಬಿಡಾರ ಹೂಡಿ, ಹಿರಿಯರ ಆಸ್ತಿಯನ್ನು ಅಷ್ಟು ಊರ್ಜಿತಕ್ಕೆ ತಂದೇ ತರುತ್ತೇನೆ. ಎಂದು ಅವಳಿಗೆ ಹೇಳಿದರೆ ಅವಳು ಹಟ ಬಿಡಲಿಲ್ಲ. 'ಬಾ ಇಲ್ಲಿರು ಮಗನೇ' ಅನ್ನುತ್ತಾಳೆ ವಿನಾ, ಕಾಡನ್ನು ಬಿಟ್ಟಿರಬೇಕಂತೆ........ ನೀವು ನಮ್ಮ ಅಣ್ಣನನ್ನು ಕಂಡೀದ್ದೀರಲ್ಲ, ಅವನಿಗೂ ಅವಳಿಗೂ ಸರಿಯಾಗುತ್ತದೆ. ನಮ್ಮ ಅಮ್ಮ ರಾತ್ರಿಯನ್ನು ಹಗಲೆಂದರೆ ಹೌದಮ್ಮ ಇದು ರಾತ್ರಿ ಎನ್ನುವಷ್ಟು ಬೆಪ್ಪ ಅವನು.

ನಾರಾಯಣನು ತಮ್ಮ ತಾಯಿ ಕಾವೇರಮ್ಮನು ಭೂಮಿಯನ್ನು ಹಿಸ್ಸೆ ಮಾಡಿಕೊಡದ ಕಾರಣದಿಂದ ನೊಂದು ಹೇಳುತ್ತಾನೆ. ಹೀಗೆ ನಿಸರ್ಗದ ನೆಲೆಯಾದ ಭೂಮಿಯನ್ನು ಕಾವೇರಮ್ಮ ತಮ್ಮ ಮಕ್ಕಳಿಗೆ ಆಸ್ತಿಯನ್ನು ಕೊಟ್ಟರೆ ಅವರು ಶಂಕರ ಜೋಯಿಸರಿಗೆ ಮಾರಿಬಿಡುತ್ತಾರೆಂಬ ಭಯ

ಆಕೆಯನ್ನು ಕಾಡುತ್ತಿತ್ತು. ಪ್ರಬುದ್ಧರಾದ ಪರಮೇಶ್ವರ ಅಡಿ ಮತ್ತು ನಾರಾಯಣ ಅಡಿಗಳಿಗೆ ಈಗಾಗಲೇ ಹೆಂಡತಿ ಮಕ್ಕಳಿದ್ದಾರೆ. ಆದರೆ ಅವರ ತಾಯಿ ಕಾವೇರಮ್ಮ ಆಸ್ತಿಯನ್ನು ಹಿಸ್ಸೆ ಮಾಡಿಕೊಟ್ಟಿಲ್ಲ. ಆದ್ದರಿಂದ ಅವರು ಸಾಮಾಜಿಕವಾಗಿ ಪ್ರಬುದ್ಧರಾಗಿಲ್ಲ. ಈ ಬಗ್ಗೆ ಕೆ.ಸತ್ಯನಾರಾಯಣರವರು 'ಶನೀಶ್ವರನ ನೆರಳಿನಲ್ಲಿ' ನ ಅಜ್ಜಿಯ ಮಕ್ಕಳು ಮೊಮ್ಮಕ್ಕಳು ಏಕೆ ಪ್ರಬುದ್ಧರಾಗಿಲ್ಲ ಎಂಬುದಕ್ಕೆ ಕಾರಣಗಳನ್ನು ವಿವರಿಸುತ್ತಾ ಕಾರಂತರು ಜೀವನದಲ್ಲಿ ಅವರು ಮೊದಲು 'ಲೋಕ ಸಂತಾಪ' ದ ಬಿಸಿ ಅನುಭವ ಅವರಿಗೆ ತಟ್ಟಲಿಲ್ಲ ಅನ್ನುತ್ತಾರೆ. ಕಾರಂತರು 'ಲೋಕ ಸಂತಾಪ' ದ ಕಾದಂಬರಿಕಾರರು 'ಲೋಕ ಸಂತಾಪ' ಹುಟ್ಟುವ ಮತ್ತು ಅದನ್ನು ವ್ಯಕ್ತಿಯೊಬ್ಬನು ಅನುಭವಿಸುವ ವಿಧಾನಗಳು ವೈವಿಧ್ಯಪೂರ್ಣವಾದ್ದರಿಂದ ಎಲ್ಲ ರೀತಿಯ ಬದುಕಿನ ಕ್ರಮಗಳೂ ಗಮನರ್ಹವಾಗಿವೆ. ಪ್ರಮಾಣಿಕತೆ ಮತ್ತು ಶ್ರದ್ದೆಯಲ್ಲಿ ಬಹುಶಃ ಈ ಕಾರಣದಿಂದಲೇ ಕಾರಂತರು ತಮ್ಮ ಪಾತ್ರಗಳು ಮಾನಸಿಕ ಲೋಕದ ವಿಶ್ಲೇಷಣೆಯಲ್ಲಿ ನಮ್ಮ ಸಂಸ್ಕೃತಿಯಿಂದಲೇ ಆಯ್ದು ಪರಿಕರಗಳ ಪ್ರಕರಣಗಳು ಸಹಾಯ ಪಡೆಯುವುದು ಪಾಶ್ಚಾತ್ಯ ಜೀವನದ ಕಲ್ಪನೆ, ಸಮೂಹ ಕಲ್ಪನೆ ಇವುಗಳು ನಮ್ಮ ಸಾಹಿತ್ಯದ ಸಾಂಸ್ಕೃತಿಕ ಆಲೋಚನೆಗಳನ್ನು ಬಹಳವಾಗಿ ಪ್ರಭಾವಗೊಳಿಸಿರುವುದರಿಂದ ಕಾರಂತರು ನಿರ್ದಿಷ್ಟ ಜೀವನ ದೃಷ್ಟಿಕೋನದಿಂದ ಬರೆಯುತ್ತಾರೆ ಎಂದು ಅನ್ನಿಸಿರಲಿಕ್ಕೆ ಸಾಕು.

ನಮ್ಮ ಸಾಂಸ್ಕೃತಿಕ ನೆಲೆಯಲ್ಲಿ ಹಿರಿಯರಿಗೆ ಗೌರವ ಸ್ಥಾನವನ್ನು ಕೊಡಲಾಗಿದೆ. ಕಡೆಗೆ ಕಾವೇರಮ್ಮ ತನ್ನ ಮಕ್ಕಳಿಗೆ ಆಸ್ತಿಯನ್ನು ಕೊಟ್ಟಿದ್ದು ಅಲ್ಲದೇ ನೊಕ್ಕರಲಿನ ಲಕ್ಷ್ಮೀನಾರಾಯಣ ದೇವರಿಗೆ ಉಂಬುಳಿ ಕೊಡುತ್ತಾಳೆ. ಶಿವಣ್ಣನಿಗೆ ಮೂರು ಮುಡಿಗದ್ದೆಯನ್ನು ಗೇಣಿಗೆ ಕೊಟ್ಟು ಅದರ ಉತ್ಪನ್ನ ಅವನು ಶನೀಶ್ವರ ದೇವರಿಗೆ ವಾರಕ್ಕೊಮ್ಮೆ ಮಂಗಳಾರತಿ ಉತ್ಸವ ಮಾಡಿಸಿ ಬರಲಿ ಶಿವಣ್ಣ ಆ ಜಮೀನನ್ನು ಬಿಟ್ಟ ಕಾಲಕ್ಕೆ ಅದು ದೇವರದ್ದಾಗಲಿ: ಎನ್ನುತ್ತಾಳೆ. ದೇವರು ಎನ್ನುವ ನಂಬಿಕೆ ಮನುಷ್ಯ ಸಂಸ್ಕೃತಿಯ ಪ್ರತಿಬಿಂಬ. ಅದಕ್ಕಾಗಿ ದೇವರಿಗೆ ಎಂದು ಭೂಮಿಯನ್ನು ಬಿಟ್ಟುಕೊಡುವ ಪದ್ದತಿಯ ಸಾಂಸ್ಕೃತಿಕ ನೆಲೆಯ ಪ್ರಭಾವವೆಂದು ಗುರ್ತಿಸಬಹುದು. ಇಂತಹ ಅನುಭಾವಿಕ ದೃಷ್ಟಿಯಿಂದಲೇ ಕಾವೇರಮ್ಮ ದೇವರ ಉತ್ಸವಕ್ಕೆ ಭೂಮಿಯನ್ನು ಬಿಟ್ಟುಕೊಡುತ್ತಾಳೆ.

'ಮರಳಿ ಮಣ್ಣಿಗೆ' ಕಾದಂಬರಿ ಮೂರು ತಲೆ ಮಾರುಗಳ ಕಥೆಯನ್ನು ಒಳಗೊಂಡಿದೆ. ಇಲ್ಲಿ ಒಂದು ತಲೆಮಾರು ಸಾಂಸ್ಕೃತಿಕವಾಗಿ ನಿಸರ್ಗದ ನೆಲೆಯಲ್ಲಿ ಕಂಡಿಕೊಂಡರೆ, ಎರಡನೆ ಸಾಂಸ್ಕೃತಿಕವಾಗಿ ಇಂಗ್ಲಿಷ್ ಶಿಕ್ಷಣದ ಬೆನ್ನುಹತ್ತಿ ಹೋಗಿ, ಈ ಮೂಲಕ ನಿಸರ್ಗದಿಂದ ದೂರ ಇರುತ್ತಾರೆ. ಮೂರನೇ ತಲೆಮಾರಿನ ಪಾತ್ರವಾದ ರಾಮನು ಓದಲು ಪ್ರಾರಂಭಿಸುವಷ್ಟರೊಳಗೆ ಸಂಸ್ಕೃತಿಯಲ್ಲಿ ಬದಲಾವಣೆಗೆ ಒಳಪಟ್ಟ ಇಂಗ್ಲಿಷ್ ಶಿಕ್ಷಣ ಸಾಮಾನ್ಯವಾಗಿರುತ್ತದೆ

ಈ ಕಾದಂಬರಿ ಕುರಿತು ಜಿ.ಎಸ್.ಆಮೂರವರು "೧೮೫೦ ರಿಂದ ೧೯೪೦ ರವರೆಗಿನ ಸುಮಾರು ನೂರು ವರ್ಷಗಳ ಕಾಲಾವಧಿಯಲ್ಲಿ ದಕ್ಷಿಣ ಕನ್ನಡದ ಗ್ರಾಮದ ಜೀವನದಲ್ಲಿ ನಡೆದ ಸ್ಥಿತ್ಯಂತರಗಳನ್ನು, ಈ ಸ್ಥಿತ್ಯಂತರಗಳಿಗೆ ಕಾರಣವಾದ ಸಾಮಾಜಿಕ ಪ್ರಕ್ರಿಯೆ ಹಾಗೂ ಮೌಲ್ಯ ಕ್ರಮಗಳನ್ನು ಬ್ರಾಹ್ಮಣ ಕುಟುಂಬವೊಂದನ್ನು ಕೇಂದ್ರವಾಗಿಟ್ಟಿಕೊಂಡು ಸೃಷ್ಟಿಸುವುದು ಈ ಕಾದಂಬರಿಯ ಉದ್ದೇಶ ಎಂದು ಹೇಳಬಹುದು ಎಂದಿದ್ದಾರೆ. ಸಮಾಜದಲ್ಲಿ ಮನುಷ್ಯನು ತಾನು ಬದುಕುವುದಕ್ಕಾಗಿ ಆರ್ಥಿಕ ದೃಷ್ಟಿಕೋನದ ಮೂಲಕ ನಿಸರ್ಗದ ನೆಲೆಯಲ್ಲಿ ತನ್ನನ್ನು ವಿವಿಧ ರೀತಿಯಾಗಿ ಒಡ್ಡಿಕೊಳ್ಳುತ್ತಾನೆ. ಅದು ಅವನ ಸಂಸ್ಕೃತಿ ಬೆಳವಣಿಗೆಗಳಿಗೆ ಪೂರಕವಾಗಿರುತ್ತದೆ. 'ಮರಳಿ ಮಣ್ಣಿಗೆ' ಕಾದಂಬರಿಯಲ್ಲಿಯ ಪಾತ್ರಗಳು ಸಾಂಸ್ಕೃತಿಕವಾಗಿ ನಿಸರ್ಗದಲ್ಲಿ ತಮ್ಮನ್ನು ಒಡ್ಡಿಕೊಳ್ಳುವ ನೆಲೆಗಳನ್ನು ಸಂಕ್ಷಿಪ್ತವಾಗಿ ಇಲ್ಲಿ ನೋಡಲಾಗಿದೆ.

ಮೊದಲ ತಲೆಮಾರಿನ ರಾಮ ಐತಾಳ, ಪಾರೋತಿ, ಸರಸೋತಿ, ಇವರು ಸದಾ ನದಿಯ ಪ್ರವಾಹದೊಂದಿಗೆ ಸಂಬಂಧ ಹೊಂದಿರುತ್ತಾರೆ. ರಾಮ ಐತಾಳ ಕೃಷಿಕ ಮತ್ತು ಪುರೋಹಿತ. ಅದೇ ರೀತಿಯಾಗಿ ಪಾರೋತಿ, ಸರಸೋತಿ, ಮತ್ತು ಸತ್ಯಭಾಮೆ ಕೃಷಿ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು, ಸಂಸಾರವನ್ನು ನಿರ್ವಹಿಸುವ ಮೂಲಕ ಸಾಂಸ್ಕೃತಿಕವಾಗಿ ನಿಸರ್ಗದೊಂದಿಗೆ ಸಂಬಂಧ ಹೊಂದಿರುತ್ತಾರೆ.

"ಐತಾಳರು ಎಲ್ಲಿಲ್ಲದ ಧೈರ್ಯ ತಂದುಕೊಂಡು ಹೊಳಗೆ ಇಳಿಯುತ್ತೇನೆ ಎಂದರು. ತಮ್ಮ ಧಾವಳಿ, ಪಂಚಪಾತ್ರೆಗಳನ್ನು ತಲೆಗೇರಿಸಿ, ಪಾಣಿ ಪಂಚೆಯಿಂದ ರುಮಾಲೆ ಬಿಗಿದರು, ದೇವರ ಉತ್ಸವ ಮೂರ್ತಿಯ ಮೇಲೆ ಬೆಳ್ಳಿಯ ಕೊಡೆ ಹಿಡಿಯುವ ಹಾಗೆ, ಕಾಲುಕೊಡೆ ತಲೆಯ ಮೇಲೆ ಹಿಡುಕೊಂಡು- ನಿತ್ಯ ದಾಟುವ ತಡುವಿನಿಂದ ಇಳಿದರು. ಗಂಡನು ನದಿ ದಾಟುವ ದೃಶ್ಯ ನೋಡಿ ಪಾರೋತಮ್ಮನ ಕೊರಳ ತಾಳಿ ನಡುಗುತ್ತಿರಬೇಕು- ಹೆದರಿಕೆಯಿಂದ ಅವನು ನೀರಲ್ಲಿ ನೂರು ಮಾರು ದಾಟುವ ತನಕವೂ ಮೊಣಕಾಲು ತನಕ ನೀರಿದ್ದು".[೭೮] ಹೀಗೆ ಮುಂದುವರೆದು, ಸಾಲಿ ಗ್ರಾಮದ ನರಸಿಂಹನನ್ನು ತಿಳಿದುಕೊಂಡು ರಾಮ ಐತಾಳರು ನಿಸರ್ಗದೊಂದಿಗೆ ಹೊಂದಿಕೊಂಡು ತಮ್ಮ ಸಾಂಸ್ಕೃತಿಕ ನೆಲೆಯಾದ ಭಕ್ತಿಯನ್ನು ಮತ್ತು ದೇವರ ಸೇವೆಯನ್ನು ನಿತ್ಯವು ನೆರವೇರಿಸುವುದು ಅವರ ಕಾಯಕ.

ಕಾರಂತರು ಮದುವೆ ದಿಬ್ಬಣಗಳನ್ನು ಹೆಚ್ಚಾಗಿ ಈ ಕಾದಂಬರಿಯಲ್ಲಿ ತರುತ್ತಾರೆ. ಅದು ಮಳೆಯು ಬೀಳುತ್ತಿರುವ ಸಂದರ್ಭದಲ್ಲಿ; ನಿಸರ್ಗದ ವರ್ಣನೆಯನ್ನು ಮಾಡುತ್ತಾ ತನ್ಮಯ ರಾಗುವುದು. ಕಾರಂತರಿಗೆ ಮಾತ್ರ ಸಾಧ್ಯವೆನಿಸುತ್ತದೆ. ಪಾರೋತಿ ಮತ್ತು ರಾಮ ಐತಾಳರ ಮದುವೆಯು ನಡೆಯುವಾಗ ಮತ್ತು ದಿಬ್ಬಣ ಹೊರಟಾಗ ವಿಪರೀತ ಮಳೆ ಬರುತ್ತದೆ. ಮಳೆಯಲ್ಲೇ ದಿಬ್ಬಣ ಹೊರಟಿತು. ಮಳೆಯಲ್ಲೇ ಹೆಣ್ಣಿನ ಮನೆಯ ಚಪ್ಪರವನ್ನು ಸೇರಿತು. ಮಳೆ-ಗಾಳಿಯು

೭೮. ಶಿವರಾಮಕಾರಂತ, ಮರಳಿ ಮಣ್ಣಿಗೆ, ಪುಟ-೦೯

ಅರ್ಥಗಳು ಯಾವ ರೀತಿ ಇತ್ತೆಂದರೆ ಊಟ ಮತ್ತೆ ಎತ್ತಿಂದಕೊಳ್ಳ ಓಡಿದ ಕೋಡಗಳು ನಾಲ್ಕು ನಾಲ್ಕು ಬಾರಿ ಕೈತಪ್ಪಿ ಎಲ್ಲಿಂದೆಲ್ಲಿಗೋ ಹೋದವು. ಸ್ವತಃ ಬಾಹುಕರು ಓಡಿದ ಊಟ ಕೋಡೆ ಮರುದಿನ ಮನೆಯನ್ನು ಸೇರುವಾಗ ಊಟ ಮಾತ್ರ ಉಳಿದಿತ್ತು.

ನಿಸರ್ಗವು ಮನುಷ್ಯ ಸಂಸ್ಕೃತಿಯ ಮೇಲೆ ಪ್ರಭಾವ ಬೀರುತ್ತದೆ. ಈ ಪ್ರಭಾವವನ್ನು ಮನುಷ್ಯನು ತನ್ನನ್ನು ಸಾಂಸ್ಕೃತಿಕವಾಗಿ ರೂಪಿಸಿಕೊಳ್ಳುತ್ತಾನೆ. ಈ ರೀತಿಯ ನಿಸರ್ಗದ ವೈಚಿತ್ರ್ಯಗಳ ಭಯವೇ ಮನುಷ್ಯನಲ್ಲಿ ಧರ್ಮ ಹುಟ್ಟಿಕೊಳ್ಳಲು ಕಾರಣವಾಗುತ್ತದೆ. ಹಾಗೆಯೇ ಮನುಷ್ಯನ ಕಲೆಯೂ ಸಹ ನಿಸರ್ಗದ ಪ್ರೇರಣೆಯನ್ನು ಒಳಗೊಂಡಿರುತ್ತದೆ.

ಅಪ್ಪ ಮತ್ತು ನಾಗವೇಣಿಯ ಮಗ ಮೂರನೇ ತರಗತಿಯ ರಾಮ ವಿದ್ಯಾಭ್ಯಾಸಕ್ಕಾಗಿ ಕೋಟಿಯಿಂದ ಮದ್ರಾಸ್, ಮುಂಬೈಯನ್ನು ಸೇರುತ್ತಾನೆ. ಮುಂಬೈಯಲ್ಲಿ ನೋಟಾ ಎಂಬುವರ ಬಳಿ ಚಿತ್ರಕಲೆಯನ್ನು ಕಲಿತ ರಾಮನು, ನಂತರ ಅಲ್ಲಿ ಉದ್ಯೋಗ ಸಿಗದೆ ಮರಳಿ ಕೋಟಿ ಊರಿಗೆ ಹಿಂತಿರುಗಿ ಬಂದು, ದಿನವೂ ಕಡಲಿನ ಸೌಂದರ್ಯವನ್ನು ವೀಕ್ಷಿಸುತ್ತಾನೆ. ನಂತರ ಕಡಲಿನ ವೈಚಿತ್ರ್ಯಗಳನ್ನು ತನ್ನ ಕುಂಚದಿಂದ ಚಿತ್ರಿಸುತ್ತಾನೆ. ನಾಗವೇಣಿ ಮತ್ತು ರಾಮ ಇಬ್ಬರೂ ತಾವು ಹೊಸದಾಗಿ ಮಾಡಿದ ಅಗಮೆಗೆ ಬಂದರು. ಬೇಲಿ ಹಾಕಿದ ಹೊಗೆ ಸೊಪ್ಪಿನ ಹಿತ್ತಲು ಇಲ್ಲೇ ತೆಗೆದ ಬೀಳಿನ ಹೊಂಡ ರಾಮ, ನಾಗವೇಣಿಯರು ನೀರಿಗಿಳಿದು ಕೊಡಗಳನ್ನು ತುಂಬಿ ಒಂದೊಂದಾಗಿ ತಂದು ಹೊಗೆಸೊಪ್ಪಿನ ಗಿಡಗಳಿಗೆ ಎರೆಯತೊಡಗಿದರು. ಕೆಲಸ ಮಾಡುತ್ತಾ ರಾಮ ಕಡಲಿಗೆ ಹೋಗಿ ಬರುತ್ತೇನೆ ನನ್ನ ಚಿತ್ರ ಅರ್ಧವಾಗಿದೆ ಅದನ್ನು ಯಾವಾಗ ಮುಗಿಸುವುದು? ಯಾವಾಗ ಮುಂಬೈಗೆ ಕಳುಹಿಸುವುದು?

ರಾಮ ಕೃಷಿ ಸಂಸ್ಕೃತಿಯ ಕಡೆಗೆ ಬಂದು ತನ್ನ ತಾಯಿಯೊಡನೆ ಕೃಷಿ ಕೆಲಸ ಮಾಡುತ್ತಿದ್ದರೂ ಸಹ, ಕಡಲಿನ ಹುಚ್ಚನ್ನು ಬಿಟ್ಟಿಲ್ಲ. ಏಕೆಂದರೆ ಅದು ಅವನನ್ನು ಚಿಕ್ಕಂದಿನಿಂದ ಆಕರ್ಷಿಸಿದ ಸಂಗತಿಯಾಗಿದೆ. ಕಾರಂತರು ರಾಮನನ್ನು ಆಧುನಿಕ, ಕೃಷಿಕ ಮತ್ತು ಕಲೆಗಾರನಾಗಿ ಚಿತ್ರಿಸಿದ್ದಾರೆ. ರಾಮ ಆಧುನಿಕವಾಗಿ ವಿದ್ಯಾಭ್ಯಾಸ ಪಡೆದು, ವೈಚಾರಿಕತೆ ಬೆಳೆಸಿಕೊಳ್ಳುತ್ತಾನೆ. ನಂತರ ಕೃಷಿಯನ್ನು ಮಾಡುತ್ತಾನೆ. ನಿಸರ್ಗದ ನಡುವೆ ಕಲೆಯನ್ನು ರೂಪಿಸಿಕೊಳ್ಳುತ್ತಾನೆ.

'ನಷ್ಟ ದಿಗ್ಗಜಗಳು' ಕಾದಂಬರಿಯಲ್ಲಿ ಮೂರ್ತಿಗಳ ಸ್ಥಾಪನೆಯ ಸಂಸ್ಕೃತಿಯ ಬಗ್ಗೆ ಕಾರಂತರು ಹೇಳುತ್ತಾರೆ. ಮುನ್ನುಡಿಯಲ್ಲಿ 'ಈ ಬಾರಿ ಹೋದಾಗ ದಿನಕ್ಕೆ ಎರಡು ಬಾರಿಯಾದರೂ ರೋಮಿನ ವ್ಯಾಟಿಕಾನ್ ಭಾಗದ ಮೂಲಕ ಹಾಯುತ್ತಿದ್ದಾಗ ಅಲ್ಲಲ್ಲಿ ನಿಲ್ಲಿಸಿದ ಅನಂತ ಚಂದ್ರಕಾಂತ ಶಿಲಾಮೂರ್ತಿಗಳನ್ನು ಕಂಡೆ. ರೋಮಿನ ವೈಭವದ ಕಾಲದ ಸಾಮ್ರಾಜ್ಯದಿಂದ ಹಿಡಿದು, ಗ್ಯಾರಿಬಾಲ್ಡಿಯ ತನಕ ಪ್ರತಿಮೆಗಳು! ಅವರು ನೆಟ್ಟ ಕಾಲದ ಹೆಮ್ಮೆಯನ್ನು ಸಾರುವ ಹೊಗೆಯ

ಅಂಶವಾದ ಸಲ್ಫ್ಯೂರಿಕ್ ಆಮ್ಲದ ಕೊರೆತದಿಂದಲೋ ಅಂದಗೆಟ್ಟ ಪ್ರತಿಮೆಗಳನ್ನು ಕಂಡು ಮರುಗುವ ಪಾಡು ಬಂತು! ಕಾಲಗತಿ ಎಂದುಕೊಂಡೆ' ಹೀಗೆ ಮಾನವ ತನ್ನ ಇತಿಹಾಸದ ಕಥೆಯನ್ನು ಕಟ್ಟಿಕೊಡಲು, ಆ ಮೂಲಕ ತನ್ನ ಮುಂದಿನ ಪರಂಪರೆಗೆ ತಮ್ಮ ಸಂಸ್ಕೃತಿಯ ಬೇರುಗಳನ್ನು ಪರಿಚಯಿಸಬೇಕು ಎಂದು ಸಾಧಕರ ಪ್ರತಿಮೆಗಳನ್ನು ಸ್ಥಾಪಿಸುತ್ತಾರೆ. ಆದರೆ ಅವನೇ ನಿಸರ್ಗಕ್ಕೆ ಇಂಗಾಲದ ಡೈ ಆಕ್ಸೈಡ್‌ನಂತ ಮಾರಕ ಹೊಗೆಯನ್ನು ಯಥೇಚ್ಛವಾಗಿ ಬಿಡುಗಡೆಗೊಳಿಸಿ ಅದರ ಅಂದ ಕೆಡಿಸಿ, ತನ್ನ ಸಾಂಸ್ಕೃತಿಕ ಪರಂಪರೆಗೆ ತಾನೇ ಮಸಿ ಬಳಿದು ಕೊಳ್ಳುತ್ತಿದ್ದಾನೆ. ಎಂಬ ಅಂಶವನ್ನು ಕಾರಂತರು ಮನದಟ್ಟು ಮಾಡುತ್ತಾರೆ.

ಕಾರಂತರು ಕಾದಂಬರಿಯಲ್ಲಿ ನಿರೂಪಕರಾಗಿ ಶಿವಶಂಕರ ಗುಪ್ತ ಎಂಬ ವ್ಯಕ್ತಿಯೊಂದಿಗೆ ಮಹಾರಾಷ್ಟ್ರದ ಪ್ರದೇಶ ಮಾಂಗಾವ್‌ಗೆ ಭೇಟಿ ನೀಡಿ, ಅಲ್ಲಿನ ಪರಿಸರವನ್ನು ಕಂಡು ಉತ್ಸಾಹಿತರಾಗುವ ನೆಲೆ ಇಲ್ಲಿ ಪ್ರಮುಖವಾಗಿದೆ. ಲೇಖಕರನ್ನು ಶಿವಶಂಕರ 'ಧವಳಕೀರ್ತಿ' ಮಠಕ್ಕೆ ಕರೆದುಕೊಂಡು ಹೋಗಿ ಡಾ. ಜೈನಿಯವರನ್ನು ಪರಿಚಯಿಸುತ್ತಾರೆ. ಇವರು ಧರ್ಮವನ್ನು ಕುರಿತು ಮತ್ತು ಭಾರತೀಯ ಸಂಸ್ಕೃತಿಯನ್ನು ಕುರಿತು ಹೇಳುತ್ತಾರೆ.

ರೂಪಚಂದ್ರ ಮತ್ತು ಧುನೀಚಂದರನ್ನು ಶಿವಶಂಕರ ಲೇಖಕರಿಗೆ ಪರಿಚಯಿಸುತ್ತಾರೆ. ಅವರ ಕಸುಬು ಚಿನ್ನದ ಆಭರಣಗಳನ್ನು ತಯಾರಿಸುವುದು ಇವರು ನಿಸರ್ಗದಲ್ಲಿ ಸಿಗುವ ಚಿನ್ನದ ಮೇಲೆ ಅವಲಂಭಿಸಿ ತಮ್ಮ ಚಿನ್ನದ ಆಭರಣನ್ನು ತಯಾರಿಸುವ ಸಂಸ್ಕೃತಿಯನ್ನು ರೂಪಿಸಿಕೊಂಡಿದ್ದಾರೆ. ಇವರು 'ಕ್ಯಾಂಟಿ ಕೊಲ್ಲಿಯ ತರನಪಡಿ ಲ್ಯಾಪಾರ ಸ್ಥಳಗಳಿಗೂ, ಡಾಮನ್ ಡ್ಯೂ, ಪೋ ಬಂದರು, ವಿರಾವಲ್ ಮೊದಲಾದ ಊರುಗಳಿಂದ ಚಿನ್ನದ ಗಟ್ಟಿಗಳನ್ನು ಕೊಂಡು ಬರುತ್ತಿದ್ದರು' ಹೀಗೆ ನಿಸರ್ಗದ ನೆಲೆಯಲ್ಲಿ ದೊರೆಯುವ ಅಮೂಲ್ಯ ವಸ್ತುಗಳನ್ನು ಉಪಯೋಗಿಸಿಕೊಂಡು ಇವರು ತಮ್ಮ ಸಂಸ್ಕೃತಿಯನ್ನು ಬೆಳೆಸುತ್ತಿದ್ದಾರೆ. ಆದ್ದರಿಂದ 'ಮಾನವನ ಸಂಸ್ಕೃತಿಯ ಕೀಲಿ ಕೈ ನಿಸರ್ಗದ ನೆಲೆಯಲ್ಲಿದೆ' ಎಂದು ಹೇಳಬಹುದು.

'ಧರ್ಮರಾಯನ ಸಂಸಾರ' ಕಾದಂಬರಿಯ ಮುನ್ನುಡಿಯಲ್ಲಿ ಅವರು ಇಲ್ಲಿ ಒಬ್ಬರೇ ಧರ್ಮರಾಯರಿಲ್ಲ, ಇಬ್ಬಿಬ್ಬರಿದ್ದಾರೆ. ವಾಡಿಕೆಯ ಮಾತಿನ ವಿಶೇಷ ಅರ್ಥದಲ್ಲಿ ಅವರಿಗೆ ಆ ಹೆಸರನ್ನು ತಂದುಕೊಟ್ಟಿದೆ. ಸುತ್ತಣ ಸಮಾಜ ಅವರ ಸಂಸಾರ ಇಲ್ಲಿನ ವಿಷಯ ಎಂದಿದ್ದಾರೆ. ಅಂದರೆ ಈ ಸಮಾಜವು ತನ್ನ ಆರ್ಥಿಕ ನೆಲೆಯನ್ನು ಹೇಗೆ ರೂಢಿಸಿಕೊಂಡಿದೆ ಎಂಬುದು ಇಲ್ಲಿ ಪ್ರಮುಖವಾಗಿರುವ ಅಂಶ. ಈ ಆರ್ಥಿಕ ಸಮಸ್ಯೆಯು ಕೆಲವರನ್ನು ವೀರ ಧರ್ಮರಾಯರನ್ನು ಮಾಡಿದರೆ, ಇನ್ನೊಬ್ಬರನ್ನು ದಿವಾಳಿ ಧರ್ಮರಾಯರನ್ನಾಗಿ ಮಾಡಿದೆ. ಇದಕ್ಕೆ ಕಾರಣ ಅವರವರ ನಡುವಳಿಕೆಯಾಗಿದೆ. ಈ ನಡುವಳಿಕೆಯ ಸಂಸ್ಕೃತಿಯು ವಿವಿಧ ಪರಿಕಲ್ಪನೆಗಳನ್ನು ಹೊಂದಿರುತ್ತದೆ.

ಇದು ನಿಸರ್ಗದ ನೆಲೆಯಲ್ಲಿ ಪ್ರಕಟವಾಗಿದೆ. ಈ ಬಗ್ಗೆ ಸಂಕ್ಷಿಪ್ತವಾಗಿ ಇಲ್ಲಿ ನೋಡಲಾಗಿದೆ. ಈ ಕಾದಂಬರಿಯ ಪಾತ್ರಗಳೆಂದರೆ ನಾರಾಯಣ ಹೆಬ್ಬಾರ, ಕೊಕ್ಕರಣೆ ರಾಮಪ್ಪಯ್ಯ, ಮಹಾಲಕ್ಷ್ಮಿ ಸರಸ್ವತಿ, ಮಹಾಬಲಯ್ಯ, ನಾಗಪ್ಪಯ್ಯ ಪ್ರಮುಖರು. ಶಾಸ್ತ್ರೀಯವರು 'ನಮ್ಮ ಸಮಾಜದಲ್ಲಿನ ವಿವಿಧ ವ್ಯಕ್ತಿಗಳು ಬದುಕುವ ರೀತಿಯನ್ನು ಆದರಿಂದುಂಟಾಗುವ ಸಮಸ್ಯೆಗಳನ್ನು, ಸಂಘರ್ಷಗಳನ್ನು ಈ ಕಾದಂಬರಿಯು ಪ್ರಕಟಿಸುತ್ತದೆ

ನಾರಾಯಣ ಹೆಬ್ಬಾರರು ಧಾನ ಮಾಡುವುದರಲ್ಲಿ ಪ್ರಮುಖರು. ಅವರು ತಮ್ಮ ಮನೆಯ ಪುರೋಹಿತ ಲಚ್ಚ ಐತಾಳರಿಗೆ ತೋಟದ ಗದ್ದೆಯನ್ನು ಕೊಡುತ್ತಾರೆ. ಪುರೋಹಿತತನ ಇಲ್ಲದ ಸಮಯದಲ್ಲಿ ಐತಾಳರು ಕೃಷಿಯಲ್ಲಿ ತೊಡುಗುತ್ತಾರೆ. ಹೀಗೆ ಅವರು ನಿಸರ್ಗದ ನೆಲೆಯಲ್ಲಿ ಎರಡು ವಿವಿಧ ಸಾಂಸ್ಕೃತಿಕ ನೀತಿಗಳನ್ನು ಅನುಸರಿಸುವವರು. 'ಮೂವರು ಮಕ್ಕಳೊಡನೆ ಲಚ್ಚ ಐತಾಳರು ಬಂದು ಬಿಡಾರ ಹೂಡಿದರು. ಆ ಹೊಸ ಆವರಣ ಮನಸ್ಸಿಗೆ ಹಿತಕೊಟ್ಟಿತ್ತು.' ಹೀಗೆ ಅವರು ನಿಸರ್ಗದ ನೆಲೆಯಲ್ಲಿ ತಮ್ಮ ಕೃಷಿ ಸಂಸ್ಕೃತಿಯನ್ನು ಪ್ರಕಟಪಡಿಸುತ್ತಾರೆ.

ಕೃಷಿಯನ್ನು ನಾರಾಯಣ ಹೆಬ್ಬಾರರು ಸಹ ಮಾಡುತ್ತಾರೆ. ಇವರ ಪತ್ನಿ ಮಹಾಲಕ್ಷ್ಮಿಯು ಮನೆಯಲ್ಲಿದ್ದು, 'ಅವಳ ಬದುಕಿಗೆ ತೃಪ್ತಿಕೊಡುವ ಅಂಶಗಳಿದ್ದರೆ ಅವು ಎರಡೇ ಎರಡು ವಿಚಾರಗಳು – ಒಂದು ತನ್ನ ಮನೆಯ ಕೆಲಸ, ಇನ್ನೊಂದು ತನ್ನ ಮಕ್ಕಳ ಪಾಲನೆ ಮಾಡುತ್ತಾಳೆ' ಹೀಗೆ ಎಲ್ಲ ತಾಯಂದಿರು ಮಾಡುವಂತೆ ಮಹಾಲಕ್ಷ್ಮಿ ಸಾಂಸ್ಕೃತಿಕವಾಗಿ ಗೃಹಸ್ಥೆಯಾಗಿ ತನ್ನ ನೆಲೆಯನ್ನು ಗುರ್ತಿಸಿಕೊಂಡು, ಆಗಾಗ ತನ್ನ ತವರಿನ ನಿಸರ್ಗವನ್ನು ನೆನೆಯುತ್ತಾಳೆ. ಆ ಮೂಲಕ ಸಂತೋಷ ಪಡುತ್ತಾಳೆ.

ಕಾರಂತರು ತಮ್ಮ ಕಾದಂಬರಿಗಳಲ್ಲಿ ಗೇಣಿ ಪದ್ಧತಿಯನ್ನು ಹೆಚ್ಚಾಗಿ ಪ್ರಸ್ತಾಪಿಸಿತ್ತಾರೆ. ಇದು ದಕ್ಷಿಣ ಕನ್ನಡ ಜಿಲ್ಲೇಯಲ್ಲಿ ಸಾಮಾನ್ಯ ಪದ್ಧತಿ ಎಂಬ ಅರಿವು, ಅವರ ಕಾದಂಬರಿಗಳ ಮೂಲಕ ತಿಳಿಯುತ್ತದೆ. ಅರೆಬೈಲಿನ ಶಂಕರಯ್ಯನ ಮಗ ಮಹಾಬಲಯ್ಯ ಗೇಣಿಗೆ ತನ್ನ ಭೂಮಿಯನ್ನು ಕಡಿಮೆ ಗೇಣಿಗೆ ಕೊಡುತ್ತಿದ್ದನು, ಏಕೆಂದರೆ ಗದ್ದೆ ತೋಟ ಹಡಿಲು ಬೀಳಬಾರದೆಂದು ಅವನ ಉದ್ದೇಶ. ಇದು ಮಹಾಬಲಯ್ಯನು ಪರೋಕ್ಷವಾಗಿ ನಿಸರ್ಗದೊಂದಿಗೆ ಹೊಂದಿರುವ ಸಾಂಸ್ಕೃತಿಕ ಸಂಬಂಧವನ್ನು ತೋರಿಸುತ್ತದೆ. ಈ ಕಾದಂಬರಿಯಲ್ಲಿ ಕಾರಂತರು ಸಾಮಾನ್ಯವಾಗಿ ಸಾಮಾಜಿಕ ನೆಲೆಗಳನ್ನು ಗುರ್ತಿಸುವ ಮೂಲಕ, ಮನುಷ್ಯ ಸಂಸ್ಕೃತಿಯನ್ನು ನಿಸರ್ಗದ ನೆಲೆಯಲ್ಲಿ ಒಡಮೂಡಿಸಿರುವುದು ಪ್ರಮುಖವಾಗಿದೆ.

'ಬೆಟ್ಟದ ಜೀವ' ಕಾದಂಬರಿ ಬೆಟ್ಟವನ್ನೆ ಬಗೆದು, ಬೆಟ್ಟದಲ್ಲಿ ತನ್ನ ವಾಸವನ್ನು ಸ್ಥಾಪಿಸಿದ ಗೋಪಾಲಯ್ಯನ ಕಾಡು ಜೀವನವನ್ನು ಕುರಿತು ಹೇಳುತ್ತದೆ. ಈ ಕಾದಂಬರಿಯ ಮುಖ್ಯ

ಪಾತ್ರಗಳೆಂದರೆ–ನಿರೂಪಕ ಶಿವರಾಮಯ್ಯ, ಗೋಪಾಲಯ್ಯ, ಶಂಕರಿ, ನಾರಾಯಣಯ್ಯ, ಭಟ್ಟ ಪ್ರಮುಖರು. ಈ ಕಾದಂಬರಿಯನ್ನು ಕುರಿತು ಬಿ.ಮಾಲಿನಿಮಲ್ಯರವರು *"ಮನುಷ್ಯ ಅನ್ನಕ್ಕಾಗಿ ನಿಸರ್ಗದೊಂದಿಗೆ ನಡೆಸಿದ ಹೋರಾಟದ ಕಥೆಯನ್ನು ಹೇಳುವ ಕಾದಂಬರಿ".*[೭೯] ಎನ್ನುತ್ತಾರೆ. ಈ ಪ್ರಕಾರ ನೋಡಿದಾಗ ಮನುಷ್ಯನಿಗೆ ಅನ್ನ ಮುಖ್ಯ; ಅದಕ್ಕಾಗಿ ಅವನು ವ್ಯವಸಾಯ ಮಾಡುತ್ತಾನೆ. ಈ ಕಾರಣದಿಂದ ಭೂಮಿಯನ್ನು 'ಹಗೆಮೆ' ಮಾಡುತ್ತಾನೆ. ಆ ಮೂಲಕ ನಿಸರ್ಗದ ನೆಲೆಯಲ್ಲಿ ತನ್ನ ಸಂಸ್ಕೃತಿಯನ್ನು ಬೆಳೆಸುತ್ತಾನೆ.

ಶಿವರಾಮಯ್ಯ ಪಂಜಕ್ಕೆ ಹೋಗುವುದಕ್ಕೆ ದಾರಿ ತಪ್ಪಿ, ಬೆಟ್ಟಗಳ ಎಡೆಯಲ್ಲಿ ಹೋಗುತ್ತಿದ್ದಾಗ, ಅವನಿಗೆ ದಾರಿ ತಿಳಿಯದೆ ತಡಪಡಿಸುತ್ತಾನೆ. ಆಗ ಶಿವರಾಮಯ್ಯನಿಗೆ ಹಿಂದುಗಡೆಯಿಂದ ಯಾರೋ ಬಂದಂತಾಗಿ ಹಿಂದಿರುಗಿ ನೋಡುತ್ತಾರೆ. ಆಗ ಅವರನ್ನು ಕುರಿತು ಶಿವರಾಮಯ್ಯನು ಹಳ್ಳಿಯ ಗೌಡರಿಬ್ಬರು ಕಂಕುಳಲ್ಲಿ ಕೋಳಿಗಳೆರಡನ್ನು ಸಿಕ್ಕಿಸಿಕೊಂಡು ಬರುತ್ತಿದ್ದರು. ಅವರಲ್ಲೊಬ್ಬನ ಕೈಯಲ್ಲಿ ರುಂಡಹೀನವಾದ ಬೇರೊಂದು ಹುಂಜವೂ ಕುಣಿಯುತ್ತಿತ್ತು. ಆ ದಿನದ ಕೋಳಿಯ ಅಂಕದಲ್ಲಿ ವಿಜಯಿಗಳಾದ ಅವರು, ನನ್ನನ್ನು ಗಮನಿಸದೆ ಮುಂದೆ ಹಾಯ್ದು ಸರಿದು ಬಿಟ್ಟರು.

ನಿಸರ್ಗದ ನೆಲೆಯಲ್ಲಿ ಶೂದ್ರ ಗೌಡರು ತಮ್ಮ ಸಂಸ್ಕೃತಿಯನ್ನು ಈ ಮೂಲಕ ಪ್ರಕಟಪಡಿಸುತ್ತಿರುವುದು ತಿಳಿಯುತ್ತದೆ. ಇವರು ನಿಸರ್ಗದಲ್ಲಿ ವ್ಯವಸಾಯ ಮಾಡುತ್ತಾರೆ, ತಮ್ಮ ಬಿಡುವಿನ ವೇಳೆಯಲ್ಲಿ ಕೋಳಿ ಅಂಕದಂತ ಜಾನಪದ ಕ್ರೀಡೆಗಳನ್ನು ಆಡುವುದರ ಮೂಲಕ ಮನರಂಜನೆ ಪಡೆಯುತ್ತಾರೆ.

ಶಿವರಾಮಯ್ಯ ಗೋಪಾಲಯ್ಯನ ಮನೆ ಸೇರಿದಾಗ ಅವರಿಬ್ಬರು ಲೋಕೋಭಿರಾಮವಾಗಿ ಮಾತನಾಡುತ್ತಾ ಕುಳಿತಿರುತ್ತಾರೆ. ಆಗ ಗೋಪಾಲಯ್ಯ ಕಾಡುಪ್ರಾಣಿಗಳ ಉಪದ್ರದ ಬಗ್ಗೆ ಹೇಳುತ್ತಾರೆ. ಆಗ ಶಿವರಾಮಯ್ಯನು ಇಲ್ಲಿಗೇಕೆ ಬಂದಿರಿ? ಎಂದು ಕೇಳುತ್ತಾನೆ. ಆಗ ಗೋಪಾಲಯ್ಯನು ತಮ್ಮ ಪರಂಪರೆಯ ಸಾಂಸ್ಕೃತಿಕ ಬೇರುಗಳನ್ನು ಕುರಿತು ಹೇಳುತ್ತಾರೆ. ಅದು– *"ನನ್ನ ಅಜ್ಜನೋ, ಪಿಜ್ಜನೋ ಹಾದಿ ತಪ್ಪಿಯೇ ಇತ್ತ ಬಂದಿರಬೇಕು. ನಮ್ಮ ಅಡಿಕೆ ತೋಟಕ್ಕೆ ಏನಾದರೂ ಇನ್ನೂರು ವರ್ಷಗಳಾದರೂ ಆಗಿರಬೇಕು".*[೮೦]

ಗೋಪಾಲಯ್ಯನು ಹೇಳುವ ಈ ಮಾತಿನಲ್ಲಿ ಅವರ ಪೂರ್ವಜರ ಸಂಸ್ಕೃತಿಯ ಅರಿವು ನಮಗಾಗುತ್ತದೆ. ಯಾವುದೋ ಕೆಲಸದ ನಿಮಿತ್ತ ಇಲ್ಲಿಗೆ ಬಂದು ವಾಸ ಮಾಡಿ ತಮ್ಮ ಸಾಂಸ್ಕೃತಿಕ ಪರಂಪರೆಯನ್ನು ಗೋಪಾಲಯ್ಯನವರಿಗೆ ಮುಟ್ಟಿಸಿದ್ದಾರೆ.

---

೭೯. ಶಿವರಾಮಕಾರಂತ, ವಾಙ್ಮಯ ವೃತ್ತಾಂತ, ಪುಟ–೮೧

೮೦. ಶಿವರಾಮಕಾರಂತ, ಬೆಟ್ಟದ ಜೀವ, ಪುಟ–೭೪

ಗೋಪಾಲಯ್ಯ ಕಾಡಿನ ನಡುವೆ ಜೀವಿಸುತ್ತಾ ಕಾಡಿನ ಸಂಸ್ಕೃತಿಯನ್ನು ಪ್ರಕಟಿಸುತ್ತಾರೆ. ಶಿವರಾಮಯ್ಯ ಮತ್ತು ಗೋಪಾಲಯ್ಯ ಕಾಡಿನ ಸಂಚಾರಕ್ಕೆ ಹೋದಾಗ ಹೊಳೆ ಬಂದಿತು. ಅದರಲ್ಲಿ ಗೋಪಾಲಯ್ಯ ಸ್ನಾನಕ್ಕೆ ಇಳಿಯುತ್ತಾರೆ. ಅವರು 'ನಡುವಿನ ಸ್ನಾನದ ಪಂಚೆಯೊಂದನ್ನು ಬಿಗಿದು ಕೊಂಡು, ಮೂಗನ್ನು ಹಿಡಿದು ಓಂ ಶಂಕರ ಎಂದು ನೀರಿನಲ್ಲಿ ಮೂರು ಬಾರಿ ಮುಳುಗಿ ಎದ್ದರು.' ಹೀಗೆ ನಿಸರ್ಗವನ್ನು ದೇವರಂತೆ ಭಾವಿಸಿ ಸ್ತುತಿಸುವುದರಲ್ಲಿ ಗೋಪಾಲಯ್ಯನಲ್ಲಿರುವ ಅನುಭಾವಿಕ ಸಂಸ್ಕೃತಿಯು ಪ್ರತಿಬಿಂಬವಾಗಿದೆ.

ಗೋಪಾಲಯ್ಯ, ನಾರಾಯಣಯ್ಯ, ದೇರಣ್ಣ ಮುಂತಾದವರು ಕಾಡಿನಲ್ಲಿ ದಿನವು ಕಾಡು ಪ್ರಾಣಿಗಳಿಂದ, ಪ್ರಕೃತಿ ವಿಕೋಪಗಳಿಂದ ಆತಂಕವನ್ನು ಎದುರಿಸುತ್ತಾರೆ. ಆದರೂ ಸಹ, ಅವರು ಅದರೊಂದಿಗೆ ಬದುಕುತ್ತಾರೆ. ಇದು ಅವರ ಎದೆಗಾರಿಕೆಯನ್ನು ತೋರಿಸುತ್ತದೆ.

ಶಿವರಾಮಯ್ಯನು ಶಂಕರಮ್ಮನನ್ನು ಆಕೆಯ ಮಗ ಶಂಭು ಬಗ್ಗೆ ವಿಚಾರಿಸುತ್ತಿದಾಗ, ಆಕೆ ಆಗಿನ ದಿನಗಳನ್ನು ನೆನಸಿಕೊಂಡು ಈ ಸಂಸಾರವೆಲ್ಲ ಭ್ರಮೆ ಎಂದು ಕಾಣುತ್ತದೆ, ನೋಡಿ, ನನಗೆ ಇಬ್ಬರು ಮಕ್ಕಳಾಗಿ, ಅವಕ್ಕೆ ಹತ್ತು ಹದಿನಾಲ್ಕು ವಯಸ್ಸಾಗುವ ತನಕವೂ, ನಾವು ಪಟ್ಟ ಸುಖ, ಸಂತೋಷ ಅಷ್ಟಿಷ್ಟಲ್ಲ ಆ ತೋಟ, ಈ ಬಯಲು ಇವೆಲ್ಲ ಸಾಧ್ಯವಾದದ್ದು ಅ ಹುಮ್ಮಸ್ಸಿನ ಕಾಲದಲ್ಲಿ ಆಗ ಒಂದೇ ಒಂದು ದಿನ ವ್ಯಥೆ ಎಂಬುದು ನಮಗೆ ತಿಳಿದಿರಲಿಲ್ಲ.

ಮಕ್ಕಳನ್ನು ಹೆತ್ತ ತಾಯಿಯ ಮತ್ತು ಸಾಕಿದವರ ಒಡಲಿನ ವೇದನೆ ಈ ಮಾತುಗಳಲ್ಲಿ ವ್ಯಕ್ತವಾಗಿವೆ. ಮನುಷ್ಯನಲ್ಲಿರುವ ಯಾವುದೋ ಜೀವನೋತ್ಸಾಹವು ಅವನನ್ನು ಬದುಕಲು ಪ್ರೇರೇಪಿಸುತ್ತದೆ. ಆದರೆ ಶಂಕರಮ್ಮ ಈ ಆಸೆಯನ್ನು ಕಳೆದುಕೊಂಡಿದ್ದಾಳೆ. ಇದು ನಿಸರ್ಗದ ನೆಲೆಯಲ್ಲಿ ನಡೆಯುವುದು ಪ್ರಮುಖವಾಗಿದೆ.

'ಕುಡಿಯರ ಕೂಸು' ಕಾದಂಬರಿ ದಕ್ಷಿಣ ಕನ್ನಡ ಜಿಲ್ಲೆಯ ಪಶ್ಚಿಮ ಘಟ್ಟಗಳಲ್ಲಿ ವಾಸಿಸುವ 'ಮಲೆ ಕುಡಿ'ಯರು ಎಂಬ ಆದಿವಾಸಿಗಳ ಜೀವನ ಕ್ರಮವನ್ನು ಕುರಿತು ಹೇಳುತ್ತದೆ. ಕುಡಿಯರು ಹಿರಿಮಲೆ ಮತ್ತು ಕಿರುಮಲೆಯಲ್ಲಿ ವಾಸಿಸುವ ಮೂಲಕ ತಮ್ಮದೇ ಆದ ಆದಿವಾಸಿ ಸಂಸ್ಕೃತಿಯನ್ನು ರೂಢಿಸಿಕೊಂಡು ಸಾಂಸ್ಕೃತಿಕವಾಗಿ ಒಂದುಗೂಡಿ ಜೀವಿಸುವ ನೆಲೆಗಳನ್ನು ಕಾರಂತರು ನಿಸರ್ಗದ ನೆಲೆಗಳಲ್ಲಿ ಗುರ್ತಿಸುತ್ತಾರೆ.

ಈ ಕಾದಂಬರಿಯ ಮುಖ್ಯ ಪಾತ್ರಗಳೆಂದರೆ ಕೆಂಚ, ಕರಿಯ, ತಿಪ್ಪ, ಚುಕ್ಕಿ, ತುಕ್ರ, ಬೂದ, ತಿಮ್ಮ, ಚೆನ್ನಿ, ಕೆಂಪಿ, ಗಿಡ್ಡಿ, ಬರುಮ ಪೂಜಾರಿ, ಚೆನಿಯ, ತೌಡ, ತಿರುಮಲ ಭಟ್ಟ ಪ್ರಮುಖರು ಈ ಪಾತ್ರಗಳ ನಡುವೆ ಕಾರಂತರು ಕಥಾಂಶವನ್ನು ಕಟ್ಟುತ್ತಾರೆ.

ಕುಡಿಯರ ವಾಸ ಕಾಡು. ಕಾಡಿನಲ್ಲಿ ಸಹಜವಾಗಿ ಸಿಗುವ ಏಲಕ್ಕಿಯನ್ನು ಸಂಗ್ರಹಿಸಿ ಧನಿಗಳಿಗೆ ತಲುಪಿಸುತ್ತಾರೆ. ಇವರ ಸಂಸ್ಕೃತಿಯು ಕಾಡು ಸಂಸ್ಕೃತಿ. ಸಾಂಸ್ಕೃತಿಕವಾಗಿ ಇಂತಹ ಸಂಸ್ಕೃತಿಯ ನೆಲೆಗಳನ್ನು ನೋಡಿದಾಗ; ಅವರು ತಲೆ ತಲಾಂತರದಿಂದ ನಡೆಸಿಕೊಂಡು ಬರುತ್ತಿರುವ ಕಲ್ಕುಡನಿಗೆ ಮತ್ತು ಹಿರಿಯ ದೈವ ಮಲೆರಾಯನಿಗೆ ನಡೆಸಿಕೊಡುತ್ತಿರುವ ಕೋಲ ಪ್ರಮುಖವಾಗಿರುತ್ತದೆ.

ಈ ಕಾದಂಬರಿ ಕುರಿತು ಡಾ.ಕೇಶವಶರ್ಮರವರು ಮಲೆ ಕುಡಿಯರ ಸಾಂಸ್ಕೃತಿಕ ವಿವರಗಳನ್ನು ದಾಖಲಿಸಿರುವುದು ಈ ಕಾದಂಬರಿಯ ಹಿರಿಮೆಯನ್ನು ಹೆಚ್ಚಿಸಿದೆ. *"ಕುಡಿಯರ ಗುರಿಕಾರ ಕೆಂಚ. ಈತನು ಕಲ್ಕುಡ ದೈವ್ವದ ಬಗ್ಗೆ ಕಿರಿಮಲೆಯ ಕಲ್ಕುಡ ಉಳಿದ ದೈವಗಳಂತಲ್ಲವಂತೆ, ಬಲು ಸಿಡುಕಿನ ದೈವ, ಪ್ರತಾಪಶಾಲಿ ದೈವ, ಕಣಿವೆಯ ಕೆಳಗಿನ ದೈವ್ವ, ದೇವರುಗಳಂತೆ ಶಾಂತಸ್ವಭಾವಿಯಲ್ಲ, ಕಣಿವೆಯ ಕೆಳಗಿನ ದೈವ್ವಗಳಿಗೆ ಸಲ್ಲಿಸುವ ಕೋಲ, ನೇಮ ನಾಲ್ಕು ದಿನ ಹೆಚ್ಚು ಕಡಿಮೆಯಾದರೂ ನಡೆಯುತ್ತದೆ. ಪೂಜೆಯ ಕ್ರಮದಲ್ಲಿ ತುಸು ವೆತ್ಯಾಸವಾದರೂ ನಡೆಯುತ್ತದೆ. ನನ್ನಪ್ಪ ತಪ್ಪಿ ನಡೆದೆ, ಇದೋ ಕಾಣಿಕೆ ಎಂದರೆ ದೈವ ತೆಪ್ಪಗಾಗುತ್ತದೆ. ಕಿರಿಮಲೆಯ ಕಲ್ಕುಡ ಆ ರೀತಿಯ ಬೆನ್ನುಮೂಳೆ ಇಲ್ಲದಂಥ ದೈವ್ವವೇ ಅಲ್ಲ. ಅಂಥ ದೈವ್ವವಾಗಿದ್ದರೆ ಮನುಷ್ಯ ಕಾಲಿರಿಸಲು ಅಂಜುವ ಮಲೆಯ ಕೊರಕಲೊಂದರಲ್ಲಿ ಕುಳಿತು ಕಣ್ಣೆಟಕುವಷ್ಟು ದೂರದ ಬೆಟ್ಟಗಳಿಗೆ ಅಧಿನಾಯಕನಾಗಿದ್ದು, ತನ್ನವರಿಂದ ಕಪ್ಪ ಕಾಣಿಕೆಯನ್ನು ತರಿಸಿಕೊಳ್ಳುವಷ್ಟು ಶಕ್ತಿ ಅದಕ್ಕಿರುವುದು ಅಸಾಧ್ಯದ ಮಾತು".*[೮೧]

ಕೆಂಚನ ಅಜ್ಜನ ಕಾಲದಿಂದಲೂ ಕಲ್ಕುಡನ ಆರಾಧನೆ ನಡೆಯುತ್ತಿದೆ. ಇದರ ಆರಾಧನೆ ಯಲ್ಲಿ ನಿಸರ್ಗವನ್ನು ಕಂಡುಕೊಂಡಿರುವುದು ಅವರ ಸಂಸ್ಕೃತಿಯ ನೆಲೆಯಾಗಿದೆ. ಕೆಂಚ ತನ್ನ ಮಲೆಯನ್ನು ಕಾಪಾಡುವಂತೆ ಬೇಡಿಕೊಳ್ಳಲು 'ಒಂದಿಷ್ಟು, ಆ ಬೆಟ್ಟದ ಸರಗಿಗೆ ಬಂದ ಅದರ ಮೈ ಅಂಚಿನ ಇಳಕಲು ದಾರಿಯಲ್ಲಿ ಮೆಲ್ಲಗೆ ಇಳಿದು ಸಾಗಿದ ಹಾಗೆ ಬಂದುದೇ ಕಲ್ಕುಡನ ತಾಣಕ್ಕೆ, ನಾಲ್ಕು ಸುತ್ತಲೂ ಓಟೆಯ ಮೆಳೆಗಳು ಅವುಗಳ ಎಡೆಯಲ್ಲಿ ನಾಲ್ಕು ಚಪ್ಪಡಿ ಕಲ್ಲುಗಳಿಂದ ಮಾಡಿದ ಚಿಕ್ಕದೊಂದು, ಅದೇ ಕಲ್ಕುಡನ ಗುಡಿ ಎದುರಿಗೆ ಬತ್ತದ ಅಬ್ಬೆಯೊಂದು, ಬಂಡೆಕಲ್ಲುಗಳ ಎಡೆಯಲ್ಲಿ ರಮಿಸಿ, ಕಲ್ಕುಡನಿಗಾಗಿ ಕಾದು ನಿಂತು ಮುಂದಕ್ಕೆ ಮೊಣಕಾಲೂರಿ 'ದೈವವೇ, ಕುಲವನ್ನು ಕಾಯು, ಕೇರಿಯನ್ನು ಕಾಯು, ಮಳೆ, ಬೆಳೆ ಕೊಡು, ಬದುಕನ್ನು ಸಹನಾಗಿ ಮಾಡು' ಮಳೆ, ಬೆಳೆ ಕೊಡಲು ಕಲ್ಕುಡನ ಅಡಿಯಲ್ಲಿ ಬೇಡಿಕೊಳ್ಳುವ ಕೆಂಚನ ಮೂಲಕ ಇಡೀ ಕುಡಿಯರ ಸಂಸ್ಕೃತಿಯು ತಿಳಿಯುತ್ತದೆ.

ಕುಡಿಯರು ಮಾಡುವ ಬೇಸಾಯ ಕ್ರಮವನ್ನು ಕುರಿತು ಕಾರಂತರು ಹೇಳುತ್ತಾರೆ. 'ಕುಮರಿ ಬೇಸಾಯವು ಮೊನಚು ಕೋಲುಗಳಿಂದಲೇ ಅಗತೆ ಮಾಡಬೇಕು, ಇಲ್ಲವೆ ಬೇರೆ ಏನಾದರೂ

೮೧. ಎಸ್.ಅನಂತನಾರಾಯಣ (ಸಂ), ಕಾರಂತರ ಕಾದಂಬರಿಗಳು, ಪುಟ-೩೯

ಕೆಲಸ ಮಾಡಬೇಕು. ಕಾಡು ಸುಟ್ಟು ಆ ನೆಲೆಯಲ್ಲಿ ಅಗತೆಯಾದ ಬಳಿ, ವಿಷ್ಣು ಸಂಕ್ರಾಂತಿ ಕಳೆದ ಮೇಲೆ ಕುಮರಿ ಬಿತ್ತನ್ನು ಬಿತ್ತುತ್ತಾರೆ. ವಿಷ್ಣು ಕಳೆದ ತಿಂಗಳೊಳಗಾಗಿ ಆ ಘಟ್ಟದ ಸೆರಗು ಮುಗಿಲಿನ ಮನೆಯಾಗುತ್ತದೆ. ಅಲ್ಲಿಂದ ಹೊಲವನ್ನು ಕಾಯಬೇಕು: ಬೆಳೆದ ಪೈರನ್ನು ಆನೆ, ಕಾಟಿಗಳ ಬಾಯಿಂದ ಉಳಿಸಿಕೊಳ್ಳಬೇಕು'.

ಕುಡಿಯರು ಮಾಡುವ ಬೇಸಾಯವು ಅವರ ಸಾಂಸ್ಕೃತಿಕ ಪರಂಪರೆಯ ನೆಲೆಯಾಗಿದೆ. ಈ ಕುಡಿಯರ ಆಚರಣೆಗಳ ಮತ್ತು ಜೀವನವನ್ನು ಕುರಿತು ವೈ.ಆರ್. ಮೋಹನ್‌ರವರು *"ನಿಸರ್ಗದೊಡನೆ ಹಾಸುಹೊಕ್ಕಾಗಿರುವ ಕುಡಿಯರ ನಿತ್ಯ ಜೀವನದ ರೀತಿ-ನೀತಿಗಳು, ನಂಬಿಕೆಗಳು, ಕಟ್ಟು ಕಟ್ಟಳೆಗಳು ಮತ್ತು ಅವರ ಜೀವನದಲ್ಲಿ ಜರುಗುತ್ತಿರುವ ಬದಲಾವಣೆಗಳು ಕಾದಂಬರಿಗೆ ಪ್ರೇರಕವಾಗಿದೆ ಎನಿಸುತ್ತದೆ".*[೮೨]

ಕುಡಿಯರ ನಂಬಿಕೆಗಳು ನಿಸರ್ಗದ ನೆಲೆಯಲ್ಲಿ ಪ್ರಕಟವಾಗುತ್ತದೆ ಅವು ಅವರ ಸಾಮಾಜಿಕ, ಆರ್ಥಿಕ, ರಾಜಕೀಯ ನೆಲೆಗಳಾಗಿರುತ್ತದೆ. ಕುಡಿಯರು 'ಪೂರ್ವ ಕಾಲದಲ್ಲಿ ಅಂದರೆ ಕೆಂಚನ ತಾತ, ಮುತ್ತಾತಂದಿರ ಕಾಲದಲ್ಲಿ ವರ್ಷಕ್ಕೆ ಅದು ವಿಷ ಸಂಕ್ರಾತಿಯ ಸಮಯ, ಬೀಡಿಗೆ ಕಪ್ಪಕಾಣಿಕೆ ಹೊತ್ತು ಸಲ್ಲಿಸಿ ಬರುತ್ತಿದ್ದರು. ಇದು ಆ ಕುಡಿಯರ ಪಾರಂಪರಿಕ ಸಂಸ್ಕೃತಿಯಾಗಿದೆ. ಕುಡಿಯರಿಗೆಲ್ಲಾ ಗುರಿಕಾರ ಕೆಂಚ. ಇವನು ಹೇಳಿದಂತೆ ಸಾಂಸ್ಕೃತಿಕ ಕಾರ್ಯಕ್ರಮಗಳು ಕುಡಿಯರಲ್ಲಿ ನಡೆಯುತ್ತವೆ. ಇವನ ನಂತರ ಚಿಕ್ಕವಯಸ್ಸಿನಲ್ಲಿಯೆ ಕರಿಯ ಗುರಿಕಾರನಾಗುತ್ತಾನೆ.

ಕುಡಿಯರು ತಮ್ಮ ಬೇಸಾಯದ ಜೊತೆಗೆ ಬೇಸಿಗೆಯಲ್ಲಿ ಕಾಡಿನ ನಡುವೆ ಬೇಟೆಯಾಡುತ್ತಾರೆ. ಒಮ್ಮೆ ಕೃಷ್ಣ ಸುಬ್ರಹ್ಮಣ್ಯದ ಬಳಿಯಿರುವ ಕುಡಿಯರ ಗುಡಾರಗಳಿಗೆ ಬೇಟಿ ನೀಡುತ್ತಾರೆ. ಅವರಿಗೆ ಕಿರುಮಲೆಯ ಗುರಿಕಾರ ಎಂದು ತಿಳಿದು. ಕೆಂಚನಿಗಾಗಿ ಅಪೂರ್ವವಾದ ಸತ್ಕಾರ ಮಾಡುತ್ತಾರೆ. ಅವನಿಗಾಗಿಯೆ ಮೊಲದ ಬೇಟೆಯಾಡಿದರು, ಮೀನಿನ ಬೇಟೆಯಾಡಿದರು, ಕಾಡುಕೋಳಿ ಹಿಡಿದರು, ಆಮೆ ಹಿಡಿಯುವುದಕ್ಕೂ ಹೋದರು.ಆ ಗುರಿಕಾರನ ಬಗ್ಗೆ ಅವರ ನಂಬಿಕೆ ಇಂತಹದ್ದು.

ಕಾರಂತರು ಹೀಗೆ ಕುಡಿಯರ ಸಂಸ್ಕೃತಿಯನ್ನು ಕಾದಂಬರಿಯ ತುಂಬಾ ವರ್ಣಿಸುತ್ತಾರೆ. ಜೊತೆಗೆ ಕುಡಿಯರು ನಿಸರ್ಗವನ್ನು ಅವರ ದೈವವಾದ ಕಲ್ಕುಡ ಮತ್ತು ಮಲೆರಾಯನ ಭಕ್ತಿಯ ನೆಲೆಯಲ್ಲಿ ನೋಡುವುದನ್ನು ಗುರ್ತಿಸುತ್ತಾರೆ. ಗುರಿಕಾರಿಕೆಯ ವಿಚಾರದಲ್ಲಿ ನೋಡುವುದನ್ನು ಗುರ್ತಿಸುತ್ತಾರೆ. ಗುರಿಕಾರಿಕೆಯ ವಿಚಾರದಲ್ಲಿ ತಿರುಮಲಭಟ್ಟ ಕುಡಿಯರ ಸಂಸ್ಕೃತಿ ವಿಚಾರಕ್ಕೆ ಸಂಬಂಧಿಸಿದಂತೆ ಮೂಗು ತೂರಿಸಿ ತುಕ್ರವನ್ನು ಗುರಿಕಾರನನ್ನಾಗಿ ಮಾಡಬೇಕು ಮತ್ತು ಕರಿಯನನ್ನು ಅಲ್ಲ ಎಂದಾಗ, ಚನಿಯ ನಿಧಾನವಾಗಿ 'ಧನಿಗಳೆ ತಾವು ಹಾಗೆಲ್ಲ ಸಿಟ್ಟಾಗಬಾರದು. ಕೂಡುಕಟ್ಟಿನ ಸಭೆಯು ನೀವಿದ್ದು ಆಗಬೇಕೆಂದು ಮಾತೇನು? ಅದು ಜಾತಿಯವರು ಇದ್ದು ಆಗುವ

೮೨. ಕು.ಶಿ.ಹರಿದಾಸ ಭಟ್ಟ (ಸಂ). ಕಾರಂತ ಪ್ರಪಂಚ, ಪುಟ--೩೪೭ ೧೦೫

ಕೆಲಸ, ಇನ್ನೊಬ್ಬರನ್ನು ಕರೆಯುವುದು ಸಮನಲ್ಲ. ಅವರು ಬರುವುದೂ ಚಂದವಲ್ಲ.' ಎಂದು ಹೇಳಿ ಈಗ ಕೇರಿಯವರು ನಿರ್ಧಾರ ಮಾಡಿ, ಒಂದು ಮನಸ್ಸಿನಿಂದ ನಿಮಗೆ ಎಲೆ ಅಡಿಕೆಗಳ ಮರ್ಯಾದೆ ಸಲ್ಲಿಸಿದ್ದಾರೆ, ಎನ್ನುವುದರಲ್ಲಿ ಕುಡಿಯರ ನಂಬಿಕೆಗಳು ಅನಾವರಣ ಗೊಳ್ಳುತ್ತವೆ.

ಹೀಗೆ ಕುಡಿಯರು ತಮ್ಮದೇ ಕೂಡು ಕಟ್ಟಳೆಗಳನ್ನು ಇಟ್ಟುಕೊಂಡು ಜೀವಿಸುತ್ತಿರುವಂತವರು ಇಂತಹ ಸಂಸ್ಕೃತಿಯ ಮೇಲೆ ಬೇರೆಯವರ ಹಸ್ತಕ್ಷೇಪ ಎಂದಿಗೂ ಸಹಿಸುವುದಿಲ್ಲ, ಎಂದು ಕಾರಂತರು ಕುಡಿಯರ ಸಾಂಸ್ಕೃತಿಕ 'ಸ್ವಾಯತ್ತತೆ'ಯನ್ನು ಕುರಿತು ಹೇಳುತ್ತಾರೆ. ಇವೆಲ್ಲ ಸಂಗತಿಗಳು ನಿಸರ್ಗದ ನೆಲೆಯಲ್ಲಿ ನಡೆಯುವುದು ಪ್ರಮುಖವಾಗಿದೆ. ಕೇರಿಯ ಗಂಡಸರು ಹೂ, ಕಾಯಿ, ಕೋಳಿಗಳನ್ನು ಹೊತ್ತುಕೊಂಡು ಒಬ್ಬೊಬ್ಬರಾಗಿ ಕಲ್ಕುಡನ ಗುಡಿಯಿಂದ ಕೊರಕಲನ್ನು ಸೇರಿದವರು ಪೂಜಾರಿಗೆ ಚನಿಯನು ಕರಿಯನ ಕೈಯಲ್ಲಿ ಹೂವನ್ನು ಕೊಟ್ಟು ಪೂಜಾರಿಯ ಕೈ ಮೇಲೆ ಇರಿಸಲು ಹೇಳಿದ, ಆಗ ತುಕ್ರನು ಇಡಲು ಬಂದಾಗ, ಪೂಜಾರಿ ಕರಿಯನಿಂದ ಪಡೆದು: ತುಕ್ರನಿಂದ ತಿರಸ್ಕರಿಸಿತು.

"*ಪೂಜಾರಿ ನಡುಗಲಾರಂಭಿಸಿದ: ದೈವದ ಆವೇಶ ತಾಳಿದ: ವಾದ್ಯದ ಅಬ್ಬರಕ್ಕೆ ಘರ್ಜಿಸಿದ, ಹಿರಿಮಲೆಯ ಗುರಿಕಾರ ಕೈಗೆ ಹೊತ್ತಿಸಿ ಕೊಟ್ಟ ಒಂದೊಂದು ಬೆಂಕಿಯ ದೊಂದಿಯನ್ನು ಹಿಡಿದು, ಬಾಯಿಯ ಬಳಿಗೆ ಒಯ್ದು, ಆರ್ಭಟಿಸಿ ನುಂಗಿ, ನಂದಿಸಿದ ದೈವವು ಆವೇಶ ತಾಳಿ ಪೂಜಾರಿ ಮಾತನಾಡಲು ಪ್ರಾರಂಭಿಸಿದ*".[೮೩] ಹೀಗೆ ಆವೇಶ ತಾಳಿದ ದೈವವನ್ನು ಕುಡಿಯರು, ಆತನಲ್ಲಿ ಹೇಳಿಕೊಂಡು ನಿರ್ಣಯದ ಆಜ್ಞೆ ಪಡೆಯುತ್ತಾರೆ ಇದು ಅವರ ಸಾಮಾಜಿಕ, ರಾಜಕೀಯ ಆರ್ಥಿಕ ಸಂಸ್ಕೃತಿಯ ಅಂತಿಮ ನಿರ್ಧಾರ ಪಡೆಯುವ ಪ್ರಕ್ರಿಯೆಯಾಗಿದೆ. ಈ ಪ್ರಕ್ರಿಯೆಯಲ್ಲಿ ಅವರ ಮಾನಸಿಕವಾದ ಅತ್ಯುಗ್ರ ನಂಬಿಕೆಯಾಗಿದೆ, ಈ ನಂಬಿಕೆಯನ್ನು ಯಾರು ತಿರಸ್ಕರಿಸಿದರು, ಅದನ್ನು ಯಾರು ಎಂದೂ ಒಪ್ಪಲಾರರು.

ಕುಡಿಯರು ಆದಿ ಸಂಸ್ಕೃತಿಯ ನೆಲೆವೀಡುಗಳು. ಈ ನೆಲೆವೀಡುಗಳು ನಿಸರ್ಗದ ಆದೇಶಗಳನ್ನು ದೈವತ್ವದ ಮೂಲಕ ಪಡೆದು ಅದರ ಪ್ರಕಾರ ಅವರು ತಮ್ಮ ಸಾಂಸ್ಕೃತಿಕ ಚಹರೆ ಗಳನ್ನು ಭದ್ರವಾಗಿ ರೂಪಿಸಿಕೊಂಡಿದ್ದಾರೆ. ಎಂಬುದು ಈ 'ಕುಡಿಯರ ಕೂಸು' ಕಾದಂಬರಿಯ ಮೂಲಕ ತಿಳಿಯುತ್ತದೆ.

'ಚೋಮನ ದುಡಿ' ಕಾದಂಬರಿ ಸಮಾಜದಲ್ಲಿ ಒಬ್ಬ ಕಟ್ಟಕಡೆಯ ವ್ಯಕ್ತಿ ಎಂದು ಪರಿಗಣಿಸ- ಲ್ಪಟ್ಟಿರುವ ಅಸ್ಪೃಶ್ಯ ವ್ಯಕ್ತಿಯು ಭೂಮಿಯ ಹಕ್ಕು ಪಡೆಯುವುದಕ್ಕಾಗಿ ಹೋರಾಟ ಮಾಡುವ ನೆಲೆಗಳನ್ನು ಹೇಳುತ್ತದೆ. ಕಾರಂತರು ಅಸ್ಪೃಶ್ಯರು ಎದುರಿಸುತ್ತಿದ್ದ ಸಾಮಾಜಿಕ ಸಮಸ್ಯೆಗಳನ್ನು ಕುರಿತು ಹೇಳುತ್ತಾರೆ. ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಅಸ್ಪೃಶ್ಯ ಎಂಬ ಸಾಂಸ್ಕೃತಿಕ

೮೩. ಶಿವರಾಮಕಾರಂತ, ಕುಡಿಯರ ಕೂಸು, ಪುಟ-೮೬

ಲೋಕವು ಎದುರಿಸುತ್ತಿರುವ ದಾರುಣ ನೆಲೆಗಳನ್ನು ಕುರಿತು ಕಾದಂಬರಿಯು ಉತ್ಕಟವಾಗಿ ಪ್ರತಿಕ್ರಿಯಿಸುತ್ತದೆ. ಈ ರೀತಿಯ ಉತ್ಕಟ ನೆಲೆಯನ್ನು ಪ್ರತಿಬಿಂಬಿಸುವ ಪಾತ್ರ ಬೋಗನಹಳ್ಳಿಯ ಚೋಮ, ಇವನು ಇಡೀ ದಲಿತ ಜನಾಂಗ ಅನುಭವಿಸುತ್ತಿರುವ ನೋವನ್ನು ದುಡಿಯ ಮೂಲಕ ವ್ಯಕ್ತಪಡಿಸುತ್ತಾನೆ.

ಈ ಕಾದಂಬರಿಯು-ದಲಿತರು ಎದುರಿಸುತ್ತಿರುವ ಸಾಮಾಜಿಕ ಅನ್ಯಾಯಗಳ ವಿರುದ್ಧ ಭಾರತ ದೇಶದಲ್ಲಿ ಮೊಟ್ಟ ಮೊದಲ ಬಾರಿಗೆ ಧ್ವನಿಯೆತ್ತಿದ ಸಾಮಾಜಿಕ ಕಾದಂಬರಿಯೆಂಬ ಹೆಗ್ಗಳಿಕೆಗೆ ಪಾತ್ರವಾದ ಕಾದಂಬರಿ ಎಂದು ಹೇಳಬಹುದು.

ಪಾಳೆಗಾರಿಕೆ ಸಂಸ್ಕೃತಿಯ ಪೋಷಣೆಯ ನೆಲೆಯು ಚೋಮನ ಬೋಗನಹಳ್ಳಿಯಲ್ಲಿದೆ, ಚೋಮ, ಬೆಳ್ಳಿ, ಚನಿಯ, ಗುರುವ, ನೀಲ, ಕಾಳ ಇವರು ಈ ಪಾಳೆಗಾರಿಕೆ ಸಂಸ್ಕೃತಿಗೆ ಬಲಿಯಾದವರು. ಚೋಮನ ಮನೆಯವರೆಲ್ಲರು ಒಟ್ಟಾಗಿ ಶ್ರಮಿಸಿ ದುಡಿದರೆ, ಎರಡು ಪಾವು ಅಕ್ಕಿಗೂ ಮಿಕ್ಕಿ ಸಿಗುವುದಿಲ್ಲ. ಒಂದು ಸೇರು ಅಕ್ಕಿಯಲಿ, ಆ ಆರು ಮಂದಿಯ ಸಂಸಾರ ಸಾಗಬೇಕು, ಇದು ಚೋಮನ ಮನೆಯ ಪರಿಸ್ಥಿತಿ. ಈ ಬಡತನದಿಂದ ತಪ್ಪಿಸಿಕೊಳ್ಳಲು ಚೋಮನು ಭೂಮಿಯ ಕನಸು ಕಾಣುತ್ತಾನೆ. ಇದಕ್ಕಾಗಿ ಸಂಕಪ್ಪಯ್ಯನನ್ನು ಗೇಣಿಗೆ ಭೂಮಿಯನು ಕೇಳುತ್ತಾನೆ. ಆಗ ಸಂಕಪ್ಪಯ್ಯನ ಸಂಪ್ರದಾಯಬದ್ಧ ತಾಯಿ 'ಅಬ್ಬಾ! ಈ ಹೊಲೆಯರಿಗೆ ಬಂದ ಸೊಕ್ಕೇ' ಎಂದು ಹೇಳುತ್ತಿರುವ ಮಾತಿನಲ್ಲಿ ಹಿಂದೂ ಸಮಾಜದಲ್ಲಿ ಆಳವಾಗಿ ಬೆಳೆದು ನಿಂತು ಹೋಗಿರುವ ಶ್ರೇಣಿಕೃತ ಜಾತಿ ಎಂಬ ಭೂತದ ಮಾತಾಗಿದೆ.

ಚೋಮನು ತನ್ನ ಅಂತರಾಳದ ನೋವಿನ ಸಂಗತಿಯನ್ನು ಭೋಗನಹಳ್ಳಿಯ ಶಾಂತ ವಾತಾವರಣವಿರುವ ರಾತ್ರಿಯ ಸಮಯದಲ್ಲಿ 'ಪೂರ್ವ ಧ್ವನಿ ಯಾವುದು, ಅಪರ ಧ್ವನಿ ಯಾವುದು ಎಂದು ತಿಳಿಯಲಾರದಷ್ಟು ಬೆರೆತು ಹೋಗುತ್ತದೆ. ಹತ್ತೆಂಟು ನಿಮಿಷಗಳ ತನಕವೂ ಈ ವಿಚಿತ್ರ ಧ್ವನಿಯು 'ಡಮ್ಮ ಢಮ್ಮ ಡಕ ಢಕ್ಕ' ಎಂದು ಮೊಳೆತು. ಹಾಯ್ತು, ಅಡಗಿದರೆ- ಇನ್ನಷ್ಟೇ ಸಮಯ ಸೊಲ್ಲೆತ್ತದೆ ಅಡಗಿ ಬಿಡುತ್ತದೆ'.

ಸಾಂಸ್ಕೃತಿಕ ನೆಲೆಯಲ್ಲಿ ಶ್ರೇಣೀಕೃತ ಕಟ್ಟಕಡೆಯ ವ್ಯಕ್ತಿಯಾದ ಪಂಚಮರ ನೋವು ಈ 'ಡಮ ಢಮ್ಮ ಡಕ ಢಕ್ಕ' ಧ್ವನಿಯಲ್ಲಿ ವ್ಯಕ್ತಪಡಿಸುತ್ತಾನೆ. ಇದು ಏತಕ್ಕಾಗಿ ಎಂದರೆ, ನಿಸರ್ಗದ ಮೂಲ ನೆಲೆಯಾದ ಭೂಮಿ ಒಡೆತನದ ಕನಸಿಗಾಗಿ, ಇದು ಸಿಗದಿದ್ದಾಗ ಅವನ ರೋಷ ಉಕ್ಕುತ್ತದೆ. ಇನ್ನೂ ಬಡಿಯುತ್ತಾನೆ. ಇದು ಅವನ ನಿತ್ಯರಾತ್ರಿಯ ಕರ್ಮ, ನಂತರ ಬೆಳಗ್ಗೆ ಧಣಿಯ ಹೊಲದಲ್ಲಿ ದುಡಿಮೆ ಮಾಡುವುದು.

ಚೋಮನು ಕಳಸದ ಕಾಫಿ ತೋಟದ ಒಡೆಯನಿಗೆ ಕೊಡಬೇಕಾದ ೨೦ ರೂಪಾಯಿಗಳಾಗಿ ಚನಿಯ ಮತ್ತು ಗುರುವ ಕಾಫಿ ತೋಟಗಳಲ್ಲಿ ದುಡಿಯಲು ಹೋಗುತ್ತಾರೆ. ಆದರೆ ಕುಡಿತದ ದಾಸರಾಗಿ ಸಾಲವನ್ನು ತೀರಿಸಲಾರದೆ ಹೋಗುತ್ತಾರೆ. ಗುರುವ ಮೇರಿಯನ್ನು ವಿವಾಹವಾಗಿ ಕ್ರಿಶ್ಚಿಯನ್ ಧರ್ಮಕ್ಕೆ ಪರಿವರ್ತನೆಯಾಗಿ ಭೂಮಿಯ ಒಡೆಯನಾಗುತ್ತಾನೆ. ಈ ಮೂಲಕ ಗುರುವ ತನ್ನ ಹಿಂದೂ ಧರ್ಮದ ಶ್ರೇಣಿಕೃತವಾದ ಜಾತಿಯೆಂಬ ಭೂತದಿಂದ ಬಿಡುಗಡೆಯಾಗಿ ಸಂಪೂರ್ಣವಾಗಿ ತನ್ನ ಸಂಸ್ಕೃತಿಯನ್ನು ಬದಲಿಸಿಕೊಳ್ಳುತ್ತಾನೆ. ಇದಕ್ಕೆಲ್ಲಾ ಕಾರಣ ಭೂಮಿಯ ಒಡೆತನವನ್ನು ಹಿಂದೂ ಧರ್ಮ ಮತ್ತು ಸಮಾಜ ದಲಿತರಿಗೆ ನಿರಾಕರಿಸಿರುವುದೇ ಆಗಿದೆ. ಕಾರಂತರು ಚೋಮನ ದುಡಿಯ ಮೂಲಕ ಇಡೀ ದಲಿತ ಜನಾಂಗದ ಸಾಂಸ್ಕೃತಿಕ ಲೋಕವನು ಪರಿಚಯಿಸುತ್ತಾರೆ.

ಅಳಿದ ಮೇಲೆ ಕಾದಂಬರಿ ಹೃದಯವುಳ್ಳ ಹೃದಯವಂತನ ಕಥೆಯನ್ನು ಹೇಳುತ್ತದೆ. ಇಂತಹ ವ್ಯಕ್ತಿ ಯಶವಂತ, ತನ್ನ ಸ್ವಂತ ಊರನ್ನು ತ್ಯಜಿಸಿ ಮುಂಬೈಯಲ್ಲಿ ವಾಸಿಸುತ್ತಾರೆ. ನಿರೂಪಕರು ಮುಂಬೈಗೆ ರೈಲಿನಲ್ಲಿ ಪ್ರಯಾಣಿಸುತ್ತಿದ್ದಾಗ, ಯಶವಂತರ ಪರಿಚಯವಾಗುತ್ತದೆ. ಆ ಪರಿಚಯ ಸ್ನೇಹವಾಗಿ ಮಾರ್ಪಟ್ಟು, ಆಗಾಗ ನಿರೂಪಕರು ಮುಂಬೈಗೆ ಹೋಗುತ್ತಿರುತ್ತಾರೆ. ಯಶವಂತ ಮರಣ ಹೊಂದಿದಾಗ, ಅವನ ದಿನಚರಿಯಿಂದ ಯಶವಂತರ ಸರಿಯಾದ ಮಾಹಿತಿ ನಿರೂಪಕರಿಗೆ ದೊರೆಯುತ್ತದೆ. ಈ ಮೂಲಕ ಯಶವಂತರ ಮಾನವೀಯ ಹೃದಯದ ವಿಶಾಲತೆಯು ನಿರೂಪಕರಿಗೆ ಅರಿವಾಗುತ್ತದೆ. 'ಬೆಟ್ಟದ ಜೀವ'ದ ನಿರೂಪಕ ಶಿವರಾಮಯ್ಯನಿಗಿಂತ ಇಲ್ಲಿ ನಿರೂಪಕರಾಗಿ ಕಾರಂತರೆ ಸ್ವತಃ ಯಶವಂತರ ಪ್ರತಿನಿಧಿಯಾಗಿ ಅವರ ಕಾರ್ಯವನ್ನು ವಹಿಸಿಕೊಂಡು ಅನ್ವೇಷಕರಾಗುತ್ತಾರೆ. ಯಶವಂತ ತನ್ನ ಹಣವನ್ನು ಪ್ರತಿ ತಿಂಗಳು ಯಾರಿಗೆ ತಲುಪಿಸಬೇಕು ಎಂದು ಹೇಳಿರುತ್ತಾನೆಯೋ ಹಾಗೆಯೆ ಕಾರಂತರು ಅವರಿಗೆ ಕಳುಹಿಸುವುದು ಮತ್ತು ಅವರನ್ನು ಅನ್ವೇಷಣೆ ಮಾಡಿ ಯಶವಂತರ ನಿಜ ಜೀವನವನ್ನು ಅರ್ಥೈಸಿಕೊಳ್ಳುತ್ತಾರೆ.

'ಅಳಿದ ಮೇಲೆ' ಯಶವಂತರಾಯರದು ಹೊಸ ಬಗೆಯ ಮನೋ ವೈಜ್ಞಾನಿಕತೆಯನ್ನು ಹೊಂದಿದ ವ್ಯಕ್ತಿತ್ವವಾಗಿದೆ. ಯಶವಂತರಾಯ ಸಾಮಾಜಿಕ ವ್ಯಕ್ತಿತ್ವದ ಸರಳವಾದ ಒಬ್ಬ ಸಭ್ಯ ಗೃಹಸ್ಥನದು. ಇವರು ಮೂಲ ಉತ್ತರ ಕನ್ನಡದವರಾದರೂ ಈಗ ಇರುವುದು ಮಾಯಾನಗರಿ ಮುಂಬಯಿಯಲ್ಲಿ ಯಶವಂತರು ತೀರಿಕೊಂಡ ಮೇಲೆ ಕತೆಯ ನಿರೂಪಕ ಅವರ ವ್ಯಕ್ತಿತ್ವ ಸಂಬಂಧಗಳ ಪುನರ್‌ರಚನೆಗೆ ತೊಡಗುತ್ತಾರೆ. ದಾದಾ, ರೀಮಾ, ಪಾರ್ವತಮ್ಮ, ಧಾರೇಶ್ವರ ಸರಸಿ, ಕಮಲ, ಜಲಜಾ, ಹೊನ್ನಗದ್ದೆ ಮಂಜಯ್ಯ ಮೊದಲಾದವರೊಡನೆ ಅವರ ಸಂಬಂಧಗಳು ಹೇಗಿದ್ದವೆಂಬುದನ್ನು ಹುಡುಕಿ ತೆಗೆಯುತ್ತಾರೆ. ಇವೆಲ್ಲ ಪ್ರಿಯವಾದ ಸಂಬಂಧಗಳಲ್ಲ. ಸ್ವತಃ

ಹೆಂಡತಿಯೊಡನೆಯೇ ಅವರ ಸಂಬಂಧ ಸರಿಯಾಗಿಲ್ಲ. ವಿಚಿತ್ರವೆಂದರೆ ಈ ಕಾರಣಗಳೆಲ್ಲ ಮನೋವೈಜ್ಞಾನಿಕವಾದವುಗಳು, ಯಶವಂತರ ಹೆಂಡತಿ ಇನ್ನೊಬ್ಬರ ಜೊತೆಗೆ ವಿವಾಹ ಬಾಹಿರ ಸಂಬಂಧವನ್ನಿಟ್ಟು ಕೊಂಡಿರುವುದನ್ನು ಕಾದಂಬರಿ ಒಪ್ಪುವುದಿಲ್ಲ. ಆದರೆ ಯಶವಂತರ ವಿವಾಹ ಬಾಹಿರ ಸಂಬಂಧವನ್ನು ಅದು ಸಹಾನುಭೂತಿಯಿಂದ ಚಿತ್ರಿಸುತ್ತದೆ. ಕಾರಣ ಇಲ್ಲಿ ಮನೋವೈಜ್ಞಾನಿಕವೇ ಹೊರತು ನೈತಿಕತೆಯಲ್ಲ. ಮನೋವಿಜ್ಞಾನ ನೈತಿಕತೆಗಿಂತ ಹೆಚ್ಚು ಮೃದುವಾಗಿ ಮನುಷ್ಯನ ಸಂಬಂಧಗಳನ್ನು ಅಳೆದು ನೋಡುತ್ತದೆ.

ಯಶವಂತರ ಸಂಬಂಧಗಳನ್ನು ನಾವು ಮನೋವೈಜ್ಞಾನಿಕ ನೆಲೆಯಲ್ಲಿ ನೋಡಿದಾಗ, ಇಲ್ಲಿ ವ್ಯಕ್ತಿಗಳ ಅವಲಂಬನೆಯು ಆರ್ಥಿಕ ನೆಲೆಯನ್ನು ಒಳಗೊಂಡಿರುವುದು ತಿಳಿಯುತ್ತದೆ. ಪಾರ್ವತಜ್ಜಿ, ಜಲಜಾ ಇವರು ಒಂದು ದೃಷ್ಟಿಯಲ್ಲಿ ಅಸಹಾಯಕರು, ಈ ಅಸಾಹಾಯಕತೆಯು ಯಶವಂತರು ಕಳುಹಿಸುವ ಹಣದ ಮೂಲಕ ಸ್ವಲ್ಪ ಮಟ್ಟಿಗೆ ಬಿಡುಗಡೆಯ ಹಾದಿ ತೋರುತ್ತದೆ.ಇದನ್ನು ಅವರ ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ನೋಡಿದಾಗ ನಮ್ಮ ಅರಿವಿಗೆ ಬರುತ್ತದೆ.

ಕಾರಂತರು ಪಾರ್ವತಮ್ಮನಿಗೆ ಹಣವನ್ನು ಕೊಟ್ಟು ಹೋಗುವುದು ಇದನ್ನು ತಿಳಿದು ರಾಮಹೆಗ್ಗಡೆ ಪೀಡಿಸುವುದು ಮೂಕಾಂಬಿಕ ಪಾರ್ವತಜ್ಜಿಗಾಗಿ ಮರುಗುವುದು, ಶಂಭು ಹೆಗ್ಗಡೆ ಪಾರ್ವತಮ್ಮನಿಗೆ ಬರುತ್ತಿದ್ದ ಹಣವನ್ನು ಕದಿಯುವುದು, ತಂದೆಯ ಗುಣಗಳನ್ನು ತನ್ನ ತಾಯಿ ಸರಸಿಯಿಂದ ತಿಳಿದಿದ್ದ ಇಂದುಮತಿ ತನ್ನ ತಂದೆಯ ಭಾವಚಿತ್ರವನ್ನು ನಿರೂಪಕರನ್ನು ಕೇಳುವುದು, ಮೇರಿಯ ಹಣದ ದಾಹ, ವಿಷ್ಣುವಂತ ಘಾಟೆಯವರ ಮಾನವೀಯತೆ ಮತ್ತು ಧರ್ಮಶ್ರದ್ಧೆ ಹಾಗೂ ಸರಸಿಗೆ ಯಶವಂತರ ಮೇಲೆ ಇದ್ದ ನಿಸ್ವಾರ್ಥ ಪ್ರೇಮ ಇವೆಲ್ಲ ಮನುಷ್ಯ ಜೀವನದ ವಿವಿಧ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. ಇವೆಲ್ಲವು ನಿಸರ್ಗದ ನೆಲೆಯಲ್ಲಿ ನಡೆಯುವುದು ಇಲ್ಲಿ ಪ್ರಮುಖವಾಗಿದೆ.

ಯಶವಂತರು ತನ್ನ ಜೀವನ ಚರಿತ್ರೆಯ ಪಾತ್ರಗಳಲ್ಲಿ ನಾನು "*ಸುಮಾರು ಇಪ್ಪತ್ತೈದು ವರ್ಷಗಳ ಬದುಕು ವಿಚಾರ ಶೂನ್ಯ ದುಡುಕಿನಲ್ಲಿ ಕಳೆಯಿತೆಂದರೂ ತಪ್ಪಿಲ್ಲ. ಅಷ್ಟರೊಳಗೇನೆ ನನ್ನ ವಿವಾಹವಾಗಿತ್ತು. ನಾನು ನಿಜವಾದ ಸಂಸಾರಿಯಾಗಿ, ಮುಂದೆ ಒಂದು ಮಗುವಿನ ತಂದೆಯೂ ಆದೆ. ಆಗ ನನಗೆ ಉಳ್ಳಸ್ಥಿತಿ ಹೊರಟು ಹೋಗಿ, ಸಾಲ ಮಾಡುವ ಪ್ರಸಂಗ ಬಂದು, ಮನಸ್ಸು ಚಿಂತೆಗೀಡಾಯಿತು. ಜೇನು ಇರುವ ತನಕ ಮಾತ್ರ ಭ್ರಮರಕ್ಕೆ ಹೂವಿನ ಮೇಲಣ ಆಸೆ ಎಂಬ ಕಟುಸತ್ಯವನ್ನು ತಿಳಿದೆ. ಆದರೂ ಎದೆಗೆಡಲಿಲ್ಲ. ನನಗೆ ಪಿತ್ರಾರ್ಜಿತವಾದ ಸಂಪತ್ತಿದೆ. ಸಾಲಕ್ಕೆ ಗುರಿಯಾದ ಆಸ್ತಿಪಾಸ್ತಿ ಇನ್ನೂ ಉಳಿದಿದೆ. ಏನೇನೂ ಇಲ್ಲದೆ ಬರಿಗೈಯಿಂದಲೇ ಘಟ್ಟ ಬೆಳೆದು, ಜೀವನ ರಥವನ್ನು ಸಾಗಿಸುವುವವರಿಲ್ಲವೇ ಎನಿಸಿತು. ನನಗೆ, ಆಗ ನಾನೇ ನನ್ನ ಜೀವನ ಕ್ಷೇತ್ರವನ್ನು ಬದಲಿಸಿದೆ. ನನ್ನ ಮಾವನ ಮನೆಗೆ ಸಮೀಪ ಕುಮಟೆಗೆ ಬಂದು ನೆಲೆಸಿದೆ. ಒಬ್ಬ ವ್ಯಾಪಾರಿಯು ಜತೆ ಸೇರಿ ವ್ಯಪಾರ ವ್ಯವಹಾರದಲ್ಲಿ ತೊಡಗಿದೆ. ಈ ಜೀವನ ಆರಂಭದಲ್ಲಿ ಕಷ್ಟದಾಯಕವಾಗಿತ್ತಾದರೂ, ನನ್ನ ಮಡದಿಯು ಮಕ್ಕ*

ಫಲದಿಂದಲೋ ಅಥವಾ ಅನುಕೂಲ ಸನ್ನಿವೇಶಗಳು ಒದಗಿದುದರಿಂದಲೋ, ತಿರುಗಿ ಹಣ ಸಂಪಾದಿಸಿದೆ. ಕಳೆದುದಕ್ಕಿಂತಲೂ ಹೆಚ್ಚನ್ನು ಗಳಿಸಿದೆ. ಆದರೆ ಯಶಸ್ಸಿನ ಹಿಗ್ಗು ನನಗುಂಟಾಗಲಿಲ್ಲ. ಅದು ಹಣವಿದ್ದಲ್ಲಿ ಮೋಹವಿದೆ. ದುರಾಸೆಯಿದೆ. ಮತ್ಸರವಿದೆ, ಕಹಿಯೂ ಇದೆ, ಅದರ ದೆಸೆಯಿಂದಲೇ ನನ್ನ ಮಡದಿ, ಮಕ್ಕಳು ಎಲ್ಲರೂ ನನಗೆ ವೈರಿಗಳಂತಾದರು, ನಾನು ಲೋಭಿಯಾದುದು ನಿಜ. ಅಂಥ ಅಧ್ಯಾಯಕ್ಕೆ ಇನ್ನು ಕೊನೆ ಬರಲೆಂದು ನನಗೆ ಹಿರಿಯರಿಂದ ಬಂದುದಕ್ಕೆ ಇನ್ನೂ ಹೆಚ್ಚಿಗೆ ಹಣವನ್ನು ಸೇರಿಸಿ ಹೆಂಡತಿ ಮಕ್ಕಳಿಗೆ ಬಿಟ್ಟು ನಾನು ಆ ಊರಿನಿಂದಲೇ ಕಣ್ಮರೆಯದೆ"[೭೭] ಎನ್ನುತ್ತಾರೆ.

ಇದು ಯಶವಂತರ ಜೀವನ ಚರಿತ್ರೆ. ಈ ಚರಿತ್ರೆ ಮನುಷ್ಯನ ಮಾನಸಿಕ ಸಂಸ್ಕೃತಿಯ ಸೂಕ್ಷ್ಮತೆಗಳನ್ನು ಎತ್ತಿಹಿಡಿದಿದೆ. ಇದೆಲ್ಲವೂ ಭೂಮಿ, ಹಣ, ಸಂಪತ್ತುಗಳನ್ನಾಧರಿಸುವುದರ ಬಗ್ಗೆ ತಿಳಿಯುತ್ತದೆ. ಮನುಷ್ಯ ಸಂಸ್ಕೃತಿಯಲ್ಲಿ ಮುಖ್ಯಾವಾಗಿರುವುದು ಆಸೆ, ಈ ಆಸೆಯು ಮನುಷ್ಯನನ್ನು ವಿವಿಧ ದಿಕ್ಕುಗಳೆಡೆ ಸಾಗಿಸುತ್ತದೆ ಎನ್ನುವುದು ಯಶವಂತರ ಮಾತುಗಳಲ್ಲಿ ತಿಳಿಯುತ್ತದೆ.

ನಿರೂಪಕರು ಪಾರ್ವತಮ್ಮನನ್ನು ಹುಡುಕಿಕೊಂಡು ಹೋದಾಗ ಅಕೆಯು ಮಣ ಮಣ ಜಪ ಮಾಡುತ್ತ ತುಳಸಿಕಟ್ಟೆಯ ಮುಂದೆ ಮಣಿದಳು ನೊಸಲಿಗೆ ಮೃತ್ತಿಕೆಯನ್ನೇರಿಸಿಕೊಂಡಳು. ಬಳಿಕ ನನ್ನ ಕಡೆ ನೋಡಿ ಆಗ ನಿರೂಪಕರು ಹೇಳುವ ಮಾತು ನನಗೆ ಅರಿವಿಲ್ಲದಂತೆ ನಾನು ಆಕೆಯ ಮುಂದೆ ಕೈ ಜೋಡಿಸಿ ನಿಂತದ್ದನ್ನು ಅವಳು ದೃಷ್ಟಿ ಅವಲೋಕಿಸಿ ಅಯ್ಯೋ ಮಗುವೆ ನನಗೆ ಯಾಕೆ ನಮಸ್ಕಾರ ಮಾಡುತ್ತೀಯ? ಆ ದೇವರಿಗೆ ಮಾಡು ಎಂದು ತುಳಿಸಿ ಕಟ್ಟೆಯನ್ನು ತೋರಿಸಿದಳು.

ಭಾರತೀಯ ಸಂಸ್ಕೃತಿಯಲ್ಲಿ ಆಧ್ಯಾತ್ಮಿಕತೆಯು ಪ್ರಮುಖವಾದುದು. ಇದರೊಂದಿಗೆ ಮಾನವಿಯತೆಯು ಸೇರಿಕೊಂಡಿದೆ. ಈ ಎರಡನ್ನು ಕಾರಂತರು ತಮ್ಮ ಕಾದಂಬರಿಗಳಲ್ಲಿ ತರುತ್ತಾರೆ. ಪಾರ್ವತಮ್ಮನ ತುಳಸಿ ಕಟ್ಟೆಯ ಭಕ್ತಿ ನಮ್ಮ ಭಾರತೀಯರ ತುಳಸಿ ಕಟ್ಟೆಯ ಭಕ್ತಿ ಒಂದೇ ಆಗಿದೆ. ನಿರೂಪಕರು ಆಕೆಗೆ ಕೈ ಮುಗಿದು ಅವಳು ಹೇಳುವ ಮಾತುಗಳಲ್ಲಿ ಕರುಣ ಸಂಸ್ಕೃತಿ ಇದೆ. ಪಾರ್ವತಮ್ಮನಿಗೆ ಕಾರಂತರು ಯಶವಂತರು ಕಳುಹಿಸಿದರೂ ೧೫ ಸಾವಿರ ರೂಪಾಯಿಗಳನ್ನು ಕೊಡಲು ಅದನ್ನು 'ಗುಡ್ಡೆ ಬೆನಕಯ್ಯ ದೇವಸ್ಥಾನದ ಜೀರ್ಣೋದ್ಧಾರ' ಮಾಡಿಸು ಎನ್ನುತ್ತಾಳೆ. ಪಾರ್ವತಮ್ಮನ ಮಾತುಗಳಲ್ಲಿ ನಮ್ಮ ಭಾರತೀಯ ಸಂಪ್ರದಾಯದ ನೆಲೆಗಳು ಕಂಡುಬರುತ್ತವೆ. 'ಶನಿಶ್ವರನ ನೆರಳಿನಲ್ಲಿ' ಕಾದಂಬರಿಯ ಕಾವೇರಮ್ಮನು ಸಹ 'ಶನೀಶ್ವರ' ದೇವಾಲಯದ ಪೂಜೆ ಪುರಸ್ಕಾರಗಳಿಗೆ ಭೂಮಿಯನ್ನು ಬಿಟ್ಟುಕೊಡುವುದಕ್ಕೂ, ಪಾರ್ವತಮ್ಮನು ತನ್ನ ಸಾಕು ಮಗ ಯಶವಂತ ಕಳುಹಿಸಿದ ಹಣವನ್ನು ದೇವಸ್ಥಾನ ಕಟ್ಟಿಸುವಂತೆ ಹೇಳುವ ಮಾತುಗಳಲ್ಲಿ, ಈ ಇಬ್ಬರೂ ಮುದುಕಿಯರ ಗುಣಗಳಲ್ಲಿ ಸಂಪ್ರದಾಯ ಮತ್ತು ಸಂಸ್ಕೃತಿಯ ಆಧ್ಯಾತ್ಮಿಕ ನೆಲೆಯಲ್ಲಿರುವುದು ಕಂಡು ಬರುತ್ತದೆ. ಕಾರಂತರು ಹೀಗೆ ತಮ್ಮ ಕಾದಂಬರಿಗಳಲ್ಲಿ ನಿಸರ್ಗದ ನೆಲೆಯಲ್ಲಿ ಸಾಂಸ್ಕೃತಿಕ ನೆಲೆಗಳ ಬಗೆಗಳನ್ನು ಪರಿಚಯಿಸುತ್ತಾರೆ.

೭೭. ಶಿವರಾಮಕಾರಂತ, ಅಳಿದ ಮೇಲೆ, ಪು-[illegible]

ಕಾದಂಬರಿಯಲ್ಲಿ ಮನ ಸೆಳೆಯುವ ಇನ್ನೊಂದು ಅಂಶವೆಂದರೆ ಪಾರ್ವತಮ್ಮನ ಅತಿಥ್ಯ ಯಶವಂತ ಕಳುಹಿಸುತ್ತಿದ್ದ ಇಪ್ಪತ್ತೈದು ರೂಪಾಯಿಗಳಲ್ಲಿ ಅಂಚೆಯವನು ಮತ್ತು ಶಂಭೂ ಕದ್ದು ನಂತರ ಸಿಗುತ್ತಿದ್ದ ಐದೂ ರೂಪಾಯಿಗಳಲ್ಲಿ ಆಕೆ ತೃಪ್ತಿ ಜೀವನ ನಡೆಸುತ್ತಿದ್ದಳು ಆಕೆ ಕಾರಂತರಿಗೆ 'ಹರಿವಾಣದಲ್ಲಿ ತಂದಿರಿಸಿ ದೂರದಿಂದ ದಣಿದು ಬಂದಿದ್ದೀ, ಮತ್ತೇನು ಮಾಡುವ ತ್ರಾಣ ನನಗಿಲ್ಲ ಒಂದಿಷ್ಟು ಪಚ್ಚಟಸರನ್ನು ಕಡೆದು ಆಸರು ಮಾಡಿದ್ದೇನೆ. ತಕ್ಕೋ ದಾಕ್ಷಿಣ್ಯ ಮಾಡಬೇಡ, ಪಚ್ಚೆರಸು ದೇಹಕ್ಕೆ ತಂಪು' ಎನ್ನುತ್ತಾಳೆ. ಅವಳನ್ನೇ ನೋಡಿ ಕಾರಂತರು 'ಹಪ್ಪಳ ಸುಟ್ಟಿದ್ದಿರಲ' ಎಂದಾಗ 'ಹಪ್ಪಳ ನೆಪಕ್ಕೆ ಉದ್ದಿನ ಹಪ್ಪಳವಲ್ಲ, ಹೆಣಸಿನದ್ದೂ ಅಲ್ಲ: ಕೆಸವೆ ಗಟ್ಟೆಯನ್ನೇನೋ ಮಾಡಿ ಒಣಗಿಸಿ ಸುಟ್ಟೆದ್ದೇನೆ' ಎನ್ನುವಳು.

ನಿಸರ್ಗದ ನೆಲೆಯಲ್ಲಿಯೇ ಸಿಗುವ ಗೆಡ್ಡೆ ಗೆಣಸನ್ನು ಉಪಯೋಗಿಸಿಕೊಂಡು ಮಾಡಿದ ಸಂಡಿಗೆ, ಹಪ್ಪಳ ಪಚ್ಚೆಸರನ್ನು ಮಾಡಿ ಪಾರ್ವತಮ್ಮ ಕಾರಂತರಿಗೆ ಬಡಿಸುವ ಆಕೆಯ ಕರುಣೆ, ಅತಿಥಿ ಸತ್ಕಾರದ ಗುಣಗಳಲ್ಲಿ ದೊಡ್ಡ ವ್ಯಕ್ತಿತ್ವ ಕಂಡು ಬರುತ್ತದೆ. ಕಾರಂತರ ಕಾದಂಬರಿಗಳ ನಿಸರ್ಗದ ನೆಲೆಯಲ್ಲಿ 'ಸಾಂಸ್ಕೃತಿಕ ನೆಲೆ'ಗೆ ಸಂಬಂಧಿಸಿದಂತೆ, ಇಲ್ಲಿ ಅಧ್ಯಯನಕ್ಕೆ ಒಳಪಟ್ಟ ಕಾದಂಬರಿಗಳಲ್ಲಿ ಮಾನವನ ಪ್ರಾದೇಶಿಕವಾಗಿ, ಕುಟುಂಬ, ಗ್ರಾಮ, ನಗರ, ರಾಜ್ಯ ನೆಲೆಗಳಲ್ಲಿ ಅವರು ಸಾಮಾಜಿಕ, ಆರ್ಥಿಕ, ರಾಜಕೀಯ, ನೆಲೆಗಳನ್ನು ನೈಸರ್ಗಿಕವಾಗಿ ತಮ್ಮ ಸಂಸ್ಕೃತಿಯನ್ನು ರೂಪಿಸಿಕೊಂಡಿರುವ ಬಗ್ಗೆ ಮತ್ತು ಕೆಲವರು ಕಾಡು ಜೀವನದ ಸಂಸ್ಕೃತಿ (ಕುಡಿಯರ ಕೂಸು) ಯನ್ನು ಅಳವಡಿಸಿಕೊಂಡಿರುವ ಬಗ್ಗೆ ಕಾರಂತರು ಪಾತ್ರಗಳ ಮುಖಾಂತರ ಹೇಳುತ್ತಾರೆ. ಸಾಂಸ್ಕೃತಿಕ ನೆಲೆಯಾದ ಧಾರ್ಮಿಕ ಮತ್ತು ಸಮಾಜದ ಬಗ್ಗೆ ವಿಮರ್ಶಕ ಜಿ. ರಾಜಶೇಖರವರು ಹೇಳುವ ಮಾತುಗಳು ತುಂಬಾ ಗಮನರ್ಹವಾಗಿದೆ. ಅದು *"ಧಾರ್ಮಿಕ ಶ್ರದ್ಧೆಗೆ ಕಾರಂತರ ಪ್ರತಿಕ್ರಿಯೆಯ ಇನ್ನೊಂದು ಮುಖ್ಯವಾದ ಅಂಶವನ್ನು ಇಲ್ಲಿ ಗಮನಿಸಬೇಕು. ಧಾರ್ಮಿಕ ಮುಖಂಡರನ್ನು ಸದಾ ತರಾಟೆಗೆ ತೆಗೆದುಕೊಳ್ಳುವ ಕಾರಂತರು, ತಮ್ಮ ಕಾದಂಬರಿಯಲ್ಲಿ ಸ್ವತಃ ತಾವೆ ನಿರೂಪಕರಾಗಿ (ಅಂದರೆ ಯಾವ ಪಾತ್ರದ ಬಾಯಿಂದಲೂ ಹೇಳಿಸದೆ), ಊರ ದೇವಸ್ಥಾನಗಳು, ಅವುಗಳ ಅರ್ಚಕರು, ನಿತ್ಯ ನಿಧಿಗಳು, ಕಟ್ಟುಕಟ್ಟಳೆಗಳು, ವಾರ್ಷಿಕ ಜಾತ್ರೆ, ಉತ್ಸವ ನಡಾವಳಿಗಳನ್ನು ತುಂಬಾ ಆತ್ಮೀಯವಾಗಿ ವಿವರ ವಿವರವಾಗಿ ಬಣ್ಣಿಸುತ್ತಾರೆ. ಉದಾ: 'ಮರಳಿ ಮಣ್ಣಿಗೆ'ಯ ಕೋಡಿಹಬ್ಬ, 'ಚೋಮನ ದುಡಿ'ಯ ಬೋಗನಹಳ್ಳಿಯ ಪಕ್ಕದ ಊರಿನ ಜಾತ್ರೆ, 'ಉಕ್ಕಿದ ನೊರೆ'ಯ ಬ್ರಹ್ಮಾವರದ ಪಂಚಲಿಂಗೇಶ್ವರ ಜಾತ್ರೆ 'ಕುಡಿಯರ ಕೂಸು' ಕಾದಂಬರಿಯ ಕುಡಿಯರು ನೇಮ, ಕೊಲ ಓರಿಮಲೆಯ ಜಾತ್ರೆ ಇತ್ಯಾದಿ ಈ ಜಾತ್ರೆಗಳು ಹೊಟ್ಟೆಯ ಪಾಡಿಗೆ ಪರವೂರಿಗೆ ಹೋದವರೂ ಊರಿಗೆ ಬರುವುದಕ್ಕೆ ಒಂದು ನೆವ: ಹೆಂಗಸರಿಗೆ ಮಕ್ಕಳಿಗೆ ಸೀರೆ, ಪಾತ್ರ ಪಗಡೆ ಕೊಳ್ಳುವ ಸಮಯ ಮದುವೆ ನೆಂಟಸ್ಥಿಗೆ ಬೆಸೆಯುವುದಕ್ಕೆ ಅಪ್ತರೊಡನೆ ಸುಖ ದುಃಖ ಹಂಚಿಕೊಳ್ಳುವುದಕ್ಕೆ ಇವೇ ತಕ್ಕ ಸಂದರ್ಭ. ಹೀಗೆ ಜಾತ್ರೆ ಊರವರ ಬದುಕಿನ ಲಯ ರೂಪಿಸುತ್ತದೆ".*[೬೫]

೬೫. ಎಸ್.ಅನಂತನಾರಾಯಣ (ಸಂ), ಕಾರಂತರ ಕಾದಂಬರಿಗಳು, ಪುಟ-೧೯೪

ರಾಜಶೇಖರ ರವರು ಹೇಳಿರುವ ಧರ್ಮಕ್ಕೆ ಸಂಬಂಧಿಸಿದಂತೆ ಜಾತ್ರೆಯು ಮನುಷ್ಯ ಸಂಬಂಧಗಳನ್ನು ಸೃಜಿಸುವ ಸಂಸ್ಕೃತಿಯ ಭಾಗವಾಗಿರಬಹುದು. ಆದರೆ ಕಾರಂತರ ಕಾದಂಬರಿಗಳು ಈ ಧರ್ಮದ ವಿವಿಧ ರೂಪಗಳು ಮತ್ತು ಅದರ ಉತ್ಸಹಗಳ ಜೊತೆಗೆ ಮನುಷ್ಯನು ಬಹುಮುಖಿಯಾಗಿ ರೂಢಿಸಿಕೊಂಡಿರುವ ಕೃಷಿ, ಬೇಟೆ, ಸಂಗೀತ, ಚಿತ್ರ ಕಲೆ ನೃತ್ಯ, ಪೂಜೆ, ಆಸ್ತಿ ಒಡೆತನ, ನಿಸರ್ಗ ಪ್ರೇಮ ಮುಂತಾದ ಸಾಂಸ್ಕೃತಿಕ ನೆಲೆಗಳನ್ನು ನಿಸರ್ಗದ ನೆಲೆಯಲ್ಲಿ ಗುರುತಿಸುವುದು ಅವರ ಹೆಗ್ಗಳಿಕೆಯಾಗಿದೆ.

****

ಅಧ್ಯಾಯ–೫

ಭೂಮಿ–ಸಾಮಾಜಿಕ ವ್ಯವಸ್ಥೆ

ಶತ–ಶತಮಾನಗಳಿಂದ ಮಾನವ ನಿಸರ್ಗವನ್ನು ಆಧರಿಸಿ ಬದುಕುತ್ತಿದ್ದಾನೆ. ಆರಂಭಿಕ ಹಂತದ ಮಾನವ–ನಿಸರ್ಗ ಸಂಬಂಧ ಸಂತಸಮಯವಾಗಿದ್ದಿರಬೇಕು. ಆದರೆ ಮಾನವನ ದುರಾಸೆ ಹೆಚ್ಚಿದಂತೆ, ನಿಸರ್ಗದ ಮೇಲಿನ ಅವನ ಆಧಿಪತ್ಯ ಅಧಿಕವಾದಂತೆ ಸಮಸ್ಯೆ ತಲೆದೋರತೊಡಗಿದವು. ಇದು ನೈಸರ್ಗಿಕ ವಿಕೋಪಗಳಿಗೆ ಮೂಲವಾಯಿತು. ಇತ್ತೀಚೆಗಂತೂ ಬದುಕು ಭೀಕರವಾಗುತ್ತಿದೆ. ಇದಕ್ಕೆ ಕಾರಣಗಳನ್ನು ತಾತ್ವಿಕವಾಗಿ ಈ ಮುಂದೆ ಗ್ರಹಿಸಲಾಗಿದೆ.

ಕಾರಂತರು ತಮ್ಮ ಅನೇಕ ಕಾದಂಬರಿಗಳಲ್ಲಿ ಮಾನವ ನಿಸರ್ಗದೊಂದಿಗೆ ನಡೆಸಿದ ಸಂಘರ್ಷವನ್ನು ದಾಖಲಿಸಿದ್ದಾರೆ. ಅಲ್ಲಿನ ಚಿತ್ರಣ ಪ್ರಾದೇಶಿಕ ಅನಿಸಿದರೂ ಅದರ ವ್ಯಾಪ್ತಿಯ ಅನ್ವಯ ವಿಶಾಲವಾಗಿದೆ. ಮನುಷ್ಯನ ಬಾಳಿನಲ್ಲಿ ನಿಸರ್ಗದ ಪಾತ್ರವೇನು? ನಿಸರ್ಗ ಹೊಂದಿರುವ ಸಾಂಸ್ಕೃತಿಕ, ಅನುಭಾವಿಕ, ಜೈವಿಕ, ಸಂಬಂಧಗಳೇನು? ಅವು ಕಾರಂತರ ಕಾದಂಬರಿಗಳಲ್ಲಿ ಮಾಡಿರುವ ಬಗೆ ಹೇಗಿದೆ ಎಂಬುದು ಕುತೂಹಲದ ಅಂಶವಾಗಿದೆ.

ಆಧುನಿಕ ಜಗತ್ತು ವಿಜ್ಞಾನ, ತಂತ್ರಜ್ಞಾನವನ್ನು ಬಹುವಾಗಿ ಅವಲಂಬಿಸಿದೆ. ಮನುಷ್ಯ ನಿಸರ್ಗವನ್ನು ಜಯಿಸುತ್ತ ದಾಪುಗಾಲಿಡುತ್ತಿದ್ದಾನೆ. ನಾಗರೀಕತೆ ಬೆಳೆದಂತೆ ಆಕ್ರಮಣವೂ ಬೆಳೆದಿದೆ. ನಿಸರ್ಗವೆಂದರೆ ಕಾಡು, ನೀರು ಮತ್ತು ಜೀವಸಂಕುಲ ವಾಸಿಸುವ ಭೂಮಿ. ನಿಸರ್ಗ ನಿರಂತರ ಚಲನಶೀಲ. ಅದರ ಸ್ವರೂಪದಲ್ಲಿ ಕಾಲಕಾಲಕ್ಕೆ ಆಂತರಿಕ, ಬಾಹ್ಯ ಬದಲಾವಣೆಗಳೂ ಆಗುತ್ತಲೇ ಇವೆ. ಭೂಮಿ ಮೇಲ್ನೋಟಕ್ಕೆ ಸುಂದರ. ಇದು ಸೂರ್ಯನ ಒಂದು ಭಾಗ. ಭೂಮಿಯ ವ್ಯಾಸ ೧೨.೭೪೦ ವರ್ಗ ಕಿ.ಮೀ ಇದೆ. ಭೂಮಿಗೂ ಸೂರ್ಯನಿಗೂ ೧೪೯ ದಶಲಕ್ಷ ಕಿ.ಮೀ ಅಂತರವಿದೆ. ಭೂಮಿಯಲ್ಲಿ ನೀರಿನ ಅಂಶವಿದೆ.

ಮಾನವ ನಿಸರ್ಗ ಪ್ರಿಯ. ಹಾಗಾಗಿ ಅವನ ಮತ್ತು ನಿಸರ್ಗದ ಸಂಬಂಧ ಅತ್ಯಂತ ನಿಕಟ. ಈ ಅಂಶವನ್ನು ಕಾರಂತರು ತಮ್ಮ ಕಾದಂಬರಿಗಳಲ್ಲಿ ಚಿತ್ರಿಸಿದ್ದಾರೆ, ಭೂಮಿ ಮತ್ತು ಮಾನವ ಹೊಂದಿರುವ ಸಂಬಂಧವನ್ನು ಅವರು ಸಾಮಾಜಿಕ ಸನ್ನಿವೇಶದಲ್ಲಿ ಪರಿಭಾವಿಸಿದ್ದಾರೆ. ನಿದರ್ಶನವಾಗಿ ಕೆಲವು ಕಾದಂಬರಿಗಳನ್ನು ಗಮನಿಸಬಹುದು.

ಬೆಟ್ಟದ ಜೀವ: ನಿಸರ್ಗದ ಚಲನಶೀಲತೆ ಕುರಿತು ಪ್ರಸ್ತಾಪಿಸುತ್ತದೆ. ಪ್ರಕೃತಿ ಮತ್ತು ಜೀವ ಸಂಕುಲದ ಸಂಬಂಧಗಳ ನಿರ್ವಚನ ಇಲ್ಲಿದೆ. ಮಾನವ ನಿಸರ್ಗದ ಚಲನಶೀಲತೆಗೆ ಬಗೆಬಗೆಯಲ್ಲಿ

ತೆರೆದು ಕೊಂಡಿದ್ದಾನೆ. ಇಲ್ಲಿ ನಿರೂಪಕನಾದ ಶಿವರಾಮಯ್ಯರ ಅಲೆದಾಟ ಇದನ್ನು ಪ್ರತಿಮಾತ್ಮಕವಾಗಿ ಬಿಂಬಿಸುತ್ತದೆ. ಆಕಾಶ, ಕಾಡು, ಈತನಿಗೆ ಬೆರಗುಂಟು ಮಾಡುತ್ತವೆ.ಪಂಜಕ್ಕೆ ಹೊರಟ ಅವನ ಪಯಾಣ ದಾರಿತಪ್ಪುವುದು. ಗೋಪಾಲಯ್ಯನ ಮನೆ ಸೇರುವುದು. ಅಲ್ಲಿ ಬದುಕು, ಸಂಘರ್ಷ, ರೋಗ ಎಲ್ಲವನ್ನು ಅವನು ಗಮನಿಸಿ, ವ್ಯಾಖ್ಯಾನಿಸುವುದು ಅಲ್ಲಿ ವಿಶೇಷ ಅನುಭವ ಲಭಿಸುತ್ತದೆ. ಅಲ್ಲಿನ ಆಳುಗಳ ಬದುಕಿನ ನರಕ ಅವನಿಗೂ ತಟ್ಟುತ್ತದೆ. ಅಲ್ಲಿನ ಸೌಂದರ್ಯ, ನಿಗೂಢತೆ, ಬದುಕಿನಲ್ಲಿನ ಕ್ರೌರ್ಯ ಏಕಕಾಲಕ್ಕೆ ಚಿತ್ರಣಗೊಂಡಿದೆ. ಅಲ್ಲಿ ಅವನಿಗೊಂದು ಸತ್ಯ ಅರಿವಾಗುತ್ತದೆ. ಅದು ಮಾನವ ನಿಸರ್ಗ ಅವಲಂಬಿತನೇ ಹೊರತು ನಿಸರ್ಗ ಅವನನ್ನು ಅವಲಂಬಿಸಿಲ್ಲ.

ಒಂದೊಂದು ಪ್ರದೇಶ ಒಂದೊಂದು ಬಗೆಯ ಬದುಕಿಗೆ ಕಾರಣವಾಗುತ್ತದೆ. ಇಲ್ಲಿ ಸ್ವತಂತ್ರ, ಸ್ಪರ್ಧೆ, ಎರಡೂ ಸಾಧ್ಯ. ಪ್ರಾಣಿಗಳೊಂದಿಗಿನ ಸೆಣಸಾಟವೂ ಸಾಧ್ಯ. ಅಲ್ಲದೆ 'ಹುಟ್ಟಿದೂರು ಸ್ವರ್ಗ' ಎಂಬ ಭಾವನೆ ಬಂಧನಕ್ಕೂ ಕಾರಣವಾಗುತ್ತದೆ. ಒಮ್ಮೆ ನೋಡುವವರಿಗೆ 'ಚೆಲುವಿನ ತಾಣ' ಎನಿಸುವ ಪ್ರದೇಶ ಅಲ್ಲಿಯೇ ವಾಸಿಸುವವರಿಗೆ 'ಬಂಧನ, ಸಾಮಾನ್ಯ' ಎನಿಸುವುದು ಉಂಟು.

ಈ ಕಾದಂಬರಿಯ ಕೇಂದ್ರ ಪಾತ್ರ ಗೋಪಾಲಯ್ಯ ಇವನ ಸಂಘರ್ಷ ನಿಸರ್ಗದೊಡನೆ, ಈ ಸಂಘರ್ಷದಲ್ಲಿ ಏಳು–ಬೀಳು ಇವೆ. ಕಾಡು ಕಡಿದು ಕೃಷಿ ಮಾಡುವ ಕ್ರಿಯೆ ಸಾಧುವೆ? ಅಸಾಧುವೆ? ಕಾಡಿನ ನಾಶ ನೈಸರ್ಗಿಕ ವಿಕೋಪಕ್ಕೆ ಕಾರಣವೆ? ಅಗಾಧ ಶಕ್ತಿ, ಸ್ವರೂಪದ ಪ್ರಕೃತಿ ಎದುರು ಮಾನವನ ರೂಪ–ಸ್ವರೂಪ ಕಡಿಮೆ ಅಲ್ಲವೆ?

ಕಾದಂಬರಿಯಲ್ಲಿ ಹಿಮಾಲಯದ ಪ್ರಸ್ತಾಪ, ಅದರ ಅಗಾಧತೆಯನ್ನು ಚಿತ್ರಣಗೊಳಿಸುತ್ತದೆ. ಅವು ಪ್ರಕೃತಿ ಎದುರು ಮಾನವ ಎಷ್ಟು ಚಿಕ್ಕವನು ಎಂಬುದನ್ನು ತಿಳಿಸುತ್ತವೆ. ಆದರೂ ಇಲ್ಲಿನ ಗೋಪಾಲಯ್ಯ ಅಪರೂಪದ ವ್ಯಕ್ತಿ–ವ್ಯಕ್ತಿತ್ವ ಪಡೆದವನು ಆಗಿದ್ದಾನೆ. ಹುಲಿ, ಹಸು, ನಾಯಿ ಅವುಗಳ ಸಂಘರ್ಷ ಕಾಣಿಯಾಗುವಿಕೆ ಎಲ್ಲವೂ ಅರ್ಥ ಶಕ್ತಿ ಪಡೆದ ಅಭಿವ್ಯಕ್ತಿಯಾಗಿವೆ. ಭೂಮಿಯ ಮೇಲೆ ಆಹಾರ ಸರಪಳಿ ಇದೆ. ಅದು ಕ್ರಮಬದ್ಧ, ಕ್ರಮ ವಿಪರ್ಯಾಸ ಅದರೊಡನೆ ಸಮಸ್ಯೆ ಪ್ರಾರಂಭ ಆಗುವುದನ್ನು ಕಾದಂಬರಿಕಾರ ಸೂಕ್ಷ್ಮವಾಗಿ ಬಿಂಬಿಸಿದ್ದಾನೆ. ಹಾಗಾಗಿ ಇಲ್ಲಿನ ಬರವಣಿಗೆ ಪ್ರಜ್ಞಾಪೂರ್ವಕ ಎನಿಸುತ್ತದೆ. ಈ ಪ್ರಜ್ಞೆ ಲೌಕಿಕ, ಅಧ್ಯಾತ್ಮಿಕ ಮತ್ತು ತನ್ಮಯ ಆಯಾಮ ಒಳಗೊಂಡಿದೆ.

ಗೊಂಡಾರಣ್ಯ ಕಾದಂಬರಿಯಲ್ಲಿ ರಾಜಕೀಯ ನಿಲುವು ವಿಶೇಷಣಾರ್ಹ! ರಾಜಕೀಯ ಅಧಿಕಾರಕ್ಕೆ ನಿಸರ್ಗ ವೇದಿಕೆಯಾಗುವುದು. ಇಲ್ಲಿ ಸೂಕ್ಷ್ಮವಾಗಿ ಬಿಂಬಿತವಾಗಿದೆ. ಹಾಗೂ ವಿಡಂಬನೆ ಕಾಣಿಸಿದೆ. ಒಂದು ರಾಜ, ಅಲ್ಲಿನ ರಾಜ, ಅಲ್ಲಿ ಅರಣ್ಯ, ಅಲ್ಲಿನ ಆದಿವಾಸಿಗಳು, ಭಾರತದ

ಸ್ವಾತಂತ್ರ್ಯ, ಪ್ರಜಾಪ್ರಭುತ್ವ, ಪ್ರಜಾ ವಿವೇಕ ಎಲ್ಲವೂ ಇಲ್ಲಿ ಚಿತ್ರಣಗೊಂಡಿದೆ. ರಾಜನ ಆಧಿಪತ್ಯ ಕೊನೆಗೊಂಡ ಮೇಲೆ ಜನವಾದ, ದೇಸಿವಾದ ಕಾಣಿಸುತ್ತದೆ. ಭ್ರಷ್ಟಾಚಾರ ಹಾಗೂ ಲೂಟಿಯ ಚಿತ್ರಣವಿದೆ. ಆದರೆ ಕಾಲ ಪಲ್ಲಟವಾದಂತೆ ವ್ಯವಸ್ಥೆ ರೂಪುಗೊಳ್ಳುತ್ತದೆ. ಹಾಗೆ ರೂಪುಗೊಂಡ ವ್ಯವಸ್ಥೆ ಎಷ್ಟರ ಮಟ್ಟಿಗೆ ಜನಹಿತ? ನಿಸರ್ಗ ಸ್ನೇಹಿ ಎಂಬ ಪ್ರಶ್ನೆ ಇಲ್ಲಿನ ಬರಹದಲ್ಲಿ ಕಾಣಿಸಿದೆ. ಅರಸೊತ್ತಿಗೆ ಹೋಗಿ ಪ್ರಜಾಪ್ರಭುತ್ವ ಬಂದಾಗ ಅದರ ದೋಷಗಳು ಒಡೆದು ಕಾಣಲು ಶುರುವಾಗುತ್ತವೆ! ಇದು ಕಾದಂಬರಿಕಾರನ ಗ್ರಹಿಕೆಯ ತಾತ್ವಿಕತೆಯನ್ನು ಬಿಂಬಿಸಿದೆ. ಆಧುನಿಕತೆ ಬೇಕೆಂದರೆ ರಸ್ತೆ, ಅಣೆಕಟ್ಟು ಬೇಕು. ಅವು ಬೇಕೆಂದರೆ ಕಾಡಿನ ನಾಶ ಖಂಡಿತ!

ಈ ಹಿನ್ನೆಲೆಯಲ್ಲಿ ಅಭಿವೃದ್ಧಿ ಎಂದರೇನು? ಅದರ ಸ್ವರೂಪವೇನು ಎಂಬ ಪ್ರಶ್ನೆಗಳಿಗೆ ಉತ್ತರಿಸಲು ಕಾದಂಬರಿಕಾರ ಯತ್ನಿಸಿದ್ದಾರೆ. ಪ್ರಕೃತಿಯನ್ನು ನಂಬಿ ಬದುಕುವುದು ಒಂದು ಬಗೆ. ಆಧುನಿಕತೆಯ ಬದುಕು ಇನ್ನೊಂದು ಬಗೆ. ಎರಡರಲ್ಲಿ ಯಾವುದು ಸರಿ! ಆದಿವಾಸಿಗಳ ಬದುಕು ಸುಧಾರಣೆ ಕಾಣಬೇಕಲ್ಲವೇ? ವ್ಯಕ್ತಿ ದೋಷಗಳು ಕಾಣಿಸಿದರೆ ಅದಕ್ಕೆ ಅಭಿವೃದ್ಧಿಯನ್ನು ದೂರಬೇಕೆ? ಆಳುವವರ ಹಿತಾಸಕ್ತಿ ಜನವಿರೋಧಿಯಾಗಿದ್ದರೆ ಪ್ರಜಾಪ್ರಭುತ್ವದ ದೋಷವೇನು? ಇಂತಹ ಪ್ರಶ್ನೆಗಳ ಹಿಂದೆ ಈ ಕಾದಂಬರಿಯ ಕೆಲ ಪಾತ್ರಗಳ ಚಿತ್ರಣ ಗಮನಸೆಳೆಯುವಂತೆ ತಾತ್ವಿಕ ನೆಲೆ ಕಾಣಸಿಗುತ್ತದೆ. ಅರುಣಾಚಲಯ್ಯ, ವಾಮನರಾಯ, ನಾಗಲಾಂಬೆ, ಕಾಂಚನಮಾಲೆ ಮೊದಲಾದ ಪಾತ್ರಗಳು ಕಾದಂಬರಿಕಾರನ ತಾತ್ವಿಕತೆಗೆ ಅನುಸಾರವಾಗಿ ರೂಪುಗೊಂಡಿವೆ. ಮಾನವನ ದುರಾಸೆಗೆ ಕನ್ನಡಿ ಹಿಡಿಯುವಂತೆ ಕಾದಂಬರಿಕಾರು ವಾಚ್ಯವಾಗಿಯೇ ಕೆಲವು ಪ್ರಶ್ನೆ ಕೇಳುತ್ತಾರೆ: ಇಂತ ಜೀವನದಲ್ಲಿ ಅರ್ಥವೇನಿದೆ? ಆದರ್ಶವೇನಿದೆ? ಸಾರ್ವಜನಿಕ ಸೇವಾಕಾಂಕ್ಷೆ ಎಲ್ಲಿದೆ?

ಇಲ್ಲಿನ ನದಿ, ನಿಸರ್ಗ, ಕ್ಷಾಮ, ನೀರು, ಬೆಳೆ, ಕಾಡು, ಇವುಗಳ ವಿನಾಶ ಅನೇಕ ಪ್ರಶ್ನೆಗಳಿಗೆ ಕಾರಣವಾಗುತ್ತವೆ. ಇದಕ್ಕೆ ಮೂಲ ನಿಸರ್ಗ ನಾಶ! ಅದಕ್ಕೆ ಕಾರಣ ಮನುಷ್ಯನ ಕ್ರೌರ್ಯ! ಇದರ ಭೀಕರ ಪರಿಣಾಮ ಎದುರಿಸುವವರು ಅಲ್ಲಿನ ಮೂಲನಿವಾಸಿಗಳು. ಪ್ರಗತಿ, ಬದಲಾವಣೆ, ಆಧುನಿಕತೆ ಎಷ್ಟರಮಟ್ಟಿಗೆ ಮಾನವ ಸ್ನೇಹಿ ಆಗಿವೆ? ಎಂಬ ಮೂಲ ಪ್ರಶ್ನೆಯನ್ನು ಇಲ್ಲಿನ ಚಿತ್ರಣ ಬಿಂಬಿಸಿದೆ.

ಕುಡಿಯರ ಕೂಸು: ಮಲೆ ಕುಡಿಯರ ಜೀವನ ವಿನ್ಯಾಸ ಒಳಗೊಂಡಿರುವ ಸುಂದರ ಕಥಾನಕ ಈ ಕಾದಂಬರಿಯಲ್ಲಿ ಮೈ ತಳೆದಿದೆ. ಇಲ್ಲಿ ನಾಯಕ-ನಾಯಕಿಗಿಂತ ಭಿನ್ನವಾದ ಪಾತ್ರ ಚಿತ್ರಣವಿದೆ. ಇಲ್ಲಿ ಪ್ರತಿ ಪಾತ್ರವೂ ಗಮನಾರ್ಹವಾಗಿ ಚಿತ್ರಣಗೊಂಡಿವೆ. ಕಾಲಕ್ಕೆ ತಕ್ಕಂತೆ ಆದ ಬದಲಾವಣೆ ಒಪ್ಪಿ ಅಭಿವೃದ್ಧಿಯತ್ತ ಹೆಜ್ಜೆ ಹಾಕಿದ ಶ್ರಮಿಕರ ಚಿತ್ರಣ ಇಲ್ಲಿದೆ! ಇಲ್ಲಿನ ಕೆಂಚ, ಕರಿಯ. ಚೂಡ, ತಿಮ್ಮ, ಕೆಂಪಿ, ಗಿಡ್ಡ ವಿಶಿಷ್ಟವಾಗಿ ರೂಪುಗೊಂಡಿದ್ದಾರೆ.

ಈ ಕಾದಂಬರಿಯಲ್ಲಿ ಮೂಡಿ ಬಂದಿರುವ ಸಾಮಾಜಿಕ ವಿನ್ಯಾಸ ಗಮನಾರ್ಹ. ಇಲ್ಲಿನ ಕಿರಿಮಲೆ ಮತ್ತು ಹಿರಿಮಲೆಯ ಜನರಿಗೆ ದೈವ ಎನಿಸಿಕೊಂಡಿರುವುದು 'ಕಲ್ಕುಡ' ಇದು ದೈವ್ವ! ದೈವವಾಗಿರುವುದು ವಿಚಿತ್ರ ಎನಿಸಿದರೂ ಅದಕ್ಕೆ ಕಾರಣ ಕುಡಿಯರ ಹೆದರಿಕೆ! ಅವನೇ ಅವರ ಪಾಲಿಗೆ ನಿಸರ್ಗ. ಅವನಿಗೆ ಗುಡಿ ಇದೆ. ಪೂಜೆ ನಡೆಯುತ್ತದೆ. ಇಲ್ಲಿನ ಗುರಿಕಾರ ಕೆಂಚ ನಿಸರ್ಗಪ್ರೇಮಿ. ಇವನ ವಿಚಿತ್ರ ನಂಬಿಕೆ ಪ್ರಕಾರ ತಿಪ್ಪನ ಸಾವಿಗೆ 'ಕಲ್ಕುಡ'ನ ಕೋಲೆ ಆಗದೆ ಇರುವುದು! ಕಾದಂಬರಿಯ ಹೊರ ಪ್ರಪಂಚಕ್ಕೆ ಇವನ ನಂಬಿಕೆ ವಿಚಿತ್ರ ಎನಿಸಿದರೂ, ಅವನ ಗ್ರಹಿಕೆ ಮತ್ತು ನಂಬಿಕೆಯಲ್ಲಿ ಅದು ಅನನ್ಯ. ಇದು ತಿಪ್ಪನ ಮೈಕಟ್ಟು ವರ್ಣನೆ, ಸಾಹಸ ಮನೋಭಾವ ಚಿತ್ರಣದಲ್ಲಿ ಧ್ವನಿಸಿದೆ. ಕೆಂಚನ ಪ್ರಕಾರ ತಿಪ್ಪನ ಸಾವು 'ಕಲ್ಕುಡ'ನ ಕಾರಣಕ್ಕೆ ಎಂಬ ನಂಬಿಕೆಯ ಹಿಂದಿರುವ ಸಾಂಸ್ಕೃತಿಕ ನೆಲೆ ಚರ್ಚಾರ್ಹ.

ಕರಿಯ ಹುಟ್ಟಿದಾಗ ಅವನಿಗಿಟ್ಟಿದ್ದ ಹೆಸರು 'ಸುಬ್ರಮಣಿ'! ಮೊಮ್ಮಗ ಕರಿಯ ಕೂಡ ನಿಸರ್ಗಪ್ರೇಮಿ. ತನ್ನ ಸೊಸೆ ಸತ್ತ ನಂತರ ಕೆಂಚ ಕರಿಯನನ್ನು ಎತ್ತಿಕೊಂಡು ಹೊರಡುವ ಚಿತ್ರಣದಲ್ಲಿ ಪಾತ್ರವೊಂದರ ಚಲನಶೀಲತೆ ಕಾಣಿಸುತ್ತದೆ. ಆ ಸಂದರ್ಭದ ಕೆಲ ಮಾತುಗಳು (ಕಾದಂಬರಿಕಾರರ) ಇಲ್ಲಿವೆ. "ಹೊಲ ಗದ್ದೆಗಳನ್ನು ಮಾಡಿಕೊಂಡಿರುವ ಭಟ್ಟರಿಗೆ, ಬಂಟರಿಗೆ, ಗೌಡರುಗಳಿಗೆ, ಒಮ್ಮೆ ನೆಟ್ಟ ನೆಲದಲ್ಲಿ ತಿರುಗಿ ನೆಡುವ ಹವ್ಯಾಸ ಕುಡಿಯರಿಗೆ ಎಂದೂ ಇದ್ದಿರಲಿಲ್ಲ, ಅವರು ನೆಗಿಲು ನೊಗ ಪಡೆದವರಲ್ಲ: ಅದಕ್ಕಾಗಿ ಜಾನುವಾರು ಸಾಕಿದವರಲ್ಲ, ಏನಿದ್ದರೂ ಕೈಕೆಲಸ ಅವರದ್ದು"[೧]

ಈ ಚಿತ್ರಣ ಕುಡಿಯರ ಜೀವನ ಪದ್ಧತಿ, ಕೃಷಿ ಪದ್ಧತಿ ಹೇಗೆ ಸ್ಥಳೀಯ ಮತ್ತು ಪರಿಸರ ಅವಶ್ಯಕತೆಯಿಂದ ಕೂಡಿತ್ತು ಎಂದು ಕಾದಂಬರಿಕಾರ ತಳೆದ ಗ್ರಹಿಕೆಯನ್ನು ಬಿಂಬಿಸಿದೆ. ಭಯ ಅವರ ವಲಸೆ ಬದುಕಿಗೆ ಪೂರಕವಾಗಿರುವ ಚಿತ್ರಣ ಕೂಡ ಚಲನಶೀಲತೆಗೆ ಕಾರಣವಾಗುವುದನ್ನು ಗಮನಿಸಬೇಕು. ನಿಸರ್ಗದಲ್ಲಿ ಆಗುವ ಬದಲಾವಣೆ ಮನುಷ್ಯನ ಏಳಿಗೆಗೆ ಪೂರಕವೆ? ಮಾರಕವೇ? ಎಂಬ 'ಸಣ್ಣದನಿ' ಇಲ್ಲಿ ಗಮನಾರ್ಹ!

ನಿಸರ್ಗದ ಮುನಿಸು ಮನುಷ್ಯನ ವಲಸೆಗೆ ಕಾರಣವಾಗುವ ಇಲ್ಲಿನ ಚಿತ್ರಣ ಧನಾತ್ಮಕವೋ, ಋಣಾತ್ಮಕವೋ ಎಂಬ ಚರ್ಚೆಗಿಂತಲೂ 'ಚಲನಶೀಲತೆ' ಅನಿವಾರ್ಯ ಎಂಬಂತಾಗುವ ಬಗೆ ಕುತೂಹಲ ಮೂಡಿಸುತ್ತದೆ. ಇದು ಮಾನವನ ಬದುಕು ಮತ್ತು ನಿಸರ್ಗದ ಸಂಬಂಧಗಳ ಒಂದು ಆಯಾಮವನ್ನು ಬಿಂಬಿಸಿದೆ. ಹಾಗಾಗಿ ಇಲ್ಲಿನ ಕುಡಿಯರು ನಾಗರೀಕ ನೆಲೆಗಿಂತಲೂ ಹೆಚ್ಚಾಗಿ ಆದಿಮಾನವ ನೆಲೆಗೆ ಹತ್ತಿರವಾಗಿ ಚಿತ್ರಣಗೊಂಡಿದ್ದಾರೆ ಎಂದು ಭಾವಿಸಬಹುದು. ಇದನ್ನು ಪುಷ್ಟೀಕರಿಸುವ ಚಿತ್ರಣ ಇಲ್ಲಿದೆ. *"ದೇವರಿಗಾಗಿ ಯಾವುದೋ ಕಾಯಿಯ ಕೊಬ್ಬು, ನಾರುಗಳನ್ನು ಗುದ್ದಿ ಮಾಡಿದ ಮುಂಬತ್ತಿಯನ್ನು ನೆಟ್ಟು ಕಡ್ಡಿ ಉರಿಸಿ ಬೆಳಗಿಸಿದ ಅವರ ಹಿರಿಯರು ಆ ದಿನಗಳಲ್ಲಿ ಚಕಮಕಿ ಕಲ್ಲು ಬಡಿದು ಅದನ್ನು ಹೊತ್ತಿಸುತ್ತಿದ್ದರಂತೆ......"*[೨]

---

೧. ಶಿವರಾಮ ಕಾರಂತ, ಕುಡಿಯರ ಕೂಸು, ಪುಟ ೧೦-೧೧
೨. ಅದೇ, ಪುಟ ೧೫

ಕುಡಿಯರು ಭೂಮಿಯನ್ನು ಕುಮರಿ ಬೇಸಾಯಕ್ಕೆ ಬಳಸುತ್ತಾರೆ. ಅಲ್ಲಿ ರಾಗಿ, ಭತ್ತ ಬೆಳೆಯುತ್ತಾರೆ. ಕಾಡಿನ ಜಂತುಗಳು ಅವರಿಗೆ ಚಿರಪರಿಚಿತ! ಹಾಗಾಗಿ ಅವರ ಬದುಕು ಬುಡಕಟ್ಟು ಸಂಸ್ಕೃತಿಯ ಲಕ್ಷಣಗಳನ್ನು ಹೊಂದಿದೆ. ಕುಡಿಯರ ಬದುಕು ವಾಣಿಜ್ಯೀಕ ದೃಷ್ಟಿಕೋನ ಹೊಂದಿರಲಿಲ್ಲ ಎಂಬುದನ್ನು ಈ ಮಾತುಗಳು ಧ್ವನಿಸುತ್ತವೆ. "*ಅರಣ್ಯದಲ್ಲಿ ಎಲ್ಲಿ ಕಂಡರಲ್ಲಿ ತನ್ನಷ್ಟಕ್ಕೆ ಹುಟ್ಟಿ ಬೆಳೆಯುತ್ತಿದ್ದ ಏಲಕ್ಕಿಯನ್ನು ಅವರಾದರೂ ಏನು ಮಾಡಬೇಕು? ಅದಾದರೂ ನಿತ್ಯ ತಿನ್ನುವ ಅನ್ನವಲ್ಲ...................*"[3] ಬಲ್ಲಾಳ, ತಿರುಮಲಭಟ್ಟರಿಗಿಂತ ಭಿನ್ನವಾದ ನಿಲುವು ಕುಡಿಯರದ್ದು ಎಂಬುದು ಒಂದು ಜೀವನಕ್ರಮ ಚಿಂತನಾ ನೆಲೆಯನ್ನು ಬಿಂಬಿಸಿದೆ.

ಪ್ರಕೃತಿ ವರ್ಣನೆ, ಮನುಷ್ಯ ಚಿತ್ರಣ ಅವಿನಾಭಾವ ಎಂಬಂತೆ ಇಲ್ಲಿ ನಿರೂಪಿತವಾಗಿದೆ. ಪ್ರಾಣಿ ಚಿತ್ರಣವೂ ಇದಕ್ಕೆ ಹೊರತಾಗಿಲ್ಲ. ಹಿಂಡು-ಹಿಂಡು ಆನೆಗಳ ದಾಳಿ, ಅದಕ್ಕೆ ಕಾರಣ, ನಂತರದ ಬೇಟೆ ಮೊದಲಾದ ಚಿತ್ರಣ ಇಡೀ ಪರಿಸರ ಹೊಂದಿರಬಹುದಾದ ಸಂಬಂಧಗಳ ಭಿನ್ನ ಭಿನ್ನ ರೂಪಗಳನ್ನು ದಾಖಲಿಸಿದೆ ಎನ್ನಬಹುದು.

ಇಲ್ಲಿನ ಮಳೆ, ಅದು ಸೃಷ್ಟಿಸುವ ಅವಾಂತರ, ಪ್ರವಾಹ ದಾಟಿ ಆಚೆ ಹೋಗಲಾರದ ಬದುಕು, ಅದಕ್ಕಾಗಿ ಕುಡಿಯರು ನಿರ್ಮಿಸುವ ಸೇತುವೆ, ಕಷ್ಟದ ಸನ್ನಿವೇಶದಲ್ಲೂ ಬದುಕು ಕ್ರಿಯಾಶೀಲವಾಗಿರುವ ಬಗೆಯನ್ನು ಚಿತ್ರಿಸಿದೆ. ಕಾದಂಬರಿಕಾರ ಮನುಷ್ಯ ಬದುಕಿನ ವಿವರಗಳನ್ನು ಕಟ್ಟಿಕೊಡುವಷ್ಟು ಸೂಕ್ಷ್ಮವಾಗಿ, ತಲ್ಲೀನವಾಗಿ ಪ್ರಕೃತಿಯ ಸುಂದರ ಮತ್ತು ಭೀಕರ ಮುಖಗಳನ್ನು ಚಿತ್ರಿಸಿರುವುದು ವಿಶೇಷ ಎನಿಸುತ್ತದೆ. ಸಾಲು ಸಾಲು ಪರ್ವತಗಳು, ಹಸಿರು, ನೀರು, ಬಂಡೆ, ಹೂಗಳ ವರ್ಣನೆಯಲ್ಲಿ ಅದನ್ನು ಗಮನಿಸಬಹುದು. ಇಲ್ಲಿನ ಸೌಂದರ್ಯ ಆಂತರಿಕವಾದುದು. ಅಂದರೆ ಅದು ಕುಡಿಯರ ಬದುಕಿನಲ್ಲಿ ಹಾಸುಹೊಕ್ಕಾಗಿದೆ. ಅದು ಅವರ ಬದುಕಿನ ಹೊರಗಿನದು, ಕೃತಕ ಎಂಬಂತೆ ಭಾಸವಾಗದಂತ ವರ್ಣನೆ ಈ ಕಾದಂಬರಿಯ ವಿಶೇಷ ಅಂಶ. ಕುಡಿಯರ ಭಯ, ವಿಸ್ಮಯಗಳು ಅದನ್ನು ಬಿಂಬಿಸಿವೆ. ಚಳಿ, ಮಳೆ, ನೀರನ್ನು ಅನುಭವಿಸುವ ಅವರ ಬದುಕೇ ಅದನ್ನು ಹೇಳುತ್ತದೆ.

ಕುಡಿಯರ ಕೃಷಿ ಭಿನ್ನ. ಅದು ಸಹಜ ಕೃಷಿ, ನಿಸರ್ಗಕೃಷಿ, ಒಂದು ಮಳೆಗಾಲದಲ್ಲಿ ಕಾಡನ್ನು ಸವರಿ, ಬೇಸಾಯ ಮಾಡಿ, ರಾಗಿ ಭತ್ತ ಬೆಳೆದರೆ ಮುಗಿಯಿತು. ಮತ್ತೆ ಅಲ್ಲಿ ಕಾಡು ಬೆಳೆಯುತ್ತದೆ! ಬೇಟೆ, ಆಹಾರ ಸಂಗ್ರಹ ಕೂಡ ಇದೇ ಮಾದರಿಯದ್ದು. ಈ ಬದುಕಿನಲ್ಲಿ ಸ್ತ್ರೀಯರೂ ಅಷ್ಟೇ ಉತ್ಸಾಹದಿಂದ, ಕ್ರಿಯಾಶೀಲರಾಗಿ ಚಿತ್ರಣಗೊಂಡಿರುವುದು ವಿಶೇಷ. ಕಾದಂಬರಿಕಾರನ ಈ ಮಾತು ಕುಡಿಯರ ಬದುಕುವ ಮತ್ತು ಚಿಂತಿಸುವ ಕ್ರಮವನ್ನು ಬಿಂಬಿಸಿದೆ. 'ರಸಿಕನಾದ ವ್ಯಕ್ತಿಗೆ ಈ ಅರಣ್ಯ ಸೌಂದರ್ಯವೆಲ್ಲ ಮನಮೋಹಕವಾಗಿ ಕಾಣಿಸಬಹುದಾದರೂ,

---

೩. ಅದೇ. ಪುಟ-೧೫

ಅದರಲ್ಲೇ ಬಾಳಿ, ಬದುಕಿ ಜೀವನ ಸಾಗರ ಸಾಗಿಸುವ ಮಲೆ ಕುಡಿಯರಿಗೆ ಯಾವ ಕಾವ್ಯ ದೃಷ್ಟಿ ಬರಬೇಕು'?

ಕಾಳ್ಗಿಚ್ಚು ಕುಡಿಯರ ಬದುಕಲ್ಲಿ ಉಂಟುಮಾಡುವ ತಲ್ಲಣದ ಚಿತ್ರಣ ಕೂಡ ಗಮನ ಸೆಳೆಯುತ್ತದೆ. 'ಅಷ್ಟು ಸಮೀಪದಿಂದ ಅರಣ್ಯ ಸ್ಮಶಾನದ ಇಂಥ ರೌದ್ರ ಚಿತ್ರಣವನ್ನು ಇಷ್ಟು ಸಮೀಪದಿಂದ ಅವನೆಂದೂ ಕಂಡವನಲ್ಲ' ಎಂಬ ಕಾದಂಬರಿಕಾರರ ಉದ್ಗಾರ ಅದನ್ನು ಬಿಂಬಿಸಿದೆ. ಕಾಡಿನ ಬೆಂಕಿ, ಆನೆ, ಕಾಟಿ, ಹುಲಿಗಳನ್ನು ಆವರಿಸುತ್ತದೆ ಎಂಬ ಯೋಚನೆ ಕೂಡ ಆ ಬದುಕಿನ ಸಹಚರ್ಯವನ್ನು ಧ್ವನಿಸಿದೆ.

ಕಾದಂಬರಿಯ ಈ ಭಾಗದ ಚಿತ್ರಣ ಓದಿದಾಗ ಈ ಮಾತು ಸಮಂಜಸ ಎನಿಸುತ್ತವೆ. *"ಕಾರಂತರ ಬರಹದಲ್ಲಿ ಒಟ್ಟಿನ ಮೇಲೆ ಕಲೆಯ 'ನಿರ್ಮಿತಿ'ಗಿಂತ ನಿಸರ್ಗದ ಆವಿಷ್ಕೃತಿ ಹೆಚ್ಚು. ಇಲ್ಲಿ ನಿಸರ್ಗವೆಂದರೆ ಕಡಲು, ಬೆಟ್ಟ, ಹೊಳೆ ಕಾಡು ಮೊದಲಾದ ಅಚೇತನ ಪ್ರಕೃತಿ ಮಾತ್ರವಲ್ಲ. ವಿವಿಧ ವಿಚಿತ್ರವಾದ ಮಾನವ ಪ್ರಕೃತಿಯೂ ಅವರಲ್ಲಿ ಹಾಸು ಹೊಕ್ಕಾಗಿ ಸೇರುತ್ತದೆ".*[೪]

ಒಟ್ಟಾರೆ ಮಾನವ ಮತ್ತು ಪ್ರಕೃತಿ ಸಮಾನಾಂತರ ಸಂಬಂಧ ಹೊಂದಿರಬೇಕು ಎಂಬ ಆಶಯ 'ಕುಡಿಯರ ಕೂಸು' ಕಾದಂಬರಿಯ ಮುಖ್ಯ ನೆಲೆ. ನಿಸರ್ಗ ಪೋಷಣೆ, ನಿಸರ್ಗನಾಶ, ಆಧುನಿಕತೆ, ಸಂಸ್ಕೃತಿ ಮೊದಲಾದ ಗ್ರಹಿಕೆಗಳು ಇಲ್ಲಿನ ಚಿತ್ರಣದ ತಾತ್ವಿಕತೆಯ ನೆಲೆಯಾಗಿವೆ. ಆದಿ ಕುಡಿಯರು ಪ್ರಕೃತಿಯ ಪೋಷಕರೂ ಆಗಿದ್ದರು ಎಂಬ ಚಿತ್ರಣ ನಿಸರ್ಗವನ್ನು ವಾಣಿಜ್ಯಕವಾಗಿ ನೋಡುವ ಆಧುನಿಕ ದೃಷ್ಟಿಯನ್ನು ಪ್ರಶ್ನಿಸುವಂತೆ ಇದೆ. ಮಾನವ ಪ್ರಕೃತಿಗೆ ಇರುವ ವಿವಿಧ ಮುಖಗಳನ್ನು ಕಾದಂಬರಿಕಾರ 'ಪ್ರಕೃತಿ'ಯ ವಿವಿಧ ಮುಖಗಳೊಂದಿಗೆ ತುಲನೆ ಮಾಡಿದಂತೆ ನಿರೂಪಿಸಿರುವುದು ಕಾದಂಬರಿಕಾರರ ಗ್ರಹಿಕೆಯಲ್ಲಿ ವೇದ್ಯವಾಗುತ್ತದೆ.

'ಮರಳಿ ಮಣ್ಣಿಗೆ' ಕಾದಂಬರಿ ಮನುಷ್ಯ ತನ್ನ ಜೀವನಕ್ಕಾಗಿ ನಿಸರ್ಗವನ್ನು ಅವಲಂಬಿಸಿ ಬದುಕುವ ಅನಿವಾರ್ಯತೆಯನ್ನು ಹೇಳುತ್ತದೆ.ಇಲ್ಲಿ ಬಡತನವೆನ್ನುವುದು ತುಂಬಾ ಪ್ರಮುಖವಾದುದು. ಈ ಬಡತನದಿಂದ ಬಿಡಿಸಿಕೊಳ್ಳಲು ಪ್ರಯತ್ನಿಸುವ ಪಾತ್ರಗಳು ಮೂರು ತಲೆಮಾರುಗಳಲ್ಲಿ ಕಂಡು ಬರುತ್ತದೆ. ಅವರಲ್ಲಿ ಮೊದಲನೆ ತಲೆಮಾರು ರಾಮ ಐತಾಳ, ಸರಸೋತಿ, ಪಾರೋತಿ ಮತ್ತು ಸತ್ಯಬಾಮೆ, ಎರಡನೇ ತಲೆಮಾರಿನ ಲಚ್ಚ ಹಾಗೂ ಅವನ ಪತ್ನಿ ನಾಗವೇಣಿ ಪ್ರಮುಖರು. ಇವರಿಬ್ಬರ ಮಗನೇ ಮೂರನೆ ತಲೆಮಾರಿನ ರಾಮ.

ಈ ಮೂರು ತಲೆಮಾರುಗಳು ನಿಸರ್ಗದ ಚಲನಶೀಲತೆಯೊಂದಿಗೆ ಹೋರಾಟ ಮಾಡುವ ಮೂಲಕ ವಿವಿಧ ನೆಲೆಗಳಲ್ಲಿ ಗುರುತಿಸಿಕೊಳ್ಳುತ್ತಾರೆ. ಇಲ್ಲಿ ರಾಮ ಐತಾಳರಿಗೆ ಈ ನಿಸರ್ಗದ ಚಲನಶೀಲತೆಯೊಂದಿಗೆ ಹೊಂದಿಕೊಳ್ಳುವುದು, ಅವರ ವ್ಯಕ್ತಿತ್ವದ ಅನಿವಾರ್ಯ ಸಂಗತಿಯಾಗಿದೆ.

---

೪ ಕಾದಂಬರಿಕಾರರಾಗಿ ಕಾರಂತ (ಸಂ), ಜಿ.ಎಸ್.ಎಸ್, ಪು. [illegible]

ಆದರೆ ಇವರ ಮಗ ಲಚ್ಚ ನಿಸರ್ಗದಿಂದ ತಪ್ಪಿಸಿಕೊಂಡು ಹೋಗಿ ಅವನು ಪರದೇಶಿಯಾಗುತ್ತಾನೆ. ಆದರೆ ನಾಗವೇಣಿ ಹೊರಗಿನಿಂದ ಬಂದವಳಾದರೂ ಸಹ, ನೆಲದೊಂದಿಗಿನ ಹೊರಟಾದ ಬದುಕಿನ ಕಣದಲ್ಲಿ ಬುದ್ಧಿಪೂರ್ವಕವಾಗಿ ಗೆಲ್ಲುತ್ತಾಳೆ. ರಾಮ ವಿದ್ಯೆಯನ್ನು ಪಡೆದವನು. ಅವನು ಬಹು ಸಂಸ್ಕೃತಿಗಳನ್ನು ತಿಳಿದುಕೊಂಡು, ಜೀವನ ಸುಖಕ್ಕಾಗಿ ಮತ್ತು ತನ್ನ ತಾಯಿಗಾಗಿ ಅವನು ನಿಸರ್ಗದ ಚಲನಶೀಲತೆಗೆ ತನ್ನನ್ನು ಒಡ್ಡಿಕೊಂಡು ಮಣ್ಣಿನ ಮಗುವಾಗುವುದು ತುಂಬಾ ಪ್ರಮುಖವಾಗಿದೆ. ಕಾರಂತರು ಈ ಮೂರು ತಲೆಮಾರುಗಳ ಕಥೆಯನ್ನು ಹೇಳುವಾಗ ಅವರ ದೃಷ್ಟಿಕೋನ ನಿಸರ್ಗ-ಮಾನವ ಸಂಬಂಧಗಳೇ ಆಗಿರುತ್ತದೆ. ಈ ನಿಸರ್ಗವು ತನ್ನ ಚಲನಶೀಲತೆಯನ್ನು ಮಳೆ, ಗಾಳಿ, ಕಡಲು ಮತ್ತು ಬಿಸಿಲಿನ ಮೂಲಕ ಪ್ರಕಟಪಡಿಸುತ್ತದೆ ಎನ್ನುವುದು ಪ್ರಮುಖವಾದ ಅಂಶ.

'ಮರಳಿ ಮಣ್ಣಿಗೆ' ಕಾದಂಬರಿ ರಾಮ ಐತಾಳ ಮತ್ತು ಪಾರೋತಿಯರ ಮದುವೆ ವರ್ಣನೆಯಿಂದ ಪ್ರಾರಂಭವಾಗುತ್ತದೆ. ರಾಮ ಐತಾಳರ ತಂದೆ ಕೋದಂಡರಾಮ ಐತಾಳ ತಮ್ಮ ಮಗನ ಮದುವೆಯನ್ನು ನಾರಾಯಣಮಯ್ಯರ ಮಗಳು ಪಾರೋತಿಯೊಂದಿಗೆ ನಿಶ್ಚಯ ಮಾಡುತ್ತಾರೆ. ನಾರಾಯಣಮಯ್ಯ ಮಣೂರು ಗ್ರಾಮದವರು. ಪಾರೋತಿಯ ಮನೆಯಿರುವುದು ಅರಾಲಿನ ಒಂದು ಬದಿಯಲ್ಲಿ. ಮನೆಯ ಸುತ್ತಲಿನಲ್ಲಿ ಗೋವೆಯ ಮರಳಿಂದ ತುಂಬಿದೆ. ಆ ಮನೆ ಓಡ್ಲು ಹೊದಿಸದೆ ಇದ್ದು: ಬರಿ ಹುಲ್ಲಿನ ಚಾವಣಿಯಿದೆ. ಇದರಿಂದ ರುಮು ರುಮು ಕಡಲು ಗಾಳಿ ಬಿಸುವುದರಿಂದ, ಅಂತ ಸ್ಥಳದಲ್ಲಿ ಮನೆ ನಿಂತಿರುವುದೆ ಒಂದು ಆಶ್ಚರ್ಯ ಎಂದು ಕಾರಂತರು ಆ ವಾತಾವರಣವನ್ನು ವರ್ಣಿಸುತ್ತಾರೆ. ಇಂತ ಸಂದರ್ಭದಲ್ಲಿ ಮದುವೆಗಾಗಿ ದಿಬ್ಬಣಕ್ಕೆ ಹುಡುಗನ ಕಡೆಯವರು ಹೊರಟಾಗ ಮಳೆಯು ಒಂದೇ ಸಮನೆ ಸುರಿಸುತ್ತದೆ. ಮಳೆಯಲ್ಲೇ ದಿಬ್ಬಣ ಹೊರಡುತ್ತದೆ. ಆಗ 'ಮುಖ, ಎದೆ, ಕಾಲುಗಳು ಒದ್ದೆಯಾದರು ಬೆನ್ನು ಮಾತ್ರ ಒಬ್ಬರಿಂದೊಬ್ಬರು ದೂರ ಸರಿದರೂ ಕಾಣಿಸುವ ಹಾಗಿಲ್ಲ. ಚೆದುರಿ ಹೋದ ಹಿಂಡನ್ನು ಒಡಗೂಡಿಸಿ ಮನೆಗೆ ತಂದಂಥಹ ಕೆಲಸ ಆಯಿತು, ಆ ದಿನ ದಿಬ್ಬಣ.' ಇದು ನಿಸರ್ಗದ ಚಲನಶೀಲತೆಯ ಆಯಾಮ ಗಳಲ್ಲಿ ಒಂದಾಗಿದೆ. ಈ ಮಳೆಯು ಮನೆಯಲ್ಲಿ ಭೋರ್ಗರೆಯುವಂತೆ ಹೊಡೆಯಿತು ಇದನ್ನು ಕಾರಂತರು- *"ಪಡುವಣ ದಿಕ್ಕಿಗೆ ಕಡಲು, ತೆಂಕಣದಲ್ಲಿ ನದಿ ಮತ್ತು ಕಡಲಿನ ಸಂಗಮ, ಮೂಡಣದಲ್ಲಿ ನದಿ. ಅದೆ ಮದುವೆಯ ವರ್ಷ ಕೋಡಿ ಕಡಲು ನೀರಿಗೆ ಹುಚ್ಚು ಅವೇಶ ಬಂದಿತ್ತು. ಕೋದಂಡ ಐತಾಳರ ಮಗನ ಮದುವೆ ಮಣೂರಿನಲ್ಲಿ ನಡೆಯುತ್ತಿರುವಾಗಲೇ ಅವರ ತೆಂಗಿನ ತೋಟದಿಂದ ಆರೆಂಟು ಮರಗಳು ಕಡಲಿಗೆ ತುತ್ತಾದವು. ಈ ಪಾಟಿ ಕಡಲಿಗೆ ಹುಚ್ಚು ಹಿಡಿದುದನ್ನು ನನ್ನ ಅಜ್ಜನ ಕಾಲದಿಂದಲೂ ಕಾಣೆ ಎಂದು ಕೋದಂಡ ಐತಾಳರು ಹೇಳುತ್ತಿದ್ದರು."*[೫೫] ಈ ತೆರೆನಾದ ವಾತಾವರಣದಿಂದ ಮನುಷ್ಯ ತಾನಾಗಿಯೇ ತನ್ನ ಬದುಕಿನ ಚಲನಶೀಲತೆಯನ್ನು ನಿಸರ್ಗಕ್ಕೆ ತಕ್ಕಂತೆ ಮಾರ್ಪಡಿಸಿಕೊಳ್ಳುತ್ತಾನೆ. ಇಲ್ಲದ ಪಕ್ಷದಲ್ಲಿ ಅವನಿಗೆ ಉಳಿಗಾಲವಿಲ್ಲದಂತೆ ಆಗುತ್ತದೆ ಎಂಬುದನ್ನು ಕಾರಂತರು ಈ ಮೂಲಕ ವ್ಯಕ್ತಪಡಿಸುತ್ತಾರೆ.

---

೫೫ ಶಿವರಾಮ ಕಾರಂತ, ಮರಳಿ ಮಣ್ಣಿಗೆ, ಪುಟ-೧೬

ಪಾರೋತಿ ಮತ್ತು ಐತಾಳರಿಗೆ ಮದುವೆ ಆದ ನಂತರ ಅವರು ಪ್ರತಿ ದಿನ ನಿಸರ್ಗದ ಚಲನಶೀಲತೆಯ ಆಯಾಮಗಳೊಂದಿಗೆ ಮುಖಾಮುಖಿಯಾಗಿ ಅದರ ವೈಚಿತ್ರಗಳಿಗೆ ತಕ್ಕಂತೆ ಹೊಂದಿಕೊಂಡು ಜೀವಿಸುತ್ತಾರೆ. ಈ ಅವಲಂಬನೆ ರಾಮ ಐತಾಳರಿಗೆ ಬದುಕಿನ ಪ್ರಶ್ನೆಯಾಗಿದೆ. ಆದ್ದರಿಂದ ಪೌರೋಹಿತ್ಯಕ್ಕಾಗಿ ಅವರು ನದಿಯನ್ನು ದಿನವೂ ದಾಟುತ್ತಾರೆ. ಈ ಕುರಿತು ಕಾರಂತರು *"ರಾಮ ಐತಾಳರ ಮನೆ ಇರುವುದು ಅಳುವೆ ಬಾಗಿಲಿಂದ ಬಡಗು ದಿಕ್ಕಿಗೆ ಅಲ್ಲಿ ಕಡಲಿನ ನೀರಿಗೆ ಕಾಲು ಹಾಕುವುದೂ ಸರಿಯೆ: ಆ ಯಮರಾಯನಿಗೆ ಸುಂಕ ತೆರುವುದೂ ಸರಿಯೇ ಬಲು ದೂರದ ಕಾಡುಗಳಿಂದ ಹರಿದು ಬರುವ ನದಿಯ ನೀರು, ಮಳೆಗಾಲದಲ್ಲಿ ಕಟ್ಟಿಗೆ ಮರಗಳನ್ನು ಬಹಳವಾಗಿ ತೇಲಿಸಿಕೊಂಡು ಬರುತ್ತದೆ. ಅದನ್ನು ಹೋಗಿ ಹಿಡಿದು ತರುವ ಕೆಲಸ ಸುಲಭದ್ದಲ್ಲ. ಹಾಗೆ ಮಾಡುವುದಕ್ಕೆ ಅಳುವೆಯನ್ನು ಬಿಟ್ಟು ಮತ್ತು ಉತ್ತರಕ್ಕೆ ಎರಡು ಮೈಲು ದೂರದ ಕಡಲು ಕಿನಾರೆಗೆ ಹೋಗಬೇಕು"*.[೧] ರಾಮ ಐತಾಳರು ನದಿಯನ್ನು ದಾಟುವ ಮೂಲಕ ನಿಸರ್ಗದ ಚಲನಶೀಲತೆಗೆ ತನ್ನನ್ನು ದಿನವೂ ಒಡ್ಡಿಕೊಳ್ಳುತ್ತಿರುತ್ತಾರೆ. ಆ ಮೂಲಕ ನಿಸರ್ಗದಿಂದ ಲಾಭ ಪಡೆಯುತ್ತಾರೆ. ಈ ಪ್ರವಾಹದಲ್ಲಿ ಮರದಗೆಲ್ಲೂ ಒಂದೊಂದು ಸಲ ಮರದ ದೊಡ್ಡ ಮೋಪೇ ಬರಬಹುದು. ಅದನ್ನು ಸ್ವಾಧೀನಪಡಿಸಿಕೊಳ್ಳಲು ಮನುಷ್ಯರು ಆ ನದಿ ನೀರಲ್ಲಿ ಈಜಿ ಸ್ಪರ್ಧಾತ್ಮಕವಾಗಿ ಅವನ್ನು ಸಂಗ್ರಹಿಸುವುದುಂಟು. ಈ ಸಂಗತಿ ನಿಸರ್ಗದ ಚಲನ ಶೀಲತೆಯಲ್ಲಿ ತುಂಬಾ ಮುಖ್ಯವಾಗಿದೆ. ಈ ಕಟ್ಟಿಗೆ ಸಂಗ್ರಹಣೆಯ ಸ್ಪರ್ಧೆಯಲ್ಲಿ ಸರಸೋತಮ್ಮ, ಪಾರೋತಿ ಮತ್ತು ರಾಮ ಐತಾಳರು ಪಾಲ್ಗೊಳ್ಳುತ್ತಾರೆ.

ರಾಮ ಐತಾಳರು ವ್ಯವಸಾಯ ಮತ್ತು ಪುರೋಹಿತತನವನ್ನು ಮಾಡಿಕೊಂಡು ಜೀವನವನ್ನು ನಡೆಸಿದವರು. ಒಂದು ಸಲ ನಾಗಪ್ಪ ಹೊಳ್ಳರ ತಿಥಿಯನ್ನು ನೆರವೇರಿಸಲು ಹೊರಟಾಗ ಜ್ಯೇಷ್ಠ ಮಾಸದಲ್ಲೇ ಮಳೆ ಹಿಗ್ಗಾ ಮಗ್ಗಾಗಿ ಸುರಿಯಲು ಪ್ರಾರಂಭಿಸುತ್ತದೆ. ಆದ್ದರಿಂದ ನದಿಯಲ್ಲಿ ನೆರೆ ನೀರು ಏರುತ್ತದೆ. ಅದರ ನೀರು ರಸ್ತೆಗೂ ಸಹ ಬಂದಿದೆ. ಇದರ ಪರಿಣಾಮ ಹೇಗಿದೆಯೆಂದರೆ ದೋಣಿಯು ಸಾಗುವಂತಿರಲಿಲ್ಲ. *"ಆಗ ರಾಮ ಐತಾಳರು ದೇವರು ಮಾಡಿದಂತೆ ಆಗಲಿ ಎಂದು ನದಿ ನೀರಿಗೆ ಇಳಿದೇ ಬಿಟ್ಟರು. ಆಗ ನದಿಯ ನೀರು ನಡು, ಎದೆ ಕುತ್ತಿಗೆಗಳ ತನಕವೂ ಕ್ರಮವಾಗಿ ಬಂದಿತ್ತು. ನದಿಯ ನೀರಿನ ಸಾಲಿನಲ್ಲಿ ಬಾಯಿ, ಮೂಗುಗಳಿಗೂ ನೀರು ಏರಿತು. ಸುಮ್ಮನೆ ಅಂದಾಜಿನಲ್ಲಿ ನಿಂತುಕೊಂಡು ಈಸುವವರಂತೆ ನಾಲ್ಕು ಕ್ಷಣ ನೀರನ್ನು ತಳ್ಳಿದರು. ಅವರನ್ನು ಅಳುವೆಗೆ ಸಾಗಿಸುವ ಬದಲು ನದಿಯ ಮೇಲಕ್ಕೆ ಒಯ್ದಿರಬೇಕು. ಕಾಲು ಕೆಳಗೆ ಒಯ್ದರೆ ಹಂಗಾರ ಕಟ್ಟೆ ಬಂದರಕ್ಕೋ ಅಳುವೆ ದಾಟಿ ತೋನ್ಸೆ ಪಾರಿಗೋ ಸೇರಬೇಕಿತ್ತು"*.[೨] ಅಂತು ಈಜಿ ರಾಮ ಐತಾಳರು ದಡವನ್ನು ಸೇರಿ ತಮ್ಮ ಕೆಲಸಕ್ಕೆ ಹಾಜರಾಗುತ್ತಾರೆ. ಈ ಕ್ರಿಯೆಯನ್ನು ಅವಲೋಕಿಸಿದಾಗ, ನಿಸರ್ಗವು ತನ್ನ ಚಲನಶೀಲತೆಯಿಂದ ಮನುಷ್ಯನಿಗೆ ಒಡ್ಡುವ ಪರೀಕ್ಷೆಗಳಲ್ಲಿ ಒಂದಾಗಿದೆಯೆಂದು ತಿಳಿಯುತ್ತದೆ. ಇಂತಹ ನೆರೆಹಾವಳಿ ಪ್ರಸ್ತುತ ಸನ್ನಿವೇಶದಲ್ಲಿ ಸಾಮಾನ್ಯವಾಗಿದೆ. ಆದ್ದರಿಂದ ಆಧುನಿಕ ಮಾನವನು ನಿಸರ್ಗದ

೧. [illegible]
೨. [illegible]

ಚಲನಶೀಲತೆಯ ಗುಟ್ಟನ್ನು ಅರಿತು ಅದರೊಂದಿಗೆ ಆರೋಗ್ಯ ಪೂರ್ಣವಾದ ಸಂಬಂಧವನ್ನು ಸಾಧಿಸಬೇಕಾಗಿದೆ.

'ಮರಳಿ ಮಣ್ಣಿಗೆ' ಕಾದಂಬರಿಯಲ್ಲಿ ಮಳೆಯ ವರ್ಣನೆಯನ್ನು ಅನೇಕ ಕಡೆ ಕಾರಂತರು ತರುತ್ತಾರೆ. ಮಳೆಯಿಂದಲೇ ಬೆಳೆಗೆ ಮಾರ್ಗವಾಗಿದೆ. ಈ ಸಮಯದಲ್ಲಿ ಮನುಷ್ಯ ಕೃಷಿಯಲ್ಲಿ ತೊಡಗುತ್ತಾನೆ. ಅಗ ಅವನ ಜೀವನ ನಡೆಯುತ್ತದೆ. ಆದ್ದರಿಂದ ನಿಸರ್ಗದ ಚಲನಶೀಲತೆಯ ಆಯಾಮ ನಮಗೆ ತುಂಬಾ ಮುಖ್ಯವಾಗಿದೆ. ಶಿವರಾಮ ಕಾರಂತರು ಪಾರೋತಿಯನ್ನು ಕುರಿತು 'ಪಾರ್ವತಿ ಮೊದಲಿನಿಂದ ಪಾರೋತಿ ಎನಿಸಿಕೊಂಡು ಬಂದವಳು ಮನೆಯ ಎಲ್ಲ ಹೊರೆ ತನ್ನದೆಂದು ತಿಳಿಯುವುದು ತೀರ ಸ್ವಾಭಾವಿಕ. ಅದರಲ್ಲೂ ಮಳೆಗಾಲ ಬಂತೆಂದರೆ ಎಲ್ಲೆಲ್ಲೂ ಹರಡಿರುವ ನೀರಿನ ಹಾಳೆಗಳೆಲ್ಲವೂ ಅವಳ ಕಣ್ಣಿಗೆ ಅವಳ ಜೀವನದ ಇತಿಹಾಸವನ್ನು ತಿಳಿಸುತ್ತವೆ. ತನ್ನ ಮದುವೆಯ ಸಮಯದಿಂದ ಮಳೆ, ಮಳೆಗಾಲಗಳು ಅವಳ ಮನಸ್ಸಿನಲ್ಲಿ ಅಚ್ಚೊತ್ತಿ ಹೋಗಿವೆ' ಎಂದು ಹೇಳುತ್ತಾರೆ. ನಿಸರ್ಗದ ಚಲನಶೀಲತೆಯ ಪರಿಣಾಮ ಮನುಷ್ಯನ ಹೊಟ್ಟೆಯ ಮೇಲೆ ಪರಿಣಾಮ ಬೀರುತ್ತದೆ ಎಂಬುದು ಗಮನಾರ್ಹವಾಗಿದೆ. ಸರಸೋತಿ ನೀರಕ್ಕಿ ಅನ್ನ ತಿನ್ನುವಾಗ ಆಕೆ ಹೇಳುವ ಮಾತಿನಲ್ಲಿ ತಿಳಿಯುತ್ತದೆ. ಅವಳು ಅತ್ತಿಗೆ ಪಾರೋತಿಗೆ 'ಈ ದರಿದ್ರ ಮಳೆ, ಗಾಳಿ ಬೀಸುವಾಗ ನೀರಕ್ಕಿ ಅನ್ನ ಬಾಯಿಗೆ ಹಾಕಿದರೆ ಕರುಳು ಕತ್ತರಿಸಿ ಇಟ್ಟ ಹಾಗೆ ಆಗುತ್ತದೆ. ಸೆಕೆ ದಿನವಾದರೆ ನೀರಕ್ಕಿ ಅನ್ನ ತಂಪು ನಿಜ'. ಎನ್ನುತ್ತಾಳೆ.

ನಿಸರ್ಗದ ಚಲನಶೀಲತೆಯಿಂದ ಕೆಲವು ಸಲ ನೆರೆಹಾವಳಿ ಹೆಚ್ಚಾಗಿ ತೊಂದರೆಯ ಜೊತೆಗೆ ಅನುಕೂಲ ಕೂಡ ಆಗಬಹುದು ಎಂದು ಕಾರಂತರು ಹೇಳುತ್ತಾರೆ. *"ಈ ವರ್ಷ ಮಳೆಗಾಲ ಪ್ರಾರಂಭದಲ್ಲೇನೊ ತೊಡಕು ಉಂಟು ಮಾಡಿತಾದರೂ, ಮುಂದೆ ಪ್ರತಿ ನಕ್ಷತ್ರಕ್ಕೂ ರೈತರು ಬಯಸುವ ರೀತಿಯಲ್ಲೇ ಸಾಗಿತು. ಮಾತ್ರವಲ್ಲ–ನೆರೆಯ ನೀರೂ ಬಹಳ ಅನುಕೂಲವಾಗಿಯೇ ಒದಗಿತು. ಇಷ್ಟು ವರ್ಷಗಳಿಗಿಂತಲೂ ಮೂರು ಪಾಲಷ್ಟು ಕಟ್ಟಿಗೆಯನ್ನು ಈ ವರ್ಷ ಕೂಡಿಹಾಕಿದವರಿದ್ದಾರೆ. ಆದರೆ, ಐತಾಳರ ಮನೆಯವರು ಅಳುವೆಗೆ ತೀರ ಸಮೀಪವಾದುದರಿಂದ, ಬಲು ಸಾಹಸ ಮಾಡಿ ಕಡಲಲ್ಲಿ ಮುಂದುವರೆಯುವಂತಿಲ್ಲ. ಅಳುವೆಯಿಂದ ಹದವಾದ ದೂರದಲ್ಲಿ ವಾಸಿಸುವವರು ಅದೃಷ್ಟ ಹೇಳಾತೀರದು"*[೨]

ಕಾರಂತರು ನಿಸರ್ಗದ ಚಲನಶೀಲತೆಯ ಆಯಾಮಗಳಲ್ಲಿ ಮನುಷ್ಯನ ಜೀವನ ತೊಂದರೆಗೆ ಸಿಲುಕುವುದನ್ನು ಗುರುತಿಸುತ್ತಾರೆ. ಈ ವರ್ಷ ಮಳೆ ಹೆಚ್ಚಾಗಿದೆ. ಇದರಿಂದ ಐತಾಳರು ನಿತ್ಯವೂ ತಮ್ಮ ಕೊಚ್ಚಿ ಹೋದ ತೆಂಗಿನ ತೋಟವನ್ನು ನೋಡಲು ಹೋಗುತ್ತಿದ್ದಾರೆ. ಈ ವರ್ಷ ಮರಗಳೇನೂ ಬಿದ್ದು ಹೋಗಿಲ್ಲ, ಬದಲು ಈ ವರ್ಷ ಅವರ ಕೊರೆದ ತೋಟಕ್ಕೆ ಮಣ್ಣು ಕೂಡಿ ಬಂದಿತ್ತು. ಅದರ ಮುಂದೆ ಮೂರು ಎಕ್ರೆಗಳಷ್ಟಾದರೂ ಮರಳಿನ ದಂಡೆ ಬಿದ್ದಿತ್ತು. ಬದಲು,

೨ ಅದೇ, ಪುಟ-೨೨

ಅಳುವೆಯ ಸಿಟ್ಟು ತೆಂಕಣ ಭಾಗದ ಮೇಲೆ ನೆಟ್ಟಿತ್ತು. ಅಲ್ಲಿನ ಹಲವು ತೋಟಗಳು ಬರಿದಾದವು. ಕೆಲವು ಮನೆಗಳೂ ಹೋದವು ಎನ್ನುತ್ತಾರೆ. ಇದನ್ನು ಕೇಳಿದ ಐತಾಳರು ಈ ಅಳುವಿಗೆ ಬಂದು ವರ್ಷವಾದರೂ ತೆವಳಿಕೊಂಡು ಬಿದ್ದಿರಲು ಬರುವುದಿಲ್ಲ ಎಂದರು. ಐತಾಳರು ಮಲಗಿ ಎದ್ದ ನಂತರ ಸೂರ್ಯ ಮೂಡುವುದನ್ನು ಕಂಡರು. ಇದನ್ನು ಕಾರಂತರು – *"ಪಡುವಣ ಬಾನಲ್ಲಿ ಸೊಗಸಾದ ಕಾರ್ಮುಗಿಲುಗಳು ಕೂಡಿದ್ದವು. ಬೆಳಗಿನ ಬಿಸಿಲು ತೆಂಗು, ಹನೆ ಮರಗಳ ಹನಿಯಿಂದ ತೊಯ್ದು ಹೆಡೆಗಳನ್ನು ಮುದ್ದಿಸುತ್ತಿತ್ತು. ಆ ದಿನದ ನಿಸರ್ಗ ಎಷ್ಟು ಸ್ವಚ್ಛ! ಸ್ನಾನ ಮಾಡಿ ಹೊಸ ಬಟ್ಟೆಯುಟ್ಟುನಿಂತಂತೆ! ದಿನ ತೊಡಗಿತು"*.[೯] ಈ ವರ್ಣನೆಯನ್ನು ನಿಸರ್ಗದ ಚಲನಶೀಲತೆಯಲ್ಲಿ ಸೂರ್ಯನ ಬಿಸಿಲು ಮನುಷ್ಯನ ಜೀವನವನ್ನು ಹೇಗೆ ಪಲ್ಲಟಗೊಳಿಸುತ್ತದೆ ಎಂಬುದನ್ನು ತಿಳಿಯಬೇಕೆಂದರೆ, ಸರಸೋತಿ ಮತ್ತು ಪಾರೋತಿ ಮಾಡುವ ಕೆಲಸಗಳಿಂದ ತಿಳಿಯುತ್ತದೆ.

"ಬೇಸಿಗೆಯ ಬಿಸಿಲು ಏರುತ್ತ ಬಂದಿತು ಯುಗಾದಿ ಕಳೆಯುವುದರೊಳಗೇನೇ ಮಧ್ಯಾಹ್ನ ನೆಲ ಕಾವಲಿಯಾಗುತ್ತಿತ್ತು. ಚೈತ್ರ ಮಾಸ ಮುಗಿದು ವೈಶಾಖ ಬಂದ ಬಳಿಕ ಕೇಳಬೇಕೆ? ಬಾನು ಬಿಸಿಲ ಜಳದಿಂದ ಬೆಳಗಿನಿಂದ ಸಂಜೆ ತನಕವೂ ಬೂದು ಬಣ್ಣವಾಗಿ ಕಾಣಿಸಿತು. ಸಾಲುದದಕ್ಕೆ, ಬಿಳಿ ಮುಗಿಲುಗಳ ಕವಿದಾಟವೂ ಹೆಚ್ಚಿ ಮನೆಯ ಒಳಗೂ ಒಂದೇ, ಹೊರಗೂ ಒಂದೇ ಬೆವರಿನದೇ ಮಳೆ! ರಾತ್ರಿಯೇನೋ, ಮನೆಯ ಹಿಂದಿನ ಅರಾಲಿನಲ್ಲಿ ಬಟ್ಟೆ ಹಾಸಿ ಮರಳಿನ ದಿನ್ನೆಯ ಮೇಲೆ ಮಲಗಿಕೊಂಡರೆ, ತಂಗಾಳಿ ಬೀಸಿ ನಿದ್ರೆ ಹತ್ತುತ್ತದೆ. ಮನೆಯ ಸುತ್ತಲೂ ಹೊಯಿಗೆಯ ರಾಶಿ ತುಂಬಿರುವ ಐತಾರಳಲ್ಲಿ, ಹಗಲಲ್ಲಿ ಸೆಕೆಯ ಹಾವಳಿ ಹೇಳತೀರದು. ಪಾರೋತಿ ಸರಸೋತಿಯರಿಗೆ ಈ ಕಡು ಬೇಸಿಗೆಯು ಬೇರೆಯೇ ಚಿಂತನೆಗಳನ್ನೂ ತರತೊಡಗಿತು. ಭತ್ತದ ಸಸಿಗಳನ್ನು ನೆಟ್ಟ ಅವರ ಅಗೇಡಿಯ ಗತಿಯೇನು? ಗದ್ದೆಗೆ ಎಷ್ಟು ನೀರನ್ನು ಮೊಗೆದರೂ ಸ್ವಲ್ಪವೇ ಆಯಿತು".[೧೦]

ನಿಸರ್ಗದ ಚಲನಶೀಲತೆಯ ಆಯಾಮಗಳಲ್ಲಿ ಋತುಮಾನಗಳು ಪ್ರಮುಖವಾಗಿದೆ. ಈ ಋತುಮಾನದ ಚಕ್ರ ನಿಂತರೆ ಈ ಜೀವ ಸಂಕುಲದ ಅಸ್ಥಿತ್ವವನ್ನು ಊಹಿಸಿಕೊಳ್ಳಲು ಸಾಧ್ಯವಿಲ್ಲ. ಆದರೆ ಪ್ರಸ್ತುತ ೨೧ ನೇ ಶತಮಾನದಲ್ಲಿ ಕಾಡುಗಳ ನಾಶದಿಂದ ನಿಸರ್ಗದ ಚಲನಶೀಲತೆಯಲ್ಲಿ ಏರು ಪೇರುಗಳು ಆಗುತ್ತಿವೆ. ಇದರಿಂದ ಮನುಷ್ಯನ ಆರೋಗ್ಯದ ಮೇಲೆ ಪರಿಣಾಮವಾಗುತ್ತಿದೆ. ಇಂತ ಸನ್ನಿವೇಶಗಳನ್ನು ಕಾರಂತರು ತಮ್ಮ ಕಾದಂಬರಿಗಳಲ್ಲಿ ಸೃಷ್ಟಿಸುವುದರ ಮುಖಾಂತರ ಎಚ್ಚರಿಕೆಯನ್ನು ನೀಡಿದ್ದಾರೆ. ಆದ್ದರಿಂದ ನಾಗರೀಕ ಸಮಾಜವೆನಿಸಿಕೊಂಡು ಜೀವಿಸುತ್ತಿರುವ, ಇಂದಿನ ಆಧುನಿಕತೆಯ ಮಾನವ ನಿಸರ್ಗದ ಚಲನಶೀಲತೆಗೆ ಪೂರಕವಾಗಿ ಜೀವಿಸಬೇಕು. ಆಗ ನಮ್ಮ ಮುಂದಿನ ಪೀಳಿಗೆಯ ಭವಿಷ್ಯ ಸುಖಮಯವಾಗಿರುತ್ತದೆ.

ನಿಸರ್ಗದ ಚಲನಶೀಲತೆಯ ಆಯಾಮಗಳಲ್ಲಿ ಕಡಲು ಮುಖ್ಯ. ಇದು ಪ್ರಾಚೀನ ಕಾಲದಿಂದಲೂ ಮನುಷ್ಯನಿಗೆ ವಿಸ್ಮಯವನ್ನು ಉಂಟುಮಾಡುತ್ತಿದೆ. ಇಂತ ವಿಸ್ಮಯ ಸಂಗತಿಯ ಭಾಗವಾದ ಕಡಲನ್ನು ಕಾರಂತರು ತಮ್ಮ ಕಾದಂಬರಿಗಳಲ್ಲಿ ತರುತ್ತಾರೆ. ಅದೇ ರೀತಿ 'ಮರಳಿ

---

೯. ಅದೇ, ಪುಟ-[illegible]
೧೦ ಅದೇ, ಪುಟ-[illegible]

ಮಣ್ಣಿಗೆ'ಯಲ್ಲಿ ಕಡಲು ಮೂರನೇ ತಲೆಮಾರಿನ ಸಂದರ್ಭದಲ್ಲಿ ಮುಖ್ಯವಾಗಿ ಬರುತ್ತದೆ. ಕೋಡಿಯಿಂದ ಹಿಡಿದು ಮುಂಬೈವರೆಗೆ ಈ ಕಡಲಿನ ಪ್ರಸ್ತಾಪ ಬರುತ್ತದೆ.

ರಾಮನಿಗೆ ಎರಡು ವರ್ಷ ತುಂಬುವುದರ ಒಳಗೆ ಈತನ ತಂದೆ ಲಚ್ಚ ಕೋಡಿಯನ್ನು ತ್ಯಜಿಸಿರುತ್ತಾನೆ. ಇವನಿಂದ *"ರಾಮ ಐತಾಳರ ವಂಶಸ್ಥರು ಅವರ ನೆಲೆದಲ್ಲೇ ಗೇಣಿಯಾಳುಗಳಾದರು. ಇದು ನಾಗವೇಣಿ ಚಿತ್ತವನ್ನು ಕಲುಕಿತು. ಸೂರನ ಸಹಾಯದಿಂದ ಸರಸೋತಮ್ಮನ ಮುರು ಮುಡಿ ಗದ್ದೆಗಳು ಮಳೆ ಬೀಳುವ ಮೊದಲೇ ಹುಡಿ ಹೂಟೆಯಾಗಿ ನೆಲ ಅಗೆಗೆ ಸಿದ್ಧವಾಯಿತು. ಒಂದೆರಡು ಮಳೆಗಳು ಬೇಸಿಗೆಯಲ್ಲಿ ಬಡಿದುದರಿಂದ ಬಿತ್ತಿದ ಬೀಜ ಮೊಳಕೆ ಒಡೆಯಿತು".*[೧೧] ಮಳೆ, ಬೆಳೆ ಇವು ಎಲ್ಲವು ನಿಸರ್ಗದ ಚಲನಶೀಲತೆಯ ಆಯಾಮಗಳಲ್ಲಿ ಪ್ರಮುಖವಾದವು. ಕಾರಣ ನಿಸರ್ಗವು ವಿಸ್ಮಯಕರವಾದುದು ಇದನ್ನು ಅರಿಯಲು ಮನುಷ್ಯನ ಪ್ರಯತ್ನ ನಿರಂತರವಾಗಿ ಸಾಗುತ್ತಲೇ ಇದೆ. ಆದರೆ ಮಾನವನ ಸಾಧನೆ ಅಲ್ಪವಾಗಿದೆ. ಆದರೂ ಛಲಬಿಡದ ತ್ರಿವಿಕ್ರಮನ ರೀತಿಯಲ್ಲಿ ಅವನ ಪ್ರಯತ್ನ ಮುಂದುವರಿಯುತ್ತಲೇ ಇದೆ. ಈ ಅಂಶಗಳನ್ನು ಕಾರಂತರು ಮಾನವ ಮತ್ತು ನಿಸರ್ಗದ ಸಂಬಂಧದಲ್ಲಿ ಗುರುತಿಸುತ್ತಾರೆ.

ರಾಮ ಮತ್ತು ನಾಗವೇಣಿ ಕಡಲನ್ನು ನೋಡಲು ಹೋಗುತ್ತಾರೆ. ಈ ಸಂದರ್ಭದಲ್ಲಿ ನಿಸರ್ಗದಲ್ಲಿ ಉಂಟಾಗುವ ಚಲನಶಿಲತೆಯ ಬಗ್ಗೆ ಕಾರಂತರು ವರ್ಣಿಸುತ್ತಾರೆ. *"ಆಗಾಗಲೇ ಬಾನು ಕೆಂಪಡರಿತು. ಕಡಲ ಅಂಚಿನ ತುಸು ಮೇಲಕ್ಕೆ ತೆಂಕಣ ಬಡಗುಗಳನ್ನೊಂದಾಗಿಸುವ ಕಂದು ಬಣ್ಣ ಮುಗಿಲೊಂದು ವಿಶಾಲವಾಗಿ ಚಾಚಿತ್ತು. ಹಿಂದಣ ಸೂರ್ಯ ಅದರ ಅಂಚಚುಗಳನ್ನು ಕುಲುಮೆಯಲ್ಲಿ ಕಾಯಿಸಿದ ಲೋಹದ ಕಂಬಿಗಳಿಂದ ಬೆಳಗುವಂತೆ ಬೆಳಗಿದ್ದನು".*[೧೨] ಈ ರೀತಿಯ ನಿಸರ್ಗದ ಸೌಂದರ್ಯವು ಒಬ್ಬೊಬ್ಬರ ಭಾವನೆಯಲ್ಲಿ ಬೇರೆ ಬೇರೆ ತೆರನಾದ ಕಲ್ಪನೆ ಮೂಡಿಸುತ್ತದೆ. ಈ ಕಲ್ಪನೆಯನ್ನು ಮುಡಿಸುವುದೇ ನಿಸರ್ಗ. ಏಕೆಂದರೆ ನಿಸರ್ಗದ ಚಲನಶೀಲತೆಯ ಮೂಲ ಅಡಗಿರುವುದೇ ಈ ಸೂರ್ಯನ ಪ್ರಕ್ರಿಯೆಯ ಮೇಲೆ ಎನ್ನುವುದು ಮುಖ್ಯ. ಒಂದು ವೇಳೆ ಸೂರ್ಯನ ಪ್ರಕ್ರಿಯೆ ನಿಂತರೆ ಈ ವಿಶ್ವದ ಪ್ರಕ್ರಿಯೆ ನಿಂತು ಹೋಗುತ್ತದೆ. ಆದ್ದರಿಂದ ಈ ನಿಸರ್ಗದ ಚಲನಶೀಲತೆಗೆ ಸೂರ್ಯನ ಶಕ್ತಿ ಪ್ರಮುಖವಾಗಿದೆ.

ಸೂರ್ಯನ ಬೆಳಕು ನಿಸರ್ಗಕ್ಕೆ ಪ್ರಾಣವನ್ನು ಕೊಡುತ್ತದೆ. ಇದರಿಂದ ನಿಸರ್ಗವು ಉಳಿದಿದೆ. ಆದ್ದರಿಂದ ಶಿವರಾಮ ಕಾರಂತರು ತಮ್ಮ ಕಾದಂಬರಿಗಳ ಮುಖಾಂತರ ನಿಸರ್ಗದ ಚಲನಶೀಲತೆಯ ಆಯಾಮಗಳನ್ನು ವಿವಿಧ ರೀತಿಯಲ್ಲಿ ಪರಿಚಯಿಸಿದ್ದಾರೆ. ಇಂತಹ ಪರಿಚಯದಲ್ಲಿ ನಿಸರ್ಗವು ಮಾನವ ಮತ್ತು ಪ್ರಾಣಿ ಸಂಕುಲ ಹಾಗೂ ಸಸ್ಯವರ್ಗದ ಅಳಿವು-ಉಳಿವಿನ ಪ್ರಶ್ನೆ ಬಹು ಮುಖ್ಯವಾಗಿದೆ. ಆದ್ದರಿಂದ ಕಾರಂತರು ತಮ್ಮ ಕಾದಂಬರಿಗಳ ಮೂಲಕ ಸ್ಪಷ್ಟವಾಗಿ ನಿಸರ್ಗದ ಚಲನಶೀಲತೆಯ ಆಯಾಮಗಳಿಗೆ ಈ ರೀತಿಯಾಗಿ ಉತ್ತರ ಕಂಡುಕೊಂಡಿದ್ದಾರೆ. ಆದ್ದರಿಂದ

೧೧. ಅದೇ, ಪುಟ-೨೭೦
೧೨. ಟಿ.ಪಿ.ಅಶೋಕ (ಸಂ) ಕಾರಂತ ಮಂಥನ, ಪುಟ ೧೧೫-೧೧೬

ಸಮಕಾಲೀನ ಪರಿಸ್ಥಿತಿಯಲ್ಲಿ ನಾವು ಇದನ್ನು ಅರಿತು ಬಾಳನ್ನು ನಡೆಸುವುದು ತುಂಬಾ ಅವಶ್ಯಕವೆನಿಸಿದೆ. ಇದರಿಂದ ನಮ್ಮ ಭವಿಷ್ಯ ಮತ್ತು ನಮ್ಮ ಮುಂದಿನ ಪೀಳಿಗೆಯ ಭವಿಷ್ಯದ ಅಡಿಪಾಯ ಆರೋಗ್ಯಕರವಾಗಿರುತ್ತದೆ.

ಮನುಷ್ಯ ಸಂಸ್ಕೃತಿಯೊಂದಿಗೆ ನಿಸರ್ಗದ ಸಂಬಂಧಗಳು :

ಮಾನವನಿಗೂ ನಿಸರ್ಗಕ್ಕೂ ಇರುವ ಸಂಬಂಧ ತುಂಬಾ ಗಾಡವಾದುದು. ಈ ಗಾಢವಾದ ಪರಿಕಲ್ಪನೆ ಅವನಲ್ಲಿ ಚಿಂತನೆಯನ್ನು ಬೆಳೆಸಿದೆ. ಈ ಚಿಂತನೆ ಅವನ ಜೀವನದ ಅಡಿಪಾಯಕ್ಕೆ ಮೂಲವಾಗಿದೆ. ಈ ಜೀವನದ ಅಡಿಪಾಯದಿಂದ ಅವನು ಸಂಸ್ಕೃತಿಯನ್ನು ಬೆಳೆಸಿಕೊಂಡಿದ್ದಾನೆ. ಈ ಸಂಸ್ಕೃತಿಯು ಕೇವಲ ಅಲ್ಪಾವಧಿಯಲ್ಲಿ ಹುಟ್ಟಿಕೊಂಡಿರುವುದಲ್ಲವಾಗಿದೆ. ಇದು ದೀರ್ಘವಾದ ಪ್ರಕ್ರಿಯೆಯೆಗೆ ಒಳಪಟ್ಟಿದೆ. ಈ ಪ್ರಕ್ರಿಯೆಗೆ ಪೂರಕವಾಗಿರುವುದು ನಿಸರ್ಗವೇ ಆಗಿದೆ. ಈ ನಿಸರ್ಗವನ್ನು ಕುರಿತು ಅವನು ತನ್ನಲ್ಲಿ ಭಯ, ಭಕ್ತಿಗಳನ್ನು ಬೆಳೆಸಿಕೊಂಡನು. ಭಾರತದ ಮಟ್ಟಿಗೆ ವೇದಗಳ ಕಾಲದಲ್ಲಿ ನಮ್ಮವರು ಪ್ರಕೃತಿಗೆ ದೇವರ ಸ್ಥಾನವನ್ನು ಕಲ್ಪಿಸಿಕೊಟ್ಟರು. ಸೂರ್ಯ, ಚಂದ್ರ, ವರುಣ, ಮೊದಲಾದ ದೇವತೆಗಳನ್ನು ಪ್ರಕೃತಿಯ ಸಂಕೇತವಾಗಿ ಬಳಸಿಕೊಂಡರು. ಈ ಅಂಶಗಳೇ ಮನುಷ್ಯ ಸಂಸ್ಕೃತಿಗೆ ಭದ್ರ ಬುನಾದಿಯಾಯಿತು.

ಪ್ರಕೃತಿಯನ್ನು ದೇವರಾಗಿ ತಿಳಿದ ಮಾನವ ಸಂರಕ್ಷಿಸುವ ಕೆಲಸಕ್ಕೆ ತೊಡಗಿದನು. ಇದು ಸಂಸ್ಕೃತಿಯ ಹುಟ್ಟು ಮತ್ತು ಚಲನಶೀಲತೆಗೆ ಕಾರಣವಾಯಿತು. ಈ ಸಂಸ್ಕೃತಿಯಲ್ಲಿ ಮನುಷ್ಯನ ನಂಬಿಕೆಯಲ್ಲಿ ಸಾಮಾಜಿಕ, ರಾಜಕೀಯ, ಆರ್ಥಿಕ ಮೌಲ್ಯಗಳು ಹುಟ್ಟಿಕೊಂಡವು. ಈ ಸಾಮಾಜಿಕ ಮೌಲ್ಯಗಳಲ್ಲಿ ಮಾನವೀಯತೆ, ನಂಬಿಕೆ ಮತ್ತು ಧಾರ್ಮಿಕ ಸಂಗತಿಗಳು ಮುಖ್ಯವಾಗಿರುತ್ತವೆ. ಈ ಅಂಶಗಳನ್ನು ಮನುಷ್ಯನು ನಿಸರ್ಗದೊಂದಿಗೆ ಹೊಂದುವ ಸಂಬಂಧದಲ್ಲಿ ಗುರ್ತಿಸಿಕೊಳ್ಳುತ್ತಾರೆ.

ಇಪ್ಪತ್ತನೇಯ ಶತಮಾನದಲ್ಲಿ ಅತ್ಯಂತ ಪ್ರಭಾವಶಾಲಿ ಜರ್ಮನ್ ತತ್ವಶಾಸ್ತ್ರಜ್ಞ ಮಾರ್ಟಿನ್ ಹೈಡೆಗರ್ ಪ್ರಕಾರ "*ಮನುಷ್ಯ ಕೇವಲ ಜೀವಿಯಲ್ಲ. ಅವನು-ಅವಳು ಪ್ರಪಂಚ ಜೀವಿ ಅಂದರೆ, ಮನುಷ್ಯ ಹುಟ್ಟುವುದೇ ಒಂದು ಭಾಷೆಯ ಸಂಸ್ಕೃತಿಯ ಜೀವನದ ರಿವಾಜುಗಳ, ಹಲವು ಬಗೆಯ ಜೀವನ ಕ್ರಮಗಳ, ದಟ್ಟ ಪ್ರಪಂಚಕ್ಕೆ ಹುಟ್ಟಿದ ನಂತರ ನಿಧಾನವಾಗಿ ಪ್ರಪಂಚ ಅವನ-ಅವಳ ಕಣ್ಣೆದುರು ಬೆಳೆದು ಆಕಾರ ತಾಳುವುದಲ್ಲ. ಅವನು-ಅವಳು ಹುಟ್ಟುವುದೇ ಪೂರ್ವ ನಿರ್ಧಾರಿತ ಆದುದರಿಂದ ಪ್ರಪಂಚ ಜೀವಿಯದ ಈ ಮನುಷ್ಯನ ಜೀವನವೆಂಬುದು ಕಾಲ ಕ್ರಮೇಣ ಈ ಪ್ರಪಂಚದ ತಾಳ ಮೇಳಗಳನ್ನು ನಿರಂತರವಾಗಿ ಗ್ರಹಿಸುವ ಪ್ರಯತ್ನದಲ್ಲಿ ತನ್ನ ತನವನ್ನು ಉಂಟುಮಾಡಿಕೊಳ್ಳುವ ಒಂದು ವಿಶೇಷ ಪ್ರಕ್ರಿಯೆ. ಅಲ್ಲದೇ ಮನುಷ್ಯ ಜೀವಿ ಎಂಬ ಒಂದೇ ಕಾರಣದಿಂದ ಅವನಿಗೆ-ಅವಳಿಗೆ ಹುಟ್ಟಿನಿಂದ ತನ್ನ ತನವೆಂಬುದು ಬಳುವಳಿಯಾಗಿ ದೇವರ ದಯೆಯಾಗಿ ಬರುವುದಿಲ್ಲ. ಅವನು- ಅವಳು ಪ್ರಪಂಚ ಜೀವಿ ಎಂಬುದರ ಅರ್ಥವೇ. ಅವನು-ಅವಳು ಈ ಪ್ರಪಂಚ ವಾಸ್ತವದಲ್ಲಿ (Labeswelt) ಪ್ರಾಪಂಚಿಕತೆಯಲ್ಲಿ-ಒಡ್ಡಲ್ಪಟ್ಟ-ಎಸೆಯಲ್ಪಟ್ಟ (Geworfenheit) ಜೀವಿ ಎಂದು.*"[೧೩]

೧೩. ಟಿ.ಪಿ.ಅಶೋಕ (ಸಂ), ಈ ಶತಮಾನದ ನೋಟ ಶಿವರಾಮ ಕಾರಂತ, ಪುಟ-೮೧

ಆದ್ದರಿಂದ ಸಂಸ್ಕೃತಿಯೆಂದರೆ ಭೂಮಿಯ ಕುರಿತಾದ ಪ್ರಶ್ನೆ ಮತ್ತು ಜೀವನದ ಪ್ರಶ್ನೆಯಾಗಿದೆ. ಈ ಪ್ರಶ್ನೆಗಳನ್ನು ಸರಿಯಾಗಿ ಗುರುತಿಸುವ ಕಾರಂತರು ತಮ್ಮ ಕಾದಂಬರಿಗಳಲ್ಲಿ ಉತ್ತರಗಳನ್ನು ಕೊಟ್ಟಿದ್ದಾರೆ. ಈ ಉತ್ತರಗಳು ನಿಸರ್ಗದ ಸಂಸ್ಕೃತಿಯಲ್ಲಿ ಅಡಗಿದೆ ಎನ್ನುತ್ತಾರೆ.

ಸಂಸ್ಕೃತಿಯ ಮೇಲೆ ನಿಸರ್ಗದ ಸಂಬಂಧಗಳು ಎಂಬ ವಿಷಯಕ್ಕೆ ಸಂಬಂಧಿಸಿದಂತೆ, 'ಚೋಮನ ದುಡಿ', 'ಕುಡಿಯರ ಕೂಸು', 'ನಂಬಿದವರ ನಾಕ ನರಕ', 'ಮುಗಿದ ಯುದ್ಧ', 'ಮೈಮನಗಳ ಸುಳಿಯಲಿ', 'ಮೂಕಜ್ಜಿಯ ಕನಸುಗಳು' ಕೃತಿಗಳನ್ನು ಗಮನಿಸಲಾಗಿದೆ.

'ಚೋಮನದುಡಿ' ಕಾದಂಬರಿಯಲ್ಲಿ ಕಾರಂತರು ಚೋಮನ ಪಾತ್ರದ ಮೂಲಕ ಭೂ ಯಜಮಾನಿಕೆಯಿಲ್ಲದ ಸಾಂಸ್ಕೃತಿಕ ತಳಮಳಕ್ಕೆ ಒಳಗಾಗುವ ಮತ್ತು ತನ್ನ ಸಂಸ್ಕೃತಿಯನ್ನು ಬದಲಾವಣೆಗೆ ಒಳಗು ಮಾಡಿಕೊಳ್ಳಲು ಪ್ರಯತ್ನಿಸಿ; ಆ ಪ್ರಯತ್ನದಲ್ಲಿ ವಿಫಲನಾಗುವ ಮತ್ತು ಆ ಸಂಕಟವನ್ನು ಮರೆಯಲು ಅವನ ಪರಂಪರಾಗತ ಸಂಸ್ಕೃತಿಯ ಬಿಂಬವಾದ 'ದುಡಿ'ಯನ್ನು ಬಾರಿಸುವುದು ಮತ್ತು ಅವನ ಮಕ್ಕಳು ವಿವಿಧ ತರನಾದ ಸಂಸ್ಕೃತಿಗಳ ನಡುವೆ ಮುಖಾಮುಖಿ ಯಾಗುವುದನ್ನು ಗಮನಿಸಬಹುದು. ಟಿ.ಪಿ.ಅಶೋಕರವರು ಈ ಕಾದಂಬರಿ ಕುರಿತು "*ಚೋಮನ ದುಡಿ ಅತ್ಯಂತ ಕುತುಹಲಕಾರಿಯಾದ ಭಾಗಗಳಲ್ಲಿ ಒಂದು ಇದು ಆಧುನಿಕತೆಯ ಬಗ್ಗೆ ಚೋಮನಿಗಿರುವ ಭಯ, ಆತಂಕಗಳನ್ನು ಸೂಕ್ಷ್ಮವಾಗಿ ದಾಖಲು ಮಾಡುತ್ತದೆ. ಇಲ್ಲಿ ಕಾರಂತರು ಪಂಜುರ್ಲಿ ಭೂತವನ್ನು ತಂದಿರುವುದರಿಂದ ಚೋಮನ ಒಳ ಮನಸ್ಸನ್ನು – ಸೂಪ್ತ ಪ್ರಜ್ಞೆಯನ್ನು ಹರಿಯಲು ಸಾಧ್ಯವಾಗಿದೆ. ಪಂಜುರ್ಲಿಭೂತ ಚೋಮನ ಮನಸ್ಸಿನಲ್ಲಿರುವುದನ್ನೇ ಹೇಳುತ್ತದೆ. 'ಚೋಮನದುಡಿ' ವಾಸ್ತವವಾಗಿ ಕಾದಂಬರಿಯೇ ಆಗಿದ್ದರೂ ವಾಸ್ತವ ಮಾರ್ಗದಲ್ಲಿ ಹೇಳಲಾರದ್ದನ್ನು ಧ್ವನಿಸಲು ಕಾರಂತರು ರೂಪಕಗಳನ್ನು ಬಳಸಿಕೊಂಡಿದ್ದಾರೆ. ದುಡಿ ಇಂಥ ಒಂದು ರೂಪಕವಾದರೆ, ಪಂಜುರ್ಲಿ ಭೂತ ಮತ್ತೊಂದು ರೂಪಕ*"[೧೪] ಈ ದುಡಿ, ಪಂಜುರ್ಲಿ ಭೂತವನ್ನು ರೂಪಕವಾಗಿ, ಕಾರಂತರು ತಂದಿದ್ದಾರೆ ಎಂದು ಟಿ.ಪಿ ಅಶೋಕರವರು ಹೇಳಿದ್ದರೂ ಸಹ; ಇಲ್ಲಿ ಚೋಮನ ಸಂಸ್ಕೃತಿಯ ಪ್ರತಿಬಿಂಬಗಳಾಗಿ ಇವು ಕಂಡುಬರುತ್ತವೆ, ಇವುಗಳಲ್ಲಿ ಮುಖ್ಯವಾಗಿ ಪಂಜುರ್ಲಿ ಚೋಮನ ಮನಸ್ಸಿನಲ್ಲಿ ಭಯ ಮತ್ತು ಭಕ್ತಿಯನ್ನು ಮೂಡಿಸಿದರೆ, ಅವನ ದುಡಿ ಮನಸ್ಸಿನ ದುಃಖವನ್ನು ಮೆರೆಸುತ್ತದೆ. "*ಚೋಮ ತನ್ನ ನೋವನ್ನು ಮರೆಯಲು 'ಡಮ ಢಮ್ಮ ಡಕ ಢಕ್ಕ' ಎಂದು ಭಾರಿಸುತ್ತಿದ್ದಾನೆ. ಅದೇ ದುಡಿ. ಚೋಮನ ದುಡಿಯಲ್ಲೊಂದು ವಿಶೇಷವಿಲ್ಲ. ಚೋಮನ ಬಾಳ್ವೆಯಲ್ಲಿ ವಿಶೇಷವಿದ್ದರಲ್ಲವೆ ಅವನ ದುಡಿಯಲ್ಲಿರುವುದು? ಚೋಮ ಹೊಲೆಯ ಜಾತಿಯಲ್ಲಿ ಹಿಂದುಳಿದವ. ಭೋಗನಹಳ್ಳಿಯ ಕಾಡಿನ ಸಂಧಿನಲ್ಲಿ ಅವನದ್ದೊಂದು ಕೊಪ್ಪವಿದೆ. ಕೊಪ್ಪವೆಂದರೆ ನೂರಾರು ಮನೆಗಳಿಲ್ಲ; ಒಂದೇ ಒಂದು ಮನೆ.*"[೧೫] ಈ ಭೋಗನಹಳ್ಳಿಯಲ್ಲಿ ಗ್ರಾಮೀಣ ಪ್ರದೇಶದ ಪ್ಯೂಡಲ್ ಪ್ರಪಂಚವಿದೆ. ಈ ಕಾದಂಬರಿಯಲ್ಲಿ ಕಾರಂತರು ದಕ್ಷಿಣ ಕನ್ನಡ ಜಿಲ್ಲೆಯ ಪರಿಸರವನ್ನು ತರುತ್ತಾರೆ. ಚೋಮ ಮತ್ತು ದಣಿಗಳ ನಡುವಿನ ಸಂಬಂಧವು ಗುಲಾಮ ಸಂಸ್ಕೃತಿಯನ್ನು ಸುಚಿಸುತ್ತದೆ. ಆದ್ದರಿಂದ ಚೋಮ

---

೧೪. ಶಿವರಾಮ ಕಾರಂತ, ಚೋಮನದುಡಿ, ಪುಟ-೦೫

೧೫. ಅದೇ, ಪುಟ-೦೬

ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಅಸ್ಪೃಶ್ಯನಾಗಿರುವುದರಿಂದ ಅವನಿಗೆ ನಿಸರ್ಗದ ಮೂಲವಾದ ಭೂಮಿ ಸಿಗದೆ ಇರುವುದನ್ನು ಕಾಣುತ್ತೇವೆ. ಆದರೆ ತನ್ನ ಸ್ವಂತಕ್ಕಾಗಿ ಭೂಮಿಯನ್ನು ಪಡೆಯದೇ ಇದ್ದರೂ ಸಹ, ಗುಲಾಮ, ಸಂಸ್ಕೃತಿಯನ್ನು ಒಪ್ಪಿಕೊಂಡು ಸಂಕಪ್ಪಯ್ಯನ ಹೊಲವನ್ನು ಉಳುಮೆ ಮಾಡುವುದರ ಮೂಲಕ ನಿಸರ್ಗದೊಂದಿಗೆ ತನ್ನ ಸಾಂಸ್ಕೃತಿಕ ಸಂಬಂಧವನ್ನು ಗಳಿಸುತ್ತಾನೆ.

ಚೋಮನ ಮಕ್ಕಳಲ್ಲಿ ನಾಲ್ಕು ಗಂಡು ಮತ್ತು ಒಂದು ಹೆಣ್ಣು ಅವರೆಂದರೆ ಚನಿಯ, ಗುರುವ, ನೀಲ, ಕಾಳ ಮತ್ತು ಮಗಳು ಬೆಳ್ಳಿ. ಇವರಲ್ಲಿ ಬೆಳ್ಳಿಯೆಂದರೆ ಚೋಮನಿಗೆ ತುಂಬಾ ಪ್ರೀತಿ. *"ಚೋಮನು ಸಂಕಪ್ಪಯ್ಯನವರ ಮೂಲದ ಹೊಲೆಯ. ಮೂಲದವನೆಂದರೆ, ಅವರ ಅನುಮತಿಯಿಲ್ಲದೆ ಇನ್ನೊಬ್ಬ ಧಣಿಯರ ಆಶ್ರಯವನ್ನು ಲಾಭಕ್ಕಾಗಿ ಇವನಾಗಲಿ, ಇವನ ಪರಂಪರೆಯವರಾಗಲಿ ಬಿಡುವಂತಿಲ್ಲ. ಅವರ ಧಣಿಯಾದರೂ ಸರಿಯೆ – ಸಾಲವಿರಲಿ, ಸೊಲವಿರಲಿ ಚೋಮನ ಸಂತತಿಯವರನ್ನು ನಡೆಯಿಸಿಕೊಂಡು ಹೋಗಬೇಕು".*[೧೬] ಈ ನೆಲೆಯು ಪ್ರಾಚೀನ ಕಾಲದಿಂದ ಭಾರತೀಯ ಸಮಾಜದಲ್ಲಿ ನಡೆದುಕೊಂಡು ಬಂದಿರುವ ಜಾತಿಯಾದಾರಿತ ಗುಲಾಮತನ ಸಂಸ್ಕೃತಿಯ ಪ್ರತಿಬಿಂಬವಾಗಿದೆ. ಈ ಪ್ರತಿಬಿಂಬದಲ್ಲಿ ನಿಸರ್ಗದ ಒಡೆತನದ ಪ್ರಶ್ನೆಯು ಅಡಗಿದೆ.

ಹೊಲೆಯ ಎಂಬ ಹಣೆ ಪಟ್ಟಿಯಿರುವ ಸಮಾಜದಲ್ಲಿ ಚೋಮನಿಗೆ ಯಾರು ಸಾಲ ಕೊಡುವುದಿಲ್ಲ. ಆದ್ದರಿಂದ ತಾನು ಇತರರಿಗಿಂತ ಸಾಲಗಾರನಾಗದಿರುವುದು ಹೆಚ್ಚು ಎಂದು ಭಾವಿಸುತ್ತಾನೆ. ತಾನು ನೆಲವನ್ನು ಉತ್ತು ಬೆಳೆಯಬೇಕೆಂದು, ಬೇಸಾಯಗಾರನಾಗಬೇಕೆಂಬ ಬಯಕೆ ಕುತ್ತಿಗೆಯವರೆಗಿದೆ. ಆದರೆ ಅವನ ಊರಲ್ಲಿ ಹೊಲೆಯ ಬೇಸಾಯಗಾರನೆಂಬ ಜಾತಿಯೇ ಇಲ್ಲ. ಹಾಗಾಗುವ ಆಸೆ ಹಿಡಿದು ಯಾರೆನ್ನೆಂದರೇನು– ಸಂಕಪ್ಪಯ್ಯನವರನ್ನು ನಾಲ್ಕು ಗೇಣು ಜಾಗ ನನಗೆ ಗೇಣಿಗೆ ಕೊಡಿ' ಎಂದು ಕೇಳುವ ಸಾಹಸವಿಲ್ಲ. ಆದರೆ ಒಂದಲ್ಲ ಒಂದು ದಿವಸ ನೇಗಿಲನ್ನು ಹಿಡಿದು ಮೆರದೇನು ಎಂಬ ಆಸೆಯಿದೆ. ಆದ್ದರಿಂದಲೇ ಮೂರು ವರ್ಷಗಳಿಂದ ಎರಡು ಹಸುವಿನ ಕರುಗಳನ್ನು ಸಾಕುತ್ತ ಬಂದಿದ್ದಾನೆ. ಈಗ ಅವಕ್ಕೆ ಮೂರು ವರ್ಷ ಪ್ರಾಯವಾಗಿರಬಹುದು. ನೇಗಿಲನ್ನು ಹೊರುವ ಯೋಗ್ಯತೆ ಅವಕ್ಕೆ ಬಂದಿದೆ. ಈಗಾಗಲೇ... ಈ ಇಂಗಿತವನ್ನು ತನ್ನ ಮಕ್ಕಳ ಬಳಿ ಹೇಳಿಕೊಂಡಿದ್ದಾನೆ. ಆಗ ಚೋಮನ ಮಗಳು ಬೆಳ್ಳಿ *"ನೀನು ಧನಿಯರೊಂದಿಗೆ ಬಾಯಿ ತೆರೆದು ಮರ್ಯಾದೆಯನ್ನು ಕಳೆದುಕೊಳ್ಳಬೇಡ"*[೧೭] ಎನ್ನುವ ಮಾತಿನಲ್ಲಿ ಜಾತಿಯ ಭಯ ಮತ್ತು ಶ್ರೇಣಿಕೃತ ಸಂಸ್ಕೃತಿಗೆ ತಲೆಬಾಗುವ ನೆಲೆಯನ್ನು ಹಾಗೂ ಸಮಾಜದಲ್ಲಿ ಮರ್ಯಾದೆಯೆಂಬ ಸಂಸ್ಕೃತಿಯ ಪ್ರತಿಬಿಂಬ ಆಕೆಯ ಮಾತಿನಲ್ಲಿ ವ್ಯಕ್ತವಾಗುತ್ತದೆ. ಇದುವರೆಗೆ ಚೋಮನ ಹಿರಿಯರಲ್ಲಿ ಬೇಸಾಯ ಮಾಡಿದವರಿಲ್ಲ. ಅವನ ಧನಿಯರಿಗೆ ಯಾವನೊಬ್ಬ ಹೊಲೆಯರ ಒಕ್ಕಲೂ ಇಲ್ಲ, ಹೊಲೆಯರು ನೇಗಿಲನ್ನು ಒಡಿದರೆ ಪ್ರಳಯವೇ ಆದೀತು ಎಂದು ತಿಳಿಯುವವರು ಅವರು. ಎಲ್ಲೋ ಯಾವುದೋ

೧೬. ಅದೇ. ಪು.೧೧
೧೭. ಅದೇ. ಪು.೧೨

ಊರಿನಲ್ಲಿ. ಯಾವನೋ ಒಬ್ಬ ಹೊಲೆಯ, ಸರಕಾರಿ ನೆಲವನ್ನು ದರಕಾಸ್ತಿಕೆ ಪಡೆದು, ಏನೋ ನಾಲ್ಕು ಗಿಡ ಭತ್ತವನ್ನು ಬೆಳೆಯಿಸುತ್ತಾನೆಂದು ಕೇಳಿ ಚೋಮನ ಕಿವಿ ನೆಟ್ಟಗಾಗಿ, ನಾಲಿಗೆ ಮುಂದೆ ಬಿದ್ದರೆ ಅವನ ಬಾಳ್ವೆ ಒಳಿತಾಗುವುದುಂಟೆ? ಅದರಿಂದಾಗಿಯೇ ಬೆಳ್ಳಿಯು ಬೇಡವೆಂದಳು. ಚೋಮನ ಸಿಟ್ಟು ಹೆಚ್ಚಾಯಿತು. ಸಿಟ್ಟಿನಿಂದ ಆತ ಅತ್ತೂ ಬಿಟ್ಟ. *"ಹೊಲತಿ ಬದುಕಿರುವಾಗಲೇ ನೇಗಿಲು ಹಿಡಿಯಬೇಕೆಂದು ಆಸೆ ಮೂಡಿತ್ತು. ಅವಳಿಗೆ ಅದನ್ನು ಕಾಣುವ ಋಣವಿಲ್ಲದೆ ಹೋಯಿತು. ಸಾಯುವುದರೊಳಗೆ ನಾನಾದರೂ ಆ ಭಾಗ್ಯ ಪಡೆದೇನು, ನನ್ನ ಮಕ್ಕಳು ಅದನ್ನು ಕಂಡರು ಎಂದು ಆಸೆ ಹಿಡಿದರೆ, ನೀನೆ ನನ್ನ ಆಸೆಗೆ ಕಲ್ಲು ಹಾಕುತ್ತೀಯಲ್ಲ"*[೧೮] ಎಂದು ಗೋಳುಗರೆದ.

ಸಾವಿರಾರು ವರ್ಷಗಳಿಂದ ಭಾರತೀಯ ಸಾಮಾಜಿಕ ಸಂಸ್ಕೃತಿಯಲ್ಲಿ ಭೂಮಿಯೆಂಬ ಪ್ರಶ್ನೆ ಎಲ್ಲರನ್ನು ತುಂಬಾ ಕಾಡಿಸಿದೆ. ಅದರಲ್ಲೂ ಕೆಳವರ್ಗದ ಶೂದ್ರಾದಿ ಶೂದ್ರರಿಗೆ ಅದರ ಒಡೆತನ ಕನಸಾಗಿತ್ತು. ಇಲ್ಲಿ ಕಾರಂತರು ಚೋಮನ ಮುಖೇನ ಪ್ರತಿಯೊಬ್ಬ ದಲಿತರು ಭೂಮಿಗಾಗಿ ಅವರು ಪಡುವ ಮಾನಸಿಕ ತಳಮಳಗಳನ್ನು ಗುರ್ತಿಸಿದ್ದಾರೆ. ಈ ಕುರಿತು ಟಿ.ಪಿ ಅಶೋಕರವರು *"ಚೋಮನದುಡಿ ಕಾದಂಬರಿಯಲ್ಲಿ ಆಧುನಿಕತೆಯ ಪ್ರವೇಶದಿಂದಾಗಿ ಜಡಗೊಂಡ ಸಮಾಜವೊಂದು ಚಲಿಸಲು ಪ್ರಾರಂಭಿಸುವ ಮಹಾದರ್ಶನ ಇದೆ. ಚೋಮನ ಸಮಸ್ಯೆ ಬಗೆ ಹರಿಯಲೇಬೇಕಾದ ಒತ್ತಾಯ ಇದೆ. ಹಿಂದೂ ಸಂಸ್ಕೃತಿಯ ಮುಂದೆ ಕಣ್ಣುಮುಚ್ಚು ನಿರಾತಂಕವಾಗಿ ಕುಳಿತಿರಲು ಸಾಧ್ಯವೇ ಇಲ್ಲ ಎನ್ನುವ ಸ್ಫಟಕ ಪರಿಸ್ಥಿತಿಯ ಮನ್ನೋಟ ಇದೆ. ಹಿಂದೂ ಸಂಸ್ಕೃತಿ ತನ್ನ ಶಠತ್ವ ತ್ಯಜಿಸಿ ಸಡಿಲಗೊಳ್ಳಬೇಕು, ಹೆಚ್ಚು ಉದಾರವಾಗಲೇಬೇಕು. ಎನ್ನುವ ಎಚ್ಚರ ಇದೆ. ಹಿಂದೂ ಸಮಾಜ ಎಚ್ಚರಗೊಳ್ಳದಿದ್ದರೆ, ತನ್ನ ಎಲ್ಲಾ ಶ್ರೇಣಿಯ ಜನಗಳ ಆಶೋತ್ತರಗಳಿಗೆ ಸ್ಪಂದಿಸದಿದ್ದರೆ, ಎಲ್ಲ ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದಿದ್ದರೆ ಸಂಭವಿಸುವ ವಿನಾಶದ ಆತಂಕ ಇದೆ"*.[೧೯]

ಬಡತನದ ಸಂಸ್ಕೃತಿಗೆ ಬಗ್ಗಿಹೋಗಿದ್ದ ಚೋಮ. ಹೊಟ್ಟೆಪಾಡಿಗಾಗಿ ಕಳಸದ ಸಮೀಪದ ಕಾಫಿ ತೋಟಕ್ಕೆ ಕೆಲಸಕ್ಕೆ ಹೋಗಿದ್ದನು. ನಂತರ ಹೆಂಡತಿ ತೀರಿಕೊಂಡಾಗ ಕೂಲಿಯ ಜೊತೆಗೆ ನಾಲ್ಕೈದು ರೂಪಾಯಿ ಹೆಚ್ಚಾಗಿ ಕಾಫಿತೋಟದ ಮಾಲೀಕರಿಂದ ಪಡೆದು ಬಂದಿರುತ್ತಾನೆ. ಇದು ನಿಸರ್ಗಕ್ಕಾಗಿ ಹಾಗೂ ತಮ್ಮ ಒಡೆಯರಿಗೆ ದಿನನಿತ್ಯ ದುಡಿದು, ಆ ದಿನದ ಅನ್ನಕ್ಕಾಗಿ ಪರದಾಡುವ ಶ್ರಮ ಸಂಸ್ಕೃತಿಯ ಪ್ರತೀಕಗಳ ಬವಣೆ ಚೋಮನಲ್ಲಿ ಕಂಡು ಬರುತ್ತದೆ. ಈ ಸಾಲವನ್ನು ತೀರಿಸಲು ಸೇರೆಗಾರ ಮನ್ವೇಲ ಚೋಮನನ್ನು ಪೀಡಿಸುವಾಗ ಅವನು ವಿಧಿಯಿಲ್ಲದೆ ಅದುವರೆಗೆ ಹೊರಗೆ ಕಾಲಿಡದ ತನ್ನ ಮಕ್ಕಳಾದ ಚನಿಯ ಮತ್ತು ಗುರುವನನ್ನು ಕಾಫಿತೋಟಕ್ಕೆ ದುಡಿಯಲು ಕಳುಹಿಸುತ್ತಾನೆ. ಕಾಫಿ ತೋಟಗಳಲ್ಲಿ ದುಡಿಯುವ ಮುಖಾಂತರ ಚನಿಯ ಮತ್ತು ಗುರುವರು ಪ್ರಕೃತಿಯ ಸಹಜ ಸಂಸ್ಕೃತಿಯೊಂದಿಗೆ ಮುಖಾಮುಖಿಯಾಗುತ್ತಾರೆ. ಇದನ್ನು ಕಾರಂತರು *"ಪ್ರತಿಯೊಬ್ಬರ ಮೈ, ಮೋರೆಗಳೂ ಬೆವರು ಧೂಳುಗಳಿಂದ ಕೆಂಪಡರಿವೆ. ತಲೆಗೂದಲುಗಳಂತು ತಾಮ್ರದ ಸರಿಗೆಗಳಂತಾಗಿವೆ. ಎಂಟು ಮೈಲು ಕಾಡಿನ ಹಾದಿಯು ಕಳೆಯುತ್ತಲೇ ಎಲ್ಲರೂ ಉಸ್ಸೆಂದು ಕುಳಿತರು. ಕಟ್ಟಿ ತಂದ*

೧೮. ಶಿವರಾಮ ಕಾರಂತ, ಚೋಮನದುಡಿ, ಪುಟ – ೨೯

೧೯. ಟಿ.ಪಿ.ಅಶೋಕ (ಸಂ), ಶಿವರಾಮ ಕಾರಂತರು, ಪುಟ - ೯೯

ಅವಲಕ್ಕಿಯನ್ನು, ಹುರಿಯಕ್ಕಿಯನ್ನೂ ತುಸು ಮುಕ್ಕಿದರು. ಆಗ ಬಾಯಾರತೊಡಗಿತು. ಆದರೆ ಅಲ್ಲಿ ನೀರೆಲ್ಲಿ? ಇನ್ನೂ ಒಂದೆರಡು ಮೈಲು ದೂರ ನಡೆದು, ತಮ್ಮ ಹಾದಿಗೆ ಅಡ್ಡವಾಗಿ ಹರಿಯುತ್ತಿದ್ದ ಹಳ್ಳವೊಂದರಲ್ಲಿ ನೀರನ್ನು ಗಳಗಳನೆ ಕುಡಿದರು. ಬಹಳ ಬಾಯಾರಿ ಊರಲ್ಲಿ ದನಕರುಗಳು ಸಹ ಇದನ್ನು ಕುಡಿಯಲು ಅಂಜಬೇಕು. ಆದರೆ ಅದೇನೂ ವಿಚಿತ್ರದ ಸಂಗತಿಯಲ್ಲ. ಅದೇ ನೀರಿನಲ್ಲಿ ಮುಖವನ್ನು ಸವರಿಕೊಂಡು ಮುಂದಕ್ಕೆ ಸಾಗಿದರು."[೨೦] ಶ್ರಮ ಸಂಸ್ಕೃತಿಯ ಜನಾಂಗಕ್ಕೆ ನಿಸರ್ಗವು ಸಹಜವಾಗಿ ಕಂಡುಬರುತ್ತದೆ. ಎಂಬ ವಿಷಯ ಈ ಸಂಗತಿಯಿಂದ ತಿಳಿಯುತ್ತದೆ. ಆದರೆ ಆಧುನಿಕರಿಗೆ ಅಂದರೆ ಸಾಂಸ್ಕೃತಿಕವಾಗಿ, ಸಾಮಾಜಿಕವಾಗಿ ಮೇಲುಸ್ತರ ಎನಿಸಿಕೊಂಡವರಿಗೆ ಈ ನೀರು ಕಲುಷಿತವಾಗಿ ಕಂಡುಬರುತ್ತದೆ. ಆದರೆ ಇಂತಹ ನೀರನ್ನು ಕುಡಿಯುವುದು ಬಡವರಿಗೆ ಈ ಪರಿಸ್ಥಿತಿಯಲ್ಲಿ ಅನಿವಾರ್ಯವಾಗಿದೆ. ಪ್ರಸ್ತುತ ನಗರಗಳಲ್ಲಿ, ಹಳ್ಳಿಗಳಲ್ಲಿ ದಲಿತರ ಕೇರಿಗಳು ಇಂತಹ ಕಲುಷಿತ ನೀರನ್ನೇ ಕಡಿಯುತ್ತಿರುವುದು. ಈ ಸಂಗತಿ ನಮ್ಮ ನಾಗರೀಕತೆಯ ಕ್ರೂರ ಪ್ರತಿಬಿಂಬವಾಗಿದೆ.

"ಚನಿಯ ಮತ್ತು ಗುರುವ ಹಾಗೂ ಸಂಗಡಿಗರು ಸೂರ್ಯ ನೆತ್ತಿಯ ಮೇಲಕ್ಕೆ ಬರುವಾಗ, ಪಂಗಡದಲ್ಲಿ ಚುರುಕಿದ್ದವರು ಕಿಲ್ಲೂರು ನದಿಯ ದಂಡೆಯನ್ನು ಸೇರಿದರು. ಆ ನದಿ ತೀರ ಮನೋಹರವಾಗಿತ್ತು. ಮಗ್ಗುಲಲ್ಲಿ ಹಿರಿಮರಿಗುಪ್ಪೆಯ ಪರ್ವತ ಶ್ರೇಣಿ! ಅದರ ಮೇಲೆ ಹಾರಾಡುವ ಮೋಡಗಳಿವೆ. ಕೆಳಕ್ಕೆ ಕಲ್ಲು ಹರಳುಗಳ ಮೇಲೆ ಕಿಲಕಿಲನೆ ನಗುತ್ತ ಹರಿಯುವ ನದಿ, ಕವಿಗಳು ಬಿಟ್ಟೇಳದ ಚಲುವಿನ ನೋಟ, ಆದರೆ ಕೂಲಿಯ ಆಳುಗಳ ಜೀವನದಲ್ಲಿ ಮೋಡ, ಪರ್ವತ, ಇಲ್ಲವೆ ನದಿಗಳು ಮಾತನಾಡುತ್ತವೆಯೇ!"[೨೧] ಈ ಮೂಲಕ ಕಾರಂತರು ಬಡವರು ನೈಜ ಸಂಸ್ಕೃತಿಯನ್ನು ಕಟ್ಟಿಕೊಡುತ್ತಾರೆ.

ಈ ಕಡೆ ಚೋಮ ಭೂಮಿಯನ್ನು ಪಡೆಯುವ ಹಂಬಲದೊಂದಿಗೆ ಸಂಕಪ್ಪಯ್ಯನನ್ನು ಕೇಳಿದಾಗ, ಸಂಕಪ್ಪಯ್ಯನಿಗೆ ಭೂಮಿಯನ್ನು ಗೇಣಿಗೆ ಕೊಡಬೇಕೆಂಬ ಮನಸ್ಸಾಗುತ್ತದೆ. ಆದರೆ ಅವನ ತಾಯಿಯ ಹಿಂದೂ ಧರ್ಮ ಶ್ರೇಣೀಕೃತ ಪರಂಪರೆಯ ಮನಸ್ಸಿನ ಪ್ರತಿಬಿಂಬ. ಆಕೆಯಲ್ಲಿ ಈ ವಿಷಯವಾಗಿ ಪ್ರಸ್ತಾಪಿಸಿದಾಗ, ಹೊಲೆಯನಿಗೆ ಭೂಮಿಯನ್ನು ಕೊಡುವುದೇ? ಇದರಿಂದ ನಮ್ಮ ಸಂಸ್ಕೃತಿಯು ಹಾಳಾಗುತ್ತದೆ ಎನ್ನುತ್ತಾಳೆ. ಇದಕ್ಕೆ ಭಯಗೊಂಡ ಸಂಕಪ್ಪಯ್ಯ ಭೂಮಿಯನ್ನು ಗೇಣಿಗೆ ಕೊಡುವುದುನ್ನು ನಿರಾಕರಿಸುತ್ತಾನೆ. ನಂತರ ಇದನ್ನು ತಿಳಿದ ಚೋಮ ಇಂದೋ, ನಾಳೆಯೋ ತಾನೊಬ್ಬ ಬೇಸಾಯಗಾರನಾದೇನೆಂಬ ಆನಂದದ ಸ್ವರ್ಗಕ್ಕೆ ಕಾಲೂರಿಸಿದುರು – ಇವೆಲ್ಲವುಗಳ ಭವಿಷ್ಯವೇನು? ಪ್ರತಿ ಕ್ಷಣವೂ ಅವನ ಮುಂದೆ ಮುನಿದು ನಿಂತಿರುವ ನೇಗಿಲಿನ ಚಿತ್ರ ಕಾಣಿಸುತ್ತದೆ. ಇದನ್ನು ಕಂಡು ಬೇಸರವಾಗಿ ನನಗೆಲ್ಲಿ ಧನಿ? ನನ್ನ ಆಸೆಯನ್ನು ಪೂರೈಸದ ಧನಿಗಳ ಹಂಗು ನನಗೇಕೆ? ಎಂದುಕೊಂಡು ಸ್ವತಂತ್ರ ಜೀವಿಯಾಗಿ ಬದುಕಲು ತರ್ಕಿಸುತ್ತಾನೆ. ಆ ಊಟಕ್ಕೇನುಗತಿ? ಧನಿಯರ ಮನೆಯ ಕೂಲಿ ತಪ್ಪೀತಲ್ಲ ಊಟಕ್ಕೇನು ಎಂದರೆ? *"ಕಾಡಿನ ಕಟ್ಟಿಗೆ ಇದೆ; ಅಲ್ಲಲ್ಲಿ ಬೀಳಲಿದೆ, ಕೇದಗೆಯ ಬನಗಳಿವೆ, ಬೀಳಲುಗಳನ್ನಾಗಲಿ. ಕೇದಿಗೆಯ ಓಲೆಗಳನ್ನಾಗಲಿ ತರುವುದು.*

೨೦. ಅದೇ, ಪುಟ-೨೯
೨೧. ಅದೇ, ಪುಟ-೩೬

ಸೀಳಿ ಚಾಪೆಯನ್ನೋ, ಬುಟ್ಟಿಯನ್ನೋ ಹಣೆಯುವುದು; ಮಾರಿ ಜೀವಿಸುವುದು ತಾನೇ![೨೨] ಚೋಮನ ಈ ಮಾತುಗಳಲ್ಲಿ ಪ್ಯೊಡಲ್ ಸಂಸ್ಕೃತಿಗೆ ವಿರುದ್ಧವಾದ ಧ್ವನಿಯನ್ನು ಗುರ್ತಿಸಬಹಹುದು.

ಚೋಮ ಪಕ್ಕದ ಹಳ್ಳಿಗೆ ಹೋದಾಗ, ಇವನು ಹೋಗಿದ್ದ ಮನೆ ಕ್ರಿಶ್ಚಿಯನ್ ಮನೆ ಅವನು ಭೂಮಿಯನ್ನು ಪಡೆಯಲು ಸ್ವತಂತ್ರನಾಗಲು ಕ್ರಿಶ್ಚಿಯನ್ ದೇವರನ್ನು ಪೂಜಿಸಬೇಕು ಎನ್ನುವ ರೀತಿಯಲ್ಲಿ ಮಾತಾನಾಡಿದಾಗ; ಅದನ್ನು ಚೋಮ ಬೆಳ್ಳಿಗೆ ತಿಳಿಸುತ್ತಾನೆ. ಅದನ್ನು ಕೇಳಿದ ಬೆಳ್ಳಿ, ತಮ್ಮ ಸಂಸ್ಕೃತಿಯನ್ನು ಸರಿಯಾಗಿ ತಿಳಿದಿರುವಂತವಳು. ಆದುದರಿಂದ ಅವಳು "*ಅಪ್ಪಾ, ನಾವು ಯೋಗ್ಯತೆಗೂ ಮೀರಿ ಆಸೆ ಮಾಡಿದರೆ ನಡೆದೀತೆ? ಬೇಸಾಯ ಮಾಡಬೇಕಾದರೆ, ಬ್ರಾಹ್ಮಣರಾಗಿಯೋ, ಬಂಟರಾಗಿಯೋ, ಗೌಡರಾಗಿಯೋ ಹುಟ್ಟ ಬೇಡವೇ? ಹಾಳಾದ ಹೊಲೆಯರಾಗಿ ಹುಟ್ಟಿ ಬೇಸಾಯ ಮಾಡಬೇಕು ಅಂದರೆ ಆಗುತ್ತದೆಯೇ? ಧನಿಗಳಾದರೂ ಏನು ಮಾಡುತ್ತಾರೆ? ಊರಿನ ಕಟ್ಟು ಕಟ್ಟಳೆಯಿಲ್ಲವೆ! ಅದನ್ನವರು ಮುರಿದರೆ ಅವರಿಗೆ ಯಾರೇನೆಂದಾರು? ಅವರ ಸುದ್ದಿ ಬಿಡು – ನಾಳೆ ನಾನೇ ಬೇಸಾಯಗಾರನೆಂದು ತಿಳಿ, ಆಗ ನಮ್ಮ ಜಾತಿಯವರೇ ಎಷ್ಟು ಸಿಟ್ಟಾಗಲಿಕ್ಕಿಲ್ಲ!*"[೨೩] ಇಲ್ಲಿ ಸಮಾಜದಲ್ಲಿರುವ ಶ್ರೇಣಿಕೃತ ಸಂಸ್ಕೃತಿ ಮತ್ತು ಈ ಸಂಸ್ಕೃತಿಯನ್ನು ತ್ಯಜಿಸಲು ನಿಸರ್ಗದ ಮೂಲವಾದ ಭೂಮಿಯನ್ನು ಪಡೆಯಲು ಚೋಮ ಪರಿತಪಿಸುವುದು. ಅದಕ್ಕೆ ಮಗಳು ಬೆಳ್ಳಿಯು ಬೇಸರದಿಂದ ಹೇಳುತ್ತಾಳೆ. ಇದನ್ನು ಗಮನಸಿದಾಗ ಸಹಜ ನಿಸರ್ಗದಲ್ಲಿ ಮಾನವ ಅದನ್ನು ಅನುಭವಿಸುವ ಸಂದರ್ಭದಲ್ಲಿ ಕೆಲವರಿಗೆ ಮಾತ್ರ ಅದರ ಹಕ್ಕು ಎಂದು ಪ್ರಸ್ತಾಪಿಸಿ ಜಾತಿಯೆಂಬ ಕೆಟ್ಟ ಸಂಸ್ಕೃತಿಯಿಂದ ಕೆಲವರನ್ನು ನಿರ್ಬಂಧಿಸಿರುವುದು ಕಂಡುಬರುತ್ತದೆ.

ಚನಿಯ ಗುರುವ ಕೂಲಿಗಳನ್ನು ಕಾಫಿ ತೋಟದಲ್ಲಿ ಕೆಲಸ ಮಾಡುವಾಗ ಕಾರ್ಕಳದ ದಂಪತಿ ಮಗಳಾದ ಮಾರಿಯನ್ನು ಗುರುವ ಪ್ರೇಮಿಸಿ ಮದುವೆಯಾಗುತ್ತಾನೆ. ಅದರ ಮೂಲಕ ಭೂಮಿಯನ್ನು ಪಡೆಯುತ್ತಾನೆ. ಇದರಿಂದ ಚನಿಯ, ಚೋಮ ಮತ್ತು ಬೆಳ್ಳಿಗೆ ದುಃಖವಾಗಿ ಅವನನ್ನು ಬಹಿಷ್ಕಾರ ಮಾಡುತ್ತಾರೆ ಗುರುವ ಈ ಮೂಲಕ ಭೂಮಿಯನ್ನು ಪಡೆದು ನಿಸರ್ಗದೊಂದಿಗೆ ಸಂಬಂಧ ಬೆಳೆಸಿ ಸಾಂಸ್ಕೃತಿಕ ಪಲ್ಲಟಕ್ಕೆ ಕಾರಣನಾಗುತ್ತಾನೆ. ಆದರೆ ಚೋಮನ ಸಾಲವನ್ನು ಚನಿಯ ಮತ್ತು ಗುರುವ ಇಬ್ಬರು ತೀರಿಸಲಾಗದೆ ಸಾಲವನ್ನು ಇನ್ನು ಹೆಚ್ಚು ಮಾಡಿಕೊಂಡು ಓಂತಿರುಗುತ್ತಾರೆ. ಮನ್ವೇಲನ ದೌರ್ಜನ್ಯದ ಮಾತುಗಳಿಂದ ಮರ್ಯಾದೆಗೆ ಅಂಜಿದ ಚೋಮ ತನ್ನ ಮಗಳಾದ ಬೆಳ್ಳಿಯನ್ನು ಕಾಫಿ ತೋಟದ ಕೆಲಸಕ್ಕೆ ಕಳುಹಿಸುತ್ತಾನೆ. ಅಲ್ಲಿ ಮನ್ವೇಲ ಮತ್ತು ಕಾಫಿ ತೋಟದ ಒಡೆಯ ಮಿಂಗೇಲನ ಕಾಮಕ್ಕೆ, ಬಡತನ ಮತ್ತು ಸಾಲ ತೀರಿಸಬೇಕೆಂಬ ಅನಿವಾರ್ಯದಿಂದ ಬಲಿಯಾಗುತ್ತಾಳೆ. ಕಾರಂತರು ಬೆಳ್ಳಿಯ ಅಸಹಾಯಕತೆ ಮತ್ತು ಅವಳ ಭಾವನೆಗಳ ಬಗ್ಗೆ ಹೇಳುತ್ತಾರೆ. 'ಏಕೋ ಮನ್ವೇಲನು ಬೆಳ್ಳಿಯ ಜೀವನದಲ್ಲಿ ಆಸಕ್ತಿಯನ್ನು ತೋರಿಸ

---

೨೨ ಅದೇ, ಪುಟ ೪೪
೨೩ ಅದೇ, ಪುಟ-೭೫

ತೊಡಗಿದಂತೆ ಕಾಣಿಸಿತು. ದಿನಹೋದಂತೆ ಅವನು ಅವಳೊಡನೆ ಮಾತಾನಾಡುವುದು ನಗುವುದು, ಚೇಷ್ಟೆ ಮಾಡುವುದು ಹೆಚ್ಚುತ್ತಲೂ ಹೋಗಿತು. ಅವಳಿಗೂ ಅವುಗಳ ಅರ್ಥ ಹೊಳೆಯುತ್ತಾ ಬಂದಿತು. ಜೀವನದಲ್ಲಿ ಮೊದಲನೆಯ ಬಾರಿಗೆ ಯೌವನದ ದುಡುಕುತನವನ್ನು ಅವಳಾದರೂ ಅನುಭವಿಸತೊಡಗಿದಳು. ಅದರಿಂದಾಗಿ ಮನ್ವೇಲನ ಚೇಷ್ಟೆಗಳನ್ನು ತಿರಸ್ಕರಿಸಲು ಹೋಗಲಿಲ್ಲ. ಮುಂದೆ ಸಮ್ಮತಿಯ ಮುದ್ರೆಯನ್ನು ಕೊಟ್ಟಂತೆ ಕಾಣುತ್ತದೆ. ಅವನ ಕರುಣೆಯಿಂದಾಗಿ ತಂದೆಯ ಸಾಲ ತೀರುವುದಾದರೆ ಏನಾದರೇನೆಂಬ ಉದಾಸೀನ ತಾಳಿದಳು.' ಇದರ ಅರ್ಥ ತನ್ನ ಶೀಲ ಸಂಸ್ಕೃತಿಗೆ ಒಗ್ಗದ ಪರಿಸರದಲ್ಲಿ ಆಕೆ ಇದ್ದ ಕಾರಣವಾಗಿ ನೈಸರ್ಗಿಕ ಸಹಜವಾದ ಆಸೆಯನ್ನು ಹತ್ತಿಕ್ಕಲಾರದೆ ಲೈಂಗಿಕ ದಾಳಿಗೆ ತುತ್ತಾಗುತ್ತಾಳೆ. ಈ ಕುರಿತು ವಿಮರ್ಶಕ ಜಿ. ರಾಜಶೇಖರವರು *"ಮಿಂಗೇಲ, ಮನ್ವೇಲರ ಪಿಪಾಸೆಯಿಂದ ಬೆಳ್ಳಿ ತನ್ನ ಶೀಲ ಭಂಗವಾಗುವುದು ಕಾದಂಬರಿಯ ಅನುಭವದ ಚೌಕಟ್ಟಿನ ಹೊರಗಿನ ನೈತಿಕ ಮೌಲ್ಯಗಳ ದೃಷ್ಟಿಯಿಂದಲ್ಲ. ಚೋಮನ ಮೌಲ್ಯಗಳ ದೃಷ್ಟಿಯಿಂದಲೇ ಇದು ಶೀಲ ಭಂಗವಾಗುತ್ತದೆ. ಇಡೀ ಕಾದಂಬರಿಯಲ್ಲಿ ಬೇಸಾಯದ ನೆಲೆ ಆಸೆ ಬಿಟ್ಟರೆ, ಚೋಮನನ್ನು ಅತಿಯಾಗಿ ಕಾಡಿರುವುದು ಪ್ರಾಯಕ್ಕೆ ಬಂದ ತನ್ನ ಮಕ್ಕಳಿಗೆ ಮದುವೆ ಮಾಡಿಸಲಾಗಲಿಲ್ಲವಲ್ಲ ಎಂಬ ಕೊರಗು ಬೇಸಾಯಗಾರನಾಗುವ ಆಸೆ ಮತ್ತು ಮಕ್ಕಳಿಗೆ ಮದುವೆ ಮಾಡಿಸಬೇಕು ಎನ್ನುವ ಆಸೆ. ಅವನ ಮೌಲ್ಯಗಳಿಗೆ ಸುಸಂಗತವಾದ ಆಸೆಗಳೆ ಆಗಿವೆ".*[೨೪]

ಚೋಮನು ಭೂಮಿಗಾಗಿ ಪರಿತಪಿಸುವುದರಲ್ಲಿ ನ್ಯಾಯವಿದೆ. ಏಕೆಂದರೆ ಅವನ ಸುತ್ತಮುತ್ತಲಿನ ಮೇಲ್‌ಸ್ತರದ ಜನಾಂಗ ಭೂಮಿಯನ್ನು ಉಳುಮೆ ಮಾಡಿ ಸುಖವಾದ ಬಾಳನ್ನು ಬಾಳುವುದಾಗಿದೆ. ಈ ಬಾಳ್ವೆಯ ಕನಸನ್ನು ಚೋಮನು ಕಾಣುತ್ತಾನೆ. ಅದಕ್ಕಾಗಿ ತನ್ನ ಒಡೆಯನಿಂದ ಗೇಣಿಗೆ ಭೂಮಿಯನ್ನು ಪಡೆದು ಭೂ ಒಡೆತನ ಸಂಸ್ಕೃತಿಗೆ ಒಡೆಯನಾಗಲು ಪ್ರಯತ್ನಿಸಿ ವಿಫಲನಾಗುತ್ತಾನೆ. ಆದರೂ ಧೃತಿಗೆಡದೆ ಭೂಮಿಯನ್ನು ಪಡೆಯಲು ಮತಾಂತರ ಹೊಂದಲು ಪಾದ್ರಿಯ ಬಳಿಗೆ ಹೋಗಲು ಸಿದ್ದನಾಗುತ್ತಾನೆ. ಇದಕ್ಕೆಲ್ಲಾ ನಿಸರ್ಗವು ಮನುಷ್ಯನ ಸಂಸ್ಕೃತಿಯೊಂದಿಗೆ ಹೊಂದಿರುವ ಸಂಬಧವೇ ಆಗಿದೆ. ನೀರಲ್ಲಿ ಈಜಲು ಹೋಗಿ ನೀಲ ಸಾವನ್ನು ಅಪ್ಪಿದ ಸಂಗತಿ ಅವನಿಗೆ ಘಾಸಿ ಮಾಡಿರುತ್ತದೆ. ಈ ನೀರು ಸಹ ನಿಸರ್ಗದ ಕೊಡುಗೆ, ಇದು ಮನುಷ್ಯ ಸಂಸ್ಕೃತಿಯೊಂದಿಗೆ ಗಾಢವಾದ ಸಂಬಂಧ ಹೊಂದಿದೆ. ಇದನ್ನು ಮನುಷ್ಯ ನದಿ, ಝರಿ, ಕೆರೆ, ಜಲಪಾತ ಮತ್ತು ಮಳೆಯ ರೂಪದಲ್ಲಿ ಕಂಡು ತನ್ನ ಸಂಸ್ಕೃತಿಯನ್ನು ಬೆಳೆಸಿಕೊಂಡಿರುತ್ತಾನೆ. ಇದರಲ್ಲಿ ಈಜು ಸಹ ಒಂದಾಗಿದೆ. ಇಂತಹ ಸಾಹಸ ಮಾಡಲು ಪ್ರಯತ್ನಿಸಿದರು ಸಹ ಅಲ್ಲಿದ್ದ ಮೇಲ್ವರ್ಗದವರು ತಡೆಯುತ್ತಾರೆ. ಕಾರಣ ನೀಲ ಹೊಲೆಯ ಚೋಮನ ಮಗ. ಆದ್ದರಿಂದ ಅವನನ್ನು ಅಲ್ಲಿದ್ದವರು ರಕ್ಷಿಸಲಿಲ್ಲ.

---

೨೪. ಟಿ.ಪಿ.ಅಶೋಕ (ಸಂ). ಕಾರಂತ ಮಂಥನ. ಪುಟ – ೨೦೩

ಈ ಎಲ್ಲಾ ಸಂಗತಿಗಳಿಂದ ರೋಸಿದ ಚೋಮ ಮತಾಂತರ ಹೊಂದಲು ಸಿದ್ದನಾಗಿ "*ಇದು ಬೇಡ, ಈ ಊರಿನ ದೇವರ ತಂಟೆಯೇ ಬೇಡ! ತನಗಿನ್ನು ಕ್ರಿಸ್ತ ದೇವರು! ಮಗ ಗುರುವನನ್ನು ಬೇಸಾಯಗಾರನನ್ನಾಗಿ ಮಾಡಿದ ದೇವರು*"[೨೫] ಎಂಬುದಾಗಿ ನಿರ್ಧರಿಸಿದ ಇದಕ್ಕಾಗಿ ಬೆಳ್ಳಿ ಮುಂಜಾನಯೇ ಎದ್ದು ಕಾಡಿಗೆ ಗಡ್ಡೆ ಗೆಣಸುಗಳನ್ನು ಕಿತ್ತು ತಂದು ಬೇಯಿಸಿ ಬುತ್ತಿಮಾಡಿಕೊಟ್ಟಳು. ಇದು ಮನುಷ್ಯ ಜೀವನದ ಬೆಳವಣಿಗೆ ಮತ್ತು ಅವನ ಸಂಸ್ಕೃತಿಯ ಬೆಳವಣಿಗೆಗೆ ನಿಸರ್ಗ ನೀಡುತ್ತಿರುವ ಕೊಡುಗೆಯಾಗಿದೆ. "*ತನ್ನ ಕೊನೆಕಾಲದಲ್ಲಿ ಹತಾಶನಾಗಿ ಮತಾಂತರವಾದರೂ ಸರಿಯೆ, ಊರು ಮನೆ ತೊರೆದರೂ ಸರಿಯೆ, ಬೇಸಾಯಗಾರನಾಗಿಯೇ ತೀರುತ್ತೇನೆ ಎಂದು ಹೊರಟ ಚೋಮನಿಗೆ ಅವನ ನಂಬಿಕೆಯ ದೈವ ಪಂಜುರ್ಲಿ ಭೂತ ತನ್ನ ಎದುರಿಗೆ ನಿಂತು ತಡೆದು ನಿಲ್ಲಿಸಿದಂತೆ ಭಾಸವಾಗುತ್ತದೆ*".[೨೬]

ಹೀಗೆ ಪರಿಸರ ಮತ್ತು ಭೂಮಿಯು ಮನುಷ್ಯನ ಸಂಸ್ಕೃತಿಯೊಂದಿಗೆ ಹಾಸು ಹೊಕ್ಕಾಗಿರುವುದರಿಂದ ಅದಕ್ಕಾಗಿ ಪರಿತಪಿಸುವ ನೆಲೆಯಾಗಿ ಚೋಮ ಕಂಡುಬರುತ್ತಾನೆ. ಆದರೆ ಅವನ ಮಗಳು ತನ್ನ ಮನೆತನದ ಮರ್ಯಾದೆ ಉಳಿಸಲು ಹೋಗಿ ಕಾಫಿ ತೋಟದಲ್ಲಿ ಶೀಲಭಂಗವಾಗುವುದು ತುಂಬಾ ಘೋರವಾದ ಅಸಹಾಯಕತೆಯಾಗಿ ಕಂಡುಬರುತ್ತದೆ. ಇದರ ಬಗ್ಗೆ ಟಿ.ಪಿ ಅಶೋಕ "*ಚೋಮನ ದುಡಿಯ ಕಾಲ ದೇಶಗಳ ಸಂದರ್ಭದಲ್ಲಿ ಭಾರತೀಯ ಸಮಾಜ ಒಂದು ಹೊಸ ಮೌಲ್ಯ ವ್ಯವಸ್ಥೆಯ ಪ್ರವೇಶವನ್ನು ಎದುರುಗೊಂಡಿದೆ. ವಸಾಹತುಶಾಹಿಯು ಮಿಶನರಿ ಸಂಸ್ಕೃತಿಯೊಂದಿಗೆ ದಕ್ಷಿಣ ಕನ್ನಡವನ್ನು ಆದಾಗಲೇ ಪ್ರವೇಶಿಸಿದೆ. ಈ ಮಿಶನರಿಗಳು ಮತಾಂತರದ ಚಟುವಟಿಕೆಗಳಲ್ಲಿ ತೊಡಗಿದ್ದಾರೆ. ಮುಖ್ಯವಾಗಿ ದಲಿತರು ಕ್ರೈಸ್ತ ಮತಕ್ಕೆ ಸೇರಲಾಂಭಿಸಿದ್ದಾರೆ. ಈ ಮತಾಂತರದ ಹಿಂದಿನ ಒಂದು ಮುಖ್ಯ ಪ್ರೇರಣೆಯೆಂದರೆ ಮಿಶನರಿಗಳು ಉಳಲು ಭೂಮಿಯನ್ನು ಕೊಡುತ್ತಿದ್ದಾರೆ. ಹಿಂದೂ ಸಂಸ್ಕೃತಿಯ ಚೌಕಟ್ಟಿನಲ್ಲಿ ಸ್ವಂತ ಭೂಮಿಯ ಆಸೆಯನ್ನು ತೊರೆದೇ ಜೀವಿಸಬೇಕಾಗಿದ್ದ ಅಸ್ಪೃಶ್ಯರಿಗೆ ಇಲ್ಲಿ ಬಿಡುಗಡೆಯ ಒಂದು ಮಾರ್ಗ ಗೋಚರಿಸುತ್ತದೆ. ಇಲ್ಲಿ ಅವರಿಗಿರುವ ಸಮಸ್ಯೆಯೆಂದರೆ ಅವರು ಹಿಂದೂ ಸಂಸ್ಕೃತಿ ಯೊಂದಿಗೆ ಹಿಂದಿನ ಜಾತಿ ಮತ್ತು ಮಾನವೀಯ ಸಂಬಂಧಗಳನ್ನು, ದೇವರು ದಿಂಡರನ್ನು ಹಬ್ಬ-ಆಚರಣೆಗಳನ್ನು, ರೂಢಿಯಾಗಿದ್ದ ಮೌಲ್ಯಗಳನ್ನೂ, ಭಾವನಾತ್ಮಕ ಮತ್ತು ವ್ಯವಹಾರಿಕ ಸಂಬಂಧವನ್ನು ಕಡಿದುಕೊಳ್ಳಬೇಕಾಗಿದೆ. ಚೋಮನ ಮಗ ಗುರುವ ಅಥವಾ ಅವನಂಥ ಯುವಕರಿಗೆ ಇದೊಂದು ಅಂಥ ದೊಡ್ಡ ಸಮಸ್ಯೆಯೇನಲ್ಲ ಮತಾಂತರ ಹೊಂದಿ, ಭೂಮಿಯನ್ನು ಸಂಪಾದಿಸಿ ಹೊಸ ಬದುಕನ್ನೇ ಪಡೆಯುತ್ತಾರೆ*."[೨೭] ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಭೂಮಿಗಾಗಿ ಹೋರಾಟ ಮಾಡಿ, ಅದನ್ನು ಹೇಗಾದರೂ ಸಂಪಾದಿಸಿ ನಿಸರ್ಗದ ಚಲನಶೀಲತೆಯ ಸಂಸ್ಕೃತಿಯೊಂದಿಗೆ ಸಂಬಂಧ ಕಲ್ಪಿಸಿಕೊಳ್ಳುವುದಾಗಿದೆ. ಇದನ್ನು ದೃಢಕರಿಸಿದಂತೆ ಕಂಡುಬರುತ್ತದೆ.

'ಕುಡಿಯರ ಕೂಸು' ಕಾದಂಬರಿಯಲ್ಲಿ ನಿಸರ್ಗವು ಮನುಷ್ಯನ ಸಂಸ್ಕೃತಿಯೊಂದಿಗೆ ಹೊಂದಿರುವ ಸಂಬಂಧಗಳನ್ನು ಕುರಿತು ಕಾರಂತರು ತಮ್ಮ ಅನುಭವಗಳ ಮೂಲಕ ಕಟ್ಟಿಕೊಡುತ್ತಾರೆ. ಅಂದರೆ ದಕ್ಷಿಣ ಕನ್ನಡ ಜಿಲ್ಲೆಯ ಬೇರೆ ಬೇರೆ ಸ್ಥಳಗಳಲ್ಲಿ ಇವರು ವಾಸಿಸುತ್ತಾರೆ. ಕುಡಿಯರು ಬುಡಕಟ್ಟು ಸಂಸ್ಕೃತಿಗೆ ಸೇರಿದವರು. "*ಈ ಕಾದಂಬರಿಯಲ್ಲಿ ಬರುವ ಮಲೆ ಕುಡಿಯರು*

೨೫. ಶಿವರಾಮ ಕಾರಂತ, ಚೋಮನದುಡಿ, ಪುಟ - ೧೧೧

೨೬. ಶಿವರಾಮ ಕಾರಂತ, ಚೋಮನದುಡಿ, ಪುಟ – ೬೨

೨೭. ಟಿ.ಪಿ.ಅಶೋಕ (ಸಂ), ಶಿವರಾಮ ಕಾರಂತ ಎರಡು ಅಧ್ಯಯನಗಳು, ಪುಟ, ೮೯– ೯೦

ಬೆಳ್ತಂಗಡಿಯ ಸಮೀಪಕ್ಕೆ ಸೇರಿದವರು. ದಕ್ಷಿಣ ಕನ್ನಡ ಜಿಲ್ಲೆಯ ಸುಬ್ರಮಣ್ಯ, ಸುಳ್ಯ, ಬೆಳ್ತಂಗಡಿ ಪ್ರದೇಶಗಳ ನಡುವಣ ಮಲೆ ಕುಡಿಯರ ಜೀವನ ಕ್ರಮವನ್ನು ಕಾದಂಬರಿಯು ಚಿತ್ರಿಸುತ್ತದೆ".[೨೮] ಎಂದು ಡಾ.ಕೇಶವಶರ್ಮ ಪ್ರಸ್ತಾಪಿಸುತ್ತಾರೆ. ಕುಡಿಯರು ಕುಮರಿ ಬೇಸಾಯ ಮಾಡುತ್ತಾ, ನೈಸರ್ಗಿಕ ಸಂಪತ್ತನ್ನು ತಮ್ಮ ಜೀವನಕ್ಕಾಗಿ ಬಳಸಿಕೊಳ್ಳುತ್ತಾರೆ. ಆ ಮೂಲಕ ತಮ್ಮ ಸಂಸ್ಕೃತಿಯನ್ನು ಬೆಳೆಸಿಕೊಂಡಿರುವುದು ಗಮನಾರ್ಹವಾಗಿದೆ.

ಈ ನೈಸರ್ಗಿಕ ಸಂಪತ್ತಿನ ಬಳಕೆ ಅವರ ಸಾಮಾಜಿಕ, ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಸಂಗತಿಗಳ ಮೇಲೆ ಪ್ರಭಾವ ಬೀರಿವೆ. ಕಾರಂತರು ಬಹುತೇಕ ಕಾದಂಬರಿಗಳಲ್ಲಿ ಮನುಷ್ಯನು ನಿಸರ್ಗದೊಂದಿಗೆ ಬದುಕುವ ಮತ್ತು ತಮ್ಮ ಸಂಸ್ಕೃತಿಯನ್ನು ಬೆಳೆಸಿಕೊಳ್ಳುವ ಸಂಗತಿಗಳು ಮುಖ್ಯವಾಗಿದೆ. ಈ ಮಾತು ಕುಡಿಯರ ಕೂಸು ಕಾದಂಬರಿ ಸಂದರ್ಭದಲ್ಲಿ ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಕುಡಿಯರು ಸಮಾಜದಲ್ಲಿ ನಂಬಿಕೆ, ಆಚರಣೆಗಳು ನಿಸರ್ಗವನ್ನು ಅವಲಂಬಿಸಿವೆ.

ಈ ಅಂಶಗಳನ್ನು ಗಮನಿಸಿದಾಗ 'ಕುಡಿಯರ ಕೂಸು' ಕಾದಂಬರಿಯಲ್ಲಿ ಬರುವ ಕಿರಿಮಲೆ ಮತ್ತು ಹಿರಿಮಲೆಯಲ್ಲಿ ಈ ಕುಡಿಯರು ವಾಸಿಸುತ್ತಿದ್ದು; ಇವರು ಈ ಬೆಟ್ಟಗಳ ನಡುವೆ ತಮ್ಮದೇ ಸಂಸ್ಕೃತಿಯನ್ನು ಕಟ್ಟಿಕೊಂಡು ಬದುಕುತ್ತಿರುವರು. ಇಂತಹ ಸಮಯದಲ್ಲಿ ತಿರುಮಲಭಟ್ಟ ಎಂಬ ವ್ಯಕ್ತಿ ಕುಡಿಯರ ಸಾಂಸ್ಕೃತಿಕ ಜೀವನ ಮತ್ತು ಆರ್ಥಿಕ ಜೀವನದಲ್ಲಿ ಹಸ್ತಕ್ಷೇಪ ಮಾಡುವ ಪಾತ್ರವಾಗಿ ಕಂಡು ಬರುತ್ತಾನೆ. ಇವನಲ್ಲಿ ವಸಾಹತುಶಾಹಿ ನಡುವಳಿಕೆ ಕಂಡುಬರುತ್ತದೆ. ಆದರೆ ಈ ವಸಾಹತು ಶ್ರೇಣಿಯೆಂಬ ನೆಲೆಯನ್ನು ಕುಡಿಯರು ತಮ್ಮ ಕಲ್ಕುಡರ ದೈವದ ಆರಾಧನೆಯ ಪ್ರಪಂಚದ ಅರಿವು ಇಲ್ಲದ ಹಾಗೂ ಆಧುನಿಕ ನೆಲೆಯಲ್ಲಿ ಚಲಾವಣೆಯಲ್ಲಿರುವ ಕಾಗದ ನೋಟಿನ ಬೆಲೆಯು ಗೊತ್ತಿಲ್ಲದೆ ಇಂತಹ ಕುಡಿಯರಲ್ಲಿ ತಿರುಮಲಭಟ್ಟರ ಪ್ರವೇಶದೊಂದಿಗೆ ಜೀವನಕ್ಕಾಗಿ ತಾವು ತಲೆಮಾರುಗಳಿಂದ ಸಹಜವಾಗಿ ದೊರಕುತ್ತಿದ್ದ ಏಲಕ್ಕಿ ಸಂಗ್ರಹಣೆ ಅವನು ಪ್ರಾರಂಬಿಸಿದ ಏಲಕ್ಕಿ ಬೆಳೆಯ ವಾಣಿಜ್ಯೀಕರಣದ ಪ್ರಭಾವ ಅವರ ಸಹಜ ನೈಸರ್ಗಿಕ ಸಂಬಂಧದಲ್ಲಿ ಪಲ್ಲಟಗಳಾಗುತ್ತವೆ.

ಕಾರಂತರು ಈ ಮಲೆ ಕುಡಿಯ ಗಂಡಸು, ಹೆಂಗಸರ ಮೈಕಟ್ಟು ಸಿಂಹಳೀಯರಂತೆ ಮಧ್ಯಮ ಗಾತ್ರದ್ದು, ಅವರ ಮೈ ಬಣ್ಣಕಂದು, ಅವರ ಉಡುಗೆ ತೊಡುಗೆಗಳ ರೀತಿಯೂ ಬೇರೆ, ಜೀವನದ ರೀತಿ ಸಂಪೂರ್ಣ ಬೇರೆಯೇ. ತಮ್ಮ ಧನಿಗಾಗಿ ಅವರು ಕಾಡಿನ ಮಧ್ಯದಲ್ಲಿ ನೆಡದೆಯೂ ಬೆಳೆಯುವ ಏಲಕ್ಕಿ ಫಸಲನ್ನು ಒಟ್ಟು ಗೂಡಿಸಿ ಕೊಡುತ್ತಾರೆ. ವರ್ಷಕ್ಕೊಂದೆಡೆರಡು ಬಾರಿ ಈ ಕುಡಿಯರು ತಮ್ಮ ಘಟ್ಟದ ಸೆರಗಿಂದ ಇಳಿದು ಘಟ್ಟದ ಕೆಳಕ್ಕೆ ನಡೆಯುವ ಯಾವುದಾದರೊಂದು ಜಾತ್ರೆಯ ನೆಪದಿಂದ ಬರುವುದುಂಟು ಇಲ್ಲವಾದರೆ, ಅದೂ ಇಲ್ಲ.

---

೨೮. ಬಿ.ಮಾಲಿನಿ ಮಲ್ಯ (ಸಂ), ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ, ಪುಟ - [illegible]

"ಅವರು ಕೃಷಿ ಮಾಡಿ 'ಕುಮರಿ ಬೆಳೆ' ಎನ್ನುತ್ತಾರೆ. ಕಾಡಿನ ನಾಲ್ಕೆಂಟು ಎಕ್ರೆ ವಿಸ್ತಾರದ ಸೆರಗನ್ನು ಕಡಿದು, ಉರುಳಿಸಿ, ಅದು ಒಣಗುತ್ತಲೇ ಉಟ್ಟು, ಕತ್ತಿಗಳೊಂದ ನೆಲವನ್ನು ಅಗೆದು, ಅಲ್ಲಿ ಭತ್ತದ ಬೆಳೆಯನ್ನು ಬೆಳೆಯುತ್ತಾರೆ. ಇದಲ್ಲದೆಯೆ ಆರೆಂಟು ವಿಧಾನಗಳಿಂದ ಪ್ರಾಣಿಗಳ ಬೇಟೆ ಆಡುತ್ತಾರೆ; ಬೆಟ್ಟದ ತೊರೆಗಳಿಗೆ ಯಾವುದೋ ವಿಷದ ಕಾಯನ್ನು ಅರೆದು ಹಾಕಿ, ಅದರಿಂದ ನಿಶ್ಚೇಷ್ಟಗೊಂಡ ಮೀನುಗಳನ್ನು ಹಿಡಿಯುತ್ತಾರೆ. ಜೇನು ತುಪ್ಪ ಸಂಗ್ರಹಿಸುತ್ತಾರೆ. ಅಲ್ಲಿಗೆ ಹೋದ ನನಗೆ ಅವರು ಬೇಟೆಗಳನ್ನು ಹಿಡಿಯುವ ಹಲವಾರು ಕ್ರಮಗಳನ್ನು ತೋರಿಸಿದರು. ಈಚಲು ಮರಗಳನ್ನು ಏರಿ ರಾತ್ರಿಯಲ್ಲಿ ಮುಸುಕು ಹಾಕಿ ಕುಳಿತುಕೊಂಡು ಹೆಂಡವನ್ನು ಕುಡಿಯಲು ಬರುವ ಮುಳ್ಳಿಲಿಗಳನ್ನು ಹೆಂಡದಲ್ಲಿ ಮುಳುಗಿಸಿ ಕೊಲ್ಲುತ್ತಾರೆ. ಮರದಿಂದ ಮರಕ್ಕೆ ಅಂತರಿಕ್ಷದಲ್ಲಿ ಬಿದಿರಿನ ಸೇತುವೆಯನ್ನು ಕಟ್ಟಿ, ಅದರ ನಡುವೆ ಉರುಳಿಟ್ಟು ಆ ದಾರಿಯಾಗಿ ಹಾಯುವ ಕಪಿಗಳನ್ನು ಕೊಂದು ತಿನ್ನುತ್ತಾರೆ. ತೆರ ತೆರನ ಉರುಳನ್ನಿರಿಸಿ ಜಿಂಕೆ, ಕೆಮ್ಮಗಳಂತಹ ಪ್ರಾಣಿಗಳನ್ನು ಹಿಡಿಯುವ ವಿಧಾನಗಳಿವೆ. ಅನಾದಿ ಕಾಲದಿಂದಲೂ ಮನುಷ್ಯ ಬೇಟೆಯ ವಿಚಾರದಲ್ಲಿ ಕಲಿತುಕೊಂಡ ಉಪಾಯಗಳು ತುಂಬಾ ಕುತೂಹಲಕಾರಿಯಾಗಿವೆ".[೨೯]

ಕುಡಿಯರ ಕಾಡಿನ ಜೀವನ ಮತ್ತು ಸಂಸ್ಕೃತಿಯನ್ನು ಕಣ್ಣಾರೆ ಕಂಡ ಕಾರಂತರು ಲೇಖನ ರೂಪದಲ್ಲಿ ಬರೆದು ಬಾಂಬೇ ಕ್ರಾನಿಕಲ್ ಪತ್ರಿಕೆಯಲ್ಲಿ ಪ್ರಕಟಿಸಿ ನಂತರ ಕಾದಂಬರಿ ಬರೆಯಲು ಪ್ರಾರಂಭಿಸಿದೆ ಎಂದು ಹೇಳುತ್ತಾರೆ.

'ಕುಡಿಯರ ಕೂಸು' ಕಾದಂಬರಿಯು ಪ್ರಾರಂಭವಾಗುವುದೇ ಅವರ ಸಂಸ್ಕೃತಿಯ ಯಜಮಾನ ಗುರಿಕಾರ ಕೆಂಚನ ವರ್ಣನೆಯೊಂದಿಗೆ ಎಂಬುದು ಗಮನಾರ್ಹವಾಗಿದೆ. ಎಷ್ಟೋ ವರ್ಷಗಳ ಹಳೆಯ ಕತೆಯಿದು. ಇಂದಿನ ದಿನಕ್ಕೂ ಅವರಣದಲ್ಲಿ, ಕುಡಿಯರು ಬಾಳಿ ಬದುಕಿದ ರೀತಿಯಲ್ಲಿ ಬಹು ಮಟ್ಟಿನ ವೆತ್ಯಾಸವನ್ನು ನಾವು ಕಾಣಲಾರೆವಾದರೂ ಕುಡಿಯರ ಕೆಂಚ ಅವನ್ನೆಲ್ಲ ಕಾಣಬಲ್ಲ. ಅವನಿಗೀಗ ಅರವತ್ತು ವಯಸ್ಸಿರಬಹುದು. ಆ ಅರತ್ತು ವಯಸ್ಸಿನ ಬಾಳ್ವೆಯಲ್ಲೇ ಅವನ ಮತ್ತು ಅವನ ಬಳಗದ ಅರಣ್ಯ ಜೀವನದಲ್ಲಿ ಎಷ್ಟೋ ಪರಿವರ್ತನೆಗಳಾಗಿವೆ ಎಂದು ತಿಳಿಸಿಕೊಟ್ಟಿದ್ದಾರೆ. ಕಾಲದ ಎಣಿಕೆ, ಸಂವತ್ಸರದ ಎಣಿಕೆ ಹೊತ್ತುಗೊತ್ತುಗಳ ನಿಶ್ಚಿತ ಲೆಕ್ಕ ಕೆಂಚನಿಗಿಲ್ಲ. ಅವನ ಜನಕ್ಕೂ ಆ ಲೆಕ್ಕ ಇರುವುದು ಅಷ್ಟಕಷ್ಟೆ.

ಕುಡಿಯರಿಗೆ ಬದುಕಿನ ಅಗತ್ಯಕ್ಕೆ ಬೇಕಾದ ಅಂಶಗಳು ನಿಸರ್ಗದಲ್ಲಿಯೇ ಸಿಗುತ್ತವೆ. ಇದರ ಬಗ್ಗೆ ಅವರಿಗೆ ವಿಶೇಷವಿಲ್ಲ. ನಿಸರ್ಗದ ಚಲನಶೀಲತೆಯಲ್ಲಿ ಕಾಲಚಕ್ರದ ಬಗ್ಗೆ ಅವರಿಗೆ ಅರಿವು ಇದೆ. ಆದರೆ ಹೊರಗಿನ ಪ್ರಪಂಚದ ಅರಿವು ಇಲ್ಲ. ಸಂಸ್ಕೃತಿಯೆಂದರೆ ಜೀವನ ಪದ್ಧತಿಯಾಗಿದೆ. ಅಂದರೆ ಅದರಲ್ಲಿ ಆಚಾರ ವಿಚಾರಗಳು, ಉಡುಗೆ-ತೊಡುಗೆ, ಆಹಾರ ಪದ್ಧತಿಗಳು ಅಡಗಿವೆ. ಈ ಸಂಸ್ಕೃತಿಯು ಹುಟ್ಟಿಕೊಳ್ಳಲು ನಿಸರ್ಗ ಪ್ರಮುಖ ಪಾತ್ರ ವಹಿಸಿದೆ. ಈ ಪಾತ್ರದಿಂದ ಮನುಷ್ಯನು ಪ್ರಾಚೀನ ಆದಿ ಮಾನವನ ಕಾಲದಿಂದ, ಇಂದಿನವರೆಗೆ ತನ್ನ ಜೀವನ ಪದ್ಧತಿಗಳನ್ನು

---

೨೯. ಶಿವರಾಮ ಕಾರಂತ, ಕುಡಿಯರ ಕೂಸು, ಪುಟ - ೦೪

ಬದಲಿಸಿಕೊಳ್ಳುತ್ತಲೇ ಜೀವನ ಮಾಡುತ್ತಿದ್ದಾನೆ. ಇಂತಹ ಸಂಸ್ಕೃತಿಯ ಬಿಂಬಗಳನ್ನು 'ಕುಡಿಯರ ಕೂಸು' ಕಾದಂಬರಿಯಲ್ಲಿ ಗುರುತಿಸಬಹುದು.

ಕಾರಂತರು ಕಾದಂಬರಿಗಳಲ್ಲಿ ಸಂಸ್ಕೃತಿಯನ್ನು ಒಡಮೂಡಿಸಿರುವ ಬಗ್ಗೆ ಡಾ॥ ಕೇಶವಶರ್ಮರು – *"ಕಾರಂತರ ಬಹುತೇಕ ಕಾದಂಬರಿಗಳಲ್ಲಿ ಬದಲಾಗುತ್ತಿರುವ ಸಾಂಸ್ಕೃತಿಕ ಸ್ವರೂಪದ ಚಿತ್ರಣವಿದೆ. ಈ ಸಾಂಸ್ಕೃತಿಕ ಬದಲಾವಣೆಯಲ್ಲಿ ಕೇಂದ್ರ ಪಾತ್ರವನ್ನು ವಹಿಸುವುದು ಕುಟುಂಬಗಳಲ್ಲ. ಕುಟುಂಬವು ತನ್ನ ಪಾರಂಪರಿಕವಾದ ಮಾದರಿಯನ್ನು ಇಟ್ಟುಕೊಂಡಿಲ್ಲ. ಅದು ಅನೇಕ ಕಾರಣಗಳಿಂದ ಬದಲಾಗುತ್ತದೆ. ಕೂಡು ಕುಟುಂಬದ ಮಾದರಿಯಲ್ಲಿನ ವ್ಯಕ್ತಿಯ ನಿರ್ವಹಣೆಯ ಕ್ರಮಕ್ಕೂ; ವಿಘಟಿತ ಕುಟುಂಬದ ಮಾದರಿಗೂ ಅನೇಕ ವೆತ್ಯಾಸವಿದೆ. ಕೂಡುಕುಟುಂಬದಲ್ಲಿ ಅಜ್ಜ-ಅಜ್ಜಿ, ಅಪ್ಪ-ಮಗ, ಅಣ್ಣ-ತಮ್ಮಂದಿರು, ಸೊಸೆಯಂದಿರು, ಮೊಮ್ಮಕ್ಕಳು ಹೀಗೆ ಬೇರೆ ಬೇರೆ ಮಾದರಿಯ ಒಟ್ಟು ಸಂಬಂಧಗಳಿರುತ್ತವೆ. ಈ ಸಂಬಂಧಗಳು ಸಂಕೀರ್ಣವಾಗಿರುವ ಹಾಗೆಯೇ ಕೆಲಸದ ವರ್ಗೀಕರಣವೂ ಕೂಡ ಅಲಿಖಿತ ಸಂವಿಧಾನದಂತೆ ಕೆಲಸ ಮಾಡುತ್ತದೆ. ಕೆಲಸ ಮತ್ತು ಜವಾಬ್ದಾರಿಗಳಲ್ಲಿ ವೆತ್ಯಾಸವಿದೆ. ಮನೆಯ ಹಿರಿಯಾತ ಆರ್ಥಿಕ ನಿರ್ವಹಣೆಯನ್ನು ಮಾಡುತ್ತಾನೆ. ಇದರಿಂದ ಕಿರಿಯರಿಗೆ ಅಧಿಕಾರವಿಲ್ಲ. ಅಧಿಕಾರವು ಕೇಂದ್ರಸ್ಥಗೊಂಡಿರುವುದರಿಂದ ಕಿರಿಯರ ಜವಾಬ್ದಾರಿ ಕಿರಿದು, ಯಾವಾಗ ಈ ಕೂಡು ಒಡೆಯಲು ತೊಡಗುವುದೋ ಆಗ ಅದರ ಸ್ವರೂಪಗಳು ಬೇರೆಯಾಗುತ್ತವೆ. ದುಡಿಮೆ ಮತ್ತು ಆರ್ಥಿಕತೆಯು ವಿಭಕ್ತ ಕುಟುಂಬದ ಮಾದರಿಯಲ್ಲಿ ಒಂದು ಲೆಕ್ಕಾಚಾರದ ಕೆಲಸದ ಅರ್ಥವನ್ನು ಪಡೆದುಕೊಳ್ಳುತ್ತದೆ ಎಂದಿದ್ದಾರೆ"*.[೩೦]

ಈ ನೆಲೆಯಲ್ಲಿ ಡಾ. ಕೇಶವಶರ್ಮ ಕಾಡು ಜೀವನವನ್ನು ಕುರಿತು ಹೇಳಿರುವುದು ಪ್ರಮುಖವಾಗಿದೆ. ಕುಡಿಯರು ನಿಸರ್ಗದ ಮುಖೇನ ತಮ್ಮ ದೈವವನ್ನು ಕಂಡುಕೊಂಡು ನಿಸರ್ಗದೊಂದಿಗೆ ಜೀವಿಸುತ್ತಿದ್ದಾರೆ. ಇದರಲ್ಲಿ ಪೂಜೆ, ಪುರಸ್ಕಾರಗಳು, ನಡವಳಿಕೆಗಳು, ಹಬ್ಬ ಹರಿದಿನಗಳು ಮತ್ತು ಕುಟುಂಬದ ಸಂಕೀರ್ಣವಾದ ಸಮಸ್ಯೆಗಳು ಅವರ ಸಂಸ್ಕೃತಿಯಲ್ಲೂ ಪ್ರಮುಖವಾಗಿದೆ. ಈ ಸಂಸ್ಕೃತಿಯ ಮೇಲೆ ನಿಸರ್ಗ ತುಂಬಾ ಪ್ರಭಾವ ಬೀರಿರುವುದು ಕಂಡುಬರುತ್ತದೆ. ಈ ಕಾದಂಬರಿಯಲ್ಲಿ ಬರುವ ಮುಖ್ಯ ಪಾತ್ರಗಳಲ್ಲಿ ಕೆಂಚ ಪ್ರಮುಖ. ಇವನು ಕಿರುಮಲೆಗೆ ಗುರಿಕಾರ ಇವನು ರಾಜನೆಂದು ಹೇಳಿದರು ಪರವಾಗಿಲ್ಲ ಎಂದು ಕಾರಂತರು ಹೇಳುತ್ತಾರೆ. ಇವನ ನಂಬಿಕೆಯಲ್ಲಿ ಅವರ ಕಿರುಮಲೆಯವರು ಮಳೆರಾಯನನ್ನು ಪೂಜಿಸುತ್ತಿದ್ದಾರೆ. ಇವನಿಗೆ ಬಲು ಕೋಪ; ಇವನು ಕೇವಲ ಕೋಳಿ, ಕುರಿಗಳನ್ನು ಬಲಿತೆಗೆದುಕೊಳ್ಳುವುದಿಲ್ಲ. ಬದಲಾಗಿ ನರರ ತಲೆಯನ್ನು ಎಂದು ಜ್ಞಾಪಿಸಿಕೊಳ್ಳುತ್ತಾನೆ. ಅದಕ್ಕಾಗಿ ಕೋಲ, ನಡೆಸಬೇಕು ಎಂದು ಪರಿತಪಿಸುತ್ತಾನೆ. *"ಅವನಿಗೆ ಗೊತ್ತಿರುವಂಥ ವಿಚಾರವೆಂದರೆ- ಈಗಿನ ಜನಕ್ಕೆ ದೈವ್ವದ ಮೇಲೆ ಕಡಿಮೆ- ಎಂದಿಷ್ಟೆ: ಕಟ್ಟುನಿಟ್ಟು ಆಚಾರ ವಿಚಾರಗಳಲ್ಲಿ, ನಂಬಿಕೆ ಸಡಲಿದೆಯೋ ಅಥವಾ ಉದಾಸೀನತೆ ಬಂದಿದೆಯೋ ಏನೋ – ಸಹ್ಯಾದ್ರಿಯ ಸೆರಗಿನ ಕುಡಿಯರ ಬಳಗಗಳಲ್ಲಿ ಒಗ್ಗೂಟ್ಟೂ ಸಡಲಿದೆ. ಬಣ. ವೈರಿಗಳು ಹುಟ್ಟಿವೆ ಎಲ್ಲರಿಗೂ ಒಬ್ಬ ನಾಯಕ ಇಲ್ಲವಾಗಿದ್ದಾನೆ. ಕೆಂಚ ಕಿರಿಮಲೆಗಷ್ಟೇ ಗುರಿಕಾರನೆನಿಸಿದ್ದಾನೆ. ಇನ್ನು ಹಾಗೇಯೇ –*

---

೩೦. ಕೇಶವಶರ್ಮ.ಕೆ. ಒಡಮೂಡಿ, ಪುಟ ೩೫-೩೬

ಹಿರಿಮಲೆಯಿದೆ. ನೆರೆಯ ಇನ್ನೆರಡು ಮಲೆಗಳಿವೆ. ಹತ್ತಿಯಡ, ಬಿಸಿಲೆಗಳಲ್ಲೂ ನಾಲ್ಕಾರು ಕುಡಿಯರ ಕೂಡು ಕಟ್ಟುಗಳಿವೆ. ಈಗ ಅವೆಲ್ಲ ಬೇರೆ ಬೇರೆ ಬಣಗಳಾಗಿವೆ".[೩೧]

ಕಲ್ಕುಡನಿಗೆ ಕೋಲ ನೇಮ ಸಲ್ಲಿಸದ ಕಾರಣವಾಗಿ ಕೆಂಚನಿಗೆ ಕನಸು ಬಂದಿತು. ಕನಸಿನಲ್ಲಿ ಕಲ್ಕುಡ ಬೆದರಿಸಿದಂತೆ ಆಯಿತು. ಅದಕ್ಕಾಗಿ ಹಿರಿಮಲೆ ಮತ್ತು ಕಿರಿಮಲೆಯವರನ್ನು ಕೋಲ ಮತ್ತು ನೇಮ ಆಚರಿಸಲು ಕರೆದನು. ಅದಕ್ಕಾಗಿ ಅವರು ಇದರ ಕಡೆ ಗಮನಹರಿಸದಿದ್ದಾಕ್ಕಾಗಿ ತನ್ನ ಮಗ ತಿಪ್ಪನನ್ನು ಕಲ್ಕುಡ ಬಲಿ ತೆಗೆದುಕೊಂಡ ಎಂದು ಭಾವಿಸುತ್ತಾನೆ. "*ದೈವವೇ, ಆದದ್ದಾಯಿತು, ನಿನ್ನ ಸಿಟ್ಟಿಗೆ ನನ್ನಂಥ ಬಡವರು ಎಂದೂ ಆಳಲ್ಲ. ಉಳಿದುದನ್ನಾದೂ ಉಳಿಸು*"[೩೨] ಎಂದು ಬೇಡಿದನು. ಈ ಬಾರಿ ಸೊಸೆ ಹಡೆದಾಗ, ಆ ಮಗುವಿಗೆ ಸುಬ್ರಹ್ಮಣ್ಯದೇವರ ಹೆಸರನ್ನು ಇಟ್ಟನು. ಅವನನ್ನು ಸುಬ್ಬನೆಂದು ಕರೆಯುತ್ತಿದ್ದರೂ ಸಹ, ನಂತರ ಅವನನ್ನು ಕರಿಯ ಎಂದು ಕರೆದರು. ಕಲ್ಕುಡನು ಇವನನ್ನು ಬಲಿತೆಗೆದುಕೊಳ್ಳುವನು ಎಂದು ಬಗೆದು, ಅವನನ್ನು ಕಾಪಡುವಂತೆ ಬೇಡಿಕೊಳ್ಳಲು ಕಾಡುಮೇಡುಗಳನ್ನು ಅಲೆಯುತ್ತಾನೆ.

"ಒಂದಿಷ್ಟು ದೂರ ನಡೆದು, ಆ ಬೆಟ್ಟದ ಸೆರಗಿಗೆ ಬಂದ, ಅದರ ಮೈಯಂಚಿನ ಇಳಕಲು ದಾರಿಯಲ್ಲಿ ಮೆಲ್ಲಗೆ ಇಳಿದು ಹಾಗೆ ಇಳಿದು ಬಂದುದೇ ಕಲ್ಕುಡನ ತಾಣಕ್ಕೆ, ಅಲ್ಲಿನ ಸ್ಥಳದಲ್ಲಿ ನಾಲ್ಕು ದಿಕ್ಕುಗಳಲ್ಲಿ ಓಟೆಯ ಮೆಳೆಗಳು, ಅವುಗಳ ಎಡೆಯಲ್ಲಿ ನಾಲ್ಕು ಚಪ್ಪಡಿ ಕಲ್ಲುಗಳಿಂದ ಮಾಡಿದ ಚಿಕ್ಕದೊಂದು ಗೂಡು, ಅದೇ ಕಲ್ಕುಡನ ಗುಡಿ. ಎದುರಿಗೆ ಬತ್ತಿದ ಅಬ್ಬಿಯೊಂದು, ಬಂಡೆಕಲ್ಲುಗಳ ಎಡೆಯಲ್ಲಿ ಇದೆ, ಕಲ್ಕುಡನಿಗಾಗಿ ಕಾದುನಿಂತು, ಮುಂದಕ್ಕೆ ಹರಿದು, ಕೆಳಗಿನ ಹಿರಿಯ ತೊರೆಯೊಂದನ್ನು ಸೇರುತ್ತದೆ. ಕೆಂಚ ನೀರಿನ ಬಳಿಗೆ ಹೋದ, ಮುಖ, ಕಾಲುಗಳನ್ನು ತೊಳೆದುಕೊಂಡ ಗುಡಿಯ ಮುಂದಕ್ಕೆ ಬಂದ, ಮೊಣಕಾಲೂರಿ, ದೈವವೇ, ಕುಲವನ್ನು ಕಾಯು, ಕೇರಿಯನ್ನು ಕಾಯು, ಮಳೆ, ಬೆಳೆ ಕೊಡು, ಬದುಕನ್ನು ಹಸನಾಗಿ ಮಾಡು ಎಂದು ಬೇಡಿ ಮುಂದಿನ ಹಾದಿ ಹಿಡಿದ, ಬೆಟ್ಟ ಇಳಿದ, ತೊರೆಯ ಮೇಲೆ ಹಾಕಿ ಸಂಕದಾಟಿ ಬಂಡೆಗೆ ಕುಪ್ಪಳಿಸಿ, ಎದುರಿನ ಏರುವ ದಾರಿ ಹಿಡಿದು ಹಿರಿಮಲೆಗೆ ಹೋದ".[೩೩] ಈ ರೀತಿಯ ಸಾಂಸ್ಕೃತಿಕ ನಂಬಿಕೆ ಆದಿಮಾನವನಿಂದ ಆಧುನಿಕ ಮಾನವನವರೆಗೆ ಕಾಣಬಹುದಾಗಿದೆ. ಇದಕ್ಕೆಲ್ಲಾ ಪ್ರಮುಖವಾಗಿ ಪ್ರಭಾವ ಬೀರಿರುವ ಅಂಶವೆಂದರೆ ನಿಸರ್ಗವಾಗಿದೆ.

ಕಮರಿ ಇರುವುದು ಕಿರಿ ಮಲೆಯಿಂದ ಕವಲೊಡೆದು ಒಂದು ಬೆಟ್ಟದ ತಪ್ಪಲಲ್ಲಿ. ಅಲ್ಲಿ ಕುಡಿಯರು ಚಳಿಗಾಲ ಕಳೆದ ತಕ್ಷಣ ಅಲ್ಲಿನ ಇಪ್ಪತ್ತು ಎಕ್ರೆ, ಕಾಡು, ಪೊದೆಗಳನ್ನು ಸವರಿ ಒಂದು ತಿಂಗಳು ದುಡಿದು ವ್ಯವಸಾಯ ಮಾಡುತ್ತಾರೆ. ಕಾರಂತರು ಈ ಕುರಿತು ಹೇಳುತ್ತಾರೆ. "*ಒಮ್ಮೆ ನೆಟ್ಟ ನೆಲದಲ್ಲೇ ತಿರುಗಿ ನೆಡುವ ಹವ್ಯಾಸ ಕುಡಿಯರಿಗೆ ಎಂದೂ ಇಲ್ಲ. ಅವರು ನೇಗಿಲು ನೊಗ ಕೊಂಡವರಲ್ಲ. ಅದಕ್ಕಾಗಿ ಜಾನುವಾರು ಸಾಕಿದವರಲ್ಲ. ಏನಿದ್ದರೂ ಕೈಗೆಲಸ ಅವರದ್ದು, ಹಿಂದಿನ ಕಾಲದಿಂದ ಮರದ ಮೊನಚು ಕೋಲುಗಳಿಂದಲೇ ನೆಲ ಕುತ್ತಿ ಅಗೆದವರು*".[೩೪] ಹೀಗೆ ಅವರು ವ್ಯವಸಾಯ ಮಾಡುತ್ತಾರೆ. ಇದು ಅವರ ಸಂಸ್ಕೃತಿಯ ಮೇಲೆ ನಿಸರ್ಗದ ಪ್ರಭಾವವಿದೆ. ಇದರ ನಂತರ ವರ್ಷದಲ್ಲಿ ಕೆಲವು ತಿಂಗಳ

೩೧. ಶಿವರಾಮ ಕಾರಂತ, ಕುಡಿಯರ ಕೂಸು, ಪುಟ -೦೫

೩೨. ಅದೇ ಪುಟ -೩೩

೩೩. ಅದೇ. ಪುಟ -೩೪

೩೪. ಅದೇ. ಪುಟ-೯೨

ಕಾಲದಲ್ಲಿ ಮಳೆ ದನಿಗಳಿಗೆ ಏಲಕ್ಕಿ ತೋಟಗಳಲ್ಲಿ ದುಡಿಯುತ್ತಾರೆ. ದುಡಿದುದ್ದಕ್ಕಾಗಿ ಉಪ್ಪು, ಚಿಮಣಿ ಎಣ್ಣೆ, ಹರವೆಗಳನ್ನು ಪಡೆಯುತ್ತಾರೆ. ಇದು ನಿಸರ್ಗದೊಂದಿಗೆ ದುಡಿದು ಅವರು ಪಡೆಯುವ ಅನುಕೂಲವಾಗಿದೆ.

ಕೆಂಚ ನಿಸರ್ಗದ ಜೀವಿ, ಅವನು ತನ್ನ ಕರಿಯನಿಗೆ ಏನು ಆಗಬಾರದೆಂದು ನಿರೀಕ್ಷಿಸುವ ಸಲುವಾಗಿ ಮಲೆರಾಯನ ಬಳಿ ಹೋಗುತ್ತಾನೆ. ಕೆಂಚ ಅವನ ಹಿರಿಯರು ಗುಹೆಗಳಲ್ಲಿ ವಾಸವಾಗಿದ್ದದ್ದು ಮತ್ತು ಅವನು ಅಲ್ಲೇ ಜನಿಸಿದ ಕಥೆಯನ್ನು ಕರಿಯನಿಗೆ ಹೇಳುತ್ತಾನೆ. ಇದು ಆದಿಮಾನವನ ಸಂಸ್ಕೃತಿಯನ್ನು ಬಿಂಬಿಸುತ್ತದೆ. ಕರಿಯ ಮತ್ತು ಕೆಂಚ ಗುಹೆಗಳನ್ನು ನೋಡಿದರು. ಅವುಗಳ ಒಳ ಹೊಕ್ಕು, ಎಡ, ಬಲಕ್ಕೆ ತಿರುಗಿದರೆ ತಿರುಗಿ ಚಿಕ್ಕ ಪುಟ್ಟ ಗವಿಗಳು ಸಿಗುತ್ತವೆ. ಕೊರೆದು ಮಾಡಿದ ಗವಿಗಳಿರಲಿ ಪ್ರಕೃತಿ ರಾಶಿಯೊಡ್ಡಿದ, ಬಿಸಿಲು, ಮಳೆ ಒಡೆದಿರಿಸಿದ, ಬಂಡೆಗಳ ನಡುವಣ ಮಣ್ಣನ್ನು ಮಲೆಯ ನೀರು ಕೊರೆದು ಸ್ವಾಭಾವಿಕವಾಗಿ ಉಂಟಾದ ನಿಸರ್ಗದ ಮನೆಗಳಿವು. ಮಾನವ ಯುಗ ಬರುವ ಮುನ್ನ ನಿಸರ್ಗವು ಕುಡಿಯರಿಗೆ ನಿರ್ಮಿಸಿಕೊಟ್ಟ ಅರಮನೆಗಳು. ಮಾನವ ಸಂಸ್ಕೃತಿ ನಡೆದು ಬಂದ ದಾರಿಯನ್ನು ಕಾರಂತರು ಈ ಮೂಲಕ ಹೇಳುತ್ತಾರೆ.

ಕುಡಿಯರು ಯಾವುದೇ ಕಾರ್ಯ ಮಾಡಿದರೂ ಸಹ ನಿಸರ್ಗ ದೇವತೆಗಳೆಂದು ಪರಿಗಣಿಸಿರುವ ಕಲ್ಕುಡ ಮತ್ತು ಮಲೆರಾಯನ ಆರ್ಶಿವಾದಾ ಎಂದು ನಂಬಿದವರು, ಅವರ ಏಲಕ್ಕಿ ತೋಟದ ದುಡಿತ, ಬೇಟೆಯಾಡುವುದು, ಕುಮರಿ ಬೇಸಾಯ ಮುಂತಾದ ಕಾರ್ಯಗಳಿಗೆ ದೈವದ ಪ್ರೇರಣೆಯೆಂದು ತಿಳಿದು ನಿಸರ್ಗದೊಂದಿಗೆ ಬೆರೆಯುತ್ತಾ ಜೀವಿಸುವಂತಹವರು. ಈ ಕುರಿತು ಪೋಲಂಕಿ ರಾಮಮೂರ್ತಿಯವರು–*ಕುಡಿಯರ ಕೂಸು ಕಾದಂಬರಿ ಕಾಡು ಮತ್ತು ಮಾನವನ ಇನ್ನೊಂದು ರೀತಿಯ ಸಂಬಂಧವನ್ನು ಪರಿಶೋಧಿಸುತ್ತದೆ. 'ಕುಡಿಯರ ಕೂಸು' ಕಾದಂಬರಿಯಲ್ಲಿ ನಿಸರ್ಗಚೇತನ ನಾಗರೀಕ ಮಾನವರೊಡನೆ ವ್ಯವಹರಿಸುವುದಿಲ್ಲ; ಆದಿ ಮಾನವರಾದ ಮಲೆಕುಡಿಯರೊಡನೆ, ಕಾಡುಮಾನವರೊಡನೆ ವರ್ತಿಸುತ್ತದೆ. ಕುಡಿಯರ ಕೂಸಿನ ಮಾನವ ಕಾಡಿಗೆ ಶರಣು ಹೋದವನು; ಕಾಡನ್ನು ಕಲ್ಕುಡನಾಗಿ ಮಲೆದೇವರಾಗಿ ಸುಬ್ರಹ್ಮಣ್ಯನಾಗಿ ಮೊರೆಹೊಕ್ಕವರು. ಅವನ ಮತ್ತು ಕಾಡಿನ ವ್ಯವಹಾರ ಮಾಧ್ಯಮ–ಭಕ್ತಿ ಮತ್ತು ಪ್ರೇಮ, ಕುಡಿಯರ ಗುರಿಕಾರನಾಗಿ ಕೆಂಚ ಕತೆಯ ಪ್ರಾರಂಭದಲ್ಲೇ ಕಲ್ಕುಡ, ಮಲೆದೇವರು, ಸುಬ್ರಹ್ಮಣ್ಯ ಇವರಿಗೆ ತನ್ನ ಪೂಜೆಯ ಸೇವೆಯನ್ನು ಹರಕೆಗಳ ಒಡಂಬಡಿಕೆಗಳನ್ನು ಸಲ್ಲಿಸುತ್ತಾ ತನ್ನ ಮೊಮ್ಮಗನಾದ ಕರಿಯ ಮತ್ತು ಕಾಡಿನ ಸಂಬಂಧದ ಬೆಸುಗೆಯನ್ನು ಹಾಕುತ್ತಾನೆ.*[೩೫] ಆದ್ದರಿಂದ ದೈವದ ಭಕ್ತಿಯ ಮೂಲಕ ಕಾಡಿನ ಶರಣು ಹೋಗುವುದು ಮತ್ತು ಕುಮರಿ ಬೇಸಾಯ ಮಾಡಿ ಜೀವಿಸುವುದು ಅವರ ಸಂಸ್ಕೃತಿಯ ಒಂದು ಅಂಗವಾಗಿದೆ.

ತಿರುಮಲ ಭಟ್ಟರು ತಮ್ಮ ಊರಿಗೆ ಹೋದ ನಂತರದ ಮೂರು ದಿನಗಳಲ್ಲಿ ಬದಲಾದ ವಾತಾವರಣ ಮತ್ತು ಈ ವಾತಾವರಣ ಕುಡಿಯರ ಸಂಸ್ಕೃತಿಯ ಮೇಲೆ ಬೀರಿದ ಪರಿಣಾಮದ

---

೩೫. ಜಿ.ಎಸ್.ಶಿವರುದ್ರಪ್ಪ (ಸಂ), ಕಾದಂಬರಿಕಾರರಾಗಿ ಕಾರಂತ, ಪುಟ –೮೧

ಬಗ್ಗೆ ಕಾರಂತರು ತಂಬಾ ಚೆನ್ನಾಗಿ ಹೇಳುತ್ತಾರೆ– *"ಬೇಸಿಗೆಯ ಮೊದಲ ಮುಗಿಲುಗಳು, ಬಿಳಿಯ ಬೆಟ್ಟಗಳಂತೆ ಬಾನಲ್ಲಿ ಕಲೆತು ವಿಸ್ತರಿಸತೊಡಗಿದವು. ಮಲೆಯಲ್ಲೂ ಸೂರ್ಯನ ಬೇಗೆ ಕಟುವಾಗಿ ಕಾಣಿಸಿತು. ಜನರು ಬೀಜ ಬಿತ್ತಿದರು. ಬಿತ್ತನೆಗೆ ಸಮನಾಗಿ ಮುಂಗಾರು ಮಳೆ ಬಡೆಯಿತು. ನಾಲ್ಕಾರು ದಿನಗಳ ಕಾಲ ಹಿಂದಣ ಪರ್ವತ ಶಿಖರಗಳನ್ನಾಗಲಿ, ಕೆಳಗಿನ ಕಣಿವೆಗಳನ್ನಾಗಲಿ, ಎದುರಿನ ಬೆಟ್ಟದ ಸಾಲುಗಳನ್ನಾಗಲೀ ಒಬ್ಬರೂ ನೋಡಿರಲಿಕ್ಕಿಲ್ಲ. ದಟ್ಟಣಿಸಿದ ಕಾರ್ಮುಗಿಲುಗಳೇ ಮುಗಿಲುಗಳು! ಕೊನೆ ಮೊದಲಿಲ್ಲದ ಬಿರುಗಾಳಿ ಮುಗಿಲುಗಳ ರಾಶಿಗಳನ್ನು ಅಬ್ಬರದಿಂದ ಬೀಸಿ ತಂದು, ಬೆಟ್ಟ, ಬಂಡೆ ಕಾಡುಗಳ ಮೇಲೆ ಕವಿಯಿಸುತ್ತಿತ್ತು. ಏನು ಗಾಳಿಯ ಸುಯ್ಲು! ಮರಗಳನ್ನು ತೊಗಿಸಿದ್ದೇ ತೊಗಿಸಿದ್ದು;ಬಿದಿರ ಮೆಳೆಗಳನ್ನು ಚೀರಾಡಿಸಿದ್ದೇ ಚೀರಾಡಿಸಿದ್ದು!ಗುಡುಗು ಮಿಂಚುಗಳಿಂದ ಎಲ್ಲರ ಎದೆಯನ್ನು ನಡಗಿಸಿದ್ದು! ಮುಂಗಾರು ಮಳೆಯು ರೌದ್ರಾವತಾರ ಕಾಣುವುದಕ್ಕೆ ಇಂಥಾ ಮಲೆಗಳಿಗೇ ಹೋಗಬೇಕು; ನಮ್ಮ ಎಡ ಬಲಕ್ಕೇನೆ ಮಿಂಚಿನ ಸೆರಗು ನೆಲವನ್ನು ಕುಕ್ಕುವಂತೆ ಕಾಣುತ್ತದೆ. ಬೆಟ್ಟದ ಅಬ್ಬಿಗಳೆಲ್ಲ ಸೊಕ್ಕಿ, ಪ್ರತಿಯೊಂದು ಮೂಲೆಯಿಂದಲೂ ರೌದ್ರ ರೂಪ ತಾಳಿ, ಧುಮುಕಿ, ಬಂಡೆಗಳನ್ನುರುಳಿಸಿ, ಒಂದಕ್ಕೊಂದು ಮಸೆದು, ಆವೇಶದಿಂದ ಕೆಳಕ್ಕೆ ಹಾರುವ ನೋಟ ಅದ್ಭುತವಾದದ್ದು. ದೂರದಿಂದ ಅದನ್ನು ಕಾಣುವುದಕ್ಕೂ ಇಲ್ಲ. ಅವಕ್ಕೆ ಕಾಡಿನ ಮರಗಳಷ್ಟೇ ಅಡ್ಡವಲ್ಲ. ಸದಾ ಕವಿಯುವ ಮುಗಿಲುಗಳು ಈ ಎಲ್ಲಾ ಘೋರವನ್ನು ಮುಚ್ಚಿ ಬಿಡುತ್ತವೆ ಬರಿಯ ನೀರು, ಗಾಳಿಗಳ ಅಬ್ಬರವಷ್ಟೇ ಕಿವಿಗೆ ಕೇಳಿಸುತ್ತದೆ ಅದರ ಜೊತೆಗೆ ಆಕಾಶ, ಪಾತಾಳಗಳನ್ನು ನುಗ್ಗಾಗಿಸುವ ಸಿಡಿಲು ಬಡೆಯಿತೆಂದರೆ, ಎಲ್ಲರ ಎದೆಯಲ್ಲೂ ತಲ್ಲಣ ಮೂಡುತ್ತದೆ. ಹೀಗೆ ಒಂದೆರಡು ದಿನಗಳು ಇರುವುದಾರೆ ಸರಿ, ವಾರ, ತಿಂಗಳು, ನವರಾತ್ರಿ ಕಳೆದಮೇಲೂ ಕಿರಿಮಲೆ, ಹಿರಿಮಲೆಗಳೆರಡೂ ವಿಶ್ವರೂಪ ತಾಳುತ್ತವೆ, ಅಂಥ ಆವರಣದಲ್ಲಿ ಯಾವ ಗಣ್ಯವೂ ಇಲ್ಲದೆ ಬಾಳುತ್ತಾರೆ; ನಿತ್ಯದ ಕೆಲಸ ಸಾಗಿಸುತ್ತಾರೆ."*[೩೬] ಹೀಗೆ ಒಟ್ಟು ಎಂಟು ದಿನ ಎಡಬಿಡದೆ ಮಳೆ ಸುರಿದಾಗ ಕುಡಿಯರು ಕುಮರಿ ಬೆಳೆಯುವ ಸ್ಥಳದಲ್ಲಿ ತಾವು ಕಟ್ಟಿದ ಗುಡಿಸಲುಗಳಿಗೆ ಸೇರಿಕೊಳ್ಳುತ್ತಾರೆ. ಮಳೆಯಲ್ಲಿ ಅಡರು, ಕಟ್ಟುಗೆ ಮೊದಲಾದವುಗಳನ್ನು ಶೇಖರಿಸುತ್ತಾರೆ. ತುಸುವೂ ಎಡೆ ಕೊಡದೆ ಮಳೆಯಲ್ಲೇ ಕಿರಿ, ಹಿರಿ ಮಲೆಗಳ ನಡುವೆ ಹರಿಯುವ ಅಬ್ಬಿಗೆ ಅವರೊಂದು ಸೇತುವೆಯನ್ನು ಹಾಕುತ್ತಾರೆ. ಹೀಗೆ ಮಳೆಯು ಕುಡಿಯರ ಜೀವನದ ಮೇಲೆ ಗಾಢ ಪರಿಣಾಮ ಬೀರುತ್ತದೆ. ಇದರಿಂದ ಅವರ ನಿತ್ಯ ಜೀವನದಲ್ಲಿ ಬದಲಾವಣೆಗಳು ಉಂಟಾಗುತ್ತವೆ.

ಈ ಸಮಯದಲ್ಲಿ ಕುಡಿಯರು ಬೇಟೆಯಾಡುವುದರಲ್ಲಿ ಸಂತೋಷ ಪಡುತ್ತಾ ತಮ್ಮ ಜೀವನ ಸಾಗಿಸುತ್ತಾರೆ. ಹೀಗೆ ಅವರು ಮಳೆಯ ನೀರಿಗೆ ಬರುವ ಮಿಗ, ಕಡಿವೆ, ಕಾಟಿ ಮುಂತಾದ ಪ್ರಾಣಿಗಳನ್ನು ನೋಡುತ್ತಾರೆ, ಸಮಯ ಸಾಧಿಸಿ ಮಿಗ, ಕೆಮ್ಮದಂಥ ಪ್ರಾಣಿಗಳಿಗೆ ಉರುಳಿಡಲು ಪ್ರಯತ್ನಿಸುತ್ತಾರೆ. ಅಲ್ಲದೇ ಮಳೆ ಕಳೆದು ತೊರೆ ತುಂಬಿ ಹರಿಯುವಾಗಲೂ ಕುಡಿಯರಿಗೆ ಅದರಿಂದ ಲಾಭವಿದೆ. ಯಾವುದೋ ಮದ್ದಿನ ಬೇರನ್ನು ಅರೆದು ನೀರಲ್ಲಿ ಕಲಸಿ ತೇಲಿಬಿಟ್ಟರಾಯಿತು, ಮುಂದೆ ಹತ್ತು ನೂರುಗಜ ದೂರಗಳಲ್ಲಿ ವಿಷಗೊಂಡ ನೀರಿನಲ್ಲಿ ಬದುಕಲಾರದೆ ಸಾಯುವ ಮೀನುಗಳ ಸುಗ್ಗಿ ಅವರಿಗೆ, ಬೆಟ್ಟದ ತೊರೆ ಅವರ ಅನ್ನದೇವರೆ,

೩೬. ಶಿವರಾಮ ಕಾರಂತ, ಕುಡಿಯರ ಕೂಸು, ಪುಟ - ೭೩

ಬೆಟ್ಟದಲ್ಲಿ ಅನ್ನಕ್ಕೆ ಕೊರತೆ ಎಂದಲ್ಲ; ಕುಮರಿ ಬೆಳೆಯುತ್ತಾರೆ, ಕುಮರಿಯಲ್ಲಿ ಭತ್ತ, ರಾಗಿ ಎರಡೂ ಸೊಂಪಾಗಿ ಬೆಳೆಯುತ್ತವೆ, ಹೀಗೆ ನಿಸರ್ಗದ ಪ್ರಾಭಾವದಿಂದ ಅವರ ಬೇಟೆ ಸಂಸ್ಕೃತಿಯ ಮೇಲೆ ನಿಸರ್ಗದ ಪ್ರಭಾವ ಮತ್ತು ಸಂಬಂಧಾತರಗಳಲ್ಲಿ ಪ್ರಮುಖ ಅಂಶವಾಗಿದೆ.

ಕುಡಿಯರು ಕೇವಲ ಕುಮರಿಯೊಂದನ್ನೇ ನಂಬಿಕೊಂಡಿರುವವರಲ್ಲ, ಬದಲಾಗಿ ತೆರತೆರನ ಬೇಟೆಯಾಡುತ್ತಾರೆ. ಯಾವ ಕಾಲದಲ್ಲೂ ಮಲೆಗಳಲ್ಲಿ ಗೆಡ್ಡೆ ಗೆಣಸುಗಳಿಗೆ ಅಭಾವವಿಲ್ಲ. ಹುಡುಕಿ ಹೋದರೆ ಒಬ್ಬನ ತಲೆ ಹೊರಯಾಗುವಂಥ ಹೆಗ್ಗೆಣಸು ಸಿಗುತ್ತದೆ. ಅಲ್ಲಿ ತಾಳೆಯ ಮರಗಳಿವೆ. ಬಯನಿಯ ದಿಂಡುಗಳಿವೆ. ಇವೆಲ್ಲವೂ ಅವರ ಆಹಾರವೇ ಆಗಿದೆಯೆಂದು ಕಾರಂತರು ಹೇಳುತ್ತಾರೆ. ನಿಸರ್ಗ ಕುಡಿಯರ ಸಂಸ್ಕೃತಿಯನ್ನು ಈ ಮೂಲಕ ನಿರ್ಧರಿಸುತ್ತಾರೆ.

ಕರಿಯ ಯಾವಾಗಲೂ ಸಾಹಸವಂತ ಯಾವುದೇ ಕೆಲಸಕ್ಕೆ ಕೈ ಹಾಕಿದರೂ ಅದನ್ನು ಗೆಲ್ಲುವಂತಹವನು. ಅವನ ಸ್ನೇಹಿತ ಕಾಳನೊಂದಿಗೆ ಕಾಡನ್ನು ಸುತ್ತುತ್ತಾನೆ. ಇವರಿಬ್ಬರು ಕಾಡು ಪ್ರಾಣಿಗಳಿಗೆ ಉರುಳು ಹಾಕುವುದನ್ನು ಕೆಂಚ ಮತ್ತು ಬೂದುನಿಂದ ಕಲಿಯುತ್ತಾರೆ. ಕಾಡಿನ ಮಕ್ಕಳಾದ ಅವರಿಗೆ ಸಹಜವಾಗಿ ಬೇಟೆಯ ಹುಚ್ಚು ಮೂಡುತ್ತದೆ. ಅದರಂತೆ ಅವರು ಬೇಟೆಯಾಡುತ್ತಾರೆ. ಒಂದು ದಿವಸ ಕರಡಿಯ ಗುಹೆಯ ಬಳಿ ಹೋಗಿ ನೋಡುತ್ತಾರೆ. ಅಲ್ಲಿ ಕರಡಿ ಇರುವುದು ತಿಳಿಯುತ್ತದೆ. ಆಗ ಬೋನನ್ನು ತಯಾರಿಸಿ ಇಟ್ಟು, ಅದರೊಳಗೆ ಜೇನನ್ನು ಸಂಪಾದಿಸಿ ತಂದು ಇಡುತ್ತಾರೆ. ಅಂದಿನ ರಾತ್ರಿ ಕರಡಿ ಮರಿ ಬೋನಿನೊಳಗೆ ಸಿಕ್ಕಿ ಹಾಕಿಕೊಂಡಿರುತ್ತದೆ. ಇದನ್ನ ಕೆಂಚ ಮತ್ತು ಬೂದನಿಗೆ ತಿಳಿಸಿದಾಗ, ಅವರು ಕೋವಿ, ಈಟಿ, ಕತ್ತಿ ಹಿಡಿದು ಹೋದಾಗ ಕರಡಿ ಕಾಣಿಸಿ ಅದಕ್ಕೆ ಗುಂಡಿಟ್ಟು ಕೊಂದು ಅದನ್ನು ಮಲೆಗೆ ತರುತ್ತಾರೆ. ತಂದವರು ಕರಡಿಯನ್ನು ಮೆರವಣಿಗೆ ಮಾಡಿಸುತ್ತಾರೆ. ಇದರಿಂದ ಕರಿಯನ ಗೌರವ ಹೆಚ್ಚುತ್ತದೆ. ಮುಂದೆ ಕರಿಯ ಆನೆಯನ್ನು ಪಳಗಿಸಿ ತಾನು ಮಾವುತುಗನಾಗಬೇಕು ಎಂದೆಣಿಸುತ್ತಾನೆ.

ಈ ನೆಲೆಯಲ್ಲಿ ಕುಡಿಯರ ಸಂಸ್ಕೃತಿಯ ಮೇಲೆ ನಿಸರ್ಗದ ಸಂಬಂಧಾಂತರ ತುಂಬಾ ಪ್ರಮುಖವಾಗಿದೆ. ಕುಡಿಯರ ಸ್ತ್ರೀಯರು ಮುಟ್ಟಾದಾಗ ಚಿಕ್ಕದೊಂದು ಗುಡಿಸಲಿನಲ್ಲಿ ಕಳೆಯುವುದು ಉಂಟು. ಇದು ಅವರ ಸಂಸ್ಕೃತಿ, ಕೆಂಪಿ ಈ ರೀತಿ ಆದಾಗ, ಆಕೆ ಬುಟ್ಟಿ ಎಣಿಸುತ್ತಾ ಆ ಗುಡಿಸಲಿನಲ್ಲಿ ಇರುತ್ತಾಳೆ. ಅದಕ್ಕೆ ಬೀಳಲು ಕಡಿಮೆಯಾದಾಗ ಕಾಡಿಗೆ ಹೋಗುತ್ತಾಳೆ. "*ಕಾಡಿನ ದಾರಿಯಲ್ಲಿ ನಿಧಾನವಾಗಿ ನಡೆಯುತ್ತಾ ಅಚೀಚೆ ಎಂಜಿರು ಬೀಳಲು ಎಲ್ಲಿ ಬೆಳೆದಿದೆ ಎಂದು ಅರಸುತ್ತಾ ಹೊರಟಳು. ಹಾಗೆ ಹೋಗಿ ತುಸು ದೂರದಲ್ಲಿ, ಒಂದು ಮರಕ್ಕೆ ಅಂಟಿ ಬೆಳೆದಿದ್ದ ಬೀಳಲೊಂದನ್ನು ಕಂಡು ಅಲ್ಲಿ ನಿಂತಳು. ಅಲ್ಲಿ ಅನುಕೂಲವಾದ ಬೀಳಲು. ಸಿಗಬಹುದೆಂದು ಮರವನ್ನೇರಿ ಅದನ್ನು ಕಡಿಯತೊಡಗಿದಳು*".[೩೭] ಇದು ಕುಡಿಯ ಸ್ತ್ರೀಯರ ಧೈರ್ಯವನ್ನು ತೋರಿಸುತ್ತದೆ. ಈ ಧೈರ್ಯ ಬರಲು ಅವರ ಕಾಡಿನ ವಾಸವೇ ಪ್ರಮುಖ ಕಾರಣವಾಗಿದೆ.

---

೩೭. ಅದೇ, ಪುಟ – ೩೮

“ಹಿಂಗಾರು ಮಳೆಯಲ್ಲಿ ಕುಡಿಯರು ಏಲಕ್ಕಿ ತೋಟಗಳಲ್ಲಿ ದುಡಿದು ಧನಿಯರಿಗೆ ಲಾಭ ಮಾಡಿಕೊಟ್ಟು ತಾವು ಸಹ ಜೀವನ ಸಾಗಿಸುತ್ತಾರೆ. ಚಳಿಗಾಲ ಪ್ರಾರಂಭವಾದುದರಿಂದ ಸೂರ್ಯ ಬಾನಲ್ಲಿ ಸಾಕಷ್ಟು ಮೇಲಕ್ಕೇರುವ ತನಕ ಬೆಟ್ಟ ಕಣಿವೆಗಳು ಬಿಳಿ ಮಂಜಿನಿಂದ ಮುಸುಕಿದ್ದು, ಮಲೆ ವಾಸಿಗಳ ಮೈಗೆ ನಡುಕವನ್ನುಂಟು ಮಾಡುತ್ತಿದೆ. ಬಿಸಿಲೇರಿ ಮಂಜಿನ ಮೇಲೆ ಸೂರ್ಯನ ಕಿರಣ ಕುಣಿದಾಡತೊಡಗಿತೆಂದರೆ ನೆಲವನ್ನು ಬಿಟ್ಟು ಮೇಲಕ್ಕೇರಿ, ನಭೋ ಮಂಡಲದಲ್ಲಿ ತೇಲಿ, ಗಾಳಿಗೆ ಅದೃಶ್ಯವಾಗಿ ಹೋಗುತ್ತವೆ. ಅತ್ತ ಕಿರಿಮಲೆಯ ಕುಡಿಯರಿಗೆ ಏಲಕ್ಕಿ ತೋಟದ ಕೆಲಸಗಳು ಮುಗಿಯುತ್ತಾ ಬಂದಿವೆ; ಕೈ ತೆರವಾಗಿದೆ. ವಿನೋದಕ್ಕೋ ಬೇಟೆಗೋ ಅನುಕೂಲ ಸಮಯ ಬಂದೊದಗಿದೆ. ನಾಲ್ಕಾರು ತಿಂಗಳ ಕಾಲ ಮೈನಡಿಗಿಸುವ ಶೀತವಾದ ಗಾಳಿ ಮುಗಿಲುಗಳಿಂದ, ಚಳಿ ಹೆಚ್ಚಿಗಿದ್ದರೂ ಉಲ್ಲಾಸದಿಂದ ತಿರುಗುವುದಕ್ಕೆ ತುಂಬಾ ಇಷ್ಟದಾಯಕವಾಗುತ್ತದೆ. ಕೆಲಸ ಇಲ್ಲೆಂದು ಮಲೆಯ ಹೆಂಗಳೆಯರೂ ಆಲಸಿಗಳಾಗಿ ಕುಳಿತಿರುವುದಿಲ್ಲ. ಮನೆಯಲ್ಲಿ ಕುಳಿತಿರುವವರೆಂದರೆ ಪ್ರಾಯ ಮೀರಿದವರು, ಚಿಕ್ಕಪುಟ್ಟ ಬೇನೆಗಳಿಂದ ನರಳುತ್ತಿರುವವರು ಮಾತ್ರ, ಬೇಸಾಯದ ಕೆಲಸ ಈಗ ಇಲ್ಲದಿದ್ದರೂ, ಹೆಂಗಸರಿಗೆ ಪ್ರಿಯವಾದ ಹಲವಾರು ಕೆಲಸಗಳಿರುತ್ತವೆ. ತೀರ ಉತ್ಸಾಹಿಗಳಾದರೂ ಮನೆಯಲ್ಲಿ ಕುಳಿತಿರುವುದಕ್ಕೆ ಎಂದೂ ಇಷ್ಟಪಡುವುದಿಲ್ಲ, ಅವರ ಅಡುಗೆಗೆ, ಮನೆಗೆಲಸಗಳಿಗೆ ಎಷ್ಟು ಸಮಯಬೇಕು? ಹಾಗೆಂದು ಬೆಳಗಿನ ಊಟ ಮುಗಿಸಿ ಹೊರ ಬೀಳುತ್ತಾರೆ. ಕಾಡಿನ ಮೂಲೆ ಮೂಲೆಗಳನ್ನು ಗೆಡ್ಡೆ ಗೆಣಸುಗಳಿಗಾಗಿ ಹುಡುಕಾಡುತ್ತಾರೆ. ಕೆಲವರು ಬಯನಿ ಹೆಂಡ ತೆಗೆಯುವುದಕ್ಕೆ ಮರವನ್ನೇರಿ ಇಳಿಯುವುದೂ ಉಂಟು, ಹಲವರು ತೊರೆಯ ಬುಡಕ್ಕೆ ಹೋಗುತ್ತಾರೆ. ತೊರೆಯ ಮುಗ್ಗುಲಿನ ಚಿಕ್ಕ ಪುಟ್ಟ ಕಲ್ಲುಗಳನ್ನೆಬ್ಬಿಸಿ, ಅವುಗಳ ಎಡೆಯಲ್ಲಿ ಮನೆ ಮಾಡಿಕೊಂಡಿರುವ ಏಡಿಗಳನ್ನು ಹಿಡಿದು, ಕಣ್ಣು ಚಿವುಟಿ, ಬುಟ್ಟಿಗಳಲ್ಲಿ ತುಂಬಿಕೊಳ್ಳುತ್ತಾರೆ. ಏಡಿಯಂತೆ ಬೆಟ್ಟದ ತೊರೆಗಳಲ್ಲಿ ಸಿಗಡಿಯೂ ಸಿಗುತ್ತದೆ. ಹಿಡಿಯಲು ಇಷ್ಟವಾದರೆ ತೊರೆಯಲ್ಲಿ ಚಿಕ್ಕ ಪುಟ್ಟ ಮೀನುಗಳಿಗೂ ಬರಗಾಲವಿಲ್ಲ.”[೩೮] ಈ ನಿಸರ್ಗದಿಂದಲೇ ಮನುಷ್ಯನ ವಿವಿಧ ತೆರನಾದ ಸಂಸ್ಕೃತಿ ಜನ್ಮ ಪಡೆದುಕೊಳ್ಳುತ್ತದೆ. ಇಂತಹ ನೆಲೆಯನ್ನು ಕುಡಿಯ ಜನಾಂಗದಲ್ಲಿ ಕಾರಂತರು ಕಂಡುಕೊಂಡಿದ್ದಾರೆ.

ಹೀಗೆ ತಿಮ್ಮ ಮತ್ತು ಕರಿಯ ಕುಕ್ಕರಹಳ್ಳಿ ಹತ್ತಿರವಿರುವ ಮಲೆಯಲ್ಲಿ ಸಹಜವಾದ ಪ್ರಕೃತಿಯ ವಾತಾವರಣದಲ್ಲಿ ಹಿರಿಮಲೆ ಮತ್ತು ಕಿರಿಮಲೆಯವರಿಂದ ಬೇರ್ಪಟ್ಟು ಬದುಕಲು ಪ್ರಾರಂಭಿಸುತ್ತಾರೆ. ಅವರು ಅಲ್ಲಿ ತಮ್ಮದೇ ಆದ ಹೊಸ ಸಂಸ್ಕೃತಿಯನ್ನು ಕಟ್ಟಿಕೊಂಡು ನಿಸರ್ಗದ ಸಂಬಂಧದೊಂದಿಗೆ ಬದುಕುತ್ತಾರೆ.

ಕುಡಿಯರು ತಮ್ಮ ಜೀವನಕ್ಕಾಗಿ ಕುಮರಿ ಬೇಸಾಯ ಮಾಡುವುದು ಸಾಮಾನ್ಯ ಸಂಗತಿ. ಅದರಲ್ಲಿ ಮುಖ್ಯವಾಗಿ ಋತುಮಾನಕ್ಕೆ ತಕ್ಕಂತೆ ಅವರ ಕೆಲಸಗಳಲ್ಲಿ ವ್ಯತ್ಯಾಸವುಂಟು. ಆದರೆ ಮಳೆಗಾಲದ ನಂತರ ಬೇಸಿಗೆಯಲ್ಲಿ ತಮ್ಮ ಸ್ವಂತಕ್ಕಾಗಿ ಕುಮರಿ ಬೇಸಾಯ ಮಾಡಿಕೊಂಡು ಭತ್ತ, ರಾಗಿ ಬೆಳೆಯುತ್ತಾರೆ, ಅದಕ್ಕಾಗಿ ಅವರು ಕೃಷಿಯಲ್ಲಿ ತೊಡಗುತ್ತಾರೆ. ಇದು ಅವರ ಕೃಷಿ ಸಂಸ್ಕೃತಿಯಾಗಿದೆ. *“ಬೇಸಿಗೆಯು ಕಾಲಿರಿಸಿತು ಕೇರಿಯ ಜನರ ಕೆಲಸ ಕುಮರಿಯ ಬೇಸಾಯಕ್ಕೆ ತಿರುಗಿತು. ವರ್ಷ ವರ್ಷ ಕಾಡುಗಳನ್ನು ಸುಟ್ಟ ಕುಮರಿ ಬೆಳೆಯುವ ಭೂಮಿ. ಕೇರಿಯಿಂದ ದೂರ ದೂರ ಹೋಗುತ್ತಿತ್ತು. ಈ ವರ್ಷ ಅದಿನ್ನೂ ದೂರವಾಗಿದೆ. ಗಂಡು ಹೆಣ್ಣುಗಳೆನ್ನದೆ ದುಡಿದರು: ಕಾಡು ಕಡಿದರು ಬಿದ್ದ ಮರಗಳನ್ನು ಸುಟ್ಟರು. ನೆಲದ ಅಗತೆ ಮಾಡಿದರು: ಸುತ್ತಲೂ ಬೇಲಿ ನೆಟ್ಟರು. ಮಳೆಗಾಲದ ಮನೆ ಹೂಡಿದರು. ಏನುಇಲ್ಲದ ಕೆಲಸ*

೩೮. ಅದೇ. ಪುಟ – ೩೯

ಸಾಗುವಾಗ ಮನಸ್ಸಿಗೆ ಯೋಚನೆ, ಚಿಂತನೆಗಳು ದೂರವಾದವು. ಇಂಥ ದಿನಗಳಲ್ಲಿ ವರ್ಷದ ಕೋಲ ನಡೆಯುವ ಏರ್ಪಾಡಾಯಿತು. ಸಂಕ್ರಾಂತಿಯ ದಿನ ಅದು ನಡೆಯುವುದೆಂದು ಗೊತ್ತಾಗಿ ಎರಡೂ ಮಲೆಯವರೂ ಸೇರಿದರು ಮಾತ್ರವಲ್ಲ ಆಚೀಚಿನ ಮಲೆಯ ಬಂಧುಗಳು ಸಹ ಅದಕ್ಕೆ ದಯ ಮಾಡಿಸಿದ್ದರು. ಎಲ್ಲಿಲ್ಲದ ಉತ್ಸಾಹದಿಂದ ಈ ಬಾರಿಯ ಉತ್ಸವ ನಡೆದಂತೆ ಕಾಣುತ್ತದೆ. ದೈವವು ಕಳೆದ ಬಾರಿ ಹಿರಿಮಲೆಯ ಗುರಿಕಾರ ಪಟ್ಟದ ಕತ್ತಿ ಕೈಗೆ ಕೊಟ್ಟಿದ್ದರೆ ಈ ಬಾರಿ ಕರಿಯ ಆ ಗೌರವ ಪಡೆದ, ಅಲ್ಲದೆ ದೈವ ಆವೇಶದಿಂದ ಪೂಜಾರಿಯ ಬಾಯಿಂದ ನುಡಿಗಳನ್ನು ಹೊರಡಿಸುತ್ತಿದ್ದಾಗ, ವಿಶೇಷವಾದ ದರ್ಪವೇನೂ ಕಾಣಿಸಲಿಲ್ಲ."[೩೯] ಕುಡಿಯರು ಮಲೆಯ ನಿವಾಸಿಗಳು ಅವರು ಬೀಡಿನ ಮೂಲದ ಆಳುಗಳಿದ್ದಂತೆ. ಆದರೆ ಗುಲಾಮರಲ್ಲ, ಬೀಡಿನ ಬಲ್ಲಾಳರ ಒಡೆತನ ಒಪ್ಪಿ ತಾವು ತಮ್ಮ ಜೀವನಕ್ಕಾಗಿ ಚಳಿಗಾಲ ಕಳೆದ ನಂತರ ಕುಮರಿ ಬೇಸಾಯ ಮಾಡಿಕೊಳ್ಳುತ್ತಾರೆ. ಅವರು ವರ್ಷಕ್ಕೊಮ್ಮೆ ವಿಷು ಸಂಕ್ರಾತಿಯ ಸಮಯದಲ್ಲಿ ಕಪ್ಪ ಕಾಣಿಕೆಯನ್ನು ಬೀಡಿಗೆ ಸಲ್ಲಿಸಿ ಬರುತ್ತಾರೆ. ಇದು ಅವರ ನಿಸರ್ಗ ಸಂಬಂಧದ ವಿಷಯವಾಗಿದೆ.

ಈ ಕುಮರಿ ಬೇಸಾಯದ ಬಗೆ ಡಾ. ಕೇಶವಶರ್ಮ ರವರು– "*ಕುಮರಿ ಬೇಸಾಯ ಪದ್ಧತಿಯು ಶಿಷ್ಟವಾದ ಕ್ರಮವಲ್ಲ. ಈ ಮಾದರಿ ಕೃಷಿಯ ಚಟುವಟಿಕೆಯಲ್ಲಿ ಕೆಲವು ವಿಶಿಷ್ಟತೆಗಳಿವೆ. ಭಾರತೀಯ ಕೃಷಿ ಪದ್ಧತಿಯ ಕ್ರಮದಲ್ಲಿಯೂ ಎರಡು ಸಂಗತಿಗಳು ಗಮನಾರ್ಹ. ಒಂದು ಪದ್ಧತಿಯಲ್ಲಿ ಸಾಂಪ್ರದಾಯಿಕವಾದ ಗ್ರಾಮೀಣ ಉತ್ಪಾದನೆಯ ಕ್ರಮವನ್ನು ಕಾಣಬಹುದು. ಈ ಮಾದರಿಯ ಉತ್ಪಾದನೆಯಲ್ಲಿ ಕೃಷಿ ಸಲಕರಣೆ ಇತ್ಯಾದಿಗಳು ಉಪಯುಕ್ತ. ಹಿಡುವಳಿ ಜಮೀನು; ಸ್ವಂತಕ್ಕಾಗಿ ಕೃಷಿ; ಮತ್ತು ಮಾರುಕಟ್ಟೆಗಾಗಿ ಕೃಷಿ ಎಂಬುದು ಅಲ್ಲಿ ಮುಖ್ಯ. ಕುಡಿಯರ ಕುಮರಿ ಬೇಸಾಯದಲ್ಲಿ ಸ್ವಂತ ಜಮೀನು ಎಂಬ ಪ್ರಶ್ನೆ ಮುಖ್ಯವಲ್ಲ. ಮತ್ತು ಪ್ರತಿವರ್ಷವೂ ಒಂದೇ ಜಮೀನಿನಲ್ಲಿ ವ್ಯವಸಾಯವೆಂಬ ಪರಿಕಲ್ಪನೆಯಿಲ್ಲ ಮತ್ತು ಕುಮರಿ ಬೆಸಾಯಕ್ಕೆ ಕಂದಾಯವಿಲ್ಲ ಪ್ರತಿಯೊಬ್ಬರೂ ಈ ಬೇಸಾಯ ಪದ್ಧತಿಯಲ್ಲಿ ದುಡಿಯುವುದರಿಂದ ವೈಯಕ್ತಿಕ ಆಸ್ತಿಯ ಪ್ರಶ್ನೆಯು ಮುಖ್ಯವಲ್ಲ. ಯಾವುದನ್ನು ನಾಗರಿಕ ವ್ಯವಸಾಯ ಕ್ರಮವೆಂದು ಕರೆಯುತ್ತೇವೋ ಅದಕ್ಕಿಂತ ಪೂರ್ವದ ಸ್ಥಿತಿಯನ್ನು ಇದು ಜ್ಞಾಪಿಸುತ್ತದೆ. ಕೆಲಸದ ಹಂಚುವಿಕೆಯು ಕೂಡಾ ಇಲ್ಲ. ಇಲ್ಲಿಯ ದೈಹಿಕ ದುಡಿಮೆಗೆ ಕೂಲಿಯಿಲ್ಲ. ಪರಸ್ಪರ ಸಹಕಾರವನ್ನು ಅದು ಅವಲಂಬಿಸಿದೆ."*[೪೦] *ಎಂದು ಹೇಳಿದ್ದಾರೆ.*

ಕಾರಂತರ ತಮ್ಮ ಬಹುತೇಕ ಕಾದಂಬರಿಗಳಲ್ಲಿ ಸಂಸ್ಕೃತಿಯನ್ನು ತರುತ್ತಾರೆ. ಅದು ಬಹುತೇಕವಾಗಿ ನಿಸರ್ಗದೊಂದಿಗೆ ಸಂಬಂಧವನ್ನು ಹೊಂದಿರುತ್ತದೆ. ಈ ಅಂಶವನ್ನು ಕಾರಂತರು 'ಕುಡಿಯರ ಕೂಸು' ಕಾದಂಬರಿಯಲ್ಲಿ ಪರಿಣಾಮಕಾರಿಯಾಗಿ ಕಟ್ಟಿಕೊಡುತ್ತಾರೆ. ಭೂಮಿ ಮತ್ತು ವ್ಯವಸಾಯದಲ್ಲಿ ಅವರ ಸಹಕಾರ ತತ್ವ ಮತ್ತು ಜೀವನ ವಿಧಾನ ಹಾಗೂ ಕುಡಿಯರ ಮುಗ್ಧತೆಯ ವಿಚಾರಗಳು ನಮ್ಮನ್ನು ಚಿಂತನೆಗೆ ಹಚ್ಚಿ, ನಿಸರ್ಗದೊಂದಿಗೆ ಬದುಕುವ ಕಲೆಯನ್ನು ಅವರಿಂದ ಕಲಿಯಬೇಕು ಎನಿಸುತ್ತದೆ. ಏಕೆಂದರೆ ಅವರ ಸಂಸ್ಕೃತಿ ನಿಸರ್ಗದೊಂದಿಗೆ ಬದುಕುವ ಕಲೆಯನ್ನು ಅವರಿಂದ ಕಲಿಯಬೇಕು ಎನಿಸುತ್ತದೆ. ಏಕೆಂದರೆ ಅವರ ಸಂಸ್ಕೃತಿ ನಿಸರ್ಗದೊಂದಿಗೆ ಹೊಂದಿಕೊಂಡಿರುವುದು ಆಗಿದೆ.

---

೩೯. ಅದೇ. ಪುಟ – ೬೪

೪೦. ಕೇಶವಶರ್ಮ, ಬಹುಮುಖಿ, ಪುಟ – ೧೮೬

'ನಂಬಿದವರ ನಾಕ ನರಕ' : ಮುಖ್ಯವಾಗಿ ಸಾಮಾಜಿಕ ಸಮಸ್ಯೆಗಳನ್ನು ಪ್ರತಿಬಿಂಬಿಸುತ್ತದೆ. ಇಲ್ಲಿ ಮಾನಸಿಕ ಸಂಬಂಧಗಳಲ್ಲಿ ಕ್ಲೇಶ ಭಾವಗಳು ಕಂಡುಬರುತ್ತವೆ. ಈ ಕಾದಂಬರಿಯ ಮುಖ್ಯ ಪಾತ್ರಗಳು ನಾಗೇಂದ್ರ ಮತ್ತು ವಾಗ್ದೇವಿ. ಇಲ್ಲಿ ಜಾತಿಯ ಪ್ರಶ್ನೆ ಮುಖ್ಯವಾಗಿರುತ್ತದೆ. ಅದಕ್ಕಾಗಿ ವಾಗ್ದೇವಿಯ ತಂದೆ ಶಂಕರಯ್ಯ ಪರಿತಪಿಸುವುದು. ಮುಂದೆ ವಾಗ್ದೇವಿಗೆ ತನ್ನ ಗಂಡ ಬ್ರಾಹ್ಮಣನಲ್ಲ ಎಂದು ತಿಳಿದು ಹುಚ್ಚಿಯಂತಗುತ್ತಾಳೆ. ಆದರೆ ಇಲ್ಲಿ ಮುಖ್ಯವಾದ ಸಂಗತಿಯೆಂದರೆ ಮನುಷ್ಯ ಸಂಸ್ಕೃತಿಯ ಮೇಲೆ ನಿಸರ್ಗದ ಸಂಬಂಧ. ಈ ನಿಸರ್ಗದ ಭಾಗವಾದ ಭೂಮಿ ಇಲ್ಲಿ ಮುಖ್ಯ. ಇದರಿಂದ ಉಂಟಾಗಿರುವ ಶ್ರೀಮಂತಿಕೆ ಮುಖ್ಯ. ಇದರಿಂದ ಸಂಸ್ಕೃತಿಯ ಆಚಾರ ವಿಚಾರಗಳು ನಡೆಯುವುದು ಮುಖ್ಯವಾಗಿದೆ. ಈ ಕುರಿತು ಬಿ. ಮಾಲಿನಿ ಮಲ್ಯರವರು–*"ಧಾರ್ಮಿಕ ರೀತಿ–ರಿವಾಜು, ಜಾತಿ, ಧರ್ಮ, ಮೇಲ್ಜಾತಿ, ಕೀಳು ಜಾತಿ ಮುಂತಾದ ಸಾಮಾಜಿಕ ಪದ್ಧತಿಗಳನ್ನು ರೂಢಿಸಿಕೊಂಡು ಬೆಳೆದುದ್ದ ಬ್ರಾಹ್ಮಣ ಕುಟುಂಬವೊಂದರ ಹೆಣ್ಣು ಮಗಳನ್ನು ಮೋಸಕ್ಕೆ ಬಲಿಯಾಗಿ ಕೆಳಗಿನ ಜಾತಿಯವನೊಬ್ಬನಿಗೆ ಮದುವೆ ಮಾಡಿಕೊಟ್ಟಾಗ ಆಕೆಗೆ ಆ ವಿಷಯ ತಿಳಿದುಬಂದಾಗ ಉಂಟಾದ ಮಾನಸಿಕ ಆಘಾತದ ಪರಿಣಾಮಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಚಿತ್ರಿಸಿರುವ ಕಾದಂಬರಿ."*[೪೧]

ಆದ್ದರಿಂದ ಕಾರಂತರು ಈ ಸಾಂಸ್ಕೃತಿಕ ವಿಚಾರ ತಿಳಿಯಲು ಕಾದಂಬರಿಯು ಮೊದಲಲ್ಲೇ ಸೌಗೋಡಿನ ಕುಟುಂಬದ ಆಸ್ತಿಯ ಬಗ್ಗೆ ಮಾತನಾಡುತ್ತಾರೆ. ಅದು ಮದುವೆಯೆಂಬ ಸಂಬಂಧಕ್ಕೆ ಕಾರಣವಾಗುತ್ತದೆ. ಕಾರಂತರು ಒಟ್ಟಾರೆ ಕಾದಂಬರಿಗಳಲ್ಲಿ ಈ ಭೂಮಿಯ ಪ್ರಶ್ನೆ ಹುಟ್ಟಿಕೊಳ್ಳುತ್ತದೆ. ಇದರಿಂದಲೇ ಸಂಬಂಧಗಳು ಬೆಳೆಯುವುದು ತುಂಬಾ ಮುಖ್ಯವಾಗಿದೆ.

ಕಾರಂತರು ನಿಸರ್ಗದ ಸೌಂದರ್ಯ ಮನುಷ್ಯನ ಸಂಸ್ಕೃತಿಯ ಮೇಲೆ ಬೀರುವ ಪ್ರಭಾವದ ಬಗ್ಗೆ ಹೇಳುತ್ತಾರೆ. "ಸಾಗೋಡು, ರಸ್ತೆಯನ್ನು ಬಿಟ್ಟು ಒಂದು ಫರ್ಲಾಂಗು ದೂರದಲ್ಲಿದ್ದರೂ, ಹಾದಿಯಲ್ಲಿ ಸರಿದು ಹೋಗುವವರೆಗೆ ಕಾಣಿಸಿದಂತಹ ಮೂಲೆ ಚಾಗೋಡಿನ ಬಳಿ ಹಾದಿಕಾರರು ತಡೆದು ನಿಲ್ಲಬೇಕಾದ ಕಾರಣವೂ ಇಲ್ಲ. ದಾರಿಯುದ್ದಕ್ಕೂ ಕಗ್ಗಾಡು; ಅಲ್ಲಿ ನಿಂತು ಆಚೀಚೆ ನೋಡಬೇಕಾದ ಅವಶ್ಯಕತೆಯೆಂಬುದಿಲ್ಲ. ಆ ಹಸುರಿನ ಶೋಭೆ, ಮರಗಳ ದಟ್ಟಣೆಯಿಂದ ಸಾಗರ, ಸಿದ್ದಾಪುರ, ಶಿರ್ಸಿ ಪ್ರಾಂತ್ಯದ ನಿವಾಸಿಗಳ ಪಾಲಿಗೆ ಸೌಂದರ್ಯವೆನಿಸುವ ಬದಲಿಗೆ ಬದುಕಿಗೆ ಹೊರೆಯಾಗಿ ನಿಂತ ಕಣ್ಬೇನೆಯೆಂದರೂ ಸರಿಯೆ. ಈ ಹಾದಿಯಲ್ಲಿ ಹೋಗುವಾತನಿಗೆ, ಇಲ್ಲಿ ನಿಂತು; *"ಈ ಊರು ಯಾವುದು? ಎಂದು ಕೇಳಿ ವಿಚಾರಿಸಬೇಕಾದ ಸಂದರ್ಭವೇನು? ಮನೆಯೆ? ಮಠವೆ? ಯಾವುದೂ ಇಲ್ಲದಂಥ ತಾವದು. ನೆಲ ಮತ್ತು ಹವೆಗಳು ತಂಪಾಗಿವೆ. ದೂರದಿಂದ ಬಿಸಿಲಲ್ಲಿ ದಣಿದು ಬಂದವರಿಗೆ, ತಾಳ ಗುಪ್ಪೆಯಿಂದ ಹಿಡಿದು ಮಾವಿನ ಗಂಡಿ ಊರಿನ ತನಕವೂ ಅಲ್ಲಿಂದ ಮುಂದೆ ಸಿದ್ದಾಪುರದ ತನಕವೂ ತಂಪಾದ ಗುಡ್ಡಗಳಿವೆ: ಕಾಡುಗಳಿವೆ."* ನಾಗೇಂದ್ರ ತನ್ನ ಹೆಂಡತಿಯನ್ನು ಪ್ರವಾಸಕ್ಕೆ

---

೪೧. ಹಾ.ಮಾ.ನಾಯಕ, ಪ್ರಧಾನ್‌ಗುರುದತ್ತ (ಸಂ), ಶಿವರಾಮಕಾರಂತ, ಪುಟ –೪೧

೪೧. ಶಿವರಾಮ ಕಾರಂತ, ನಂಬಿದವರ ನಾಕ ನರಕ, ಪುಟ – ೨೧೫

ಕರೆದೊಯ್ಯುವ ಸಂದರ್ಭವನ್ನು ಹೇಳುವ ಕಾರಂತರು ಈ ವರ್ಣನೆಯನ್ನು ತಂದಿದ್ದಾರೆ. ಆದ್ದರಿಂದ ಮಾನವ ಸಂಸ್ಕೃತಿಗೆ ನಿಸರ್ಗವು ತುಂಬಾ ಮುಖ್ಯವಾಗಿದೆ ಎಂದು ತಿಳಿಯುತ್ತಾರೆ.

ಶೀರೂರು ಶಂಕರಯ್ಯ ತಮ್ಮ ಮಗಳನ್ನು ನಾಗೇಂದ್ರನಿಗೆ ಮದುವೆ ಮಾಡಿಕೊಡುವ ಸಂದರ್ಭದಲ್ಲಿ ನಾಗೇಂದ್ರನ ಆಸ್ತಿಯ ಬಗ್ಗೆ ಯೋಚಿಸುತ್ತಾರೆ. ಯೋಚನೆಯಲ್ಲಿ ಮಾನವ ಸಂಸ್ಕೃತಿಯ ಮೇಲೆ ಭೂಮಿಯ ಪ್ರಭಾವನ್ನು ತಿಳಿಸುತ್ತದೆ. 'ಕಣಿವೆಯಲ್ಲಿ ಮಲೆನಾಡಿನಗೊಪ್ಪುವ ದೊಡ್ಡ ಕಂಗಿನ ತೋಟವಿದೆ. ಅದನ್ನು ಕಂಡೇ ಶಂಕರಯ್ಯ ಮಹಾಲಕ್ಷ್ಮೀಯವರಿಗೆ 'ಅಯ್ಯೋ ನಮ್ಮ ಮಗಳ ಪುಣ್ಯವೇ'! ಎಂದೆನಿಸಿದ್ದು ಒಮ್ಮೆ 'ಇಷ್ಟೆಲ್ಲ ನಮ್ಮ ಅಳಿತನದ್ದಾದರೆ! ಎಂಬ ಆಸೆಯೂ ಮೂಡಿತ್ತು. ಆ ದಿನ ಅಲೆದಾಡಿ ತೋಟಗಳೆಲ್ಲ ನಾಗೇಂದ್ರನದೆ ಎಂದು ತಿಳಿದಾಗ ಶಂಕರಯ್ಯ ಯೋಚಿಸುವ ಪರಿ *"ತಮ್ಮ ಮಗಳು ಉದ್ದಾರವಾದಂತೆ; ಆ ಮಗಳಿಗೆ ನಾಳೆಯ ದಿನ ದೊಡ್ಡಸ್ತಿಕೆಯ ಠೀವಿ ನೆತ್ತಿಗೆ ಅಡರದಿದ್ದರೆ, ಆಪತ್ಕಾಲ ಬಂದಾಗ ತನ್ನ ತಾಯಿ, ತಂದೆ, ತಂಗಿಯರಿಗೆ ಒಂದಿಷ್ಟು ಅನ್ನದ ಕಾಳನ್ನು ತಿನ್ನಿಸಲು ಯಾವ ಕಷ್ಟವೂ ಇಲ್ಲ ಎಂದೂ ಅನಿಸಿತು. ಈ ಶಂಕರಯ್ಯನ ಈ ಯೋಚನೆ ಸಹಜವಾದದ್ದು".*[೪೩] ಪ್ರತಿಯೊಬ್ಬ ವ್ಯಕ್ತಿಯಲ್ಲೂ ಭೂಮಿಯನ್ನು ಕುರಿತು ಮತ್ತು ಸಂಪತ್ತನ್ನು ಕುರಿತು ಆಳವಾದ ಚಿಂತನೆ ಇರುತ್ತದೆ. ನಿಸರ್ಗದ ಚಲನಶೀಲತೆಯಲ್ಲಿ ಮನುಷ್ಯನ ಚಟುವಟಿಕೆಯನ್ನು ಅಥವಾ ಅವನ ಸಂಸ್ಕೃತಿಯನ್ನು ಈ ನಿಸರ್ಗವೇ ನಿರ್ಧರಿಸುತ್ತದೆ.

ನಾಗೇಂದ್ರ ಮತ್ತು ವಾಗ್ದೇವಿ ಪ್ರಯಾಣ ಹೊರಟಾಗ ಗಾಡಿ ಕಟ್ಟಿ ಮಾವಿನ ಗುಂಡಿ ಬಳಿ ನಿಲ್ಲುತ್ತದೆ. ಆಗ ಯಾರೋ ಅಪರಚಿತರ ಮೂಲಕ 'ಚೌಗೋಡು' ಬ್ರಾಹ್ಮಣರ ಮನೆಗೆ ನಾಗೇಂದ್ರ ಮತ್ತು ವಾಗ್ದೇವಿ ಹೋಗುತ್ತಾರೆ. ಈ ಸಂದರ್ಭದಲ್ಲಿ ಕುರಿತು ಕಾರಂತರು–"ಸಹ್ಯಾದ್ರಿಯ ಬೆನ್ನಿನ ಮೇಲೆ ಬೆಳೆದ ಅರಣ್ಯದ ನಡುವೆ ಅಲ್ಲಿ ಸಣ್ಣ ಪುಟ್ಟ ಜನವಸತಿಗಳಿವೆ ಅವುಗಳನ್ನು ಗುರುತಿಸುವುದಕ್ಕೆ, ಕರೆಯುವುದಕ್ಕೆ ಒಂದೊಂದು ಹೆಸರು ಇದ್ದೇ ಇರುತ್ತದೆ. ಸಾವಿತ್ರಮ್ಮ– ತನ್ನ ಮಕ್ಕಳೊಡನೆ ಅಂಥ ಒಂದು ಮೂಲೆಯಲ್ಲಿದ್ದಾಳೆ. ಅವಳ ಪೂರ್ವಿಕರು ಅಲ್ಲಿಗೆ ಬಂದು ವಸತಿ ಹೂಡಿದಂದಿನಿಂದ, ಆ ಮೂಲೆಗೆ ಚೌಗೋಡೆಂಬ ಹೆಸರು ಬಂದಿದೆ. ಸಾವಿತ್ರಮ್ಮ.... ಗಣೇಶ ಹೆಗ್ಡೆಯರನ್ನು ಮದುವೆಯಾಗಿ, ಈ ಚೌಗೋಡು ಮನೆಯನ್ನು ತುಂಬಿಸುವುದಕ್ಕೆ ಪ್ರಥಮದಲ್ಲಿ ಬಂದಳು. ಅವಳು ಹುಟ್ಟಿದ ಸ್ಥಳ, ಮಾವಿನಗುಳಿ ಎಂಬ ಮತ್ತೊಂದು ಬೆಟ್ಟದ ಕೊಂಪೆ, ಚೌಗೋಡದರೂ ರಾಜ ಮಾರ್ಗಕ್ಕೆ ಸಮೀಪವಿದೆ, ಆ ಮಾವಿನ ಗುಳಿಗೆ ಹೋಗಲು – ಬೆಟ್ಟ ಹತ್ತಿ, ಇಳಿದು, ಕಾಡುಗಳಲ್ಲಿ ನುಗ್ಗಿ, ನುಸುಳಿ, ದಣಿದು ಕಂಗಾಲಾಗಬೇಕು, ಅಂಥ ಊರಿಂದ ಸಾವಿತ್ರಮ್ಮ ಇಲ್ಲಿಗೆ ವಧುವಾಗಿ ಬಂದಳು. ಅಂದು ಗೊಣಗಿದ್ದರಲ್ಲವೇ ಅವಳು ಇಂದು ಗೊಣಗುವುದು? ಗಣೇಶಯ್ಯನವರ ಅಜ್ಜನೋ, ಮುತ್ತಜ್ಜನೋ, ಹೆಸರೇ ಇರದ ಮೂಲೆಗೆ ಬಂದು ಕಾಡು ಕಡಿದು.

೪೩. ಅದೇ ಪುಟ- [illegible]

ತೋಟ ಗದ್ದೆಗಳನ್ನು ಮಾಡಿಕೊಂಡು, ಆ ಊರಿಗೆ 'ಚೌಗೋಡು' ಎಂಬ ಹೆಸರು ತರಿಸಿದರು. ಗೊಣಗಿದ್ದರಲ್ಲವೇ ಅವಳು ಇಂದು ಗೊಣಗುವುದು? ಗಣೇಶಯ್ಯನವರ ಅಜ್ಜನೋ, ಮುತ್ತಜ್ಜನೋ, ಹೆಸರೇ ಇರದ ಮೂಲೆಗೆ ಬಂದು ಕಾಡು ಕಡಿದು, ತೋಟ ಗದ್ದೆಗಳನ್ನು ಮಾಡಿಕೊಂಡು, ಆ ಊರಿಗೆ 'ಚೌಗೋಡು' ಎಂಬ ಹೆಸರು ತರಿಸಿದರು.

ಚೌಗೋಡಿನವರು ಇಲ್ಲಿ ವಾಸಿಸಬೇಕಾದರೆ ತಮ್ಮ ಸಂಸ್ಕೃತಿಯನ್ನು ಪಸರಿಸಿ ಆ ಜಾಗಕ್ಕೆ ಚೌಗೋಡು ಎಂದು ಹೆಸರಿಸಬೇಕಾದರೆ, ಅದಕ್ಕೆ ನಿಸರ್ಗದ ಆಕರ್ಷಣೆಯೇ ಮುಖ್ಯವಾಗಿದೆ. ಇಂತಹ ನಿಸರ್ಗದ ಪ್ರಭಾವ ಮತ್ತು ಮನುಷ್ಯ ಸಂಸ್ಕೃತಿಗಳ ಬೆಳವಣಿಗೆ ಕುರಿತು ಕಾರಂತರು – "*ಈ ಸಹ್ಯಾದ್ರಿಯ ಬೆನ್ನುದ್ದಕ್ಕೂ ನೆಲೆಸಿಕೊಂಡಿದ್ದ ಜೀವಿಗಳು ಬೀಡು ಕಟ್ಟಿದ್ದಕ್ಕೂ, ಬೀಡು ಬಿಟ್ಟಿದ್ದಕ್ಕೂ ಅಂಕೆ ಸಂಖ್ಯೆಯಲ್ಲಿ, ಕಾಡನ್ನು ಹೊಕ್ಕು, ದಾರಿ ತಪ್ಪಿ ಒಂದು ಮೂಲೆಗೆ ಹೋಗಿ ಕೂಡ, ಅಲ್ಲೊಂದು ಗಿಡವೋ, ತಳಪಾಯವೋ ಹಿಂದಿದ್ದ ಜನ ವಸತಿಯನ್ನು ಸೂಚಿಸುತ್ತದೆ. ಕೆಳದಿ, ಬೀಳಗಿ ಅರಸುಗಳ ಕಾಲದಲ್ಲಿ ಇದೇ ಸಹ್ಯಾದ್ರಿಯಲ್ಲಿ ಜನ ಜೀವನ ಇನ್ನಷ್ಟು ಪುಳಕಿತವಾಗಿ ನೆಲೆದಾಡುತ್ತಿತ್ತು. ಭಟ್ಕಳದಿಂದ ಹಾಡುವಳ್ಳಿಗೆ, ಅಲ್ಲಿಂದ ಗೋವರ್ಧನಗಿರಿಗೆ, ಅಲ್ಲಿಂದ ನಗರಕ್ಕ, ನಾಗೋದಿಗೆ, ಸಾಗರಕ್ಕೆ ಹಾಗೆಯೇ ಸಿದ್ದಾಪುರಕ್ಕೆ, ಬೀಳಗಿಗೆ, ಗೇರಸೊಪ್ಪಿಗೆ –ಹೇರೆತ್ತುಗಳ ದಾರಿ ಸಿಗುತ್ತಿತ್ತು. ಆದಾಗ ಅರಸೊತ್ತಿಗೆಗಳು ಏಳುತ್ತಿದ್ದವು ಮತ್ತು ಬೀಳುತ್ತಿದ್ದವು. ಆ ಮೇಲೊಂದು ದಿನ ಮಲೇರಿಯ ಹಾವಳಿಯಿಂದಲೋ, ಇನ್ನೇತರಿಂದಲೋ ಈ ಭಾಗವೆಲ್ಲವೂ ವನದುರ್ಗೆಯ ಅಂಕಿತಕ್ಕೆ ಬಂದಿತು. ಅವಳ ಅಂಕಿತದಲ್ಲಿ ಭಯ, ಭೀತಿ ಬೇನೆಗಳಿಂದ ಜನರು ಬಾಳುವ ಪರಿಸ್ಥಿತಿ ಉಂಟಾಯಿತು. ಅಂಥದರಲ್ಲಿ ಈ ಚೌಗೋಡು ಮನೆಯವರೇ ವಾಸಿ. ಸಾವಿರಾರು ಜನರು ವಿಹಾರಕ್ಕೆ ಬರುವ ಜೋಗಿನ ಜಲಪಾತದ ಅಬ್ಬರವು, ಮಳೆಗಾಲದಲ್ಲಿ ಕಿವಿಗೆ ಸದಾ ಬಡಿಯುತ್ತದೆ.*"[೪೪] ಈ ಅಂಶಗಳಿಂದ ತಿಳಿಯುವುದೇನೆಂದರೆ ಮನುಷ್ಯನು ನಿಸರ್ಗದ ಒಂದು ಭಾಗವಾಗಿದ್ದಾನೆ. ನಿಸರ್ಗ ಶಿಶು; ಇವನು ಇಲ್ಲಿ ನಿಲ್ಲಬೇಕಾದರೆ ನಿಸರ್ಗಕ್ಕೆ ಪೂರಕವಾಗಿರಬೇಕು. ಇಲ್ಲದ ಪಕ್ಷದಲ್ಲಿ ಅವನಿಗೆ ಇಲ್ಲಿ ಜೀವಿಸಲು ಹಕ್ಕು ಇಲ್ಲದಾಗುತ್ತದೆ. ಮಲೆನಾಡಿನ ಕಾಡುಗಳಲ್ಲಿ ವಾಸಿಸುತ್ತಾ, ಅಲ್ಲೇ ವ್ಯವಸಾಯ ಮಾಡುವ ಹಾಗೂ ನಿರಂತರವಾಗಿ ನಿಸರ್ಗದೊಂದಿಗೆ ಹೋರಾಡುವ ಜನತೆಗೆ ಮಲೇರಿಯ ರೋಗ ಸಾಮಾನ್ಯ ಸಂಗತಿ. ಆದರೂ ಸಹ ಇಲ್ಲಿ ಮನುಷ್ಯ ಅದಕ್ಕೆ ಹೊಂದಿಕೊಂಡು ಹೋಗುತ್ತಾನೆ. ಇದರಿಂದ ಅವರ ಸಂಸ್ಕೃತಿ ಬೆಳೆಯುತ್ತದೆ. ಮಾನವನ ಸಂಸ್ಕೃತಿಯೊಂದಿಗೆ ನಿಸರ್ಗವು ಸಹಜ ಅಥವಾ ಅಸಹಜ ರೀತಿಯಲ್ಲಿ ವರ್ತಿಸುತ್ತಾ ಇರುತ್ತದೆ. ಇದನ್ನು ಮನುಷ್ಯ ಅರಿತು ಬದುಕು ಸಾಗಿಸಬೇಕು ಎಂಬ ಸಂಗತಿಯನ್ನು ಕಾರಂತರು ಮನದಟ್ಟು ಮಾಡುತ್ತಾರೆ.

ಕಾರಂತರ ಕಾದಂಬರಿಗಳಲ್ಲಿ ಕಾಡು ಮತ್ತು ಕೃಷಿ ಸಂಗತಿಗಳು ಸಾಮಾನ್ಯವಾಗಿ ಬರುತ್ತವೆ. ಈ ಸಂಗತಿಗಳು ಮನುಷ್ಯನ ಸಂಸ್ಕೃತಿಯನ್ನು ಕಟ್ಟಿಕೊಡುತ್ತವೆ. ಆದರೆ ಆಧುನಿಕ ಮಾನವ ತನ್ನ ದುರಾಸೆಯಿಂದ ನಿಸರ್ಗವನ್ನು ಕಳೆದುಕೊಂಡು ಯಾಂತ್ರಿಕ ಜೀವನವನ್ನು ನಡೆಸುತ್ತಿದ್ದಾನೆ. ಇದರ

೪೪. ಅದೇ ಪುಟ- ೨೩೮

ಪರಿಣಾಮವಾಗಿ ಕಾಡುಗಳವಾಶ ಹೆಚ್ಚಾಗುತ್ತಿದೆ. ಇದರಿಂದ ನೀರಿನ ಸಮಸ್ಯೆ, ಶುದ್ದ ಗಾಳಿ ಸಮಸ್ಯೆ ಮತ್ತು ವಾತಾವರಣದ ವೈಪರೀತ್ಯ ಸಮಸ್ಯೆಗಳು ಹೆಚ್ಚಾಗುತ್ತಿವೆ. ಈ ಕಾರಣದಿಂದ ಮಾನವನ ಅಂತ್ಯಕ್ಕೆ ಮಾರ್ಗವಾಗುತ್ತಿದೆ. ಆದ್ದರಿಂದ ಕಾರಂತರು ತಮ್ಮ ಕಾದಂಬರಿಗಳಲ್ಲಿ ಹೇಳಿರುವ ನಿಸರ್ಗದ ಮಹತ್ವವನ್ನು ಅರಿಯುವುದು ಅವಶ್ಯಕವಾಗಿದೆ.

ಸಾವಿತ್ರಮ್ಮ ಮತ್ತು ಗಣೇಶ ಹೆಗ್ಗೆಡೆಯ ಮಕ್ಕಳೆಂದರೆ ನಾಲ್ಕು ಜನ. ಅವರೆಂದರೆ ಸುಬ್ರಾಯ, ಪರಮಶಿವಯ್ಯ, ಸದಾಶಿವ, ಇವರ ಸ್ಥಳ ಚೌಗೋಡು, ಸುಬ್ರಾಯ ಮಕ್ಕಿ ಗದ್ದೆ ಸೋಮೇಶ್ವರಯ್ಯನ ಮಗಳಾದ ಸತ್ಯಭಾಮೆಯನ್ನು ಮದುವೆಯಾಗುತ್ತಾನೆ. ಸೋಮೇಶ್ವರಯ್ಯನ ಮೂವರು ಗಂಡು ಮಕ್ಕಳಲ್ಲಿ ರಾಮಕೃಷ್ಣ ಪ್ರಮುಖ. ಇವನು ಪರಮೇಶ್ವರಯ್ಯನ ಮಗಳಾದ ಪದ್ಮಾವತಿಯನ್ನು ಮದುವೆಯಾಗುತ್ತಾನೆ. ಇವಳ ಅಣ್ಣಂದಿರು ವಿನಾಯಕ ಮತ್ತು ವೆಂಕಟೇಶ. ಶಿರೂರಿನಿಂದ ಶಂಕರಯ್ಯನವರು ತನ್ನ ನಾಲ್ಕು ಹೆಣ್ಣು ಮಕ್ಕಳೊಂದಿಗೆ ಶೇಡಿ ಮನೆಗೆ ಬಂದು ಸೇರಿದರು. ಇವರೆಲ್ಲರ ಕೃಷಿಯನ್ನು ಮಾಡುವ ಮೂಲಕ ನಿಸರ್ಗದಲ್ಲಿ ಬೆರೆಯುತ್ತಾರೆ. ಈ ಮೂಲಕ ತಮ್ಮ ಸಂಸ್ಕೃತಿಯನ್ನು ಬೆಳೆಸಿಕೊಳ್ಳುತ್ತಾರೆ.

"ಗಣೇಶಯ್ಯನವರ ಕಾಲದಲ್ಲಿ ಹೆಚ್ಚು ಕೃಷಿ ಮಾಡುತ್ತಿದ್ದರು. ಆದರೆ ಕಾಡು ಹೆಚ್ಚಿ ವ್ಯವಸಾಯಕ್ಕೆ ತೊಡಗಿದರೆ ಇಲ್ಲಿ ಜ್ವರ ಹೆಚ್ಚು ಆದ್ದರಿಂದ ಕೆಲಸಕ್ಕೆ ಬರಲು ಜನರು ಹೆದರುತ್ತಾರೆ. ಅಡಿಕೆ ತೋಟದಲ್ಲಿ ಕೊಟ್ಟೆ ಕಟ್ಟಲು, ಮಣ್ಣು ಹಾಕಲು, ಗೊಬ್ಬರ ಚೆಲ್ಲಲು, ಗೊನೆ ಇಳಿಸಲು ಘಟ್ಟದ ಕೆಳಗಿನಿಂದ ಕೂಲಿಗಳು ಬರಬೇಕು. ಭತ್ತದ ಬೇಸಾಯ ಅಷ್ಟೇ ಕಂಗಾಲು ಕೆಲಸ ಹೊಟೆಕೊಯ್ಲುಗಳೆಲ್ಲ ಕೆಲಸದ ಆಳುಗಳು ಸಾಗಬೇಕು. ಊರುವರು ಆ ಬರುವ ಆಳುಗಳ ಕೈಯನ್ನು ಕಾಯಬೇಕು. ಇಂಥ ಕಷ್ಟಗಳಿದ್ದರೂ, ಜೀವನಕ್ಕೆ ಬೇಕಾದುದನ್ನೆಲ್ಲ ತಾವೇ ಮಾಡಿಕೊಳ್ಳುತ್ತಾರೆ."[೪೫] ವ್ಯವಸಾಯವೆನ್ನುವುದು ಮನುಷ್ಯನಿಗೆ ತುಂಬಾ ಮುಖ್ಯ. ಇದು ಮನುಷ್ಯ ಜೀವನದ ಏಳ್ಗಿಗೆ ಅತ್ಯವಶ್ಯಕವಾಗಿದೆ. ಇದಿಲ್ಲದೆ ಇಡೀ ಮಾನವ ಕುಲಕ್ಕೆ ಅನ್ನವೆ ದೊರಕಲಾರದು ಎನ್ನುವ ಸಂಗತಿಯನ್ನು ಅರಿತಿರುವ ಕಾರಂತರು ತಮ್ಮ ಅನೇಕ ಕಾದಂಬರಿಗಳಲ್ಲಿ ಭೂಮಿ ಮತ್ತು ಕೃಷಿ ಸಂಗತಿಗಳನ್ನು ನಿರಂತರವಾಗಿ ತರುತ್ತಾರೆ.

ಚೌಗೋಡಿನ ಕುಟುಂಬದ ಸುಬ್ರಾಯ ನಿಸರ್ಗ ಸಂಸ್ಕೃತಿಯನ್ನು ಬಿಟ್ಟು ನಗರ ಸಂಸ್ಕೃತಿಗೆ ಮಾರು ಹೋಗುತ್ತಾರೆ ಪರಮೇಶ್ವರಯ್ಯರ ಮಕ್ಕಳಾದ ವಿನಾಯಕ, ವೆಂಕಟೇಶ ಇದಕ್ಕೆ ಹೊರತಲ್ಲ. ಶಿರೂರಿನ ಶಂಕರಯ್ಯ ಜಾತಿ ಭ್ರಷ್ಟನಾಗಿ ಶೇಡಿ ಮನೆಗೆ ಬಂದು ವಾಸಿಸುವುದು ಮುಖ್ಯ. ಈ ಮನೆಗೆ ಹೋಗುವಾಗ ನಿಸರ್ಗವು ಅವರ ಮೇಲೆ ಪ್ರಭಾವ ಬೀರಿ ಸಂತೋಷಗೊಳಿಸುತ್ತದೆ' *"ಬೆಟ್ಟ ಬೆನ್ನಿನಿಂದ ಚುಕ್ಕಿಯಂತೆ ಕಾಣಿಸಿದ ಅವರ ಮನೆ, ಎದುರಿನ ಬಯಲು, ಕಬ್ಬಿನ ಹೊಲ. ತೆಂಗಿನ ತೋಟ-ಇವುಗಳೆಲ್ಲವು ಚೆಲುವಿನ ಭಾವನೆ ಮೂಡಿಸಿದವು. ಶಂಕರಯ್ಯನಿಗೆ ಆಗಾಗ ತಮ್ಮೂರಿನಿಂದ ಶೇಡಿಮನೆಗೆ*

---

೪೫. ಅದೇ ಪುಟ- ೨೩೮

ಹೋಗುತ್ತಾ ಬೈಂದೂರು ಅಣೆಯಲ್ಲಿ ನಿಂತು ನೋಡುವಾಗ, ತೆಂಕಣದಲ್ಲಿ ಹೀಗೆಯೇ ಚೆಲುವಿನ ನೋಟ ಕಾಣಿಸಿದ್ದಂಟು. ಬೈಂದೂರಿನ ಹರವು ಇದಕ್ಕೆ ಇರಲಿಲ್ಲ ಆದರೆ ಆ ಶೇಡಿಮನೆ ಚೆಲುವು ತುಂಬಿದ ಊರಾಗಿ ಕಾಣಿಸಿತು."[೪೬] ಈ ರೀತಿಯ ವರ್ಣನೆಯಿಂದ ಸಂತೋಷ ಪಡುವ ಸ್ಥಿತಿ ನಮ್ಮ ಕವಿಗಳಿಂದ ಹಿಡಿದು ಸಾಮಾನ್ಯ ಜನರವರೆಗೂ ಸಾಮಾನ್ಯ ಸಂಗತಿಯಾಗಿದೆ. ಇಂತಹ ಪ್ರಕೃತಿಯನ್ನು ರಕ್ಷಿಸುವುದು ನಮ್ಮ ಕರ್ತವ್ಯವಾಗಿದೆ.

ಮನುಷ್ಯನಿಗೆ ಪ್ರಕೃತಿಯು ಭೀತಿ ಮೂಡಿಸುವ ಬಗೆಯನ್ನು ಕಾರಂತರು ಶಂಕರಯ್ಯನವರು ಶೇಡಿ ಮನೆಗೆ ಬರುವ ಸಂದರ್ಭದಲ್ಲಿ ತರುತ್ತಾರೆ. 'ಇಳುಕಲ್ಲಿನ ಕಾಡು ಮತ್ತಷ್ಟು ದಟ್ಟವಾಗಿತ್ತು. ನಡೆ ನಡೆದು ಮೈ ಬೆವರುತ್ತಿತ್ತು. ಬೆಳಗಿನ ಚಳಿ ಎಂದೋ ಮಾಯಾವಾಗಿತ್ತು ಆಚೀಚೆ ನೋಡಿದರೆ – ಭಯವನ್ನು ಬಿಂಬಿಸುವ ನೋಟವನ್ನು ನೆನೆದಾಗ ಅವರಿಗೆ ಭೂತ ಪಿಶಾಚಿಗಳ ನೆನೆಪಾಯಿತೋ ಏನೋ, ಮೆಲ್ಲಗೆ, ಭಜ ಗೋವಿಂದಂ ಹಾಡತೊಡಗಿ, 'ಪುನರಪಿ ಜನನಂ ಪುನರಪಿ ಮರಣಂ' ಎಂದೆಲ್ಲಾ ತೊಡಗಿದಾಗ, ಅವರ ಧ್ವನಿಗೆ ಮಾರ್ದನಿಗೊಡುವ ಮನಸ್ಸುಗಳ 'ಭೂಂ' ಕಾರ ಕೇಳಿಸಿತು.' ಇದು ಮನುಷ್ಯನ ಮೂಲ ಸಂಸ್ಕೃತಿಯನ್ನು ಬಿಂಬಿಸುತ್ತದೆ. ಪ್ರಾಚೀನ ಮಾನವ ಈ ನಿಸರ್ಗವನ್ನು ನೋಡಿ ವಿಸ್ಮಯದೊಂದಿಗೆ ಭಯಬೀತನಾಗಿ ಪ್ರಕೃತಿಯನ್ನು ಪೂಜಿಸತೊಡಗಿದನು. ಇದು ಧರ್ಮಕ್ಕೆ ನಾಂದಿಯಾಯಿತು. ಈ ಧರ್ಮದಿಂದ ಅವನ ಸಂಸ್ಕೃತಿ ಪಸರಿಸಿತು. ಈ ಸಂಸ್ಕೃತಿಯ ಮೇಲೆ ನಿಸರ್ಗವು ಪ್ರಾಚೀನ ಕಾಲದಿಂದ ಇಂದಿನವರೆಗೂ ಪರಿಣಾಮ ಬೀರುತ್ತಲೇ ಇದೆ. ಇದರಿಂದ ಮಾನವನ ನಿಸರ್ಗದ ಸಂಬಂಧ ಮುಂದುವರೆಯುತ್ತಲೇ ಇದೆ.

ಶೇಡಿಮನೆ ಕರಿಣಿಕರ ಸಿಂಗಾರಮ್ಮನ ಮೊಮ್ಮಕ್ಕಳು ರಾಘವ, ಸೀತಾರಾಮ ಮತ್ತು ಕೋದಂಡ, ರಾಘವ ಶಂಕರಯ್ಯನವರನ್ನು ಕರೆದುಕೊಂಡು ಬರುವ ಸಂದರ್ಭದಲ್ಲಿ ನಿಸರ್ಗವನ್ನು ಆಸ್ವಾದಿಸುವ ಪ್ರಕ್ರಿಯೆಯಲ್ಲಿ ಅನುಭಾವಿಕ ಸಂಸ್ಕೃತಿಯನ್ನು ಬಿಂಬಿಸುತ್ತದೆ. ಕಾರಂತರು ಇದನ್ನು ಕುರಿತು ಹೇಳುತ್ತಾರೆ– *"ರಾಘವ ನಿಂತ ಮೂಡಣದ ಉನ್ನತ ಬೆಟ್ಟಗಳನ್ನು ಪಡುವಣದ ವಿಶಾಲ ಕಡಲನ್ನೂ ಕಂಡು ಮೈಮರೆತು ನಿಂತ. ಮುಂಚಿನ ದಿನ ಸಂಜೆ ಕಂಡುದಕ್ಕಿಂತಲೂ ಹೆಚ್ಚಾಗಿ ಅವನ ಮನಸ್ಸು ಉಲ್ಲಾಸಿತವಾಗಿತ್ತು. ಆ ಹುಡುಗ ಸೃಷ್ಟಿಯ ಸೊಬಗನ್ನುಣ್ಣುವುದರಲ್ಲಿ; ತಲ್ಲೀನನಾದುದು ಅವರಿಗೂ ಕಾಣಿಸಿತ್ತಿತ್ತು."*[೪೭]

ಕಾರಂತರು ಸೃಷ್ಟಿಯ ಸೊಬಗನ್ನು ಕುರಿತು ಹೇಳುವುದರಲ್ಲಿ ನೈಜತೆಯಿರುತ್ತದೆ. ಈ ನೈಜತೆಯನ್ನು ಪ್ರತಿಯೊಬ್ಬರು ಅರಿಯಬೇಕು ಎನ್ನುವುದು ಅವರ ಉದ್ದೇಶವಾಗಿದೆ. ಈ ನೈಜತೆಯು ಮನುಷ್ಯನ ಸಂಸ್ಕೃತಿಯೊಂದಿಗೆ ನಿರಂತರವಾದ ಸಂಬಂಧವನ್ನು ಹೊಂದಿದೆ.

ರಾಘವನಂತೆ ಪ್ರಕೃತಿಯನ್ನು ಕಂಡು ಸಂತೋಷ ಪಡುವ ಪಾತ್ರಗಳನ್ನು ಕಾರಂತರು ಅನೇಕ ಘಟನೆಗಳ ಮೂಲಕ ಸೃಷ್ಟಿಸಿದ್ದಾರೆ. ಚೌಗೋಡಿನ ಸುಬ್ರಾಯನ ಹೆಂಡತಿಗೆ ಮಗು ಹುಟ್ಟುತ್ತದೆ.

---

೪೬. ಅದೇ ಪುಟ– ೨೬೯
೪೭. ಅದೇ. ಪುಟ – ೨೮೮

ಅದಕ್ಕೆ ಹೆಸರನ್ನು ಇಡುವುದಿಲ್ಲ. ಅದರ ಬದಲಾಗಿ ಸತ್ಯಭಾಮೆ ಅದನ್ನು ಕೂಸು ಎಂದು ಕರೆಯುತ್ತಿದ್ದಳು. ಅತ್ತೆಯ ಮನೆಯನ್ನು ಬಿಟ್ಟು ಬಂದ ಮೇಲೆ ಅಣ್ಣ ರಾಮಕೃಷ್ಣ ಮತ್ತು ಅತ್ತಿಗೆ ಪದ್ಮಾವತಿಯು ಅಕ್ಕರೆಯ ಹಾರೈಕೆಯಲ್ಲಿರುತ್ತಾಳೆ. ಆಗ ಅವಳು 'ಕೂಸು' 'ಮರಳಿ ಮಣ್ಣಿಗೆ'ಯ ರಾಮನಂತೆ ಕಡಲನ್ನು ನೋಡುವ ತವಕದಂತೆ, 'ಕೂಸು'ತನ್ನ ಅಮ್ಮನನ್ನು 'ಹೊಳೆಗೆ ಹೋಗುವಾ' ಎಂದು ಕೇಳುತ್ತಿತ್ತು. ಆಗ ಸತ್ಯಭಾಮೆ ಅಂಕು ಡೊಂಕಾಗಿ ಹರಿಯುವ ಶರಾವತಿಯ ದಂಡಗೆ ಕರೆದುಕೊಂಡು ಹೋಗುತ್ತಾಳೆ. ಅಲ್ಲಿರುವ ಅಶ್ವತ್ಥ ಮರದ ದಂಡೆಯ ಮೇಲೆ ಕುಳಿತು ತನ್ನ ಮಗುವಿನನೊಡನೆ ತನ್ನ ದುಃಖವನ್ನು ಮರೆಯುವುದು ಹಾಗೂ ಏನೂ ಹರಿಯುವ 'ಕೂಸು' ಆ ನದಿಯನ್ನು ಕಂಡು ನಗುವುದು ಇವೆಲ್ಲವು ಮನುಷ್ಯ ಜೀವನದ ವೈರುದ್ಯಗಳಂತೆ ಕಂಡುಬರುತ್ತದೆ.

"ನದಿಯಲ್ಲಿ ಬಾನಿನ ನೀಲಿ ಮೈ ಬಿಂಬಿಸುತ್ತಿತ್ತು. ಒಂದೊಂದಾಗಿ ಹಾಯ ದೋಣಿಗಳು, ಏನೋ ಸರಕು ತುಂಬಿಸಿಕೊಂಡು ಮುಂದೆ, ಮುಂದೆ ಸಾಗುತ್ತಿದ್ದವು. ಕೂಸು ಆ ದೋಣಿಗಳ ಬಿಳಿಯ ಹಾಯಿಗಳನ್ನು ಕಂಡು 'ದೋಣಿ ಹೋಗು, ದೋಣಿ ಹೋಗು' ಎಂದು ಹಟ ಮಾಡಿದ್ದರಿಂದ ಅವಳು ನದಿ ದಂಡೆಯ ತನಕವೂ ಅದನ್ನೆತ್ತಿಕೊಂಡು ಸಾಗಿದಳು. ಅಲ್ಲೊಂದು ಹಳೆಗಾಲದ ಅಶ್ವತ್ಥ ವೃಕ್ಷವಿದೆ. ನಗರ ಬಸ್ತಿಯ ವೈಭವದ ಕಾಲದಲ್ಲಿ ಅದನ್ನಾರೋ ನೆಟ್ಟಿದ್ದಿರಬೇಕು ಅಂದು ಸಾವಿರಾರು ಜನಕ್ಕೆ ದಿನನಿತ್ಯ ಸುತ್ತು ಬಂದಿರಬಹುದು. ಈಗ ಅದರ ಕಟ್ಟೆಯು ಒಡೆದು, ನೆಟ್ಟದ್ದಿರಬೇಕು. ಅಂದು ಸಾವಿರಾರು ಜನಕ್ಕೆ ದಿನನಿತ್ಯ ಸುತ್ತು ಬಂದಿರಬಹುದು. ಈಗ ಅದರ ಕಟ್ಟೆಯು ಒಡೆದು, ಕಲ್ಲು ರಾಶಿ ಬಿದ್ದಿದೆ. ಮರದ ಕಾಂಡ ನೂರಾರು ಬೀಳಲುಗಳ ಹೆಜ್ಜಡೆಯಾಗಿದೆ. ಎಷ್ಟು ದಪ್ಪನಾದ ದಿಂಡು ಅದರದು; ಯುಗ ಸರಿದರೂ, ತಾನು ಚಿರಂಜೀವಿ ಎಂಬ ಹೆಮ್ಮೆ ಅದರಲ್ಲಿ ಮೂಡಿದೆ. ಮೇಲೆ ನೂರಾರು ರಂಬೆಗಳು ಕುಡಿಯೊಡೆದಿವೆ. ನೂರು ಯಾಗಗಳಿಗೆ ಬೇಕಾಗುವಷ್ಟು ಸಮಿತ್ತುಗಳನ್ನು ಹೊತ್ತು ವೃಕ್ಷ ನಿಂತಿದೆ. ಅಸಂಖ್ಯಾತ ತಾಮ್ರ ವರ್ಣದ ಚಿಗುರೆಲೆಗಳು ಗಾಳಿಯಲ್ಲಿ ಬಳುಕುತ್ತ ವಾಯುಗೀತೆ ಹಾಡುತ್ತವೆ. ಕೂಸು ನೀರನ್ನು ನೋಡುತ್ತಿದೆ. ಹಾಯಿ ದೋಣಿ ನೋಡುತ್ತಿದೆ. ಆ ಅಶ್ವತಥದೆಲೆಗಳ ಕುಣಿದಾಟ ಮಿನುಗು, ಕಿಲಕಿಲ ಕಲರವವನ್ನು ಕೇಳುತ್ತಿದೆ. ಅದೆಷ್ಟು ನಕ್ಕಿತೆಂದು ಹೇಳುವುದಕ್ಕಲ್ಲ, ಯಾಕೆ ನಗುತ್ತಿದೆ ಎಂದವಳಿಗೆ ತಿಳಿಯದೆ! ಆ ನಿಸರ್ಗ ಯಾರ ಹೃದಯದಲ್ಲಿ ನಗುವನ್ನು ಹುಟ್ಟಿಸಲಾರದು? ಆ ಮಗುವೊಂದು ಹೆಜ್ಜೇ?ದಿಘ್ಮೋಳಾಗಿ ಬಂದ ಅವಳು, ಮಗುವಿನ ಮುಗ್ಧ ನಗುವಿನ ಸೆರೆಯಲ್ಲಿ ಸಿಕ್ಕಿ ಅಪ್ಪಲ್ಲ ದೀರ್ಘಕಾಲದ ಬಳಿಕ, ಹುಚ್ಚಿಯಂತೆ ತಾನೂ ನಗ ತೊಡಗಿದಳು."[೬೮]

ನದಿಯಲ್ಲಿ ದೋಣಿಗಳ ವಿಹಾರ ಮತ್ತು ಸರಕು ಸಾಗಾಣಿಕೆ ಇದು ಮನುಷ್ಯನು ಅನಾದಿಕಾಲದಿಂದ ನಿಸರ್ಗದೊಂದಿಗೆ ಹೊಂದಿರುವ ಸಂಬಂಧವಾಗಿ ಕಂಡು ಬರುತ್ತದೆ. ಅದೇ ರೀತಿಯಾಗಿ ಮನುಷ್ಯನ ಮುಗ್ಧತೆ, ದುಃಖ ಮತ್ತು ಸೌಂದರ್ಯ ಪ್ರಜ್ಞೆಗೆ ಸಾಕ್ಷಿಗಳಾಗಿ ಕ್ರಮಾನುಸಾರ ಇವೇ ಸಾಕ್ಷಿಯಾಗಿವೆ. ಇಲ್ಲಿ ಮಗುವಿಗೆ ನದಿ ಮುಗ್ದ ಸೌಂದರ್ಯ ಪ್ರಜ್ಞೆಯನ್ನು ಉಂಟುಮಾಡಿದ್ದರೆ, ಅದೇ ನದಿ ಸತ್ಯಭಾಮೆಗೆ ಜೀವನದ ಪ್ರವಾಹದ ರೀತಿಯಲ್ಲಿ ಕಂಡು ಆಕೆ ಹುಚ್ಚಿಯಂತೆ ನಗುವುದು ಮನುಷ್ಯ ಜೀವನದ ಸಾಂಸ್ಕೃತಿಕ ಪಲ್ಲಟವಾಗಿದೆ. ಹೀಗೆ ಮನುಷ್ಯನ

೬೮. ಅದೇ ಪುಟ- ೩೨೨

ಸಂಸ್ಕೃತಿ ನಿಸರ್ಗದೊಂದಿಗೆ ವಿವಿಧ ರೀತಿಯಲ್ಲಿ ಹೊಂದಿಕೊಂಡಿದೆ ಎನ್ನುವುದು ಪ್ರಮುಖ ಸಂಗತಿಯಾಗಿದೆ.

ಪದ್ಮಾವತಿಯ ಗಂಡ ರಾಮಕೃಷ್ಣ ಮತ್ತು ತಮ್ಮಂದಿರ ನಡುವೆ ಭೂಮಿ ' ಒಸ್ಗೆ' ಆಗುತ್ತದೆ. ಆಗ ಆತ ತನ್ನ ತಂದೆ ಸೋಮೇಶ್ವರಯ್ಯನ ಮಾತಿನಂತೆ ಶಿಕ್ಷಕ ವೃತ್ತಿಗೆ ರಾಜೀನಾಮೆ ನೀಡಿ ಶರಾವತಿ ನದಿ ದಂಡೆಯಲ್ಲಿದ್ದ 'ನಗರಬಸ್ತಿ'ಗೆ ಹೋಗುತ್ತಾನೆ. ಎಂದೂ ಬೇಸಾಯ ಕಂಡಿರದ ಪಾಳು ಭೂಮಿಯನ್ನು ನೋಡಿಕೊಂಡು ಬಂದರು. ಇಂತಹ ಪಾಳು ಭೂಮಿಯನ್ನು ಉಳುಮೆ ಮಾಡುವುದು. ಅದನ್ನು ಅವರು ಹಚ್ಚ ಹಸಿರಾಗಿಸುವುದು; ಮನುಷ್ಯನ ಛಲವನ್ನು ತೋರಿಸುತ್ತದೆ. ಭೂ ಒಡೆತನದ ಸಂಗತಿ ಈಗ ತುಂಬಾ ಪ್ರಮುಖವಾಗಿದೆ. ಇದಕ್ಕಾಗಿ ಯುದ್ಧಗಳು ಜರುಗಿವೆ. ಇದಕ್ಕೆಲ್ಲಾ ಕಾರಣ ನೈಸರ್ಗಿಕ ಸಂಪತ್ತನ್ನು ತಮ್ಮದಾಗಿಸಿ ಕೊಳ್ಳುವುದಾಗಿದೆ. ಅದಕ್ಕಾಗಿ ಮಾನವ ಪರಿತಪಿಸುತ್ತಿದ್ದಾನೆ. ಇದೇ ಅಂಶಗಳನ್ನು ಕಾರಂತರು ತಮ್ಮ ಕಾದಂಬರಿಗಳಲ್ಲಿ ಗುರ್ತಿಸುತ್ತಾರೆ. ಇಲ್ಲಿ ನಗರ ಬಸ್ತಿಯೆಂದರೆ ಪುರಾತನ ಪ್ರಸಿದ್ಧಿಯ ಸಿರಸೊಪ್ಪಿಯ ರಾಜಧಾನಿ. ಇದನ್ನು ಈಗ ಗೆರೆಸೊಪ್ಪೆ ಎಂದು ಕರೆಯುವರು. ಇಂತಹ ಸ್ಥಳದಲ್ಲಿ ಮಲೇರಿಯಾ ಜಾಸ್ತಿ. ಆದರೂ ಅದನ್ನು ತಡೆದು ಬದುಕುವುದು ನಿಸರ್ಗದೊಂದಿಗೆ ಅವರು ಕೃಷಿಗಾಗಿ ಹೊಂದಿರುವ ಕೃಷಿ ಪ್ರತೀಕವಾಗಿದೆ.

ಸೋಮೇಶ್ವರಯ್ಯ ಮತ್ತು ರಾಮಕೃಷ್ಣ ಆ ಪಾಳು ಭೂಮಿಯನ್ನು ಕಂಡು –"*ಜಿನುಗು ನೀರಿಗೊಂದು ಕಂದಕ ಮಾಡಿ ಕೊಟ್ಟರೆ, ಹಸುರಿನಿಂದ ನೋಡಬಹುದಾದ ನೆಲವದು, ನೀರಿನ ಸಂಮೃದ್ಧಿ ಹೇಳಲಾರದಷ್ಟಿತ್ತು. ತೋಟ,ಗದ್ದೆ ಯಾವುದೂ ಮಾಡಬಹುದಾದ ತಾವು, ಶ್ರಮ ಸಾಹಸಗಳಿದ್ದರೆ ಅದೊಂದು ನಂದನವಾದೀತು. ಆ ನೆಲವನ್ನು ನಿರೀಕ್ಷಿಸಿ ನೋಡಿದಾಗ ಅಂಥ ವಿಶ್ವಾಸ ತಂದೆ ಮಕ್ಕಳಿಬ್ಬರಲ್ಲೂ ಮರಕಳಿಸಿತು.*"[೪೯] ಇದು ಮಾನವನು ನಿಸರ್ಗದೊಂದಿಗೆ ಹೇಗಾದರೂ ಹೊಂದಿಕೊಂಡು ಬದುಕಬೇಕೆಂಬ ಛಲ ಮತ್ತು ಜೀವನದ ಉತ್ಸಾಹವನ್ನು ತೋರಿಸುತ್ತದೆ. ಈ ಉತ್ಸಾಹವೇ ಮನುಷ್ಯನ ಬದುಕಿಗೆ ಮೂಲವಾಗಿದೆ. ಬದುಕಿಗೆ ಮೂಲ ಉತ್ಸಾಹ ಕೊಡುತ್ತಿರುವುದು ಭೂಮಿಯೇ ಹೊರತು ಬೇರೆ ಇನ್ನೇನು ಅಲ್ಲ. ಈ ಭೂಮಿಯ ಫಲವತ್ತತೆಯನ್ನು ಮತ್ತು ಅದರ ಪೋಷಕ ವಾತಾವರಣವನ್ನು ಕಾಪಾಡಿದರೆ, ನಮ್ಮನ್ನು ಅದು ಪೋಷಿಸುತ್ತದೆ. ಆದ್ದರಿಂದ ಮಾನವ ಅದರ ಗುಟ್ಟನ್ನು ಅರಿಯಬೇಕಾಗಿದೆ. ಹಾಗೆ ಅರಿತಾಗ ಮಾನವ ಸಂಸ್ಕೃತಿಯೊಂದಿಗೆ ನಿಸರ್ಗದ ಸಂಬಂಧವು ಪೂರಕವಾಗಿರುತ್ತದೆ. ಇದರಿಂದ ಮಾನವ ಜನಾಂಗದ ಸಂಸ್ಕೃತಿ ಮುಂದುವರೆಯುತ್ತದೆ.

ಮುಗಿದ ಯುದ್ಧ' ಕಾದಂಬರಿಯಲ್ಲಿ ಕಾರಂತರು ಸ್ನೇಹ ಸಂಬಂಧಗಳ ಮಹತ್ವ ಹಾಗೂ ಒಡತನ ಜೀವನವನ್ನು ಪಾತ್ರಗಳ ಮೂಲಕ ಕಟ್ಟಿಕೊಡುತ್ತಾರೆ. ಇಲ್ಲಿ ನಮ್ಮ ಮುಖ್ಯ ಪ್ರಶ್ನೆಯೆಂದರೆ ನಿಸರ್ಗವು ಮಾನವ ಸಂಸ್ಕೃತಿಯೊಂದಿಗೆ ಹೊಂದಿರುವ ಸಂಬಂಧ ಏನು? ಎಂಬುದಾಗಿದೆ. ಈ

---

೪೯. ಅದೇ ಪುಟ- ೩೨೭

ಪ್ರಶ್ನೆಗೆ ಉತ್ತರ ಕಂಡುಕೊಳ್ಳಲು ಪ್ರಯತ್ನಿಸಿದಾಗ ತಮ್ಮ ಎಲ್ಲಾ ಕಾದಂಬರಿಗಳಲ್ಲಿ ಮನುಷ್ಯನ ಜೀವನದೊಂದಿಗೆ ನಿಸರ್ಗದ ಅಂಶಗಳನ್ನು ಮೇಳೈಸಿರುವುದು ತಿಳಿಯುತ್ತದೆ. ಎಸ್.ಅನಂತನಾರಾಯಣರವರು ಈ ಕಾದಂಬರಿ ಕುರಿತು ಹೇಳುವುದೇನೆಂದರೆ– *"ಮುಗಿದ ಯುದ್ಧ; ಈ ಕಾದಂಬರಿಯಲ್ಲಿ ಕಾರಂತರು ವಾಸ್ತವವಾದ ಪ್ರತಿಬಿಂಬ ಕೊಟ್ಟಿದ್ದಾರೆ."*[೫೦] ಇಲ್ಲಿ 'ವಾಸ್ತವತೆ' ಯೆಂದರೆ ಬಡತನ ಮತ್ತು ನಿರಾಸೆ. ಈ ಬಡತನದಲ್ಲಿ ನಿಸರ್ಗದ ಸಂಬಂಧಗಳು ಮುಖ್ಯವಾಗಿವೆ. ಈ ಕಾದಂಬರಿಯ ಕಥಾನಾಯಕ ಅಚ್ಚುತ. ಈತನು ಕೊಂಬಾರಿನ ಕೃಷ್ಣರಾಯನ ಮಗ. ಕೃಷ್ಣರಾಯ ಕೊಂಬಾರಿನಲ್ಲಿ ಶ್ರೀಮಂತಿಕೆಯಲ್ಲಿ ಹೆಸರು ಮಾಡಿದವರು. ಆದರೆ ಅವರ ಈ ಸಿರಿವಂತಿಕೆ ಕಳಚಿಕೊಂಡು, ಭೂಮಿ ಸಾಲಗಾರರ ಪಾಲಾಗಿ ಬಡತನ ಆವರಿಸಿದೆ.

ಅಚ್ಚುತ, ನಾಗರಾಜ ಸ್ನೇಹಿತರು. ಇವರು ಪ್ರವಾಸ ಹೊರಡುತ್ತಾರೆ. ಗುಡ್ಡವನ್ನು ಏರಿ ನಿಸರ್ಗದ ವಿಸ್ಮಯವನ್ನು ಕಂಡು ಸಂತೋಷ ಪಡುತ್ತಾರೆ. *"ಅಚ್ಚುತ ಸುತ್ತಲಿನ ಆಕಾಶ ನೋಡುತ್ತಾನೆ. ಅದರಲ್ಲಿ ಬಿಳಿಯ ತೇಲು–ಮೋಡಗಳ ಚಲನೆಯನ್ನು ದೃಷ್ಟಿಯಿಂದ ಹಿಂಬಾಲಿಸುತ್ತಾನೆ. ಅವು ಮೆಲ್ಲಗೆ ಸರಿದು ಮೂಡಣ ದಿಗಂತದ ಅಂಚಿನಲ್ಲಿ ಕುರಿಯ ಮಂದೆಯಂತೆ ಕೂಡುವುದನ್ನು ಕಾಣುತ್ತಾನೆ. "ಅಲ್ಲಿ ಗಾಳಿ ಬೀಸುತ್ತಿರಬೇಕು – ತೀರ ಎತ್ತರದಲ್ಲಿ, ಇಷ್ಟು ಎತ್ತರಕ್ಕೂ ಗಾಳಿಯ ಸುಳಿವಿಲ್ಲ" ಎಂದು ಹೇಳುತ್ತಾನೆ. ಅವನಿಗೆ ಹಿಂದಿನ ದಿನದ ಸೊಬಗು ಇಂದಿನಿಂದ ಅಷ್ಟೊಂದು ಭಿನ್ನವಾದಂತೆ ಕಾಣುತ್ತದೆ. ಇಂದೇನು ಗಾಳಿಯ ಸುಳಿವಿಲ್ಲ? ದೂರದ ಗುಡ್ಡಗಳಲ್ಲಿ ಬಿಸಿಲಿಗೆ ನೀರ ತೆರೆಯಂತೆ ಓಡುತ್ತಿದೆಯಲ್ಲ! ನಾವಿದ್ದಲ್ಲಿ– ಗಾಳಿಯ ಸುಳಿವಿಲ್ಲ? ಎಲ್ಲಿ ಗುಡ್ಡದ ಕುಡಿಗಳೂ ಕರಿ ತಲೆಯವಿಗಳಾಗಿವೆ. ಬೇಗೆಯಿಂದ ಕಾಡು ಪಾರಿವಾಳಗಳು ಜತೆಗಾತಿಯ ಸಲುವಾಗಿ 'ಕುಟ್ರುವಾ' ಎಂದು ನೀಡಿದಾಗ ಕೂಗನ್ನು ಕೂಗುತ್ತವೆ. ತಿರುಗಿ ಇನ್ನೊಂದು ಬೆಟ್ಟದ ಸಂದಿನಿಂದೆಂಬಂತೆ ಹೆಣ್ಣು ಧ್ವನಿಯು ಮರುತ್ತರ ಕೊಡುತ್ತದೆ."*[೫೧] ಇಂತಹ ನಿಸರ್ಗದ ಸೌಂದರ್ಯವು ಎಂತಹ ಕಠಿಣ ಹೃದಯವಂತನನ್ನು ಸೂರೆಗೊಳ್ಳುತ್ತದೆ. ಅದೇ ರೀತಿ ಇಲ್ಲಿ ಅಚ್ಚುತ ಮತ್ತು ನಾಗರಾಜನಿಗೆ ಆಕರ್ಷಕವಾಗಿ ಆ ಗುಡ್ಡಕ್ಕೆ ಏರುತ್ತಾರೆ. ಆದರೆ ಅಲ್ಲಿ ಗಾಳಿಯ ಸುಳಿವಿರುವುದಿಲ್ಲ ಮತ್ತು ಅಲ್ಲಿ ಪಾರಿವಾಳಗಳು ಗಾಳಿಯ ಕೊರತೆಯಿಂದ ಶಾಖ ಹೆಚ್ಚಾಗಿ ವಿಹ್ವಲಗೊಳ್ಳುವ ಸಂಗತಿ ತಿಳಿಯುತ್ತದೆ. ನಾಗರಾಜ ಅವುಗಳ ಕೂಗನ್ನು ಅನುಕರಿಸಿ ಕೂಗುತ್ತಾನೆ. ಇವೆಲ್ಲವೂ ಮನುಷ್ಯನ ಮೇಲೆ ನಿಸರ್ಗವು ಬೀರಿರುವ ಪರಿಣಾಮಗಳಾಗಿವೆ. ಈ ಕಾರಣದಿಂದ ಮನುಷ್ಯ ಸಾಂಸ್ಕೃತಿಕವಾಗಿ ನಿಸರ್ಗದೊಂದಿಗೆ ವಿವಿಧ ತೆರನಾಗಿ ಸಂಬಂಧಪಿಟ್ಟುಕೊಂಡಿದ್ದಾನೆ. ಈ ಅಂಶಗಳನ್ನು ಕಾರಂತರು ನಾಗರಾಜ ಮತ್ತು ಅಚ್ಚುತನ ಸಂದರ್ಭದಲ್ಲಿ ಗುರುತಿಸುತ್ತಾರೆ.

ಕೃಷ್ಣರಾಯನ ಮಗಳಾದ ಸೀತೆಯನ್ನು ಬಂಟ್ವಾಳದ ಒಂದು ಊರಿಗೆ ಕೊಟ್ಟಿದ್ದರು. ಅವಳ ಗಂಡ ನರಸಿಂಹಯ್ಯ. ಇವನು ತನ್ನ ಮಾವ ಕೃಷ್ಣರಾಯ ಸತ್ತ ನಂತರ ಹೆಂಡತಿಯನ್ನು ಬಿಟ್ಟು ಹೋದವನು ಬರುವುದೇ ಇಲ್ಲ. ನಂತರ ಸೀತೆ ತನ್ನ ತಾಯಿ ಲಕ್ಷ್ಮೀಯೊಡನೆ ವ್ಯವಸಾಯ ಮಾಡಿ

೫೦. ಎಸ್.ಅನಂತನಾರಾಯಣ, ಕಾರಂತರ ಕಾದಂಬರಿಗಳು, ಪುಟ –೫೪

೫೧. ಶಿವರಾಮ ಕಾರಂತ, ಮುಗಿದ ಯುದ್ಧ, ಪುಟ – ೧೨

ಬದುಕು ಸಾಗಿಸುತ್ತಾಳೆ. ಆದರೆ ಅಚ್ಚುತ ಶಿಕ್ಷಕನಾಗಿ ಪಡಬಾರದ ಕಷ್ಟಗಳನ್ನು ಅನುಭವಿಸುತ್ತನೆ. ಮುಖ್ಯವಾಗಿ ಸಾಲಗಾರಿಕೆಯಾಗಿದೆ. ಆದ್ದರಿಂದ ಅವನು ಕೃಷಿ ಮಾಡುತ್ತಾನೆ. ಆದರೆ ಅವನು ಅದರಲ್ಲಿ ತೇರ್ಗಡೆಯಾಗುವುದಿಲ್ಲ, ಬದಲಾಗಿ ಅನುತ್ತೀರ್ಣನಾಗಿ ಜೀವನದ ಪ್ರಶ್ನೆಗೆ ಸರಿಯಾಗಿ ಉತ್ತರ ಕಂಡುಕೊಳ್ಳವುದಿಲ್ಲ. ತನ್ನಲ್ಲಿರುವ ಭೂಮಿಯನ್ನು ಕಳೆದುಕೊಳ್ಳುತ್ತಾನೆ.

"*ಅಂತು, ಏಪ್ರಿಲ್ ಎರಡನೆಯ ವಾರ ಮುಗಿಯುವುದರೊಳಗಾಗಿ ನಾಲ್ಕೆಂಟು ಮಳೆಗಳು ಚೆನ್ನಾಗಿ ಆದವು. ಆ ಮೇಲೆ ಬಲು ದಿನಗಳ ತನಕ ಮಳೆ ಮುಗಿಲುಗಳು ಉರುಳಿ, ಕುಮಾರ ಪರ್ವತದ ಬಳಿ ಕಲೆತು ಸುಬ್ರಮಣ್ಯ ಪ್ರಾಂತದವರಿಗೆಲ್ಲಾ ಗುಡುಗು, ಮಿಂಚು ಮಳೆಗಳ ಅಭಿಷೇಕವನ್ನು ಮಾಡಿದವು. ಮಳೆಯ ನೀರಿನ ಹನಿಗಳೊಡನೆ ಮುಂದಿನ ಬೇಸಾಯದ ನೆನಪು ಕೂಡಿತು. ಅಚ್ಯುತ ಮತ್ತು ಆತನ ತಾಯಿ ಲಕ್ಷ್ಮೀಗೆ ಬೇಸಾಯದ ನೆನಪು ಬಂತು – ಅದಕ್ಕಾಗಿ ಸಿದ್ಧತೆ ಮಾಡಿಕೊಳ್ಳಲು ತೊಡಗಿದರು. ಅದಕ್ಕಾಗಿ ಇಬ್ಬರು ಕೊಂಬಾರಿನ ಕಡೆಯ ಬಯಲಿಗೆ ಹೋಗುತ್ತಾರೆ. ಅಲ್ಲಿನ ಭೂಮಿಯನ್ನು ವೀಕ್ಷಿಸುತ್ತಾರೆ. ಆ ಸ್ಥಳವನ್ನು ಕಂಡ ಅಚ್ಯುತ ಬಲು ಸುಂದರ ತಾವು, ಬರಿಯ ಕಣ್ಣಿನ ನೋಟಕ್ಕೆ! ನಾಲ್ಕು ಸುತ್ತಲೂ ಎಂಬ ಹಾಗೆ ಅದಕ್ಕೆ ಕಾಡೆ ಮೇರೆ.*"[೫೨] ಹೀಗೆ ನಿಸರ್ಗವು ಇಲ್ಲಿ ಮಾನವನ ಕೃಷಿ ಸಂಸ್ಕೃತಿಯನ್ನು ಹೇಗೆ ಮತ್ತೆ ಮ್ತತೆ ಕಟ್ಟಿಕೊಡುತ್ತದೆ ಎಂಬ ಅರಿವು ಬರುತ್ತದೆ. ಅದಕ್ಕಾಗಿ ಅದು ಮನುಷ್ಯನನ್ನು ಮಳೆ, ಗಾಳಿ, ಬಿಸಿಲಿನ ರೂಪದಲ್ಲಿ ಎಚ್ಚರಿಸುತ್ತದೆ. ಆಗ ಮನುಷ್ಯ ತನ್ನ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುತ್ತಾನೆ. ಹೀಗೆ ನಿಸರ್ಗವು ಮನುಷ್ಯ ಸಂಸ್ಕೃತಿಯೊಂದಿಗೆ ಸಂಬಂಧವಿದೆ ಎಂಬುದನ್ನು ಕಾರಂತರು ಅಚ್ಯುತ ಮತ್ತು ಲಕ್ಷ್ಮಿಯ ಮುಖಾಂತರ ಹೇಳುತ್ತಾರೆ.

ಅಚ್ಯುತ ಬೊಗ್ಗಾಡಿಗೆ ಶಿಕ್ಷಕನಾಗಿ ಆಯ್ಕೆಯಾದನು. ಅಲ್ಲಿ ಮಲೇರಿಯಾ ಆದ್ದರಿಂದ ಅಲ್ಲಿಗೆ ಯಾವ ಉಪಾಧ್ಯಾಯನು ಬರುತಿರಲ್ತಿಲ್ಲ. ಸಾಮಾನ್ಯವಾಗಿ ಮಲೆನಾಡಿನ ಕಾಡುಗಳಲ್ಲಿರುವ ಪುಟ್ಟ ಗ್ರಾಮಗಳಲ್ಲಿ ಜ್ವರದ ಭಾದೆ ಜಾಸ್ತಿ. ಆದ್ದರಿಂದ ಅಲ್ಲಿ ಜನರು ಸಾಹಸವಂತರಾಗಿ ಅದರೊಂದಿಗೆ ಬದುಕು ಕಟ್ಟಿಕೊಳ್ಳುವುದು; ಮನುಷ್ಯನ ಛಲಕ್ಕೆ ಸಾಕ್ಷಿಯಾಗಿದೆ. "ಇವರೆಲ್ಲರು ವ್ಯವಸಾಯದಲ್ಲಿ *ತೊಡಗಿದ್ದರೆ; ಜಾನ್ಸನ್ ಮಾಸ್ತರರಿಗೆ ಶಿಕಾರಿಯ ಹುಚ್ಚು ಶಿಕಾರಿಗಾಗಿ ಕಾಡು-ಮೇಡು ತಿರುಗುತ್ತಾನೆ. ಇದು ಅವನಲ್ಲಿ ಕಾಡಿನ ಸಂಸ್ಕೃತಿಯನ್ನು ನೆನಸುತ್ತದೆ. ಜೂನ್ ಪ್ರಾರಂಭವಾಗಲು ನಾಲ್ಕು ದಿನ ಮುಂಚಿತವಾಗಿಯೇ ಊರಿನಲ್ಲಿ ಬಾನು ಗುಡುಗುಡಿಸಿತು. ಬೇಸಾಯ ತೊಡಗಿ ಹೋಗಿತ್ತು. ಅಚ್ಯುತನ ತಾಯಿ ಬೇಸಾಯ ಪ್ರಾರಂಭಿಸಿದಳು. ಕಡೆ ಬಯಲನ್ನು ಅವರು ಹಿಂದಣ ವರ್ಷದಲ್ಲಿ ಸಾಗು ಮಾಡಿದ್ದರೂ ಯಾವ ಫಲಿತಕ್ಕೂ ಬಾರದೆ ಹೋಗಿತ್ತು. ಅಲ್ಲಿ ಕಾವಲು ನಿಲ್ಲುವವರಿಲ್ಲದೆ-ಬೆಳೆದುದು ಗುಬ್ಬಿ, ಕೋತಿಗಳ ಪಾಲಿಗೆ ಸಂದಿತ್ತು.*"[೫೩] ಇದು ಮನುಷ್ಯನಿಗೆ ನಿಸರ್ಗವು ಕೊಟ್ಟ ಕೊಡುಗೆಗಳಲ್ಲಿ ಒಂದು. ಅಂದರೆ ಬುದ್ದಿವಂತ ಮನುಷ್ಯ ತಾನು ಭೂಮಿಯನ್ನು ಉಳುಮೆ ಮಾಡಿ ಬೆಳೆ ತೆಗೆದು ತನ್ನ ಅವಶ್ಯಕತೆಗೆ ಬಳಸಿಕೊಳ್ಳುತ್ತಾನೆ. ಆದರೆ ನಿಸರ್ಗದಲ್ಲಿ ಇತರ ಪ್ರಾಣಿ, ಪಕ್ಷಿಗಳಿಗೂ ಬದುಕುವ ಹಕ್ಕಿದೆ. ಅದರಂತೆ ಆ ಪ್ರಾಣಿ-ಪಕ್ಷಿಗಳು ಮನುಷ್ಯನು ಬೆಳೆದಂತಹ ಬೆಳೆಯನ್ನು ಅಲ್ಪ ಸ್ವಲ್ಪ ಬಳಸಿಕೊಳ್ಳುತ್ತವೆ. ಇದು ನಿಸರ್ಗದ ಧರ್ಮವಾಗಿದೆ.

---

೫೨. ಶಿವರಾಮ ಕಾರಂತ, ಮುಗಿದ ಯುದ್ಧ, ಪುಟ-೫೪-೫೫
೫೩. ಶಿವರಾಮ ಕಾರಂತ, ನಂಬಿದವರ ನಾಕ ನರಕ, ಪುಟ-೮೯

ಅಚ್ಯುತ ಮಂಗಳೂರಿನಲ್ಲಿ ಇಂಟರ್ ಟ್ರೈನಿಂಗ್‌ಗೆ ಹೋದಾಗ, ಅಲ್ಲಿನ ವಾತಾವರಣ ಅವನ ಮೇಲೆ ಬೀರುವ ಪರಿಣಾಮ ವ್ಯತಿರಿಕ್ತವಾಗಿರುತ್ತದೆ. 'ಫೆಬ್ರವರಿ ಸರಿದು ಮಾರ್ಚಿ ತಿಂಗಳು ಕಾಲಿರಿಸಿತು. ಮೊದಲೇ ಬಿಸಿಯಾಗಿದ್ದ ಊರಿನ ಹವೆ ಮತ್ತಷ್ಟು ಬಿಸಿಯೇರಿತು 'ದಾಹ, ದಾಹ' ವೆಂದದು ಪ್ರತಿ ಗಂಟಲೂ ಕೂಗಿತು. ಊರ ಹೋಟೆಲ್ಗಳನ್ನು ಸೊಳ್ಳೆಗಳು ತಮ್ಮವೆಂದೇ ಹಗಲು ರಾತ್ರಿ ಸಾರತೊಡಗಿದವು. ರಾತ್ರಿ ಮಲಗಿದರೆ ಕಣ್ಣುಮುಚ್ಚುವಂತಿಲ್ಲ! ಸೆಕೆ! ಸೊಳ್ಳೆ! ದಿನಕ್ಕೆರಡಾವರ್ತಿಯಾದರೂ ವೆಂಕಟೇಶನೊಡನೆ ಅಚ್ಚತರಾಯ ಪಟ್ಟಣವಾಸ ಹೇಗೆ ಸ್ವಾಮಿ? ಎನ್ನುತ್ತಿದ್ದ.' ಹೀಗೆ ವಾತಾವರಣದ ವೆತ್ಯಾಸ ಚಲನಶೀಲತೆಗೆ ತಕ್ಕಂತೆ ಹೊಂದಿಕೊಳ್ಳಬೇಕಾಗಿದೆ.

ಅಚ್ಯುತ ಸೀತೆ ಮನೆಗೆ ಹೋದಾಗ ಮೀಯಲು ಹೋಗುತ್ತಾನೆ ಆಗ ಅವನು ನಿಸರ್ಗವನ್ನು ಕಂಡು ಪ್ರಭಾವಿತನಾಗಿವುದನ್ನು ಕಾರಂತರು ಹೇಳುವ ಪರಿ ಹೀಗಿದೆ– "*ಗದ್ದೆಯ ಅಂಚಿನಲ್ಲಿ ನಾಲ್ಕಾರು ಜಾನುವರುಗಳು ಮೇಯುತ್ತಿದ್ದವು; ಹೊಲ ಕತ್ತರಿಸಿ ಬರಿದು ಆಗಿತ್ತು. ಅವುಗಳ ತೀರ ತುದಿಯ ತನಕ ಹೋದ; ಅಲ್ಲಿ ಆ ಕಡು ಬೇಸಿಗೆಯಲ್ಲೂ ನೀರಿನ ಒರತೆಯನ್ನು ನೋಡಿ ಆನಂದವಾಯಿತು*"[೫೪] ನಂತರ, ಸೀತೆಯು ಇದ್ದ ಜಾಗದಲ್ಲಿ ವ್ಯವಸಾಯಕ್ಕೆ ಯೋಗ್ಯ ಸ್ಥಳವನ್ನಾಗಿ ಹೇಗೆ ಮಾಡಿಕೊಳ್ಳಬಹುದೆಂಬುವಾಗಿ ಯೋಚಿಸುತ್ತಾನೆ.

ಕಾರಂತರ ಕಾದಂಬರಿಗಳಲ್ಲಿ ಗೇಣಿ ವಿಚಾರ ಸಾಮಾನ್ಯವಾಗಿ ಬರುತ್ತದೆ. ಈ ಕಾದಂಬರಿಯಲ್ಲಿ ಕೊಂಬಾರಿನ ಕೃಷ್ಣಯ್ಯನವರು ತಮ್ಮ ಭೂಮಿಯನ್ನು ಗೇಣಿಗೆ ಕೊಟ್ಟು; ಅದರ ಮೂಲಕ ಬರುವ ವರಮಾನದಿಂದ ಬದುಕು ಸಾಗಿಸುತ್ತಿರುತ್ತಾರೆ. ಕೃಷ್ಣಯ್ಯನವರ ಭೂಮಿಯನ್ನು ಗೇಣಿಗೆ ಮಾಡುವವರಲ್ಲಿ ಅಣ್ಣುಗೌಡ, ಶೇಷಗೌಡ ಪ್ರಮುಖರು. ಅವರು ಈ ಮೂಲಕ ನಿಸರ್ಗದೊಂದಿಗೆ ಸಂಬಂಧ ಹೊಂದಿರುತ್ತಾರೆ. ಗೇಣಿಯ ವಿಷಯದಲ್ಲಿ ಶೇಷಗೌಡನಿಗೂ ಮತ್ತು ಅಚ್ಯುತನಿಗೂ ಗಲಾಟೆಯಾಗುತ್ತದೆ. ಅಚ್ಯುತ ಶೇಷಗೌಡನನ್ನು ನೀನು ಗೇಣಿಕೊಡುವುದಿಲ್ಲ. ಆದ ಕಾರಣವಾಗಿ ಭೂಮಿಯನ್ನು ಬಿಡಬೇಕು ಎನ್ನುತ್ತಾರೆ. ಆಗ ಶೇಷಗೌಡ, ಈ ಗುಡಿಸಲು, ಇಷ್ಟೆಲ್ಲ ತೆಂಗು, ಹಲಿಸಿನ ಮರಗಳನ್ನು ಬೆಳೆಯಿಸಿದವನೇ ನಾನು. ನನಗೇನಿದೆ ಈಗ ? ನಿಮ್ಮ ಹಿರಿಯರು ಇದ್ದಾಗ ನೀನಿಲ್ಲಿ ಮಾಡು, ಒಂದು ದಿನ ಮೂಲ ಗೇಣಿಗೆ ಈ ಭೂಮಿ ಕೊಡುವುದಾದರೂ ಯಾರ್‍ಯಾರಿಗೋ ಭೋಗ್ಯ ಮಾಡಿಬಿಟ್ಟರು. ಆಯಿತು. ಇಲ್ಲಿನ ನೀರಿನ ಋಣ. ಎಂದು ಹೇಳುತ್ತಾನೆ. ಭೂಮಿಯ ಒಡೆತನಕ್ಕಾಗಿ ಮನುಷ್ಯನು ಮಾಡುವ ಹೋರಾಟದ ಮಾತುಗಳು ಶೇಷಾಗೌಡ ಮತ್ತು ಅಚ್ಯುತನಲ್ಲಿ ಕಾಣಬಹುದು.

ಅಚ್ಯುತ ತನ್ನ ವಿದ್ಯಾರ್ಜನೆಗಾಗಿ ಮಾಡಿದ ಸಾಲ, ಅಂಗಡಿ ಸಾಮಾನುಗಳ ಸಾಲ, ಮದುವೆಯ ಸಾಲ, ಅವುಗಳ ಮೇಲಿನ ಬಡ್ಡಿ, ದಾವೆಯ ವೆಚ್ಚ ಇವೆಲ್ಲ ಸೇರಿ ಐದು ಸಾವಿರದಷ್ಟು

೫೪. ಶಿವರಾಮ ಕಾರಂತ, ನಂಬಿದವರ ನಾಕ ನರಕ, ಪುಟ- ೧೧೦

ಹೆಚ್ಚಾಗಿತ್ತು. ಆದ್ದರಿಂದ ಆತನ ತಾಯಿ ಲಕ್ಷ್ಮಮ್ಮ, ಅಕ್ಕ ಸೀತೆ ಮತ್ತು ಪತ್ನಿ ಮತ್ತು ರುಕ್ಮಿಣಿ ಚಿಂತೆಗೀಡಾಗುತ್ತಾರೆ. ಕೊನೆಗೆ ಉಳಿಸಿಕೊಂಡಿದ್ದ ಅಲ್ಪ ಸ್ವಲ್ಪ ಭೂಮಿಯನ್ನು ಉಳುಮೆ ಮಾಡಿಕೊಳ್ಳುತ್ತಾ, ಸಾಲವನ್ನು ತೀರಿಸಲಾರದೆ ಅಚ್ಯುತ ಜೀವನದ ಯುದ್ಧವನ್ನು ಮುಗಿಸುತ್ತಾನೆ. ಇಲ್ಲಿ ಮುಖ್ಯವಾಗಿ ಸೀತೆ, ಲಕ್ಷ್ಮಮ್ಮ, ಅಚ್ಯುತ, ನಾಗರಾಜು, ಜಾನ್ಸನ್, ಮಾಮಂಜಿ, ಪುಟ್ಟಣ್ಣ, ಗೋಪಾಲ, ಕೃಷ್ಣರಾಯ ಇವರೆಲ್ಲರು ಭೂಮಿಗಾಗಿ ಪರಿತಪಿಸಿದರು ಮತ್ತು ಅದಕ್ಕಾಗಿ ಮತ್ತು ಜೀವನದ ಸಫಲತೆಗಾಗಿ ಹೋರಾಡುತ್ತಾರೆ. ಹೀಗಾಗಿ ಭೂಮಿಯೆಂಬ ನಿಸರ್ಗ ಒಲವು ಮನುಷ್ಯ ಸಂಸ್ಕೃತಿಯ ಮೇಲೆ ವಿವಿಧ ತೆರನಾಗಿ ಸಂಬಂಧವನ್ನು ಹೊಂದಿದೆ. ಇದು ಮನುಷ್ಯನ ಆರ್ಥಿಕ, ಸಾಮಾಜಿಕ, ರಾಜಕೀಯ ಸ್ಥಾನಮಾನಕ್ಕೆ ಪ್ರಮುಖ ಮೂಲವೆಂತಲೂ ಹೇಳಬಹುದಾಗಿದೆ. ಆದ್ದರಿಂದ ಇದನ್ನು ಪಡೆಯಲು ಮನುಷ್ಯ ಹವಣಿಸುವುದು ಸಾಮಾನ್ಯವಾಗಿದೆ.

'ಮೂಕಜ್ಜಿಯ ಕನಸುಗಳು' ಕಾದಂಬರಿಯ ಬಗ್ಗೆ ಕಾರಂತರು ಮುನ್ನುಡಿಯಲ್ಲಿ ಮನೋಜೀವಿಯಾದ ಮಾನವ ಕುಲವು ಈ ಭೂಮಿಯ ಮೇಲೆ ನೆಲೆಸಿದ ಅಲ್ಪಾವಧಿಯಲ್ಲಿ ಅಮಿತ ವಿಶ್ವಗಳಿಂದ ಕೂಡಿರುವ, ಬಿಲಿಯನ್ ಗಟ್ಟಲೆ ವರ್ಷಗಳಿಂದ ಕಾಣಿಸಿಕೊಂಡು ಬಂದ ಜಗತ್ತಿನ ಬರಿಯ ಸೆರಗೊಂಡರ ಸೂಕ್ಷ್ಮ ಎಳೆಯನ್ನು ಕೂಡ ಚೆನ್ನಾಗಿ ಕಂಡಿರಲಾರದು, ಆದರೆ, ಆತ ತನ್ನ ಅಲ್ಪ ಮಾತಿಗೆ ಗೋಚರಿಸಿದ ಅದ್ಭುತ, ಆಶ್ಚರ್ಯಗಳಿಂದ ಚಕಿತಗೊಂಡು–ಈ ಜಗತ್ತೇನು? ಯಾರು ಅದನ್ನು ಸೃಷ್ಟಿಸಿದರು, ಯಾಕೆ, ನಾನು ಎಂಥವ, ಯಾತಕ್ಕಿದ್ದೇನೆ – ಎಂಬ ಪ್ರಶ್ನೆ ಕೆಳ ತೊಡಗಿದೆ. ಬರಿದ ಪ್ರಶ್ನೆ ಕೇಳಿದ ಸಾಲದಲ್ಲ, ತನ್ನ ಎಟುಕಿಗೆ ಸಿಗದಂಥ ವಿಷಯವನ್ನು ಸಿಕ್ಕಿದಂತೆಯೇ ನೆನೆದು, ಮನಸ್ಸನ್ನು ಕಲ್ಪನಾ ಲೋಕಕ್ಕೆ ಹರಿಯಗೊಟ್ಟು, ಅಲ್ಲಿ ಕಂಡ ಕನಸನ್ನು ನಿಜ, ಸತ್ಯ ಎಂದು ಸಾರುತ್ತಲೂ ಬಂದ! ಎನ್ನುತ್ತಾರೆ.

ಈ ಕಲ್ಪನೆ ಮತ್ತು ವಿಸ್ಮಯಕ್ಕೆ ನಿಸರ್ಗವೇ ಕಾರಣವೆನ್ನಬಹುದು. ಈ ನಿಸರ್ಗವಿಲ್ಲದೆ ಪ್ರಾಣಿ ಜಗತ್ತನ್ನು ಊಹಿಸಿಕೊಳ್ಳಲು ಸಾದ್ಯವಿಲ್ಲ. ಅದ್ದರಿಂದ ನಿಸರ್ಗ ಮುಖ್ಯ. ಈ ನಿಸರ್ಗವನ್ನು ಕಂಡೆ ಮನುಷ್ಯ ತನ್ನ ಸಂಸ್ಕೃತಿಯನ್ನು ಬೆಳೆಸಿಕೊಂಡನು. ಇಂತಹ ಸಂಸ್ಕೃತಿಯ ವಿಷಯವಾಗಿ ಮತ್ತು ಈ ಕಾದಂಬರಿಯ ನೆಲೆಯನ್ನು ಕುರಿತು ಕಿ.ರಂ.ನಾಗರಾಜುರವರು *"ಸಂಸ್ಕೃತಿಯನ್ನು ಪ್ರಾದೇಶಿಕ ಸಂದರ್ಭದಲ್ಲಿ ಶೋಧಿಸುವ ಉದ್ದೇಶವನ್ನು ಹೊಂದಿರುವ ಈ ಕಾದಂಬರಿ ಮಾನವಿಕ ವಿಜ್ಞಾನ. ಮನೋ ವಿಜ್ಞಾನಗಳ ಬೆಂಬಲದಿಂದದ ಇತಿಹಾಸದ ಆಂತರ್ಯವನ್ನು ಪ್ರವೇಶಿಸುವ ಪ್ರಯತ್ನವನ್ನು ಮಾಡುತ್ತಲೇ ವರ್ತಮಾನದ ಧಾತುಗಳ ವಿಮರ್ಶೆಗೂ ತೊಡಗುತ್ತದೆ. ಪ್ರಾದೇಶಿಕ ದೇವತೆಗಳನ್ನು ಅದರಲ್ಲಿಯೂ ನಿಸರ್ಗ ದೇವತೆಗಳನ್ನು ಸೃಷ್ಟಿಯ ಮೂಲ ಚೈತನ್ಯವೆಂದು ಒಪ್ಪುವ ಕ್ರಮದಿಂದ ತಿಳಿಯಬಹುದು."*[೫೫]

೫೫. ಟಿ.ಪಿ.ಅಶೋಕ (ಸಂ), ಕಾರಂತ ಮಂಥನ, ಪುಟ – ೩೨೨

ಪ್ರಾದೇಶಿಕವೆಂದರೆ ಅಲ್ಲಿ ವಾಸಿಸುವ ಜನಾಂಗ ಮತ್ತು ಸುತ್ತಲು ಇರುವ ನಿಸರ್ಗವೆನ್ನಬಹುದು. ಇಲ್ಲಿ ಜನಾಂಗ ಮತ್ತು ನಿಸರ್ಗದ ನಡುವೆ ಪೂರಕ ಸಂಬಂಧವಿದೆ. ಈ ಸಂಬಂಧದಿಂದ ಮಾನವನ ಸಂಸ್ಕೃತಿ ಬೆಳೆದಿದೆ. ಈ ಸಂಸ್ಕೃತಿಯ ಮೇಲೆ ನಿಸರ್ಗದ ಗಾಢ ಪ್ರಭಾವವಿದೆ. ಮಾನವ ಈ ಸಂಸ್ಕೃತಿಯನ್ನು ದೇವರ ಮೇಲೆ ಇಟ್ಟಿರುವ ನಂಬಿಕೆ ಮತ್ತು ಆಚರಣೆಗಳ ಮೂಲಕ ವ್ಯಕ್ತಪಡಿಸುತ್ತಾನೆ. ಈ ನಡುವಳಿಕೆ ಮತ್ತು ಆಚರಣೆಗಳಿಗೆ ಸಂಬಂಧಿಸಿದಂತೆ ಈ ಕಾದಂಬರಿಯಲ್ಲಿ ಮೂಕಜ್ಜಿಯ ನಿಸರ್ಗ ಸಂಬಂಧದಲ್ಲಿ ವಿಮರ್ಶೆ ಮಾಡುತ್ತಾಳೆ.

ಮೂಕಜ್ಜಿ ತನ್ನ ಅತೀಂದ್ರಿಯ ಶಕ್ತಿಯಿಂದ ಅವಳ ಕುಟುಂಬದಲ್ಲಿ ಮತ್ತು ಸಮಾಜದಲ್ಲಿ ಒಳ್ಳೆಯ ಸ್ಥಾನವನ್ನು ಗಳಿಸುತ್ತಾಳೆ. ಹತ್ತು ವರ್ಷಕ್ಕೆ ಮದುವೆಯಾಗಿ ಆರು ತಿಂಗಳಲ್ಲೇ ಗಂಡನನ್ನು ಕಳೆದುಕೊಳ್ಳುವ ಮೂಕಾಂಬ, ಆ ನಂತರ ತನ್ನ ತಂದೆಯ ಮನೆ ಸೇರುತ್ತಾಳೆ. ತಂದೆ ಮತ್ತು ಚಿಕ್ಕಪ್ಪ ತೀರಿಕೊಂಡ ನಂತರ, ಚಿಕ್ಕಪ್ಪನ ಮಗನಾದ ಸುಬ್ರಾಯನೊಂದಿಗೆ ಆಕೆ ಆಡುವ ಮಾತುಗಳು ಮತ್ತು ಸುಬ್ರಾಯ ನಿಸರ್ಗವನ್ನು ಕಾಣುವ ಬಗೆ ತುಂಬಾ ಮುಖ್ಯವಾಗಿದೆ.

ಮೂಕಜ್ಜಿ ನಮ್ಮ ಸಂಸ್ಕೃತಿಯಲ್ಲಿರುವ ಆಚಾರ ವಿಚಾರಗಳಾದ ಜಾತಿ, ಧರ್ಮ, ದೇವರ ಅವತಾರಗಳನ್ನು ಒಪ್ಪದೆ ಅವನ್ನಲ್ಲಾ ನಿಸರ್ಗದ ನೆಲೆಯಲ್ಲಿ ಕಂಡು ಪರಿಹಾರ ಸೂಚಿಸುತ್ತಾಳೆ. ಈ ಅಂಶವು ಅಜ್ಜಿಯ ಮೇಲೆ ನಿಸರ್ಗವು ಬೀರಿರುವವ ಪ್ರಭಾವ ಎನ್ನಬಹುದಾಗಿದೆ. ಸೀನಪ್ಪ, ಸುಬ್ರಾಯ, ಸೀತೆ, ತಿಪ್ಪಜ್ಜಿ, ರಾಮಣ್ಣ, ನಾಗಿ, ನಾರಾಯಣಯ್ಯ, ಅನಂತರಾಯ ಮುಂತಾದ ಪಾತ್ರಗಳು ಈ ಕಾದಂಬರಿಯಲ್ಲಿ ಬರುತ್ತವೆ. ಇಲ್ಲಿ ಸುಬ್ರಾಯ ಇತಿಹಾಸವನ್ನು ಓದಿಕೊಂಡಿರುವ ವ್ಯಕ್ತಿ. ಇವನು ಅಜ್ಜಿಯೊಂದಿಗೆ ಸಂವಾದ ನಡೆಸುವ ಸಂದರ್ಭದಲ್ಲಿ ಮನುಷ್ಯ ಸಂಸ್ಕೃತಿಯ ಮೇಲೆ ನಿಸರ್ಗದ ಪ್ರಭಾವ ಮುಖ್ಯವಾಗಿರುತ್ತದೆ.

ಸುಬ್ರಾಯ ತನ್ನ ಊರನ್ನು ಪರಿಚಯಿಸುವ ಪರಿಯಲ್ಲಿ, ನಿಸರ್ಗದ ನೆಲೆಗಳನ್ನು ಗುರುತಿಸಬಹುದು. 'ಇಂದು ನಮ್ಮ ಉರಿಗೆ ಬಂದು ಹೋಗುವ ಜನರು ಕಡಿಮೆ. ಕಾಡುಗುಡ್ಡಗಳ ಸೆರಗದು ಎರಡು ಮೂರು ಹರಿದಾರಿಗಳೊಳಗೆ ಪಶ್ಚಿಮ ಘಟ್ಟದ ನಾಗನಕಾಲು ಬರುತ್ತದೆ. ನಮ್ಮ ಊರಿನ ಒಟ್ಟು ಒಂದು ಮೈಲು ಪಾಸಲೆಯಲಿ ನುರು ಮನೆಗಳು ಇವೆಯೋ ಇಲ್ಲವೋ' ಒಂದು ಊರು, ಒಂದು ನಗರವಾಗಲಿ ಇರಬೇಕಾದರೆ ನಿಸರ್ಗ ಮುಖ್ಯ ಎಂಬುದು ಇದರಿಂದ ತಿಳಿಯುತ್ತದೆ. ಇಂತಹ ನಿಸರ್ಗದ ನಡುವೆ ಮೂಡೂರು ಇದೆ.

ಅಜ್ಜಿ ಮೂಕಾಂಬಿಕೆ ಅಶ್ವತ್ಥ ಮರದ ಕೆಳಗೆ ಕುಳಿತಿರುತ್ತಾಳೆ. ಆಗ ಸುಬ್ರಾಯ ಇಲ್ಲೇಕೆ ಕುಳಿತಿರುವೆ ಎಂದಾಗ ಅಜ್ಜಿ ಅದಕ್ಕೆ 'ಮಾಣಿ, ಇದೂ ನನ್ನ ಹಾಗೆಯೇ ಇಲ್ಲಿಯೇ ಹುಟ್ಟಿ, ಇಲ್ಲಿಯೇ ಬೆಳೆದದ್ದು. ನಾನು ಒಂದು ನಾಲ್ಕು ದಿನ ನನ್ನ ಗಂಡನ ಮನೆಗೆ ಹೋಗಿ ಇದ್ದದ್ದು ಇಲ್ಲಿಯೇ. ಈ

ಅಶ್ವತ್ಥಕ್ಕೂ ಪ್ರಾಯ ಸಂದಿತು. ನನಗೂ ಸಂದಿದೆ. ಅದರ ಮುಂದೆ ನನ್ನ ಪ್ರಾಯ ಭಾರೀ ಅಲ್ಲ ಅದಕ್ಕೆ ಸಾವಿರವೋ, ಹತ್ತು ಸಾವಿರವೋ,' ಈ ಅಜ್ಜಿಯ ದೂರದೃಷ್ಟಿಯ ಸ್ವರೂಪವನ್ನು ಕಾರಂತರು ಆಶ್ಚರ್ಯಪಡುವಂತೆ ಚಿತ್ರಿಸುತ್ತಾರೆ. ಮುಕಾಂಬಿಕೆ ತ್ರಿಕಾಲ ಜ್ಞಾನವನ್ನು ತಿಳಿದಂತೆ ಎಲ್ಲಾ ನಿಖರವಾಗಿ ಉತ್ತರಿಸುತ್ತಾಳೆ. ಅಶ್ವತ್ಥವೃಕ್ಷ ಅನೇಕ ತಲೆಮಾರುಗಳನ್ನು ಕಂಡಿದೆ. ಇಲ್ಲಿ ಜನರು ಅದರ ನೆರಳಲ್ಲಿ ಕುಳಿತು ಹರಟುತ್ತಾರೆ. ಇಂತಹ ಹರಟುಗಾರರನ್ನು ಈ ಮರ ರಕ್ಷಿಸುತ್ತದೆ. ಅಂದರೆ ಈ ಮರವು ಮನುಷ್ಯನ ಚಲನಶೀಲತೆಯಲ್ಲಿ ತನ್ನದೆ ಆದ ಸ್ಥಾನವನ್ನು ಪಡೆದುಕೊಂಡಿದೆ. ಪ್ರಾಚೀನ ಕಾಲದ ಆದಿಮಾನವ ಮರದ ಪೊಟರೆಗಳಲ್ಲಿ ವಾಸ ಮಾಡುತ್ತಿದ್ದ ಎಂಬುದು ತಿಳಿದಿರುವ ಸಂಗತಿ. ಆದಿ ಮಾನವನಿಂದ ಮೊದಲ್ಗೊಂಡು ಆಧುನಿಕ ಮಾನವನವರೆಗೂ, ಅವನು ನಿಸರ್ಗದೊಂದಿಗೆ ಹೊಂದಿರುವ ಸಾಂಸ್ಕೃತಿಕ ಸಂಬಂಧವಾಗಿದೆ. ಅಂತಹ ಮರಗಳನ್ನು ಅಶ್ವತ್ಥಕಟ್ಟೆ ಎಂದು ಕರೆದು ವಿಶೇಷವಾಗಿ ಹಿಂದುಧರ್ಮದ ಪದ್ಧತಿಯಲ್ಲಿ ಪೂಜಿಸುವುದು ರೂಢಿ. ಅದರ ಮೂಲಕ ದೈವಿಕ ಸ್ವರೂಪವನ್ನು ಕಾಣುತ್ತಾರೆ. ಈ ಸಂಗತಿ ನಿಸರ್ಗ ಮತ್ತು ಮಾನವ ಸಂಬಂಧವನ್ನು ಹೇಳುತ್ತದೆ.

ಈ ವಿಷಯಕ್ಕೆ ಸಂಬಂಧಿಸಿದಂತೆ ಮೂಕಜ್ಜಿ ಸುಬ್ರಾಯನಿಗೆ ಹೇಳುವ ಮಾತುಗಳಲ್ಲಿ ಮಾನವನ ಇತಿಹಾಸ ತಿಳಿಯುತ್ತದೆ. ಮಗೂ, ಇದು ಅಶ್ವತ್ಥದ ಮರ, ಅಂತಿಂಥ ಮರವಲ್ಲ ಈ ಮರ ನಿನ್ನೆ ಮೊನ್ನೆಯದಲ್ಲ. ಇದರ ಸುತ್ತ ಕಾಣಿಸುತ್ತಿರುವುದು ಹೊಸ ಬೇರು. ಹಳೆಯ ದಿಂಡು ಎಲ್ಲೋ ಏನೋ ಬೆಳೆದಿದೆ ಇಲ್ಲೇ. ನನ್ನ ಅಂದಾಜು–ಅದಕ್ಕೆ ಐನೂರರ ಮೇಲೆ ಆಗಿರಬಹುದು ವರ್ಷ. ಅದಕ್ಕಿಂತ ಮೂಡೂರು ಊರು ಹಿಂದಿನಿಂದಲೂ ಈ ಮರ ಇಲ್ಲಿಯೇ ಇದ್ದಿತು ಎಂದು ನನ್ನ ಯೋಚನೆ ಎಂದು ಹೇಳುತ್ತಾರೆ. ಕಾರಂತರು, ಮೂಕಜ್ಜಿಯ ಮೂಲಕ ನಮ್ಮ ಸಾಂಸ್ಕೃತಿಕ ಪಲ್ಲಟಗಳನ್ನು ಗುರ್ತಿಸುತ್ತಾರೆ. ಈ ಕುರಿತು ಕೆ.ವಿ.ನಾರಾಯಣವರು–ಒಟ್ಟಾರೆ ಜೀವನ ಕ್ರಮದ ಆಶಯಗಳು ಭೂತಕಾಲದ ನಿರ್ದೇಶನಗಳನ್ನು ಪಡೆದಿವೆ ಎಂಬುದನ್ನು ಕಾರಂತರು 'ಮೂಕಜ್ಜಿಯ ಕನಸುಗಳು' ಕಾದಂಬರಿಯಲ್ಲಿ ಮಂಡಿಸಲು ಯತ್ನಿಸಿದ್ದಾರೆ. ಆ ಕಾದಂಬರಿಯಲ್ಲಿ ವರ್ತಮಾನವನ್ನು ಶತಮಾನಗಳ ಭೂತ ಕಾಲದೊಡನೆ ಕೊಂಡಿಹಾಕಿ ನೋಡಲಾಗಿದೆ. ಇನ್ನು ಒಂದು ಮುಖ್ಯ ಅಂಶ ಅಲ್ಲಿದೆ. ಸಾಮಾನ್ಯವಾಗಿ ನಿಸರ್ಗ ಜೀವನದ ಆಶಯಗಳಿಗೆ ರೂಪಗಳನ್ನು ಹೊತ್ತು ಬರುತ್ತಿದ್ದುದು ಈ ಕಾದಂಬರಿಯಲ್ಲಿ ತಾನೇ ಆ ಆಶಯಗಳನ್ನು ಅಡಗಿಸಿಟ್ಟುಕೊಂಡಂತೆ ಚಿತ್ರಿಸಲಾಗಿದೆ ಎಂದಿದ್ದಾರೆ.

ಮೂಕಜ್ಜಿಯೂ ಸುಬ್ರಾಯನಿಗೆ ನಮ್ಮ ಪಡೂರುಗಿಂತ ಸ್ವಲ್ಪ ದೂರದಲ್ಲಿ ಇಕ್ಕೇಲಗಳಿಗಿಂತ ದೊಡ್ಡದು ಊರು ಇತ್ತು ಎಂದು ಹೇಳುತ್ತಾರೆ. ಅದನ್ನು ಹುಡುಕಿದ ಸುಬ್ರಾಯ, ಅಲ್ಲಿ ಕನಿಷ್ಠ ಮೂರು ದೇವರ ಹಾಳು ಗುಡಿಗಳಿವೆ. ಆಚೀಗಿನ ಕಾಡು ಗುಡ್ಡೆಗಳಲ್ಲಿ, ಮರಗಳಲ್ಲಿ ಕಣ್ಮರೆಯಾದ ಪಾಯುಗಳು ನೂರಾರು. ಅಂಥ ದೊಡ್ಡ ದೇವಾಲಯಗಳು ಯಾವುದು ಇಲ್ಲ ಎಂದು ಹೇಳುತ್ತಾ, ಅಲ್ಲಲ್ಲಿ ಒಟ್ಟಾರೆ ಮುನ್ನೂರು ಮನೆಗಳು ಮತ್ತು ಒಂದು ಮೂರು ಸಾವಿರದಷ್ಟು ಜನವಾದರೂ

ಇರಬೇಕು. ಆದರೆ ಈಗ ಇಲ್ಲ ಎನ್ನುತ್ತಾನೆ. ಆಗ ನಿಸರ್ಗದೊಂದಿಗೆ ಮನುಷ್ಯನು ಹೊಂದಿರುವ ಚಲನಶೀಲತೆಯ ಸಾಂಸ್ಕೃತಿಕ ಸಂಬಂಧವನ್ನು ಕುರಿತು ಪ್ರಸ್ತಾಪಿಸುತ್ತಾಳೆ.

'ಈ ಊರೇನು, ನಾನೇನು, ನೀನೇನು? ಏಳುವುದು, ಬೀಳುವುದು, ಕೆಲಸ, ನಡುವೆ ಇರುವ ನಾಲ್ಕು ದಿನ ಬಾಳುವುದು, ನಾಯಿಗಳ ಹಾಗೆ ಬಳುವಟ್ಟೆ ತಿರುಗಾಡಿಕೊಂಡು ಇರುವುದು, ಮತ್ತೊಂದು ದಿವಸ ಇಲ್ಲಿಂದ ಹೊರಡುವುದು ಎನ್ನುವಳು.' ಅಂದರೆ ನಿಸರ್ಗದ ಪರಿಣಾಮಗಳಿಂದ ಮನುಷ್ಯನಿಗೆ ಕನಸುಗಳು ಮೂಡುತ್ತವೆ. ಈ ಕನಸುಗಳನ್ನು ಅಂತ್ಯ ಮಾಡಿ ನಮ್ಮನ್ನು ತನ್ನಲ್ಲಿಗೆ ಸೆಳೆದುಕೊಳ್ಳುವುದು ನಿಸರ್ಗವೆ ಆಗಿದೆ. ಆದ್ದರಿಂದ ಪ್ರಕೃತಿಯ ಈ ಆಟದಲ್ಲಿ ಮಾನವ ನೆಪ ಮಾತ್ರ. ಇದನ್ನು ಅಜ್ಜಿ 'ಆ ಬಸರೀ ಕಟ್ಟೆಯಲ್ಲಿ ಹುಟ್ಟಿ ಬೂದಿಕಟ್ಟೆಯಲ್ಲಿ ಮುಗಿಯುವ ಮೊದಲು, ನಾವು ಓಡಾಡಿಕೊಂಡಿರುವ ಕಟ್ಟೆ ಬಾಳಿನ ಕಟ್ಟೆಯಲ್ಲವೇ? ಮೂರೂರು ಅಂದರೆ ಅದೇ ಈ ಜಗತ್ತೆಲ್ಲ ಮೂರುರೆ' ಎನ್ನುತ್ತಾಳೆ. ಸುಬ್ರಾಯ ತನ್ನ ಎಳೆಯ ಮನಸ್ಸಿನಲ್ಲಿ ಇದರ ಬಗ್ಗೆ ಆಲೋಚಿಸುತ್ತಾನೆ. ಅದು–'ಅಶ್ವತ್ಥ ವೃಕ್ಷ ಚಿಂತನಷ್ಟೇ! ಬಾಳು ಹಾಗೆ ಚಿರಂತನವಲ್ಲ. ಬುಡವಿದೆ, ಕೊನೆಯಿದೆ, ಈ ವೃಕ್ಷ ಚಿರಂತನ ಎಂಬ ಭಾವನೆಯಿಂದ ಅವರು ಅದನ್ನು ಮೆಚ್ಚಿ ಅದರ ನೆರಳಿನಲ್ಲಿ ಹೆಚ್ಚಿನ ಹೊತ್ತನ್ನು ಕಳೆಯುತ್ತಿರಬೇಕು' ಎಂಬುದನ್ನು ಸುಬ್ರಾಯ ಮತ್ತು ಅಜ್ಜಿಯ ಮಾತುಗಳಲ್ಲಿ ಗುರ್ತಿಸಬಹುದು. ಇದಕ್ಕೆ ಕಾರಣ ನಿಸರ್ಗವ ಕುರಿತು ಮನುಷ್ಯನಿಗಿರುವ ಕುತೂಹಲವು ಪ್ರಮುಖ ಕಾರಣವಾಗಿದೆ. ಈ ಕುರಿತು ಮೂಕಜ್ಜಿಯು 'ಅದರ ಬದಲು ನಾವಿರುವುದು ಸೃಷ್ಠಿಯ ಚಂದ ನೋಡಲಿಕ್ಕಾಗಿಯೇ; ಅವನೇ ಹುಟ್ಟಿಸಿದ ಸೃಷ್ಠಿಯಿದು.' ಎನ್ನುತ್ತಾಳೆ. ನಿಸರ್ಗದ ಪ್ರೇರಣೆಯಿಂದ ಮನುಷ್ಯನು ತನ್ನ ಸಂಸ್ಕೃತಿಯನ್ನು ರೂಪಿಸಿಕೊಂಡು ಸುಖವಾಗಿ ಬದುಕುತ್ತಿದ್ದಾನೆ. ಮನುಷ್ಯನ ಈ ಸಂಬಂದವು ಶಾಶ್ವತವಾಗಿರಬೇಕಾದರೆ, ಅವನ ಸಂಬಂಧವು ಆರೋಗ್ಯ ಪೂರ್ಣವಾಗಿರಬೇಕು. ಇದನ್ನು ಅರಿತಿರುವ ಕಾರಂತರು ಮೂಕಜ್ಜಿಯ ಮೂಲಕ ವಿಶ್ಲೇಷಿಸುತ್ತಾರೆ.

ಸುಬ್ರಾಯ ಮತ್ತು ಈತನ ಸ್ನೇಹಿತ ಜನಾರ್ಧನರು ಹಿಂಡುಗಾನದ ಬಳಿಯಿರುವ ಬೆಟ್ಟದ ಕಾಡಿನಲ್ಲಿ 'ನಾಗನಕಾಲು' ಎಂಬ ಸ್ಥಳದಲ್ಲಿ ಋಷಿಗಳು ಗುಹೆಯಲ್ಲಿ ತಪಸ್ಸು ಮಾಡುತ್ತಿದ್ದ ಮತ್ತು ವಾಸದ ಬಗೆಯನ್ನು ತಿಳಿಯಲು ಹೋಗುತ್ತಾರೆ.

ಅಣ್ಣುನಾಯ್ಕನು ಕಾಡಿನಲ್ಲಿ ಸುಬ್ರಾಯ ಮತ್ತು ಜನಾರ್ಧನನ್ನು ಕರೆದೊಯ್ಯುವ ರೀತಿ, ಸುಬ್ರಾಯನಿಗೆ ಆಶ್ಚರ್ಯ ಮೂಡುತ್ತದೆ. ಅದನ್ನು 'ಅಣ್ಣು ಕಣ್ಣಿಗೆ ಇದಿರಾದ ಗಿಡಗಳ ಅಡರುಗಳನ್ನು ಸವರಿ, ಮೈ ಬಗ್ಗಿಸಿ, ನುಗ್ಗಿ ನುಸುಳಿ ಸರಪರ ಹೋದರೆ ಹಿಂದಕ್ಕೆ ನಾವು ಹೋಗುತ್ತಿದ್ದೆವು. ಅವನ ಚುರುಕು ನಮಗೆ ಬರಲಾರದು.' ಎನ್ನುತ್ತಾನೆ. ಆದಿವಾಸಿಗಳಿಗೆ ಕಾಡಿನ ಬಗ್ಗೆ ಇರುವ ಜ್ಞಾನ ಮತ್ತು ಅದರೊಂದಿಗಿನ ಹೋರಾಟದ ಬದುಕನ್ನು ಕಾರಂತರು ಈ ಮೂಲಕ ಹೇಳುತ್ತಾರೆ. ಕಾಡು

ನಿಸರ್ಗದ ಒಂದು ಭಾಗ. ಈ ಕಾಡಿನ ಪ್ರಭಾವೇ ಆದಿವಾಸಿಗಳ ಸಂಸ್ಕೃತಿ ರೂಪಗೊಳ್ಳಲು ಪ್ರಮುಖ ಕಾರಣ. ಈ ಕಾಡಿನ ಸಂಬಂಧದಿಂದ ಅವರು ಬೇಟೆ, ಗೆಡ್ಡಗೆಣಸು ಸಂಗ್ರಹಣೆ ಹಾಗೂ ಮನೆ ನಿರ್ಮಾಣದ ಶೈಲಿಗಳಲ್ಲಿ ಆಧುನಿಕ ಮಾನವನಿಂದ ಪ್ರತ್ಯೇಕತೆಯನ್ನು ಕಾಯ್ದುಕೊಂಡಿದ್ದಾರೆ. ಇದು ಆ ವಾತಾವರಣದ ಪ್ರಭಾವವಾಗಿದೆ. ಈ ರೀತಿ ನಿಸರ್ಗದೊಂದಿಗೆ ಮಾನವ ಸಂಸ್ಕೃತಿಯು ಪ್ರಾದೇಶಿಕವಾಗಿ ವಿವಿಧ ತರನಾದ ಸಂಬಂಧಾತರಗಳನ್ನು ಇಟ್ಟುಕೊಂಡಿದೆ. ಆ ಸಂಬಂಧ ಪೂರಕವಾಗಿರಬೇಕು. ಇಲ್ಲವೆ ಅವನ ವಿನಾಶಕ್ಕೆ ಅವನೇ ಕಾರಣನಾಗುತ್ತಾನೆ. ಕಾರಣ ಮನುಷ್ಯ ನಿಸರ್ಗದ ಶಿಶು; ಆದರೆ ನಿಸರ್ಗ ಮನುಷ್ಯನ ಶಿಶುವಲ್ಲ!. ಈ ಅಂಶಗಳನ್ನು ಕಾರಂತರು ತಮ್ಮ ಎಲ್ಲಾ ಕಾದಂಬರಿಗಳಲ್ಲಿ ನಿಸರ್ಗ ಮತ್ತು ಮಾನವ ಸಂಬಂಧಗಳ ಮೂಲಕ ಹೇಳುತ್ತಾರೆ.

ನಿಸರ್ಗವು ಮನುಷ್ಯ ಜನಾಂಗ ಹುಟ್ಟಿಕೊಂಡ ಪ್ರಾರಂಭದಿಂದಲೂ ಮತ್ತು ಇಂದಿನವರೆಗೂ ಸಹ, ಮನುಷ್ಯನಲ್ಲಿ ಕುತೂಹಲ ಮೂಡಿಸುತ್ತಲೆ ಇದೆ. ಈ ಕುತೂಹಲವೇ ಸಂಶೋಧನೆಗೆ ಕಾರಣವಾಗಿದೆ. ಇಂತಹ ನಿಸರ್ಗವು ತಮ್ಮ ಭವ್ಯತೆಯ ಮುಖಾಂತರ ಮನುಷ್ಯನಲ್ಲಿ ಭಯವನ್ನು ಹುಟ್ಟುಹಾಕುವುದರ ಮೂಲಕ ಅವನಲ್ಲಿ ವಿವಿಧ ತೆರನಾದ ಸಾಂಸ್ಕೃತಿಕ ಬೆಳವಣಿಗೆಗೆ ಕಾರಣವಾಗಿದೆ. ಈ ಅಂಶಗಳನ್ನು ಸುಬ್ರಾಯ ಮತ್ತು ಜನ್ನ ಕಾಡಿನಲ್ಲಿ ಅನುಭವಿಸಿದ ಅನುಭವಗಳ ಮೂಲಕ ಕಂಡುಕೊಳ್ಳಬಹುದು. ಸುಬ್ರಾಯನು ಈ ಕುರಿತು ಹೇಳುತ್ತಾನೆ. 'ಅಂತ, ಹಳ್ಳದ ಬುಡಕ್ಕೆ ಬಂದೆವು. ಅಲ್ಲಿ ಒಂದಿಷ್ಟು ತಟ್ಟಾದ ನೆಲವಿದ್ದುದು ಕಾಣಿಸಿತು. ಮರಳು ಮತ್ತು ನಂಜು ನೀರು ತುಂಬಿದ ಒಂದು ಬಗೆಯ ಜವುಗಿತ್ತು. ಅದರ ಸುತ್ತಲೂ ಕೇದಗೆ ಮತ್ತು ಬೆತ್ತದ ಹಿಂಡುಗಳು ನಮಗೆ ಕಾಲೂರುವುದಕ್ಕೆ ಭಯ, ಹೂತು ಹೋದರೆ! ನೀರು ಹರಿದು ತಾವು ಗಟ್ಟಿಯಾಗಿದ್ದುದು ಕಂಡ ಮೇಲೆ, ನಾಲ್ಕು ಹೆಜ್ಜೆ ಮುಂದೆ ಇಟ್ಟೆವು. ಎಷ್ಟು ತಂಪಿನ ಹವೆ ಅಲ್ಲಿ! ಬಿಸಿಲಿನ ಚೂರಿಲ್ಲ. ಆಚೀಚಿನ ಮರಗಳ ಬೇರುಗಳು ಆನೆಯ ಸೊಂಡಿಲಿನ ಹಾಗೆ ಅಲ್ಲಿನ ತಮ್ಮ ಮೂತಿಯನ್ನೂರಿದ್ದವು. ಅದೊಂದು ಬೇರೆಯೇ ಲೋಕವಾಗಿ ಕಾಣಿಸಿತು.' ಈ ರೀತಿಯ ಸಾಹಸಕ್ಕೆ ಮತ್ತು ಕುತೂಹಲಕ್ಕೆ ನಿಸರ್ಗವು ಮನುಷ್ಯನಲ್ಲಿ ಹುಟ್ಟುಹಾಕಿರುವ ಕುತೂಹಲವೇ ಕಾರಣ. ಈ ಕುತೂಹಲದಿಂದಲೇ ಮನುಷ್ಯನು ನಿಸರ್ಗದೊಂದಿಗೆ ಹೊಂದಿರುವ ಸಾಂಸ್ಕೃತಿಕ ಸಂಬಂಧವನ್ನು ಪ್ರತಿಬಿಂಬಿಸುತ್ತದೆ.

ಅಣ್ಣುನಾಯ್ಕ, ಸುಬ್ರಾಯ ಮತ್ತು ಜನ್ನರು ಕಾಡಿನಲ್ಲಿ ಮುಂದುವರೆಯುತ್ತಾ, ಒಂದು ಗುಹೆಯನ್ನು ಕಂಡರು: ಆ ಗುಹೆಯನ್ನು ಪ್ರವೇಶಿಸಿ ಅಲ್ಲಿನ ಕುರುಹುಗಳನ್ನು ಕಾಣುತ್ತಾರೆ. ಅಲ್ಲಿನ ವಾತಾವರಣವನ್ನು ಕುರಿತು ಸುಬ್ರಾಯನು ಆ 'ಗುಹೆ ದೊಡ್ಡದಾಗಿದ್ದರೂ ಅದರೊಳಗೆ ಕಲ್ಲು, ಮಣ್ಣು ಹರಪಿ ಬಿದ್ದಿತ್ತು. ಒಂದೆಡೆ ಎರಡು ಅಡಿ ದಪ್ಪಕ್ಕೆ ಬೂದಿಯ ರಾಶಿ ಆರಪಿ ಬಿದ್ದಿತ್ತು. ಅದನ್ನು

ಮೆಟ್ಟಿಕೊಂಡು ಗುಹೆಯನ್ನು ನೋಡ ತೊಡಗಿದವು. ಸಾಕಷ್ಟು ಒಳಗಿನ ತನಕ ಮೇಲಣ ಬಂಡೆಯ ಮೊಡು ಚಾಚಿದ್ದರಿಂದ ಆ ತಾವಿನಲ್ಲಿ ನೂರಾರು ಮಂದಿ ಕುಳಿತಿರುವಷ್ಟು ಜಾಗ ಕಾಣಿಸಿತು, ತೀರಾ ಹಿಂದೆ ಮತ್ತೊಂದು ಕಿರಿಯ ಪೊಟೆಯಿದೆ. ಅಂಥ ಪೊಟರೆ ಹೇಗೆ ಉಂಟಾಯಿತು? ಇಲ್ಲೆಲ್ಲೊ ಮೊದಲು ಕಲ್ಲು, ಮಣ್ಣು ತುಂಬಿ ಕೊಂಡಿತೇ? ಕಾಲಾಂತರದಲ್ಲಿ ಮಳೆ ನೀರು ಜಿನಿಗಿ ಅವನ್ನೆಲ್ಲ ಹೊರಗೆ ಸಾಗಿಸಿತೇ.... ಜನರು ಅಲ್ಲಿ ವಾಸವಾಗಿದ್ದ ಕುರುಹು ಅಷ್ಟು ದೊಡ್ಡದಾದ ಬೂದಿಯ ರಾಶಿಯಿಂದಲೇ ಸ್ಪಷ್ಟವಾಗುತ್ತಿತ್ತು.' ಎನ್ನುತ್ತಾನೆ. ಸುಬ್ರಾಯನು ಸಂಶೋಧನೆ ಮಾಡಿದ ಗುಹೆಯಲ್ಲಿ ಮಾನವ ವಾಸಿಸುತ್ತಿದ್ದ ಎಂಬ ಕುರುಹುಸಿಕ್ಕಿದ ಮೇಲೆ, ನಮಗೆ ಅರಿವಾಗುದೇನೆಂದರೆ, ಶಿಲಾಯುಗದ ಮಾನವ ಮಳೆ, ಗಾಳಿ, ಬಿಸಿಲು ಇವುಗಳಿಂದ ರಕ್ಷಣೆ ಪಡೆಯಲು ಈ ಗುಹೆಗಳನ್ನು ತನ್ನ ವಾಸಕ್ಕಾಗಿ ಆಯ್ಕೆ ಮಾಡಿಕೊಂಡಿರುವುದು ತಿಳಿಯುತ್ತದೆ. ಇನ್ನು ಚಕಮಕಿ ಕಲ್ಲುಗಳಿಂದ ಬೆಂಕಿ, ಆ ಬೆಂಕಿಯಿಂದ ತಾವು ಬೇಟೆಯಾಡಿದ ಕಾಡು ಪ್ರಾಣಿಗಳ ಮಾಂಸವನ್ನು ಬೇಯಿಸಿಕೊಂಡಿರುವುದು ಅರಿವಿಗೆ ಬರುತ್ತದೆ.

ನಿಸರ್ಗದ ಪ್ರೇರಣೆಯಿಂದ ಈ ಪ್ರಕ್ರಿಯೆಗಳು ನಡೆದಿವೆ. ನಿಸರ್ಗವನ್ನು ಆದಿಮಾನವ ಕಂಡ ರೀತಿಯಿಂದ ಅವನ ಸಂಸ್ಕೃತಿ ಬೆಳೆಯಿತು. ಮಾನವ ಪ್ರಕೃತಿಯ ಶಿಶುವಾಗಿ ತನ್ನ ನಾಗರೀಕತೆಯನ್ನು ರೂಢಿಸಿಕೊಂಡು ಬದುಕುತ್ತಿದ್ದಾನೆ. ಕಾರಂತರು ಮೂಕಜ್ಜಿಯ ಮೂಲಕ ಮಾನವ ಸಂಸ್ಕೃತಿ ಯೊಂದಿಗಿನ ನಿಸರ್ಗದ ಸಂಬಂಧವನ್ನು ಹೇಳುತ್ತಾರೆ. ಕಾಡು ಹೊರಗಿನ ಜಗತ್ತಿನ ಭಯವನ್ನು ಉಂಟುಮಾಡಿ, ವಿಸ್ಮಯ ಮೂಡಿಸಿದರೆ: ಅದೇ ಕಾಡು ಆದಿವಾಸಿಗಳಲ್ಲಿ ಧೈರ್ಯ ಉತ್ಸಾಹವನ್ನು ಉಂಟು ಮಾಡಿ: ಅವರಲ್ಲಿ ಅದರ ಬಗ್ಗೆ ಆಧ್ಯಾತ್ಮಿಕ ಭಾವನೆಯನ್ನು ಮೂಡುಸುತ್ತದೆ. ಏಕೆಂದರೆ ಕಾಡೇ ಅವರ ನೆಲೆ, ಕಾಡೇ ಅವರ ಜೀವನದ ಉಸಿರು. ಕಾಡಿನಲ್ಲಿ ಸಿಗುವ ಗಡ್ಡೆ-ಗೆಣಸು ಔಷಧಿಯ ಬೇರುಗಳು, ಜೇನು ಮುಂತಾದ ಉತ್ಪನ್ನಗಳಿಂದ ಅವರ ಸಹಜ ಜೀವನ ನಡೆಯುತ್ತದೆ. ಆದರೆ ಅವರ ಸಂಸ್ಕೃತಿ ಮತ್ತು ಜೀವನದ ನಡವಳಿಕೆಯ ಮೇಲೆ ಆಧುನಿಕ ಸಂಸ್ಕೃತಿ ನಿರಂತರವಾಗಿ ದಾಳಿ ಮಾಡುತ್ತಿದೆ. ಇದರಿಂದ ತಮ್ಮ ಅಮೂಲ್ಯ ಸಂಸ್ಕೃತಿ ಹಾಳಾಗುವ ಮುನ್ಸೂಚನೆಯನ್ನು ಅರಿತ ಅವರು ಅದರ ವಿರುದ್ಧ ಹೋರಾಟಕ್ಕೆ ಇಳಿಯುತ್ತಿರುವುದು ಪ್ರಸ್ತುತ ಕಂಡು ಬರುತ್ತಿದೆ. ಆದ್ದರಿಂದ ನಾಗರಿಕ ಸರ್ಕಾರಗಳು ಆದಿವಾಸಿಗಳ ಹಕ್ಕು ಮತ್ತು ಅವರ ಕಾಡಿನ ಸಂಸ್ಕೃತಿಯನ್ನು ಸಂರಕ್ಷಿಸ-ಬೇಕಾಗಿದೆ.

ಮೂಕಜ್ಜಿ ಶಿವಲಿಂಗದ ಬಗ್ಗೆ ಮಾತನಾಡುತ್ತಾಳೆ. ಶಿವಲಿಂಗ ದೇವರೇ ಅಲ್ಲ, ಅದು ಯೋನಿ ಮತ್ತು ಲಿಂಗವಾಗಿದೆ. ಆದರಿಂದಲೇ ತಾನೇ ನಾವೆಲ್ಲ ಹುಟ್ಟಿರುವುದು. ಈಗಿನ ಪ್ರಾಣಿ, ಪಕ್ಷಿ ಹುಟ್ಟಿರುವುದು, ಹೆಣ್ಣು-ಗಂಡು ಕೂಡಿಯೆ ತಾನೇ? ಅದರಲ್ಲೇನು ಮನುಷ್ಯನು ಸ್ವಾಭಾವಿಕ

ಎಂದುಕೊಳ್ಳಲಿಲ್ಲ? ಎಂದು ಪ್ರಶ್ನೆ ಮಾಡುತ್ತಾಳೆ. ಆದ್ದರಿಂದ ಮನುಷ್ಯನು ಅದನ್ನು ಲಿಂಗವಾಗಿ ಪೂಜಿಸಿ ಶಿವನು ಎನ್ನುವುದು ಸರಿಯಲ್ಲ ಎನ್ನುತ್ತಾಳೆ. ನಾನು ಎಂದೂ ನನ್ನನ್ನು ಕಾಪಾಡು ಎನ್ನುವವಳಲ್ಲ ಎಂದು ಹೇಳುತ್ತಾಳೆ. ಹಾಗೆಯೇ 'ನೀರು, ನೆಲ, ಬೆಂಕಿ, ಬಾನುಗಳನ್ನು ಕೊಟ್ಟವನ ಹತ್ತಿರ, ಜೀವನವನ್ನೇ ಕೊಟ್ಟವರ ಹತ್ತಿರ, ಯಾವತ್ತು ಅದನ್ನು ಕೊಡು: ಇದನ್ನು ಕೊಡು ಎಂದು ಬೇಡಿದರೆ ನಮಗೆ ಬುದ್ಧಿ ಉಂಟು-ಎಂದ ಹಾಗಾಯಿತೆ? ಎನ್ನುತ್ತಾಳೆ.' ಮೂಕಜ್ಜಿಯು ಹೇಳುವ ಈ ನಿಸರ್ಗ ಸಂಬಂಧದ ಅಂಶವು ಸಹಜ ಸತ್ಯವಾಗಿದೆ. ಮನುಷ್ಯನು ನಿಸರ್ಗವನ್ನು ಕಂಡು ಅದರಲ್ಲೂ ವಿಸ್ಮಯದಿಂದ ತನ್ನ ಜೀವನವನ್ನು ರೂಪಿಸಿಕೊಂಡ ಸಂದರ್ಭದಲ್ಲಿ ಅದಕ್ಕೆ ಸಂಬಂಧಿಸಿದಂತೆ ವಿಗ್ರಹ ಆರಾಧನೆಗೆ ತೊಡಗಿದನು. ಇಂತಹ ಕುರುಹುಗಳು ಸಿಂಧೂ ಬಯಲಿನ ನಾಗರೀಕತೆಯಲ್ಲಿ ಕಂಡುಬರುತ್ತದೆಂದು ಇತಿಹಾಸಕಾರರು ಹೇಳುತ್ತಾರೆ. ಇದಕ್ಕೆ ನಿಸರ್ಗ ಪ್ರೇರಣೆ ಎನ್ನಲು ಯಾವುದೇ ರೀತಿಯ ಅಡ್ಡಿಯಿಲ್ಲ. ಇದರಿಂದಲೇ ಅವನ ಸಂಸ್ಕೃತಿ ಹುಟ್ಟುಕೊಂಡಿತು ಹಾಗೂ ಆಚಾರ ವಿಚಾರಗಳಲ್ಲಿ ಬದಲಾವಣೆಗೆ ಒಳಪಟ್ಟಿತು. ಇದನ್ನು ಮೂಕಜ್ಜಿಯು ದೇವರ ರೂಪದಲ್ಲಿ ಪೂಜಿಸಬೇಡಿ. ಅದರ ಬದಲು ನೈಜ ಪ್ರಕೃತಿಯನ್ನು ಪೂಜಿಸುವುದು ಮುಖ್ಯ ಎನ್ನುತ್ತಾಳೆ. ಅಲ್ಲದೆ ನೈಜ ಜೀವನವನ್ನು ರೂಢಿಸಿಕೊಳ್ಳಬೇಕು ಎನ್ನುತ್ತಾಳೆ. ಈ ಪ್ರಕಾರವಾಗಿ ಕಾರಂತರು ಮನುಷ್ಯ ಜೀವನದೊಂದಿಗೆ ನಿಸರ್ಗ ಸಂಬಂಧವನ್ನು ಹೇಳುತ್ತಾರೆ. ಇಂತಹ ದೇವರು, ಅವರ ಅವತಾರಗಳ ಕಲ್ಪನೆ ಇವುಗಳ ಬಗ್ಗೆ ಮೂಕಜ್ಜಿಯು ತನ್ನ ಮೊಮ್ಮಗನಿಗೆ ಸಹಜವಾಗಿ ವಿಮರ್ಶಾ ದೃಷ್ಟಿಯಿಂದ ಕಾದಂಬರಿಯ ಉದ್ದಕ್ಕೂ ಹೇಳುತ್ತಾಳೆ.

ಮೂಕಜ್ಜಿಯ ನಿಸರ್ಗ ಪ್ರೇಮ ಕುರಿತು ಲೇಖಕ ಡಿ.ಎ. ಶಂಕರ್ ರವರು-'ಮೂಕಜ್ಜಿ ಮನುಷ್ಯನ ಬದುಕು, ಮನುಷ್ಯ ಬದುಕಿನ ಜೊತೆಗೆ ಇರುವ ಸಸ್ಯ ಲೋಕ, ಪ್ರಾಣಿ ಲೋಕಗಳಿಗೂ ಹಿತವನ್ನು ಕೋರುವವಳು: ಆದರ್ಶ ಪರಿಸರ ತಜ್ಞೆ ಆಕೆ. ಆಕೆಯ ದೇವರು-ನಿಸರ್ಗ ಶಕ್ತಿಯಾದ ಅಮ್ಮ.' 'ಅಮ್ಮ ಹಳೆಯವಳು, ಅವಳೆ ಎಲ್ಲಕ್ಕಿಂತ ಮೊದಲಿನವಳು, ಅವಳಿಗೆ ಯಾವ ಕಾಲಕ್ಕೂ ಮಾರ್ಯಾದೆ ಉಂಟು' ಈ ನಿಸರ್ಗದ ಮಾಯೆಯ ಒಡತಿ ಅವಳಾದ್ದರಿಂದಲೇ ಅಜ್ಜಿಗೆ 'ಹೆಣ್ಣು-ಗಂಡಿನ ಮೋಹ ಅವರವರು ಮಾಡಿಕೊಂಡದ್ದಕ್ಕಿಂತಲೂ ಹೆಚ್ಚಾಗಿ ಸೃಷ್ಟಿಯೇ ಜೀವಿಗಳೊಳಗೆ ತುಂಬಿಸಿಟ್ಟ ಪ್ರೇರಣೆ,' ಅನ್ನಿಸುತ್ತದೆ. ಆದ್ದರಿಂದಲೇ 'ಹೆರುವುದು ಅಸಹ್ಯವಲ್ಲ: ಇರುವುದು ಅಸಹ್ಯವಲ್ಲ, ಸಾಯುವುದೂ ಅಲ್ಲ, ಹುಟ್ಟಿಸುವುದು ಅಸಹ್ಯವೇ?' ಎಂದು ಕೇಳುತ್ತಾಳೆ.

ಆದ್ದರಿಂದಲೆ ಕಾರಂತರು ನಿಸರ್ಗದ ಎಲ್ಲಾ ನಿಯಮಗಳನ್ನು ಮೂಕಜ್ಜಿಯ ಮೂಲಕ ಹೇಳುತ್ತಾರೆ. ಈ ಮೂಲಕ ಕುತೂಹಲ ಮೂಡಿಸುತ್ತಾರೆ.

ಮಂಜುನಾಥ ತನ್ನ ದೊಡ್ಡಸ್ತಿಕೆ ತೋರಿಸುವುದಕ್ಕಾಗಿ ಒಂಡಗಾಲಮ್ಮ ದೇವರ ಜಾತ್ರೆಯನ್ನು ವಿಜ್ರಂಭಣೆಯಿಂದ ಮಾಡಿಸಿದನು. ಜನರು ಭಕ್ತಿಯಿಂದ ಬೇರೆ ಬೇರೆ ಊರುಗಳಿಂದ ಬಂದರು. ಅದರ ನಂತರ ಮೂಕಜ್ಜಿಯನ್ನು ಮಂಜುನಾಥ ನೋಡಲು ಬಂದಾಗ, ಅಜ್ಜಿ ಅಶ್ವತ್ಥ ಕಟ್ಟೆಯಲ್ಲಿ ಕುಳಿತಿದ್ದಳು. ಆಗ ಕ್ಷಣಮಾತ್ರದಲ್ಲಿ 'ಬಿರುಗಾಳಿ ಬೀಸತೊಡಗಿತು. ತೋಟದ ಅಡಿಕೆಯ ಮರಗಳಿಗೆ ದರ್ಶವನೇ ಬಂದಿತು. ಮಾಡಿನ ಹುಲ್ಲು, ಚಪ್ಪರದ ಮಡಲುಗಳು ಅಚೀಚೆ ಹಾರಾಡ ತೊಡಗಿದವು. ಮನೆಯ ಕಿಟಕಿ, ಬಾಗಿಲುಗಳು ಬಡಿದಾಡ ತೊಡಗಿದವು.' ಆಗ ಸುಬ್ರಾಯ ಅಜ್ಜಿಯನ್ನು ಮನೆಗೆ ಕರೆದುಕೊಂಡು ಬರುತ್ತಾನೆ. ಇದು ನಿಸರ್ಗದ ಚಲನಶೀಲತೆಯ ಪರಿಣಾಮ. ಇದರಿಂದ ಸುಬ್ರಾಯನ ತೋಟದ ಹೊರಸಾಲಿನ ಎರೆಂಟು ಅಡಿಕೆಮರಗಳು ಮುರಿದು ಬಿದ್ದವು. ಅದೇ ರೀತಿ ಮಂಜುನಾಥನು ಉತ್ಸಾಹಕ್ಕಾಗಿ ಹಾಕಿದ್ದ ಚಪ್ಪರ ಗುರಿಯಾಯಿತು. ಈ ಸ್ಥಿತಿಯಿಂದ ಸುಬ್ರಾಯನು ತನ್ನ ಶ್ರಮವನ್ನು ತೋಟಕ್ಕಾಗಿ ತೊಡಗಿಸಿಕೊಳ್ಳಬೇಕಾಗುತ್ತದೆ. ಅವನು 'ಇರುವ ಸಣ್ಣ ತೋಟದಲ್ಲೂ ಮುರಿದುಬಿದ್ದ ಕಂಗು, ಬಾಳೆಗಳನ್ನು ಸವರಿ, ಚೊಕ್ಕಟ ಮಾಡುವ ಕೆಲಸವಾಯಿತು.' ಹೀಗೆ ನಿಸರ್ಗವು ಮನುಷ್ಯನ ಧಾರ್ಮಿಕ, ಸಾಮಾಜಿಕ ಮತ್ತು ಆರ್ಥಿಕ ನೆಲೆಗಳ ಮೇಲೆ ಪ್ರಭಾವ ಬೀರುತ್ತದೆ. ಇಂತಹ ಸಂಬಂಧವನ್ನು ಕಾರಂತರು ಪಾತ್ರಗಳ ಮೂಲಕ ಸತ್ಯ ಸಂದೇಶವನ್ನು ನೀಡುತ್ತಾರೆ. ನಿಸರ್ಗದ ಪರಿಣಾಮಗಳನ್ನು ಮನುಷ್ಯ ಎದುರಿಸಬೇಕಾಗಿದೆ, ಅದರ ನಿಗೂಢತೆಯನ್ನು ಅರಿತು ಅದಕ್ಕೆ ಪೂರಕವಾಗಿ ವರ್ತಿಸಿದಾಗ ನಿಸರ್ಗ ನಮಗೆ ಒಲಿಯುತ್ತದೆ; ಇಲ್ಲವೆ ಮಾರಿಯಾಗುತ್ತದೆ ಎಂಬ ಎಚ್ಚರಿಕೆಯನ್ನು ಕಾರಂತರು ನೀಡುತ್ತಾರೆ. ಇದನ್ನೆ ಮೂಕಜ್ಜಿ ಮಂಜುನಾಥನ ಕುರಿತು 'ಮಳೆರಾಯ ಅವನ ಅಹಂಕಾರಕ್ಕೆ ತಕ್ಕ ಮುದ್ದನ್ನರೆದ' ಎನ್ನುತ್ತಾಳೆ. ಇದರರ್ಥ ಮನುಷ್ಯನಿಗೆ ನಿಸರ್ಗಕ್ಕೆ ಸಂಬಂಧಪಟ್ಟಂತೆ ತಾತ್ಸಾರ ಮತ್ತು ಅಹಂಕಾರ ಇರಬಾರದು. ಇದು ಹೆಚ್ಚಾದಾಗ ನಿಸರ್ಗವು ಮನುಷ್ಯನ ಮೂಲ ಸಂಸ್ಕೃತಿಯನ್ನು ಹಾಳು ಮಾಡುತ್ತದೆ ಎಂಬ ಆಶಯ ಇಲ್ಲಿದೆ.

ಸುಬ್ರಾಯನ ಕೃಷಿ ಚಟುವಟಿಕೆ ಮತ್ತು ಸಂಶೋಧನೆಗೆ ಮಳೆ ಅಡ್ಡಿಯಾಗುತ್ತದೆ. ಈ ಕುರಿತು ಅವನು ಚಿಂತಿಸುತ್ತಾನೆ. 'ತಿಂಗಳುಗಳಲ್ಲೂ ವಿಘ್ನವೇ. ಮಳೆ ಮೇಲಿಂದ ಮೇಲೆ ಬರತೊಡಗಿತು. ಆಳುಗಳನ್ನು ಮುಸಲಾಯಿಸಿ ಊರಿನ ಆ ನಾಗನ ಸವರಿಸುವ ಬದಲು ಮನೆಯ ಹೊಲಗದ್ದೆಗಳ ಹೂಟಿ, ಬಿತ್ತನೆ, ಮತ್ತೊಂದು ಎಂದು ಮನೆ ಬೇಸಾಯವನ್ನು ಕುರಿತು ಗರಬಡಿದಂತೆ ಬಡಿಯಿತು. ಮತ್ತೊಂದು ತಿಂಗಳು ಹೇಳದೆ ಕೇಳದೆ ಸುರಿಯಿತು. ಆದರೆ ಆ ಬಿಡುವು ಪ್ರಯೋಜನದ್ದಲ್ಲ. ಬಾವಿ ಅಗೆಯಿಸುವುದುಕ್ಕಂತು ಆಗದ ಸಮಯ. ಯಾರೂ ಕಾಣದಂತೆ ಊರಿನ ಕಲ್ಲು ಮಂಟಪದ ಬಳಿಗೆ ಹೋಗಿ, ಅಲ್ಲಿ ಹೂಳಿಟ್ಟ ನಾಣ್ಯಗಳೇನಾದರೂ ಇವೆಯೋ- ಎಂಬ ಚಪಲವನ್ನು ಸಹ

ತೀರಿಸಿಕೊಳ್ಳಲಾರದ ವ್ಯರ್ಥ ಕಾಲಾವಾಗಿತ್ತು.' ಇದು ನಿಸರ್ಗದ ಚಲನಶೀಲತೆಯಿಂದ ಮನುಷ್ಯ ಸಂಸ್ಕೃತಿಯೊಂದಿಗೆ ಹೊಂದಿರುವ ಹಲವು ಬಗೆಯ ಸಂಬಂಧಗಳಲ್ಲಿ ಒಂದಾಗಿದೆ. ಈ ಮಳೆ, ಗಾಳಿ, ಬಿಸಿಲು ನಿಸರ್ಗದ ಭಾಗಗಳು, ಇವು ನಿಸರ್ಗಕ್ಕೆ ಅರ್ಥವಿಲ್ಲ. ಆದ್ದರಿಂದ ಅವುಗಳಲ್ಲಿ ಒಂದಾದ ಮಳೆಯು ಇಡೀ ಭೂಮಂಡಲಕ್ಕೆ ಜೀವಧಾರೆಯಾಗಿದೆ. ಈ ಕಾರಣದಿಂದಲೆ ಪ್ರಸ್ತುತ ಮಾನವ ಭೂಮಿಯನ್ನು ಬಿಟ್ಟು ಬೇರೆ ಗ್ರಹಗಳಲ್ಲಿ ನೀರಿನ ಸಂಪತ್ತು ಇರಬಹುದೇ ಎಂದು ಹುಡುಕಲು ಚಂದ್ರ, ಮಂಗಳ, ಶನಿ ಗ್ರಹಗಳಿಗೆ ಲಗ್ಗೆ ಇಟ್ಟಿದ್ದಾನೆ. ಇದನ್ನು ಅರಿತಾಗ ಮಳೆ ಮತ್ತು ನೀರಿನ ಪ್ರಾಮುಖ್ಯತೆಯ ಅರಿವು ನಮಗೆ ಆಗುತ್ತದೆ. ಸುಬ್ರಾಯನಾಗಿರಬಹುದು, ಜನಾರ್ಧನ ಇರಬಹುದು ಅಥವಾ ಈ ಕಾದಂಬರಿಯಲ್ಲಿ ಬರುವ ಎಲ್ಲಾ ಪಾತ್ರಗಳು ನಿಸರ್ಗವನ್ನು ಅವಲಂಬಿಸಿವೆ ಎಂದು ಕಾರಂತರು ಹೇಳುತ್ತಾರೆ. ಈ ಸಂಸ್ಕೃತಿಯಿಂದಲೇ ಮನುಷ್ಯನ ಜೀವನ ಕ್ರಮಬದ್ಧವಾಗಿ ನಡೆಯುತ್ತಿದೆ. ಇಂತಹ ಸಂಸ್ಕೃತಿಯ ಮೇಲೆ ನಿಸರ್ಗದ ಸಂಬಂಧವು ಅನುಕ್ಷಣವೂ ಇರುವುದು ತಿಳಿಯುತ್ತದೆ. ಆದ್ದರಿಂದ ನಿಸರ್ಗಕ್ಕೆ ತಕ್ಕಂತೆ ನಮ್ಮ ಜೀವನವನ್ನು ರೂಢಿಸಿಕೊಳ್ಳಬೇಕು. ಇದರಿಂದ ನಮ್ಮ ಮುಂದಿನ ಪೀಳಿಗೆಯ ಶ್ರೇಯಸ್ಸಿಗೆ ನಾವು ಕ್ರಮಬದ್ಧವಾದ ಅಡಿಪಾಯ ಹಾಕಿದ ಇತಿಹಾಸ ನಮ್ಮದಾಗುತ್ತದೆ. ಆ ಮೂಲಕ ನಮ್ಮ ಭವ್ಯ ಕನಸನ್ನು ನನಸು ಮಾಡಿಕೊಂಡಂತಾಗುತ್ತದೆ. ಈ ನನಸಿಗಾಗಿ ನಾವು ಇಂದಿನಿಂದ ನಿಸರ್ಗಕ್ಕೆ ಪೂರಕವಾದ ಕ್ರಿಯೆಯಲ್ಲಿ ಕ್ರಿಯಾಶೀಲರಾಗ-ಬೇಕಾಗಿದೆ.

'ಮೈಮನಗಳ ಸುಳಿಯಲಿ' ಮನುಷ್ಯನ ಮನಸ್ಸು ಮತ್ತು ದೇಹಗಳ ನಡುವಿನ ಅಂತರವನ್ನು ಹೇಳುತ್ತದೆ. ಈ ಕಾದಂಬರಿಯಲ್ಲಿ ಮುನ್ನಡಿಯಲ್ಲಿ ಕಾರಂತರು ಗಂಡು ಹೆಣ್ಣುಗಳ ಮೈಮನಗಳ ಸಂಬಂಧದ ಚೆಲುವು, ಅಸಹ್ಯಗಳನ್ನು–ಇಲ್ಲಿ ಮಂಜುಳೆಯೆಂಬ ಒಬ್ಬಳು ಗರತಿಯಲ್ಲದವಳ ಬಾಳಿನ ಮುಖದಿಂದ ಚಿತ್ರಿಸಲು ಪ್ರಯತ್ನಿಸಿದ್ದೇನೆ, ವಿಷಯ ದೇಹ ಚರ್ಯೆಗೆ ಸಂಬಂಧಿಸಿದಾಗ ಓದುಗರ ಕುತೂಹಲ ಸ್ವಾಭಾವಿಕವಾಗಿಯೇ ಕೆರಳುತ್ತದೆ ನಿಸರ್ಗದತ್ತ ಪ್ರೇರಣೆಯನ್ನು ಸಾವಿರದಲ್ಲಿ ಒಬ್ಬ ಕಳಚಿಕೊಂಡು ಸುಖಿಯಾಗಿರಬಲ್ಲನೋ ಏನೋ! ಆತ ಸುಖಿಯಾದನು–ಎಂದೂ ನನಗೆ ಇಂದು ಅನಿಸುತ್ತಲಿಲ್ಲ. ಆ ಮಟ್ಟಿಗೆ ಮನುಷ್ಯನೂ ಒಬ್ಬ ಪ್ರಾಣಿಯೇ ಅವನಲ್ಲಿರುವ ಹೆಣ್ಣು, ಗಂಡು ಪ್ರವೃತ್ತಿಗಳು, ಪರಂಪರೆಯನ್ನು ಮುಂದುವರಿಸುವ ನಿಸರ್ಗದ ಇಚ್ಚೆಗೆ ಇದು ಸೇರಿದ್ದು, ಅದರ ಒತ್ತಡವನ್ನು ಅಳೆಯುವುದು ಕಠಿಣ ಅದನ್ನು ಹೀಯಾಳಿಸುವವರಿಗೂ ನಿಲುಕದ ಶಕ್ತಿ ಅದರದು ಎನ್ನುತ್ತಾರೆ.

ಕಾರಂತರು ಹೇಳುವ ಪ್ರಕಾರ ನಿಸರ್ಗ ಮೂಲವಾದ ಹೆಣ್ಣು ಮತ್ತು ಗಂಡಿನ ಆಕರ್ಷಣೆಯು ಮಾನಸಿಕವಾದದ್ದು. ಇದು ಅವರೇ ಹೇಳುವಂತೆ ನಿಗೂಢ. ಇಂತಹ ನಿಗೂಢತೆಯು ನೈಸರ್ಗಿಕ ಆಯಾಮವನ್ನು ಹೊಂದಿದೆ. ಭೂಗೋಳದಲ್ಲಿ ಚಿಕ್ಕಸೂಕ್ಷ್ಮ ಜೀವಿಯಿಂದ

ಹಿಡಿದು ದೊಡ್ಡ ತಿಮಿಂಗಿಲದ ವರೆಗೆ ಇದು ಸಾಮಾನ್ಯ ಸಂಗತಿ. ಇದರಲ್ಲಿ ಪ್ರಮುಖವಾಗಿರುವುದು ಲೈಂಗಿಕತೆ. ಈ ಲೈಂಗಿಕತೆಯೆನ್ನುವುದು ದೈಹಿಕ ಮತ್ತು ಮಾನಸಿಕ ನೆಲೆಯನ್ನು ಒಳಗೊಂಡಿದೆ ಇದಕ್ಕೆ ಪ್ರೇರಣೆ ನಿಸರ್ಗದ ವಾತಾವರಣ. ಈ ವಾತಾವರಣದಿಂದ ಹೆಣ್ಣು ಗಂಡಿನ ಸಮಾಗಮ. ಈ ಸಮಾಗಮದಿಂದಲೇ ಸೃಷ್ಠಿಯೆನ್ನುವುದು ಸರ್ವಸತ್ಯ. ಆದರೆ ಈ ಲೈಂಗಿಕತೆ ಎಂಬುದು ಪ್ರತಿಯೊಬ್ಬ ರಲ್ಲಿ ಸೂಪ್ತವಾಗಿ ಅಡಗಿ ಕುಳಿತಿರುವ ಮಾನಸಿಕ ಸಂವೇದನೆಗೆ ಸಂಬಂಧಿಸಿದ ಅಂಶವಾಗಿದೆ. ಇಂತಹ ಸಂವೇದನೆಯ ನೆಲೆಗಳನ್ನು ಮನುಷ್ಯ ಸ್ವಾವಲಂಬನೆಗೆ ಬಳಸಿಕೊಳ್ಳಬಹುದು ಮತ್ತು ಆರ್ಥಿಕತೆಯಿಂದ ಸುಖ ಜೀವನ ನಡೆಸುವುದು ಮುಖ್ಯವಾಗಿದೆ.

ಈ ಸುಖ ಜೀವನಕ್ಕಾಗಿ ಅವರು ನಿರ್ಸದ ಮೂಲವಾದ ಭೂಮಿಯನ್ನು ಅವಲಂಬಿಸಿ-ದ್ದಾರೆ. ಕಾರಂತರು ಹೇಳುವ ಬಸರೂರಿನ ವೇಶ್ಯಯರಿಗೆ ಮತ್ತು ಆ ಊರಿಗೆ ತುಂಬಾ ಇತಿಹಾಸವಿದೆ. ಅಲ್ಲದೇ ಆಗಿನ ಸಮಯದಲ್ಲಿ ಈ ವೇಶ್ಯೆಯರಿಗೆ ತುಂಬಾ ಗೌರವವು ಇತ್ತು. ಆದರೆ ಕಾಲ ಬದಲಾದಂತೆ ಇವರ ಸಾಮಾಜಿಕ ಬೆಲೆಯು ಕಡಿಮೆಯಾಗಿ, ಅವರು ಕಾಲ ಕಳೆದಂತೆ ಕೇವಲ ದೇಹವನ್ನು ಮಾರಿಕೊಳ್ಳುವಂತರು ಎಂಬ ಅಪಮಾನಕ್ಕೆ ಒಳಗಾದರು ಎನ್ನುತ್ತಾರೆ. ಆದರೆ ಬಸೂರೂರಿನ ನಿತ್ಯ ಸುಮಂಗಲೆಯರು ಇನ್ನೊಬ್ಬರ ಸಂತೋಷಕ್ಕಾಗಿ ಮತ್ತು ತಾವು ವೈಭೋಗ ಜೀವನ ಸಾಧಿಸುವುದಕ್ಕಾಗಿ ಸಾಮಾಜಿಕವಾಗಿ ಮಾನ್ಯತೆ ಪಡೆದಿದ್ದ ವೇಶ್ಯೆಯರಾಗಿದ್ದರು.

ಈ ಪಾತ್ರಗಳು ಮೂರು ತಲೆಮಾರುಗಳನ್ನು ಒಳಗೊಂಡಿದೆ. ಮಂಜುಳೆ, ಇವಳ ಮಗಳು ಶಾರಿ, ಶಾರಿಯ ಮಗಳಾದ ಚಂದ್ರಿ ಪ್ರಮುಖರು. ಇವರು ಸಾಮಾಜಿಕವಾಗಿ ಹೊಂದಿದ್ದ ಸ್ಥಾನಮಾನ ಮತ್ತು ಮೈ ಮನಗಳ ನಡುವಿನ ಅಂತರ, ಈ ಅಂತರದಿಂದ ಗಳಿಸಬಹುದಾದ ಗೌರವ ಜೀವನ ವಸ್ತುಗಳ ಜಿಜ್ಞಾಸೆ ಈ ಕಾದಂಬರಿಯಲ್ಲಿ ವ್ಯಕ್ತವಾಗಿದೆ. ಆದರೆ ಕಾರಂತರು ಇದರ ನಡುವೆ ನಿಸರ್ಗದ ನೆಲೆಗಳಲ್ಲಿ ಒಂದಾದ ಭೂಮಿಯ ಹಕ್ಕಿಗಾಗಿ ಪರಿತಪಿಸುವ ಪಾತ್ರಾಗಳನ್ನು ಮತ್ತು ಸಂಬಂಧಗಳನ್ನು ಹೇಳುತ್ತಾರೆ. ಅದೇ ರೀತಿ ಬಸರೂರಿನ ವೇಶ್ಯಯರಾದ ಮಂಜುಳೆ ಮತ್ತು ಈ ಭೂಮಿಯ ಪ್ರಾಮುಖ್ಯತೆಯ ಅರಿವು ಇರುತ್ತದೆ.

ಆದ್ದರಿಂದ ಮಂಜುಳೆಯು ಆ ದಾರಿಯಲ್ಲಿ ಸಾಗಿದರು ಸಹ: ನಿಷ್ಠವಂತ ಗಣಿಕೆ. ಅವಳು ತನ್ನ ಮೈಮನಗಳ ತೃಪ್ತಿಗಾಗಿ ಹಂಬಲಿಸುತ್ತಾಳೆ. ಆದರೆ ಅವಳ ಮೊಮ್ಮಗಳಾದ ಚಂದ್ರಿ ವಿದ್ಯಾವಂತಳು. ಅವಳು ತನ್ನ ವಂಶಸ್ಥರು ಮಾಡುತ್ತಿದ್ದ ವೃತ್ತಿಗೆ ಹೇಸಿಗೆ ಪಟ್ಟು ಯಾವುದಾದರೂ ಉದ್ಯೋಗಕ್ಕೆ ಹಂಬಲಿಸುವ ನೆಲೆಯಲ್ಲಿ ಸಾಂಸ್ಕೃತಿಕ ಪಲ್ಲಟವನ್ನು ಗುರ್ತಿಸಬಹುದು. ಇವಳ ತಾಯಿ

ಶಾರಿ: ವೇಶ್ಯೆಯಾಗಿ ಅವಳು ದೊಡ್ಡಮ್ಮ ಮಂಜುಳೆಯಂತೆ ಇರದೆ ತನಗೆ ಇದ್ದ ಆಸ್ತಿಯನ್ನು ಕಳೆದುಕೊಂಡು ತನ್ನ ತಪ್ಪನ್ನು ಗ್ರಹಿಸುವುದು ಮುಖ್ಯವಾಗಿದೆ.

ಈ ಹಿನ್ನೆಲೆಯಲ್ಲಿ ಇವರೆಲ್ಲರ ಸಂಸ್ಕೃತಿಯೊಂದಿಗೆ ನಿಸರ್ಗದ ಸಂಬಂಧದೊಂದಿಗೆ ಗುರ್ತಿಸಿರುವುದು ಪ್ರಮುಖವಾಗುತ್ತದೆ. 'ಒಂದೊಂದು ಊರಿಗೆ ಒಂದೊಂದು ಹೆಸರು ಇದ್ದೇ ಇರುತ್ತದೆ. ಆ ಹೆಸರು ನುಡಿಯಲ್ಲಿರುವುದೇ ಹೆಚ್ಚಿಗೆ. ಅಂಥ ನಾಡುನುಡಿ ಕೊಟ್ಟ ಬಸರೂರನ್ನು ಅವಸರದ ನಾಲಿಗೆಗಳು ಬಸ್ರೂರನ್ನಾಗಿ ಮಾಡಿವೆ. ರಸಿಕರು, ಕಾವ್ಯ ಪ್ರಿಯರು, ಪುರಾಣ ಪ್ರಿಯರು ಅದನ್ನು ಮೆಚ್ಚಲಾರರು. ಆದುದರಿಂದ ಹಳೆಯ ಶಾಸನಗಳಲ್ಲಿ 'ವಸಪುರ' ಎಂಬ ಅಭಿಧಾನ ಕಾಣಿಸುತ್ತದೆ. ನದಿ ದಂಡೆಯ ಈ ಪಟ್ಟಣದ ಬಹುಭಾಗ ಸಮತಟ್ಟಾದ ನೆಲ. ಅಲ್ಲಿ ಕೆಲವು ಶತಮಾನಗಳಿಂದಲಾದರೂ ಜನವಸತಿ ಬೆಳದು ಬಂದಿರಬೇಕು. ಬಾರಕೂರಿನಂತಯೇ ಅಲ್ಲಿಯೂ ಹಲವಾರು ಕೇರಿಗಳಿವೆ; ಕೆರೆಗಳಿವೆ! ಗುಡಿಗಳಿವೆ, ಹಿಂದೊಂದು ಕಾಲದಲ್ಲಿ ಜೈನರು ಅಲ್ಲಿ ಆಳಿ, ಮೆರೆದ ಕುರುಹಾಗಿ ಮಾನಸ್ತಂಭಗಳೂ ಇವೆ. ಊರಿನ ಮಾನ, ಆ ಸ್ತಂಭಗಳ ಮಟ್ಟಿಗೆ ಉಳಿದುಕೊಂಡಿದೆಯೆಂಬುದು ನಿರ್ವಿವಾದ. ಇಂದಿನ ಜನತೆಗೆ ಹಿಂದಿನ ಜೈನ ಸಂಪ್ರಾದಾಯದ ಮಾನಸ್ತಂ ಬರಿಯ ದೀಪದ ಕುಂಭವಾಗಿ ಕಾಣಿಸಿದರೆ ಆಶ್ಚರ್ಯವೇನಿಲ್ಲ ಎಂದು ಹೇಳುತ್ತಾ; ಕಾರಂತರು ಆ ಊರಿನ ಸುತ್ತಲಿನ ಪರಿಸರವನ್ನು ಹೇಳುತ್ತಾರೆ. ಆ 'ಊರು ಸಾಕಷ್ಟು ಜನ ಭರಿತವಾದದ್ದು' ನೂರಾರು ಹಿತ್ತಿಲು, ಮನೆಗಳಿಂದ ತುಂಬಿದ್ದು; ತೆಂಗು, ಕಂಗು, ಹಲಸು, ಮಾವು ಎಂದು ನೆಟ್ಟ ಜನ–ಅವನ್ನು ತುಂಬಾ ಹಸುರಾಗಿಯೇ ಇರಿಸಿದ್ದಾರೆ. ಚೆಲುವಿಗಾಗಿ ಅದನ್ನು ನೆಟ್ಟದಲ್ಲ ಉಪಯೋಗಕ್ಕಾಗಿ ನೆಟ್ಟ ಆ ಗಿಡ ಮರಗಳು ತಮ್ಮ ಸಹಜ ಗುಣದಿಂದ ಚೆಲುವನ್ನು ಬೀರಿದ್ದರೆ ಯಾರೇನು ಆಕ್ಷೇಪ ಮಾಡುವಂತಿಲ್ಲ.

ತೆಂಗಿನ ಮರಗಳನ್ನು–ತಾಂಬೂಲ ಸೇವನೆಗೆ; ತೆಂಗು ನಿತ್ಯವಿಹಾರಕ್ಕೆ, ಕಂಗಿನ ಸಿಂಗಾರದ ಹೂವು ಅಲಂಕಾರಕ್ಕೆ; ಮುಡಿವುದಕ್ಕೆ; ನಾಗ, ದುರ್ಗಿಯರ ಆರಾದನೆಗೆ ತೆಂಗು ಬೇಕಲ್ಲ; ಪೂಜೆಗೆ ಪುರಸ್ಕರಕ್ಕೆ ೧೧೧ ಹೀಗೆ ಕಾರಂತರು ಬಸರೂರಿನ ಸಂಸ್ಕೃತಿಯ ಮೇಲೆ ನಿಸರ್ಗದ ಸಂಬಂಧವನ್ನು ದೀರ್ಘವಾಗಿ ಹೇಳುತ್ತಾರೆ. ಅಂದರೆ ತೆಂಗು, ಕೂಂಗು, ಹಲಸು, ಮಾವು, ಹೂವುಗಳನ್ನು ಆ ಊರಿನವರು ಬೆಳೆಸಿದ್ದು, ನಿಸರ್ಗದ ಮೇಲೆ ಅವರಿಗಿರುವ ಸೌಂದರ್ಯನುಭವ ಮತ್ತು ಅನುಭಾವಿಕ ನೆಲೆಯು ತಿಳಿಯುತ್ತದೆ. ಈ ನಿಸರ್ಗದಿಂದಲೆ ಅವರ ಸಂಪತ್ತು ಪೆಚ್ಚಿದೆ ಎನ್ನುತ್ತಾರೆ. ಈ ಪಟ್ಟಣ ಮಗ್ಗುಲಲ್ಲಿ ವರಾಹಿ ನಡುವೆ ಹರಿದು ಕೋಢಪುರವನ್ನು ಬಳಸಿ ಹಾಲಾಡಿ ಹೊಳೆಯೆನಿಸಿ ನೇರ ಪಶ್ಚಿಮಕ್ಕೆ ಹೊರಟು ನದಿ, ಗಂಗೊಳ್ಳಿಯಲ್ಲಿ ಕಡಲನು ಪ್ರವೇಶಿಸುತ್ತದೆ. ಅಲ್ಲಿ ಇನ್ನೂ ಸಂದರ್ಭದಲ್ಲಿ ಕಾಲ ಸರಿದಂತೆ ನಿಸರ್ಗದ ಚಲನಶೀಲತೆಯಿಂದ ನದಿ ಪಾತ್ರದಲ್ಲಿ ಮರಳು ತುಂಬಿ ಹಡಗುಗಳ

ಅಲ್ಲಿಯವರೆಗೆ ಹೋಗಲಾರವು. ಅಂದು ವಿದೇಶಿ ಸಂಸ್ಕೃತಿಗೂ ದೇಶಿಯ ಸಂಸ್ಕೃತಿಗೆ ಕೊಂಡಿಯಂತೆ ಇದ್ದೂ ವ್ಯಾಪಾರ ಮುಂತಾದ ಕಾರ್ಯಗಳಿಗೆ ಸಮತಟ್ಟಾದ ಜಾಗ ಈಗ ಮಾಯವಾಗಿದೆ. ಇದು ನಿಸರ್ಗವೂ ಮನುಷ್ಯ ಸಂಸ್ಕೃತಿಯೊಂದಿಗೆ ಹೊಂದಿರುವ ಸಂಬಂಧದ ವಿವಿಧ ನೆಲೆಗಳಲ್ಲಿ ಹೊಂದಾಗಿದೆ.

ನದಿಯ ಆಚೆಗೆ ಒಂದು ಪುಟ್ಟ ದ್ವೀಪವಿದೆ. ಊರವರ ಬಾಯಲ್ಲಿ ಹೇರಿ ಕುದುರು. ಅದರ ಆಚೆಗೂ ಇತರ ಕುದುರುಗಳ ಅಡಚಿ ಹಾಸಿವೆ. ಅವುಗಳ ಎಡೆಯಿಂದ ನದಿಯೊಂದು ಅನಾದಿ ಕಾಲದಿಂದಲೂ ಹರಿಯುತ್ತಾ ಬಂದಿದೆ. ಬಸರೂರು ನದಿ ತಟಾಕದ ಚೆಲುವನ್ನು ಮೀರಿಸುವ ಶೋಭೆ ಈ ಕುದುರುಗಳಿಗಿವೆ. ಅದು ಕೂಡ ಹಲವು ತೆಂಗಿನ ಮರಗಳ ತೋಪುಗಳಿಂದ ಕೂಡಿದ್ದು ವಿಲಾಸವೇ!.

ಇದಕ್ಕೆ ಪ್ರತಿಯಾದ ನಗರ ಪೂರ್ವ ಭಾಗದ್ದು ಆಗ್ನೇಯ ಭಾಗದ್ದು. ಬಸರೂರಿನ ತೆಂಕಣ, ಪಡುವಣಗಳಲ್ಲಿ ಸಮತಟ್ಟಾದ ಬಯಲು ಭೂಮಿ; ಕಣ್ಣು ಚಾಚುವ ತನ್ನ ಹೊಲ ಗದ್ದೆಗಳದ್ದೇ ರಾಜ್ಯ ಎಂದು ಹೇಳುವ ಕಾರಂತರು ಇಂತಹ ಸುಂದರವಾದ ನೈಸರ್ಗಿಕ ಸಂಪತ್ತು ಇರುವುದರಿಂದಲೇ ಅಲ್ಲಿನ ಜನತೆ ಮಳೆಗಾಲದಲ್ಲಿ ಹಸಿರಿನ ಸುಗ್ಗಿ; ಅನಂತರ, ಕರಿಬೂದು ಬಣ್ಣದ ಅಂಕಣಚಾಪೆ. ಕೆಲ ಕೆಲವೆಡೆ ಎರಡನೆಯ ಬೆಳೆ ಬೆಳೆಯುವವರಿದ್ದಾರೆ. ಗೆಣಸು, ಮೆಣಸು, ಭತ್ತಗಳ ಬೆಳೆ ಇನ್ನೂ ಮೂರು ತಿಂಗಳ ಕಾಲ ಎಡೆ ಚೌಕಗಳನ್ನು ಹಸಿರಾಗಿಸಿ ಕಣ್ಣಿಗೆ ಹಬ್ಬ ಮಾಡಬಹುದು ಎನ್ನುತ್ತಾರೆ. ಇದು ನಿಸರ್ಗದ ಕೊಡುಗೆಯಾಗಿದೆ.

ತಲೆಮಾರುಗಳ ಕಥೆಯೂ ಸಾಮಾಜಿಕ ಮತ್ತು ಆರ್ಥಿಕ ಭದ್ರತೆಯನ್ನು ಒದಗಿಸುತ್ತದೆ. ಬಸರೂರಿನ ಸುತ್ತಲು ಧೂಪದ ಮರಗಳಿವೆ. ಈ ಮರಗಳು ಈ ತಲೆಮಾರುಗಳ ಕಥೆಯನ್ನು ಹೇಳುವಂತೆ ನಿಂತಿವೆ, ಅನಂತರ ಕಾಲಾಂತರದಲ್ಲಿ ಇವುಗಳನ್ನು ಕಡೆದು ಅವುಗಳ ನಾಟಗಳಿಂದ ಹಾಯಿ ದೋಣಿಗಳು ಮಾಡಿಸಿದ್ದಾರೆ. ಈ ರೀತಿಯಾಗಿ ಮರಗಳನ್ನು ಕಡಿಯುವುದರ ಮೂಲಕ ಮನುಷ್ಯರು ತಮ್ಮ ಸುಖಕ್ಕಾಗಿ ಬಳಸುತ್ತಿದ್ದಾರೆ. ಹೀಗೆ ಪ್ರತಿಯೊಂದು ಪ್ರಕಾರದಲ್ಲೂ ನೋಡಿದರು ಮನುಷ್ಯನಿಗೆ ನಿಸರ್ಗ ತುಂಬಾ ಅವಶ್ಯವೆನಿಸಿದೆ. ಇದಿಲ್ಲದೆ ಅವನ ಸಂಸ್ಕೃತಿಯ ವಿಕಾಸವೇ ಇಲ್ಲ. ಈ ಕುರಿತು ಕಾರಂತರು ಹೇಳುತ್ತಾರೆ. 'ಆರಂಭದ ಮೂರು ನಾಲ್ಕು ವರ್ಷಗಳ ಕಾಲ ನಾಡಿನ ರಾಜಕೀಯ ಆಂದೋಲನ ನನ್ನ ಮನಸ್ಸನ್ನು ಕುಣಿಸುತ್ತಿತ್ತಾದರೂ, ಮನಸ್ಸಿನ ಪ್ರವೃತ್ತಿ ತೀವ್ರ ಭಾವೋದ್ವೇಗದ ಸೆಲೆಪಿಗೆ ಸಿಲುಕಿತ್ತಾದರೂ, ರಾಜಕೀಯ ಪ್ರಚಾರ, ಖಾದಿ ಪ್ರಚಾರದಂತಹ ಕೆಲಸಗಳು ಕ್ರಮೇಣ ಅಸಾಧ್ಯವಾಗುತ್ತಾ ಬಂದಿದ್ದವು. ಅವುಗಳ ಸ್ಥಾನದಲ್ಲಿ ಮನಸ್ಸನ್ನು ತುಂಬಿಸಲು

ಸಾಹಿತ್ಯದ ಕೃಷಿಯೂ, ನಾಟಕದ ಅಭಿರುಚಿಯೂ ನೆರವಾಗತೊಡಗಿತು. ಈ ಕಾಲದಲ್ಲಿ ತೊಡಗಿದ ಸಂಚಾರದ ಹುಚ್ಚು ಬೆಳೆಯುತ್ತ ಸರಿದು ನನ್ನ ಬದುಕಿನ ವಿದ್ಯಾಭ್ಯಾಸದ ಒಂದು ಅಂಗವಾಗಿ ಉಳಿದುಕೊಂಡಿತು. ನಿಸರ್ಗವನ್ನು ಕುರಿತು ಮೋಹ ನನ್ನಲ್ಲಿ ಅಂಕುರಿಸಿ ಬೆಳೆಯುವುದಕ್ಕೂ ಅದೊಂದು ಪ್ರಬಲ ಕಾರಣವಾಯಿತು.' ಆದ್ದರಿಂದಲೇ ಕಾರಂತರು ತಮ್ಮ ಎಲ್ಲಾ ಕಾದಂಬರಿಗಳಲ್ಲಿ ಮನತುಂಬಿ ನಿಸರ್ಗವನ್ನು ವರ್ಣಿಸುತ್ತಾರೆ. ಈ ವರ್ಣನೆಯಲ್ಲಿ ಅವರು ಮಾನವನ ಸಾಂಸ್ಕೃತಿಕ ಸಂಬಂಧವನ್ನು ಗುರುತಿಸುತ್ತಾರೆ.

ನಿಸರ್ಗದ ಮಡಿಲಾಗಿದ್ದ ಬಸರೂರು; ಈಗ ಮನುಷ್ಯನ ಚಲನಶೀಲತೆಯಿಂದ ನಿಸರ್ಗದಲ್ಲಿ ಚಲನಶೀಲತೆ ಉಂಟಾಗಿ ಸಂಸ್ಕೃತಿ ನಿಸರ್ಗದೊಂದಿಗೆ ಇರುವ ಸಂಬಂಧದಲ್ಲಿ ತುಂಬಾ ಬದಲಾವಣೆ ಆಗಿದೆ. ಈ ರೀತಿ ಮಾರ್ಪಾಟು ಹೊಂದಿದ್ದರು ಸಹ; ಇಂದಿಗೂ ಬಸರೂರಿನಲ್ಲಿ ನಂಬಿಕೆಗಳು ಗಾಢವಾಗಿರುವುದನ್ನು ಕಾರಂತರು ಗುರ್ತಿಸುತ್ತಾರೆ. ಇಲ್ಲಿ ಮದುವೆ, ಮುಂಜಿ, ಹೆರಿಗೆ, ಕಾಯಿಲೆ, ಕಸಾಲೆ, ಆಪತ್ತು, ಸಾಲ, ಸೋಲಗಳ ಕಾಲದಲ್ಲಿ ದೇವರನ್ನು ನೆನೆಯುವವರು ಕಡಿಮೆಯಾಗಿಲ್ಲ. ನಿತ್ಯ ದೇವರಿಗೆ ಸುತ್ತ ಬರುವವರೂ ಕಡಿಮೆಯಾಗಿಲ್ಲ ಬಸರೂರಿನ ಇಂದಿನ ಸಂಸ್ಕೃತಿ ವಸುಪುರದ ಭಾವುಕ ಸಂಸ್ಕೃತಿಗಿಂತ ಬದಲಾಗಿರಲಾರದೆಂದೇ ನನಗೆ ಅನಿಸುತ್ತದೆ.

ಹಳೆಗಾಲದ ಸಂಸ್ಕೃತಿಯನ್ನು ಹೊತ್ತು ಬಂದಂಥ ಪಟ್ಟಣವೆಂದರೆ ಬಳಿಕ ಹಿಂದಿನಿಂದ ಬಂದ ದೇವರು ದಿಂಡರುಗಳ ಜರೆಯಲ್ಲಿ ಉಳಿದ ಮಾನಸಿಕ ಭಾವೋನ್ಮಾದ ಬಂದೇ ಬಂದಿರುತ್ತದೆ. ಇವು, ಒಂದೊಂದು ತೆರನ ಜೀವನಕ್ಕೆ ಒಂದೊಂದು ವಿಧದ ಸೊಗದ ಬಯಕೆಯನ್ನು ಮೂಡಿಸಿ, ತೃಪ್ತಿಯನ್ನು ತರಬಯಸುತ್ತವೆ. ಇವಕ್ಕೆ ಬಸರೂರು ಹೊರತಾಗಿರಲಾರದು. ಅಲ್ಲಿ ಹಲವು ತಲೆಮಾರುಗಳಿಂದಲೂ ಹಲವಾರು ವೃತ್ತಿಕಾರರು ಉಪ ಜೀವನ ನಡೆಯಿಸುತ್ತ ಬಂದಿದ್ದಾರೆ. ಈ ಅಂಶವು ಮಾನವ ನಿಸರ್ಗದೊಂದಿಗೆ ಹೊಂದಿರುವ ಆಧ್ಯಾತ್ಮಿಕ ಸಂಬಂಧವಾಗಿದೆ.

'ಬಸರೂರಿನ ಬಳಿ ಕಡಲು ಇದ್ದ ಕಾರಣವಾಗಿ ಇಲ್ಲಿ ವ್ಯಾಪಾರ ವಿದೇಶಗಳೊಂದಿಗೆ ಅಕ್ಕಿ, ಬೆಲ್ಲ, ಬಟ್ಟೆಯ ಆಮದು –ರಫ್ತು ಕಾರ್ಯ ನಡೆಯುತ್ತಿತ್ತು. ಇದರ ಪರಿಣಾಮವಾಗಿ ಹದಿನೇಳನೆಯ ಶತಮಾನದಲ್ಲಿ ಇಂಗ್ಲೀಷರು, ಡಚ್ಚರು ಮತ್ತು ಪೋರ್ಚುಗೀಸರು ಈ ಕರಾವಳಿಯ ನಗರಗಳಲ್ಲಿ ವಾಸ ಮಾಡುತ್ತಿದ್ದರು. ಇಲ್ಲಿಗೆ ಬಂದ ಬಿಳಿ ಮೋರೆಗಳು ಮತ್ತು ನಾವಿಕರು ಕೆಲಸವಿದ್ದೋ, ಇಲ್ಲದೆಯೋ ಇಲ್ಲಿ ವಾಸಿಸುತ್ತಿದ್ದರು. ಇದರ ಪರಿಣಾಮವಾಗಿ ಅವರ ದೈಹಿಕ ಆಸೆಯನ್ನು ತೀರಿಸಲು ಇಲ್ಲಿ ಲಲನೆಯರು ಇದ್ದರು. ಈ ಪರಿಣಾಮವಾಗಿ ಬಸರೂರು ಪ್ರಸಿದ್ಧಿಯನ್ನು

ಪಡೆಯಿತು.' ಹೀಗೆ ನಿಸರ್ಗದ ಅಂತರಾಳ ಹಾಗೂ ಮಾನವನ ಸಂಬಂಧವನ್ನೂ ಹೇಳುವ ಕಾರಂತರು ಬಸರೂರಿನ ಪ್ರಸಿದ್ಧ ವೇಶ್ಯೆಯಾದ ಮಂಜುಳೆಯ 'ಮೈಮನಗಳ' ತರ್ಕದ ಕಥೆಯನ್ನು ಕಟ್ಟಿಕೊಡುತ್ತಾರೆ.

ಈ ಮಂಜುಳೆಯ ಕುರಿತು ಎಚ್.ವಿ ರಂಗಾಚಾರ್ ಅವರು– 'ಕತೆಯ ನಾಯಕಿಯಾದ ಮಂಜುಳೆಯ ತಾಯಿ ತನ್ನ ಮಗಳಿಗೆ 'ನಾವಿರುವುದು ಮೈ ಮಾರಿಕೊಳ್ಳುವುದಕ್ಕೇ ಹೊರತು. ನಮ್ಮ ಮನಸ್ಸನ್ನಲ್ಲ ಎಂದು ಬೋಧಿಸುತ್ತಾಳೆ. ಅವಳು ಈ ನೀತಿಯನ್ನು ಅನುಸರಿಸಿಯೇ ಯಾವ ವಿಧವಾದ ಮಾನಸಿಕ ಗೊಂದಲಗಳೂ ಇಲ್ಲದೇ ತನ್ನ ಕುಲ ವೃತ್ತಿಯಿಂದ ಸುಖ ಜೀವನ ನಡೆಸುತ್ತಾಳೆ. ತನ್ನ ಮಗಳಿಗೆ ಆಸ್ತಿಯನ್ನು ಬಿಟ್ಟು ಹೋಗುತ್ತಾಳೆ. ಮಂಜುಳೆಯೂ, ಅವಳ ಮಗಳು ಶಾರಿಯೂ ಹಾಗೆ ಮೈಯನ್ನು ಮನವನ್ನು ಬೇರೆ ಬೇರೆಯಾಗಿಟ್ಟುಕೊಂಡು ಜೀವಿಸುವುದರಲ್ಲಿ ಅಸಮರ್ಥರಾಗುತ್ತಾರೆ. ಅವರ ಜೀವನ ಮನ ಹರಿದ ಕಡೆ ಮೈಯೂ, ಮೈ ಹರಿದ ಕಡೆ ಮನವೂ ಹರಿದು ಸಾಗುತ್ತದೆ. ಮಂಜುಳೆಯ ಮನ ಸಂಗೀತ ಕಲೆಗೆ ಮಾರು ಹೋಗಿ, ರಸಿಕತೆ ಮತ್ತು ಸುಸಂಸ್ಕೃತ ಸ್ವಭಾವದ ಪುರುಷರ ಸ್ನೇಹ ಬಯಸುತ್ತದೆ. ಅವಳ ಮಗಳು ಶಾರಿ, ತಾನು ನಟಿಯಾಗುತ್ತೇನೆಂದು ಒಬ್ಬ ಹಳ್ಳಿ ಉಂಡಾಡಿ ಸೋಗುಗಾರನ ಬಲೆಗೆ ಬಿದ್ದಿದ್ದು, ತನ್ನ ಮೈಯನ್ನು ಬಿಟ್ಟಿಗೆ ಮಾರಿ, ತನಗೆ ಇದ್ದ ಆಸ್ತಿಯನ್ನೆಲ್ಲಾ ಕಳೆದುಕೊಳ್ಳುತ್ತಾಳೆ.'

ಕಾರಂತರು ಮನುಷ್ಯನಿಗೆ ಭೂಮಿಯೆನ್ನುವುದು ಎಷ್ಟು ಮುಖ್ಯ ಎಂದು ತಮ್ಮ ಕಾದಂಬರಿಗಳಲ್ಲಿ ವ್ಯಕ್ತಪಡಿಸುತ್ತಾರೆ. ಇದನ್ನೆ ರಂಗಾಚಾರ್ ಹೇಳುತ್ತಾರೆ. ಕಾರಂತರ ಎಲ್ಲಾ ಕಾದಂಬರಿಗಳಲ್ಲಿ 'ಭೂಮಿ'ಯ ಪ್ರಶ್ನೆ ಬರುವಂತೆ ಈ ಕಾದಂಬರಿಯಲ್ಲಿಯೂ ಬರುತ್ತದೆ. ಆದ್ದರಿಂದ ನಿಸರ್ಗದ ಬಹು ಮುಖ್ಯ ಮೂಲವಾದ ಭೂಮಿಯು ಮನುಷ್ಯನ ಸಂಸ್ಕೃತಿಯೊಂದಿಗೆ ಪುರಾತನ ಕಾಲದಿಂದಲೂ ಗಾಢ ಸಂಬಂಧವನ್ನು ಹೊಂದಿದೆ. ಇದು ಸರ್ವಕಾಲಿಕ ಸತ್ಯವಾಗಿದೆ. ಸಾಮಾಜಿಕ ಪರಿಸರದ ಪ್ರಭಾವದಿಂದ ಅನಿವಾರ್ಯವಾಗಿ ವೇಶ್ಯೆಯರಾಗುವ ಮಹಿಳೆಯರನ್ನು ಕಾಣುತ್ತೇವೆ. ಮಂಜುಳೆ ಮತ್ತು ಶಾರಿಯರು ಸಾಮಾಜಿಕ ಅನಿವಾರ್ಯಕ್ಕೆ ಒಳಗಾಗಿ ವೇಶ್ಯೆಯರಾಗಿ ಆ ಮೂಲಕ ಭೂಮಿ ಸಂಪಾದಿಸಿ, ಗೇಣಿಯನ್ನು ಪಡೆದು ಸುಖ ಜೀವನ ನಡೆಸುತ್ತಾರೆ. ಯಾವೊಬ್ಬ ಸಾಹುಕಾರನಿಗೆ ಇಷ್ಟು ಭೂಮಿಯಿದೆ ಎಂಬುದು ಮುಖ್ಯವಲ್ಲ. ಅದರ ಬದಲಾಗಿ ವಸುಪುರದ ಕಾಮಿನಿಯರೊಂದಿಗೆ ಸಂಬಂಧವನ್ನು ಇಟ್ಟುಕೊಂಡಿದ್ದರೆ, ಆ ಸಾಹುಕಾರನಿಗೆ ಒಂದು ಪ್ರತಿಷ್ಠೆಯಂತೆ ಇರುತ್ತಿತ್ತು. ಇದರಿಂದ ಈ ವೇಶ್ಯೆಯ ಆಸ್ತಿ–ನಗದಿನ ಸಂಪತ್ತು ಏರುತ್ತಿತ್ತು.

ಮಂಜುಳೆಯ ಮನೆಯ ಹಾದಿಯಲ್ಲಿದ್ದ ಗುಡಿಕಾರ ಚಂದ್ರಯ್ಯ ಮೊದಲು ಮಂಜುಳೆಯ ಕಾಲದಲ್ಲಿ ಗುಡಿಕಾರನಾಗಿದ್ದ, ಇವನ ಮನೆಯವರು ಸಹ ಅದೇ ಕೆಲಸ ಮಾಡುತ್ತಿದ್ದರು. ಆಗ ಅವರ ಗಂಧದ ಮರಗಳಿಂದ ಕಲಾಕೃತಿಗಳನ್ನು ಮತ್ತು ಮದುವೆಗಾಗಿ ಬೆಂಡಿನಿಂದ ಮಾಡಿದ

ಬಾಸಿಂಗವನ್ನು ಮಾಡುತ್ತಿದ್ದರು. ಕಾಲಾಂತರದಲ್ಲಿ ಇವುಗಳಿಗೆ ಬೇಡಿಕೆ ಕಡಿಮೆಯಾಗಿ, ಇಂದು ಬೇಸಾಯಗಾರರಾಗಿದ್ದಾರೆ. ಅದರೊಂದಿಗೆ ಚಂದ್ರಯ್ಯ ಇಂದು ಶಾರಿಯ ತಬಲ ವಾದಕನಾಗಿ, ಆಕೆಯ ನೃತ್ಯಕ್ಕೆ ಸಹಾಯ ಮಾಡುತ್ತಾ, ಸಾಂಸ್ಕೃತಿಕವಾಗಿ ತನ್ನ ತನವನ್ನು ಕಟ್ಟಿಕೊಳ್ಳುತ್ತಿದ್ದಾನೆ. ಈ ಕುರಿತು ಕಾರಂತರು ಚಂದ್ರಯ್ಯನಿಗೆ ಆ ಉದ್ಯೋಗ ಉಪಯೋಗಕ್ಕೆ ಬಾರದಿದ್ದು ಅದಕ್ಕೆ ಪರ್ಯಾಯವಾಗಿ ಅವರಿಗಿದ್ದ 'ಎರಡು ಮುಡಿಗೆದ್ದ ಬೇಸಾಯಕ್ಕದ್ದುದರಿಂದ, ಹಿತ್ತಿಲ ತೆಂಗಿನ ಮರಗಳು, ಊಟ, ಎಣ್ಣೆಗಳ ಪೂರ್ತ ಕಾಯಿಗಳನ್ನು ಕೊಡುತ್ತಿದ್ದರಿಂದ, ಆತ ತೃಪ್ತಿ ಜೀವನವನ್ನು ನಡೆಸುತ್ತಿದ್ದಾನೆ.' ಕಾರಂತರು ನಿಸರ್ಗದ ಸಂಬಂಧವನ್ನು ಮನುಷ್ಯ ಸಂಸ್ಕೃತಿಯೊಂದಿಗೆ ಬೆಸಿದಿದ್ದಾರೆ. ಇದನ್ನು ಚಂದ್ರಯ್ಯನ ವಿಷಯದಲ್ಲಿ ಗುರುತಿಸಬಹುದು.

ಚಂದ್ರಯ್ಯ ಮಂಜುಳೆ ಮರಣದ ಸಮಯದಲ್ಲಿ ಅಲ್ಲಿಗೆ ಬರುತ್ತಾನೆ. ಒಂದು ಕಾಲದಲ್ಲಿ ಮಂಜುಳೆಯ ಮಹಡಿಯ ಮೇಲೆ ಚಿತ್ರಿಸಿದ ಕೃಷ್ಣನ ಚಿತ್ರ ಜ್ಞಾಪಕಕ್ಕೆ ಬರುತ್ತದೆ. ಅದು ಮಂಜುಳೆ ಇಷ್ಟಪಟ್ಟು ಬರೆಸಿದ ಚಿತ್ರವಾಗಿರುತ್ತದೆ. ಅದು 'ಒಂದು ದೊಡ್ಡ ಚಿತ್ರ! ಹೂ ತರತಾಕುಂಜ ತಳಿತ ಮಾಮರ, ಶುಕಪಿಕಗಳು ಕಾಣಿಸಿಕೊಂಡಿದ್ದವು. ಬಾನಿನಲ್ಲಿ ಕಾರ್ಮುಗಿಲುಗಳು ಎಡೆಯಿಂದ ಮಿಂಚಿನ ಬಳ್ಳಿಗಳನ್ನು ಮೂಡಿಸಿ ಮುನ್ನಲೆಯಲ್ಲಿ ಹೆಣ್ಣು ನವಿಲುಗಳ ಹಿಂಡೊಂದನ್ನು ಚಿತ್ರಿಸಿದ, ಅಂಚಿನಲ್ಲಿ ಒಂದು ಮರಕ್ಕೆ ಅಡ್ಡವಾಗಿ ನಿಂತು ಕೃಷ್ಣ ಇಣಿಕಿ ನೋಡುವ ಹಾಗೆ ಬರೆದ, ಮತ್ತೊಂದು ದಿಕ್ಕಿನಿಂದ ಅವನಲ್ಲಿಗೆ, ಅವನದೇ ಮರುಳಿನಿಂದ ಉನ್ಮತ್ತಳಾಗಿ ಬರುವ ರಾಧೆಯನ್ನು ಚಿತ್ರಿಸಿದ.' ನಿಸರ್ಗವು ಸೃಷ್ಟಿಸುವ ಕಲಾ ಸೊಗಸಿಗೆ ಮನುಷ್ಯ ಮಾರುಹೋಗಿ ತನ್ನ ಕಲಾ ಸಂಸ್ಕೃತಿಯನ್ನು ರೂಢಿಸಿಕೊಂಡಿರುವುದಾಗಿದೆ. ಕವಿಗಳಿಂದ ಹಿಡಿದು ಪ್ರತಿಯೊಬ್ಬರಿಗೂ ನಿಸರ್ಗದ ಕಲಾ ಸೌಂದರ್ಯ ಸೆಳೆಯುವ ಸಂಗತಿಯಾಗಿದೆ. ಇದರಿಂದ ಪ್ರತಿಯೊಬ್ಬ ವ್ಯಕ್ತಿಯಲ್ಲಿ ಕಲೆಯ ವಿವಿಧ ಪ್ರಕಾರಗಳು ಹುಟ್ಟಿಕೊಳ್ಳುತ್ತವೆ. ಮಂಜುಳೆ, ಶಾರಿ ಇವರೆಲ್ಲರ ನೃತ್ಯ, ಮತ್ತು ಸಂಗೀತವೂ ಸಹ ನಿಸರ್ಗವನ್ನು ಅವಲಂಬಿಸಿದೆ. ಆದ್ದರಿಂದ ಮಾನವನ ಪ್ರತಿಯೊಂದು ಕಾರ್ಯಕ್ಕೂ ನಿಸರ್ಗ ತುಂಬಾ ಮುಖ್ಯವಾಗಿದೆ. ಇದು ಅಲ್ಲದೆ ಅವನ ಜೈವಿಕ ವಿಕಾಸ ಶೂನ್ಯವಾಗುತ್ತದೆ.

ಶಾರಿಯೂ ತನ್ನ ಪ್ರಿಯಕರ ಕಾಳಿಂಗಯ್ಯನಿಗೆ ಮನಸ್ಸು ಮತ್ತು ದೇಹವೆರಡನ್ನು, ಆತನ ಮರಳು ಮಾತಿಗೆ ಒಳಗಾಗಿ ಒಪ್ಪಿಸಿ ಕಷ್ಟಕ್ಕೆ ಸಿಲುಕಿ ಸಾಲಗಾರಳಾಗುತ್ತಾಳೆ. ಇದರಿಂದ ಮನೆಯ ಹಿತ್ತಲು ಮತ್ತು ಮನೆಯ ಸ್ವಲ್ಪ ಭಾಗವನ್ನು ಕಳೆದುಕೊಂಡು ಪರಿತಪಿಸುವುದರಲ್ಲಿ ಭೂಮಿಯು ಮಹತ್ವ ತಿಳಿಯುತ್ತದೆ. ಆದರೆ ಇವಳ ಮಗಳು ಚಂದ್ರಿ ಸ್ವತಂತ್ರಳಾಗಿ ಕುಲವೃತ್ತಿಯನ್ನು ತಿರಸ್ಕರಿಸಿ 'ತಮ್ಮ ಆಸ್ತಿಯನ್ನು ಹರಾಜಿಗೆ ಕೊಂಡವನಿಂದ ತೆಗೆದುಕೊಳ್ಳಬೇಕೇ ಅಥವಾ ಹುಟ್ಟಿ ಬೆಳೆದ ಮನೆಯನ್ನು ಬಿಟ್ಟು, ಎಲ್ಲಾದರೂ ತಾಯಿಯೊಡನೆ ಸ್ವತಂತ್ರ ಭಿಕಾರಿ ಜೀವನ ನಡೆಸಬೇಕೆ.' –

ಚಂದ್ರಿ ಯೋಚಿಸುವ ನೆಲೆಯಲ್ಲಿ ಪ್ರತಿಯೊಬ್ಬ ವ್ಯಕ್ತಿಯು ನಿಸರ್ಗದ ಭಾಗವಾದ ಭೂಮಿಗಾಗಿ ಹೋರಾಟ ಮಾಡುವ ನೆಲೆಗಳನ್ನು ಗುರ್ತಿಸಬಹುದಾಗಿದೆ.

ಮುಂದೆ ಬರುವ ಮಂಜುಳೆಯ ಕಥೆಯಲ್ಲಿ ಅವಳ ಮನಸ್ಸು ಮತ್ತು ಮೈಗಳ ನಡುವಿನ ವ್ಯತ್ಯಾಸ ಮತ್ತು ತಾನು ಕಂಡ ಏಳು ಜನ, ಪ್ರಿಯಕರ ಗುಣಗಳನ್ನು, ಆಕೆಯು ತೆಗಳಿಕೆ ಮತ್ತು ಹೊಗಳಿಕೆಗಳ ಮೂಲಕ ವ್ಯಕ್ತಪಡಿಸುತ್ತಾಳೆ. ವೇಶ್ಯಾ ವೃತ್ತಿಯ ಗುಣಧರ್ಮ ತಿಳಿಸಿಕೊಡುತ್ತಾಳೆ. ಅಂದರೇ ಕೇವಲ ಪುರುಷರೊಂದಿಗೆ ಪ್ರಾಮಾಣಿಕ ವ್ಯವಹಾರ ಮಾಡಬೇಕೆ ಹೊರತು, ಮನಸ್ಸನ್ನು ಮಾರಿಕೊಳ್ಳಬಾರದು. ಒಂದು ವೇಳೆ ಮಾರಿಕೊಂಡರೆ ನಾವು ಗುಲಾಮರಾಗಬಾರದೆಂದು ಹೇಳುತ್ತಾಳೆ. ಹೀಗೆ ಅವಳು ಈ ತತ್ವದಡಿಯಲ್ಲಿ ಭೂಮಿಯನ್ನು ಸಂಪಾದಿಸುತ್ತಾಳೆ. ಆ ಮೂಲಕ ಸಂಪತ್ತು ಗಳಿಸಿ, ನೃತ್ಯದ ಮೂಲಕ ಮತ್ತು ತನ್ನ ಕುಲ ವೃತ್ತಿಯನ್ನು ನಡೆಸುತ್ತಾಳೆ. ಈ ಪ್ರಕಾರವಾಗಿ ಕಾರಂತರು ಮನುಷ್ಯನ ಸಂಸ್ಕೃತಿಯೊಂದಿಗೆ ನಿಸರ್ಗ ಹೊಂದಿರುವ ಸಂಬಂಧಗಳನ್ನು ಗುರ್ತಿಸುತ್ತಾರೆ. ಆದರೆ ಸಂಸ್ಕೃತಿಯೆನ್ನುವುದು ನಿರಂತರ ಬದಲಾವಣೆಗೆ ಒಳಪಡುವಂತದು ಅಂತ ಬದಲಾವಣೆಯನ್ನು ಮಂಜುಳೆ, ಶಾರಿಗೆ ಮತ್ತು ಚಂದ್ರಿಯಲ್ಲಿ ಕಾಣುತ್ತವೆ. ಇಂತ ಆಲೋಚನಾ ಪರಿಗಳು ಪ್ರಸ್ತುತ ಸಮಾಜದಲ್ಲಿ ಪೀಳಿಗೆಯಿಂದ ಪಲ್ಲಟಗೊಂಡು ಬೇರೊಂದು ಸ್ವರೂಪ ಪಡೆದುಕೊಳ್ಳುತ್ತವೆ. ಅಂದರೆ ಹೆಣ್ಣನ್ನು ಇಂದು ಕೇವಲ ಭೋಗದ ವಸ್ತುವಂತೆ ಪರಿಗಣಿಸಿ ವೇಶ್ಯಾಗೃಹಳಿಗೆ ಕಳ್ಳತನದಿಂದ ಮಾರಾಟ ಮಾಡುತ್ತಿರುವುದು ನಮಗೆ ತಿಳಿದಿರುವ ಸಂಗತಿ. ಆದರೆ ಕಾರಂತರು ಈ ಕಾದಂಬರಿಯಲ್ಲಿ ಸ್ತ್ರೀಯನ್ನು ಗ್ರಹಿಸುವ ಪರಿಯಲ್ಲಿ ಸ್ತ್ರೀಗೂ ಮನಸ್ಸು ಅನ್ನುವುದು ಇದೆ ಮತ್ತು ಯೋಚನಾ ಶಕ್ತಿ ಇದೆ, ಎಂದು ಹೇಳುವ ಮೂಲಕ ಸ್ತ್ರೀಯನ್ನು ಗೌರವಿಸಿದ್ದಾರೆ.

ಸಂಸ್ಕೃತಿ ಮನುಷ್ಯನು ಹುಟ್ಟಿಕೊಂಡ ಕ್ಷಣದಿಂದಲೇ ಪ್ರಾರಂಭವಾಯಿತು. ಇಂತ ಸಂಸ್ಕೃತಿಯು ವಿವಿಧ ಪ್ರಕಾರವಾಗಿ ಪಲ್ಲಟಗೊಳ್ಳುತ್ತಾ ಬಂದು, ಪ್ರಸ್ತುತ ಅದು ವಿವಿಧ ರೂಪಗಳನ್ನು ಪಡೆದುಕೊಂಡಿದೆ. ಭೂಮಿಯನ್ನು ಮನುಷ್ಯ ಇಂದು ವಾಣಿಜ್ಯ ರೂಪದಲ್ಲಿ ಕಾಣುತ್ತಿದ್ದಾನೆ. ಇದರಲ್ಲಿ ಗಣಿಗಾರಿಕೆ, ಮೂಲ ಸೌಕರ್ಯಗಳ ಅಭಿವೃದ್ಧಿ, ಅಣೆಕಟ್ಟು ನಿರ್ಮಾಣ, ಕೈಗಾರಿಕೆ ಸ್ಥಾಪನೆ ಮುಂತಾದ ಚಟುವಟಿಕೆಗಳು ಒಳಗೊಂಡಿದ್ದು ಮನುಷ್ಯನು ತನ್ನ ಸಂಸ್ಕೃತಿಯ ಸ್ವರೂಪವನ್ನು ಈ ರೀತಿ ಪ್ರಕಟಿಸುತ್ತಿದ್ದಾನೆ. ಇದೇ ಕಾಡು, ಜಲ, ಭೂ ವಾತಾವರಣಕ್ಕೆ ಆಗುತ್ತಿದೆ. ಇದರಿಂದ ಮಾನವನ ಸಂಸ್ಕೃತಿಯ ಪಲ್ಲಟವಾಗುತ್ತಿದೆ. ಈ ಸಂಸ್ಕೃತಿಯ ಪಲ್ಲಟದಿಂದ ಅವನು ಯಾಂತ್ರಿಕವಾದ ಜಿಗುಪ್ಸೆಯ ಬದುಕಿನ ಮಟ್ಟವನ್ನು ತಲುಪಿದ್ದಾನೆ.

ಈ ಸಂಗತಿಯ ಅರಿವಿನೊಂದಿಗೆ ಕಾರಂತರ ಕಾದಂಬರಿಗಳನ್ನು ಅಧ್ಯಯನ ಮಾಡಿದಾಗ, ಕಾರಂತರು ಸಂಸ್ಕೃತಿಯನ್ನು ಮತ್ತು ನಿಸರ್ಗವನ್ನು ಸರ್ವಕಾಲಿಕ ದೃಷ್ಟಿಯಲ್ಲಿ ನಿಸರ್ಗದ

ಚಲನಶೀಲತೆಯ ಆಯಾಮಗಳನ್ನು ಗುರುತಿಸುತ್ತಾರೆ. ಅಲ್ಲದೆ ಮಾನವ ಚಲನಶೀಲತೆಯ ನೆಲೆಗಟ್ಟುಗಳೊಂದಿಗೆ, ಆತನ ಸಂಸ್ಕೃತಿಯನ್ನು ಭೂತ, ವರ್ತಮಾನ ಮತ್ತು ಭವಿಷ್ಯತ್ಕಾಲದ ದೃಷ್ಟಿಕೋನಗಳಲ್ಲಿ ಅಳೆದಿರುವುದನ್ನು ಗುರುತಿಸಬಹುದಾಗಿದೆ.

ಕಾರಂತರು ಸೃಷ್ಟಿಸಿರುವ ನಿಸರ್ಗ ಮತ್ತು ಮಾನವ ಸಂಬಂಧವನ್ನು ಕುರಿತು ಹೇಳುವುದಾದರೆ, ಅದು ಸಮುದ್ರದಂತೆ ಕಂಡು ಬರುತ್ತದೆ. ಇಂತಹ ಸಮುದ್ರದಲ್ಲಿ ಮಾನವನ ವಿವಿಧ ಮೌಲ್ಯಗಳು ಮತ್ತು ಮುಖಗಳು ಕಂಡುಬರುತ್ತವೆ. ಈ ಸಮುದ್ರವನ್ನು ಈಜಿ ದಾಟುವುದು ಸಾಮಾನ್ಯವಾದುದ್ದಲ್ಲ. ಕಾರಂರತರು 'ಬೆಟ್ಟದ ಜೀವ' ಕಾದಂಬರಿಯಲ್ಲಿ ಮನುಷ್ಯನ ಬಗ್ಗೆ ಕಾಡು ಎಂಬ ಪೆಡಂಭೂತನ ಮುಂದೆ ಮನುಷ್ಯನ ಬಗ್ಗೆ ಕಾಡು ಎಂಬ ಪೆಡಂಭೂತನ ಮುಂದೆ ಮನುಷ್ಯ ಚಿಕ್ಕ ಇರುವೆ ಎನ್ನುತ್ತಾರೆ. ಅದೇ ರೀತಿಯಾಗಿ ಕಾರಂತರು ತಮ್ಮ ಕಾದಂಬರಿ ಸಾಹಿತ್ಯದಲ್ಲಿ ನಿಸರ್ಗವನ್ನು ಮತ್ತು ಮಾನವನು ಅದರೊಂದಿಗೆ ಸಾಂಸ್ಕೃತಿಕವಾಗಿ ಹೊಂದಿರುವ ಸಂಬಂಧಗಳನ್ನು ಹೇಳುತ್ತಾರೆ. ಈ ಇರುವೆಯಂತಿರುವ ಮಾನವನು ನಿಸರ್ಗದೊಂದಿಗೆ ಪೂರಕ ಸಂಬಂಧವನ್ನು ಇಟ್ಟುಕೊಳ್ಳಬೇಕು. ಆಗ ಅವನು ಬದುಕಿ ಬಾಳುತ್ತಾನೆ. ಇಲ್ಲದ ಪಕ್ಷದಲ್ಲಿ ಅವನಿಗೆ ಉಳಿಗಾಲವಿಲ್ಲ ಎನ್ನುವ ಸಂಗತಿಯನ್ನು ಕಾರಂತರು ತಮ್ಮ ಕಾದಂಬರಿಗಳಲ್ಲಿ ಸೃಷ್ಟಿಸಿರುವ ಪಾತ್ರಗಳ ಮುಖಾಂತರ ಎಚ್ಚರಿಸುತ್ತಾರೆ. ನಿಸರ್ಗದೊಂದಿಗೆ ಅವನ ಚಲನಶೀಲತೆಯ ಆಯಾಮ ಪೂರಕವಾಗಿರಬೇಕು ಎನ್ನುತ್ತಾರೆ. ಇದರಿಂದ ಮನುಷ್ಯನ ಸಂಸ್ಕೃತಿಯ ಚಲನಶೀಲತೆಗೆ ಸಹಾಯಕವಾಗಿ ಅವನ ಪೀಳಿಗೆ ಆರೋಗ್ಯಕರವಾದ ಭವಿಷ್ಯವನ್ನು ಕಟ್ಟಿಕೊಳ್ಳುತ್ತದೆ ಎಂಬುದು ಇಲ್ಲಿನ ಪ್ರಮುಖ ಸಂಗತಿಯಾಗಿದೆ. ಈ ಸಂಗತಿಗಳಾಧಾರದ ಮೇಲೆ ಕಾರಂತರ ಕಾದಂಬರಿಗಳಲ್ಲಿ ನಿಸರ್ಗದ ಚಲನಶೀಲತೆಯೊಂದಿಗೆ ಮನುಷ್ಯ ಸಂಸ್ಕೃತಿಯ ಸಂಬಂಧಗಳನ್ನು ಪರಿಶೀಲಿಸಲಾಗಿದೆ.

ಆದಿ ಮಾನವನ ಬದುಕು ಪ್ರಕೃತಿಯೊಂದಿಗೆ ಅವಿನಾಭವ ಸಂಬಂಧವನ್ನು ಹೊಂದಿತ್ತು. ಅವನಿಗೆ ತನ್ನ ಮುಂದಿರುವ ಪ್ರಕೃತಿ ಅಥವಾ ನಿಸರ್ಗವು ತನ್ನ ಅಳತೆಗೆ ಮೀರಲಾರದಂತಹ ಪರಿಸ್ಥಿತಿ ಉಂಟಾದಾಗ ಅವನು ಅದರ ಮೇಲೆ ಭಯ ಭಕ್ತಿಯನ್ನು ಬೆಳೆಸಿಕೊಂಡನು. ಈ ಸಂದರ್ಭದಲ್ಲಿ ಪ್ರಕೃತಿಯನ್ನು ದೇವತೆಗಳ ನೆಲೆಯಲ್ಲಿ ಪೂಜಿಸಲು ಪ್ರಾರಂಭಿಸಿದನು. ಈ ಆರಾಧನೆ ವರುಣ, ಅಗ್ನಿ, ಸೂರ್ಯ, ಚಂದ್ರನ ರೂಪದಲ್ಲಿ ಕಂಡು ಬಂದಿತು. ಹೀಗೆ ಆರಾಧನೆಯ ದೃಷ್ಟಿಕೋನವನ್ನು ಒಳಗೊಂಡಿದ್ದ ನಿಸರ್ಗದ ಸಂಬಂಧವು ಅನಂತರವೂ ಹಾಗೆಯೇ ಮುಂದುವರಿಯಿತು.

ಕಾರಂತರು ಮನುಷ್ಯನು ನಿಸರ್ಗದೊಂದಿಗೆ ಬದುಕುವಾಗ ಅವನಿಗೆ ಅದರ ಅರಿವು ಇರುತ್ತದೆ. ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಈ ಮನುಷ್ಯ ಪಾತ್ರಗಳು, ಈ ಅರಿವಿನೊಂದಿಗೆ ತಮ್ಮ ಜೀವನದ ವಿವಿಧ ಮೌಲ್ಯಗಳಿಂದ ಸಾಮಾಜಿಕ, ಧಾರ್ಮಿಕ, ಆರ್ಥಿಕ ಮತ್ತು ರಾಜಕೀಯ

ನೆಲೆಗಳನ್ನು ನಿಸರ್ಗದ ಸಂಬಂಧದೊಂದಿಗೆ ರೂಪಿಸಿಕೊಳ್ಳುತ್ತಾನೆ. ಎಂಬ ಸಂಗತಿಯು ಕಾರಂತರಿಗೆ ತುಂಬಾ ಮುಖ್ಯವಾಗಿದೆ.

ಕಾರಂತರು ತಮ್ಮ ಕಾದಂಬರಿಗಳಲ್ಲಿ ಹೇಳಿರುವ ನಿಸರ್ಗ ಮಾನವ ಸಂಬಂಧಗಳಲ್ಲಿ ಅನುಭಾವಿಕ, ಸಾಂಸ್ಕೃತಿಕ, ಮಾನವೀಯ, ಜೈವಿಕ ನೆಲೆಗಳನ್ನು ತರುವುದರ ಮೂಲಕ ಮಾನವ ಮತ್ತು ನಿಸರ್ಗದ ಸಂಬಂಧವು ನಿಕಟಪೂರ್ವವಾಗಿದೆ ಎಂಬುದನ್ನು ಸಾಬೀತು ಪಡಿಸುತ್ತಾರೆ. ಏಕೆಂದರೆ ಕಾರಂತರು ತಮ್ಮ ಬಾಲ್ಯದಿಂದಲೂ ಕರಾವಳಿಯ ಪ್ರಕೃತಿ ಸೌಂದರ್ಯ ಮತ್ತು ಅಲ್ಲಿನ ಜನರ ಬಾಳನ್ನು ಹತ್ತಿರದಿಂದ ಕಂಡವರು. ಅದರಲ್ಲೂ ದಕ್ಷಿಣ ಕನ್ನಡ ಜಿಲ್ಲೆಯ ಅನೇಕ ಊರುಗಳು, ಅವರ ಕಾದಂಬರಿಗಳ ಕ್ಷೇತ್ರಗಳಾಗಿವೆ. ಈ ಕ್ಷೇತ್ರದಲ್ಲಿ ವಾಸಿಸುವ ಜೀವಂತ ವ್ಯಕ್ತಿಗಳು ಅವರ ಕಾದಂಬರಿಗಳ ಪಾತ್ರಗಳು, ಈ ಪಾತ್ರಗಳು ಗೌರವಯುತವಾಗಿ ಬಾಳುತ್ತವೆ, ಅನುಭವಿಸುತ್ತವೆ ಮತ್ತು ಪೀಳಿಗೆಗೆ ತಮ್ಮ ನಿಸರ್ಗ ಅರಿವನ್ನು ವರ್ಗಾಯಿಸುತ್ತವೆ. ಆದರೆ ಕೆಲವು ವ್ಯಕ್ತಿಗಳು ತಮ್ಮ ಹಿರಿಯರ ಒಲವು ನಿಲುವುಗಳನ್ನು ಸ್ವೀಕರಿಸದೇ ನಿಸರ್ಗದಿಂದ ದೂರ ಉಳಿಯುವುದರ ಮೂಲಕ ಅತಂತ್ರ ಸ್ಥಿತಿಯನ್ನು ಎದುರಿಸುತ್ತದೆ.

'ಮರಳಿ ಮಣ್ಣಿಗೆ' ಕಾದಂಬರಿಯಲ್ಲಿ ಕಾರಂತರು ಮೂರು ತಲೆಮಾರಿನ ಜನರು ಹೊಂದಿದ್ದ ನಿಸರ್ಗ ಮಾನವ ಸಂಬಂಧಗಳನ್ನು ಗುರ್ತಿಸುತ್ತಾರೆ. ಮೊದಲ ತಲೆಮಾರಿನ ರಾಮ ಐತಾಳರಿಗೆ ಮತ್ತು ಅವರ ಸಮಕಾಲೀನರಿಗೆ ನಿಸರ್ಗದ ಸಂಬಂಧ ಅನಿವಾರ್ಯವಾಗಿರುತ್ತದೆ. ಆದರೆ ತಮ್ಮ ಮಕ್ಕಳ ಶ್ರೇಯೋಭಿವೃದ್ಧಿಗಾಗಿ ಇವರು ದುಡಿಯುತ್ತಾರೆ. ಇದರೊಂದಿಗೆ ಅವರಿಗೆ ಬೇಕಾದಂತಹ, ಅವರ ಆ ಕಾಲ ಘಟ್ಟಕ್ಕೆ ತಕ್ಕಂತೆ ಇಂಗ್ಲಿಷ್ ಶಿಕ್ಷಣವನ್ನು ಕೊಡಿಸುತ್ತಾರೆ. ಇಂತಹ ಸೌಲಭ್ಯವನ್ನು ಪಡೆದವನೇ ರಾಮ ಐತಾಳರ ಮಗ ಲಚ್ಚ. ಇವನು ಎರಡನೇ ತಲೆಮಾರಿನವನು. ಇವನು ಪಟ್ಟಣಕ್ಕೆ ಹೋದವನು, ಮನೋದೌರ್ಬಲ್ಯ ಮತ್ತು ದೈಹಿಕ ದೌರ್ಬಲ್ಯಗಳಿಗೆ ಒಳಗಾಗಿ ತನ್ನ ಪತ್ನಿ ನಾಗವೇಣಿ ಮತ್ತು ಮೂರನೇ ತಲೆಮಾರಿನ ಕುಡಿ ರಾಮನನ್ನು ವಂಚಿಸಿ ಶಾಶ್ವತವಾಗಿ ನಗರ ಪಾಲಾಗಿ ನಿಸರ್ಗದಿಂದ ಕಣ್ಮರೆಯಾಗುತ್ತಾನೆ. ಇದರೊಂದಿಗೆ ತನ್ನ ತಂದೆ ಸಂಪಾದಿಸಿದ್ದ, ಆಸ್ತಿಯನ್ನು ಕಳೆಯುತ್ತಾ ಇದರಿಂದ ನಾಗವೇಣಿ, ರಾಮ, ಸರಸೋತಿ, ಪಾರೋತಿ, ಸತ್ಯಭಾಮೆಯರು ಬೀದಿ ಪಾಲಾಗುತ್ತಾರೆ. ಆದರೆ ಇದನ್ನು ತಿಳಿದ ಸರಸೋತಿ, ನಾಗವೇಣಿ, ಸತ್ಯಭಾಮೆಯರು ಮತ್ತೆ ಬದುಕನ್ನು ಕಟ್ಟಿಕೊಂಡು ತಮ್ಮ ಮೊಮ್ಮಗ ರಾಮನನ್ನು ಬೆಳೆಸುತ್ತಾರೆ. ರಾಮನಿಗೆ ವಿದ್ಯಾಭ್ಯಾಸ ಕೊಡಿಸುತ್ತಾರೆ. ರಾಮ ಮುಂಬೈಯಲ್ಲಿ ಉದ್ಯೋಗವನ್ನು ಕಂಡು ಕೊಂಡು ನಂತರ, ತಮ್ಮ ತಾತ ಅವರು ವಾಸಿಸುವ ಮನೆಯ ಗೋಡೆಯಲ್ಲಿ ಹಣ ಸಿಕ್ಕಿದ ಕಾರಣವಾಗಿ ಅವರ ಮನೆಯ ಆರ್ಥಿಕ ಪರಿಸ್ಥಿತಿ ಸ್ವಲ್ಪ ಸುಧಾರಿಸಿತು. ಆಧುನಿಕ ವ್ಯಕ್ತಿಯಾದ ರಾಮ ಕಲಾವಿದನಾಗಿ, ನಿಸರ್ಗದ ಒಲವುಳ್ಳ

ವ್ಯಕ್ತಿಯಾಗಿ, ಮತ್ತೆ ಹಿಂತಿರುಗಿ ಕೋಡಿಗೆ ಬಂದು ನಿಸರ್ಗದ ನೆಲೆಯಲ್ಲಿ ತನ್ನ ಬದುಕನ್ನು ಕಟ್ಟಿಕೊಳ್ಳುತ್ತಾನೆ. ಒಟ್ಟಾರೆ ಈ ಕಾದಂಬರಿಯು ನಿಸರ್ಗದೊಂದಿಗೆ ಮಾನವ ಹೊಂದಿರುವ ವಿವಿಧ ಮುಖಗಳನ್ನು ಪರಿಚಯಿಸುವುದರ ಮೂಲಕ, ಮಾನವನಿಗೆ ನಿಸರ್ಗ ಸಂಬಂಧದ ಅವಶ್ಯಕತೆಯನ್ನು ಹೇಳುತ್ತದೆ.

ಕಾರಂತರು ಹೀಗೆ ತಮ್ಮ ಕಾದಂಬರಿಗಳಲ್ಲಿ ಪಾತ್ರಗಳನ್ನು ನಿಸರ್ಗದಲ್ಲಿ ಕ್ರಿಯಾತ್ಮಕ ನೆಲೆಯಲ್ಲಿ ಗುರುತಿಸುತ್ತಾರೆ. ಈ ಕ್ರಿಯಾತ್ಮಕ ನೆಲೆಯಲ್ಲಿ ಮನುಷ್ಯನು ನಿಸರ್ಗವನ್ನು ತನ್ನ ಅಡಿಯಾಳಾಗಿಸಿಕೊಳ್ಳುವ ಕ್ರಿಯೆಯಲ್ಲಿ ತೊಡಗಿ ಸೋಲುವುದು ಕಂಡುಬರುತ್ತದೆ. ಕೆಲವು ಪಾತ್ರಗಳು ನಿಸರ್ಗದೊಂದಿಗೆ ಪೂರಕ ಸಂಬಂಧದೊಂದಿಗೆ ಬದುಕುವುದು ಕಂಡು ಬರುತ್ತದೆ. ಆದ್ದರಿಂದ ಅವರ ಬಾಳು ಚಂದವಾಗಿರುತ್ತದೆ ಎಂದು ಕಾರಂತರು ಹೇಳುತ್ತಾರೆ. ಇಲ್ಲದ ಪಕ್ಷದಲ್ಲಿ ನಿಸರ್ಗ ಮಾನವನನ್ನು ಬಲಿ ತೆಗೆದುಕೊಳ್ಳುತ್ತದೆ. ಎಂಬ ಎಚ್ಚರಿಕೆಯನ್ನು ಕಾರಂತರು ಕೊಡುತ್ತಾರೆ. ಈ ಹಿನ್ನೆಲೆಯಲ್ಲಿ ಕಾರಂತರು ಬರೆದಿರುವ 'ಬೆಟ್ಟದ ಜೀವ' ಕಾದಂಬರಿ ತುಂಬಾ ಮುಖ್ಯವಾಗುತ್ತದೆ. ಈ ಕಾದಂಬರಿಯ ನಾಯಕ ಗೋಪಾಲಯ್ಯ ಕಾಡನ್ನು ಸವರಿ, ಬೆಟ್ಟದಡಿಯಲ್ಲಿ ಬೇಸಾಯ ಮಾಡುತ್ತಾನೆ ಗೋಪಾಲಯ್ಯನು ನಿಸರ್ಗದ ವಿಕೋಪಗಳಿಗೆ ಹೊಂದಿಕೊಂಡು ತನ್ನ ಜೀವನ ನಡೆಸುತ್ತಾನೆ. ಪತ್ನಿ ಶಂಕರಮ್ಮ, ನಾರಾಯಣಯ್ಯ, ದೇರಣ್ಣಗೌಡ ಭಟ್ಯ ಇವರೆಲ್ಲರೂ ನಿಸರ್ಗದೊಂದಿಗೆ ಅವಿನಾಭಾವ ಸಂಬಂಧದ ಮೂಲಕ ಬದುಕುತ್ತಾರೆ. ಆದರೆ ಗೋಪಾಲಯ್ಯನ ಮಗ ಶಂಭು ನಿಸರ್ಗದಿಂದ ಪಲಾಯನ ಮಾಡಿ ತನ್ನ ಎಲ್ಲಾ ಸಂಬಂಧಗಳನ್ನು ನಿಸರ್ಗದೊಂದಿಗೆ ಕಡಿದುಕೊಳ್ಳುತ್ತಾನೆ.

ಕಾರಂತರು ಈ ಮೂಲಕ ನಿಸರ್ಗದ ಪ್ರಾಮುಖ್ಯತೆಯನ್ನು ಪ್ರಕಟಪಡಿಸುತ್ತಾರೆ. ನಿಸರ್ಗವೇ ನಮಗೆ ಬೇಕಾದ ಮೂಲಭೂತ ಸೌಲಭ್ಯಗಳಾದ ನೀರು, ಗಾಳಿ, ಆಹಾರ ನೀಡಿದೆ. ಆದರಿಂದಲೇ ನಾವು ಸಂತೋಷದಿಂದ ಬದುಕನ್ನು ಕಟ್ಟಿಕೊಳ್ಳಿತ್ತಿರುವುದು, ಆದ್ದರಿಂದ ನಿಸರ್ಗವನ್ನು ನಾವು ನಾಶಮಾಡಬಾರದು. ಒಂದು ವೇಳೆ ಈ ಕ್ರಿಯೆ ನಡೆದರೆ ನಿಸರ್ಗ ನಮ್ಮನ್ನು ಬಲಿ ತೆಗೆದುಕೊಳ್ಳುತ್ತದೆ ಎಂಬ ಸಂಗತಿಯನ್ನು ಕಾರಂತರು ತಮ್ಮ ಎಲ್ಲಾ ಕಾದಂಬರಿಗಳ ಮೂಲಕ ಮನವರಿಕೆ ಮಾಡಿಕೊಡುತ್ತಾರೆ. ಆದ್ದರಿಂದ ಹೀಗೆ ಅವರ ಕಾದಂಬರಿಗಳಲ್ಲಿ ಹೇಳಿರುವ ನಿಸರ್ಗ ನಮ್ಮನ್ನು ಮಾನವ ಸಂಬಂಧಗಳಿಗೆ ಸಂಬಂಧಪಟ್ಟಂತೆ ಮೂರು ರೀತಿಯ ಪಾತ್ರಗಳನ್ನು ಗುರ್ತಿಸಬಹುದು.

೧. ನಿಸರ್ಗವನ್ನು ಅವಲಂಬಿಸಿ ಬದುಕುವ ಪಾತ್ರಗಳು.

೨. ನಿಸರ್ಗವನ್ನು ದಿಕ್ಕರಿಸಿ ಬದುಕುವ ಪಾತ್ರಗಳು.

೩. ತಟಸ್ಥನಿಲುವನ್ನು ಹೊಂದಿರುವ ಪಾತ್ರಗಳು.

ಈ ಪಾತ್ರಗಳಿಗೆ ಸಂಬಂಧಿಸಿದಂತೆ ಕಾರಂತರ ಎಲ್ಲಾ ಕಾದಂಬರಿಗಳು ಧ್ವನಿಸುತ್ತವೆಯಾದರೂ, ಕೆಲವು ಪ್ರಾತಿನಿಧಿಕ ಕಾದಂಬರಿಗಳನ್ನು ಮಾತ್ರ ಆಯ್ಕೆ ಮಾಡಿಕೊಂಡು ಅಧ್ಯಯನ ಮಾಡಲಾಗಿದೆ. ಆ ಮೂಲಕ ನಿಸರ್ಗ ಮಾನವ ಸಂಬಂಧಗಳ ಆ ಮುಖಗಳನ್ನು ವಿಮರ್ಶಾತ್ಮಕವಾಗಿ ಹೇಳಲಾಗಿದೆ.

ಕಾರಂತರು ತಮ್ಮ ಕಾದಂಬರಿಗಳಲ್ಲಿ ಮನುಷ್ಯ ಸಂಬಂಧಗಳನ್ನು ನೈಸರ್ಗಿಕವಾಗಿ ಕಟ್ಟಿಕೊಡುತ್ತಾರೆ. ಮನುಷ್ಯ ಮೂಲತಃ ನಿಸರ್ಗ ಪ್ರೇಮಿ, ಇವನು ತನ್ನ ಬದುಕುವ ನೆಲೆಯನ್ನು ಭದ್ರಪಡಿಸಿಕೊಳ್ಳುವುದಕ್ಕಿಂತಲೂ ಮುಂಚೆ ಅವನಿಗೆ ನಿಸರ್ಗದ ಬಗ್ಗೆ ಕುತೂಹಲವಿತ್ತು. ಈ ಕುತೂಹಲವೇ ಅವನನ್ನು ನಿಸರ್ಗವನ್ನು ಅರಿಯಲು ಪ್ರೇರೇಪಿಸಿತು. ಆದ್ದರಿಂದ ಅದರ ಅನ್ವೇಷಣೆಯನ್ನು ಅರಿಯಲು ಅವನಿಂದ ಸಾಧ್ಯವಾಗಲಿಲ್ಲ. ಏಕೆಂದರೆ ನಿಸರ್ಗ ತನ್ನ ಗುಟ್ಟನ್ನು ಬಿಟ್ಟುಕೊಡುತ್ತಿಲ್ಲ. ಈ ಕಾರಣದಿಂದ ನಿಸರ್ಗದ ಬಗ್ಗೆ ಮನುಷ್ಯನಿಗೆ ಅಪಾರವಾದ ಭಯವಿದೆ. ಆದರೆ ಕೆಲವು ಸಲ ಮಾನವ ಈ ಭಯವನ್ನು ದಾಟಿ ಮುಂದುವರೆದು, ನಿಸರ್ಗಕ್ಕೆ ಹಾನಿ ಉಂಟು ಮಾಡಿದಾಗ ಅಪಾರ ಸಂಕಷ್ಟವನ್ನು ಎದುರಿಸಿದ್ದಾನೆ. ಇಂತಹ ನಿಸರ್ಗವು ನಮಗೆ ಬದುಕು, ಸಾವು ಇವೆರಡನ್ನು ತನ್ನ ಇಚ್ಚೆಯಂತೆ ದಯಪಾಲಿಸಿದೆ. ಕಾರಂತರು ಇವೆಲ್ಲವನ್ನು ಅರಿತವರು. ಆದ್ದರಿಂದ ಅವರು ತಮ್ಮ ಕಾದಂಬರಿಗಳಲ್ಲಿ ನಿಸರ್ಗವನ್ನು ಅವಲಂಬಿಸಿ ಬದುಕುವ ಪಾತ್ರಗಳನ್ನು ತರುತ್ತಾರೆ. ಈ ಪಾತ್ರಗಳಲ್ಲಿ ಮನುಷ್ಯ ನಿಸರ್ಗವನ್ನು ತ್ಯಜಿಸಿ ಒಂದು ಕ್ಷಣವು ಜೀವಿಸಲು ಸಾಧ್ಯವಿಲ್ಲ ಎನ್ನುವ ಸಂದೇಶವನ್ನು ನೀಡುತ್ತಾರೆ. ಕಾರಂತರ ಕಾದಂಬರಿಗಳು ಗಟ್ಟಿಯಾದ ಅನುಭವ, ಪ್ರಬುದ್ಧ ಜೀವನ ದೃಷ್ಟಿ, ವಸ್ತು ನಿಷ್ಠೆ, ಪ್ರಾಮಾಣಿಕತೆ, ಪ್ರಕಾರ ಸಾಮಾಜಿಕತೆ ಹಾಗೂ ನಿರ್ಭೀತಿಯ ನಿಲುವುಗಳಿಂದಾಗಿ ಕಾರಂತರ ಕಾದಂಬರಿಗಳ ಆಧುನಿಕ ಕನ್ನಡ ಸ್ವಾತಂತ್ರ್ಯದ ಶ್ರೇಷ್ಠ ಸಾಧನೆಯ ಅಂಗಗಳಾಗಿವೆ.

ಕಾರಂತರ ಕಾದಂಬರಿಗಳಲ್ಲಿ ಬರುವ ಜೀವನ ದೃಷ್ಟಿಯನ್ನು ನಿಸರ್ಗದೊಂದಿಗೆ ಹೊಂದಿರುವ ಸಂಬಂಧವೆಂದು ಹೇಳಬಹುದಾಗಿದೆ. ಏಕೆಂದರೆ ಕಾರಂತರು ತಮ್ಮ ಕಾದಂಬರಿಗಳಲ್ಲಿ ತಾವೇ ನಿರೂಪಕರಾಗಿ ಪಾತ್ರಗಳಲ್ಲಿ ಮಾತನಾಡುವುದುಂಟು. ಹೀಗೆ ಹೇಳುವಾಗ ಕಾರಂತರು ನಿಸರ್ಗವನ್ನು ರೋಮಾಂಚಿತರಾಗಿ ವರ್ಣಿಸುತ್ತಾರೆ. ಈ ಸಂದರ್ಭದಲ್ಲಿ ನಿಸರ್ಗವನ್ನು ಅವಲಂಬಿಸಿ ಬದುಕುವ ಪಾತ್ರಗಳನ್ನು ಗುರ್ತಿಸುತ್ತಾರೆ. ಈ ಕುರಿತು ಕಾರಂತರ ಕೆಲ ಪ್ರಾತಿನಿಧಿಕವಾದ ಕಾದಂಬರಿಗಳ ಮೇಲೆ ಗಮನಕೊಟ್ಟು, ಈ ವಿಷಯವನ್ನು ವಿಮರ್ಶಾತ್ಮಕ ದೃಷ್ಟಿಯ ಮೂಲಕ ಸಂಕ್ಷಿಪ್ತವಾಗಿ ಅರಿತುಕೊಳ್ಳಲು ಸಾಧ್ಯವಿದೆ. ಇಲ್ಲಿ ಆಯ್ಕೆ ಮಾಡಿಕೊಂಡ ಕೃತಿಗಳೆಂದರೆ– 'ನಂಬಿದವರ ನಾಕ ನರಕ, 'ಕುಡಿಯರ ಕೂಸು', 'ಮರಳಿ ಮಣ್ಣಿಗೆ', 'ಶನೀಶ್ವರನ ನೆರಳಿನಲ್ಲಿ', 'ಮುಗಿದ ಯುದ್ಧ', 'ಗೆದ್ದ ದೊಡ್ಡಸ್ತಿಕೆ', 'ಚೋಮನದುಡಿ', 'ಮೂಕಜ್ಜಿಯ ಕನಸುಗಳು', 'ಅಳಿದ

ಮೇಲೆ', 'ಬೆಟ್ಟದ ಜೀವ', 'ಸ್ವಪ್ನದ ಹೊಳೆ', ಧರ್ಮರಾಯನ ಸಂಸಾರ', 'ನಷ್ಟ ದಿಗ್ಗಜಗಳು', 'ಮೊಗ ಪಡೆದ ಮನ', 'ಉಕ್ಕಿದ ನೊರೆ', 'ಗೊಂಡಾರಣ್ಯ', 'ಇನ್ನೊಂದು ದಾರಿ'.

'ನಂಬಿದವರ ನಾಕ ನರಕ' ಕಾದಂಬರಿಯಲ್ಲಿ ನಿಸರ್ಗದೊಂದಿಗೆ ಬದುಕುವ ಪಾತ್ರಗಳು, ಸಾಂಸಾರಿಕ ಜೀವನದ ಜಂಜಾಟಗಳಿಗೆ ಒಳಪಟ್ಟು ಕೆಲ ಸಮಯ ತಮ್ಮ ದುಃಖವನ್ನು ಮರೆಯಲು ಪ್ರಯತ್ನಿಸುವುದುಂಟು. ಇನ್ನೂ ಕೆಲವು ಪಾತ್ರಗಳು ಭೂಮಿಯಲ್ಲಿ ವ್ಯವಸಾಯ ಮಾಡುವ ಮೂಲಕ ನಿಸರ್ಗದೊಂದಿಗೆ ಸಂಬಂಧವನ್ನು ಹೊಂದಿರುತ್ತದೆ. ಈ ಸಂಬಂಧದೊಂದಿಗೆ ಆ ಪಾತ್ರಗಳು ಅಪಾರವಾದ ಜೀವನ ಶ್ರದ್ದೆಯೊಂದಿಗೆ ಬದುಕುತ್ತವೆ. ಕಾರಂತರು ಹೇಳಿರುವ ಬದುಕಿನ ಬಗ್ಗೆ ಜಿ.ಹೆಚ್. ನಾಯಕರವರು, *"ಕಾರಂತರಿಗೆ ಇಹದ ಬದುಕು ಮುಖ್ಯ, ಬದುಕಿನೊಂದಿಗೆ ವ್ಯಕ್ತಿ ಅಥವಾ ವ್ಯಕ್ತಿಗಳು ಏರ್ಪಡಿಸುವ ಸಂಬಂಧದ ಸ್ವರೂಪವನ್ನು ಶೋಧಿಸುವುದು ಹಾಗೂ ಆ ಶೋಧನೆಯ ಪ್ರಕ್ರಿಯೆಯಲ್ಲಿ ಬದುಕಿಗೆ ಮತ್ತು ಬದುಕಿನಲ್ಲಿ ಎದುರಾಗುವ ಸಮಸ್ಯೆ ಸನ್ನಿವೇಶಗಳಿಗೆ, ಅವು ಉಂಟು ಮಾಡುವ ಸಿಹಿ-ಕಹಿ ಅನುಭವಗಳಿಗೆ ವ್ಯಕ್ತಿ ಅಥವಾ ವ್ಯಕ್ತಿಗಳು ತೋರಿಸುವ ಪ್ರತಿಕ್ರಿಯೆ ಮುಖ್ಯ".*[೫೬] ಈ ಬದುಕುವ ನೆಲೆಗಳನ್ನು ನಿಸರ್ಗದ ನೆಲೆಯಲ್ಲಿ ನೋಡಿದಾಗ ನಿಸರ್ಗವು ತಂದೊಡ್ಡುವ ಸಮಸ್ಯೆಗಳನ್ನು ಮಾನವ ಎದುರಿಸಿ ತನ್ನ ಬದುಕನ್ನು ಕಟ್ಟಿಕೊಳ್ಳುತ್ತಾನೆ. ಅಂತ ಕಟ್ಟಿಕೊಳ್ಳುವ ನೆಲೆಗಳಲ್ಲಿ ಅವನ ಜೀವನ ಶ್ರದ್ದೆ ಅಡಗಿದೆ. ಈ ಶ್ರದ್ಧೆಯಿಂದ ಮಾನವ ನಿಸರ್ಗದೊಂದಿಗೆ ಬದುಕು ಸಾಗಿಸುತ್ತಿದ್ದಾನೆ. ಈ 'ನಂಬಿದವರ ನಾಕ ನರಕ' ಕಾದಂಬರಿಯಲ್ಲಿ ಕಾರಂತರು ಸೌಗೋಡು ಮತ್ತು ಚೌಗೋಡು ಕುಟುಂಬದ ಕಥೆಯನ್ನು ಹೇಳುತ್ತಾರೆ. ಈ ಕಾದಂಬರಿಯ ಕೆಲವು ಪಾತ್ರಗಳು ನಿಸರ್ಗದೊಂದಿಗೆ ಸಂಬಂಧವನ್ನಿಟ್ಟುಕೊಂಡು ಬದುಕುತ್ತವೆ. ಆ ಪಾತ್ರಗಳಲ್ಲಿ ಸಾವಿತ್ರಮ್ಮ ಮತ್ತು ಗಣೇಶಯ್ಯ ದಂಪತಿಗಳು ನಿಸರ್ಗದಲ್ಲಿ ತಮ್ಮ ಬದುಕನ್ನು ಕಟ್ಟಿಕೊಂಡವರು, ಇವರು ನಿಸರ್ಗದೊಂದಿಗಿನ ಸಂಬಂಧವನ್ನು ಕಾರಂತರು ತುಂಬಾ ಚೆನ್ನಾಗಿ ವರ್ಣಿಸುತ್ತಾರೆ.

ಗಣೇಶಯ್ಯನವರಿದ್ದ ಕಾಲದಲ್ಲಿ ತುಂಬು ಕೃಷಿ ಮಾಡುತ್ತಿದ್ದರು. ಮನೆಯ ತೋಟದ ಬೇಸಾಯವನ್ನು ಹತ್ತಿರದ ಗದ್ದೆಗಳ ಬೇಸಾಯವನ್ನು ತಾವೇ ಮಾಡಿಕೊಂಡಿದ್ದರು, ಸಮೀಪದಲ್ಲಿ ಒಂದೆರಡು ಒಕ್ಕಲು ಮನೆಗಳು ಇವೆ. ಅವರಿಗೂ ತುಸು ಜಮೀನು ಕೊಟ್ಟಿದ್ದರು.

"ಅವರೀಗ ತೀರಿಕೊಂಡು ಹತ್ತು ವರ್ಷಗಳಾಗಿವೆ. ಅಲ್ಲಿನ ನಿವಾಸಿಗಳ ಪ್ರಧಾನ ಕಷ್ಟವೆಂದರೆ ಕೆಲಸದ ಆಳುಗಳ ಅಭಾವ ಇದು ಜ್ವರದ ಕೊಂಪೆ. ಕೆಲಸಕ್ಕೆ ಜನ ಬರುವುದಕ್ಕೇನೆ ಹೆದರುತ್ತಾರೆ. ಅಡಿಕೆ ತೋಟದಲ್ಲಿ ಕೊಟ್ಟೆ ಕಟ್ಟಲು, ಮಣ್ಣು ಹಾಕಲು ಗೊಬ್ಬರ ಚೆಲ್ಲಲು ಗೊನೆ ಇಳಿಸಲು. ಘಟ್ಟದ ಕೆಳಗಿನಿಂದ ಕೂಲಿಗಳು ಬರಬೇಕು ಭತ್ತದ ಬೇಸಾಯವೂ ಅಷ್ಟೆ ಗಣೇಶಯ್ಯನವರ ಇಂಥೊಂದು ಕೃಷಿಕ ಜೀವನದಲ್ಲಿ ಸಾವಿತ್ರಮ್ಮ ಕಷ್ಟ ಸುಖಗಳೆರಡರಲ್ಲೂ ಅನ್ಯೋನ್ಯವಾಗಿ ಬೆರೆತು ಬಾಳಿದಳು"[೫೭]

೫೬. ಜಿ.ಎಸ್.ಅಮೂರ, ಕನ್ನಡ ಕಥನ ಸಾಹಿತ್ಯ ಕಾದಂಬರಿ, ಪುಟ – ೧೧೪

೫೭. ಟಿ.ಪಿ.ಅಶೋಕ, ಕಾರಂತ ಮಂಥನ, ಪುಟ – ೧೨೯

ನಿಸರ್ಗದ ಮಡಿಲಲ್ಲಿ ಗಣೇಶ ಹೆಗ್ಗಡೆ ಮತ್ತು ಸಾವಿತ್ರಮ್ಮ ಜೀವಿಸುವುದು ಅವರ ಸಾಹಸದ ಬದುಕಾಗಿದೆ ಎಂದು ಕಾರಂತರು ಹೇಳುತ್ತಾರೆ. ಏಕೆಂದರೆ ಮಲೆನಾಡಿನ ಘಟ್ಟಗಳಲ್ಲಿ ಸೊಳ್ಳೆಗಳ ಕಾಟ. ಅಲ್ಲಿ ಮಲೇರಿಯಾ ಜ್ವರ ಕಾಡುತ್ತಲೇ ಇರುತ್ತದೆ. ಆದ್ದರಿಂದ ಜನ ಅಲ್ಲಿ ಕೃಷಿ ಮಾಡಲು ಮತ್ತು ಅಲ್ಲಿನ ಕೂಲಿಯಾಳುಗಳು ಕೆಲಸ ಮಾಡಲು ಹೆದರುತ್ತಾರೆ. ಆದರೂ ಸಹ ಸಹ್ಯಾದ್ರಿಯ ಮಡಿಲಲ್ಲಿರುವ ಜನರು ಸಾಹಸವಂತರಾಗಿ ಕೃಷಿ ಮಾಡುತ್ತಾರೆ. ಇಂತಹ ಸಾಹಸದ ಪ್ರತೀಕಗಳಾಗಿ ಸಾವಿತ್ರಮ್ಮನ ಊರಾದ ಮಾವಿನ ಕುಳಿಯ ಜನರು ಪ್ರಮುಖರು ಸಾವಿತ್ರಮ್ಮ ಮತ್ತು ಗಣೇಶಯ್ಯನವರು ಚೌಗೋಡು ಸಹ ಪ್ರಮುಖವಾಗಿದೆ. ಸಾವಿತ್ರಮ್ಮ ಮತ್ತು ಗಣೇಶಯ್ಯನ ಮಗ ಸುಬ್ರಾಯನಿಗೆ ಮಕ್ಕಿಗದ್ದ ಸೋಮೇಶ್ವರಯ್ಯನ ಮಗಳು ಸತ್ಯಭಾಮೆಯನ್ನು ಮದುವೆ ಮಾಡಿಸುತ್ತಾರೆ. ಸತ್ಯಭಾಮೆಯನ್ನು ಬಿಟ್ಟು ಸುಬ್ರಾಯ ಸ್ವಲ್ಪ ಕಾಲದ ಅನಂತರ ಮುಂಬೈಗೆ ಹೊರಡುತ್ತಾನೆ. ಹೋದವನು ಆಗಾಗ ಬರುತ್ತಿದ್ದ, ಸತ್ಯಭಾಮೆ ಗರ್ಭಿಣಿ ಯಾಗುತ್ತಾಳೆ. ಇವಳಿಗೆ ಹುಟ್ಟಿದ ಮಗ ಸಾಗೋಡಿನ ಸಾಹುಕಾರ ನಾಗೇಂದ್ರನಿಗೆ ಇರುವಂತೆ ಆರು ಬೆರಳು, ನೀಲಿ ಕಣ್ಣಿರುವುದನ್ನು ಕಂಡ ಸಾವಿತ್ರಮ್ಮನ ಚಿಕ್ಕಮಗ ಪರಮನು ಆಗಾಗ ಮನೆಗೆ ಬರುತ್ತಿದ್ದ ಸೌಗೋಡಿನ ಸಾಹುಕಾರ ನಾಗೇಂದ್ರನ ಪಿಂಡವೆಂದು ಅನುಮಾನಪಟ್ಟು ಅದನ್ನು ಸಾವಿತ್ರಿಗೆ ತಿಳಿಸಿದಾಗ ಅವಳು ಸತ್ಯಭಾಮೆಯನ್ನು ಶಾಶ್ವತವಾಗಿ ಬಹಿಷ್ಕರಿಸುತ್ತಾಳೆ. ಅನಂತರ ಸತ್ಯಾಭಾಮೆ ತನ್ನ ತವರ ಮನೆಯಲ್ಲೇ ಉಳಿಯುತ್ತಾಳೆ. ಅಣ್ಣ ರಾಮಕೃಷ್ಣನ ಮನೆಯಲ್ಲಿ ವಾಸ ಮಾಡುತ್ತಾಳೆ. ಆಗ ಈ ನೋವನ್ನು ಮರೆಯಲು ಕಡಲಿನ ದಂಡೆಗೆ ಹೋಗುತ್ತಾಳೆ.

ಮಾನದ ತನ್ನ ನೋವನ್ನು ಮರೆಯಲು ನಿಸರ್ಗದ ರಮಣೀಯತೆಯನ್ನು ಕಂಡು ಕಾಲ ಕಳೆಯುತ್ತಾನೆ. ಅದು ಅವನ ಭಾವನೆಗೆ ಸೀಮಿತವಾದದ್ದು ಪ್ರಕೃತಿಯ ಛಾಯಾಚಿತ್ರಗಳಂತೆ ತನ್ನ ಜೀವನವು ವಿಚಿತ್ರ ಎಂದು ಅವನಿಗೆ ಅನಿಸಲೂಬಹುದು. ಅದೇ ರೀತಿ ಇಲ್ಲಿ ಚಿರಂತವಾಗಿ ನಿಂತಿರುವ ಅಶ್ವತ್ಥ ವೃಕ್ಷದ ಕೆಳಗೆ ಕುಳಿತು ಸತ್ಯಭಾಮೆಯು ತಮ್ಮ ಜೀವನದ ಪಲ್ಲಟಗಳನ್ನು ನೆನಪಿಸಿಕೊಂಡು ಉದ್ವೇಗಕ್ಕೆ ಒಳಗಾಗಿ ನಗುವ ನಗುವಿನಲ್ಲಿ ನೋವುಂಟು. ಈ ನೋವು ಶಾಶ್ವತವಲ್ಲ. ನನಗೂ ಮುಂದೆ ಸುಖವುಂಟು ಎಂಬ ಭಾವನೆ ತೋರಿಸುತ್ತದೆ. ಅದೇ ರೀತಿಯಾಗಿ ಮನುಷ್ಯ ಜೀವಿತವು ಶಾಶ್ವತವಲ್ಲ, ಆದರೆ ನಿಸರ್ಗಕ್ಕೆ ಶಾಶ್ವತತನವಿದೆ ಎಂದು ಅರಿತಂತೆ ಅವಳು ನಗುತ್ತಿದ್ದಾಳೆ. ಇದನ್ನೇ ಕಾರಂತರು ಆ ಅಶ್ವತ್ಥಮರ ನೂರು ಜನರಿಂದ ಸಾವಿರಾರು ವರ್ಷಗಳಿಂದ ಪೂಜೆಗೆ ಒಳಪಟ್ಟಿದೆ ಎನ್ನುತ್ತಾರೆ. ಆದರೆ ಮನುಷ್ಯನು ಮಾತ್ರ ಉಳಿದಿಲ್ಲ. ಅಂದಿನ ಈ ಮರ ಚಿರಂಜೀವಿಯಾಗಿ ಶಾಶ್ವತವಾಗಿ ಉಳಿದಿದೆ ಎಂದು ನಿಸರ್ಗದ ಚಿರಂತನವನ್ನು ಹೇಳುತ್ತಾರೆ. ಆದ್ದರಿಂದ ಮನುಷ್ಯ ನಿಸರ್ಗವನ್ನು ಅರಿತು ಬಾಳಬೇಕು ಎನ್ನುತ್ತಾರೆ. ಇಲ್ಲಿನ ಸತ್ಯಭಾಮೆಯು ತನ್ನ ದುಃಖವನ್ನು ಮರೆಯಲು ನಿಸರ್ಗವನ್ನು ಬಳಸಿಕೊಂಡಿರುವುದು ಮುಖ್ಯವಾಗಿದೆ.

ಈ ಕಾದಂಬರಿ ಕುರಿತು ದೇ.ಜವರೇಗೌಡರವರು *"ನಂಬಿಕೆಗೂ ಬದುಕಿಗೂ ಇರುವ ನಿಕಟ ಬಾಂಧವ್ಯ ಸುಸ್ಪಷ್ಟವಾಗಿ ಅಭಿವ್ಯಕ್ತಗೊಂಡಿದೆ."*[೫೮] ಎಂದು ತಿಳಿಸಿದ್ದಾರೆ. ಈ ನಂಬಿಕೆಯು ಸಾಮಾಜಿಕ ಸಂದರ್ಭದಲ್ಲಿಯೂ ಮುಖ್ಯವಾಗಿರುವಂತೆ ನಿಸರ್ಗದ ಸಂಬಂಧದಲ್ಲೂ ಮುಖ್ಯವಾಗಿರುತ್ತದೆ. ಆದ್ದರಿಂದ ಈ ಕಾದಂಬರಿಯಲ್ಲಿ ಬರುವ ಪಾತ್ರಗಳಾದ ಸೋಮೇಶ್ವರಯ್ಯನ ಮಗ ರಾಮಕೃಷ್ಣ ತನ್ನ ತಂದೆ ಆಸ್ತಿಯ 'ಹಿಸ್ಸೆ ಪಡೆದು ಮಕ್ಕಿಗದ್ದೆಯಿಂದ ಗೇರುಸೊಪ್ಪೆಯ ಬಳಿ ಇರುವ ನಗರ ಬಸ್ತಿಯಲ್ಲಿ ವ್ಯವಸಾಯ ಮಾಡಿದನು.' ಈ ಕುರಿತು ರಾಮಕೃಷ್ಣ ದಂಪತಿಗಳು ಹೇಳುವ ಮಾತುಗಳು ನಿಸರ್ಗದ ಅವಲಂಬನೆಯನ್ನು ಹೇಳುತ್ತವೆ.

"ಚೆನ್ನಾದ ಬೇಸಾಯವೇನೆಂದರು ಕಂಡಿರದ ಪಾಳು ಭೂಮಿಯನ್ನು ಒಕ್ಕಲುಗಳ ಕೈಯಲ್ಲುಳಿದರೂ ಬಂಜರು ಹೊಲಗದ್ದೆಗಳಪ್ಪಿರಲಿಲ್ಲ. ಜವುಗು ನೀರಿಗೊಂದು ಕಂದರ ಮಾಡಿ ಕೊಟ್ಟರೆ ಶ್ರಮ, ಸಾಹಸಗಳಿದ್ದರೆ ಅದೊಂದು ನಂದನವಾದೀತು."[೫೯] ಶರಾವತಿ ನದಿಯ ದಂಡೆಯ ಮೇಲೆ ಇರುವ ಈ ಭೂಮಿಯನ್ನು ರಾಮಕೃಷ್ಣ ದಂಪತಿಗಳು ಹದ ಮಾಡಿ ವ್ಯವಸಾಯ ಮಾಡುವುದರ ಮೂಲಕ ನಿಸರ್ಗದೊಂದಿಗೆ ಬದುಕುತ್ತಾರೆ. ಅದೇ ರೀತಿಯಾಗಿ ಕಾರಂತರು ಈ ಕಾದಂಬರಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಜನರು ಕಾಡು ಪ್ರದೇಶದಲ್ಲಿ ನೆಲೆ ನಿಂತು ವ್ಯವಸಾಯ ಮಾಡುವ ಪ್ರಸಂಗಗಳನ್ನು ಮತ್ತು ಅಲ್ಲಿನ ಕಾಡು ಪ್ರಾಣಿಗಳ ಉಪದ್ರವವನ್ನು ಹೇಳುತ್ತಾರೆ. ಇಂತಹ ಪರಿಸರದಲ್ಲಿ ಬದುಕುವ ಪಾತ್ರಗಳನ್ನು ಗುರ್ತಿಸುತ್ತಾರೆ. ಶಿರೂರಿನ ಶಂಕರಯ್ಯ, ಶೇಡಿಮನೆ ಶೃಂಗಾರಮ್ಮ ಮತ್ತು ಆಕೆಯ ಮೊಮ್ಮಕ್ಕಳಾದ ಸೀತಾರಾಮ, ರಾಘವರು ವ್ಯವಸಾಯ ಮಾಡುವುದರ ಮೂಲಕ ನಿಸರ್ಗದೊಂದಿಗೆ ಅವಿನಾಭಾವ ಸಂಬಂಧದೊಂದಿಗೆ ಬದುಕುತ್ತಾರೆ. ಶಿರೂರಿನ ಶಂಕರಯ್ಯ ಬಡ ಬ್ರಾಹ್ಮಣ, ತನ್ನ ಮಗಳಾದ ಕಾವೇರಿಯನ್ನು ಸೀತಾರಾಮನಿಗೆ ಕೊಟ್ಟು ಮದುವೆ ಮಾಡಿ, ಶೇಡಿ ಮನೆಯಲ್ಲಿಯೇ ಶೃಂಗಾರಮ್ಮನಿಂದ ಭೂಮಿಯನ್ನು ಗೇಣಿಗೆ ಪಡೆದು ಜೀವಿಸುತ್ತಾನೆ.

ರಾಘವನಿಗೆ ಕಡಲು ಎಂದರೆ ಪ್ರಾಣ. ಅದೇ ರೀತಿಯಾಗಿ ಶಂಕರಯ್ಯನಿಗೆ ಮತ್ತು ರಾಮನಿಗೆ ಅಪ್ಪರ್ತರಿಗೆ ನಿಸರ್ಗವೆಂದರೆ ಪ್ರೀತಿ. ರಾಘುವ ಶಿರೂರಿಗೆ ಹೋಗಿದ್ದಾಗ ಪ್ರಕೃತಿಯನ್ನು ವಿಮರ್ಶಿಸಲು ಹೋಗುತ್ತಾರೆ. ಇವರ ನಿಸರ್ಗ ಸಂಬಂಧವನ್ನು ಕಾರಂತರು ವಾಸ್ತವಿಕ ನೆಲೆಯಲ್ಲೆ ಗುರ್ತಿಸುತ್ತಾರೆ. 'ಇತ್ತ ಎಳೆಯನಾದ ರಾಘುವ ಮೈಮುಚ್ಚುವಷ್ಟು ಬಟ್ಟೆ ಹಾಕಿಕೊಂಡು, ಕಾಲಿಗೆ ಜೋಡು ಮೆಟ್ಟಿಕೊಂಡು ನಗುತ್ತ ಹೊರಬಿದ್ದರೆ, ಅಪ್ಪರ್ತರು ಬರಿಗಾಲಿನಲ್ಲಿ, ಉಟ್ಟೊಂದು ಕಿರಯ ಪಂಚೆಯಲ್ಲದೆ ಮತ್ತಾವ ಹೊದ್ದಿಕೆಯೂ ಇಲ್ಲದೆ ಹೊರಟಿದ್ದರು. ಹೊರಗಿನ ಚಳಿಗಾಳಿ ಅವರನ್ನು ಭಾದಿಸುತ್ತಿರಲಿಲ್ಲ. ಅವರ ಶರೀರ ಒಣಗಿ, ಬಿಸಲು, ಗಾಳಿ ಮಳೆ ಮೊದಲಾದ ಹವೆಯ ವ್ಯತ್ಯಾಸಗಳಿಂದ ನಿರ್ಬಂಧಿತವಾಗಿತ್ತು. ಶಂಕರಯ್ಯನವರಾಗಲಿ ಪ್ರಕೃತಿಯ ಮಕ್ಕಳಾಗಿ ಹುಟ್ಟಿದವರು.

೫೮. ಕು.ಶಿ.ಹರಿದಾಸಭಟ್ಟ (ಸಂ), ಕಾರಂತ ಪ್ರಪಂಚ, ಪುಟ – ೪೨೮
೫೯. ಶಿವರಾಮ ಕಾರಂತ, ನಂಬಿದವರ ನಾಕ ನರಕ, ಪುಟ –೩೭೭

ರಾಘವನು ದಾರಿ ನಡೆಯುತ್ತ 'ಅಪ್ಪರ್ತರಿಗೆ ಚಳಿಯೆಂಬುದೇ ಆಗುವುದಿಲ್ಲವೇ? ನನ್ನ ಮೈಯಲ್ಲಿ ಅಂಗಿಯುಂಟು: ಚಿಂತೆಯಿಲ್ಲ' ಎಂದ.

"ಚಳಿ, ಗಾಳಿ, ಸುಖ, ದುಃಖ ಇವೆಲ್ಲವೂ ನಾವೆಣಿಸಿದಂತಲ್ಲವೇ? ನೀವುಣ್ಣವರು: 'ನನ್ನ ಈ ಮಾತು ತಿಳಿಯಲಾರದು. ಸಂಸಾರದಲ್ಲಿದ್ದು ಪಾರಾಗಬೇಕಾದರೆ-ಇದೆಲ್ಲವನ್ನು ಕಲಿಯಬೇಕು. ಹೀಗೆನ್ನುತ್ತ, ಆತನ ಜತೆಯಲ್ಲಿ ಮಾತು ಮುಂದುವರೆಸುತ್ತ, ಗುಡ್ಡವನ್ನು ಏರಿ, ಎದುರಿನ ಭವ್ಯ ದೃಶ್ಯವನ್ನು ಆ ಹುಡುಗನೊಡನೆ ತಾವು ನೋಡುತ್ತ ನಿಂತರು. ರಾಘವ ಮೂಡಣದ ಉನ್ನತ ಬೆಟ್ಟಗಳನ್ನು, ಪಡುವಣದ ಶಾಲ ಕಡಲನ್ನೂ ಕಂಡು ಮೈ ಮರೆತು ನಿಂತ"[೬೦]

ಅಪ್ಪರ್ತರು ಮತ್ತು ಶಂಕರಯ್ಯನವರ ನಿಸರ್ಗದ ಸಂಬಂಧ ಮಾಗಿದ ಸಂಬಂಧ. ಅವರು ನಿಸರ್ಗವನ್ನು ಅರಿತಿದ್ದಾರೆ. ಅದರೊಂದಿಗೆ ಬದುಕುವುದನ್ನು ಕಲಿತಿದ್ದಾರೆ. ಆ ಅನುಭವವಿಲ್ಲದೆ ರಾಘವ ಕೇವಲ ನಿಸರ್ಗವನ್ನು ಕಂಡು ಸಂತೋಷ ಪಡುತ್ತಿದ್ದಾನೆ. ಈ ಸಂತೋಷವು ಅವನಲ್ಲಿ ಆಧುನಿಕ ಮುಖವು ಕಂಡು ಬರುತ್ತದೆ. ಅಪ್ಪರ್ತರು ನಿಸರ್ಗದ ಮಡಿಲಿಗೆ ಅಂಗಿಯನ್ನು ತೊಡದೆ ಬಂದಾಗ, ರಾಘವ ಚಳಿಯಾಗುವುದಿಲ್ಲವೇ ಎಂದಾಗ, ಅಪ್ಪರ್ತರು ಹೇಳುವ ಮಾತುಗಳಲ್ಲಿ ನಿಸರ್ಗದೊಂದಿಗೆ ಹೊಂದಿರುವ ಅವರ ಸಹಜ ಸಂಬಂಧವನ್ನು ಗುರ್ತಿಸಬಹುದು.

'ಕುಡಿಯರ ಕೂಸು' ಕಾದಂಬರಿಯಲ್ಲಿ ಕಾರಂತರು ಕಾಡಿನ ಮಕ್ಕಳ ನಿಸರ್ಗ ಸಂಬಂಧವನ್ನು ಗುರುತಿಸುತ್ತಾರೆ. ಕಾರಂತರು ಕುಡಿಯರ ಸಾಂಸ್ಕೃತಿಕ ನೆಲೆಗಳಾದ ವ್ಯವಸಾಯ, ಬೇಟೆ ಮತ್ತು ದೈವರಾಧನೆಯಲ್ಲಿ ನಿಸರ್ಗ ಸಂಬಂಧವನ್ನು ಗುರ್ತಿಸುತ್ತಾರೆ. ಕುಡಿಯರ ನಿಸರ್ಗದ ಸಂಬಂಧವನ್ನು ಕುರಿತು ಕೆ.ಕೇಶವ ಶರ್ಮರವರು –*"ಕುಡಿಯರಿಗೂ ನಿಸರ್ಗಕ್ಕೂ ಇರುವ ಸಂಬಂಧ ಮತ್ತು ಅವರ ಜೀವನದಲ್ಲಿ ಬದಲಾವಣೆಯನ್ನು ಉಂಟು ಮಾಡುತ್ತಿರುವ ಆರ್ಥಿಕ ಬದಲಾವಣೆ, ಇದು ಕಾದಂಬರಿಯ ಉದ್ದೇಶವನ್ನು ವಿವರಿಸುತ್ತದೆ"*[೬೧] ಎನ್ನುತ್ತಾರೆ.

ಮನುಷ್ಯನು ತನ್ನ ಆಶಯಗಳನ್ನು ನೆರವೇರಿಸಿಕೊಳ್ಳುವುದಕ್ಕಾಗಿ ನಿಸರ್ಗವನ್ನು ಅವಲಂಬಿಸಿ-ದ್ದಾನೆ. ಈ ಅವಲಂಬನೆಯಿಂದ ನಿಸರ್ಗದಲ್ಲಿ ಅವನಿಗೆ ಅಗತ್ಯವಾದ ಆಹಾರ ಉತ್ಪನ್ನಗಳು ಹಾಗೂ ಬದುಕುವ ನೆಲೆಗಳು ದೊರಕುತ್ತವೆ. ಇದರಿಂದ ಮನುಷ್ಯನಿಗೆ ಇದು ಅಗತ್ಯವೂ ಆಗಿದೆ. ಇಲ್ಲದ ಪಕ್ಷದಲ್ಲಿ ಅವನ ಜೀವನವನ್ನು ಊಹಿಸಿಕೊಳ್ಳಲು ಸಾಧ್ಯವಿಲ್ಲ. ಈ ಕಾರಣವಾಗಿ ಮನುಷ್ಯ ನಿಸರ್ಗದೊಂದಿಗೆ ಪೂರಕ ಸಂಬಂಧವನ್ನು ಹೊಂದುವುದು ಅವನ ಪ್ರಜ್ಞೆಯು ಕುಡಿಯರಲ್ಲಿ ಪೂರಕವಾಗಿರುವುದುನ್ನು ಗುರ್ತಿಸಬಹುದು. ಕುಡಿಯರ ನೆಲೆಯು ಕಿರುಮಲೆ ಮತ್ತು ಹಿರಿಮಲೆಗಳಾಗಿವೆ. ಈ ನೆಲೆಗಳನ್ನು ತಮ್ಮ ಹಾಡಿಗಳಾಗಿಸಿಕೊಂಡು ಕುಡಿಯರು ತಮ್ಮ

---

೬೦. ಶಿವರಾಮ ಕಾರಂತ, ನಂಬಿದವರ ನಾಕ ನರಕ, ಪುಟ –೨೮೮

೬೧. ಕೇಶವ ಶರ್ಮ.ಕೆ, ಬಹುಮುಖಿ, ಪುಟ – ೧೬೮

ಸಂಸ್ಕೃತಿಯನ್ನು ನಿಸರ್ಗ ಸಂಬಂಧಗಳೊಂದಿಗೆ ಜೀವಿಸುತ್ತಿದ್ದಾರೆ. ಕಾರಂತರು ಕುಡಿಯರ ನಿಸರ್ಗ ಸಂಬಂಧವನ್ನು ವಿವರವಾಗಿ ದಾಖಲಿಸುತ್ತಾರೆ.

ಕಿರುಮಲೆಯ ಗುರಿಕಾರ ಕೆಂಚ ಇವನು ಹುಟ್ಟು ನಿಸರ್ಗ ಪ್ರೇಮಿ, ನಿಸರ್ಗವನ್ನು ತನ್ನ ದೈವ ಮಳೆರಾಯ ಮತ್ತು ದೆವ್ವ ಕಲ್ಲುಡನ ನೆಲೆಯನ್ನು ಕಂಡು ಆರಾಧಿಸುತ್ತಾನೆ. ತಿಮ್ಮನ ಮಗ ತಿಪ್ಪ, ಸೊಸೆ ಚಕ್ಕಿ, ಮೊಮ್ಮಗ ಕರಿಯ, ಕೆಂಚನಲ್ಲಿ ಮುಗ್ಧತೆಯನ್ನು ಕಾಣಬಹುದು. ಈತನು ತನ್ನ ಮಗ ತಿಪ್ಪ ತೀರಿಕೊಂಡಾಗ ಇದು ಕಿರುಮಲೆ ದೆವ್ವ ಕಲ್ಲುಡನೇ ಕಾರಣ ಎಂದು ತಿಳಿಯುತ್ತಾನೆ. ಕಲ್ಲುಡನು ಕೋಪಗೊಳ್ಳಲು ಕಿರುಮಲೆ ಮತ್ತು ಹಿರಿಮಲೆಯ ಕುಡಿಯರು ಪ್ರತಿ ವರ್ಷದಂತೆ ಪೂಜೆ ಸಲ್ಲಿಸದೆ ಇರುವುದು ಕಾರಣವೆಂದು ತಿಳಿಯುತ್ತಾನೆ. ಅದಕ್ಕಾಗಿ ಅವನನ್ನು ಬೇಡಿಕೊಳ್ಳಲು ಆ ಬೆಟ್ಟದ ಸೆರಗಿಗೆ ಬಂದ; ಅದರ ಮೈಯಂಚಿನ ಇಳಕಲು ದಾರಿಯಲ್ಲಿ ಮೆಲ್ಲಗೆ ಇಳಿದು ಸಾಗಿದ ಹಾಗೆ ತಿಳಿದು ಬಂದುದೇ ಕಲ್ಲುಡನ ತಾಣಕ್ಕೆ ನಾಲ್ಕು ಸುತ್ತಲೂ ಓಟೆಯ ಮೆಳೆಗಳು, ಅವುಗಳ ಎಡೆಯಲ್ಲಿ ನಾಲ್ಕು ಚಪ್ಪಡಿ ಕಲ್ಲುಗಳಿಂದ ಮಾಡಿದ ಚಿಕ್ಕದೊಂದು ಗೂಡು. ಅದೇನೆ ವಿರಮಿಸಿ, ಕಲ್ಲುಡನಿಗಾಗಿ ಕಾದು ನಿಂತು, ಮುಂದಕ್ಕೆ ಹರಿದು, ಕೆಳಗಿನ ಹಿರಿಯ ತೊರೆಯನ್ನು ಸೇರುತ್ತದೆ. ಕೆಂಚ ನೀರಿನ ಬಳಿಗೆ ಹೋದ. ಮುಖ, ಕಾಲುಗಳನ್ನು ತೊಳೆದುಕೊಂಡ ಗುಡಿಯ ಮುಂದಕ್ಕೆ ಬಂದ, ಮೊಣಕಾಲೂರಿ *"ದೈವವೇ, ಕುಲವನ್ನು ಕಾಯು, ಕೇರಿಯನ್ನು ಕಾಯು, ಮಳೆ, ಬೆಳೆಕೊಡು, ಬದುಕನ್ನು ಹಸನಾಗಿ ಮಾಡು ಎಂದು ಬೇಡಿ ಮುಂದಿನ ಹಾದಿ ಹಿಡಿದ: ಬೆಟ್ಟ ಇಳಿದು ತೊರೆಯ ಮೇಲೆ ಹಾಕಿದ ಸಂಕ ದಾಟಿ, ಬಂಡೆಯಿಂದ ಬಂಡೆಗೆ ಕುಪ್ಪಳಿಸಿ, ಎಂದುರಿನ ಏರುವ ದಾರಿ ಹಿಡಿದು ಹಿರಿಮಲೆಗೆ ಹೋದ"*[೬೨]

ಕೆಂಚನ ಮುಗ್ಧ ಭಕ್ತಿ ಮತ್ತು ಕಲ್ಲುಡನೇ ನಮ್ಮನ್ನೆಲ್ಲಾ ಕಾಪಾಡುವುದು ಮತ್ತು ಮಳೆ, ಬೆಳಕು, ಗಾಳಿ ಎಲ್ಲವನ್ನು ಕೊಡುವ ಅವನೇ ಎಂದು ನಂಬಿರುವವನು. ಅದಕ್ಕಾಗಿ ತನ್ನ ಮಗ ಸತ್ತಾಗ ತಮ್ಮನ್ನು ಕಾಪಾಡು ಎಂದು ಬೇಡಿಕೊಳ್ಳುತ್ತಾನೆ. ಆದರೆ ಅದೇ ಸಮಯಕ್ಕೆ ಸೊಸೆ ಚಕ್ಕಿಯು ಕರಿಯನಿಗೆ ಜನ್ಮ ನೀಡಿರುತ್ತಾಳೆ. ಕಾರಣಾಂತರಗಳಿಂದ ಚಕ್ಕಿಯು ತೀರಿಕೊಂಡಾಗ, ದುಃಖಕ್ಕೆ ಎಡೆಯಿರುವುದಿಲ್ಲ.

ತನ್ನ ಮುಂದಿರುವ ವಂಶದ ಕುಡಿಯನ್ನು ಉಳಿಸಿಕೊಳ್ಳುವುದಕ್ಕಾಗಿ ಮಲೆರಾಯನನ್ನೂ ಬೇಡಲು ಕರಿಯನೊಂದಿಗೆ ಕಾಡು ಮೇಡು ಅಲೆಯುತ್ತಾನೆ. ಆ ಸಮಯದಲ್ಲಿ ಅವನ ನೈಸರ್ಗಿಕ ಸಂಬಂಧವನ್ನು ಕುರಿತು ಕಾರಂತರು ಹೇಳುವ ಪರಿಯಲ್ಲಿ ಆತನ ನಿಸರ್ಗ ಸಂಬಂಧದಲ್ಲಿ ಅವನ ಅನುಭವ ತಿಳಿಯುತ್ತದೆ.

"ಕಾಡು ಸವರಿ ಬೆಟ್ಟದ ಕಡಿದಾದ ದಾರಿಯನ್ನೇರುವ ಸಾಹಸದ ಕೆಲಸ. ಇದರಿಂದ ಮೈಯ ದಣಿವೂ ಅಧಿಕವಾಗುತ್ತಾ ಬಂದು. ಮಾತು ಮೂಲೆಗುಂಪಾಯಿತು. ಕರಿಯ ಮಾತ್ರ ಚಿಗರಿಯಂತೆ ಅಜ್ಜನನ್ನು

೬೨. ಶಿವರಾಮ ಕಾರಂತ, ಕುಡಿಯರ ಕೂಸು, ಪುಟ ೦೬-೦೭

ಹಿಂಬಾಲಿಸಿತ್ತಿದ್ದ, ನಡುನಡುವೆ ನಿಂತು, ನಿಟ್ಟುಸಿರು ಬಿಟ್ಟು ತೆಗೆಯುವ ಭರದಲ್ಲಿ ಆವರನ್ನೂ ಬಾಯಿಯನ್ನು ಬಿಗಿಹಿಡಿದ, ಆ ಕಾಡಿನ ಕತ್ತಲಲ್ಲಿ, ಬಂಡೆಗಳ ಏಣು ಏರುವುದರಲ್ಲಿ ಮನಸ್ಸು, ವಿಸ್ಮಯ ತಾಳಿತು. ಕರಡಿಗಳಿರುವ ಗುಹೆ ಕಾಣುವ ಆಸೆ, ಕುತೂಹಲ ಅವನಿಗೆ: ತನ್ನ ಅಜ್ಜನೂ ಅಂಥ ಗುಹೆಯಲ್ಲಿ ಹಿಂದೆ ವಾಸವಾಗಿದ್ದನೆಂಬ ಬೆರಗು ಬೇರೆ. ಇವೆಲ್ಲ ಆ ಎಳೆಯನ ಹಿಂದಿನ ದಿನದ ದುಗುಡು ದಾರುಣ ದುಃಖವನ್ನು ಮರೆಸಿತು.

ಕೆಂಚ ಆ ಗುಹೆಯ ವೈಭವವನ್ನು ತೋರಿಸುವುದಕ್ಕೆ ಮೊಮ್ಮಗನನ್ನು ಕರೆದುಕೊಂಡು ಬಂದವನಲ್ಲ, ಆತ ಬಂದುದು, ಕುಲದೈವವಾದ ಮಲೆರಾಯನ ನೆನಪಾಗಿ, ಗವಿಯ ಮುಂಭಾಗದ ಒಂದು ಗೋಡೆಯಲ್ಲಿ ಕೊರೆದ ಕಲ್ಲಿನ ಒಂದು ಪದರು ಬೆಳಕಿಗೆ ಹೊಳೆಯುತ್ತಿತ್ತು. ಬೆಳಕಿಂದ ಥಳಿಸುವಾಗ ಅದಕ್ಕೊಂದು ರೂಪು, ಆಕಾರ ಇರುವಂತೆ ಕಾಣುತ್ತಿತ್ತು. ಅದೇ ಅವನು: ಅವನೇ ಮಲೆರಾಯ! ಮುದುಕ ಮಲೆರಾಯನ ಮುಂದೆ ಸಾಷ್ಟಾಂಗವರಗಿದ್ದು, ಮೊಮ್ಮಗನಿಗೂ ಅಡ್ಡ ಬೀಳಲು ಹೇಳಿದ, ಅನಂತರ ಕಲ್ಲರೆಗೆ ತುಸು ದೂರದಲ್ಲಿ ಒಂದು ದೀಪ ಉರಿಸಿದ, ಯಾವುದೇ ಕಾಯಿ ಕೊಬ್ಬು, ನಾರುಗಳನ್ನು ಗುದ್ದಿ ಮಾಡಿದ ಮುಂಬತ್ತಿಯನ್ನು ನಟ್ಟು ಕಡ್ಡಿ ಉರಿಸಿ, ಬೆಳಗಿದ" [೬೩]

ಕಾರಂತರು ಕುಡಿಯರ ಗುರಿಕಾರ ಕೆಂಚನು ನಿಸರ್ಗದೊಂದಿಗೆ ಹೊಂದಿರುವ ಸಂಬಂಧವನ್ನು ಹೀಗೆ ಹೇಳುತ್ತಾರೆ, ಕೆಂಚನ ಭಕ್ತಿಯು ನಿಸರ್ಗದ ನೆಲೆಯಲ್ಲಿಯೇ ಇದೆ. ಅವನ ಭಕ್ತಿಯು ಅನುಭಾವಿಕ ನೆಲೆಯನ್ನು ಒಳಗೊಂಡಿದೆ. ತನ್ನ ಮೊಮ್ಮಗನನ್ನು ಮಲೆರಾಯನ ಬಳಿ ಕರೆದುಕೊಂಡು ಹೋಗುವುದರ ಮೂಲಕ, ಆ ಕಾಡು, ಬೆಟ್ಟಗಳನ್ನು ಹತ್ತಿ ಇಳಿಯುವ ಸಾಹಸವನ್ನು ಕಲಿಸುತ್ತಿದ್ದಾನೆ. ಅಂದರೆ ಈ ಸ್ಥಿತಿಯು ಕಾಡಿನಲ್ಲಿ ವಾಸಿಸುವವರಿಗೆ ಅನಿವಾರ್ಯವೆನಿಸುತ್ತದೆ.

ಕರಿಯ ದೊಡ್ಡವನಾದ ಮೇಲೆ ಕಾಡಿನ ಸಂಬಂಧವನ್ನು ಹಾಗೆಯೇ ಉಳಿಸಿಕೊಳ್ಳುತ್ತಾನೆ. ಕಾರಂತರು ಕರಿಯನ ಪಾತ್ರದ ಮುಖಾಂತರ ಕುಡಿಯರ ನೈಸರ್ಗಿಕ ಸಂಬಂಧವನ್ನು ಪರಿಣಾಮಕಾರಿಯಾಗಿ ಹೇಳುತ್ತಾರೆ. ಕರಿಯ ತನ್ನ ಸಮ ವಯಸ್ಕನಾದ ಬೂದನ ತಂಗಿಯ ಮಗ ಕಾಳನೊಂದಿಗೆ ಸೇರಿ ಬೇಟೆಯನ್ನಾಡುತ್ತಾನೆ, ಇವರಿಬ್ಬರು ಕರಡಿಯ ಗುಹೆಯನ್ನು ನೋಡುತ್ತಾರೆ. ಆನೆಯನ್ನು ಹಿಡಿಯಲು ಪ್ರಯತ್ನಿಸುತ್ತಾರೆ. ನಿಸರ್ಗವನ್ನು ಕಂಡು ರೋಮಾಂಚನಗೊಳ್ಳುತ್ತಾರೆ. ಬೂದನ್ನು ಇಬ್ಬರು *"ಮಾವ, ಎಂದು ಅವನನ್ನು ಅಡಿಗಡಿಗೆ ಸಂಭೋದಿಸುವವರು, ಅವನ ಬೆನ್ನ ಹಿಂದೆಯೇ ಕತ್ತಿ ಕೋಲು ಹಿಡಿದು ಅವರ ಮಲೆಯನ್ನು ಸುತ್ತಾಡುತ್ತಾರೆ. ಮರದ ಈಟಿಗಳನ್ನು ಹಿಡಿದುಕೊಂಡು, ನೆಲವನ್ನು ಕುಕ್ಕುತ್ತ ಒಂದೊಂದು ದಿನ ಮೂರು ಮಂದಿಯೂ ಸೇರಿ ಆಮೆಯ ಶಿಕಾರಿಗೆ ಹೊರಡುತ್ತಾರೆ. ಎರಡು ಮೂರು ಆಮೆ ಕಟ್ಟಿಕೊಂಡು ಸಂಜೆಯ ಒಳಗೆ ಮನೆಗೆ ಬಂದೂ ಸೇರುತ್ತಾರೆ. ಈ ಆಟದಲ್ಲಿ ಕರಿಯನಿಗೂ ಕಾಳನಿಗೂ ತುಂಬಾ ಹುಮ್ಮಸ್ಸು. ಇನ್ನೊಮ್ಮೆ, ಕುಮರಿಯ ಹೊಲಕ್ಕೆ ರಾತ್ರಿ ವೇಳೆ ಕದ್ದು ಬರುವ ಬರ್ಕನ ಶಿಕಾರಿಯ ಕೆಲಸ ಬೂದನಿಗೆ, ಅದರ ಹೆಜ್ಜೆಯ ಜಾಡು ಗುರ್ತಿಸುತ್ತಾನೆ. ಹುಡುಗರಿಗೂ ತೋರಿಸುತ್ತಾನೆ. ಆದು ಎಲ್ಲಿಂದ ಬಂದಿತು ಎಲ್ಲಿಗೆ ಹೋಯಿತು ಎಂದು ಅರಸಿ, ಸುಳಿವು ಹುಡುಕುತ್ತಾನೆ, ನಲಿದಾಡುತ್ತಾನೆ. ಅವುಗಳು ಬರುವ ದಾರಿಯಲ್ಲಿ ತಾಳೆ ಸೋಗೆಯ ನಾರಿನಿಂದ ಉರುಳು ಮಾಡಿ ಇರಿಸಿ, ಉರುಳಿಗೆ ಬಳ್ಳಿಯ ಗಿಡವೊಂದನ್ನು ಬಾಗಿಸಿ ಕಟ್ಟಿ ಹೋಗುತ್ತಾನೆ. 'ಉರುಳಿಟ್ಟ ಸ್ಥಳವನ್ನು ಯಾರಿಗೂ ಹೇಳಬೇಡಿ' ಎಂದು ಹುಡುಗರಿಗೆ ತಿಳಿಸುತ್ತಾನೆ"* [೬೪]

---

೬೩. ಶಿವರಾಮ ಕಾರಂತ,ಕುಡಿಯರ ಕೂಸು, ಪುಟ ೧೩-೧೫

೬೪. ಅದೇ, ಪುಟ ೬೫-೬೬

ಕರಿಯ ಬಾಲ್ಯದಿಂದ ಹಿಡಿದು ತನ್ನ ತಾತ ಕೆಂಚ ಸತ್ತ ನಂತರ, ಗುರಿಕಾರನಾದಾಗಲೂ ತನ್ನ ಬೇಟೆಯ ಹವ್ಯಾಸವನ್ನು ಬಿಟ್ಟುಕೊಡುವುದಿಲ್ಲ. ಅದರೊಂದಿಗೆ ಆ ಮಲೆಯ ಗುಡ್ಡಗಳನ್ನು ಹತ್ತುವುದು ಇಳಿಯುವ ಸಾಹಸವನ್ನು ಮಾಡುತ್ತಾನೆ. ಇದು ಕುಡಿಯರ ಕಾಡು ಸಂಸ್ಕೃತಿ, ಈ ಸಂಸ್ಕೃತಿ ಅವರ ಜನ್ಮದಲ್ಲಿ ಹುಟ್ಟಿ ಬಂದಿರುತ್ತದೆ. ಅದೇ ರೀತಿಯಾಗಿ ಕುಡಿಯರ ಮತ್ತಷ್ಟು ಪಾತ್ರಗಳಾದ, ತುಕ್ರ, ತಿಮ್ಮ, ಬೂದ ಇವರೆಲ್ಲ ಮೀನು, ಕೆಂಬ, ಬರ್ಕ, ಕಾಡುಹಂದಿ ಇವುಗಳ ಬೇಟೆಯಾಡುವುದರ ಮೂಲಕ ಅವರು ನಿಸರ್ಗದೊಂದಿಗೆ ಸಂಬಂಧವನ್ನು ಹೊಂದುತ್ತಾರೆ. ತುಕ್ರ ಒಂದು ದಿವಸ ಕಾಡಿನಲ್ಲಿ ತನ್ನ ಹೆಂಡತಿ ಚೆನ್ನಿಯೊಂದಿಗೆ ಜೇನನ್ನು ಕೀಳುತ್ತಿದ್ದಾಗ ಚೆನ್ನಿಯ ಮೇಲೆ ಕರಡಿದಾಳಿ ಮಾಡುತ್ತದೆ. ಆಗ ತುಕ್ರ ಗುಡ್ಡದ ಮೇಲಿಂದ ಜಿಗಿದು ಕರಡಿಯನ್ನು ಕೊಲ್ಲುತ್ತಾನೆ. ಅಂದಿನಿಂದ ತುಕ್ರ ಕರಡಿ ತುಕ್ರ ಎನಿಸಿಕೊಳ್ಳುತ್ತಾನೆ.

ತುಕ್ರನ ಹೆಂಡತಿ ಚೆನ್ನಿ ಈಗ ಬೂದನ ಹೆಂಡತಿಯಾಗಿದ್ದಾಳೆ. ಇವಳು ಹಿರಿಮಲೆಯ ಕನ್ಯೆ, ಇವಳು ಸಹ ಮೀನಿನ ಬೇಟೆಯನ್ನು ಆಡುತ್ತಾಳೆ. ಬುಟ್ಟಿ ಹೆಣೆಯಲು ಬೀದಿರ ಕಡಿಯಲು ಮರವನ್ನೇರುತ್ತಾಳೆ. ಹೊಳೆಯ ನೀರಿನಲ್ಲಿ ಸ್ನಾನ ಮಾಡುವಾಗ ಅವಳ ಸೌಂದರ್ಯಕ್ಕೆ ತಕ್ಕಂತೆ ಅವಳು ಬಳುಕುತ್ತ ಸ್ನಾನ ಮಾಡುತ್ತಾಳೆ. ನಂತರ ಮೀನಿನ ಬೇಟೆಯನ್ನಾಡುತ್ತಾಳೆ.

ಕೆಂಪಿಯು ಕಾರಂತರು ಚಿತ್ರಿಸಿರುವ ಹೆಣ್ಣಿನ ಪಾತ್ರಗಳಲ್ಲಿ ತುಂಬಾ ಬಲಶಾಲಿ ಮತ್ತು ಆಧುನಿಕ ಪ್ರವೃತ್ತಿಯುಳ್ಳವಳು ಈಕೆಯು ಈಜುವುದು ಕುಮರಿ ಬೇಸಾಯದ ಸಂದರ್ಭದಲ್ಲಿ ಕಾದಂಬರಿ ಉದ್ಧಕ್ಕೂ ಗೆಡ್ಡೆ ಗೆಣಸುಗಳ ಸಂಗ್ರಹ ಹೊಳೆಯಲ್ಲಿ ಕೆಲಸದಲ್ಲಿ ನಿರತಳಾಗುವುದರ ಮೂಲಕ ಅವಳು ನಿಸರ್ಗದೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದುತ್ತಾಳೆ.

ಕುಡಿಯರ ಜೀವನವು ಕಾಡಿನಲ್ಲಿ ನಡೆಯುತ್ತದೆ. ಅದು ಅವರ ಬದುಕಿಗೆ ಆಧಾರ. ಇದರಿಂದ ಅವರ ಸಂಸ್ಕೃತಿ ಅವರ ಸಾಮಾಜಿಕ ನೆಲೆಯನ್ನು ಒಳಗೊಂಡಿದೆ. ನಿಸರ್ಗ ಅವರಿಗೆ ಎಲ್ಲಾ ರೀತಿಯ ಸೌಲಭ್ಯಗಳನ್ನು ನೀಡಿದೆ. ನಿಸರ್ಗದಲ್ಲಿ ಅವರಿಗೆ ನೀರಿನ ಮೂಲ, ಕಾಡಿನ ಉತ್ಪನ್ನಗಳ ಮೂಲಗಳು ಇವೆ. ಅವರ ಆರ್ಥಿಕ ಮೂಲಗಳು ನಿಸರ್ಗದಲ್ಲಿದ್ದು, ಇದರಿಂದ ಅವರ ಜೀವನ ಸುಗಮವಾಗಿ ನಡೆಯುತ್ತಿದೆ.

"*ಕುಡಿಯರ ಜೀವನ ವಿಧಾನವನ್ನು ಕುರಿತು ಟಿ.ಪಿ.ಅಶೋಕಅವರು, ಕಾಡಿನ ಮಕ್ಕಳಾದ ಕುಡಿಯವರು ಇಲ್ಲಿ ಪ್ರಕೃತಿಯ ಒಂದು ಭಾಗವೆಂಬಂತೆ ಬದುಕುತ್ತಿದ್ದಾರೆ. ಇವರಿಗೆ ತಮ್ಮದೇ ಆದ ಜೀವನ ವಿಧಾನಗಳಿವೆ. ಕುಡಿಯರ ಜಗತ್ತು ಸ್ವಯಂ ಪೂರ್ಣ ಜಗತ್ತು. ಅದಕ್ಕೆ ತನ್ನದೇ ಆಲಯವಿದೆ. ವಿನ್ಯಾಸವಿದೆ. ವಿರೋಧಾಭಾಸಗಳೂ ಇವೆ. ಇವರನ್ನು ಕಾಯುವ ದೈವ ಇದೆ: ಬದುಕಲು ಹಲವು ದಾರಿಗಳನ್ನು ಸಂಮೃದ್ಧವಾದ ಆರಣಾವಾ ತೋರಿಸಿಕೊಟ್ಟಿದೆ*"[೬೫] ಎನ್ನುತ್ತಾರೆ. "*ಮಳೆ ಕಳೆದು, ತೊರೆ ತುಂಬಿ ಹರಿಯುವಾಗಲೂ ಕುಡಿಯರಿಗೆ ಆದರಿಂದ*

---

೬೫. ಟಿ.ಪಿ.ಅಶೋಕ (ಸಂ). ಈ ಶತಮಾನದ ನೋಟ ಶಿವರಾಮ ಕಾರಂತ, ಪುಟ –೧೬೬

ಲಾಭವಿದ, ಯಾವುದೋ ಮದ್ದಿನ ಬೇರನ್ನು ಅರೆದು ನೀರಲ್ಲಿ ಕಲಿಸಿ ತೇಲಿಬಿಟ್ಟರಾಯಿತು. ಮುಂದೆ ಹತ್ತು ನೂರು ಗಜ ದೂರಗಳಲ್ಲಿ ಷಗೊಂಡ ನೀರಿನಲ್ಲಿ ಬದುಕಲಾರದೆ ಸಾಯುವ ಮೀನುಗಳ ಅವರಿಗೆ. ಹೀಗಾಗಿ ಬೆಳೆಯುತ್ತಾರೆ; ಕುಮರಿಯಲ್ಲಿ ಭತ್ತ, ರಾಗಿ, ಎರಡು ಸೊಂಪಾಗಿ ಬೆಳೆಯುತ್ತವೆ."[೬೬]

ಕುಡಿಯರು ಹೀಗೆ ಜೈವಿಕವಾಗಿ ತಮ್ಮನ್ನು ನಿಸರ್ಗದೊಂದಿಗೆ ಗುರುತಿಸಿಕೊಳ್ಳುತ್ತಾ, ಈ ಹಸಿರಿನಿಂದ ಅವರ ಉಸಿರು ಉಸಿರಾಡುತ್ತದೆ. ಆದ್ದರಿಂದಲೇ ನಾವೆಲ್ಲರು ಹಸಿರನ್ನು ಉಳಿಸಿ ಬೆಳೆಸಬೇಕಾಗಿದೆ. ಬೆಳೆಸಿದಾಗ ನಮ್ಮ ನಾಡು ದೇಶವೇ ಅಲ್ಲದೆ ಇಡೀ ಪ್ರಪಂಚ ಪ್ರಾಣಿ ಸಂಕುಲ ಸುಖದಿಂದ ಬದುಕುತ್ತದೆ.

'ಮರಳಿ ಮಣ್ಣಿಗೆ' ಕಾದಂಬರಿಯಲ್ಲಿ ಕಾರಂತರು ಮೂರು ತಲೆಮಾರಿನ ಕತೆಯನ್ನು ಹೇಳುತ್ತಾ ಈ ಕಾದಂಬರಿಯಲ್ಲಿ ನಿಸರ್ಗದೊಂದಿಗೆ ಬದುಕುವ ಪಾತ್ರಗಳೆಂದರೆ ರಾಮ ಐತಾಳ, ಪಾರೋತಿ, ಸರಸೋತಿ, ಸತ್ಯಭಾಮೆ, ರಾಮ ಪ್ರಮುಖರು.

ರಾಮ ಐತಾಳರು ಪುರೋಹಿತರು, ಇವರು ಮೊದಲ ತಲೆಮಾರನ್ನು ಪ್ರತಿನಿಧಿಸುತ್ತಾರೆ. ಇವರು ಕೋಡಿಯಿಂದ ಬೇರೆ ಕಡೆ ಪೌರೋಹಿತ್ವಕ್ಕಾಗಿ ಹೊರಟಾಗ ನದಿಯನ್ನು ದಾಟಬೇಕಾಗುತ್ತದೆ. ಆ ಮೂಲಕ ಅವರು ದಿನ ನಿತ್ಯ ನಿಸರ್ಗದೊಂದಿಗೆ ಸಂಬಂಧವನ್ನು ಹೊಂದುತ್ತಾರೆ. ಈ ಕುರಿತು ಕಾರಂತರು ಚಿತ್ರಣ ಹೀಗಿದೆ.

"ಜೇಷ್ಠ ಮಾಸದಲ್ಲೇ ಈ ಪಾಟಿ ನೆಲೆ ತುಂಬಿದ್ದೇ ಇಲ್ಲ. ಒಮ್ಮೊಮ್ಮೆ ನಟ್ಟಿ ಮುಗಿದ ಮೇಲೆ ನೆರೆ ಬಂದು ಇಳಿಯುವುದುಂಟು, ಇದು ನಟ್ಟಿಗೂ ಬಿಡದಂತೆ ನೆರೆ ನಿಂತಿದೆ ಎಂದು ಮೇಲೆ ನೆರೆ ಬಂದು ಇಳಿಯುವುದುಂಟು. ಇದು ನಟ್ಟಿಗೂ ಬಿಡದಂತೆ ನೆರೆ ನಿಂತಿದೆ. ಎಂದ ಮೇಲೆ ಏನು ಮಾಡಬೇಕು? ಗದ್ದೆ ಹೊಲಗಳೆಲ್ಲವೂ ಒಂದೇ ನೀರಿನ ಕಂಪ, ಬೆಂಗರಿಗೆ ನದಿಯ ನೆರೆ ನೀರಿನ ಒಂದು ಸೆರಗು ಚಾಚಿದರೆ. ಇನ್ನೊಂದು ಸೆರಗು ಮೂಡು ರಸ್ತೆಗೆ ಹಾಸಿಗೆ ಎನ್ನುತ್ತಾರೆ. ಹೊಳೆಯಲ್ಲಿ ಬರಿಗಾಲಲ್ಲಿ ದಾಟುವ ಮಾತಿರಲಿ, ದೋಣಿಯೂ ಸಾಗುವಂತಿಲ್ಲ, ಏನು ಆ ನೀರಿನ ಒಯ್ಲು! ಆ ಬೆಳಿಗ್ಗೆ ರಾಮ ಐತಾಳ ಹೊಳೆ ದಾಟಿ ಆಚೆ ಗ್ರಾಮದ ಪೌರೋಹಿತ್ಯಕ್ಕೆ ಹೋಗಬೇಕಾಗಿತ್ತು. ಮೂರು ಮೂರು ಬಾರಿ ಹೊಳೆಯ ಬದಿಯಲ್ಲಿ ಬಂದು ನಿಂತು, ನಾನು ಹೋಗುವುದಿಲ್ಲ. ನಾನೇನು ಈ ಒಟ್ಟಿನಲ್ಲಿ ಪ್ರಾಣ ಬಿಡುವುದೇ ಎಂದರು.

ಐತಾಳರು ಅಂಥ ಹೆಡ್ಡಾರಲ್ಲ, ಈಜನ್ನು ಬಲ್ಲರು. ಆದರೆ, ಈಜಿದರೆ ಮೂರು ರೂಪಾಯಿಕೊಟ್ಟು ಆ ವರ್ಷವೇ ಕೊಂಡ ದಾವಳಿ ಉಪ್ಪು ನೀರಿಗೆ ಬಿದ್ದು ಹಾಳಾದರೆ ಅದನ್ನು ನಾಗಪ್ಪ ಹೊಳ್ಳದ ಕುಟುಂಬದವರು ಕೊಡುತ್ತಾರೆಯೇ? ಅಂತು ಇಂತು ನಿಂತು, ಈಜಿ, ಕಾಲು ನೆಲಕ್ಕೆ ತಡೆದು, ನದಿಯ ಸಾಲು ತಪ್ಪಿ ಈಚೆ ದಂಡೆಗೆ ಬಂದರು."[೬೭]

ರಾಮ ಐತಾಳರು ಅಂತು ಇಂತು ದಡಸೇರುವುದರಲ್ಲಿ ಜೀವನದ ಪ್ರಶ್ನೆ ಅಡಗಿದೆ. ತನ್ನ ಜೀವನವನ್ನು ಪಣಕ್ಕಿಟ್ಟು ನದಿಯನ್ನು ಈಜಲು ಕಾರಣ ತಮ್ಮ ಹೆಂಡತಿ ಮಕ್ಕಳನ್ನು

೬೬. ಶಿವರಾಮ ಕಾರಂತ, ಕುಡಿಯರ ಕೂಸು, ಪುಟ -೬೧
೬೭. ಶಿವರಾಮ ಕಾರಂತ, ಮರಳಿ ಮಣ್ಣಿಗೆ, ಪುಟ-೦೯-೧೦

ಪೋಷಿಸುವುದೇ ಆಗಿದೆ. ಹಾಗಂತ ರಾಮ ಐತಾಳರಿಗೇನು ಜಮೀನು ಇಲ್ಲವೆಂದಲ್ಲ; ಜಮೀನು ಇದ್ದು ಇದನ್ನು ಸೂರ್ಯ ಗೇಣಿಗೆ ಮಾಡುತ್ತಿದ್ದಾನೆ. ಹೀಗೆ ರಾಮ ಐತಾಳರು ತಮ್ಮ ಜೀವನನ್ನು ಕಟ್ಟಿಕೊಂಡಿರುವುದು ಪ್ರಮುಖವಾಗಿದೆ. ಕೋಡಿಯ ರಾಮ ಐತಾಳ ಮನೆಯ ಪಕ್ಕದ ಮನೆ ಶೀನಮಯ್ಯನ ಮನೆ. ಈತನು ತನ್ನ ಮಕ್ಕಳು ಬೆಂಗಳೂರಿನಿಂದ ಕಳುಹಿಸುತ್ತಿದ್ದ ಹಣದಿಂದ ಕೋಡಿ ಸುತ್ತ ಮುತ್ತಲಿನ ಜಮೀನನ್ನು ಕೊಳ್ಳುವುದರ ಮೂಲಕ ನಿಸರ್ಗದೊಂದಿಗೆ ಸಂಬಂಧವನ್ನು ಹೊಂದುತ್ತಾನೆ.

ಕೋಡಿಯು ಕಡಲಿನ ಸಮೀಪವಿರುವ ಊರು. ಈ ಊರಿನ ಸಮೀಪ ಹರಿಯುವ ನದಿಯಲ್ಲಿ ಜನರು ಮಳೆಗಾಲದಲ್ಲಿ ಸೌದೆಯನ್ನು ಸಂಗ್ರಹಿಸುತ್ತಾರೆ. ಆ ಮೂಲಕ ಬದುಕಿನ ಅಗತ್ಯ ವಸ್ತುವನ್ನು ತಮ್ಮದಾಗಿಸಿಕೊಳ್ಳುತ್ತಾರೆ. ಈ ಸಂದರ್ಭದಲ್ಲಿ ಜನರು ನಿಸರ್ಗದೊಂದಿಗೆ ಮಾಡುವ ಸಾಹಸ ರೋಮಾಂಚನವನ್ನುಂಟು ಮಾಡುತ್ತದೆ. ರಾಮ ಐತಾಳ, ಸರಸೋತಮ್ಮ, ಪಾರೋತಮ್ಮ ಇವರು ಕಟ್ಟಿಗೆಯನ್ನು ಸಂಗ್ರಹಿಸುವ ಸಾಹಸದಲ್ಲಿ ನಿಸರ್ಗದೊಂದಿಗೆ ಮಾನವ ಮಾಡುವ ಹೋರಾಟವನ್ನು ಗುರ್ತಿಸಬಹುದಾಗಿದೆ. ಈ ಕುರಿತು ಜಿ.ಎಸ್.ಅಮೂರರವರು "*ಇಲ್ಲಿ ಬಾಳುವ ಎಲ್ಲಾ ವ್ಯಕ್ತಿಗಳೂ–ರಾಮೈತಾಳ, ಸರಸೋತಿ, ಪಾರೋತಿ, ಸತ್ಯಭಾಮೆ, ರಾಮ, ಶೀನ, ನಾರಾಯಣಯ್ಯ ಇತ್ಯಾದಿ – ತಮ್ಮ ಪರಿಸರದೊಡನೆ ಹೊಂದಿಕೊಳ್ಳುವುದರಲ್ಲಿಯೇ ಧನ್ಯತೆಯನ್ನು ಪಡೆಯುತ್ತಾರೆ*"[೬೮] ಎಂದು ಹೇಳಿದ್ದಾರೆ.

ಆದ್ದರಿಂದ ಇವರು ತಮ್ಮ ಪರಿಸರದಲ್ಲಿ ದಿನವೂ ಮಳೆ ಬೀಳುತ್ತಿದ್ದರೂ ಸಹ ತಮ್ಮ ಪರಿಸರದೊಂದಿಗೆ ಹೊಂದಿಕೊಂಡು ಜೀವಿಸುತ್ತಾರೆ.

"*ಎಂಥ ಮಳೆಯೇ ಬರುತ್ತಿರಲಿ, ಲೆಕ್ಕಿಸದೆ, ಬೆಳಗಿನ ಜಾವವೇ ಮನೆಯಿಂದ ಹೊರಟು ಸಮುದ್ರದ ದಂಡೆಯಲ್ಲಿ ಕಾದು ನಿಂತರೆ, ಎದುರಿಗೆ ವರುಣ ದೇವರು ಏನು ತರುತ್ತಾರೆ ಎಂದು ಕಾಣುತ್ತದೆ. ಮರದ ಗೆಲ್ಲು ಬರುವುದುಂಟು, ದೊಡ್ಡ ಮೋಪೇ ಬರುವುದುಂಟು. ಕಣ್ಣಿಗೆ ಮರದ ಕುಡಿ ಕಂಡೊಡನೆ ನೀರಲ್ಲಿ ಧುಮುಕಿ, ತೆರೆಗಳಲ್ಲಿ ಏರಿ, ಇಳಿದು ಬರುತ್ತದೆ. ಆದರೆ ಆಗ ಹತ್ತಾರು ನರ ಬಕಗಳು ಅದಕ್ಕೆ ಕೈ ಹಾಕಿ. 'ನನ್ನದು ತನ್ನದು' ಎನ್ನುವುದಿಲ್ಲವೆ? ಹಾಗಾಗಿ, ಮುಂದೆ ನೀರಲ್ಲಿ ಈಜಿ ಹಾರ ಬಲ್ಲವರಿಗೆ ಮಾತ್ರವೇ ಕಟ್ಟಿಗೆಯ ಲಾಭ. ಈ ಕೆಲಸದಲ್ಲಿ ಪಾರೋತಿಗಿಂತ ಸರಸೋತಮ್ಮ ಗಂಡಿನ ಗಂಡು, ಹೀಗೆ ಕಟ್ಟಿಗೆಯ ಸಂಪಾದನೆಯ ಕೆಲಸಕ್ಕೆ ಐತಾಳರೂ ಹೋಗುತ್ತಾರೆ. ಅವರು ಮೂರು ಮಂದಿ ಭಟ್ಟರು ನಿಂತರೆ, ತಿಂಗಳ ಕೆಲಸ ಹೈದಿನೈದು ದಿವಸಗಳಲ್ಲಿ ಆಗದೇನು?*"[೬೯]

ರಾಮ ಐತಾಳ ಮತ್ತು ಕುಟುಂಬದವರು ದಿನ ನಿತ್ಯ ನಿಸರ್ಗದೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿ ತಮ್ಮ ಜೀವನವನ್ನು ನಡೆಸಿಕೊಳ್ಳುತ್ತಾರೆ. ಇವರು ಭೂಮಿ, ನದಿ, ಕಡಲು, ಕಾಡು ಇತ್ಯಾದಿ ನಿಸರ್ಗದ ಮೂಲಗಳನ್ನು ನಂಬಿ ಬದುಕುತ್ತಾರೆ. ಹೀಗೆ ಕಾರಂತರು ಮರಳಿ ಮಣ್ಣಿಗೆ ಕಾದಂಬರಿಯಲ್ಲಿ ಮೊದಲ ತಲೆಮಾರಿನ ಜನಾಂಗವನ್ನು ನಿಸರ್ಗದೊಂದಿಗೆ ಬದುಕನ್ನು

೬೮. ಜಿ.ಎಸ್.ಅಮೂರ, ಕನ್ನಡ ಕಥನ ಸಾಹಿತ್ಯ, ಪುಟ - ೧೩೦

೬೯. ಶಿವರಾಮ ಕಾರಂತ, ಮರಳಿ ಮಣ್ಣಿಗೆ, ಪುಟ -೧೬

ಕಟ್ಟಿಕೊಂಡರು ಎನ್ನುತ್ತಾರೆ. ಇದು ಸತ್ಯ ಸಂಗತಿಯಾಗಿದೆ ಏಕೆಂದರೆ ರಾಮೈತಾಳರ ಕಾಲಕ್ಕೆ ನಿಸರ್ಗ ಅನಿವಾರ್ಯವಾಗಿತ್ತು ಆದ್ದರಿಂದ ಅವರು ನಿಸರ್ಗದಲ್ಲಿ ಹುಟ್ಟಿ ಬೆಳೆದು ಅಲ್ಲಿಯೇ ಸಾಯುತ್ತಾರೆ.

'ಶನೀಶ್ವರ ನೆರಳಿನಲ್ಲಿ' ಕಾದಂಬರಿಯು ಕಾರಂತರ ಅನ್ವೇಷಣೆಯ ಕಾದಂಬರಿ, ಕಾರಂತರು ಇಲ್ಲಿ ಸ್ವತಃ ನಿಸರ್ಗದ ವ್ಯಕ್ತಿಯಾಗಿ ಪಾತ್ರವನ್ನು ವ್ಯಕ್ತಿಸುತ್ತಾರೆ, ಇಲ್ಲಿ ನಿಸರ್ಗದೊಂದಿಗೆ ಬದುಕುವ ಪಾತ್ರಗಳಿಗೆ ಸಂಬಂಧಿಸಿದಂತಹ, ಈ ಕಾದಂಬರಿಯ ಮುನ್ನುಡಿಯಲ್ಲಿ 'ಈ ಕಥೆಯಲ್ಲಿ ಬರುವ ವ್ಯಕ್ತಿಗಳು ನನಗೆ ಎಲ್ಲೆಲ್ಲಿಯೂ ಸಿಕ್ಕಿದವರು. ಅವರೆನ್ನೆಲ್ಲ ಸೀತಾನದಿಯ ಜಲಪಾತವೊಂದರ ಮಗ್ಗುಲ ಹಳ್ಳಿಯಲ್ಲಿ ತಂದು ನೆಟ್ಟು ನಾನು ಅವರೊಂದಿಗೆ ಸೇರಲು ಪ್ರಯತ್ನಿಸಿದ್ದೇನೆ' ಹೀಗೆ ಕಾರಂತರು ಹೇಳಿರುವ ಸಂಗತಿಯನ್ನು ಪರಿಶೀಲಿಸಿದಾಗ ಇದು ಸತ್ಯವಾಗಿದೆ. ನಿಸರ್ಗದೊಂದಿಗೆ ಸಂಬಂಧ ಹೊಂದಿರುವ ಪಾತ್ರಗಳೆಂದರೆ ನಾಗಪ್ಪ, ಕುಡುಬಿ, ಶಿವರಾಮ ಕಾರಂತ, ಕಾವೇರಮ್ಮ, ಪಾಟಾಳಿ ಶಿವಣ್ಣಯ್ಯ, ಪರಮೇಶ್ವರಯ್ಯ ಅಡಿಗಳು ಮುಂತಾದವರು, ಇವರು ನಿಸರ್ಗದೊಂದಿಗೆ ಅವಿನಾಭಾವ ಸಂಬಂಧವನ್ನು ಹೊಂದಿದ್ದಾರೆ. ಇದರೊಂದಿಗೆ ಭೂಮಿಯನ್ನು ತಮ್ಮ ಜೀವನದ ನೆಲೆಗಳಾಗಿ ಮಾಡಿಕೊಂಡು ಜೀವಿಸುತ್ತಾರೆ. ಕಾರಂತರು, 'ಶನೀಶ್ವರ' ಎಂಬ ಮಾತು ನೊರೊಕ್ಕಲು ಊರಿಗೆ ಸಂಬಂಧಿಸಿರುವಂತೆ ಇದ್ದರೂ ಸಹ, ಇಲ್ಲಿನ ಜನರು ಸಹ ಶನೀಶ್ವರರಂತೆ' ಇರುವಂತವರು ಎನ್ನುತ್ತಾರೆ. ಇಲ್ಲಿ ನಿಗೂಢವಾಗಿ ಕಾರ್ಯ ಚಟುವಟಿಕೆಗಳು ನಡೆಯುತ್ತಿರುತ್ತವೆ.

ಕಾರಂತರು ಈ ಊರಿನ ವಿಚಾರ ತಿಳಿಯಲು ಹೋದಾಗ, ಅವರಿಗೆ ಪಾಟಾಳಿ ಶಿವಣ್ಣಯ್ಯನು ಊರನ್ನು ತೋರಿಸುತ್ತಾನೆ. ಈ ಊರು ಕಾರಂತರಿಗೆ '*ಆ ಊರಲ್ಲಿ–ಅಡಿಗಡಿಗೂ ಗತ ವೈಭವವೆಂಬುದು ಗಿಡಗಳ ಹಂದರಲ್ಲಿ ಹುದುಗಿಕೊಂಡಿತ್ತು. ಅಲ್ಲಲ್ಲಿ ಉರುಳಿ ಬಿದ್ದಿರುವ ಹಲವಾರು ಮನೆಗಳು, ಒಂದೊಂದು ಸಂಸಾರ ಜೀವನದ ಹಿಗ್ಗು ಕುಗ್ಗುಗಳ ಪಾಡನ್ನು ಅದುಮಿ ಹಿಡಿದಿದ್ದು ಹೊರಕ್ಕೆ ಕಾಣಿಸಲು ಬಿಡುತ್ತಿರಲಿಲ್ಲ. ಅವೆಲ್ಲವೂ ಚೇತನವಾಗಿ. ಊರಲ್ಲ ಹುಟ್ಟಿ ಬೆಳೆದ ಮಕ್ಕಳಿಂದ ತುಂಬಿರುವ ಅವರಲ್ಲಿನ ಉತ್ಸಾಹ. ಬರಿಯ ಮೂರು ತಾಸುಗಲ್ಲಿಯೇ ಮುಗಿಯುತ್ತಿರಲಿಲ್ಲ. ಆ ಮೊರದಿಂದ ಮುಗುಚಿ ಬಿದ್ದ ಹೆಮ್ಮರದ ಕೆಳಗೆ ನಾಶಗೊಂಡ ಅದೊಂದು ಮನೆ, ಯಾವುದೋ ಒಂದು ಮನುಷ್ಯ ಪಕ್ಷಿಯ ನವಿಲಿನ ಪಂಜರವಾಗಿತ್ತು. ಅವರು ಇವೆಲ್ಲವನ್ನು ನನಗೆ ತೋರಿಸುತ್ತ ಸರಿದಂತೆ–ಹಾಳು ಬಿದ್ದ ಹೊಲ, ಕಾಡು ಪಾಲಾದ ತೋಟ, ಅಳಿದುಳಿದ ಕೊಗಳು. ಗೋಡೆ. ತಳಪಾಯಗಳೆನ್ನೆಲ್ಲ ತೋರಿಸುವಾಗ, ಅವು ಹಿಂದಣ ಜೀವನವನ್ನು ಕಣ್ಮುಂದೆ ಹರಿಸಿದಾಗ ಶಿವಣ್ಣನವರ ಮನಸ್ಸಿನಲ್ಲಿಯೂ ಹುಟ್ಟು, ಸಾವುಗಳ ಧಾರುಣ ಚಿತ್ರಣ ಕಾಣಿಸಿಕೊಂಡುದರಿಂದಲೋ ಅವರು ಒತ್ತಾಯದಿಂದ ತಮ್ಮ ಮನಸ್ಸಿಗೆ ತಾವು ಕಲಿಸಿಕೊಟ್ಟ 'ತ್ವಮೇವ ಶರಣ'! ಎಂಬ ಭಾವ ತಳಮಳಕ್ಕಿಡಾತು.*"[20]

ಕಾರಂತರು ಅಪೂರ್ವವಾದ ವನಸಿರಿಯ ನಡುವೆ ಇರುವ ಬದುಕನ್ನು ಕಂಡು ಕೊಳ್ಳುತ್ತಾರೆ. ಕಾವೇರಮ್ಮ ಪರಮೇಶ್ವರ ಅಡಿಗವರ ತಾಯಿ ಈಕೆಯು ಮಹಾನ್ ದೈವಭಕ್ತಿ. ತನ್ನ ಮಕ್ಕಳು ವಯಸ್ಸಿನಲ್ಲಿ ತುಂಬ ದೊಡ್ಡ ವ್ಯಕ್ತಿಗಳೆನಿಸಿದರು ಆಕೆಯ ತನ್ನ ಆಸ್ತಿಯನ್ನು ಹಿಸ್ಸೆ

೨೦. ಶಿವರಾಮ ಕಾರಂತ, ಶನೀಶ್ವರ ನೆರಳಲ್ಲಿ, ಪುಟ–೩೬

ಮಾಡಿರುವುದಿಲ್ಲ. ಆದ್ದರಿಂದ ತಾಯಿ ಮತ್ತು ಅಣ್ಣ ತಮ್ಮಂದಿರ ನಡುವೆ ವಾಗ್ವಾದಗಳು ನಡೆಯುತ್ತವೆ. ಈ ನಡುವೆ ಒಕ್ಕಲು ಪಾಟಾಳಿ ಶಿವಣ್ಣಯ್ಯ ತನ್ನ ತಾಳ್ಮೆಯ ಸ್ವಾಭಾವದಿಂದ ಕಾವೇರಮ್ಮನ ಮನವೊಲಿಸಿ ಜಮೀನನ್ನು ಹಿಸ್ಸೆ ಮಾಡಿಸುತ್ತಾರೆ. ಇಲ್ಲಿ ಕಾರಂತರು 'ಬೆಟ್ಟದ ಜೀವದ' ಶಿವರಾಮಯ್ಯನ ಪಾತ್ರವನ್ನು ನಿರ್ವಹಿಸುತ್ತಾರೆ. ಈ ರೀತಿಯಾಗಿ ಕಾರಂತರು ಈ ಕಾದಂಬರಿಯಲ್ಲಿ ಪಾತ್ರಗಳ ಚಿತ್ರಣ ಮಾಡಿದ್ದಾರೆ.

ಒಕ್ಕಲು ಪಾಟಾಳಿ ಶಂಭು, ನಾಗಪ್ಪ, ಕಾವೇರಮ್ಮ, ನಾರಾಯಣ ಅಡಿ, ಪರಮೇಶ್ವರ ಅಡಿ ಇವರು ಭೂಮಿಯನ್ನು ಪಡೆದು ನಿಸರ್ಗದೊಂದಿಗೆ ಸಂಬಂಧವನ್ನು ಹೊಂದುತ್ತಾರೆ. ಅದಕ್ಕಾಗಿ ಕಾವೇರಮ್ಮನು ತಾನು ಬದುಕಿರುವಾಗಲೇ ಈ ಬಗ್ಗೆ ಕಾರಂತರ ಬಳಿ ತನ್ನ ಮನೋಇಚ್ಛೆಯನ್ನು ಹೇಳಿಕೊಳ್ಳುತ್ತಾಳೆ. ಇದರಿಂದ ಇಲ್ಲಿ ಬರುವ ಭೂಮಿಯನ್ನು ಪಡೆಯಲು ಮತ್ತು ಜೀವನ ನಡೆಸಲು ಇದು ಎಷ್ಟು ಅವಶ್ಯಕವೆಂದು ತಮ್ಮ ಪಾತ್ರಗಳ ಮುಖಾಂತರವೇ ವ್ಯಕ್ತಪಡಿಸುತ್ತಾರೆ. ಇದರಿಂದ ಕಾವೇರಮ್ಮ ತನ್ನಲ್ಲಿದ್ದ ಆಸ್ತಿಯನ್ನು ಪಾಲುಮಾಡುತ್ತಾಳೆ. ಕಾವೇರಮ್ಮ ಭೂಮಿಯನ್ನು ಹಂಚುವ ಬಗೆಯಲ್ಲಿ ಆಕೆಯ ಜ್ಞಾನ ತಿಳಿಯುತ್ತದೆ.

"ಇಲ್ಲಿನ ಹುಟ್ಟುವಳಿ ಇನ್ನೂರೈವತ್ತು ಮಾನಿಗೆ ಅಕ್ಕಿಯಾಗುವಷ್ಟು ಹೊಲಗದ್ದೆಗಳಿರುವುದು, ತೋಟದ ಬಡಗು ಸೆರಗಿನಲ್ಲೊಂದಿಷ್ಟು, ತೋಟವನ್ನು ದಿನನಿತ್ಯವೂ ಚೆನ್ನಾಗಿ ನೋಡಿಕೊಳ್ಳುವವರು ಬೇಕು. ಅದನ್ನು ಮೊದಲಿಗೆ ನೀವು ಊರಲ್ಲಿರುವ ಪರಮೇಶ್ವರನಿಗೆ ಹಾಕಿ, ಚಂದ್ರನಿಗೂ, ಸೋಮನಾಥನಿಗೂ ಅವರಿಬ್ಬರೂ ಈಗ ಬೇಸಾಯ ಮಾಡುತ್ತಿರುವ ಜಾಗವನ್ನು ಮೂಲಗೇಣಿಗೆ ಕೊಟ್ಟ ಹಾಗೆ ಮಾಡುವ-ಅದರ ಗೇಣಿಯ ದರ ಏನು- ಎಂದು ಶಿವಣ್ಣ ಪರಮೇಶ್ವರ ಯೋಚಿಸಿ ಹೇಳಲಿ, ಆ ಹುಟ್ಟುವಳಿಯನ್ನು ಇನ್ನು ಮುಂದೆ ಅವರು ನಮಗೆ ಕೊಡುತ್ತಾ ಬರಲಿ, ಆದರೆ ಅದು ನನ್ನ ಮಕ್ಕಳಿಗೆ ಬೇಡ: ಲಕ್ಷ್ಮೀನಾರಾಯಣ ದೇವರಿಗೆ ಸಲ್ಲುವಂತಾಗಲಿ, ಶಿವಣ್ಣನಿಗೆ ಕೊಟ್ಟ ಮೂರು ಮುಡಿಗದ್ದೆಗೂ ಒಂದು ಗೇಣಿ ನಿಶ್ಚಯ ಮಾಡಿ: ಅದರ ಉತ್ಪನ್ನದಿಂದ ಅವನು ಶನೀಶ್ವರ ದೇವರಿಗೆ ವಾರಕ್ಕೊಮ್ಮೆ ಮಂಗಳಾರತಿ ಉತ್ಸವ ಮಾಡಿಸಿ ಬರಲಿ, ಶಿವಣ್ಣ ಆ ಜಮೀನನ್ನು ಬಿಟ್ಟ ಕಾಲಕ್ಕೆ ಅದು ದೇವರದ್ದಾಗಲಿ, ಇನ್ನು ತೋಟದ ತೆಂಗು ಸೆರಗಿನ ಜಮೀನಿನಿಂದ ನೂರು ಮುಡಿಯಷ್ಟು ಅಕ್ಕಿ ಉತ್ಪನ್ನ ಬಂದೀತು. ಅದು ನನ್ನ ಮಗ ನಾರಾಯಣನಿಗಿರಲಿ, ಬಡಗಣ ಸೆರಗು ದೊಡ್ಡವನಿಗೆ."[೭೧] ಕಾವೇರಮ್ಮ ತನ್ನ ಮಕ್ಕಳಿಗೆ ಮತ್ತು ತನ್ನ ನಂಬಿದವರಿಗೆ ಎಂದೂ ಮೋಸ ಮಾಡಲಿಲ್ಲ, ಇದು ಆಕೆಯ ಮಾನವೀಯತೆ, ತನ್ನನ್ನು ನಂಬಿದ ಒಕ್ಕಲುಗಳಿಗೆ ಹಾಗೂ ತನ್ನ ಮಕ್ಕಳಿಗೆ ಆಸ್ತಿಯನ್ನು ಕೊಟ್ಟು ಅವರ ನೆಲೆ ನಿಲ್ಲಲು ಅನುವು ಮಾಡಿಕೊಡುತ್ತಾಳೆ. ಇಲ್ಲಿ ಬರುವ ಎಲ್ಲಾ ಪಾತ್ರದಾರಿಗಳು ನಿಸರ್ಗದೊಂದಿಗೆ ಬದುಕುತ್ತಾರೆ. ಅದರಲ್ಲೂ ಭೂ ಒಡೆತನಕ್ಕಾಗಿ ಹವಣಿಸುತ್ತಾರೆ.

'ಮುಗಿದ ಯುದ್ಧ' ಕಾದಂಬರಿಯ ಮುಖ್ಯ ಪಾತ್ರದಾರಿ ಅಚ್ಚುತ ತೀರ ಬಡವ. ಈತನ ತಂದೆ ಕೊಬಾರಿನ ಕೃಷ್ಣರಾಯ, ತಾಯಿ ಲಕ್ಷ್ಮಮ್ಮ ಅಚ್ಚುತನ ಅಕ್ಕ ಸೀತೆ. ಅಚ್ಚುತನ ಸ್ನೇಹಿತರೆಂದರೆ

೭೧. ಅದೇ, ಪುಟ-೧೮೮

ಮಾಮುಂಜಿ, ನಾಗರಾಜರು. ಇವರು ಪುತ್ತೂರಿನಲ್ಲಿ ಒಂದೇ ತರಗತಿಯಲ್ಲಿ ಓದುತ್ತಿದ್ದವರು. ನಿಸರ್ಗವನ್ನು ಕಂಡು ತೃಪ್ತಿ ಪಡುತ್ತಾರೆ. ಅದರೊಂದಿಗಿನ ಅವರ ಸಂಬಂಧವು ಅವಿನಾಭಾವ-ದಾಗಿರುತ್ತದೆ. ನಾಗರಾಜ ಮತ್ತು ಅಚ್ಚುತ ಮಂಜುಳ ಗುಡ್ಡಕ್ಕೆ ಬರುತ್ತಾರೆ. ಅಲ್ಲಿ ಅವರು ನಿಸರ್ಗವನ್ನು ಕಂಡು ಸಂತೋಷ ಪಡುತ್ತಾರೆ.

ಅಚ್ಚುತ ಸುತ್ತಲಿನ ವಾತಾವರಣ ನೋಡುತ್ತಾನೆ. ಅದರಲ್ಲಿ ಬಿಳಿಯ ತೇಲು ಮೋಡಗಳ ಚಲನೆಯನ್ನು ದೃಷ್ಟಿಯಿಂದ ಹಿಂಬಾಲಿಸುತ್ತಾನೆ. ಅವು ಮೆಲ್ಲಗೆ ಸರಿದು ಮೂಡಣ ದಿಗಂತದ ಅಂಚಿನಲ್ಲಿ ಕುರಿಯ ಮಂದೆಯಂತೆ ಕೂಡುವುದನ್ನು ಕಾಣುತ್ತಾನೆ. 'ಅಲ್ಲಲ್ಲಿ ಗಾಳಿ ಬೀಸುತ್ತಿರಬೇಕು, ತೀರ ಎತ್ತರದಲ್ಲಿ ಇಲ್ಲಿ ಊರಿನಲ್ಲಿ, ಇಷ್ಟು ಎತ್ತರಕ್ಕೂ ಗಾಳಿ ಸುಳಿವಿಲ್ಲ' ಎಂದು ಹೇಳುತ್ತಾನೆ, ಅವನಿಗೆ ಹಿಂದಿನ ದಿನದ ಸೊಬಗು ಇಂದಿನಿಂದ ಅಷ್ಟೊಂದು ಭಿನ್ನವಾದಂತೆ ಕಾಣುತ್ತದೆ. ಇಂದೇನು ಗಾಳಿಯ ಸುಳಿವಿಲ್ಲ? ದೂರದ ಗುಡ್ಡಗಳಲ್ಲಿ, ಬಿಸಿಲಿಗೆ ಬಿಸಿಗಾಳಿ ನೀರ ತೆರೆಯದಂತೆ ಓಡುತ್ತಿದೆಯಲ್ಲ! ನಾನಿದ್ದಲ್ಲಿ, ಗಾಳಿಯ ಸುಳಿವಿಲ್ಲ, ಎಲ್ಲ ಗುಡ್ಡ ಕುಡಿಗಳು ಕರಿ ತಲೆಯವುಗಳಾಗಿವೆ.

ಅಚ್ಚುತ, ನಾಗರಾಜ ಮತ್ತು ಮಾಮಂಜಿ ಓದುವ ಸಮಯದಲ್ಲಿ ನಿಸರ್ಗದೊಂದಿಗೆ ಸಂಬಂಧವನ್ನು ಹೊಂದಿ ಬದುಕುತ್ತಾರೆ. ನಂತರ ಈ ಮೂವರು ಓದಿನ ನಂತರ ಊರಿಗೆ ಹಿಂತಿರುಗಿ ವ್ಯವಸಾಯ ಕ್ಷೇತ್ರದಲ್ಲಿ ದುಡಿಮೆ ಮಾಡುತ್ತಾರೆ. ಆದರೆ ಅಚ್ಚುತ ಕೃಷಿ ಚಟುವಟಿಕೆಯೊಂದಿಗೆ ಮಾಸ್ತರಿಕೆ ಮಾಡುತ್ತಾನೆ. ಸಾಲಗಾರನಾಗಿ ತನ್ನ ಇದ್ದ ಆಸ್ತಿಯನ್ನು ಮಾರಿಕೊಂಡು ಬೀದಿಪಾಲಾಗಿ ನಂತರ ಕಾಯಿಲೆಗೆ ತುತ್ತಾಗಿ ಮರಣ ಹೊಂದುತ್ತಾನೆ. ಈತನ ಪತ್ನಿ ರುಕ್ಮಿಣಿ ಪತಿಯೊಂದಿಗೆ ಮನೆ ಕೆಲಸ ಮಾಡುತ್ತಾ ಭೂಮಿಯೊಂದಿಗೆ ಅವಿನಾಭಾವ ಸಂಬಂಧ ಹೊಂದುತ್ತಾಳೆ.

ಅಚ್ಚುತನ ಅಕ್ಕ ಸೀತೆಯನ್ನು ಬಂಟ್ವಾಳದ ಸಮೀಪದ ಒಂದು ಹಳ್ಳಿಗೆ ಕೊಟ್ಟಿದ್ದರು, ಈಕೆಯ ಗಂಡ ನರಸಿಂಹಯ್ಯ, ನರಸಿಂಹಯ್ಯನ ಸಹೋದರ ಶಂಕರಯ್ಯ ಮತ್ತು ನಾರಾಯಣಯ್ಯರು, ಇವರ ನಡುವೆ ಯಾವಾಗಲು ಆಸ್ತಿಗಾಗಿ ಕಲಹ ನಡೆಯುತ್ತಿರುತ್ತದೆ. ಇವರ ಕುಟುಂಬಕ್ಕೆ ವರಮಾನವು ಭೂಮಿಯಿಂದ ಬರುತ್ತಿದೆ; ಎಂದು ಕಾರಂತರು ಹೇಳುತ್ತಾರೆ. ಈ ರೀತಿಯಾಗಿ ನಿಸರ್ಗದ ಮೂಲಸ್ಥಾನವಾದ ಭೂಮಿಯನ್ನು ನಂಬಿ, ಅದರೊಂದಿಗೆ ಬದುಕುವ ಪಾತ್ರಗಳು ಕಾರಂತರ ಕಾದಂಬರಿಗಳಲ್ಲಿ ಹೆಚ್ಚಾಗಿ ಮೂಡಿ ಬಂದಿವೆ.

'ಉಕ್ಕಿದ ನೊರೆ' ಕಾದಂಬರಿಯಲ್ಲಿ ಬರುವ ಪಾತ್ರಗಳಾದ ಶೀನಭಟ್ಟರು. ಪಾಟಾಳಿ ಶಂಭು, ಇವನು ಚೆನ್ನಗಿರಿಯಲ್ಲಿ ಹೋಟೆಲ್‌ನ್ನು ಮಾಡಿಕೊಂಡು ನಂತರ ಸಂಪಾದಿಸಿದ ಹಣದಿಂದ ಆಸ್ತಿಯನ್ನು ಬಾರಕೂರಿನಲ್ಲಿ ಕೊಂಡುಕೊಳ್ಳುತ್ತಾ, ಅದೇ ರೀತಿ ಭದ್ರಗಿರಿಯ ವೆಂಕ, ಇವರ 'ಅಕ್ಕ' ಚೆನ್ನಕ್ಕ ಗೋಪಾಲ ಶ್ಯಾನುಭೋಗರ ಸಹಾಯದಿಂದ ಭದ್ರಗಿರಿಯಲ್ಲಿ ಆಸ್ತಿಯನ್ನು ಖರೀದಿಸಿ

ಮುಂಬೈಯಿಂದ ಬಂದು ವಾಸಿಸುವುದು. ಗುಲಾಬಿ ಪಾಟಾಲಿ ಶಂಭುವಿನ ಪ್ರೇಯಿಸಿಯಾಗಿ ಆಸ್ತಿಯ ಕನಸ್ಸನ್ನು ಕಾಣುವುದು ಮತ್ತು ಶೀನಭಟ್ಟರ ಮಗ ವಾಸುಭಟ್ಟ "*ತಮ್ಮ ಅಪ್ಪನ ಆದರ್ಶವನ್ನು ಮೆಚ್ಚಿಕೊಂಡು, ತನ್ನ ಸಮಾಧಿಯೂ ಸಹ ಪವಿತ್ರ ಜನ್ಮ ಭೂಮಿಯಲ್ಲೇ ಆಗಬೇಕೆನ್ನುವುದನ್ನು ಮೊದಲೇ ನಿರ್ಧರಿಸಿಕೊಂಡ ಹಾಗಿದೆ. 'ಸ್ವರ್ಗಾದಪಿ ಗರೀಯಿಸಿ' ಎಂಬ ಭಾವನೆ*"[೨೨] ಕಾರಂತರದು ಹೀಗೆ 'ಉಕ್ಕಿದ ನೊರೆ' ಕಾದಂಬರಿಯಲ್ಲಿ ಎಲ್ಲಾ ಪಾತ್ರಗಳನ್ನು ಭೂಮಿಯೊಂದಿಗಿನ ಸಂಬಂಧದಲ್ಲಿ ಗುರ್ತಿಸುತ್ತಾರೆ.

'ಚೋಮನದುಡಿ' ಕಾದಂಬರಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕೂಲಿಕಾರರು ಮಿಂಗೇಲ ದೊರೆಗಳ ಕಾಫಿ ತೋಟಗಳಲ್ಲಿ ದುಡಿಯುವುದರ ಮೂಲಕ ನಿಸರ್ಗದೊಂದಿಗೆ ಸಂಬಂಧವನ್ನು ಹೊಂದುತ್ತಾರೆ. ಈ ಕಾದಂಬರಿಯ ಪ್ರಮುಖ ಪಾತ್ರಗಳಾದ ಸಂಕಪ್ಪಯ್ಯ, ಚೋಮ, ಬೆಳ್ಳಿ, ಗುರುವ, ಚನಿಯ, ಮನ್ವೇಲರು ಪ್ರಮುಖರು.

ಈ ಕಾದಂಬರಿಯ ಆಶಯಕ್ಕೆ ಸಂಬಂಧಿಸಿದಂತೆ, "*ಬೋಗನಹಳ್ಳಿಯ ಚೋಮ ಹೊಲೆಯ, ಆತನಿಗೆ ಎಲ್ಲರಂತೆ ಉದರಂಭರಣದ ವಿವೇಚನೆಯಿರುವುದು. ಚೋಮನಿಗೂ ಶ್ರಮ ಮಾಡುವ ಹಂಬಲ ಬೇಸಾಯ ಮಾಡುವ ಆಸೆ. ಧನಿಯರೇ ದಯಪಾಲಿಸಿದರೆ, ಆದರೆ ಚೋಮ ಹೊಲೆಯ. ಇದೇ ಗಾದೆ (ಚಿಂಚಿ)ಯ ಸಾರ, ಸಂಕಪ್ಪಯ್ಯನವರು ಒಂದು ವೇಳೆ ಮನಸ್ಸು ಮಾಡಬಹುದು. ಆದರೂ ಅವರ ತಾಯಿ ಅಬ್ಬಾ ಹೊಲೆಯರಿಗೆ ಬಂದಸೊಕ್ಕೇ ಎಂದು ಶಪಿಸುವಳು..*"[೨೩] ಕಾರಂತರು ದೃಷ್ಠಿ 'ಚೋಮನದುಡಿ'ಯಲ್ಲಿ ಸಾಮಾಜಿಕ ನೆಲೆಯಲ್ಲಿ ಸುಧಾರಣಾ ನೆಲೆಯನ್ನು ಬಯಸುವುದಾಗಿದೆ. ಸಂಕಪ್ಪಯ್ಯನನ್ನು ಭೂಮಿಯನ್ನು ಕೇಳುವಂತೆ ಮಾಡುತ್ತದೆ. ಆದರೆ ಪರಂಪರಾಗತವಾದ ಸಾಮಾಜಿಕ ಕಟ್ಟು ಪಾಡುಗಳಾದ ಜಾತಿ ಇದಕ್ಕೆ ಅಡ್ಡಬರುತ್ತದೆ.

ಚೋಮ ಸಂಕಪ್ಪಯ್ಯನ ಹೊಲದಲ್ಲಿ ದುಡಿಯುವುದರ ಮೂಲಕ ನಿಸರ್ಗದೊಂದಿಗೆ ಸಂಬಂಧ ಹೊಂದಿ ಬದುಕುವ ಪಾತ್ರವಾಗಿ ಕಂಡು ಬರುತ್ತಾನೆ. ಚೋಮನ ದುಡಿಮೆಯನ್ನು ಅವಲಂಬಿಸಿ ಬದುಕುವ ಪಾತ್ರವಾಗಿ ಸಂಕಪ್ಪಯ್ಯ ಕಂಡು ಬರುತ್ತಾನೆ.

ಈಗ ಮಳೆಗಾಲ ಪ್ರಾರಂಭವಾಗಿದೆ. ನಿಷ್ಕರುಣೆಯಿಂದ ಮಳೆ ಎಡೆ ಬಿಡದೆ ಬಡಿಯುತ್ತಲೇ ಇದೆ. ಅದರಲ್ಲೇ ಬೆಳ್ಳಿಯೂ, ಅವಳ ತಮ್ಮಂದಿರೂ ಸೊಪ್ಪನ್ನು ತರುವುದಕ್ಕೆ ಹೋಗ ಬರಬೇಕು. ಮಳೆಗಾಲದಲ್ಲಿ ದೂರಕ್ಕೇನೂ ಹೋಗಬೇಕಿಲ್ಲ: ಮನೆಯ ಸುತ್ತ ಮುತ್ತ ಎಲ್ಲಿ ಸವರಿದರೂ ಸೊಪ್ಪೇ, ಇತ್ತ ಹೊಲಗಳಲ್ಲಿ ನೀರು ನಿಲ್ಲಲ್ಲು ತೊಡಗಿದೆ. ಗದ್ದೆಗಳನ್ನೆಲ್ಲ ಉತ್ತು ಅಗೆಯನ್ನು ನೆಡಲು ಸಿದ್ದತೆಯಾಗಬೇಕು. ಎಲ್ಲೆಲ್ಲಿಯೂ ಕೂಲಿಗಳ ಅಭಾವ ಏಕೆಂದರೆ, ಎಲ್ಲರ ಬೇಸಾಯವೂ ಒಂದೇ ಸಮಯದಲ್ಲಾಗಬೇಕು, ಇಷ್ಟು ದಿನ ಒಮ್ಮೆಗೆ ಜಡಿ ಮಳೆ ಬೀಳತೊಡಗಿದ್ದರಿಂದ ಪ್ರತಿ ಮನೆಯಲ್ಲಿ ನೆಗಡಿ, ಶೀತ, ಜ್ವರವೆಂದು ಮಲಗಿದ್ದಾರೆ. ಸುದೈವದಿಂದಲೋ. ದುರ್ದೈವದಿಂದಲೋ ಚೋಮನ

೨೨. ಶಿವರಾಮ ಕಾರಂತ, ಉಕ್ಕಿದ ನೊರೆ, ಪುಟ –೬೬

೨೩. ಟಿ.ಪಿ.ಅಶೋಕ(ಸಂ), ಈ ಶತಮಾನದ ನೋಟ ಶಿವರಾಮ ಕಾರಂತ, ಪುಟ – ೨೫

ಮನೆಯಲ್ಲಿ ಕಾಯಿಲೆ ಹೆಸರಿಲ್ಲ. ಸದಾ ನರಳುತ್ತಾ ಬಿದ್ದಿರುವ ನೀಲ, ಕಾಳರೂ ಚುರುಕಿನಿಂದ ತಿರುಗಾಡಲು ಸಮರ್ಥರಾಗಿದ್ದಾರೆ. ಬೆಳ್ಳಿ ಅವಸರವೂ ಹೇಳ ತೀರದು, ಸೊಪ್ಪು ತರುವುದು, ಅಡುಗೆ ಮಾಡುವುದು, ಧನಿಯರ ಮನೆಗೆ ಓಡುವುದು ನಾಟಿ ಕೆಲಸ ಪ್ರಾರಂಭವಾಯಿತು.

"ಚೋಮನೂ ಅವಸರದಿಂದ ಓಡಾಡುತ್ತಿದ್ದಾನೆ. ಅವನದೇ ಎತ್ತಿನ ಜೋಡಿಯನ್ನು ಪ್ರಥಮ ಬಾರಿಗೆ ಆತ ನೊಗಕ್ಕೆ ಕಟ್ಟಿದ್ದಾನೆ. ಮಳೆ ಬರುತ್ತಿದ್ದರೂ ಲಕ್ಷಿಸದೇ, ತನ್ನ ಧಣಿಯ ಹೊಲವನ್ನು ಉಳುತ್ತಿದ್ದಾನೆ. ಅವನ ಜತೆಯಲ್ಲಿ ಇನ್ನೂ ಕೆಲವು ಆಳುಗಳನ್ನು ಹಿಡಿದಿದ್ದಾರೆ."[೭೪]

ಕಾರಂತರು ಚೋಮನ ಪಾತ್ರದಲ್ಲಿ ಗುಲಾಮತನದ ನೆಲೆಯಲ್ಲಿ ಅವನು ನಿಸರ್ಗದೊಂದಿಗಿನ ಸಂಬಂಧವನ್ನು ಕಲ್ಪಿಸಿದ್ದಾರೆ. ಏಕೆಂದರೆ ಚೋಮ ಸಂಕಪ್ಪಯ್ಯನ ಆಳು, ಅದೇ ರೀತಿಯಾಗಿ ಬೆಳ್ಳಿಯು ಸಂಕಪ್ಪನಯ್ಯನವರಿಗೆ ಸೊಪ್ಪನ್ನು ಕಾಡಿನಲ್ಲಿ ಕಡಿದು ತಂದು ಹಾಕುವ ಮೂಲಕ ಆಕೆ ನಿಸರ್ಗದೊಂದಿಗೆ ಬದುಕುತ್ತಾಳೆ. ಇದರಿಂದ ಧನಿಯ ಬಳಿ ಆಕೆಗೆ ಆ ದಿನದ ಗಂಜಿಗೆ ಬೇಕಾದ ಧಾನ್ಯ ಸಿಗುತ್ತದೆ. ಆದರೆ ಇಲ್ಲಿ ನೆನಪಿಸಬೇಕಾಗಿರುವುದು, ಧಾನ್ಯವು ಬಡವರ ಬೆವರು ಸುರಿಸಿ ಬೆಳೆದ ಬೆಳೆಯಿಂದ ಬಂದಿರುವುದೇ ಆಗಿದೆ. ಈ ಮೂಲಕ ಸಂಕಪ್ಪಯ್ಯ ನಿಸರ್ಗದೊಂದಿಗೆ ಬದುಕುತ್ತಾನೆ.

ಚೋಮನ ಮಕ್ಕಳಾದ ಗುರುವ, ಚನಿಯ, ಮಿಂಗೇಲ ದೊರೆಗಳ ಕಾಫಿ ತೋಟಗಳಲ್ಲಿ ದುಡಿಯುವುದರ ಮೂಲಕ ತಮ್ಮ ಸಂಬಂಧವನ್ನು ನಿಸರ್ಗದೊಂದಿಗೆ ಸ್ಥಾಪಿಸಿಕೊಳ್ಳುತ್ತಾರೆ. ಆದರೆ ಇಲ್ಲಿ ಅವರಿಗೆ ಈ ದುಡಿತ ಅನಿವಾರ್ಯವಾಗಿದೆ, ಏಕೆಂದರೆ ಮಿಂಗೇಲ ದೊರೆಗಳಲ್ಲಿ ಅವರ ತಂದೆ ಚೋಮ ಮಾಡಿರುವ ಸಾಲವಿದೆ. ಅದನ್ನು ತೀರಿಸುವ ಅನಿವಾರ್ಯವಿದೆ. ಹೀಗೆ ಕಾರಂತರು ಈ ಕಾದಂಬರಿಯಲ್ಲಿ ಎಲ್ಲಾ ಪಾತ್ರಗಳನ್ನು ಭೂಮಿಯೊಂದಿಗಿನ ಸಂಬಂಧದಲ್ಲಿ ಗುರುತಿಸುತ್ತಾರೆ.

ಮೂಕಜ್ಜಿಯ ಕನಸುಗಳು ಕಾದಂಬರಿಯು ಕಾರಂತರಿಗೆ ಹೆಸರು ತಂದು ಕೊಟ್ಟಂತ ಕಾದಂಬರಿ ಈ ಕಾದಂಬರಿಯಲ್ಲಿನ ಪಾತ್ರಗಳು ಅನಂತರಾಯ, ಮಂಜುನಾಥ, ಮೂಕಜ್ಜಿ, ಜನಾರ್ಧನ, ಸುಬ್ರಾಯ ಅಣ್ಣು ನಾಯ್ಕ ಪ್ರಮುಖರು. ಈ ಕಾದಂಬರಿಯ ಕುರಿತು ಅನೇಕ ವಿಮರ್ಶಕರು ನಾನಾ ವಿಧದಲ್ಲಿ ವಿಮರ್ಶೆ ಮಾಡಿದ್ದಾರೆ. ಜಿ.ಎಸ್. ಅಮೂರ ಅವರು *"ಮೂಕಜ್ಜಿಯ ಮೂಲಕ ಕಾರಂತರು ಮನುಷ್ಯನ ಆಚಾರವಿಚಾರಗಳನ್ನು ವಸ್ತು ನಿಷ್ಠವಾಗಿ ನೋಡುವ ಅವಕಾಶವನ್ನೊದಗಿಸುವ ಪರಿಪ್ರೇಕ್ಷವೊಂದನ್ನು ಸೃಷ್ಟಿಸಿದ್ದಾರೆ"*[೭೫] ಎಂದಿದ್ದಾರೆ.

ಈ ಹಿನ್ನೆಲೆಯಲ್ಲಿ ಕಾರಂತರು ಮೂಕಜ್ಜಿಯ ಮೂಲಕ ಆಚಾರ, ವಿಚಾರಗಳನ್ನು ವಸ್ತು ನಿಷ್ಠವಾಗಿ ನೋಡಿದ್ದರು ಸಹ ಆ ವಸ್ತು ನಿಷ್ಠತೆಯಲ್ಲಿ ನಿಸರ್ಗದೊಂದಿಗೆ ಹೊಂದಿರುವ ಸಂಬಂಧವು ತುಂಬಾ ಗಮನಾರ್ಹವಾದ ಅಂಶವೆಂದು ಹೇಳಬಹುದಾಗಿದೆ. ಸುಬ್ರಾಯ ಸಂಶೋಧನಾ

೭೪. ಶಿವರಾಮ ಕಾರಂತ, ಚೋಮನದುಡಿ, ಪುಟ-೪೩

೭೫. ಜಿ.ಎಸ್.ಆಮೂರ, ಕನ್ನಡ ಕಥನ ಸಾಹಿತ್ಯ ಕಾದಂಬರಿ, ಪುಟ - ೧೭೦

ಮನಸ್ಸುಗಳ್ಳವನು. ಅವನು ಕಾಡನ್ನು ತನ್ನ ಸ್ನೇಹಿತ ಜನಾರ್ಧನನೊಂದಿಗೆ ಸುತ್ತಿ ಅರಿಯುವುದರ ಮೂಲಕ ನಿಸರ್ಗದೊಂದಿಗೆ ಸಂಬಂಧವನ್ನು ಹೊಂದಿ ಬದುಕುತ್ತಾನೆ. ಇಲ್ಲಿ ಜನಾರ್ಧನನ ಪಾತ್ರ ಮುಖ್ಯವಾಗಿರುತ್ತದೆ. ಸುಬ್ರಾಯ ಈ ಕಾದಂಬರಿಯಲ್ಲಿ ಮುಖ್ಯ ಪಾತ್ರಧಾರಿಯಾಗಿ ನಿರೂಪಕನಾಗುತ್ತಾನೆ. ಇವನು ಕಾಡಿನಲ್ಲಿರುವ ಪುರಾತನ ಗುಹೆಗಳನ್ನು ಕಾಣಲು ಹಾಗೂ ಆ ಗುಹೆಗಳಲ್ಲಿರುವ ಪುರಾತನ ಜನರು ವಾಸ ಮಾಡಿರುವ ಕುರುಹುಗಳನ್ನು ಕಂಡು ಹಿಡಿಯಲು ಹೋಗುತ್ತಾನೆ. ಕಾಡಿನಲ್ಲಿ ವಾಸಿಸುವ ಕುಡಿಬಿಯರ ಅಣ್ಣ ನಾಯ್ಕನನ್ನು ಕರೆದುಕೊಂಡು ಹೊರಡುತ್ತಾನೆ. ಈ ಬಗ್ಗೆ ಸುಬ್ರಾಯನು ಮೂಡೂರಿ ಸೆರಗು ದಾಟಿದರೆ ಕುಡುಬಿಯ ಮನೆಗಳಿವೆ. ಅವರಿಗೆ ಕಾಡಿನ ಸಂದುಗೊಂದು ತಿಳಿದಿರುತ್ತದೆ. ಹಾಗೆಯೇ..... ಅಲ್ಲಿಂದಲೇ ಮನೆಯ ಮೂಡಣಕ್ಕಿರುವ ಹಾದಿಯನ್ನು ಹೊಕ್ಕೆವು. ಅದನ್ನು ದಾಟಿದರೆ ಮುಂದೆ ಸರಿಯಾದ ಕಾಡಿನ ಸೆರಗು ಬರುತ್ತದೆ. ಆದರೆ ನಡುವಣ ಕಿರುದಾರಿಯಲ್ಲಿ ಎರಡು ಮೈಲು ದೂರ ನಡೆದು ಹೋದ ಮೇಲೆ ಒಂದು ಚಿಕ್ಕ ಬೆಣವಿದೆ. ಅಲ್ಲಿ ನಾಲ್ಕು ಕುಡುಬಿಯರ ಮನೆಗಳಿವೆ. ಬೇಕಾದ ಅಂಚಿನಲ್ಲಿ ನಿಂತು ನಾನು 'ಕೋಕ್‌ಕೋಕ್' ಎಂದು ಎರಡು ಬಾರಿ ಕೂಗು ಹಾಕಿದೆ. ನನ್ನ ಧ್ವನಿ ಕೇಳಿ ಮನೆಯಿಂದ ಅಣ್ಣು ನಾಯ್ಕ ಹೊರಕ್ಕೆ ಬಂದು ದೂರದಲ್ಲಿ ನಿಂತ. ನನ್ನನ್ನು ಕಂಡು.... 'ಕತ್ತಿ ತಂದದ್ದು ಒಳ್ಳೆಯದಾಯಿತು. ಕೋವಿ ಯಾತಕ್ಕ'? ಕೇಳಿದೆ.

'ಏನಾದರೂ ಸಿಗಬಾರದು ಅಂತಿಲ್ಲವಲ್ಲ'

'ಹುಲಿಗಿಲಿ ಉಂಟೇ'?

'ಇರಬಾರದೆಂದಿಲ್ಲವಲ್ಲ ಕಡವೆಯೋ, ಕೆಮ್ಮವೋ ಸಿಕ್ಕಿದರೆ ಒಂದು ಸಾರಿ ಹಾರಿಸಬಹುದು.

'ಅದಕ್ಕೆಲ್ಲ ಪುರಸೊತ್ತಿಲ್ಲ ನೋಡು, ಒಂದು ಸ್ಥಳ ನೋಡಲಿಕ್ಕೆ ನಾವು ಹೊರಟಿದ್ದೇವೆ ನಾಗನ ಕಾಲು ಬರೆಗೆ ತಾಗಿ ಅಲ್ಲೆಲ್ಲೋ ಋಷಿಗಳು ತಪಸ್ಸು ಮಾಡಿದ ಗುಹೆ ಉಂಟಂತಲ್ಲ' ಎಂದೆ.

'ಗುಹೆ ಘಟ್ಟದ ಬರೆಯ ಬುಡದಲ್ಲಿ ಹತ್ತಾರು ಇದ್ದಾವು: ಇವೆ. ಅಂದರೆ ಉಂಟು ದೂರಕ್ಕೆ ನಡೆಯಬೇಕು, ಸಣ್ಣವನಾಗಿದ್ದಾಗ ಹೋಗಿದ್ದೆ, ಒಮ್ಮೆ ಅಲ್ಲಿಗೆ: ಅದರ ದಿಕ್ಕು ಗೊತ್ತುಂಟು ಅನ್ನಿ, ಮೂಗಿನ ತುದಿ ಕಾಣುತ್ತ ಮೂಡಲಿಗೆ ಹೋದರೆ ಸಿಕ್ಕುವುದೇ ಅದು. ಒಂದು ಮೂಟೆಯಲ್ಲಿ ಬೂದಿಯ ರಾಶೀಕಂಡದ್ದು ನೆನಪುಂಟು'

"ಅಲ್ಲಿಗೆ ಕರೆದುಕೊಂಡು ಹೋಗು ಎಂದ ಜನ್ನ. ಮುಂದೆ ಅವನು ಹೋದದ್ದೇ ದಾರಿ. ಕಾಡಿನ ಜಾಡು ಅಷ್ಟೊಂದು ಕಾಣಿಸುತ್ತಿರಲಿಲ್ಲ. ಅಣ್ಣು ಕಣ್ಣಿಗೆ ಇದಿರಾದ ಗಿಡಗಳ ಅಡರುಗಳನ್ನು ಸವರಿ, ಮೈ ಬಗ್ಗಿಸಿ, ಬಗ್ಗಿ, ನುಸುಳಿ ಸರಸರ ಹೋದರೆ, ಅವನ ಹಿಂದಕ್ಕೆ ನಾವು ಹೋಗುತ್ತಿದ್ದೆವು. ಅವನು ಚುರುಕು ನಮಗೆ ಬರಲಾರದು."[೭೬]

ಜನಾರ್ಧನ. ಸುಬ್ರಾಯ ಮತ್ತು ಅಣ್ಣುನಾಯ್ಕರು ನಿಸರ್ಗವನ್ನು ಅವಲಂಬಿಸಿದ್ದಾರೆ. ಆದರೆ ಅವರ ಅವಲಂಬನೆಯಲ್ಲಿ ವ್ಯತ್ಯಾಸ ಕಾಣುತ್ತೇವೆ. ಅಣ್ಣುನಾಯ್ಕನಿಗೆ ಕಾಡೇ ಸರ್ವಸ್ವ ಆದರಿಂದಲೇ

೭೬. ಶಿವರಾಮ ಕಾರಂತ, ಮೂಕಜ್ಜಿಯ ಕನಸುಗಳು, ಪುಟ ೪೯-೫೦

ಅವನ ಜೀವನ. ಅದಕ್ಕಾಗಿ ಅವನಿಗೆ ಕಾಡಿನ ಮೂಲೆ ಮೂಲೆಯ ಪರಿಚಯವಿದೆ. ಆ ಮೂಲಕ ಅವನು ನಿಸರ್ಗದೊಂದಿಗೆ ಸಂಬಂಧವನ್ನು ಹೊಂದಿ ಬದುಕುತ್ತಾನೆ ಮತ್ತು ಈ ಮಾತಿಗೆ ಈ ಕುಡಿಬಿಯರ ಹಟ್ಟಿಯ ಜನರು ಹೊರತಲ್ಲ. ಆದರೆ ಜನಾರ್ಧನ ಮತ್ತು ಸುಬ್ರಾಯನಲ್ಲಿ ಆಧುನಿಕತೆಯ ಮನಸ್ಸು ಮತ್ತು ಆ ಸಂಸ್ಕೃತಿಯ ನೆಲೆಯೆ. ಅದಕ್ಕಾಗಿ ಅವರು ಕಾಡನ್ನು ಮತ್ತು ಅದರ ನಿಗೂಢತೆಯನ್ನು ಅರಿಯಲಾರರು. ಈ ಕಾರಣವಾಗಿ ತಮ್ಮ ಸಂಶೋಧನಾ ಶೋಧನೆಗಾಗಿ ಅಣ್ಣುನಾಯ್ಕನನ್ನು ಅವಲಂಬಿಸುತ್ತಾರೆ. ಈ ಮೂಲಕ ಕಾಡಿನೊಂದಿಗೆ ತಾತ್ಕಾಲಿಕವಾಗಿ ಸಂಬಂಧ ವನ್ನು ಹೊಂದುತ್ತಾರೆ. ಆದರೆ ಅವರು ಮೂಡೂರಿನಲ್ಲಿ ವ್ಯವಸಾಯ ಮಾಡುವ ಮೂಲಕ ಬದುಕನ್ನು ಕಟ್ಟಿಕೊಂಡು ನಿಸರ್ಗವನ್ನು ಅವಲಂಬಿಸಿ ಬದುಕುತ್ತಾರೆ.

ಈ ಮೂಲಕ ಕಾರಂತರು 'ಮೂಕಜ್ಜಿಯ ಕನಸುಗಳು' ಕಾದಂಬರಿಯಲ್ಲಿ ಸುಬ್ರಾಯನನ್ನು ಕುರಿತು ಆತನು ನಿಸರ್ಗದ ನೆಲೆಯಲ್ಲಿ ಚೆಲುವು ಕಾಣುತ್ತಿರುವ ಮತ್ತು ಸಂಶೋಧನೆಯನ್ನು ಕೈಗೊಂಡಿರುವುದನ್ನು ಹೇಳುತ್ತಾ, ಮೂಕಜ್ಜಿಯು ವಿಸ್ಮಯ ನೆಲೆಯನ್ನು ಹೇಳುತ್ತಾಳೆ. ಒಂದು ಸಲ ಸುಬ್ರಾಯ ಮೂಕಜ್ಜಿಯನ್ನು 'ಓಕುಳು' ಹೊಂಡದ ಕತೆಯನ್ನು ಕೇಳಿದಾಗ, ಅಜ್ಜಿಯು ಮೊಗೇರರ ನಿಸರ್ಗ ಸಂಬಂಧವನ್ನು ಹೇಳುತ್ತಾಳೆ. ಇದು ಕಾರಂತರ ನೈಸರ್ಗಿಕ ದೃಷ್ಟಿಯು ಹೌದು. ಏಕೆಂದರೆ ಕಾರಂತರು ವಿವಿಧ ಜನರನ್ನು ಕಂಡವರು. ಅವರ ಸಂಸ್ಕೃತಿಯನ್ನು ಅರಿತವರು. ಆದ ಕಾರಣವಾಗಿ ಮೋಗೇರರ ಸಂಸ್ಕೃತಿ ಮತ್ತು ಅವರು ನಿಸರ್ಗವನ್ನು ಅವಲಂಬಿಸಿ ಬದುಕುವ ನೆಲೆಗಳನ್ನು ಹೇಳುತ್ತಾರೆ. ಈ ಮಾತುಗಳನ್ನು ಮೂಕಜ್ಜಿಯ ಮಾತಿನ ಮೂಲಕ ತರುವುದು ಓದುಗರಲ್ಲಿ ಆಕೆಯ ಮಾನಸಿಕ ಸಾಮರ್ಥ್ಯವನ್ನು ಕುರಿತು ಚಿಂತಿಸುವಂತೆ ಮಾಡುತ್ತದೆ.

"ಮೋಗೇರರಿಗೆ ಈ ಊರಲ್ಲೇನು ಕಸುಬು? ಅವರ ಹುಟ್ಟು ಕಸುಬು ಬೇಸಾಯವಲ್ಲ, ಅವರು ಕೆಲವು ತಲೆ ಮಾರುಗಳಿಂದಲೂ ಇಲ್ಲಿಗೆ ಬಂದು ನೆಟ್ಟಿ ಬೇಸಾಯ ಮಾಡುತ್ತಿದ್ದಾರೆ ನಿಜ. ಅವರ ಹಿರಿಯರು ಇಲ್ಲಿನವರಲ್ಲ, ಅವರು ಪಡುವಣ ಬೈಂದೂರು ಕಡೆಯವರು. ಅವರೆಲ್ಲರೂ ಕಡಲ ಬದಿಯವರು. ಮೊದಲಿನಿಂದಲೂ ಅವರ ಕೆಲಸ ಮೀನು ಹಿಡಿಯುವುದು. ಭೂ ದೇವಿ ಅವರ ದೇವರಲ್ಲ; ಕಡಲೇ ಅವರ ದೇವರು. ಅವರಿಗೆ ಅನ್ನ ಕೊಡುವವಳು ಅವಳಲ್ಲವೇ? ದೇವರೆಂಬ ಮಾತು ಅಷ್ಟಕ್ಕೇ ಬರುತ್ತದೆ ಅನ್ನು"[೨೨] ಎನ್ನುತ್ತಾಳೆ.

ಮೂಕಜ್ಜಿಯು ಹೀಗೆ ಅನೇಕ ವ್ಯಕ್ತಿಗಳ ಜನಾಂಗದ ಬಗ್ಗೆ ಮತ್ತು ಅವರು ನಿಸರ್ಗವನ್ನು ಅವಲಂಬಿಸಿ ಬದುಕುವ ಬಗ್ಗೆ ಹೇಳುತ್ತಾಳೆ. ಇಲ್ಲಿ ಪ್ರಸ್ತಾಪಿಸಿರುವ ಮೊಗೇರರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬರುವ ಒಂದು ಜಾತಿ ಇವರ ಕೆಲಸ ಮೀನು ಹಿಡಿಯುವುದು ಅದಕ್ಕಾಗಿ ಅವರು ಸಮುದ್ರವನ್ನು ಪೂಜಿಸುತ್ತಾರೆ. ಏಕೆಂದರೆ ಸಮುದ್ರವೇ ಅವರ ದೈವ. ಅದನ್ನು ಅವಲಂಬಿಸಿ ಬದುಕುವಂತಹವರು. ಹೀಗೆ ಕಾರಂತರು ನಿಸರ್ಗದ ನೆಲೆಯಲ್ಲಿ ಜೀವಿಸುವ ಅನೇಕ ಪಾತ್ರಗಳನ್ನು ತಮ್ಮ ಕಾದಂಬರಿಯಲ್ಲಿ ತರುತ್ತಾರೆ. ಅದು ಅವರ ಸಾಂಸ್ಕೃತಿಕ ನೆಲೆಗಳನ್ನು ಅವಲಂಬಿಸಿರುತ್ತದೆ.

೨೨.ಶಿವರಾಮ ಕಾರಂತ, ಮೂಕಜ್ಜಿಯ ಕನಸುಗಳು, ಪುಟ ೨೦೦

'ಅಳಿದ ಮೇಲೆ' ಕಾದಂಬರಿಯಲ್ಲಿ ಕಾರಂತರು ಸ್ವತಃ ಒಂದು ಪಾತ್ರವಾಗಿ ಕಾಣಿಸಿಕೊಳ್ಳುತ್ತಾರೆ. ಆ ಮೂಲಕ ಅವರು ತನ್ನ ಸ್ನೇಹಿತ ಯಶವಂತನ ಕನಸುಗಳನ್ನು ನೆರವೇರಿಸುತ್ತಾರೆ. ಈ ಕಾದಂಬರಿಯ ಕುರಿತು ಅಹಿತಾನಲರವರು –*"ಈ ಕಾದಂಬರಿಯನ್ನು ಸಾಮಾನ್ಯವಾಗಿ ನಾಲ್ಕು ಭಾಗಗಳಾಗಿ ವಿಂಗಡಿಸಬಹುದು ಮೊದಲನೆಯದು, ಯಶವಂತ ನಿರೂಪಕ ಕಾರಂತರ ಪರಸ್ಪರ ಪರಿಚಯ ಮತ್ತು ಯಶವಂತರ ಸಾವು. ಪರಿಣಾಮವಾಗಿ ಕಾರಂತರು ಅವರ 'ಆಸ್ತಿ'ಗೆ ವಾರಸುದಾರರಾಗಿ ಅವರ ಬಾಳಿನ್ನು ಅರ್ಥಮಾಡಿಕೊಳ್ಳುವುದು. ಹೀಗೆ ಅರ್ಥ ಮಾಡಿಕೊಳ್ಳುವ ಪ್ರಯತ್ನದಲ್ಲಿ ಪಾರ್ವತಮ್ಮನ ಬೇಟಿಯಲ್ಲಿ ಬಹಳಷ್ಟು ಅನುಕೂಲವಾಗುತ್ತದೆ. ಇದು ಎರಡನೆಯ ಭಾಗ, ಮೂರನೆಯದು ಯಶವಂತರ ಬಾಳಿನಲ್ಲಿ ಹಾದು ಹೋಗುವ ಇನ್ನಿತರ ವ್ಯಕ್ತಿಗಳ ಪರಿಚಯ, ಮುಖ್ಯವಾಗಿ ಅವರ ಕೈ ಹಿಡಿದ ಹೆಂಡತಿ ಹಡೆದ ಮಗ ಅವರ ಮಗಳಂದಿರು. ಅಳಿಯ, ಮೊಮ್ಮಕ್ಕಳು ಇರಿಸಿಕೊಂಡ ಸರಸಿ ಮತ್ತು ಅವಳಿಂದ ಪಡೆದ ಇಂದುಮತಿ ಮುಂತಾದವರ ಭೇಟಿಯ ನಿರೂಪಣೆ. ಕೊನೆಯದಾಗಿ ವಿಷ್ಣುವಂತ ಘಂಟೆಯವರ ಭೇಟಿ"*[೨೮] ಪ್ರಮುಖ ಎನ್ನುತ್ತಾರೆ.

ಈ ರೀತಿಯ ವಿಂಗಡಣೆಯಲ್ಲಿ ಎರಡನೆಯ ಭಾಗವಾದ ಪಾರ್ವತಮ್ಮನ ಭೇಟಿಯ ಸಂದರ್ಭದಲ್ಲಿನ ಪಾತ್ರಗಳು ನಿಸರ್ಗದೊಂದಿಗೆ ಬದುಕುವ ಸಂದರ್ಭಗಳನ್ನು ಕಾಣಬಹುದು. ಕಾರಂತರು ಬೆನಕನಹಳ್ಳಿಯಲ್ಲಿರುವ ಚೊಚ್ಚಲು ಮನೆಗೆ ಭೇಟಿ ನೀಡುತ್ತಾರೆ. ಆಗ ಅವರು ಪ್ರಕೃತಿಯ ನೆಲೆಯಲ್ಲಿ ಕಿರುದಾರಿಗಳಲ್ಲಿ ನಡೆಯುತ್ತಾರೆ. ಆಗ ಒಬ್ಬ ಮುದುಕ ಇವರಿಗೆ ದಾರಿಯ ಮಾರ್ಗದರ್ಶಕನಾಗುತ್ತಾನೆ. ಅವನು ಅಲ್ಲಿ ತನ್ನ ದನಕರುಗಳನ್ನು ಮೇಯಿಸುವವನು. ಆ ಮುದುಕ ನಿಸರ್ಗವನ್ನು ಅವಲಂಬಿಸಿ ಬದುಕುವ ಪಾತ್ರದಾರಿಯಾಗಿ ಕಂಡು ಬರುತ್ತಾನೆ. ಇವನ ಪಾತ್ರ ಕೇವಲ ಹಾಗೆ ಬಂದು ಮಾಯವಾಗಿರುವಂತಿದ್ದರೂ ಸಹ, ಬಹಳ ಮುಖ್ಯವಾದುದು ಆಗಿದೆ. ಏಕೆಂದರೆ ಚೊಚ್ಚಲ ಮನೆಗೆ ದಾರಿ ತೋರಿಸುವಾಗ ಅವನು ಮಳೆಬಿದ್ದು ಕೆಸರಾಗಿದ್ದ ದಾರಿಯಲ್ಲಿ ಸಾಹಸವಂತನಂತೆ ದಾರಿ ತೋರಿಸುತ್ತಾನೆ. ಆದ್ದರಿಂದ ಇವನ ಪಾತ್ರ ಇಲ್ಲಿ ಮುಖ್ಯವಾಗಿದೆ.

ಚೊಚ್ಚಲ ಮನೆಯ ಕುಟುಂಬ ಬಿದಿರು ಮೆಳೆಯ ನಡುವೆ ಇರುವುದು, ಕಾರಂತರಿಗೆ ಆ ಮುದುಕ 'ಪೇಟೆಯವರು ಎಂದು ಕಾಣುತ್ತದೆ, ಹೆಬ್ಬುಲಿ ಎಂದರೆ ಅಂಥ ಭಯ! ಮನುಷ್ಯರಿಗೆ ಹುಲಿ ಏನು ಮಾಡುತ್ತವಂತೆ?' ಎಂದು ಹೇಳುತ್ತಾ ಕೋಲು ಹಿಡಿದ. 'ಹಾಗಾದರೆ ಬನ್ನಿ' ಎಂದು ನನಗೆ ಮಾರ್ಗದರ್ಶಕನಾದ ನಾನು ಅವನ್ನನ್ನು ಹಿಂಬಾಲಿಸಿದೆ. ಅಗಲವಾದ ದಾರಿಯನ್ನು ಬಿಟ್ಟು ಇನ್ನೂ ಕಿರಿದಾದ ಕಾಲುದಾರಿಯನ್ನು ಹಿಡಿದು, ಬಿದಿರ ಮೆಳೆಗಳ ಎಡೆಯಲ್ಲಿ ನನ್ನನ್ನು ಕರೆದೊಯ್ಯುವಾಗ ನನಗೆ ಹುಲಿಗಳದ್ದೆ ಭಯ, ದಾರಿಯಲ್ಲೊಂದು ಮುರುಕು ಗುಡಿ ಸಿಕ್ಕಿತು.

"ಅದರ ಮಾಡು ಕಳಚಿ, ಮುರಿದು, ಒಳಗಿದ್ದ ಬೆನಕಯ್ಯನಿಗೆ ನಿತ್ಯ ಮಳೆ ನೀರಿನ ಅಭಿಷೇಕವಾಗುತ್ತಿತ್ತು. ಮುದುಕ, ಇಳಿಯ ತೊಡಗಿದ, ಅವನ ಕೈಯಲ್ಲಿ ಕೋಲಿತ್ತು: ಜೇಡಿಮಣ್ಣಿನ ಕೆಸರಲ್ಲಿ ಅದನ್ನು ಊರುತ 'ಬನ್ನಿ ಬನ್ನಿ' ಎನ್ನುತ್ತ ಇಳಿದ"[೨೯] ಇಂತಹ ಪ್ರಾಕೃತಿಕ ನೆಲೆಯಲ್ಲಿ ಶಂಕರಯ್ಯ ಹೆಗ್ಗಡೆ, ಶಂಭೂ ಹೆಗ್ಗಡೆ ಕಾಡನ್ನು

---

೨೮. ನಾಗ ಐತಾಳ(ಸಂ), ಕಾರಂತ ಚಿಂತನ ಹೊರನಾಡು ಕನ್ನಡಿಗರಿಂದ, ಪುಟ – ೧೫೮

೨೯. ಶಿವರಾಮ ಕಾರಂತ, ಅಳಿದ ಮೇಲೆ, ಪುಟ –೬೨

ಸವರಿ ಬೇಸಾಯವನ್ನು ಮಾಡಿದವರು. ಈಗ ಮೂಕಾಂಬೆ, ಪಾರ್ವತಮ್ಮ ಮತ್ತು ಶಂಕರಯ್ಯ ಹೆಗ್ಗಡೆಯವರಿಗೆ ವಯಸ್ಸಾಗಿದೆ. ಆದರೆ ಅವರ ಮಗ ಶಂಭು ಭಟ್ಟ ಈಗ ನಿಸರ್ಗದ ನೆಲೆಯಲ್ಲಿ ಕೃಷಿ ಮಾಡುತ್ತಿದ್ದಾನೆ. ಈ ಮೂಲಕ ಅವನು ನಿಸರ್ಗದೊಂದಿಗೆ ಬದುಕುತ್ತಿದ್ದಾನೆ.

'ಬೆಟ್ಟದ ಜೀವ' ಕಾದಂಬರಿಯು ನಿರೂಪಕ ಶಿವರಾಮಯ್ಯನ ಪ್ರವೇಶದೊಂದಿಗೆ ಪ್ರಾರಂಭವಾಗುತ್ತದೆ. ಬೆಟ್ಟದ ಅಡಿಯಲ್ಲಿ ಕಾಡನ್ನು ಸವರಿ; ಬೆಟ್ಟಕ್ಕೆ ಎದೆಯೊಡ್ಡಿ ಬೆಟ್ಟದಂತೆ ಬದುಕುತ್ತಿರುವ ಗೋಪಾಲಯ್ಯನ ಪಾತ್ರ ಮುಖ್ಯವಾದುದಾಗಿದೆ. ಕಾರಂತರು ಈ ಕಾದಂಬರಿಯ ಮೂಲಕ ಕಾಡು ಜೀವನದ ವಿವಿಧ ನೆಲೆಗಳನ್ನು ಗುರುತಿಸುತ್ತಾರೆ. ಅವರು ಕಾಡಿನಲ್ಲಿ ಸಾಂಸ್ಕೃತಿಕವಾಗಿ ಬೇಟೆ, ಮತ್ತು ಕೃಷಿ ಈ ಎರಡನ್ನು ಪ್ರಮುಖವಾಗಿ ಗುರುತಿಸುತ್ತಾರೆ. ಅದು ಅವರಿಗೆ ಅನಿವಾರ್ಯವು ಸಹ ಆಗಿದೆ. ಈ ಕುರಿತು ಜಿ.ಎಸ್.ಅಮೂರವರು "*ಬೆಟ್ಟದ ಜೀವದಲ್ಲಿ ಕಾಡನ್ನೆ ನಾಡಾಗಿಸಿದ ಗೋಪಾಲಯ್ಯ ಶಂಕರಿ ಮೊದಲಾದ ಅಪೂರ್ವ ಪಾತ್ರಗಳ ಚಿತ್ರಣ ಅದ್ಭುತವಾಗಿದೆಯೆನ್ನುವ ಮಾತನ್ನಾಗಲಿ, ಅಲ್ಲಿ ವರ್ಣಿತವಾದ ದಕ್ಷಿಣಕನ್ನಡ ಜಿಲ್ಲೆಯ ಬೆಟ್ಟದ ಜೀವನದ ಹೋರಾಟದ ನಿರೂಪಣೆ ನಿರ್ಧಿಷ್ಟವಾಗಿದೆಯನ್ನುವುದನ್ನಾಗಲಿ, ಯಾರೂ ಅಲ್ಲಗೆಳೆಯಲಾರರು*"[೮೦] ಈ ಹಿನ್ನೆಲೆಯಲ್ಲಿ ಗೋಪಾಲಯ್ಯ ಶಂಕರಯ್ಯ ದಂಪತಿಗಳು ಕಾಡಿನ ನಡುವೆ ತಮ್ಮ ಜೀವನ ಕಂಡುಕೊಂಡು ಬದುಕುತ್ತಾರೆ. ಬದುಕು ತುಂಬಾ ಮುಖ್ಯ ಆ ಬದುಕು ಅನಾಗರಿಕತೆಯಿಂದ ಕೂಡಿರಬಾರದು. ಹಾಗೆಯೇ ಮಾನವೀಯತೆ ಮುಖವುಳ್ಳ ನಾಗರಿಕತೆಯ ನೆಲೆಯಿರಬೇಕು. ಆದ್ದರಿಂದ ಶಿವರಾಮಯ್ಯ ಕೆಳಬೈಲಿನ ಮನೆಗೆ ಬಂದಾಗ, ಗೋಪಾಲಯ್ಯ ದಂಪತಿಗಳು ತುಂಬಾ ಚೆನ್ನಾಗಿ ಉಪಚರಿಸುತ್ತಾರೆ.

ಗೋಪಾಲಯ್ಯ, ಶಂಕರಮ್ಮ, ನಾರಾಯಣಯ್ಯ, ದೇವಣ್ಣಗೌಡ ಭಟ್ಯ, ಇವರೆಲ್ಲ ಕಾದಂಬರಿ -ಯಲ್ಲಿ ಪ್ರಮುಖವಾಗಿ ಕಂಡು ಬರುವ ಪಾತ್ರಗಳಾಗಿದ್ದಾರೆ. ಗೋಪಾಲಯ್ಯನು ಕಾಡಿನಲ್ಲಿ ಮನೆ ಮಾಡಿಕೊಂಡು ಜೀವಿಸುತ್ತಿರುವುದನ್ನು ಕಂಡು ಶಿವರಾಮಯ್ಯ ಆಶ್ಚರ್ಯ ಪಡುತ್ತಾನೆ. 'ಈ ಕಗ್ಗಾಡಿನ ಸಂದಿನಲ್ಲಿ ನೀವೆಲ್ಲ ಮನೆ ಮಾಡಿಕೊಂಡಿರುವುದ್ದನ್ನು ನೋಡಿದರೆ ನನಗೆ ಆಶ್ಚರ್ಯವಾಗುತ್ತಿದೆ. ಇಲ್ಲಿ ಹರಿದಾರಿಗೊಂದು ಒಕ್ಕಲು ಮನೆ ಇದೆಯೋ ಇಲ್ಲವೋ ! ಅಲ್ಲಿ ಇಲ್ಲಿ ಹುಲಿಯ ಉಪದ್ರ, ಕಾಡಾನೆಗಳ ಸಂಚಾರ ಇದೆ ಎನ್ನುತ್ತಾರೆ! ಇಂಥಲ್ಲಿ ನಿಮ್ಮ ದಿವಸ ಹೇಗೆ ಕಳೆಯುತ್ತದೆ. ಎಂಬ ಯೋಜನೆಯಲ್ಲಿ ನನಗೆ ನಿದ್ರೆಯೂ ಬರಲಿಲ್ಲ.'

'ನಮ್ಮದೇನು ಹೆಚ್ಚು? ಇಲ್ಲೇ ಇದ್ದು ಇದೇನೆ ನಮಗೆ ರೂಢಿಯಾಗಿದೆ. ಪೇಟೆಯಿಂದ ಬಂದ ನಿಮಗೆ ಇಂದೊಂದು 'ವಿಶೇಷವಾಗಿ ಕಣಿಸಬಹುದೇ ಹೊರತು'. ಆಳುಗಳನ್ನು ಕರೆದು 'ಹಾಗೆ ಮಾಡಿ ಹೀಗೆ ಮಾಡಿ' ಎಂದಾರು, "*ಬೇಸರ ಕಳೆಯಲು ತಾವು ಆಳುಗಳೊಡನೆ ಕಾಡಿಗೆ ಹೋಗಿ ಸೊಪ್ಪನ್ನು ಮತ್ತು ಹೊತ್ತು ಹೋಗದಿದ್ದರೆ, ದೇವರಣ್ಣನಲಿಗೋ ಕಾಟು ಮೂಲೆಗೋ ಹೋಗಿ ಎಲೆ ಅಡಿಕೆಯ ಹರಿವಾಣ ಬರಿದು ಮಾಡಿಯಾರು. ಮನೆಗೆ ಬಂದು. ಮಿಂದು. ಗಿಂದು. ಜಪ. ದೇವರ ಪೂಜೆಯಾಗುವಾಗ ಹೊತ್ತು*

೮೦. ಟಿ.ಪಿ.ಅಶೋಕ (ಸಂ), ಈ ಶತಮಾನದ ನೋಟ ಶಿವರಾಮ ಕಾರಂತ, ಪುಟ- ೨೪೪

ತಿರುಗುತ್ತದೆ. ಊಟ ಮಾಡಿ ಯಾರು, ಮನಸ್ಸು ಬಂದರೆ ಮಲಗಿಕೊಂಡು ಜಾವಹೊತ್ತಿಗೆ ಸಮನಾಗಿ ಎದ್ದಾರು. ತಿರುಗಿ ತೋಟಕ್ಕೆ ಹೋದರೂ ಹೋದರು. ಅಷ್ಟರಲ್ಲೇ ಆಗುತ್ತದೆ ಸಾಯಂಕಾಲ"[೮೧]

ಶಿವರಾಮಯ್ಯ ಕೇಳಿದ ಪ್ರಶ್ನೆಯಲ್ಲಿ ನಗರ ಜೀವನದ ವ್ಯಾಖ್ಯೆಗಳು ಅಡಗಿವೆ ಇಲ್ಲಿ ಶಿವರಾಮಯ್ಯ ಆಧುನಿಕ ಪ್ರತಿನಿಧಿಯಾಗಿದ್ದಾನೆ. ಗೋಪಾಲಯ್ಯ ವಾಸಿಸುತ್ತಿರುವ ಕಾಡು ಪ್ರದೇಶಕ್ಕೆ, ಏಕೆಂದರೆ ಈತನ ಪ್ರಶ್ನೆಗಳು ಆತನ ಮನೋಭಾವಕ್ಕೆ ಸಹಜವಾದದ್ದು ಆಗಿದೆ. ಆದರೆ ದಿನದ ೨೪ ಗಂಟೆಗಳೂ ನಿಸರ್ಗದ ನೆಲೆಯಲ್ಲಿ ವಾಸಿಸುವ ಗೋಪಾಲಯ್ಯನಿಗಾಗಲಿ, ದೇವರಣ್ಣನಿಗಾಗಲಿ, ನಾರಾಯಣನಿಗಾಗಲಿ ಮತ್ತು ಭಟ್ಯನಿಗಾಗಲಿ ಈ ಮಾತುಗಳು ಅನ್ವಯಿಸುವುದಿಲ್ಲ. ಏಕೆಂದರೆ ಇವರೆಲ್ಲ ಕಾಡನ್ನು ಸವರಿ, ಕಾಡಿನ ಚಲನಶೀಲತೆಗೆ ತಕ್ಕಂತೆ ಬದುಕನ್ನು ಕಟ್ಟಿಕೊಂಡಿರುವವರು. ಅಲ್ಲಿ ಕಾಟಿ, ಹುಲಿ, ಹಂದಿ, ಆನೆ ಇತ್ಯಾದಿ ಪ್ರಾಣಿಗಳು ಅವರು ಬೆಳೆದ ಭತ್ತ, ರಾಗಿ, ಕಬ್ಬು, ಅಡಿಕೆ ಇತ್ಯಾದಿ ಬೆಳೆಗಳನ್ನು ನಾಶಪಡಿಸಿದರೂ ಸಹ ಅವುಗಳೊಂದಿಗೆ ಹೋರಾಡಿ, ನಿಸರ್ಗದೊಂದಿಗೆ ಬದುಕು ಕಟ್ಟಿಕೊಳ್ಳುತ್ತಿದ್ದಾರೆ. ಆದ್ದರಿಂದ ನಿಸರ್ಗ ಇವರಿಗೆ ನೀರು, ಕಾಡಿನ ಉತ್ಪನ್ನಗಳನ್ನು ನೀಡಿದೆ. ದೇವರಣ್ಣ ಭಟ್ಟ ಇಂತವರಿಗೆ ಬೇಸರ ಅಥವಾ ಬಾಯಿ ರುಚಿಗೆ ಭರ್ಕ, ಕೆಮ್ಮ ಇತ್ಯಾದಿ ಪ್ರಾಣಿಗಳ ಬೇಟೆಯಾಡುತ್ತಾರೆ. ಇದು ಅವರ ಕಾಡು ಜೀವನದ ಸಂಸ್ಕೃತಿ, ಒಟ್ಟಾರೆಯಾಗಿ ಇವರು ನಿಸರ್ಗ ವನ್ನು ಅವಲಂಬಿಸಿಯೇ ಬದುಕನ್ನು ಕಟ್ಟಿಕೊಳ್ಳುತ್ತಾರೆ. ಆದರೆ ಶಂಕರಮ್ಮ ನಂತರ ಸ್ತ್ರೀ ಪಾತ್ರಗಳಿಗೆ ಕಾಡಿನ ಮನೆಯಲ್ಲಿ ಒಂಟಿಯಾಗಿ ಕಳೆಯಬೇಕಾಗಿರುವುದು ಅನಿವಾರ್ಯವೆನಿಸಿದೆ. 'ಕುಡಿಯರ ಕೂಸು' ಕಾದಂಬರಿಯಲ್ಲಿನ ಬುಡಕಟ್ಟು ಜನಾಂಗ ಸ್ತ್ರೀಯರಾದ ಕೆಂಪಿ, ಗಿಡ್ಡಿ, ಚೆಕ್ಕಿಯ ರೀತಿಯಲ್ಲಿ ಇವರು ಕಾಡನ್ನು ಸುತ್ತುವುದಿಲ್ಲ. ಕಾರಣ ಸಂಸ್ಕೃತಿಯ ವ್ಯತ್ಯಾಸ, ಕುಡಿಯ ಸ್ತ್ರೀಯರದು ಸಂಪೂರ್ಣವಾದ ಕಾಡು ಜೀವನ ಮನೋಭಾವ, ಆದರೆ ಶಂಕರಮ್ಮ ಅಂತಹವರಲ್ಲಿ ಕೇವಲ ಮನೆಗೆ ಸೀಮಿತಗೊಂಡು, ಕಾಡಿನಲ್ಲಿ ವಾಸಿಸುವ ಮೂಲಕ ಇಡೀ ಕಾಡು ಜೀವನದ ವೈಚಿತ್ರ್ಯಗಳನ್ನು ಪರಿಚಯಿಸುತ್ತಾರೆ.

'ಸ್ವಪ್ನದ ಹೊಳೆ' ಕಾದಂಬರಿ ಕಲಾವಿದ ಕಿಟ್ಟಣ್ಣ ಮತ್ತು ಮಾದನ ನೈಸರ್ಗಿಕ ಪ್ರೇಮವನ್ನು ಹೇಳುತ್ತದೆ. ಇವರೊಂದಿಗೆ ಕಿಟ್ಟಣ್ಣನ ತಂಗಿ ರುಕ್ಮಿಣಿಯು ಸಹ ಸೇರುತ್ತಾಳೆ. ಕಾರಂತರು ತಮ್ಮ ಬಾಲ್ಯದಿಂದ ಹಿಡಿದು ತಾರುಣ್ಯದವರೆಗೆ ಕಂಡ ನಿಸರ್ಗದ ನೆಲೆಗಳನ್ನು ಕಿಟ್ಟಣ್ಣನ ಮೂಲಕ ವ್ಯಕ್ತಪಡಿಸುತ್ತಿರುವಂತೆ ಇದೆ. ಈ ಕುರಿತು ಅವರೇ ಹೇಳುವಂತೆ "*ಕುಂದಾಪುರ ತಾಲ್ಲೂಕಿನಲ್ಲಿ ನಾನು ಹೆಚ್ಚಾಗಿ ಅಲೆದಾಡಿದ ಪ್ರದೇಶವು ಕರಾವಳಿಯ ನೆಲವಲ್ಲ. ಅದು ಮೆಲುವಾಗಿ ಏರುತ್ತ ಇಳಿಯುವ, ಅಥವಾ ಇಳಿದೇರುವ ಸಾಮಾನ್ಯ ಗುಡ್ಡಗಾಡಿನ ಪ್ರದೇಶ. ಮೂಡಣಕ್ಕೆ ಸರಿದಂತೆ ಮನುಷ್ಯ ಹತೋಟಿಗೆ ಸಿಗದ ಕುರುಚಲು ಕಾಡುಗಳು, ದೊಡ್ಡ ಕಾನನಗಳು, ಧಾರಳವಾಗಿ ಕಾಣಸಿಗುವ ಸ್ಥಳ. ಇಂದು ಅಂಥ ಕಾಡುಗಳನ್ನು ಸವರಿ, ಅಲ್ಲಿನ*

೮೧. ಶಿವರಾಮ ಕಾರಂತ, ಬೆಟ್ಟದ ಜೀವ, ಪುಟ–೧೧

ನೆಲವನ್ನು ವಿರೂಪಗೊಳಿಸುತ್ತಿರುವ ನೋಟ ಮನಸ್ಸಿಗೆ ತುಂಬಾ ನೋವನ್ನು ತರುತ್ತಿದೆ. ಪೂರ್ವಕಾಲದ ಅರಣ್ಯ ಸಂಪತ್ತು ಮತ್ತು ಸೊಗಸು ಕಣ್ಮರೆಯಾಗುತ್ತ ಬಂದಿದೆ. ಆ ಕಾಡುಗಳು ಮಾನವ ದ್ವೇಷಕ್ಕೆ ಗುರಿಯಾಗುವ ಮೊದಲು, ನನ್ನ ಮನಸ್ಸನ್ನು ತಮ್ಮ ದಿಟ್ಟ, ಗಂಭೀರ, ವಿಸ್ತಾರದಿಂದ ಮುಗ್ಧನನ್ನಾಗಿ ಮಾಡಿದ ಕಾಲವಿತ್ತು. ಅವುಗಳು ಮೂಡಣ ಮೇರೆಯಾಗಿ ನಿಂತ, ವರ್ಷದ ನಾಲ್ಕೈದು ತಿಂಗಳಲ್ಲಿ ಮುಗಿಲಿನೊಡನೆ ಕಣ್ಣುಮುಚ್ಚಾಲೆಯಾಡುವ ಪಶ್ಚಿಮ ಘಟ್ಟದ ಗೋಡೆಯೂ ಹಿಂದುಸ್ಥಾನವನ್ನು ಕಾಯಲು ನಿಂತ ಭದ್ರವಾದ ಹಿಮಾಲಯದ ಗೋಡೆಯಷ್ಟೆ ಭದ್ರವೂ, ಭವ್ಯವೂ, ಆದ ಪ್ರಕಾರವೆನಿಸಿತ್ತು. ಈ ಪ್ರದೇಶದ ನನ್ನ ತಾರುಣ್ಯದ ಅನುಭವಗಳನ್ನು, ಎಂದರೆ ನಿಸರ್ಗದ ಪ್ರೇರಣೆಯನ್ನು 'ಸ್ವಪ್ನದ ಹೊಳೆಯಲ್ಲಿ' ಎಂಬೊಂದು ಬರಹದಲ್ಲಿ ಸಾಕಷ್ಟು ಬಣ್ಣಿಸಿದ್ದೇನೆ".[೮೨]

ಕಾರಂತರು ನಿಸರ್ಗದೊಂದಿಗೆ ಬದುಕುವ ಪಾತ್ರಗಳನ್ನು ಈ ಮೂಲಕ ಹೇಳುತ್ತಾರೆ. ಈ ರೀತಿ ಹೇಳುವ ಪಾತ್ರಗಳಲ್ಲಿ ಮಾದನ ಪಾತ್ರವು ಒಂದು ಮಾದನಿಗೆ ಶಾಲೆಗೆ ಹೋಗುವ ಮನಸ್ಸು ಇಲ್ಲ. ಆದರೆ ಈತನ ಒಂದು ಪ್ರಿಯವಾದ ಉದ್ಯೋಗ ಮನೆಯ ಹತ್ತಾರು ದನಕರುಗಳನ್ನು ಹಟ್ಟಿಯಿಂದ ಬಿಡಿಸಿ ಅಟ್ಟುವುದು ಬಿಡಿಸಿದ ತಕ್ಷಣವೇ ಅವು ದಡದಡನೆ ಹೊರ ಬಿದ್ದರೆ, ಮುಂದೆ ತಮ್ಮ ಹಾದಿಯನ್ನು ತಾವೇ ಹಿಡಿಯುತ್ತವೆ. ತಾವೆಲ್ಲಿಗೆ ಮೇಯಲು... ಅವನು ದನಕರುಗಳನ್ನು ಹಿಂಬಾಲಿಸಿ ಹೋದವೆಂದರೆ ಒಂದು ಮೈಲು ದೂರ ಹೋಗುವುದುಂಟು. ಅಲ್ಲೊಂದು ವಿಶಾಲವಾದ ಬೆಣವಿದೆ. ಅದರಲ್ಲಿ ಮಳೆಗಾಲದಲ್ಲಿ ಹುಲ್ಲೂ, ಚಳಿಗಾಲದಲ್ಲಿ ಕರಡವೂ ಬೆಳೆಯುತ್ತವೆ. ಅಲ್ಲಲ್ಲಿ ಪೊದೆಗಳಿವೆ. ಸುತ್ತಮುತ್ತ ವಿಶಾಲವಾದ ಕಾಡು ಇದೆ. ಬೆಣದ ನಡುವೆ ಒಂದು ಕಲ್ಲಿನ ಕಟ್ಟೆಯಿದೆ. ಅದರಲ್ಲಿ ಒಂದು ಗೋಲಿಯ ಮರವಿದೆ. ಈ ಕಟ್ಟೆಯೇ ಮಾದನ ಸಿಂಹಾಸನ, ಅಲ್ಲಿ....ಮರದ ನೆರಳಿನಲ್ಲಿ ಗೋಳಿ ಕಟ್ಟೆಯಲ್ಲಿ ಸಮಯ ಕಳೆಯುತ್ತದೆ.

ಆ ಮರವಾದರೆ ಹಣ್ಣಾದ ಸಮಯದಲ್ಲಿ ಸಾವಿರ ಹಕ್ಕಿಗಳ ತವರು, ಮನೆ, ಆಚೀಚೆಗೆ ಕಣ್ಣು ಹಾಕಿಸಿದರೆ ನೂರಾರು ಮರಗಳಿವೆ. ಪೊದೆಗಳಿವೆ. ಅಲ್ಲಿ ಬಿಡಾರ ಮಾಡಿಕೊಂಡ ಹಕ್ಕಿಗಳಿವೆ. ಅಲ್ಲಿಗೆ ಅಪೂರ್ವದ ಪಕ್ಷಿ ಕಾಗೆ ಅದು ಮನೆ ಮಠಗಳು ಸುತ್ತಲಿರುವ ಪಕ್ಷಿ,ಇಲ್ಲಿ ಕುದುಂಬಳು, ಕೌಜಲು, ನೀರ್ಕೋಳಿ, ಕಾಡು ಕೋಳಿಗಳು ನೆಲದ ಮೇಲೆ ಓಡಾಡುತ್ತಿದ್ದರೆ, ಮರಗಳ ಮೇಲೆ ಹಲಸಿ ಬಾಲದ್ದು, ಗಿಡ್ಡಬಾಲದ್ದು, ಹಸುರು ಬೂದು, ಬಿಳಿಬಣ್ಣದ್ದು, ಹೆಸರು ಗೊತ್ತಿದ್ದಕ್ಕಿಂತ ಗೊತ್ತಿಲ್ಲದವರೇ ಹೆಚ್ಚು ಅವನೆ ಹಲವಕ್ಕೆ ನಾಮಕರಣ ಮಾಡಿದ್ದುಟು ಪ್ರತಿಯೊಂದರ ಕೂಗನ್ನು ಅನುಸರಿಸಬಲ್ಲ ಆತ.

ಆ ಹಕ್ಕಿಗಳನ್ನು ನೋಡಿ, ಕೇಳಿ ಬೇಸರವಾದರೆ, *"ಹಣ್ಣಿನ ಅನ್ವೇಷಣೆಗೆ ಹೊರಡುತ್ತಾನೆ. ಕಾರಿಹಣ್ಣು. ಸೂರಿಹಣ್ಣು. ಕಿಸ್ಕಾರದ ಹಣ್ಣು. ನೇರಳೆ ಹಣ್ಣುಗಳಿವೆ. ಅದನ್ನು ಮುಷ್ಟಿ ಮುಷ್ಟಿ ತಿಂದರೆ. ಗಬ್ಬುಗದಷ್ಟು ಆಹಾರವಾದರೂ. ಅವುಗಳ ಸವಿಯನ್ನು ಮಾತ್ರ ಮರೆಯಲಾರದ. ಹೊತ್ತು ನೆತ್ತಿಗೇರುವ ಸಮಯ ಬಂದರೆ ಗಂಟೆಗಳ ಹೆಸರನ್ನು ಕೂಗುತ್ತಾನೆ"*[೮೩] ಮಾದನು ಪ್ರಕೃತಿಯ ಸೌಂದರ್ಯವನ್ನು ದಿನವೂ ಸವಿಯುವುದು

೮೨. ಅದೇ. ಪುಟ-೫೧
೮೩. ಶಿವರಾಮ ಕಾರಂತ, ಸ್ವಪ್ನದ ಹೊಳೆ, ಪುಟ-೧೯೭

ಅವನ ಅಭ್ಯಾಸ ಅದರೊಂದಿಗೆ ಅಲ್ಲಿ ದೊರಕುವ ಸವಿಯಾದ ಕಾಡಿನ ಹಣ್ಣುಗಳನ್ನು ಸವಿಯಬಲ್ಲ, ದನಗಾಹಿಯಾಗಿ ಅವನು ನಿರಂತರವಾಗಿ ನಿಸರ್ಗವನ್ನು ಅವಲಂಬಿಸಿ ಬದುಕುತ್ತಾನೆ.

ಪರಮೇಶ್ವರನ ಮಗ ಕಿಟ್ಟಣ್ಣ, ಇವನಿಗೆ ಮಾದನು ಎಂದರೆ ತುಂಬ ಇಷ್ಟ. ಮಾದ ಉತ್ಸಾಹ ದಿಂದ ಆದಿತ್ಯವಾರದ ಸಾಹಸದ ಕಥೆ ಬಣ್ಣಿಸುತ್ತಾನೆ. ಇದಕ್ಕೆ ಮನ ಸೋತ ಸೊಪ್ಪಿನ ಹಳ್ಳಿಯ ಕೃಷ್ಣ ನಿಸರ್ಗದೊಂದಿಗೆ ಬೆರೆಯುತ್ತಾನೆ. ನಿಸರ್ಗವನ್ನು ನೋಡಲು ಜೊತೆಗೆ ತನ್ನ ತಂಗಿಯನ್ನು ಕರೆದೊಯ್ಯುತ್ತಾನೆ.

'ಒಂದು ಪೊದೆಯ ಮಗ್ಗುಲಲ್ಲಿ ಅವಳನ್ನು ಕುಳ್ಳಿರಿಸಿಕೊಂಡು ನೋಡು ಅಲ್ಲಿ ತೋಡಿನ ನೀರನ್ನು ನೋಡು ಅಲ್ಲ, ಅಲ್ಲ....ಏ ಕುರುಡಿ ಗಾಬರಿಯಾಗಬೇಕು' ಎಂದು....... ಸಂಜೆಯ ಬಿಸಿಲು ಆ ಹೊಳೆಯ ನೀರನ್ನು ಬೆಳಗಿತ್ತು. ಅಲ್ಲಿ ಎರಡೆರಡು ನೀರು ನಾಯಿಗಳ ಜಲಕ್ರೀಡೆ ಕಾಣಿಸಿತು. ರುಕ್ಮಿಣಿಗೆ ಆಗಾಗ ಎಷ್ಟು ಚಂದ! ಎನ್ನುವುದೇ ಕೆಲಸ. ಕಿಟ್ಟನಿಗೆ ಅವಳ ಬಾಯ ಮೇಲೆ ಹಸ್ತವನ್ನಿರಿಸುವುದೇ ಕೆಲಸ!

ಕಾರಂತರು ಕೃಷ್ಣನ ಈ ನಿಸರ್ಗದ ಪ್ರೇಮವನ್ನು ಕುರಿತು ಮುಂದುವರೆದು ಹೇಳುತ್ತಾರೆ. ಅದು–ಹೀಗೆ *"ಕಿಟ್ಟನ ಬದುಕಿನಲ್ಲಿ ಪ್ರಕೃತಿಯ ಮೋಹ ಅವನಿಗೆ ತಿಳಿಯದಂತೆ ಬಲಿತು. ಮಾದ ಬಂದರೂ ಬಾರದಿದ್ದರೂ ಬಿಡುವಿನ ದಿನಗಳಲ್ಲಿ ಅವನ ಕಾಲುಗಳು ಆ ಸುತ್ತಣ ಕಾಡು, ಮೇಡು, ಹಳ್ಳಿಗಳ ಮುಗ್ಗುಲನ್ನೆಲ್ಲ, ತುಳಿಯ ತೊಡಗಿದವು! ಗೆಳೆಯ ಮಾದನಿಗೆ ಶಾಲೆ ಇಲ್ಲದುದಕ್ಕೆ ಅವನೇ ಭಾಗ್ಯ ಶಾಲಿ ಎಂದು ತೋರಿದ ಗಳಿಗೆಯೂ ಉಂಟು"*[೮೪] ಕಿಟ್ಟಣ್ಣ ಮಾದನ ಸಹವಾಸದಿಂದ ನಿಸರ್ಗವನ್ನು ಅರಿಯುತ್ತಾನೆ. ಈತನ ಸಹಾಯದಿಂದ ರುಕ್ಮಿಣಿಯು ನಿಸರ್ಗವನ್ನು ಅರಿಯುತ್ತಾಳೆ. ಹೀಗೆ ಕೃಷ್ಣ ಮತ್ತು ರುಕ್ಮಿಣಿಯು ನಿಸರ್ಗವನ್ನು ಅವಲಂಬಿಸಿ ಬದುಕು ಸಾಗಿಸುತ್ತಾರೆ.

'ಧರ್ಮರಾಯನ ಸಂಸಾರ' ಕಾದಂಬರಿಯಲ್ಲಿ ಕಾರಂತರು ಭೂಮಿಗಾಗಿ ಬದುಕುವ ಮತ್ತು ಆ ಭೂಮಿಯನ್ನು ಕಳೆದುಕೊಂಡು ಅನುಭವಿಸುವ ಯಾತನಮಯ ಸನ್ನಿವೇಶ ಹಾಗೂ ನಿರಾಶೆಗಳನ್ನು, ಇದರಿಂದ ಉಂಟಾಗುವ ದ್ವೇಷಗಳನ್ನು ಹೇಳುತ್ತಾರೆ. ಅಲ್ಲದೆ ಭೂಮಿಯನ್ನು ಸಂಪಾದಿಸುವ ಸಲುವಾಗಿ ಬಂಡವಾಳವನ್ನು ಉಪಯೋಗಿಸುವ ಪಾತ್ರಗಳು ಹಾಗೂ ಭೂಮಿಯೊಂದಿಗೆ ಬದುಕಲು ಒಕ್ಕಲಾಗಿ ದುಡಿಯುವ ಪಾತ್ರಗಳು ಪ್ರಮುಖವಾಗಿದ್ದು, ಈ ಪಾತ್ರಗಳು ನಿಸರ್ಗವನ್ನು ಅವಲಂಬಿಸಿ ಬದುಕುವ ಬಗೆಯನ್ನು ಹೇಳುತ್ತಾರೆ. ಈ ಹಿನ್ನೆಲೆಯಲ್ಲಿ ಇಲ್ಲಿ ಬರುವ ಪಾತ್ರಗಳೆಂದರೆ ಲಚ್ಚ ಐತಾಳ, ನಾರಾಯಣ ಹೆಬ್ಬಾರ, ಕೊಕ್ಕರಣಿ ರಾಮಪ್ಪಯ್ಯ, ಹೆಬ್ಬಾರನ ಹೆಂಡತಿ ಮಹಾಲಕ್ಷ್ಮಿ, ಇವರ ಮಗಳು ಸರಸ್ವತಿ ರಾಮಪ್ಪನ ಹೆಂಡತಿ ಪದ್ಮಾವತಿ, ಮಗ ನಾಗಪ್ಪಯ್ಯ.

೮೪. ಶಿವರಾಮ ಕಾರಂತ, ಸ್ವಪ್ನದ ಹೊಳೆ, ಪುಟ- ೨೦೭-೨೦೮

ಲಚ್ಚ ಐತಾಳರಗೆ ಅರವತ್ತು ಸಮೀಪದ ಪ್ರಾಯ, ಇವರ ತಂದೆಯ ಮರಣದ ತರುವಾಯ ಪುರೋಹಿತ ನಾರಾಯಣ ಹೆಬ್ಬಾರರ ಮನೆ ಹಾಗೂ ಸುತ್ತಮುತ್ತಲಿನ ಹಳ್ಳಿಗಳಲ್ಲಿ ನಡೆಸುತ್ತಿರುತ್ತಾರೆ. ತನ್ನ ತಂದೆಯಿಂದ ಬಂದ ಆಸ್ತಿಯನ್ನು ಅಣ್ಣ ತಮ್ಮಂದಿರ ನಡುವೆ ಪಾಲು ಮಾಡಿಕೊಂಡು ಬದುಕು ಸಾಗಿಸುವಾಗ, ನಾರಾಯಣ ಹೆಬ್ಬಾರರು ಇವರಿಗೆ ಗುರು ಕಾಣಿಕೆಯಾಗಿ ಕೊಟ್ಟು ಭೂಮಿಯನ್ನು ಸಾಗುವಳಿ ಮಾಡುತ್ತಾರೆ. ಈ ಕುರಿತು ಕಾರಂತರು ಪ್ರಸ್ತಾಪಿಸುತ್ತಾರೆ.

"ಲಚ್ಚ ಐತಾಳರಿಗೆ ತಮ್ಮ ತಂದೆಯ ಸ್ಥಾನದಲ್ಲಿ ಹೆಬ್ಬಾರರ ಮನೆಯ ಗುರುಪಟ್ಟಕ್ಕೆ ಏರಿಸಲ್ಪಟ್ಟ ಮೇಲೆ ಯಾವುದೇ ಮಾನಸಿಕ ಸಮಸ್ಯೆ ಕಾಣಿಸಲಿಲ್ಲ ಎಂಬಂತಿಲ್ಲ. ಸಂಸಾರಿಯಾದವನಿಗೆ ತೊಡಕು, ತೋರಿದರೆ ಕಷ್ಟ, ನಿಷ್ಟುರ, ಇಲ್ಲದ ಕಾಲ ಉಂಟೆ? ಕೃಷಿಕ ಜೀವನದಲ್ಲಿ ಮಳೆಯ ಚಿಂತೆ, ಬೆಳೆಯ ಚಿಂತೆ, ಇಂಥವು ಇದ್ದೇ ಇವೆ. ಇರುವ ಇಪ್ಪತ್ತು ತೆಂಗಿನ ಮರಕ್ಕೆ ಸಮನಾದ ಆರೈಕೆ ಬೇಕು, ಗೊಬ್ಬರ ಬೇಕು ಬೇಸಿಗೆಯಲ್ಲಿ ನೀರನ್ನು ಹಾಕಬೇಕು, ಹಾಳು ದುಂಬಿಗಳ ಉಪದ್ರ ಬೇರೆ, ಯಾವುದಾದರೂ ಹಳೆಯ ದೇವಸ್ಥಾನದ ಜಂತಿ, ತೊಲೆಗಳನ್ನು ಕೊರೆದು ತೂತು ಮಾಡಿ ನಿದ್ರಿಸಬಹುದಾದ ಆ ದುಂಬಿಗಳಿಗೆ ತೆಂಗಿನ ಹೊಸ ಸುಳಿಗಳ ಮೇಲೆ ಅಂಥಾ ಕಣ್ಣು ಏಕೆ ಬೀಳಬೇಕು? ಅವು ತೆಂಗಿನ ಸುಳಿಯನ್ನು ಹೊಕ್ಕರೆ ಇಡೀ ವರ್ಷದ ಬೆಳವಣಿಗೆಯೇ ನಿಲ್ಲುತ್ತದೆ. ಲಚ್ಚ ಐತಾಳರು ಅವುಗಳ ಪತ್ತೆಗೆ ಹೊರಡಬೇಕು."[೮೫] ಲಚ್ಚ ಐತಾಳರು ಇಂತ ನಿಸರ್ಗದ ಆಡಚಣೆಗಳೊಂದಿಗೆಯೂ ಸಹ, ಕೃಷಿ ಮಾಡುವ ಮೂಲಕ ನಿಸರ್ಗವನ್ನು ಅವಲಂಬಿಸಿ ಬದುಕುತ್ತಾರೆ. ಬಾರಕೂರಿನ ನಾರಾಯಣ ಹೆಬ್ಬಾರರು ತನ್ನ ಭೂಮಿಯನ್ನು ಗೇಣಿಗೆ ಕೊಟ್ಟು ಬದುಕು ಸಾಗಿಸುತ್ತಾರೆ ಮತ್ತು ತನ್ನ ಕೈಯಲ್ಲಾದಷ್ಟು ಪರರಿಗೆ ಸಹಾಯ ಮಾಡುತ್ತಾರೆ. ಆದರೆ ಕೊಕ್ಕರಣಿಯ ರಾಮಪ್ಪನ ಭೂಮಿಯನ್ನು ಸಾಲಕ್ಕಾಗಿ ಪಡದು ನಿಷ್ಕರುಣಿಯಾಗಿ ನಡೆದುಕೊಳ್ಳುತ್ತಾನೆ.

ಹೆಬ್ಬಾರರು ತನ್ನ ಮಗಳಾದ ಸರಸ್ವತಿಯನ್ನು ಅರಬೈಲಿನ ಆಸ್ತಿವಂತ ಮಹಾಬಲನಿಗೆ ಕೊಟ್ಟು ವಿವಾಹ ಮಾಡಿದರು. ಕಾಲಾಂತರದಲ್ಲಿ ಆಗ ಸರಸ್ವತಿಯು ಗಂಡ ಮಹಾಬಲನು ಸತ್ತನಂತರ, ವ್ಯವಸಾಯವನ್ನು ಒಕ್ಕಲು ಮೂಲಕ ಮಾಡಿಸುತ್ತಾ, ನಿಸರ್ಗದೊಂದಿಗೆ ಬದುಕುತ್ತಾಳೆ. ಕೊಕ್ಕರಣಿ ರಾಮಪ್ಪಯ್ಯ ಬಡವರಿಗೆ ದಾನ ಮಾಡುವ ಮೂಲಕ ಇದ್ದ ಸಂಪತ್ತನ್ನು ಕಳೆದುಕೊಳ್ಳುತ್ತಾನೆ. ಆಸ್ತಿಯನ್ನು ಹೆಬ್ಬಾರರಿಗೆ ಅಡವಿಟ್ಟು ಹೆಂಡತಿ ಪದ್ಮಾವತಿ ಮತ್ತು ಮಗ ನಾಗಪ್ಪನನ್ನು ಬೀದಿ ಪಾಲು ಮಾಡಿ ಮರಣ ಹೊಂದುತ್ತಾನೆ.. ಪದ್ಮಾವತಿಯು ಹೋಗುವ ಸಂದರ್ಭದಲ್ಲಿ ಕಾರಂತರು ಪ್ರಕೃತಿಯ ವರ್ಣನೆಯನ್ನು ಮಾಡುತ್ತಾರೆ. ಪದ್ಮಾವತಿಯು ಈ ಸಂದರ್ಭವನ್ನು ಅವಲಂಬಿಸುವುದು ಪ್ರಮುಖವಾಗಿ ಕಂಡು ಬರುತ್ತದೆ.

"ಹೊತ್ತು ನೆತ್ತಿಗೆ ಬಂದಾಗ: ದಾರಿಯ ಮಗ್ಗುಲಲ್ಲಿ ಒಂದು ತೋಡು ಕಾಣಿಸಿತು. ಅದರಲ್ಲಿ ಒಂದಿಷ್ಟು ತಿಳಿ ನೀರು ಹರಿಯುವುದು ಕಾಣಿಸಿತು. ಮುಖ ಕೈಕಾಲುಗಳನ್ನು ತೊಳೆದುಕೊಂಡು ಬೊಗಸೆ ನೀರನ್ನು ಕುಡಿದರು. ಇದ್ದುದರಲ್ಲಿಯೇ ಒಂದಿಷ್ಟು ತೃಪ್ತಿ! ಸುದೈವಕ್ಕೆ ಬೀದಿಯ ಬಳಿ ಬೆಳೆದಿದ್ದ ಹಿರಿಯ ಮಾವಿನ ಮರವೊಂದು

೮೫. ಶಿವರಾಮ ಕಾರಂತ, ಧರ್ಮರಾಯನ ಸಂಸಾರ, ಪುಟ –೨೦

ಅಪ್ಯಾಯ ಮಾನವಾದ ತಂಪು ನೆರಳನ್ನು ಕಡೆದಿತ್ತು. ಇಬ್ಬರೂ ಹೋಗಿ ಅದರ ಆಸರೆಯನ್ನು ಪಡೆದರು. ನಾಗಪ್ಪಯ್ಯನಿಗೆ ಹಿಗ್ಗೇಹಿಗ್ಗು! ಮರದ ಕೆಳಗೆ ಮಂಗಗಳು ಕೆಡೆದ ಹುಳಿ, ಸವಿ, ಮಾವಿನ ದರ್ಶನದಿಂದ ಪುಳಕಿತನಾದ "[೮೬]

ಹೀಗೆ ವಿಶಾಲವಾದ ನೆರಳಲ್ಲಿಯು ಪದ್ಮಾವತಿ ಮತ್ತು ನಾಗಪ್ಪರವರು ನಿಸರ್ಗವನ್ನು ಅವಲಂಬಿಸುತ್ತಾರೆ. ಇದು ಮಾನವನ ಸ್ವಭಾವವಾಗಿದೆ. ಏಕೆಂದರೆ ಮನುಷ್ಯನಿಗೆ ನಿಸರ್ಗವು ತುಂಬಾ ಅವಶ್ಯಕವಾಗಿದೆ. ನಿಸರ್ಗ ಇಲ್ಲದೆ ಅವನು ಒಂದು ಕ್ಷಣವು ಜೀವಿಸನು. ಈ ಭೂಮಿಯ ಮೇಲೆ ಅವನಿಗೆ ಸಾಧ್ಯವಿಲ್ಲ ಎನ್ನಬಹುದಾಗಿದೆ. ಕಾರಂತರು ನಿಸರ್ಗ ಮತ್ತು ಮಾನವ ಸಂಬಂಧ ಗಳನ್ನು ಕುರಿತು ಈ ಕಾದಂಬರಿಯ ಉದ್ದಕ್ಕೂ ಹೇಳುತ್ತಾರೆ. ಬಾರ್ಕೂರಿನ ಸಮೀಪದಲ್ಲಿರುವ ಬೇಳೂರು ಗ್ರಾಮದ ಶಿವರಾಮಯ್ಯನು ಬೇಸಾಯ ಮಾಡುವುದರ ಮೂಲಕ ನಿಸರ್ಗದೊಂದಿಗೆ ಸಂಬಂಧ ಹೊಂದುತ್ತಾನೆ. ಇವರ ಬಗ್ಗೆ ಕಾರಂತರು ಪ್ರಸ್ತಾಪಿಸುತ್ತಾರೆ.

"ಅಲ್ಲಿನ ಜನರಲ್ಲಿ ಶ್ರೀಮಂತರು ಕಡಿಮೆ,ನೆಲೆ ಅಷ್ಟೊಂದು ಫಲವತ್ತಾದುದಲ್ಲ. ಜನರೂ ಅಷ್ಟೊಂದು ಶ್ರೀಮಂತರಲ್ಲ. ಅಷ್ಟೊಂದು......ಅಂಥವರಲ್ಲಿ ಬೇಳೂರು ಶಿವರಾಮಯ್ಯನವರೂ ಒಬ್ಬರು: ಅವರು ನಾಲ್ಕೈದು ಮುಡಿಗದ್ದೆ ಬೇಸಾಯ ಮಾಡುತ್ತಾರೆ. ಇಪ್ಪತ್ತು ತೆಂಗಿನ ಮರಗಳಿವೆ. ಅವರ ನಿಜವಾದ ಸಂಪತ್ತು ಎಂದರೆ ಕಷ್ಟ ಪಟ್ಟು ದುಡಿಯಬಲ್ಲ. ಇಬ್ಬರು ಗಂಡು ಮಕ್ಕಳು, ಮೂವರು ಹೆಣ್ಣು ಮಕ್ಕಳು...... ಅವರ ಹೆಂಡತಿ ಬಲು ಗಟ್ಟಿಗಿತ್ತಿ ಬೇಸಾಯದಲ್ಲಿ ಅಚ್ಚುಕಟ್ಟು ಬಲ್ಲವಳು, ತನ್ನ ಆಯ, ಅಳತೆಯೊಳಗೆ ಬಾಳಿದವಳು."[೮೭]

ಶಿವರಾಮಯ್ಯ ಮತ್ತು ಅವನ ಹೆಂಡತಿಯು ಕೃಷಿ ಮಾಡುವ ಮುಂಖಾಂತರ ನಿಸರ್ಗವನ್ನು ನಂಬಿ ಬದುಕುತ್ತಾರೆ. ಕಾರಂತರು ಈ ಕಾದಂಬರಿಯಲ್ಲಿ ವರ್ಣಿಸುವ ನಿಸರ್ಗವನ್ನು ಕುರಿತು ರಾಧಾಮಣಿ ಶಾಸ್ತ್ರೀಯವರು *"ಈ ಕಾದಂಬರಿಯಲ್ಲಿ ಅನೇಕ ಕಡೆ ಪ್ರಕೃತಿ ಸೊಬಗಿನ ವರ್ಣನೆಯು ಓದುಗರ ಮನ ಸೆಳೆಯುತ್ತದೆ. ಸ್ವತಃ ಚಿತ್ರಕಾರರೂ, ನಿಸರ್ಗ ಪ್ರಿಯರೂ ಆದ ಕಾರಂತರ ಈ ನಿರೂಪಣೆ ಕಾದಂಬರಿಗೆ ಅಲ್ಲಲ್ಲಿ ಕಳೆಯನ್ನು ಕೊಟ್ಟಿದೆ. ಘಟ್ಟದ ಕೆಳಗಿನ ಸೀಮೆಯಿಂದ ತನ್ನ ತೌರೂರಿನ ಸೊಬಗನ್ನು ಅಲ್ಲಿನ ನಿಸರ್ಗ ಸೌದರ್ಯವನ್ನು ಅನುಭವಿಸಿದ ಪದ್ಮಾವತಿಯ ಅನುಭವದ ವರ್ಣನೆ ಇದಕ್ಕೊಂದು ಉದಾಹರಣೆ ಎನ್ನುತ್ತಾರೆ."*[೮೮] ಇಲ್ಲಿ ರಾಧಾಮಣೆ ಶಾಸ್ತ್ರಿಯವರು ಹೇಳುವ ಮಾತುಗಳು ಸತ್ಯವಾಗಿವೆ.

ಕಾರಂತರು ಹೀಗೆ ನಿಸರ್ಗದೊಂದಿಗೆ ಬದುಕುವ ಪಾತ್ರಗಳ ಮಾದರಿಯನ್ನು ಗುರುತಿಸುತ್ತಾರೆ. ನಿಸರ್ಗವು ಮಾನವನಿಗೆ ವರದಾನ. ಈ ವರದಾನದಿಂದ ಅವನು ಯಾವುದೇ ಅಳುಕಿಲ್ಲದೆ ಬದುಕುತ್ತಿದ್ದಾನೆ. ಈ ರೀತಿಯಾಗಿ ಬದುಕುವ ಪಾತ್ರಗಳಲ್ಲಿ, ನಾರಾಯಣ ಹೆಬ್ಬಾರರ ಮಕ್ಕಳಾದ ರಾಮದೇವರು ಮತ್ತು ಕೃಷ್ಣದೇವ ತನ್ನ ತಂದೆಯ ಆಸ್ತಿಯ ಹಿಸ್ಸೆಗಾಗಿ ವಾಗ್ವಾದ ನಡೆಸುತ್ತಾರೆ. ಅಸಂತರ ಒಸ್ಸೆಮಾಡಿಕೊಂಡು ಊರಿನಲ್ಲಿ ಆಸ್ತಿಯನ್ನು ಗೇಣಿಗೆ ಪಡೆದು ನಿಸರ್ಗ

೮೬. ಅದೇ, ಪುಟ-೧೨೯
೮೭. ಅದೇ, ಪುಟ-೧೩೬
೮೮. ನಾಗ ಐತಾಳ, ಕಾರಂತ ಚಿಂತನ ಹೊರನಾಡು ಕನ್ನಡಿಗರಿಂದ, ಪು-೨೨೩

ದೊಂದಿಗೆ ಬದುಕುತ್ತಾರೆ. ಕಾರಂತರು ಈ ಕಾದಂಬರಿಯಲ್ಲಿ ನಿಸರ್ಗವನ್ನು ಕೃಷಿಗಾಗಿ ಭೂಮಿ ಪಡೆಯಲು ಹವಣಿಸಿ ಅದರಲ್ಲಿ ಸಫಲತೆ ಮತ್ತು ವಿಫಲತೆಯನ್ನು ಪಡೆಯುವ ಪಾತ್ರಗಳ ಚಿತ್ರಣ ಮಾಡುತ್ತಾರೆ.

ನಷ್ಟದಿಗ್ಗಜಗಳು ಕಾದಂಬರಿಯಲ್ಲಿ ಕಾರಂತರು ತಮ್ಮ ಪ್ರವಾಸದ ನೆನಪಿಗಾಗಿ ಕಾಲ್ಪನಿಕವಾದ ಕಥೆಯೊಂದಿಗೆ ಪಾತ್ರಗಳನ್ನು ಸೃಷ್ಟಿಸಿ ಮನುಷ್ಯ ಸಂಬಂಧಗಳನ್ನು ಗುರುತಿಸುತ್ತಾರೆ. ಇಲ್ಲಿ ಬರುವ ಪಾತ್ರಗಳೆಂದರೆ ಡಾ.ಜೈನಿ, ಶಿವಶಂಕರ ಗುಪ್ತ, ಪ್ರತಾಪಸಿಂಗ್, ರೂಪಚಂದ ಮುಂತಾದವರು. ಕಾರಂತರು ಈ ಕಾದಂಬರಿಯಲ್ಲಿ ತಾನು ಸಹ ಒಂದು ಪಾತ್ರವಾಗಿ, ನಿರೂಪಕರಾಗಿ ಕಾರ್ಯ ನಿರ್ವಯಿಸುತ್ತಾರೆ. ರೈಲಿನಲ್ಲಿ ಪ್ರಯಾಣ ಮಾಡುತ್ತಿರುವ ಸಂದರ್ಭದಲ್ಲಿ ಪರಿಚಯವಾದ ಶಿವ ಶಂಕರಗುಪ್ತ, ಡಾ. ಪಾರಸನಾಥ ಜೈನಿ ಇವರೆಲ್ಲರೊಂದಿಗೆ ಮಾಗಾಂವ್ ಊರಿನ ಬಗ್ಗೆ ಚರ್ಚೆ ಮಾಡುತ್ತಾರೆ. ಶಿವಶಂಕರ ಗುಪ್ತ ಆ ಊರನ್ನು ಕುರಿತು "*ಆ ಮಾಗಾಂವ್ ತುಂಬಾ ಚಂದದ ಊರು! ರಾಮಾಯಣದ ಪಂಚವಂಟಿಯೇ ನಮ್ಮ ಊರು ನಮ್ಮ ಊರಿನ ಸುತ್ತಮುತ್ತಲೆಲ್ಲ ವನ ಸಮೃದ್ಧವಾದ ಕಾಡು ಮೇಡುಗಳಿವೆ. ಅವುಗಳಲ್ಲಿ ಹರಿಣಗಳಿವೆ , ಬಾರಾಸಿಂಗಗಳಿವೆ, ನವಿಲುಗಳಿವೆ, ಇಂದ್ರ ಮುನಿಸಿಗೊಳ್ಳದ ಕಾಲದಲ್ಲಿ ನಮ್ಮ ನಾಡಿನ ಕೊಳಗಳು, ಸರೋವರಗಳು ನೀರಿನಿಂದ ತುಂಬಿಕೊಳ್ಳುತ್ತವೆ.*"[೮೯] ಮಾಗಾಂವ್ ಬಗ್ಗೆ ಪರಿಚಯವಾದ ಮೇಲೆ ಕಾರಂತರು ಅದನ್ನು ನೋಡಲು ಇಚ್ಛಿಸುತ್ತಾರೆ. ಈ ರೀತಿಯಾಗಿ ವಿವರಣೆ ಕೊಟ್ಟ ಶಿವಶಂಕರ ಗುಪ್ತನ ನಿಸರ್ಗದ ಪ್ರೇಮ ತಿಳಿಯುತ್ತದೆ. ಮತ್ತು ಅದರ ಅವಲಂಬನೆಯಿಂದ ಏನು ಪ್ರಯೋಜನವೆಂದು ತಿಳಿಯುತ್ತದೆ.

ಡಾ. ಜೈನಿಯವರ ತಾವು ಚಿಕ್ಕವರಿದ್ದಾಗ ತಾವು ಕಂಡ ನಿಸರ್ಗವನ್ನು ಹೋಲಿಕೆ ಕೊಟ್ಟು ಹೇಳುತ್ತಾರೆ. ನಾನು ಎಳೆಯವನಿದ್ದಾಗ ನವಿಲು, ಹರಿಣಗಳನ್ನು ಸುತ್ತಮುತ್ತಲೆಲ್ಲ ಕಂಡಿದ್ದೇನೆ. ಆಗ ಈ ಕಾಡಿಗೆ ಬಂದದ್ದೆ ನೆನಪಾಗುವುದಿಲ್ಲ. ಈ ಉದ್ಯಾನ ರಚಿತವಾದ ಬಳಿಕ ಇಲ್ಲೇ ಸಮೀಪದಲ್ಲಿ ನವಿಲುಗಳ ಕೇಕೆ ಕೇಳಿದ್ದೆ ನಮ್ಮ ಊರಿನ ಹಿರಿಯರ ಕೇಕೆ ಕೇಳಿದ್ದೆ! ನಮ್ಮ ಊರಿನ ಹಿರಿಯರನ್ನು ಕೇಳಿದರೆ ಅವರು ಮಾಗಾಂವನಿಂದ ಹೊರಕ್ಕೆ ಕಾಲಿರಿಸಿದವರೆಲ್ಲ ಹರಿಣ. ಜಿಂಕೆಗಳ ದರ್ಶನ ಉಂಟಾಗುತ್ತಿತ್ತು ಅನ್ನುತ್ತಾರೆ. ಮನೆಯ ಹಿಂದಿನ ತಿಪ್ಪೆ ರಾಶಿಗಳ ತನಕವೂ ನವಿಲುಗಳು ಬರುತ್ತಿದ್ದವು ಅನ್ನುತ್ತಿದ್ದರು.

ಡಾ.ಜೈನಿಯವರಿಗೆ ತುಂಬಾ ಬೇಸರವಾಗಿ ಈ ಮಾತುಗಳುನ್ನು ಹೇಳುತ್ತಿದ್ದಾರೆ. ಏಕೆಂದರೆ ಇಂದು ನಿಸರ್ಗ ನಾಶವಾಗಿದೆ. ಆದ್ದರಿಂದ ಮನುಷ್ಯನ ಬದುಕು ಮುಂದೆ ಇನ್ನೂ ಕ್ಲಿಷ್ಟಕರವಾಗಲಿದೆ. ಆದ ಕಾರಣವಾಗಿ ಡಾ.ಜೈನಿಯವರು ತಮ್ಮ ಬಾಲ್ಯದ ಕಾಲದಲ್ಲಿ ತಮ್ಮ ಹಿರಿಯರು ಹೇಳುತ್ತಿದ್ದ ಮಾತುಗಳನ್ನು ಹೇಳುವ ಮೂಲಕ ಆತನ ಪ್ರೇಮವನ್ನು ವ್ಯಕ್ತಪಡಿಸುತ್ತಾರೆ.

೮೯. ಶಿವರಾಮ ಕಾರಂತ, ನಷ್ಟ ದಿಗ್ಗಜಗಳು, ಪುಟ-೨೫೮

ಕಾರಂತರು ಶಿವಶಂಕರ ಗುಪ್ತರೊಂದಿಗೆ ಸಂಚಾರ ಮಾಡುವಾಗ ಮಾಗಾಂವ್ ಜನರ ಬಗ್ಗೆ ಹೇಳುತ್ತಾರೆ. ಶಿವಶಂಕರ ಗುಪ್ತರಿಂದ ತಿಳಿಯುತ್ತದೆ.

"ನಮ್ಮ ಊರವರು ಸರಸ್ಸು, ಕೆರೆ, ಕೊಳಗಳ ವಿಚಾರದಲ್ಲಿ ಅವು ಬೇಸಾಯಕ್ಕೆ ಯಾವ ಪ್ರಯೋಜನ ತಂದೀತೆಂದು ಯೋಚಿಸುವವರೇ ಹೊರತು, ನಿಮ್ಮಂತೆ ಅದರ ಚೆಲುವನ್ನೋ, ಅಲ್ಲಿ ಹಕ್ಕಿಗಳನ್ನೋ ಕಾಣುವ ಉತ್ಸಹದವರಲ್ಲ!"[೯೦]

ಶಿವಶಂಕರ ಗುಪ್ತರ ಮಾತುಗಳಲ್ಲಿ ಗ್ರಾಮೀಣ ಜನತೆಯ ನೈಸರ್ಗಿಕ ಜೀವನದ ಚಿತ್ರಣ ತಿಳಿಯುತ್ತದೆ. ಈ ಗ್ರಾಮೀಣ ಬದುಕು ತಿಳಿಯುತ್ತದೆ. ಆದರೆ ಶಿವಶಂಕರ ಕಾರಂತರನ್ನು ಕುರಿತು ಹೇಳುವ ಮಾತುಗಳಾದ 'ಉತ್ಸಾಹದವರಲ್ಲ' ಎನ್ನುವುದರಲ್ಲಿ ನಿಸರ್ಗವನ್ನು ಕುರಿತ ಆಧುನಿಕ ಜನರ ಮನಸ್ಸು ತಿಳಿಯುತ್ತದೆ.

ಈ ಕಾದಂಬರಿಯಲ್ಲಿ ಬರುವ ಧುನೀಚಂದ, ರೂಪ ಚಂದರು ಚಿನ್ನದ ವ್ಯಾಪಾರಿಗಳು, ಇವರು ನಿಸರ್ಗದಲ್ಲಿ ದೊರೆಯುವ ಚಿನ್ನವನ್ನು ಕೊಂಡು ಮಾರುವುದರ ಮೂಲಕ ಜೀವನವನ್ನು ನಡೆಸುತ್ತಾರೆ. ಅದೇ ರೀತಿ ಪ್ರತಾಪಸಿಂಗರು ಕಾಡನ್ನು ಗುತ್ತಿಗೆ ಆಧಾರದ ಮೇಲೆ ಪಡೆದು ಅರಣ್ಯೋದ್ಯಮ ನಡೆಸುತ್ತಾರೆ. ಈ ಉದ್ಯಮದಲ್ಲಿ ಆದಿವಾಸಿಗಳ ಬಗ್ಗೆ ಕಾರಂತರು ಡಾ. ಜೈನಿಯವರೊಂದಿಗೆ ಚರ್ಚೆ ಮಾಡುತ್ತಾರೆ.

"ಈ ಆದಿವಾಸಿಗಳು ಅಲ್ಲಿ, ಇಲ್ಲಿ ಹಂಚಿ ಬಿದ್ದ ಹಲವಾರು ಬುಡುಕಟ್ಟುಗಳಿಗೆ ಸೇರಿದವರು ಅವರ ಸ್ಥಾನಮಾನಗಳು ಒಂದೊಂದು ತರ, ಅವರ ನಿತ್ಯ ಜೀವನ ಒಂದೇ ತೆರನಾಗಿದ್ದರೂ, ಅವರ ರೀತಿ ಬೇರೆ ಪೇಟೆ ಪಟ್ಟಣಗಳ ಮೋಹ ಅವರಿಗಿಲ್ಲ. ನಮ್ಮ ನಿಮ್ಮಂತೆ ದುಡ್ಡನ್ನು ಗಳಿಸಿ, ಕೂಡಿಸಿ, ಬ್ಯಾಂಕ್ ಲೆಕ್ಕಾಚಾರವನ್ನು ಬೀಗಿಸಿ ಸಂತೋಷ ಪಡುವ ಸ್ವಭಾವ ಅವರದ್ದಲ್ಲ, ಅಲ್ಪ ತೃಪ್ತರು ಅವರು ತಾವಿರುವ ವನ ಪ್ರದೇಶದ ಗಿಡಗಳಿಂದ ಏನು ಸಿಗುತ್ತದೆಯೋ ಅದು ಅವರ ಆಹಾರ. ಇಂದಿಗೂ ಗೆಡ್ಡೆ ಗೆಣಸು ಅವರ ಆಹಾರ. ಅದನ್ನೇ ತೀರ ನೆಚ್ಚಬಾರದೆಂದು: ಈ ಬೆಟ್ಟಗಳಲ್ಲಿ ಬೆಳೆಯ ಬಹುದುದಾದ ನವಣೆ; ಸಜ್ಜೆ ಜವಾರಿ ಬೆಳೆಗಳನ್ನು ಬೆಳೆಯುತ್ತಾರೆ."[೯೧]

ಕಾರಂತರು ಈ ಆದಿವಾಸಿಗಳನ್ನು ಕುರಿತು ಪ್ರಸ್ತಾಪ ಮಾಡುವ ಸಂಗತಿಯಲ್ಲಿ ಕಾಡಿನ ಬದುಕು ತಿಳಿಯುತ್ತದೆ. ಕಾಡನ್ನು ಬಿಟ್ಟರೆ ಅವರಿಗೆ ಬೇರೆ ದಾರಿಯಿಲ್ಲ. ಆದರೆ ಪ್ರತಾಪಸಿಂಗರು ಅವರಿಗೆ ಆಧುನಿಕವಾಗಿ ನಡೆಸುವ ಕೂಲಿ ಕಾರ್ಯಗಳನ್ನು ತಮ್ಮ ಅರಣ್ಯೋದ್ಯಮದ ಮೂಲಕ ಕಲಿಸುತ್ತಿದ್ದಾರೆ, ಒಟ್ಟಾರೆ ಆದಿವಾಸಿಗಳು ನಿಸರ್ಗವನ್ನೇ ನಂಬಿ ಬದುಕುತ್ತಾರೆ. ಅದು ಅವರ ಜನ್ಮ ಸ್ಥಳವಾಗಿದೆ.

ಕಾದಂಬರಿಕಾರರು ಹೀಗೆ ತಮ್ಮ ಪ್ರವಾಸದ ಉದ್ದಕ್ಕೂ ಅನೇಕ ವ್ಯಕ್ತಿಗಳನ್ನು ಭೇಟಿ ಮಾಡುವ ಮೂಲಕ ಮಾಗಾಂವ್ ಪ್ರಾಂತ್ಯದ ಬಗ್ಗೆ ತಿಳಿದುಕೊಂಡು, ಸಾತ್ಪೂರ ಬೆಟ್ಟಗಳ ನಡುವೆ ಇರುವ ನಿಸರ್ಗವನ್ನು ಕಾಣುತ್ತ, ಸಂತೋಷಪಟ್ಟು ಅದರ ಪ್ರಕೃತಿಯ ವರ್ಣನೆಯನ್ನು ವರ್ಣಿಸುತ್ತಾರೆ.

---

೯೦. ಅದೇ, ಪುಟ-೨೯೭
೯೧. ಅದೇ, ಪುಟ-೨೩೪

‘ಮೊಗ ಪಡೆದ ಮನ’ ಕಾದಂಬರಿಯಲ್ಲಿ ಕಾರಂತರು ವ್ಯಾಸನ ಕಲಾ ದೃಷ್ಟಿಯನ್ನು ಕುರಿತು ಹೇಳುತ್ತಾರೆ. ವ್ಯಾಸನ ತಂದೆ ಅನಂತರಾಯ, ತಾಯಿ ನಂದಿನಿ, ಇವರು ಕೃಷಿ ಚಟುವಟಿಕೆಯ ಮೂಲಕ ಜೀವನವನ್ನು ಸಾಗಿಸುತ್ತಾರೆ. ಕಾರಂತರು ಕಲಾವಿದ ವ್ಯಾಸನ ಮುಖಾಂತರ ಕಲೆಯ ನೈಜ್ಯತೆಯ ದೃಷ್ಟಿಯಲ್ಲಿ ಹೇಳುತ್ತಾರೆ. ವ್ಯಾಸನ ಕಲೆಯ ಕುರಿತು ಶಂಕರ ಮೊಕಾಶಿ ಪುಣೇಕರವರು *“ಕಾರಂತರ ಮಾನಸಿಕ ಪಕ್ಷಪಾತ, ಭಾರತೀಯ ಕಲೆಗಳೆಲ್ಲವನ್ನು ಸಂಗ್ರಾಹ್ಯವಾಗಿ ನೋಡಲು ಒಪ್ಪದ ಅವರ ಪೋಸ್ಟ್ ರೋಮ್ಯಾಂಟಿಕ್ ಕಲಾ-ತತ್ವ ಆದನ್ನು ಪ್ರತ್ಯಕ್ಷ ಉಪಯೋಗಿಸಿ ತೋರಿಸಿದ ಸನ್ನಿವೇಶಗಳು ನನ್ನಂತಹ ಸಂಪ್ರದಾಯವಾದಿಗೆ ಒಪ್ಪಿಗೆಯಾಗಲಾರವು. ವ್ಯಾಸ ತನ್ನ ಮಯೂರ ನೃತ್ಯ. ಪತಂಗ ನೃತ್ಯ. ಸಾಗರ ನೃತ್ಯಗಳನ್ನು ಹೇಗೆ ರಚಿಸಿದನೆಂಬುದನ್ನು ಕಾರಂತರು ವರ್ಣಿಸಿದ್ದಾರೆ. ವರ್ಣಿಸಲಿ, ಅದನ್ನು ಸುಖವಾಗಿ ಓದಬಹುದು. ಆದರೆ ಸೃಜನ ಕ್ರಿಯೆಯನ್ನು ಸುಲಭ ಕಾರ್ಯಕಾರಣ ರೂಪದಲ್ಲಿ ವಿವರಸಬಹುದೆ? ಮಯೂರ ನೋಡಿಯೇ ಮಯೂರ ನೃತ್ಯ ಹುಟ್ಟಬೇಕು? Mimetic Art ಮತ್ತು Symbolic Art ಗಳಲ್ಲಿ ಯಾವುದು ಶ್ರೇಷ್ಠ? ಕಲಾ ಪ್ರೇಮವೊಂದೇ ಕಲಾವಿದನ ಬಂಡವಾಳವೆ? ವ್ಯಾಸ ನರ್ತಕನದ್ದು, ಕೃಷ್ಣ ಆಗದಿದ್ದನ್ನು ಇವುಗಳಿಂದ ದುಡಿತ (Application) ಒಂದೇ ಕಾರಣವೇ? ಕಲೆ ಕೇವಲ ಭಾವದ ಅಭಿವ್ಯಕ್ತಿಯೇ? ತಾಂತ್ರಿಕ ಕಲೆ ಇರಬಾರದೆ? ಹಾಗಾದರೆ ಭಾರತೀಯ ಕಲೆಗಳ ಅರ್ಥ ವಿವರಣೆ ಮಾಡಿದಂತಾಯಿತೆ? ಕಾರಂತರಿಗೆ ಖಂಡಿತ ಉತ್ತರಗಳು ಗೊತ್ತಿವೆ. ಲಂಡೇಮಿಯಾನ ಕಲೆ ಕಲೆಯನ್ನು ಕಸುಬು, ವ್ಯಾಸರಾಯನ ಕಲೆ, ರಾಮರಾಯನ ಕಲೆಯಂತೂ ಶ್ರೇಷ್ಠಕಲೆ, ಏಕೆಂದರೆ ಆತ ಯಾವ ತಂತ್ರವನ್ನೂ ಅರಿಯದೆ ಸಮುದ್ರ ದಂಡೆಗೇ ಹೋಗಿ ನಿಂತು ಅದರ ತರಂಗಗಳ ಅನುಕರಣೆಯನ್ನು ಪಿಟೀಲಿನ ಮೇಲೆ ಹುಟ್ಟಿ ಕಲಿತವನು.....! ಇಂಥ ಸಮೀಕರಣಗಳನ್ನು ನಾನು ಒಪ್ಪಲಾರೆನು.”*[೯೨]

ವ್ಯಾಸನು ಮಂಗಳೂರಿನಲ್ಲಿ ವಿದ್ಯಾಭ್ಯಾಸ ಮಾಡುತ್ತಾನೆ. ತನ್ನ ತಂದೆಯ ಅಪೇಕ್ಷೆಯಂತೆ ವಕೀಲನಾಗಲು ಹವಣಿಸುತ್ತಾನೆ. ಇಂತಹ ಸಮಯದಲ್ಲಿ ಅವನಿಗೆ, ನಿಸರ್ಗದ ಬಗ್ಗೆ ತುಂಬಾ ಹುಚ್ಚು ತನ ಬಡತನ ನಿಮಿತ್ತ ಹಾಗೂ ತನ್ನ ತಂದೆಯ ಮರಣದ ತರುವಾಯು ಅವನು ತನ್ನ ತಂಗಿಯನ್ನು ಕರೆದುಕೊಂಡು ಅಜ್ಜರ ಕಾಡಿಗೆ ಬೇಸರ ಕಳೆಯಲು ಹೋಗುತ್ತಾನೆ. ನಂತರ ತನ್ನ ತಂಗಿಯ ಅಪೇಕ್ಷೆಯಂತೆ ಮಲ್ಪೆಯ ಕಡಲ ತೀರಕ್ಕೆ ಹೋಗುತ್ತಾನೆ. ಆಗ ತನ್ನ ತಂಗಿಯೊಂದಿಗೆ ಮಾತನಾಡುತ್ತ, ಮುಂದೆ ಸಾಗುತ್ತಾನೆ. ಅವಳ ತಂಗಿಯು ಕಡಲನ್ನು ಕಂಡು ಸಂತೋಷ ಪಡುತ್ತಾಳೆ. ಅವನು ಸಹ ಆ ಪ್ರಕೃತಿಯನ್ನು ಕಂಡು ವಿಸ್ಮಯಪಟ್ಟು ಅನುಭಾವಿಕನಾಗುತ್ತಾನೆ.

“ಎದುರಿಗೆ ವಿಶಾಲವಾಗಿ ಹಾಸಿದ ಕಡಲನ್ನು ನೋಡುತ್ತಾನೆ. ಎಡ ಬಲಗಳಲ್ಲಿ ಪುಟ್ಟ ದ್ವೀಪಗಳಿಗೆ. ನಡುವಣ ನೀಲ ಬಟ್ಟೆಯನ್ನು ಅಳೆದು ಸಾಗಿಸುತ್ತಿರುವ ಹಾಲು ಮಂಜಿಗಳು ದೂರದಲ್ಲಿ ಕಾಣಿಸುತ್ತಿವೆ. ಒಮ್ಮೊಮ್ಮೆ ನೂರಾರು ಕಡಲ ಕಾಗೆಗಳು ಕಲರವ ಎಬ್ಬಿಸಿ ಅವನ ಮುಂದೆ ನೀರಿನ ಅಂಚಿನಲ್ಲಿ ಕುಳಿತುಕೊಳ್ಳುತ್ತವೆ. ಯಮುನೆ ಅವುಗಳನ್ನು ಅಟ್ಟಿಕೊಂಡು ಹೋಗುತ್ತಾಳೆ. ಅವು ಆ ಕ್ಷಣಕ್ಕೆ ಬಾನನ್ನೇರಿ ದೂರ ಹಾರುತ್ತವೆ. ನೀಲ ಪರದೆಯ ಮುಂದೆ ಮಲ್ಲಿಗೆಯ ಹೂವನ್ನು ಚೆಲ್ಲಿದಂತೆ ಕಾಣಿಸುತ್ತದೆ. ಆ ನೋಟ ಇಷ್ಟು ದಿವಸವಾದರು ನಾನು ಇಲ್ಲಿಗೇಕೆ ಬರಲಿಲ್ಲ ಎನಿಸುತ್ತದೆ. ಆತನಿಗೆ ಅಲ್ಲಿ ಇರುವ ಪ್ರತಿಯೊಂದು ಬಾಳಿನ ನಗುವನ್ನು ಸೂಸೂವಂತಿನ.”[೯೩]

೯೨. ಟಿ.ಪಿ.ಅಶೋಕ (ಸಂ), ಈ ಶತಮಾನದ ನೋಟ ಶಿವರಾಮ ಕಾರಂತ, ಪುಟ-೨೧೨

೯೩. ಶಿವರಾಮ ಕಾರಂತ, ಮೊಗ ಪಡೆದ ಮನ, ಪುಟ -೩೫೨

ವ್ಯಾಸನು ಹೀಗೆ ನಿಸರ್ಗವನ್ನು ಕಂಡು ಸಂತೋಷ ಪಡುತ್ತಾನೆ. ಅದೇ ರೀತಿಯಾಗಿ ಬುದ್ದಿವಂತವನಾದ ಈತ ಬಾರಕೂರಿನ ಮಿತ್ರ ನೀಲಾವರದ ಸದಾಶಿವನ ಸಹಾಯದಿಂದ 'ಕನ್ನಡ ಟೈಮ್ಸ್' ಪತ್ರಿಕೆಯ ಸಂಪಾದಕನಾಗಿ ನಂತರ ಹುಬ್ಬಳ್ಳಿಯ ಇಂದುಮತಿಯ ನಾಟಕ ಕಂಪನಿಯಲ್ಲಿ ಸೇರಿ ನೃತ್ಯವನ್ನು ಪ್ರದರ್ಶಿಸುತ್ತಾನೆ. ನಂತರ ಬಾದಾಮಿ ಗುಡ್ಡಗಳಿಗೆ ನವಿಲು ನೃತ್ಯವನ್ನು ನೋಡಲು ಹೋಗಿ ನೃತ್ಯವನ್ನು ಅನುಕರಿಸುವುದರ ಮೂಲಕ ಪ್ರಸಿದ್ದಿಯನ್ನು ಪಡೆಯುತ್ತಾನೆ. ಇದರಿಂದ ಇಂದುಮತಿಗೆ ತುಂಬಾ ಹಣ ದೊರಕುತ್ತದೆ. ನಂತರ ಮುಂಬೈಗೆ ಪ್ರಯಾಣ ಬೆಳೆಸಿದ ವ್ಯಾಸ ಸಮುದ್ರ ದಂಡೆಯಲ್ಲಿ ಕುಳಿತು ಸಮುದ್ರ ಅಲೆಗಳನ್ನು ನೋಡಿ ಅವುಗಳಂತೆ ಪಿಟೀಲು ನುಡಿಸುವುದನ್ನು ಕಲಿಯುತ್ತಾನೆ. ಇದಕ್ಕೆ ಟೂಬಾಳು ಜೊತೆಗೂಡುತ್ತಾಳೆ. ಹೀಗೆ ವ್ಯಾಸ ಪ್ರಕೃತಿಯನ್ನು ಕಂಡು ಅದನ್ನು ಅನುಕರಿಸಿ ಕಲಾವಿದ್ಯೆಯನ್ನು ಕಲಿತು ಅದರೊಂದಿಗೆ ಬದುಕುತ್ತಾನೆ. ನಿಸರ್ಗವಿಲ್ಲದೆ ಕಲೆಯಿಲ್ಲವೆಂದು ತೋರಿಸಿ ಕೊಡುತ್ತಾನೆ.

ಶಂಕರ ಮೊಕಾಶಿ ಪುಣೇಕರವರು ಹೇಳಿರುವಂತೆ ಅಲೆಗಳ ಅನುಕರಣೆ ಅಗತ್ಯವೆ ಎನ್ನುವುದನ್ನು ಪರಿಶೀಲಿಸಿದಾಗ, ಯಾವ ವಿದ್ಯೆಯನ್ನು ಕಲಿಯುಬೇಕಾದರು 'ಗುರು' ಮುಖ್ಯ ಗುರುವಿಲ್ಲದೆ ಏನು ಕಲಿಯಲು ಸಾಧ್ಯವಿಲ್ಲ. ಒಂದು ವೇಳೆ ಗುರು ಇಲ್ಲದಿದ್ದರೂ ಸಹ ಅನುಕರಣೆಯಿಂದ ವಿದ್ಯೆಯನ್ನು ಕಲಿಯಬಹುದು. ಪ್ರಪಂಚದ ಪ್ರತಿಯೊಬ್ಬ ಮನುಷ್ಯನು ನಿಸರ್ಗದಿಂದ ಅಪಾರವಾದ ಪಾಠವನ್ನು ಕ್ಷಣ ಕ್ಷಣಕ್ಕೂ ಕಲಿಯುತ್ತಿರುವುದು ಸತ್ಯ. ಅದೇ ರೀತಿಯಾಗಿ ಇಲ್ಲಿ ವ್ಯಾಸ ನಿಸರ್ಗದಲ್ಲಿರುವ ಪಕ್ಷಿಗಳಾದ ನವಿಲಿನ ನೃತ್ಯವನ್ನು ನೋಡಿ ಕಲಿತಿದ್ದಾನೆ. ಅನುಭವಿಸಿದ್ದಾನೆ. ಅದೇ ರೀತಿಯಾಗಿ ಕಡಲಿನ ಮೊರೆತವನ್ನು ಕಂಡು ಅನುಭವಿಸುತ್ತಿದ್ದಾನೆ. ಅದನ್ನು ಸಂಗೀತದ ಮೂಲಕ ವ್ಯಕ್ತಪಡಿಸುತ್ತಿದ್ದಾನೆ. ಇದರಲ್ಲಿ ಯಾವುದೇ ಲೋಪವಿಲ್ಲ. ಅದೇ ರೀತಿಯಾಗಿ ಕಾರಂತರಲ್ಲಿ ಮಾನಸಿಕ ಪಕ್ಷಪಾತವಿಲ್ಲ. ಕಾರಂತರು ನಿಸರ್ಗ ಕವಿ, ಆದ್ದರಿಂದಲೇ ಅವರು ಇಂತಹ ಪಾತ್ರಗಳನ್ನು ಸೃಷ್ಟಿಸಿದ್ದಾರೆ. ಇದು ಅವರಿಗೆ ಸಾಧ್ಯವೆ ಹೊರತು ಬೇರೆಯವರೆಗೆ ಅಲ್ಲ ಎಂದು ಹೇಳಬಹುದಾಗಿದೆ. ಇದನ್ನು ಈ ಕಾದಂಬರಿಯಲ್ಲಿ ಬರುವ ವ್ಯಾಸನ ತಮ್ಮ ನಾರಯಣ, ತಂಗಿಯ ಮನೆಯವರು ಕೃಷಿ ಮಾಡುತ್ತಾ, ತಮ್ಮ ಜೀವನವನ್ನು ನಡೆಸುವುದರ ಮುಖಾಂತರ ನಿಸರ್ಗವನ್ನು ಅವಲಂಬಿಸಿ ಬದುಕುತ್ತಾರೆ.

'ಇನ್ನೊಂದೆ ದಾರಿ' ಕಾದಂಬರಿಯಲ್ಲಿ ಮನುಷ್ಯ ಸಂಬಂಧಗಳ ನಡುವೆ ಪ್ರಕೃತಿ ಸಂಬಂಧಗಳ ಬಗೆಗಳನ್ನು ಕಾರಂತರು ಹೇಳುತ್ತಾರೆ. ಇದು ಹೇಗೆಂದರೆ ಇಲ್ಲಿ ನಡೆಯುವ ದತ್ತು ಸ್ವೀಕಾರ, ಮತ್ತು ಈ ಸ್ವೀಕಾರಕ್ಕೆ ಭೂಮಿಯ ಧಾನ, ಗಿಳಿಯಾರಿನ ರಾಮಪ್ಪಯ್ಯನ ಮಗಳು ಹೊನ್ನಮ್ಮನನ್ನು ಬನ್ನಾಡಿಯ ಸೋಮಯಾಜಿಯವರ ಮಗ ಲಕ್ಷ್ಮೀರಮಣಿಗೆ ಕೊಟ್ಟು ಮದುವೆ

ಮಾಡಲಾಯಿತು. ಇವರ ಏಕೈಕ ಪುತ್ರ ಮಾದೇವ. ಇವನಿಗೆ ಐದು ಜನ ಮಕ್ಕಳು ಅವುಗಳಲ್ಲಿ ೨ ಗಂಡು ೨ ಹೆಣ್ಣು ಮಕ್ಕಳು. ಇವುಗಳಲ್ಲಿ ಒಂದು ಗಂಡು ಮಗು ನರಸಿಂಹಯ್ಯನನ್ನು ಹೆಸರುಗದ್ದೆ ಸಾಹುಕಾರ ನಾರಾಯಣಪ್ಪಯ್ಯ ಮತ್ತು ಭಾಗ್ಯಮ್ಮ ದಂಪತಿಗಳಿಗೆ ದತ್ತು ಕೊಟ್ಟಿರುತ್ತಾರೆ. ನರಸಿಂಹಯ್ಯನ ಪತ್ನಿ ಜಾನಕಿ, ಈ ದಂಪತಿಗಳ ಮಕ್ಕಳು ಶ್ರೀರಾಮ ಮತ್ತು ಜಯರಾಮ, ನಿಸರ್ಗವನ್ನು ಅವಲಂಬಿಸಿರುವವರು.

ಈ ಕಾದಂಬರಿ ಕುರಿತು ಕೀರ್ತಿನಾಥ ಕುರ್ತುಕೋಟಿಯವರು–"*ಇನ್ನೊಂದೇ ದಾರಿ ಮುಖ್ಯವಾಗಿ ಜಯರಾಮನ ಕತೆ ಆದರೆ ಈ ಕಾದಂಬರಿಯಲ್ಲಿ ಕತೆಗಿಂತ ವ್ಯಕ್ತಿಗಳ ಜೀವನದ ರೀತಿ ಮುಖ್ಯವಾಗಿದೆ. ನಮ್ಮ ದೇಶದಲ್ಲಿ ಈ ಶತಮಾನದಲ್ಲಿ ನಡೆಯುತ್ತಿರುವ ಶ್ರದ್ಧೆ ನಂಬಿಕೆಗಳ ಸಂಕ್ರಮಣದ ಪ್ರಕ್ರಿಯೆ ಈ ಕಾದಂಬರಿಯ ವಸ್ತುವಾಗಿ ಬಂದಿದೆ. ಎಂದಿದ್ದಾರೆ.*"[೯೪]

ಕುರ್ತುಕೋಟಿಯವರು ಈ ಕಾದಂಬರಿಯನ್ನು ಜಯರಾಮನ ಕಥೆಯೆಂದು ಹೇಳಿದರೂ ಸಹ ಅವನು ಆಧುನಿಕ ನೆಲೆಗೆ ಹೊಂದಿಕೊಳ್ಳುವ ಗುಣವನ್ನು ಕಾಣಬಹುದು. ಇವನ ತಂದೆ ನರಸಿಂಹಯ್ಯ ಮತ್ತು ತಾತ ಮಾದೇವ ಹಾಗೂ ಮುತ್ತಜ್ಜಿ ಹೊನ್ನಮ್ಮರು ಪ್ರಮುಖರಾಗಿದ್ದಾರೆ. ಏಕೆಂದರೆ ಇವರು ಬದುಕಿನಲ್ಲಿ ರೂಢಿಸಿಕೊಂಡ ಶಿಸ್ತುಬದ್ಧ ಜೀವನವೇ ಈ ಜಯರಾಮನಿಗೆ ಅಡಿಪಾಯವಾಗಿದೆ. ಈ ಅಡಿಪಾಯವನ್ನು ಹಾಕಿದ ಪಾತ್ರಗಳು ನಿಸರ್ಗದೊಂದಿಗೆ ಹೊಂದುವ ಸಂಬಂಧವು ತುಂಬಾ ಮುಖ್ಯವಾಗಿದೆ. ನರಸಿಂಹನನ್ನು ದತ್ತು ಕೊಟ್ಟ ಕಾರಣವಾಗಿ ಮಾದೇವ ಭೂಮಿಯನ್ನು ಪಡೆದನು. ಇದರಿಂದ ಹೊನ್ನಜ್ಜಿಗೆ ತುಂಬ ಸಂತೋಷವಾಯಿತು. ಆದ್ದರಿಂದ ಇವರು ತೆಂಕು ಬಯಲನ್ನು ಬಿಟ್ಟು ತೊಟ್ಟಿಲು ಬಯಲಿಗೆ ಹೋಗಿ ನೆಲೆಸಿದರು. ಅಲ್ಲಿಗೆ ಬಂದ ಮಾದೇವನ ಬಗ್ಗೆ ಕಾರಂತರು "*ಅವನ ಜೀವನ ಮಾರ್ಪಾಟದ ರೀತಿ ಮಾತ್ರ ಬೇರೆಯೇ ತೆರದ್ದು. ಆತ ದುಡಿಯುವುದಕ್ಕೆ ಅಂಜಿದವನಲ್ಲ. ಅವನ ಮಡಿಯೂ ಅಲ್ಲಿಲ್ಲ. ದುಡಿತ ಹುಟ್ಟಿದ ಜೀವಕ್ಕೆ ಇರುವಂಥದೇ. ಆ ದುಡಿಮೆಯನ್ನು ತಾನೊಬ್ಬ ಗಂಡಸು ಜೀವ, ಮನುಷ್ಯನನ್ನಾಗಿ ಮಾಡುವ ಪ್ರಯತ್ನದಲ್ಲಿ ಬಳಸಿದ ಐದಾರು ವರ್ಷಗಳ ಕಾಲ! ಮುಂದೆ ಅಷ್ಟೊಂದು ದುಡಿಮೆ ಬೇಕಾಗಲಿಲ್ಲ. ತೊಟ್ಟಿಲು ಬಯಲು ಅವರೆಲ್ಲರಿಗೂ ಒಲಿಯಿತು.*"[೯೫]

ಮಾದೇವನು ಹೇಗೆ ತನ್ನ ಸಂಸಾರ ಸಮೇತ ತೊಟ್ಟಿಲ ಬಯಲಿಗೆ ಬಂದು ಕೃಷಿ ಚಟುವಟಿಕೆಯಲ್ಲಿ ತನ್ನನ್ನು ತೊಡಗಿಸಿಕೊಂಡು, ತನ್ನ ಮಕ್ಕಳನ್ನು ಸಾಕಿ ನಿರ್ಗದೊಂದಿಗೆ ಬದುಕುತ್ತಾನೆ. ಮಾದೇವನ ಇಬ್ಬರು ಮಕ್ಕಳಲ್ಲಿ ಒಬ್ಬನಾದ ಶ್ರೀನಿವಾಸ ತಂದೆಯಂತೆ ಕೃಷಿಯಲ್ಲಿ ತೊಡಗುತ್ತಾನೆ. ಈ ಕುರಿತು ಕಾರಂತರು ಪ್ರಸ್ತಾಪಿಸುತ್ತಾರೆ.

---

೯೪. ಟಿ.ಪಿ.ಅಶೋಕ (ಸಂ), ಈ ಶತಮಾನದ ನೋಟ ಶಿವರಾಮ ಕಾರಂತ, ಪುಟ –೨೧೨

೯೫. ಶಿವರಾಮ ಕಾರಂತ, ಇನ್ನೊಂದೇ ದಾರಿ, ಪುಟ –೨೭೩

ಈಗ ಶೀನನಿಗೆ ಮೂವತ್ತೈದು ವರ್ಷಪ್ರಾಯ, ಸೂರ್ಯನಿಗೆ ಎರಡು ವರ್ಷ ಕಡಿಮೆ. ಶೀನ ತಂದೆಯ ಬೆನ್ನನ್ನು ಬಿಟ್ಟವನಲ್ಲ, ಆ ಹೊಲ, ಗದ್ದೆ, ಹಿತ್ತಿಲುಗಳೇ ಅವನ ಸರ್ವಸ್ವ, ಅಡಿಕೆ, ಕಬ್ಬು, ಭತ್ತ ಎಲ್ಲವನ್ನು ಬೆಳೆಯುತ್ತಾರೆ. ಬೆಳೆಯುವುದಕ್ಕಿಂತಲೂ ಹೆಚ್ಚಿನ ಸುಖ, ಸಂತೋಷ ಅವರಿಗೆ ಕಾಣಿಸದು ಮಾದೇವನ ಮಕ್ಕಳು ಸಹ ಕೃಷಿ ಮಾಡಿ, ಬೆವರು ಸುರಿಸಿ ಬೆಳೆಯನ್ನು ಬೆಳೆಯುತ್ತಾರೆ. ನೆಮ್ಮದಿಯಿಂದ ಉಣ್ಣುವ ಮೂಲಕ ಸಂತೋಷಪಡುತ್ತಾರೆ. ಹೀಗೆ ಸಂತೋಷ ಪಡುವುದರ ಮುಖಾಂತರ ನಿಸರ್ಗದೊಂದಿಗೆ ಬದುಕುತ್ತಾರೆ. ನರಸಿಂಹಯ್ಯನ ಮಕ್ಕಳಾದ ಜಯರಾಮ ಮತ್ತು ಶ್ರೀರಾಮನು ತನ್ನ ಮುತ್ತಜ್ಜಿ ಹೊನ್ನಮ್ಮ ಮನೆಗೆ ಬಂದಾಗ, ನಿಸರ್ಗವನ್ನು ಕಂಡು ಸಂತೋಷ ಪಡುತ್ತಾರೆ.

ಜಯರಾಮನಿಗೆ ನಿಸರ್ಗದ ಪ್ರೀತಿ ಹೆಚ್ಚು ಆತ ಬೆಳಗಿನ ಹೊತ್ತು ಮನೆ ಮುಂದಿನ ಗುಡ್ಡಕ್ಕೆ ಅಲೆದಾಡಲು ಹೋಗುತ್ತಾನೆ. *"ಅಲ್ಲಿ ಒಂದು ಹಳೆಗಾಲದ ಹೆಬ್ಬಲಿಸಿನ ಮರ ನಿಂತಿತ್ತು. ಅದರ ಕಾಂಡವೇ ಮೂರು ಜನ ಕೂಡಿದರೂ ಅಪ್ಪಿ ಹಿಡಿಯಲಾರದಷ್ಟು ದಪ್ಪವಾಗಿತ್ತು. ದೈತ್ಯ ಮರ. ಆ ಮರದಲ್ಲಿ ತುಂಬ ಕಾಯಿಗಳಾಗಿದ್ದವು. ಹಣ್ಣು ಆಗುತ್ತಾ ಬಂದಿತ್ತು. ಚಿಲಿಪಿಲಿಗುಟ್ಟುವ ನೂರಾರು ಹಕ್ಕಿಗಳು ಅದರ ಮೇಲೆ ಕುಳಿತು ಸಂತೋಷ ಪಡುತ್ತಿದ್ದವು."*[೯೬]

ಜಯರಾಮ ತಾನೊಬ್ಬ ವಿದ್ಯಾವಂತ ನಾಗರೀಕನಾಗಿ ನಿಸರ್ಗವನ್ನು ನೋಡಿ ಸಂತೋಷ ಪಡುತ್ತಾನೆ. ಈತನು ಹೊಂದಿರುವ ಸಂಬಂಧವು, ತನ್ನ ತಂದೆ ನರಸಿಂಹಯ್ಯ ಮತ್ತು ಅಜ್ಜ ಮಾದೇವರು ನಿಸರ್ಗದೊಂದಿಗೆ ಹೊಂದಿದ ಸಂಬಂಧದ ನಡುವೆ ವ್ಯತ್ಯಾಸವುಂಟು. ಜಯರಾಮ ಕೇವಲ ನಿಸರ್ಗವನ್ನು ಕಂಡು, ಸಂತೋಷಪಡುತ್ತಾ ತೃಪ್ತಿಪಟ್ಟು ಕೊಂಡರೆ, ಮಾದೇವ ಮತ್ತು ನರಸಿಂಹಯ್ಯರು ನಿಸರ್ಗದೊಂದಿಗೆ ಸಂಪೂರ್ಣ ಬೆರೆತು ಕಷ್ಟ – ಸುಖಗಳೆರಡು ಕಾಣುತ್ತಾರೆ. ಹೀಗೆ ಈ ಕಾದಂಬರಿಯಲ್ಲಿ ನಿಸರ್ಗವನ್ನು ನೋಡುವ ದೃಷ್ಟಿಕೋನಗಳ ಅಂತರವನ್ನು ಕಾರಂತರು ಗುರುತಿಸುತ್ತಾರೆ.

ನಿಸರ್ಗವನ್ನು ಧಿಕ್ಕರಿಸಿ ಬದುಕುವ ಪಾತ್ರಗಳು :

ಕಾರಂತರ ಕಾದಂಬರಿಗಳು ಮುಖ್ಯವಾಗಿ ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿಯ ಮತ್ತು ಮಲೆನಾಡಿನ ಸೊಬಗನ್ನು ರಮ್ಯವಾಗಿ ಚಿತ್ರಿಸುತ್ತವೆ, ಕಾರಂತರು ಪರಿಸರ ಪ್ರಿಯರು: ಅದಕ್ಕಾಗಿ ಅವರು ತಮ್ಮ ಜೀವನ ಇಡೀ ಪರಿಸರ ಅಂದೋಲನದಲ್ಲಿ ತೊಡಗಿಸಿಕೊಂಡರು. ಜನರಲ್ಲಿ ಈ ಬಗ್ಗೆ ಅರಿವು ಮೂಡಿಸಲು ತಮ್ಮ ಸಾಹಿತ್ಯವನ್ನು ಬಳಸಿಕೊಂಡರು. ಕಾರಂತರು ತಮ್ಮ ಕಾದಂಬರಿಗಳಲ್ಲಿ ಕರಾವಳಿಯಲ್ಲಿ ಕೇಂದ್ರವಾಗಿಟ್ಟು ಕೊಂಡು ಇಡೀ ವಿಶ್ವದ ನಿಸರ್ಗವನ್ನು ಕುರಿತು

೯೬. ಶಿವರಾಮ ಕಾರಂತ, ಇನ್ನೊಂದೇ ದಾರಿ, ಪುಟ–೨೭೪–೨೭೫

ಚಿಂತಿಸುತ್ತಾರೆ. ಈ ಚಿಂತೆಯಲ್ಲಿ ಮಾನವ ಮತ್ತು ಇಡೀ ಜೀವ ಸಂಕುಲದ ಬದುಕಿನ ಪ್ರಶ್ನೆಗಳು ಅಡಗಿದ್ದು, ಹುಡುಕಲು ಯತ್ನಿಸುತ್ತಾರೆ. ಅಲ್ಲಿಯ ಸಮಸ್ಯೆ ಪರಿಹರಿಸುತ್ತಾರೆ. ಈ ರೀತಿಯ ಉತ್ತರಗಳಲ್ಲಿ ಮನುಷ್ಯನು ನಿಸರ್ಗದೊಂದಿಗೆ ಬದುಕು ಕಟ್ಟಿಕೊಳ್ಳುವ ಸಂಗತಿ ಒಳಗೊಂಡಿರುತ್ತದೆ. ಅಲ್ಲದೆ ಒಂದು ವೇಳೆ ನಿಸರ್ಗದ ವಿರುದ್ಧ ಮಾನವ ನಡೆದುಕೊಂಡಾಗ ಆಗುವ ಅಪಾಯಗಳ ಎಚ್ಚರಿಕೆಯನ್ನು ಕೊಡುತ್ತಾರೆ. ಕೆಲವು ಪಾತ್ರಗಳ ಮುಖಾಂತರ ನಿಸರ್ಗವನ್ನು ದಿಕ್ಕರಿಸಿ ಬದುಕನ್ನು ಕಟ್ಟಿಕೊಳ್ಳುವ ನೆಲೆಗಳ ಪಾತ್ರಗಳನ್ನು ಹಾಗೂ ಅವರ ಬಾಳು ಈ ರೀತಿಯ ವರ್ತನೆಯಿಂದ ಅದೋಗತಿಗೆ ಇಳಿದಿರುವುದನ್ನು ಪರಿಣಾಮಕಾರಿಯಾಗಿ ಗುರುತಿಸಿ, ಆ ಮೂಲಕ ಸಮಾಜಕ್ಕೆ ನಿಸರ್ಗವನ್ನು ಧಿಕ್ಕರಿಸಿ ಬದುಕುವ ವರ್ತನೆಯಿಂದ ಆಗುವ ತೊಂದರೆಗಳನ್ನು ಪರಿಚಯಿಸುತ್ತಾರೆ.

ಕಾರಂತರು ಹೇಳುವ ನಿಸರ್ಗವನ್ನು ದಿಕ್ಕರಿಸಿ ಬದುಕುವ ಪಾತ್ರಗಳು ಅವರ ಕಾದಂಬರಿಗಳಲ್ಲಿ ಇತರ ಪಾತ್ರಗಳ ಜೊತೆ ಪೂರಕವಾಗಿ ಬರುತ್ತವೆ. ಈ ರೀತಿಯಾಗಿ ನಿಸರ್ಗವನ್ನು ತ್ಯಜಿಸಿ ಅಥವಾ ದಿಕ್ಕರಿಸಿ ಬದುಕುವುದಕ್ಕೆ ಅವರಲ್ಲಿನ ವೈಯಕ್ತಿಕ ಕಾರಣಗಳು ಎಷ್ಟು ಮುಖ್ಯವೋ ಅದೇ ರೀತಿಯಾಗಿ ಸಾಮಾಜಿಕ. ರಾಜಕೀಯ. ಆರ್ಥಿಕ ಕಾರಣಗಳು ಮುಖ್ಯವಾಗಿರುತ್ತವೆ, ಈ ಹಿನ್ನೆಲೆಯಲ್ಲಿ. ಈ ಸಂಗತಿಯನ್ನು ಅರಿಯಲು ಅವರ ಕಾದಂಬರಿಗಳನ್ನು ಪರಿಶೀಲಿಸುವುದು ಅಗತ್ಯವಿದೆ,

'ಗೋಂಡರಾಣ್ಯ ಕಾದಂಬರಿ ಭಾರತದ ಸ್ವಾತಂತ್ರ್ಯೋತ್ತರ ರಾಜಕೀಯ ಚಿತ್ರಣವನ್ನು ಕಟ್ಟಿಕೊಡುತ್ತವೆ. ಇಲ್ಲಿ ನಿಸರ್ಗವನ್ನು ದಿಕ್ಕರಿಸಿ ಬದುಕುವ ಪಾತ್ರಗಳೆಂದರೆ ಶ್ರಮವಾದಿ ಪಕ್ಷದ ಸೇತುರಾಯ, ಮಾನಪ್ಪ, ಪ್ರಮುಖರು, ಮಾನಪ್ಪ ಮುಕ್ಕಣ್ಣನ ಮಗ ಮತ್ತು ಸೇತುರಾಯನ ರಾಜಕೀಯ ಗುಪ್ತಚಾರ, ಸೇತುರಾಯನು, ನಿಸರ್ಗವನ್ನು ದಿಕ್ಕರಿಸಿ ಬದುಕು ಸಾಗಿಸುತ್ತಾನೆ. ಜನರು *"ಸೇತುರಾಯನ ಮೇಲಿನ ಅಭಿಮಾನದಿಂದ ಎಂಥ ತ್ಯಾಗಕ್ಕೂ ಸಿದ್ದರಿರುವ, ಧ್ಯೇಯಾಂಧರಾಗಿ ದುಡಿಯುವ ಅವನ ಅನುಯಾಯಿಗಳ ಮೇಲಿನ ಅಭಿಮಾನ ಇನ್ನಷ್ಟು ಹೆಚ್ಚು ಇದನ್ನೆಲ್ಲ ನೆನೆಯುತ್ತ ಹೋದಂತೆ, ಅವರು ಹೂಡಿದ ಮುಷ್ಕರಗಳು, ಸತ್ಯಾಗ್ರಹಗಳು ಕಣ್ಣಿಗೆ ಇದಿರಾಗುತ್ತವೆ. ಕೆಲವು ಅಕಾಲಿವಾದವು: ಕೆಲವು ನ್ಯಾಯ ವೀನವಾದವು. ನೀರ್ಕಟ್ಟೆಯ ಮುಷ್ಕರವಾಯಿತು ದುಡಿಯವವರ ಬಾಯಿಗೆ ಮಣ್ಣಿನ ದೇಶದ ಶ್ರೇಯಸ್ಸಿಗೂ ಹಾನಿ ತಂದದು-ಇವೆಲ್ಲ ಮುಖಂಡರ ಬುದ್ಧಗೇಡಿತನ ಮತ್ತೇನಲ್ಲ"*[೯೭] ಈ ರೀತಿಯ ಮುಷ್ಕರಕ್ಕೆ ಸ್ವಾರ್ಥ ವ್ಯಕ್ತಿಗಳ ಪ್ರೇರಣೆ-ಯಿರುತ್ತದೆ. ಅಂತಹ ಪ್ರೇರಣೆಕಾರರಲ್ಲಿ ಸೇತುರಾಯ ಒಬ್ಬ. ಈ ಮೂಲಕ ನಿಸರ್ಗ ಮತ್ತು ಸಮಾಜಕ್ಕೆ ತೊಂದರೆ ಕೊಡುವುದರ ಮೂಲಕ ಮಾನಪ್ಪ ನಿಸರ್ಗವನ್ನು ದಿಕ್ಕರಿಸಿ ಬದುಕುತ್ತಾನೆ. ಆದರೆ ಇವನು ಜನರ ಸಂಘಟನೆಯನ್ನು ಜನರ ಭಾವನಾತ್ಮಕತೆಯಲ್ಲಿ ಕಟ್ಟಿರುವುದು ಮುಖ್ಯವಾಗಿರುತ್ತದೆ. ಆದರೆ ಇದು ಶಾಶ್ವತವಲ್ಲವೆಂಬುದು ಪ್ರಮುಖ ಸಂಗತಿ ಎನ್ನಬಹುದು.

---

೯೭. ಶಿವರಾಮ ಕಾರಂತ, ಗೊಂಡಾರಣ್ಯ, ಪುಟ -೨೩೧

'ಬೆಟ್ಟದಜೀವ' ಕಾದಂಬರಿಯಲ್ಲಿ ನಿಸರ್ಗದ ನೆಲೆಗಳಲ್ಲಿ ವಾಸಿಸುವ ಗೋಪಾಲಯ್ಯ, ದೇರಣ್ಣಗೌಡ ಮತ್ತು ನಾರಾಯಣಯ್ಯರು ನಿಸರ್ಗದೊಂದಿಗಿನ ಅವಿನಾಭಾವ ಸಂಬಂಧಗಳನ್ನು ಗುರ್ತಿಸುತ್ತಾರೆ. ಗೋಪಾಲಯ್ಯನ ಏಕೈಕ ಮಗ ಶಂಭು ಇವನು ಗೋಪಾಲಯ್ಯನ ಗುಣಕ್ಕೆ ವಿರುದ್ಧವಾದ ದಿಕ್ಕಿನಲ್ಲಿ ನಡೆಯುತ್ತಾನೆ. ಅದನ್ನು ಗೋಪಾಲಯ್ಯ ನಿರೂಪಕ ಶಿವರಾಮಯ್ಯನಿಗೆ ಹೇಳುವ ಮಾತುಗಳಲ್ಲಿ ಅವನ ಗುಣವನ್ನು ತಿಳಿಯಬುಹುದು.

'ಅಂದರೇನು! ಅವನು ಈ ಮಗಳಿಗಿಂತ ಎರಡು ವರ್ಷಕ್ಕೆ ಸಣ್ಣವನು, ನೋಡಿ, ಕಳೆದ ಯುದ್ಧವಾದ ಮೇಲೆ, ಅಡಿಕೆಗೆ ಒಳ್ಳೆಯ ಧಾರಣೆ ಬಂದಿತಲ್ಲ, ಆಗ ನಮ್ಮ ಹವ್ಯಕರ ಕುಲಕ್ಕೇನೆ ಇಂಗ್ಲೀಷಿನ ಹುಚ್ಚು ಹಿಡಿತು. ಈ ಹುಡುಗ ಹುಟ್ಟಿದ್ದು, ಅನಂತರ ಊರು ಮನೆಯವರ ಮಕ್ಕಳು ಆಗಾಗಲೇ ಇಂಗ್ಲೀಷು ಓದಲು ಪುತ್ತೂರು, ಮಂಗಳೂರುಗಳ ಕಡೆಗೆ ನೋಡುತ್ತಿದ್ದ ದಿನ ಅಂಥವರ ಮೇಲ್ಪಂಕ್ತಿ ನನಗೂ ನಾಟಿಕೊಂಡಿತು, ನಾನೂ ವಿಚಾರಗೆಟ್ಟು ತನ್ನ ಶಂಭುವನ್ನು ಇಂಗ್ಲೀಷ್ ಶಾಲೆಯೊಂದಕ್ಕೆ ಹಾಕಿದೆ.

'ಶಂಭೂ ಎಂದು ಅವನ ಹೆಸರೇ'?

"*ಹೂಂ ಬರಿಯ ಪಾಪದ ಹುಡುಗನಿದ್ದ ನೋಡಿ, ತನ್ನ ಶಂಕರಿಯ ಮೊದ್ದು ತನ್ನವೆಲ್ಲ ಅವನಲ್ಲಿತ್ತು. ಅಂಥ ನಮ್ಮ ಮಾಣಿಯು, ಕೊನೆಗೆ ಸಹವಾಸ ದೋಷದಿಂದ ನಮ್ಮ ಮನೆಗೆ ದೂರವಾಗಿ ಬಿಟ್ಟು ಓದುವದಕ್ಕೆಂದು ಪುತ್ತೂರಿಗೆ ಹೋದ ಓದುತ್ತ ಹೋದಂತೆ, ಅವನು ಮನೆಗೆ ಬರುವುದೇ ಕಡಿಮೆಯಾಯಿತು. ರಜೆಗಾದರೂ ಒಮ್ಮೆ ಊರಿಗೆ ಬಂದು ತಾಯನ್ನು ನೋಡಿಕೊಂಡು ಹೋದರೆ ಸಾಕೆಂದರೆನಿಸತು ನನಗೆ ಕೊನೆಗೆ ದೂರವಾದ ವಸ್ತುವೇ ಆಯಿತು*"[೮] ಶಂಭು ಆಧುನಿಕ ಇಂಗ್ಲೀಷ ಶಿಕ್ಷಣವನ್ನು ಪಡೆಯುವುದರ ಮೂಲಕ, ಪೇಟೆಯ ಹಾದಿ ಹಿಡಿಯುತ್ತಾನೆ. ಗೋಪಾಲಯ್ಯ ಅವನಿಗಾಗಿ ಸ್ಥಾಪಿಸಿದ್ದ ಕೆಳಬೈಲಿನ ವ್ಯವಸಾಯ ಭೂಮಿಯನ್ನು ಬಿಟ್ಟುಹೋಗುವುದರ ಮೂಲಕ ನಿಸರ್ಗವನ್ನು ದಿಕ್ಕರಿಸಿ ಬದುಕುತ್ತಾನೆ.

'ಚಿಗುರಿದ ಕನಸು' ಕಾದಂಬರಿಯಲ್ಲಿ ಕಾರಂತರು ಸುಂದರರಾಯ ಮತ್ತು ಪ್ರತಿಮಾದೇವಿ ದಂಪತಿಗಳ ಮಗನಾದ 'ಶಂಕರನ' ನಿಸರ್ಗ ಪ್ರೇಮವನ್ನು ಕೃಷಿಯಲ್ಲಿ ಅವನು ತೊಡಗಿಸಿಕೊಳ್ಳುವುದರಲ್ಲಿ ಗುರುತಿಸಿಸುತ್ತಾರೆ. ಶಂಕರನ ತಾಯಿ ಪ್ರತಿಮಾದೇವಿಗೆ ಕ್ಲಬ್ಬುಗಳಿಗೆ ಮನರಂಜನಾ ಕಾರ್ಯಕ್ರಮಗಳಿಗೆ ಹೋಗುವುದರ ಮೂಲಕ ನಿಸರ್ಗವನ್ನು ದಿಕ್ಕರಿಸಿ ಬದುಕುತ್ತಾಳೆ.

'ಧರ್ಮರಾಯನ ಸಂಸಾರ' ಕಾದಂಬರಿಯಲ್ಲಿ ಕಾರಂತರು ಭೂಮಿಯ ಒಡೆತನಕ್ಕಾಗಿ ಪರಿತಪಿಸುವ ಪಾತ್ರಗಳನ್ನು ಕುರಿತು ಹೇಳುತ್ತಾರೆ. ಆ ಪಾತ್ರಗಳಲ್ಲಿ ನಾರಾಯಣ ಹೆಬ್ಬಾರ, ಕೊಕ್ಕರಣೆ ರಾಮಪ್ಪಯ್ಯ, ನಾರಾಯಣ ಹೆಬ್ಬಾರರ ಪತ್ನಿ ಮಹಾಲಕ್ಷ್ಮೀ ರಾಮಪ್ಪಯ್ಯನ ಪತ್ನಿ ಪದ್ಮಾವತಿ, ಇವರ ಮಗ ನಾಗಪ್ಪಯ್ಯ ಅರೆಬೈಲಿನ ಮಹಾಬಲಯ್ಯ, ಈತನ ಪತ್ನಿ ಸರಸ್ವತಿ ಪ್ರಮುಖರು. ಅರಬೈಲಿನ

---

೮. ಶಿವರಾಮ ಕಾರಂತ, ಬೆಟ್ಟದ ಜೀವ, ಪುಟ - ೨೭

ಮಹಾಬಲರು ತುಂಬಾ ತುಂಟ, ಇವನು ನಿಸರ್ಗವನ್ನು ಧಿಕ್ಕರಿಸಿ ಬದುಕುವ ಪಾತ್ರವಾಗಿ ಕಾರಂತರು ಗುರುತಿಸಿಸುತ್ತಾರೆ. "*ಮಹಾಬಲಯ್ಯ ತಮ್ಮ ವಿಲಾಸಮಯ ಜೀವನದಿಂದಾಗಿ ತಮ್ಮ ಸ್ವಂತ ಮನೆ, ಗದ್ದೆಗಳ ಆರೈಕೆಯನ್ನು ನೋಡುವ ಕಡೆಗೆ ಸಾಕಷ್ಟು ಶ್ರಮವನ್ನು ಹರಿಸಿದ್ದಿಲ್ಲ ಅವರ ಅಪ್ಪನಿರುವಾಗ ಅವರಿಗೆ ಅಂತಹ ವಿಷಯಗಳಲ್ಲಿ ಸಾಕಷ್ಟು ಉತ್ಸಾಹವೂ ಇತ್ತು. ಶ್ರದ್ಧೆಯೂ ಇತ್ತು. ಬೇಕಷ್ಟು. ಹಣವಿತ್ತಾದರೂ- ಅವರೆಂದು ಉದಾಸೀನವಾಗಿ ಕುಳಿತವರಲ್ಲ, ಸ್ವಂತ ದುಡಿಮೆಯನ್ನು ಕಡಿಮೆ ಮಾಡದವರಲ್ಲ. ಹೊಸ ತೆಂಗಿನ ಗಿಡಗಳನ್ನು ಹಾಕಿಸಿ, ನಿತ್ಯವೂ ಅವಕ್ಕೆ ಸುತ್ತು ಬಂದು: ಆ ಗಿಡಗಳ ಆರೈಕೆ ನೋಡುತ್ತಿದ್ದರು*".[೯೯]

ಮಹಾಬಲಯ್ಯನು ಆತನ ತಂದೆ ಮಾಡುತ್ತಿದ್ದ ಕೃಷಿಯನ್ನು ನೋಡಿ ಕಲಿಯಲಿಲ್ಲ: ಬದಲಾಗಿ ಪುಂಡನಾದ, ತನ್ನ ಪತ್ನಿ ಸರಸ್ವತಿಗೆ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡಿದ. ಇದರೊಂದಿಗೆ ವೇಶ್ಯೆಯರ ಸಹವಾಸ ಮಾಡಿದ್ದು ಅಲ್ಲದೆ ಊರಿನ ಒಕ್ಕಲು ಹೆಣ್ಣು ಮಕ್ಕಳನ್ನು ಹಾಳು ಮಾಡುತ್ತಿದ್ದನು. ಹೀಗೆ ಮಾಡುತ್ತಾ, ಕೊನೆಗೊಂದು ದಿವಸ ಕೊಲೆಯಾಗುತ್ತಾನೆ. "ಹೀಗೆ ಮಹಾಬಲನು ತನ್ನ ಗರ್ವದಿಂದ ನಿಸರ್ಗವನ್ನು ಧಿಕ್ಕರಿಸಿ ಬದುಕಿ ನಾಶ ಹೊಂದುತ್ತಾನೆ.

'ಗೆದ್ದ ದೊಡ್ಡಸ್ತಿಕೆ' ಕಾದಂಬರಿ ನಾಗೇಂದ್ರ ಮತ್ತು ನಾಗಾನಂದ ಮೀನಾಕ್ಷಿಯ ಕಥೆಯನ್ನು ಹೇಳುತ್ತದೆ. ನಾಗೇಂದ್ರ ಮುದ್ದೂರಿನ ನಾರಾಯಣಯ್ಯನ ಮಗ. ಈ ಊರಿನಲ್ಲಿ ಊರಗೂಳಿಯಂತೆ ಇದ್ದವನು ಸಂಕಣ ಇವನ ಕುರಿತು ಕಾರಂತರು ಹೇಳುವಾಗ ಅವನಲ್ಲಿನ ಗುಣಗಳಿಂದ, ನಿಸರ್ಗವನ್ನು ಧಿಕ್ಕರಿಸಿ ಬದುಕುವ ಸಂಕಣ್ಣ ಅಹಂಕಾರದ ಮಾತುಗಳು ನಡವಳಿಕೆಯನ್ನು ಕಾರಂತರು 'ಒಂದು ದಿವಸ ಸೂರ್ಯ ಮಗ್ಗುಲಿಗೆ ತಿರುಗಿದ ಮೇಲೆ ಕಬ್ಬಿನ ಹಿತ್ತಲ ಮಗ್ಗಲು ಗದ್ದೆಯಲ್ಲಿ ನಾರಾಯಣಯ್ಯನವರೂ, ಒಬ್ಬ ಆಳೂ ಕೆಲಸ ಮಾಡುತ್ತಿದ್ದರು. ಶಾಲೆ ಇಲ್ಲದರಿಂದ ಲೋ ಏನೋ, ಅವರ ಕಿರಿಯ ಹುಡುಗ ನಾಗೇಂದ್ರನೂ ಅಲ್ಲಿದ್ದ, ಅವರೆಲ್ಲರೂ ಕೂಡಿ ತರಕಾರಿ ನೆಡುವುದಕ್ಕೆ ಕಟ್ಟೆ ಕಟ್ಟುತ್ತಿದ್ದರು: ಆಗೆತ ಮಾಡುತ್ತಿದ್ದರು. ಮೂವರ ಕೈಯಲ್ಲೂ ಹಾರೆಗಳಿದ್ದವು. ಮೂವರೂ ಕೆಲಸದಲ್ಲಿ ತಲ್ಲೀನರಾದರು. ಆ ಹೊತ್ತಿಗೆ ಅವರ ಜತೆಗಿದ್ದ ಅಳು ಪಕ್ಕನೆ ಅಯ್ಯಾ, ಬೀಡಿನ ಸಂಕಣ್ಣ ಸವಾರಿ ಬಂತು' ಎಂಬ ಉದ್ಗಾರವನ್ನು ತೆಗೆದ, ಕಬ್ಬಿನ ಹಿತ್ತಿಲ್ಲ ಮಗ್ಗುಲಿಂದ ಹಾದು ಹೋಗುವ ಏರಿ ಸಂಕಣ್ಣನ ವಾಹಕ್ಕೆ ಸಂಬಂಧಿಸಿದ ಸ್ಥಳವಿರಲಾರದು ಎನಿಸಿ, ನಾರಯಣಯ್ಯ ಆ ಕಡೆಗೆ ತಲೆ ಎತ್ತಿಯೂ ನೋಡಲಿಲ್ಲ. ಬಂದರೆ ಹೋಗುತ್ತಾನೆ ಅವನಷ್ಟಕ್ಕೆ ಎನ್ನುವ ಭಾವನೆಯಿಂದ ಅವರು ನೆಲವನ್ನು ಅಗೆಯುತ್ತಿದ್ದರು. ಸಂಕಣ್ಣ ಆ ಏರಿಯ ದಾರಿಯಾಗಿಯೇ ಬಂದ. ಅಲ್ಲಿಂದ ಕೆಳಕ್ಕೆ ಇಳಿದ; ಕಬ್ಬಿನ ಹಿತ್ತಲಿನ ಬಳಿಯಲ್ಲಿ ನಿಂತು 'ಅಯ್ಯ ನಿಮ್ಮ ಕಬ್ಬು ನೋಡಿ ನನಗೆ ಭಾರಿ ಖುಷಿಯಾಗಿದೆ'! ಎಂದ ಅನಂತರ ಹಿತ್ತಲ ಚೀಟಿಯನ್ನು ಬಗೆದು, ಆಚೀಚೆ ಸುರಿಸಿ, ಸೊಂಟದಿಂದ ಕತ್ತಿಯನ್ನು ತೆಗೆದು, ನಾಲ್ಕು ಕಬ್ಬಿನ ಕಾಂಡಗಳ ಬುಡವನ್ನು ಕತ್ತರಿಸಿದ. ಅವನ್ನು ಈಚೆಗೆ ಎಳೆದು ಸೋಗೆಯನ್ನು ಸವರ ತೊಡಗಿದ. ಅದನ್ನ ಕಂಡು

೯೯. ಶಿವರಾಮ ಕಾರಂತ, ಧರ್ಮರಾಯನ ಸಂಸಾರ, ಪುಟ ೧೮೦-೧೮೧

ನಾರಾಯಣಯ್ಯ ತಾಳ್ಮೆಗೆಟ್ಟು ಕಿಡಿಕಿಡಿ ಕೆಂಡವಾದರು. ಅವರ.. ಅಲ್ಲ, ಯಾರಾದರೂ ಕಷ್ಟಪಟ್ಟು ಬಂದು ನಾಲ್ಕು ಕಬ್ಬನ್ನು ಬೆಳೆದರೆ...' ಎಂದು ಉದ್ಗರಿಸಿದರು.

"ಕಷ್ಟ ಪಡದೆ ಇಷ್ಟು ಲಾಯಕ್ಕೂ ಕಬ್ಬು ಬೆಳೆಯಲಿಕ್ಕೇ ಇಲ್ಲ. ಅಂಥ ಒಳ್ಳೆಯ ಕಬ್ಬನ್ನು ನನ್ನಂಥವರು ತಿನ್ನಬಾರದೆಂದಿಲ್ಲ' ಎಂದ ಸಂಕಣ್ಣ ಅಷ್ಟೇ ಅಲ್ಲ ಕಣ್ಣನ್ನು ಕೆಂಪು ಮಾಡಿ 'ಬಿಡಿ ಆ ಕಬ್ಬನ್ನು'; 'ಬೀಡಿನ ಸಂಕಣ್ಣನ ಹತ್ತಿರ ಜಗಳ ಕಾಯಬೇಡಿ"[೧೦೦] ಎಂಬ ಎಚ್ಚರಿಕೆಯನ್ನು ಕೊಟ್ಟು

ಸಂಕಣ್ಣ ಮೈ ಬಗ್ಗಿಸಿ ದುಡಿಯದ ಸೋಮಾರಿ, ಇವನು ಬೇರೆಯವರು ಕಷ್ಟಪಟ್ಟು ದುಡಿದಿದ್ದರೆ ಅದನ್ನು ಕಿತ್ತು ತಿನ್ನುವುದು ಅವನ ಜಾಯಮಾನ. ಇವನು ನಿಸರ್ಗವನ್ನು ಪರೋಕ್ಷ-ವಾಗಿ ಅವಲಂಬಿಸಿದ್ದರೂ ಸಹ, ಎಂದೂ ನಿಸರ್ಗದೊಂದಿಗೆ ಬೆರೆತವನಲ್ಲ. ಬದಲಾಗಿ ಜನರನ್ನು ತನ್ನ ದೌರ್ಜನ್ಯದಿಂದ ಬೆದರಿಸುತ್ತಿದ್ದ. ಈ ರೀತಿಯಾಗಿ ಇವನು ನಿಸರ್ಗವನ್ನು ದಿಕ್ಕರಿಸಿ ಊರ ಗೂಳಿಯಂತೆ ತಿರುಗಾಡುವ ಮುಖಾಂತರ ಬದುಕುತ್ತಾನೆ.

'ಮರಳಿ ಮಣ್ಣಿಗೆ' ಕಾದಂಬರಿಯಲ್ಲಿ ಮೂರು ತಲೆಮಾರಿನ ಕಥೆಯನ್ನು ಹೇಳುತ್ತಾರೆ. ಈ ಕಾದಂಬರಿ ಕುರಿತು ಅನೇಕರು ವಿವಿಧ ರಿತಿಯಲ್ಲಿ ವಿಮರ್ಶೆಯನ್ನು ಮಾಡಿದ್ದಾರೆ. ಮೊದಲನೆ ತಲೆಮರಿನ ರಾಮ ಐತಾಳ, ಪರೋತಿ, ಸತ್ಯಭಾಮೆ ಮತ್ತು ರಾಮ ಐತಾಳರ ಪಕ್ಕದ ಮನೆಯ ಶೀನಮಯ್ಯ ನವರು, ಇವರ ಊರು ಕೋಡಿ. ರಾಮ ಐತಾಳರ ಕಾಲಕ್ಕೆ ಊರಿನ ಜನರು ತಮ್ಮ ಮಕ್ಕಳಿಗೆ ಇಂಗ್ಲೀಷ್ ಶಿಕ್ಷಣವನ್ನು ಕೊಡಿಸುತ್ತಿದ್ದರು. ಇದನ್ನು ಕಂಡ ರಾಮ ಐತಾಳರು ತಮ್ಮ ಮಗ ಲಚ್ಚನಿಗೆ ಇಂಗ್ಲೀಷ್ ಶಿಕ್ಷಣವನ್ನು ಕೊಡಿಸಿದರು. ಕಾರಣವೆಂದರೆ ಇವರ ಕಾಲಕ್ಕೇನೆ ಇಂಗ್ಲೀಷ್ ಶಿಕ್ಷಣ ಅನ್ನ ನೀಡುವಂತಹುದು ಹಾಗೂ ಇದನ್ನು ಮಾತನಾಡಿದರೆ ದೊಡ್ಡ ಗೌರವ ಬಂದಂತೆ ಎಂದು ಭಾವಿಸುವಂತಹ ಪರಿಸ್ಥಿತಿ ಬಂದಿತ್ತು. ಲಚ್ಚನಿಗೆ ವಿದ್ಯೆಯ ಬಗ್ಗೆ ತುಂಬಾ ಕುತೂಹಲವಿತ್ತು.

ಬಾಲಕ ಲಚ್ಚ ಮತ್ತು ತಂದೆ ತನಗೆ ಇಂಗ್ಲೀಷ್ ಶಿಕ್ಷಣ ಕೊಡಿಸುವ ಸಂಗತಿಯನ್ನು ಹೆಮ್ಮೆಯು ಅಕ್ಕಪಕ್ಕದ ಮನೆಯ ತನ್ನ ಸಮ ವಯಸ್ಕರೊಂದಿಗೆ ಹೇಳಿಕೊಳ್ಳುವುದರಲ್ಲಿ ಅವರ ಕಾಲದ ಸಂದರ್ಭದಲ್ಲಿ ಇಂಗ್ಲೀಷ್ ಶಿಕ್ಷಣಕ್ಕಿದ್ದ ಮಹತ್ವ ತಿಳಿಯುತ್ತದೆ. ಇದು ಬ್ರಿಟೀಷರು ಸ್ಥಾಪಿಸಿದ ವಸಾಹತು ಶಾಹಿತ್ವವು ಗ್ರಾಮೀಣ ಭಾರತದ ಮೇಲೆ ಬೀರಿರುವ ಗಾಢ ಪರಿಣಾಮವಾಗಿದೆ. ಇದೇ ಪರಿಣಾಮ ಪ್ರಸ್ತುತ ಸಮಕಾಲೀನ ಸಂದರ್ಭದಲ್ಲಿಯು ಈ ಪರಿಸ್ಥಿತಿ ಮುಂದುವರಿದಿರುವುದು ಗಮನಾರ್ಹವಾದ ಸಂಗತಿಯಾಗಿದೆ. ರಾಮ ಐತಾಳರ ಕಾಲಕ್ಕೆ ಇಂಗ್ಲೀಷ್ ಶಿಕ್ಷಣವು ಸಂಕ್ರಮಣದ ಕಾಲವಾಗಿತ್ತು. ಅದಕ್ಕಾಗಿ ತನ್ನ ಮಗನನ್ನು ಇಂಗ್ಲೀಷ್ ಶಿಕ್ಷಣಕ್ಕೆ ಕಳುಹಿಸುತ್ತಾರೆ. ಅದಕ್ಕಾಗಿ ಅವರು *"ತಮ್ಮ ಹುಡುಗ ಇಂಗ್ಲೀಷ್ ಓದುತ್ತಾನೆ. ದೇವರು ನಡೆಸಿದರೆ ಬಿ.ಎ ಮಾಡಿ ವಕಾಲತ್ತನ್ನೋ, ತಹಶೀಲಿಕೆಯನ್ನೋ ನೋಡಬಹುದು"*[೧೦೧] ಎಂದು ಬಹಳ ಹೆಮ್ಮೆಪಟ್ಟರು. ಆದರೆ ಲಚ್ಚ ಇಂಗ್ಲೀಷ್ ಶಿಕ್ಷಣವನ್ನು ಓದಲು

೧೦೦. ಶಿವರಾಮ ಕಾರಂತ, ಗೆದ್ದ ದೊಡ್ಡಸ್ತಿಕೆ, ಪುಟ ೨೬೦-೨೬೧
೧೦೧. ಶಿವರಾಮ ಕಾರಂತ, ಮರಳಿ ಮಣ್ಣಿಗೆ, ಪುಟ-೧೫೩

ಕುಂದಾಪುರಕ್ಕೆ ಹೋದವನು ಅಲ್ಲಿ, ಕಿಟ್ಟನ ಹೋಟೆಲಿನಲ್ಲಿ ತಂಗುವುದರ ಮೂಲಕ ಓದನ್ನು ಸರಿಯಾಗಿ ಮುಂದುವರಿಸದೇ, ತನ್ನ ತಂದೆ ಮತ್ತು ಅಜ್ಜನಿಂದ ಸುಳ್ಳು ಹೇಳಿ ಪಡೆದ ಹಣವನ್ನು ನೀರಿನಂತೆ ಖರ್ಚು ಮಾಡಿ ಅಡ್ಡದಾರಿಗಳನ್ನು ಹಿಡಿಯುತ್ತಾನೆ.

ಲಚ್ಚನು ಈ ರೀತಿಯಾಗಿ ಕಾಲಕಳೆದು, ನಂತರ ಮನೆಗೆ ಬಂದು ಕೆಟ್ಟ ದಾರಿಯಲ್ಲಿ ನಡೆದಾಗ, ರಾಮ ಐತಾಳರು ಅವನನ್ನು ಸರಿದಾರಿಗೆ ತರಲು ಐರೋಡಿನ ವಕೀಲರ ಮಗಳಾದ ನಾಗವೇಣಿ ಎಂಬ ಕನ್ಯೆಯನ್ನು ನೋಡಿ ಮದುವೆ ಮಾಡಿಸಿದರು. ನಂತರ ಲಚ್ಚನು ವಿದ್ಯಾಭ್ಯಾಸ-ವನ್ನು ಮುಂದುವರೆಸಲು ಮಂಗಳೂರಿಗೆ ಹೋದವನು. ಅಲ್ಲಿಯೂ ಕೆಟ್ಟ ಸಂಗತಿಗಳನ್ನು ತಲೆಗೆ ತುಂಬಿಕೊಂಡು ನಂತರ ಶೀನಮಯ್ಯನಿಂದ ಸಾಲ ಪಡೆದು ಮದ್ರಾಸಿಗೆ ತಂದೆ ಮಾತನ್ನು ಧಿಕ್ಕರಿಸಿ ಮತ್ತು ನಾಗವೇಣಿಯನ್ನು ಬಿಟ್ಟು ಹೋಗುತ್ತಾನೆ.

ನಂತರ ಬಿ.ಎ. ಮುಗಿಸಿ ಮನೆಗೆ ಬಂದವನು ಉದ್ಯೋಗಕ್ಕೆಂದು ಪಟ್ಟಣಕ್ಕೆ ಹೋಗುತ್ತಾನೆ. ಹೋದವನು ನಂತರ ಊರಿಗೆ ಬಂದು ಶೀನಮಯ್ಯನ ಮಗ ಒರಟಮಯ್ಯನ ಸಹವಾಸ ಮಾಡಿ, ಬೆಂಗಳೂರಿನಲ್ಲಿ ಹೋಟೆಲ್‌ನ್ನು ತೆರಯುವ ಯೋಜನೆ ಮಾಡುತ್ತಾನೆ. ಆತನ ತಂದೆ ಆಸ್ತಿಯನ್ನು ನಾಗವೇಣಿಯ ಹೆಸರಿನಲ್ಲಿ ಮಾಡಿಸಿದ್ದನ್ನು ನಯವಾಗಿ ತನ್ನ ಹೆಸರಿಗೆ ಮಾಡಿಸಿಕೊಂಡು ತನ್ನ ತಂದೆಯ ಆಸ್ತಿಯನ್ನೆಲ್ಲಾ ಮಾರಿ ತನ್ನ ಹೆಂಡತಿ ನಾಗವೇಣಿ, ಮಗ ರಾಮ ಮತ್ತು ತನ್ನ ತಾಯಿ, ಅತ್ತಿಗೆಯವರನ್ನು ಬೀದಿಪಾಲು ಮಾಡಿ ಶಾಶ್ವತವಾಗಿ ಪಟ್ಟಣವನ್ನು ಸೇರಿ ನಾಪತ್ತೆಯಾಗುತ್ತಾನೆ. ಈ ರೀತಿಯಾಗಿ ರಾಮನ ತಂದೆ ಲಚ್ಚ, ತಾನು ಓದುವ ಸಮಯದಿಂದ ಹಿಡಿದು ಕಡೆಯವರೆಗೆ ನಿಸರ್ಗವನ್ನು ಧಿಕ್ಕರಿಸಿ ಬದುಕುತ್ತಾನೆ. ಕಾರಂತರು ಎರಡನೆ ತಲೆ ಮಾರಿನ ಲಚ್ಚನ ನೆಲೆಯಲ್ಲಿ ಆಧುನಿಕ ನೆಲೆಗಳನ್ನು ಹಾಗೂ ಇದರಿಂದ ಅವನು ಕೆಟ್ಟು ನಗರವನ್ನು ಸೇರಿ ನಿಸರ್ಗದಿಂದ ದೂರವಾದ ಸಂಗತಿಯನ್ನು ಹೇಳುತ್ತಾರೆ.

'ಶನೀಶ್ವರ ನೆರಳಿನಲ್ಲಿ' ಕಾದಂಬರಿಯಲ್ಲಿ 'ಬೆಟ್ಟದ ಜೀವ' ಕಾದಂಬರಿಯ ನಿರೂಪಕ ಶಿವರಾಮಯ್ಯನ ಪಾತ್ರದಂತೆ ಇಲ್ಲಿ ಕಾಣಿಸಿಕೊಳ್ಳುತ್ತಾರೆ. ವನ ಮಧ್ಯದಲ್ಲಿರುವ ಊರು ನೂರೊಕ್ಕಲು. ಇಲ್ಲಿವವರು ನಿಸರ್ಗವನ್ನು ಅವಲಂಬಿಸಿ ಬದುಕುವವರು. ಈ ಊರಿನ ಬಗ್ಗೆ ಕೇಳಿದ ಕಾರಂತರು, ಇದರ ರಹಸ್ಯವನ್ನು ತಿಳಿಯಲು ಹೋದಾಗ ಆ ಊರಿನ ವಾತಾವರಣ ಶಾಂತವಾಗಿದ್ದರೂ ಸಹ ಅಲ್ಲಿ ವಾಸಿಸುವ ಜನರ ಮನಸ್ಸುಗಳ ವಾತಾವರಣ ಶಾಂತವಾಗಿರುವು-ದಿಲ್ಲವೆಂಬ ವಿಷಯ ಕಾರಂತರಿಗೆ ತಿಳಿಯುತ್ತದೆ. ಇಲ್ಲಿ ವಾಸಿಸುವ ಪಾತ್ರಗಳು ಭೂಮಿಯ ಒಡೆತನಕ್ಕಾಗಿ ಕಚ್ಚಾಡುತ್ತಿರುವ ಸಂಗತಿಯನ್ನು ಕಾರಂತರು ತಮ್ಮ ಮುನ್ನುಡಿಯಲ್ಲಿ ಹೇಳುತ್ತಾರೆ.

'ಕಾವೇರಮ್ಮ ಶಿವಣ್ಣಯ್ಯ, ಜೋಯಿಸರು, ಅಡಿಗಳು ಮೊದಲಾದವರು ಅವೇ ಹೆಸರಿನ ವ್ಯಕ್ತಿಗಳಾದರೂ ನನ್ನ ಜೀವನದಲ್ಲಿ ಸಂಧಿಸಿದ ಹಿರಿಯರು, ಕಿರಿಯರು, ಜನಜೀವನವೆಂಬ ದಟ್ಟವಾದ ಅರಣ್ಯದಲ್ಲಿ ಈ ವಿವಿಧ ಮನುಷ್ಯರು ವಾಸಿಸುವ ಹುಲಿಯೋ ದನವೋ ಮತ್ತೊಂದು ಪ್ರಾಣಿಗಳಂತೆ, ಒಬ್ಬರ ಅಸ್ತಿತ್ವಕ್ಕೆ ಇನ್ನೊಬ್ಬರು ಒಂದಲ್ಲ ಒಂದು ರೀತಿಯಿಂದ ತಡೆಯಾಗಿ ಬಂದು ಘರ್ಷಣೆಗೊಳಗಾದವರು, ಅತಿ ಹಿಂದುಳಿದ ಒಂದು ಗ್ರಾಮ ನೂರೊಕ್ಕಲು: ಅದರಲ್ಲಿರುವ ಜನರು ಹಿಂದುಳಿದವರೆಂದಿಟ್ಟುಕೊಳ್ಳಿ, ಈ ಹಿಂದು ಮುಂದುಗಳು ಅವರವರ ಕಾಲಮಾನವ ಬಣ್ಣಗಳಷ್ಟೇ ಆದರೆ ಜನಗಳ ನಡುವಳಿಕೆಯು ಅವರ ನಂಬಿಕೆ. ಸ್ವಾರ್ಥ, ಪದಾರ್ಥಗಳನ್ನು ಹೊಂದಿಕೊಂಡು, ಇಂಥ ಒಂದು ಆವರಣದಲ್ಲಿ ಹೇಗೆ ಪ್ರಕಟಗೊಂಡಿತು ಎಂಬುದನ್ನು ಚಿತ್ರಿಸುವುದು ನನ್ನ ಉದ್ದೇಶವಾಗಿದೆ.' ಇಲ್ಲಿ ಬರುವ ಪ್ರಮುಖ ಪಾತ್ರಗಳಲ್ಲಿ ಕಾವೇರಮ್ಮ, ಪಾಟಾಳಿ, ಶಿವಣ್ಣಯ್ಯ, ಶಂಕರ ಜೋಯಿಸರು ನಾರಾಯಣ ಅಡಿಗಳು, ಪರಮೇಶ್ವರ ಅಡಿಗಳು, ಇವರೆಲ್ಲರೂ ಭೂಮಿಗಾಗಿ ಮತ್ತು ಅದರ ಒಡೆತನಕ್ಕಾಗಿ ಹೋರಾಡುವ ಸಂಗತಿ ಇಲ್ಲಿ ಮುಖ್ಯವಾಗಿದೆ.

'ಮುಗಿದ ಯುದ್ಧ' ಕಾದಂಬರಿಯ ನಾಯಕ ಅಚ್ಯುತ, ಇವನು ಕೊಂಬಾರಿನ ಕೃಷ್ಣರಾಯ ಮತ್ತು ಲಕ್ಷ್ಮಮ್ಮನ ಮಗ. ಇವನ ತಂದೆಯ ಮರಣದ ತರುವಾಯು ಸಹ, ಬಡತನದಲ್ಲಿ ಓದನ್ನು ಮುಗಿಸುತ್ತಾನೆ. ನಂತರ ತಂದೆಯ ಆಸ್ತಿಯನ್ನು ದುಡಿಮೆ ಮಾಡಿಸಿ, ಮಾಸ್ತರಾಗಿ ದುಡಿಯುತ್ತಾನೆ. ಆದರೆ ತಾನು ಶಾಲೆ ಮಾಸ್ತರನಾಗಿ ದುಡಿಯುವ ಸಂದರ್ಭದಲ್ಲಿ ತನ್ನ ಸಹದ್ಯೋಗಿಗಳಿಂದ ಕಿರುಕುಳವನ್ನು ಅನುಭವಿಸುತ್ತಾನೆ. ಅಲ್ಲದೆ ವಿಪರೀತ ಸಾಲ ಮಾಡಿ ಮಾನಸಿಕ ಉದ್ವೇಗಕ್ಕೆ ಒಳಗಾಗಿ ಕಡೆಗೆ ಮರಣ ಹೊಂದುತ್ತಾನೆ. ಇನ್ನುಳಿದ ಪಾತ್ರಗಳೆಂದರೆ ಸುಬ್ಬಿ, ಅಚ್ಯುತನ ಪತ್ನಿ ರುಕ್ಮಿಣಿ, ಸೀತೆ, ಆಕೆಯ ಗಂಡ ನರಸಿಂಗಯ್ಯ, ನಾಜಿರಾಜಯ್ಯ, ಮಾಮಾಂಜಿ, ನಾಗರಾಜ ಪ್ರಮುಖರು.

ಅಚ್ಯುತನ ಭಾವ ನರಸಿಂಹಯ್ಯ ಸಿಡುಕು ಸ್ವಭಾವದವನು, ಇವನು ತನ್ನ ಪತ್ನಿ ಸೀತೆಗೆ ಮಾನಸಿಕ ಹಿಂಸೆಕೊಡುತ್ತಾನೆ. ನಾಲ್ಕು ಜನ ಮಕ್ಕಳನ್ನು ಬಿಟ್ಟು, ಇದ್ದ ಆಸ್ತಿಯನ್ನು ಮಾರಾಟ ಮಾಡಿ, ಅತ್ತೆಯ ಮನೆಯಲ್ಲಿ ವಾಸ್ತವ್ಯ ಹೂಡುವನು. ತನ್ನ ಮಾತು ನಡೆಯಬೇಕೆಂದು ಇಚ್ಛಿಸುತ್ತಾನೆ. ಆದರೆ ಇದು ಸಾಧ್ಯವಾಗದಿದ್ದಾಗ, ಆ ಸಂಜೆ ಸೀತೆಯು ಗಂಡನ ಬಳಿಯಲ್ಲಿ ತಾಯಿ ಕೊಟ್ಟ ಇನ್ನೊಂದು ರೂಪಾಯಿಗಳನ್ನು ಕೊಟ್ಟು 'ಇದು ಅಮ್ಮ ಕೊಟ್ಟಿದ್ದು ಎಂದಳು ನರಸಿಂಹಯ್ಯ' ಇಷ್ಟು ನಿದಾನವಾಗಿ ಕೊಡುವವರು ಹದಿನೈದು ದಿನ ಮೊದಲು ಕೊಟ್ಟಿದ್ದರೆ! ಒಳ್ಳೆಯ ಒಂದು ಭೂಮಿ ಗೇಣಿಗೆ ಸಿಗುವುದಿತ್ತು' ಮಾಡಿಕೊಳ್ಳಬಹುದಿತ್ತು, ಸಮಯಕ್ಕೆ ಬಾರದ ಹಣವನ್ನು ಈಗ ತೆಗೆದುಕೊಂಡು ಏನು ಮಾಡಲಿ'? ಎಂದರು. 'ಅವರೇ ಏಷ್ಟೆಂದು ಸಾಕುವುದು ನಮ್ಮನೆಲ್ಲ' ಎಂದಳು ಸೀತೆ. ನರಸಿಂಹಯ್ಯನಿಗೆ ಇಂಥ ಒಂದೊಂದು ಮಾತೂ ಬರೆಯಂತೆ ಕಾಣುತ್ತಿತ್ತು,

ಇಲ್ಲದ ಅರ್ಥ ಅವಕ್ಕೆ ಕಲ್ಪಿಸಿಕೊಳ್ಳುವ ಶಕ್ತಿ ಬೇರೆ ಇದ್ದುದರಿಂದ ಯಾರು, ಹಾಗೆಂದು ನಿನ್ನ ಅಮ್ಮ ಹೇಳಿದರೆ? ಎಂದು ಅನುಮಾನ ಪ್ರಕಟಿಸಿದರು ಅಮ್ಮ ಹೇಳಿದ್ದಲ್ಲ, ನಾನೆಂದದ್ದು, ವರ್ಷವಾಯಿತು, ನಾಳಿಗೂ ನಾಡಿದ್ದೊ ಅಪ್ಪಯ್ಯನ ವರ್ಷಾಂತಿಕ, ಅದನ್ನು ಮುಗಿಸಿಕೊಂಡು ಹೊರಡುವ ಎಂದಳು *"ನಿನಗೆ ನಿನ್ನ ತಾಯಿ ಮನೆ ಭಾರವಾಗಿ ಕಂಡ ಮೇಲೆ ನನಗೇನು? ಎಂದು ನರಸಿಂಹಯ್ಯ, ಮರುದಿನವೇ ಸ್ಥಳ ನೋಡಿ ಬರುವೆನೆಂದು ಮುಂಜಾನೆ ಹೊರಟವರು, ತಿರುಗಿ ನಾಳೆ ಬರುವ ತನಕ ಆ ಊರಿಗೆ ಕಾಲಿರಿಸಲಿಲ್ಲ, ವರ್ಷಾಂತಿಕದ ದಿನ ಬಂತು: ಅಳಿಯನಿಲ್ಲದೆ ಆ ದಿನವನ್ನು ತೀರ ಬಡತನದಲ್ಲೇ ನಡೆಸಿದರು"*[೧೦೨]

ಕಾರಂತರು ನರಸಿಂಹಯ್ಯ ಪಾತ್ರದಲ್ಲಿ ಮೈಗಳ್ಳತನ ಮತ್ತು ಕಷ್ಟಪಟ್ಟು ದುಡಿಯಲು ಅಂಜುವಂತಹ ಮನೋಗುಣವನ್ನು ವ್ಯಕ್ತಪಡಿಸಿದ್ದಾರೆ. ಈತನು ಸಹ ವಿಲಾಸಿ ಜೀವನ ನಡೆಸುವವನು ತನಗೆ ಹೆಂಡತಿ ಮಕ್ಕಳು ಇದ್ದರೂ ಸಹ ಲೆಕ್ಕಿಸದೆ, ಮರಳಿ ಮಣ್ಣಿಗೆಯ 'ಲಚ್ಚನ' ಮಾದರಿಯಲ್ಲಿ ಮನೆಯನ್ನು ಬಿಟ್ಟು ಹೋಗುವುದು ಮತ್ತೇ ಬರುವುದು ಹೀಗೆ ಸರಿಯಾಗಿ ಒಂದು ಕಡೆ ನಿಲ್ಲದೆ ಅಲೆಮಾರಿ ಜೀವವನ್ನು ನಡೆಸುತ್ತಾನೆ. ಕಾರಂತರು ಬರೆದಿರುವ ಅನೇಕ ಕಾದಂಬರಿಗಳಲ್ಲಿ ಈ ರೀತಿಯಾಗಿ ಹೆಂಡತಿಯರನ್ನು ಬಿಟ್ಟು ಹೋಗುವ ಪಾತ್ರಗಳು ಬರುತ್ತವೆ. ಇವರು ಯಾವಾಗ ತನ್ನ ಹಳ್ಳಿ ಹಂಡತಿ ಮಕ್ಕಳನ್ನು ಬಿಟ್ಟು ಹೋಗುತ್ತಾರೆಯೋ, ಅಂದಿನಿಂದ ನಿಸರ್ಗವನ್ನು ದಿಕ್ಕರಿಸಿ ಬದುಕುವ ಪಾತ್ರಗಳಾಗಿ ಗ್ರಹಿಸುತ್ತಾರೆ ಕಾರಂತರು.

'ಅಳಿದ ಮೇಲೆ ಕಾದಂಬರಿಯಲ್ಲಿ ಮನುಷ್ಯ ಸಂಬಂಧಗಳ ಸೂಕ್ಷ್ಮಗಳನ್ನು ಹೇಳುತ್ತಾರೆ. ಕಾರಂತರು ನಿರೂಪಕರಾಗಿ ಮತ್ತು ಕಾದಂಬರಿಯ ನಾಯಕ ಯಶವಂತರ ಪ್ರತಿನಿಧಿಯಾಗಿ ಅವರು ಸಾಯುವ ಮೊದಲು ಬರೆದಿಟ್ಟಿದ್ದ ಕಾಗದ ಪತ್ರಗಳ ಮುಖಾಂತರ, ಅವರು ಹಣವನ್ನು ಕಳುಹಿಸುತ್ತಿದ್ದ, ಅವರಿಗೆ ಸಂಬಂಧಗಳಿಗಾಗಿ ಹಿಡಿಯುತ್ತಿರುವ ಯಶವಂತರ ಸ್ನೇಹದ ಕಾರಂತರಿಗೆ ರೈಲಿನಲ್ಲಿ ಆಗುತ್ತದೆ. ಇದು ಕಾರಂತರು ಮುಂಬೈಗೆ ರೈಲಿನಲ್ಲಿ ಹೋಗುವ ಸಂದರ್ಭದಲ್ಲಿ ನಡೆದ ಘಟನೆಯಾಗಿದೆ. ಯಶವಂತರ ಸ್ನೇಹ ಹೀಗೆ ಬೆಳೆದು ಆತ್ಮೀಯರಾಗಿ ನಂತರ ಅವರ ಮರಣದ ತರುವಾಯ ಅವರು ಬರೆದಿಟ್ಟಿದ್ದ ಕಾಗದ ಪತ್ರಗಳನ್ನು ಓದಿದಾಗ ಅವರ ಜೀವನ ಸಂಗತಿ ಕಾರಂತರಿಗೆ ತಿಳಿಯುತ್ತದೆ.

ಅದರಲ್ಲಿ ಯಶವಂತರು *"ಸುಮಾರು ಇಪ್ಪತ್ತೈದು ವರ್ಷಗಳ ಬದುಕು ವಿಚಾರ ಶೂನ್ಯ ದುಡುಕಿನಲ್ಲಿ ಕಳೆಯಿತೆಂದರೂ ತಪ್ಪಿಲ್ಲ. ಅಷ್ಟರೊಳಗೇನೋ ನನ್ನ ವಿವಾಹವಾಗಿತ್ತು. ನಾನು ನಿಜವಾದ ಸಂಸಾರಿಯಾಗಿ, ಮುಂದೆ ಒಂದು ಮಗುವಿನ ತಂದೆಯೂ ಆದೆ. ಆಗ ನನಗೆ ಒಳ್ಳೆ ಸ್ಥಿತಿ ಹೊರಟು ಹೋಗಿ, ಸಾಲ ಮಾಡುವ ಪ್ರಸಂಗ ಬಂದು, ಮನಸ್ಸು ಚಿಂತೆಗೀಡಾಯಿತು. ಜೇನು ಇರುವ ತನಕ ಮಾತ್ರ ಭ್ರಮರಕ್ಕೆ ಹೂವಿನ ಮೇಲಿನ ಆಸೆ- ಎಂಬ ಕಟು ಸತ್ಯವನ್ನು ತಿಳಿದೆ. ಆದರೂ ಎದೆಗೆಡಲಿಲ್ಲ. ನನಗೆ ಪಿತ್ರಾರ್ಜಿತವಾದ ಸಂಪತ್ತಿದೆ. ಸಾಲಕ್ಕೆ ಗುರಿಯಾದ ಆಸ್ತಿಪಾಸ್ತಿ ಇನ್ನೂ ಉಳಿದೆಲ್ಲ ಏನೇನೋ ಇಲ್ಲದೆ. ಬರಿಗೈಯಿಂದಲೆ ಹುಟ್ಟಿ ಬೆಳೆದು. ಜೀವನ ರಥವನ್ನು*

೧೦೨.ಶಿವರಾಮ ಕಾರಂತ, ಮುಗಿದ ಯುದ್ಧ, ಪುಟ-೬೦

ಸಾಗಿಸುವವರಿಲ್ಲವೆ- ಎನಿಸಿತು ನನಗೆ, ಆಗ ನಾನೇ ನನ್ನ ಜೀವನ ಕ್ಷೇತ್ರವನ್ನು ಬದಲಿಸಿದೆ. ನನ್ನ ಮಾವನ ಮನೆಗೆ ಸಮೀಪದ ಕುಮಟೆಗೆ ಬಂದು ನೆಲೆಸಿದೆ. ಒಬ್ಬ ವ್ಯಾಪಾರಿಯ ಜತೆ ಸೇರಿ, ಇನ್ನೊಂದು ವ್ಯವಹಾರದಲ್ಲಿ ತೊಡಗಿದೆ. ಈ ಜೀವನ ಆರಂಭದಲ್ಲಿ ಕಷ್ಟದಾಯಕವಾಗಿತ್ತಾದರೂ ನನ್ನ ದುಡಿಮೆಯ ಪುಣ್ಯ ಫಲದಿಂದಲೋ ಅನುಕೂಲ ಸನ್ನಿವೇಶಗಳು ಒದಗಿದುದರಿಂದಲೋ, ತಿರುಗಿ ಹಣ ಸಂಪಾದಿಸಿದೆ. ಕಳೆದುದಕ್ಕಿಂತಲೂ ಹೆಚ್ಚನ್ನು ಗಳಿಸಿದೆ. ಆದರೆ ಯಶಸ್ಸಿನ ಹಿಗ್ಗು ನನಗುಂಟಾಗಲಿಲ್ಲ ಅದು ಕೇವಲ ಸಂಪತ್ತಿಗೆ ಸಂಬಂಧಪಟ್ಟಂಥ ಯಶಸ್ಸು. ನಾನು ಜನ ಜೀವನದ ವಿಚಾರದಲ್ಲಿ ಅಪನಂಬಿಕೆ, ಕಹಿಗಳನ್ನು ತುಂಬಿಕೊಂಡಿದ್ದರಿಂದ ಅಷ್ಟೆಲ್ಲ ಸಂಪತ್ತು ಕೂಡಿ ಬಂತು ಎನಿಸುತ್ತದೆ. ಹಣವಿದ್ದಲ್ಲಿ ಮೋಹವಿದೆ, ದುರಾಸೆಯಿದೆ, ಮತ್ಸರವಿದೆ, ಕಹಿಯೊ ಇದೆ. ಅದರ ದೆಸೆಯಿಂದಲೇ ನನ್ನ ಮಡದಿ, ಮಕ್ಕಳು–ಎಲ್ಲರೂ ನನಗೆ ವೈರಿಗಳಂತಾದರು. ನಾನು ಲೋಭಿಯಾದದ್ದು ನಿಜ,ಅಂಥ ಅಧ್ಯಾಯಕ್ಕೆ ಇನ್ನು ಖುಷಿ ಬರಲೆಂದು, ನನಗೆ ಹಿರಿಯರಿಂದ ಬಂದುದಕ್ಕೆ ಇನ್ನೂ ಹೆಚ್ಚಿಗೆ ಹಣವನ್ನು ಸೇರಿಸಿ ಹೆಂಡತಿ ಮಕ್ಕಳನ್ನು ಬಿಟ್ಟು, ನಾನು ಆ ಊರಿನಿಂದ ಕಣ್ಮರೆಯಾದೆ."[೧೦೩]

ಯಶವಂತರು ಕೃಷಿಕರಾಗಿ ದುಡಿದು ಹಣ ಸಂಪಾದಿಸಿದರು. ಆದರೆ ಬಂಧುಗಳು ಮತ್ತು ಹೆಂಡತಿ ಮಕ್ಕಳ ದುರಾಸೆಯನ್ನು ಕಂಡು ಹೇಸಿ ಅನಿವಾರ್ಯವಾಗಿ ತಮ್ಮ ಊರು, ಮನೆ ಮತ್ತು ಆಸ್ತಿ ಎಲ್ಲವನ್ನು ತ್ಯಜಿಸಿ ಮುಂಬೈ ಸೇರುತ್ತಾರೆ. ಇದು ಅವರ ಜೀವನದಲ್ಲಿ ನಡೆದ ದುಃಖಕರ ಸಂಗತಿಯಾಗಿದೆ. ಆದರೆ ತನ್ನನ್ನು ಸಾಕಿದ ಕಾವೇರಮ್ಮ, ಸರಸಿ, ಅವಳ ಮಕ್ಕಳಾದ ಧಾರೇಶ್ವರ ಸೀನ, ಇಂದುಮತಿಯರನ್ನು ಎಂದೂ ಮರೆಯಲಿಲ್ಲ. ಬದಲಾಗಿ ಅನಿವಾರ್ಯ ಸಂಗತಿಗಳಿಂದ ಯಶವಂತರು ನಿಸರ್ಗವನ್ನು ಧಿಕ್ಕರಿಸಿ ನಗರದಲ್ಲಿ ವಾಸಿಬೇಕಾಗುತ್ತದೆ.

ಕಾರಂತರು ಈ ಕಾದಂಬರಿಯ ಮುನ್ನುಡಿಯಲ್ಲಿ 'ಎಳೆಯವನಾಗಿದ್ದಾಗ–ನನ್ನ ಸಮಾಜದ ಕೆಲವರು ನಡೆಸಿದ ಬದುಕನ್ನು ಕುರಿತು ಕೇಳಿದ್ದೆ. ಅದಕ್ಕೆ ಸಂಬಂಧಿಸಿದವರನ್ನು ಕಂಡಿದ್ದೆ. ಅದನ್ನು ಅರ್ಥ ಮಾಡಿಕೊಳ್ಳುವ ಶಕ್ತಿ ಆ ಕಾಲಕ್ಕೆ ಇಲ್ಲದ್ದರಿಂದ ಸೂಳೆಯರ ಕುಲವನ್ನು ತಾತ್ಸಾರದಿಂದಲೂ ಕಂಡಿದ್ದೆ. ಮುಂದೊಂದು ಕಾಲದಲ್ಲಿ, ಜನನಿಂದನೆಗೆ ಗುರಿಯಾದೆ. ಆ ಕುಲದ ಹುಡುಗನೊಬ್ಬನ ಗುರುತಾಗಿ ಸಮಾಜದ ಕೊಳೆಯನ್ನು ತೊಳೆಯಲು ಸಾಧ್ಯವಾದ ಪ್ರಯತ್ನ ಮಾಡಿದೆ.' ಈ ಹಿನ್ನೆಲೆಯಲ್ಲಿ ಕಾರಂತರು ಶಾರಿಯ ಮಗಳಾದ ಚಂದ್ರಿಯಲ್ಲಿ ಹೊಸ ಯೋಜನೆ ಮತ್ತು ಹೊಸ ಕನಸು ಮೂಡಿಸಿದ್ದಾರೆ ಎನ್ನಬಹುದಾಗಿದೆ. ಈ ಕಾದಂಬರಿಯಲ್ಲಿ ನಿಸರ್ಗವನ್ನು ಧಿಕ್ಕರಿಸಿ ಬದುಕುವ ಪಾತ್ರಗಳು ಕಂಡು ಬರುವುದಿಲ್ಲ. ಆದರೆ ಇಲ್ಲಿನ ಪಾತ್ರಗಳು ನಿಸರ್ಗದೊಂದಿಗೆ ತೊಡಗಿಸಿಕೊಳ್ಳದೆ ಇದ್ದರೂ ಸಹ, ಪರೋಕ್ಷವಾಗಿ ಸಂಬಂಧ ಹೊಂದಿರುವುದು ಗಮನಾರ್ಹ ಅಂಶವಾಗಿದೆ.

'ಸ್ವಪ್ನದ ಹೊಳೆ' ಕಾಂದಬರಿಯಲ್ಲಿ ಕಾರಂತರು ಸೊಪ್ಪಿನ ಹಳ್ಳಿಯ ಮಾದ ಮತ್ತು ಕೃಷ್ಣನ ಮುಖಾಂತರ ನಿಸರ್ಗವನ್ನೆ ನಮ್ಮ ಕಣ್ಮುಂದೆ ತೆರೆದಿಡುತ್ತಾರೆ. ಕೃಷ್ಣ ಮತ್ತು ಮಾದರು ನಿಸರ್ಗ ಪ್ರೇಮಿಗಳು, ಅದರೊಂದಿಗೆ ಬದುಕುತ್ತಾರೆ. ಮತ್ತು ಬಾಳುತ್ತಾರೆ. ಕೃಷ್ಣರಾವ್ ತನ್ನ ಮನೆಯ ಸುತ್ತಲೂ ಇರುವ ಪರಿಸರವನ್ನು ಕಂಡು ಸಂತೋಷಪಡುವುದರಲ್ಲಿ ಮಗ್ನನಾಗುತ್ತಾನೆ. ಕುಂದಾಪುರದಲ್ಲಿ ಓದುತ್ತಿದ್ದಾಗ ಅಲ್ಲಿಯು ಸಹ ಬಿಡುವಿನ ವೇಳೆ ನಿಸರ್ಗದಲ್ಲಿ ನಡೆಯುವ

೧೦೩. ಶಿವರಾಮ ಕಾರಂತ, ಅಳಿದ ಮೇಲೆ, ಪುಟ – ೩೦

ವೈಚಿತ್ರ್ಯಗಳನ್ನು ಕಂಡು ಸಂತೋಷಪಡುತ್ತಾನೆ. ಮಂಗಳೂರಿನಲ್ಲಿ ಕಿಟ್ಟಣ್ಣ ಓದುತ್ತಿದ್ದ ಸಂದರ್ಭದಲ್ಲಿ ಸೊಪ್ಪಿನಹಳ್ಳಿಯ ಸೊಣ್ಣಪ್ಪ ಇವನ ಸಹಪಾಠಿಯಾಗಿದ್ದನು. ಇವನು ಸಹ ನಿಸರ್ಗವನ್ನು ಕಂಡು ಸಂತೋಷಪಡುತ್ತಾ, ನಿಸರ್ಗದೊಂದಿಗೆ ಅವಿನಾಭಾವ ಸಂಬಂಧವನ್ನು ಸಾಧಿಸುತ್ತಾನೆ. ಅದರೆ ಸೊಣ್ಣಪ್ಪನು ನಿಸರ್ಗದಿಂದ ದೂರವೇ ಉಳಿಯುತ್ತಾನೆ.

'ಕನ್ನಡಿಯಲ್ಲಿ ಕಂಡಾತ' ಕಾದಂಬರಿಯಲ್ಲಿ ಕಾರಂತರು ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿಯ ಊರಾದ ಮಂಗಲಪಾಡಿಯಲ್ಲಿ ವಾಸಿಸುತ್ತಿದ್ದ ಪರಮೇಶ್ವರಯ್ಯನ ಜೀವನದ ಏಳು ಬೀಳುಗಳನ್ನು ಕುರಿತು ಹೇಳುತ್ತಾರೆ. ಪರಮೇಶ್ವರಯ್ಯನು ಸಂಸಾರದಲ್ಲಿ ಜಿಗುಪ್ಸೆ ತಾಳಿ ಮನೆಯನ್ನು ಬಿಟ್ಟು ಪರದೇಸಿಯಾಗಿ ಹೋಗುತ್ತಾನೆ.

"ಊರಲ್ಲಿ ಅವನ ಪಾಲಿಗೆ ಬಂದ ಮುರುಕು ಆಸ್ತಿ ಇದೆ; ಗದ್ದೆ ಬೇಸಾಯವಿದೆ; ನೂರು ಅಡಿಕೆಯ ಮರಗಳಿವೆ, ಒಂದಿಷ್ಟು ತೆಂಗಿನ ಮರಗಳೂ ಇವೆ. ತಂದೆಯೊಡನೆಯೊ, ಅಣ್ಣಂದಿರೊಡನೆಯೋ ಕೂಡಿ ಬಾಳುತ್ತಿದ್ದಾಗ, ಹೆಚ್ಚಿಗೆ ಓದದ ಅವರು ತಾವಾಗಿಯೋ, ಆಳುಗಳನ್ನು ಕೂಡಿಕೊಂಡೋ ಅಗತೆ ಮಾಡುವ ನೀರು ಹಾಯಿಸುವ, ಗೊಬ್ಬರ ಹೊರುವ ಯಾವತ್ತು ಕೆಲಸಗಳನ್ನು ನಡೆಯಿಸುತ್ತಿದ್ದರು. ಆಗ ಹೈಸ್ಕೂಲ್ ವಿದ್ಯಾರ್ಥಿಯಾಗಿದ್ದು, ರಾಶಿ ರಾಶಿ ಓದಲಿಕ್ಕಿರುವ ಪರಮೇಶ್ವರಯ್ಯ ಅಂಥ ಕೆಲಸಗಳನ್ನು ಎಂದೂ ಮಾಡಲಾರ. ಭೂಮಿ ಅವನ ಪಾಲಿಗೆ ಬಂದ ಮೇಲೆಯೂ ಕೃಷಿಯ ಹೊಣೆಯನ್ನು ಆತ ನೇರವಾಗಿ ಹೊತ್ತದ್ದಿಲ್ಲ."[೧೦೪]

ಬಾಲ್ಯದಿಂದ ಯೌವನದವರಿಗೂ ಪರಮೇಶ್ವರಯ್ಯ ಎಂದೂ ಸಹ ಕೃಷಿ ಸ್ವತಃ ಮಾಡಿದವನಲ್ಲ, ಬದಲಾಗಿ ಆಳುಗಳಿಂದ ಆ ಕೆಲಸಗಳನ್ನು ಮಾಡಿಸುವ ಮೂಲಕ ಅವನು ನಿಸರ್ಗದಿಂದ ದೂರವಾಗಿಯೇ ಉಳಿಯುತ್ತಿದ್ದ. ಕಡೆಗೆ ಸಾಂಸಾರಿಕ ಜೀವನವನ್ನು ಕಲಹ ಜೀವನವನ್ನಾಗಿ ಮಾಡಿಕೊಂಡು ಮಂಗಲಪಾಡಿಯನ್ನು ತ್ಯಜಿಸಿ ಕಾಡುಮೇಡು ಸುತ್ತಿದ. ಅಲ್ಲದೆ ಅದರಿಂದ ಅನೇಕ ತೊಂದರೆಗಳನ್ನು ಅನುಭವಿಸಿದ. ಹೀಗೆ ಪರಮೇಶ್ವರಯ್ಯ ನಿಸರ್ಗವನ್ನು ಧಿಕ್ಕರಿಸಿ ಬದುಕುತ್ತಾನೆ. **'ಮೊಗ ಪಡೆದ ಮನ'** ಕಾದಂಬರಿಯ ನಾಯಕ ವ್ಯಾಸ, ಇಲ್ಲಿ ಬರುವ ಪಾತ್ರಗಳೆಂದರೆ ಮೀಯಾ, ಭಗನ್ ಬಾಯಿ, ರಾಮರಾಯ, ನಂದಾಲಾಲ ಟೂಬ, ಭಾಗ್ಯಶ್ರೀ, ಸುಧಾಚಂದ್ರ, ಇಂದುಮತಿ ಪ್ರಮುಖರು.

ವ್ಯಾಸನು ಮಂಗಳೂರಿನಲ್ಲಿ ವ್ಯಾಸಂಗ ಮಾಡುತ್ತಿದ್ದಾಗ, ಕೃಷ್ಣನಿಗೆ ಮುಂಬೈ ನೋಡಬೇಕೆಂಬ ಆಸೆಯಾದಾಗ, ವಕೀಲ ರಾಮರಾಯರು ಕೃಷ್ಣರೊಂದಿಗೆ ವ್ಯಾಸನನ್ನು ಕಳುಹಿಸುತ್ತಾರೆ. ಆಗ ಮುಂಬೈ ನಗರದ ಜನರ ಜೀವನ ವಿಧಾನವನ್ನು ಕುರಿತು ವ್ಯಾಸ ಯೋಚಿಸುತ್ತಾನೆ.

"ಅಲ್ಲಿಯ ಗಾಳಿಯನ್ನು ಉಸಿರಾಡುವುದೇ ಕಷ್ಟವೆಂದು ತೋರುತ್ತಿತ್ತು. ಅವನಿಗೆ ಪಾರಿವಾಳದ ಗೂಡಿನಲ್ಲಿ ಲಕ್ಷಗಟ್ಟಲೆ ಜನ ಆಯುಷ್ಯ ಕಳೆಯುವುದು ಸಾಧ್ಯವೇ ಎಂಬ ವಿಚಾರ ಮೂಡುತ್ತಿತ್ತು. ಟ್ರಾಮುಗಳಲ್ಲಿ ಕುಳಿತು ಹೋಗುತ್ತಿದ್ದರೆ. ದಿನಬೆಳಗಾದಂತೆ ಸಾಲಾಗಿ ಗಿರಣಿಗಳಿಗೆ ಹೋಗುತ್ತಿದ್ದ ಹೆಂಗಸು, ಗಂಡಸರನ್ನು ಕಂಡು ಎಲ್ಲೆಲ್ಲಿಯ ಜನ ಇಲ್ಲಿಗೆ ಬಂದು ಹೊಟ್ಟೆಯ ಪಾಡಿಗಾಗಿ ಇಲ್ಲಿ ದುಡಿಯುತ್ತಾರಲ್ಲ. ಓಡಾಡುವ ಜನರನ್ನು ಕಂಡು ಇಲ್ಲಿ

೧೦೪. ಶಿವರಾಮ ಕಾರಂತ, ಕನ್ನಡಿಯಲ್ಲಿ ಕಂಡಾತ, ಪುಟ –೩೦೩

ಮನುಷ್ಯರೆಂಬ ಪ್ರಾಣಿಗಳಿಗೆ ಬಿಡುವಿದೆಯೇ, ವ್ಯಕ್ತಿತ್ವವಿದೆಯೇ ಎನಿಸುತ್ತಿತ್ತು. ಉಡುಪಿಯ ಕಡಲು ಇದಕ್ಕಿಂತ ಎಷ್ಟೋ ಲೇಸಲ್ಲವೆ ಇರುವುದಕ್ಕೆ ತಾವಿದೆ, ತಿರುಗಾಟಕ್ಕೆ ಮೈದಾನ ಇದೆ”[೧೦೫] ಆದರೆ ವ್ಯಾಸನು ವಿದ್ಯಾಭ್ಯಾಸ ಮುಗಿದ ನಂತರ, ತನ್ನ ಗ್ರಾಮ ಮಟ್ಟದಲ್ಲಿ ಜೀವನವನ್ನು ಕಂಡು ಕೊಳ್ಳುವುದಕ್ಕೆ ವಿಫಲನಾದನು. ಕೊನೆಗೆ ಇವನು ಉದ್ಯೋಗದ ನಿಮಿತ್ತ ಹುಬ್ಬಳ್ಳಿ ಸೇರುತ್ತಾನೆ. ಹುಬ್ಬಳ್ಳಿಯಲ್ಲಿ ರಾಜಗೋಪಾಲ ಎಂಬ ಸ್ನೇಹಿತನ ಸಲಹೆಯಂತೆ, 'ಕರ್ನಾಟಕ ಟೈಮ್ಸ್' ಪತ್ರಿಕೆಯಲ್ಲಿ ಸಂಪಾದಕನಾಗಿ ಸೇರುವ ಮೂಲಕ, ಗ್ರಾಮೀಣ ಪ್ರದೇಶದ ಸಹಜ ನಿಸರ್ಗವನ್ನು ಬಿಡುವ ಮೂಲಕ ನಗರ ಜೀವನಕ್ಕೆ ಕಾಲಿಡುತ್ತಾನೆ. ಇಲ್ಲಿ ಪರಿಚಿತರಾಗುವ ಕಲಾವಿದರಾದ ಸುಧಾಚಂದ್ರ ಮತ್ತು ಇಂದುಮತಿಯ ಮೂಲಕ ತನ್ನ ಕಲಾಭಿರುಚಿಯನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಾಯಿತು. ಈತನು ತನ್ನ ಮಯೂರ ನೃತ್ಯವನ್ನು ಕಲಿಯುವುದಕ್ಕಾಗಿ ಬಾದಾಮಿ ಬೆಟ್ಟಗಳಲ್ಲಿರುವ ನವಿಲುಗಳನ್ನು ಕಂಡು ಅವುಗಳಂತೆ ನೃತ್ಯವನ್ನು ಕಲಿಯಲು ಪ್ರಾರಂಬಿಸಿದಾಗ ಸಹ ಅವನಲ್ಲಿ ಅತೃಪ್ತಿಯಿದೆ. ಏಕೆಂದರೆ ತಮ್ಮ ಊರಿನ ಪರಿಸರವನ್ನು ತ್ಯಜಿಸಿದ ಅತೃಪ್ತಿ ಪ್ರಮುಖವಾಗಿದೆ. ಆದರೆ ಇದು ಅವನಿಗೆ ಅನಿವಾರ್ಯವಾಗಿದೆ. ಇದೇ ರೀತಿಯಾಗಿ ಕಾರಂತರು ಹೇಳಿರುವ ಇನ್ನೊಂದು ಪಾತ್ರವಾದ ರಾಮರಾಯನು ಸಹ ಕಡಲಿನ ಅಲೆಗಳನ್ನು ಕಂಡು ಸಂಗೀತವನ್ನು ಅದರಂತೆ ನುಡಿಸುವುದರ ಮೂಲಕ ನಿಸರ್ಗದ ಉಪಯೋಗ ಪಡೆಯುತ್ತಾನೆ. ಅದು ಮುಂಬೈಯೆಂಬ ದೊಡ್ಡ ನಗರದಲ್ಲೆನ್ನುವುದು ಪ್ರಮುಖವಾಗಿದೆ. ವ್ಯಾಸನು ಸಹ ಟೂಬಾಳೊಂದಿಗೆ ಮುಂಬೈಯನ್ನು ಸೇರಿ ನೃತ್ಯ ಶಾಲೆಯನ್ನು ತೆರೆದು, ಅನಂತರ ತನ್ನ ಪತ್ನಿ ವಿಮಲೆಯೊಂದಿಗೆ ಧಾರವಾಡಕ್ಕೆ ಬಂದು ಕಲಾ ಶಾಲೆಯನ್ನು ತೆರೆದು ಜೀವನವನ್ನು ನಡೆಸುತ್ತಾನೆ. ಅಪಾರವಾದ ನಿಸರ್ಗ ಪ್ರೇಮವನ್ನು ಹೊಂದಿರುವ ವ್ಯಾಸನು ಉದ್ಯೋಗಕ್ಕಾಗಿ ಕಲೆಯನ್ನು ನಂಬಿ ಬದುಕನ್ನು ಆ ಮೂಲಕ ಕಟ್ಟಿಕೊಳ್ಳಲು ಪ್ರಯತ್ನಿಸುವ ನೆಲೆಯಿಂದ; ಆತನು ನಿಸರ್ಗವನ್ನು ದಿಕ್ಕರಿಸಿ ಬದುಕುತ್ತಾನೆ. ಈ ಮಾತಿಗೆ ಅನ್ವಯಿಸುವ ಇನ್ನೂ ಪ್ರಮುಖ ಪಾತ್ರಗಳೆಂದರೆ ವ್ಯಾಸನ ಪತ್ನಿ ವಿಮಲೆ, ನಾಟಕ ಕಂಪನಿಯ ಮುಖ್ಯಸ್ಥರಾದ ಸುಧಾಚಂದ್ರ, ಇಂದುಮತಿ, ರಾಮರಾಯ ಮತ್ತು ಟೂಬಾ ಪ್ರಮುಖರು.

ಕಾರಂತರು ಈ ಪಾತ್ರಗಳ ಮುಖಾಂತರ ನಿಸರ್ಗವನ್ನು ದಿಕ್ಕರಿಸಿ ಬದುಕುವ ವಿವಿಧ ನೆಲೆಗಳನ್ನು ಗುರುತಿಸುತ್ತಾರೆ. ಪ್ರಸ್ತುತ ಸಮಕಾಲೀನ ಸ್ಥಿತಿಯಲ್ಲಿ, ನಮ್ಮ ಹಳ್ಳಿಯ ಯುವಕರು ಜೀವನೋಪಾಯಕ್ಕಾಗಿ ನಗರವನ್ನು ಸೇರುವುದು ಸಾಮಾನ್ಯ ಸಂಗತಿಯಾಗಿದೆ. ಏಕೆಂದರೆ ಹಳ್ಳಿಗಳಲ್ಲಿ ಮೂಲಭೂತ ಸೌಲಭ್ಯಗಳ ಕೊರತೆ ಮುಂತಾದ ಸಮಸ್ಯೆಗಳು ಅವಿದ್ಯಾವಂತ ಯುವಕರನ್ನು ಕಾಡುತ್ತಿವೆ. ಅಲ್ಲದೆ ತಮ್ಮನ್ನು ಅವರ ಮೂಲ ವೃತ್ತಿಯಾದ ಕೃಷಿಯಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಏಕೆಂದರೆ ಮಳೆಯ ಕೊರತೆ, ಹವಾಮಾನ ವೈಪರೀತ್ಯಗಳಿಂದ

೧೦೫. ಶಿವರಾಮ ಕಾರಂತ, ಮೊಗ ಪಡೆದ ಮನ, ಪುಟ ೩೧೩

ರೈತರು ಬೆಳೆದ ಬೆಳೆಗಳು ನಾಶವಾಗುತ್ತಿರುವುದು, ಇವೆಲ್ಲವನ್ನು ಸೂಕ್ಷ್ಮವಾಗಿ ಗಮನಿಸುತ್ತಿರುವ ನಮ್ಮ ಯುವಜನತೆ ಸಹಜವಾಗಿ ನಗರಗಳತ್ತ ಮುಖ ಮಾಡುತ್ತಿದ್ದಾರೆ. ಇದರಿಂದ ಗಾಂಧೀಜಿಯವರು ಕಂಡ 'ಗ್ರಾಮ ಸ್ವರಾಜ್ಯ'ದ ಕನಸು ಸಡಿಲವಾಗುತ್ತಿದೆ. ಈ ಸಡಿಲತೆಯನ್ನು ಬಿಗಿಗೊಳಿಸಬೇಕಾದರೆ, ಗ್ರಾಮೀಣ ಪ್ರದೇಶದಲ್ಲಿಯೇ ಯುವಕರು ಇದ್ದುಕೊಂಡು, ತಮ್ಮ ಹಳ್ಳಿಯನ್ನು ಅಭಿವೃದ್ಧಿಯ ಪಥದಲ್ಲಿ ಸಾಗಿಸಲು ಬೇಕಾದ ಎಲ್ಲಾ ಸೌಲಭ್ಯಗಳನ್ನು ಸರ್ಕಾರಗಳು ಒದಗಿಸಿಕೊಡಬೇಕು. ಆಗ ಈ ಸೌಲಭ್ಯಗಳನ್ನು ಬಳಸಿಕೊಂಡು ಯುವಕರು ಗ್ರಾಮಗಳನ್ನು ಅಭಿವೃದ್ಧಿಪಡಿಸಬಹುದು. ಆಗ ನಗರಗಳಿಗೆ ಗ್ರಾಮೀಣ ಜನತೆಯ ವಲಸೆ ತಪ್ಪುತ್ತದೆ. ಆದರೆ ಈ ದಿಸೆಯಲ್ಲಿ ಸರ್ಕಾರಗಳ ಪ್ರಯತ್ನ ತುಂಬಾ ಕಡಿಮೆ. ಆದ್ದರಿಂದ ಅವರು ತಮ್ಮ ಕಾದಂಬರಿಗಳಲ್ಲಿ ಗ್ರಾಮ ಜೀವನವನ್ನು ತ್ಯಜಿಸಿ, ನಗರ ಜೀವನಕ್ಕೆ ಕಾಲಿಡುವ ಪಾತ್ರಗಳನ್ನು ನಿಸರ್ಗವನ್ನು ಧಿಕ್ಕರಿಸಿ ಬದುಕು ಸಾಗಿಸುವಂತಹವರು ಎಂದು ಹೇಳುತ್ತಾರೆ. ಆದ್ದರಿಂದ ಕಾರಂತರ ದೃಷ್ಟಿಯಲ್ಲಿ ನಿಸರ್ಗವೆಂದರೆ ಗ್ರಾಮೀಣ ಪ್ರದೇಶದ ವಾತಾವರಣ ಆಗಿದೆ. ಇದನ್ನು ಅವರು ತಮ್ಮ ಕಾದಂಬರಿಗಳಲ್ಲಿ ಸಾಧಿಸಿದ್ದಾರೆ. ವ್ಯಾಸನು ವೃತ್ತಿಯಲ್ಲಿ ಕಲಾವಿದ, ಪತ್ರಕರ್ತ ಮತ್ತು ಪದವೀಧರ. ಆದರೆ ಆತನ ಮನಸ್ಸು ಸದಾ ನಿಸರ್ಗದ ಒಡನಾಟಕ್ಕಾಗಿ ಮಿಡಿಯುತ್ತದೆ. ಆದರೆ ಆತ ನಿಸರ್ಗದೊಂದಿಗೆ ಬೆರೆಯಲು ಸಾಧ್ಯವಾಗುವುದಿಲ್ಲ. ಕಾರಣವೆಂದರೆ ವ್ಯಾಸ ಈಗ ಸಂಪೂರ್ಣ ಆಧುನಿಕ ವ್ಯಕ್ತಿಯಾಗಿ ಕಂಡು ಬರುತ್ತಾನೆ.

'ಉಕ್ಕಿದ ನೊರೆ' ಕಾದಂಬರಿಯಲ್ಲಿ ಬರುವ ಪಾತ್ರಗಳಾದ ಪಾಟಾಳಿಶಂಭು, ಇನಾಸಸೋಜ, ಗೋಪಾಲ ಶ್ಯಾನುಭೋಗ, ಬಿಲ್ಲಾಡಿ ಮೋನಪ್ಪ, ಗುಲಾಬಿ, ಚೆನ್ನಕ್ಕ, ಭದ್ರಗಿರಿಯ ವೆಂಕ ಇವರೆಲ್ಲರು ನಿಸರ್ಗವನ್ನು ಧಿಕ್ಕರಿಸಿ ಬದುಕುವ ಪಾತ್ರಗಳಾಗಿ ಕಂಡುಬರುತ್ತಾರೆ. ಇವರಲ್ಲಿ ಕೆಲವರು ಹಳ್ಳಿಯನ್ನು ತಮ್ಮ ನಡುಕಾಲದಲ್ಲಿ ತ್ಯಜಿಸಿ, ನಂತರ ಹಿಂತಿರುಗಿ ಆಸ್ತಿಯನ್ನು ಕೊಂಡು ಬದುಕುತ್ತಾರೆ. ಆದರೆ ಇಲ್ಲಿ ಅವರು ಹಳ್ಳಿಯನ್ನು ಅವರ ಪೂರ್ವಿಕರು ನಂಬಿದ್ದ ಕೃಷಿ ಭೂಮಿಯನ್ನು ತ್ಯಜಿಸಿ ಪಟ್ಟಣಕ್ಕೆ ವಲಸೆ ಹೋಗಿ ಅಲ್ಲಿ ವಿವಿಧ ಉದ್ಯೋಗಗಳಲ್ಲಿ ತೊಡಗುತ್ತಾರೆ. ಇದಕ್ಕೆಲ್ಲ ಕಾರಣ ಆರ್ಥಿಕ ಸ್ವಾವಲಂಬನೆಯನ್ನು ರೂಢಿಸಿಕೊಳ್ಳುವುದೇ ಆಗಿದೆ. ಇವೆಲ್ಲವೂ ಸಾಮಾಜಿಕ ನೆಲೆಯಲ್ಲಿ ಕಾಣಿಸಿಕೊಳ್ಳುತ್ತವೆ. ಕಾರಂತರು ಈ ಕಾದಂಬರಿಯ ಮುನ್ನುಡಿಯಲ್ಲಿ 'ಇಲ್ಲಿ ಬರುವ ಹಳ್ಳಿಗಳು ಸಾಮಾನ್ಯವಾದವು: ಜನರೂ ಅಷ್ಟೇ ಸಾಮಾನ್ಯರು ಆದರೂ ಅಲ್ಲಿರುವ ಜನರ ನಿತ್ಯ ಜೀವನ ಯಾವೆಲ್ಲ ಬಗೆಗಳಿಂದ ಈ ಅವಧಿಯಲ್ಲಿ ಕಲಕಿ ತಳಮಳಗೊಂಡಿತು. ಆದರಿಂದಾದ ಆರ್ಥಿಕ, ನೈತಿಕ ಪರಿಣಾಮಗಳು ಯಾವ ತೆರನವು ಎಂಬುದನ್ನು ತೋರಿಸುವ ಪ್ರಯತ್ನ ಇಲ್ಲಿದೆ'.

ಈ ಹಿನ್ನೆಲೆಯಲ್ಲಿ ಬಾರಕೂರಿನಿಂದ ಚನ್ನಗಿರಿಗೆ ಹೋಗಿ ತಮ್ಮ ಅದೃಷ್ಟ ಪರೀಕ್ಷೆಗೆ ಕುಳಿತುಕೊಂಡವರೆಂದರೆ ಇನಾಸಸೋಜ ಮತ್ತು ಪಾಟಾಳಿಶಂಭೂ ಪ್ರಮುಖರು. ಇನಾಸಸೋಜ

"ಶಂಭುವಿನ ಪ್ರೋತ್ಸಾಹದಿಂದ ಚನ್ನಗಿರಿಯಲ್ಲಿ ಮೊದಲು ಒಂದು ತಾಮ್ರಶಾಲೆಯನ್ನು ತೆರೆದ. ತೆರೆದು ಎರಡು ವರ್ಷಗಳಲ್ಲೇ ಅದೃಷ್ಟ ಅನುಕೂಲಿಸಿತು. ಕೈಯಲ್ಲಿದ್ದ ತಾಮ್ರ, ತಾವರಗಳ ಬೆಲೆ ಒಂದಕ್ಕೆ ಎಂಟಾಯಿತು. ಮಾಲಿಗೆ ಅಡಚಣೆ ಬಂದರೂ ಕೇಳಿದ ಮಜೂರಿ ಕೇಳಿದ ಬೆಲೆ ಸಿಗುವ ಕಾಲ ಬಂದಿತು. ತಾಮ್ರದ ಅಂಗಡಿಯ ಮುಗ್ಗುಲಿಗೇನೆ ಒಂದು ಚಿಕ್ಕ ಜವುಳಿಯ ಅಂಗಡಿಯನ್ನು ಹಾಕಿಕೊಂಡು ಊರಿಂದ ತನ್ನ ಭಾವನನ್ನೂ, ಹೆಂಡತಿಯನ್ನು ಕರೆಯಿಸಿಕೊಂಡ, ಕೈಗೆ ನಾಲ್ಕು ಕಾಸು ಬರತೊಡಗಿತು".[೧೦೬] ಆಧುನಿಕ ಬಂಡವಾಳ ಶಾಹಿತ್ವಕ್ಕೆ ಮಾರುಹೋದ ಇನಾಸಸೋಜನು ಚನ್ನಗಿರಿಯಲ್ಲಿ ತಾಮ್ರದ ಅಂಗಡಿಯನ್ನು ತೆರೆದ ಬೇಕಾದಷ್ಟು ಹಣವನ್ನು ಸಂಪಾದಿಸಿದನು. ಇದು ಅವನಿಗೆ ಅನಿವಾರ್ಯವಾಗಿತ್ತು. ಏಕೆಂದರೆ ಕೃಷಿಯನ್ನು ಅವಲಂಬಿಸಿ ಬದುಕುವುದಕ್ಕೆ ಅವನಲ್ಲಿ ಆಸ್ತಿ ಹೆಚ್ಚಿಗೆ ಇರಲಿಲ್ಲ. ಊರು ಮನೆಯಲ್ಲಿರುವುದು ಈ ಆಸ್ತಿಯ ಜೊತೆಗೆ ಒಂದು ಮನೆ ಇತ್ತು. ಆಸ್ತಿಯಿದ್ದರೂ ಸಹ, ಬದುಕಿಗೆ ಈ ಆಧುನಿಕ ಪರಿಸ್ಥಿತಿಯಲ್ಲಿ ಹಣದ ಅವಶ್ಯಕತೆಯಿದ್ದುದರಿಂದ ಹಳ್ಳಿಯ ಜೀವನವನ್ನು ತೊರೆದು ಪಟ್ಟಣದ ಕಡೆ ಬಂದು ಜೀವಿಸಿಸುವುದರ ಮುಖಾಂತರ ನಿಸರ್ಗವನ್ನು ದಿಕ್ಕರಿಸಿ ಬದುಕುವ ಪಾತ್ರದ ನೆಲೆಯಲ್ಲಿ ಇನಾಸಸೋಜ ಕಂಡು ಬರುತ್ತಾನೆ. ಇದೇ ನೆಲೆಗೆ ಪಾಟಾಳಿಶಂಭುವು ಸಹ ಒಳಪಡುತ್ತಾನೆ. ಪಾಟಾಳಿಶಂಭು ಸಹ ಚನ್ನಗಿರಿಯಲ್ಲಿ ಅಂಗಡಿಯನ್ನು ಇಟ್ಟುಕೊಂಡು ಗುಲಾಬಿಯೊಂದಿಗೆ ಜೀವನ ಸಾಗಿಸುತ್ತಾನೆ.

ನಿಸರ್ಗವನ್ನು ತೊರೆದು ಜೀವಿಸುವ ಇನ್ನೊಂದು ಪಾತ್ರವಾದ ಗೋಪಾಲ ಶ್ಯಾನುಭೋಗರು ಸಹ ಒಬ್ಬರು. ಇವರ ಬಗ್ಗೆ ಕಾರಂತರು *"ಬ್ರಹ್ಮಾವರದ ಜವಳಿ ಮಳಿಗೆಗಳಲ್ಲಿ ಗೋಪಾಲ ಶ್ಯಾನುಭೋಗರ ಅಂಗಡಿಯೇ ಸ್ವಲ್ಪ ಭರ್ಜರಿಯಾದ ಅಂಗಡಿ ಮಕ್ಕಳಿಗೆ ಬೇಕಾಗುವ ಬೇಬಿ ಅರವೆಗಳು, ಹೆಂಗಸರ ಗಂಡಸರ ನಿತ್ಯ ಉಡುಗೆಯ ಸೀರೆ, ಪಂಚೆ, ಶಾಲುಗಳು, ಮದುವೆ ಮುಂಜಿಗಳಿಗೆ ಬೇಕಾದ ರೇಷ್ಮೆ, ಜರತಾರಿಗಳು ಯಾವುದಕ್ಕು ಬ್ರಹ್ಮಾವರದ ಸುತ್ತಮುತ್ತಲಿನ ಜನ ದೂರ ಹೋಗಬೇಕಾಗಿರಲಿಲ್ಲ. ಎರಡು ಮೂರು ತಲೆಮಾರುಗಳಿಂದಲೂ ಶ್ಯಾನುಭೋಗ ಅಣ್ಣ ತಮ್ಮಂದಿರು ಒಂದು ಜವುಳಿ ಅಂಗಡಿ ನಡೆಸುತ್ತ ಬಂದಿದ್ದಾರೆ."*[೧೦೭]

ಗೋಪಾಲ ಶ್ಯಾನುಭೋಗರ ವಂಶಸ್ಥರು ಪಟ್ಟಣದಲ್ಲಿ ಜವಳಿ ಅಂಗಡಿಯನ್ನು ನಡೆಸುವ ಮೂಲಕ ನಿಸರ್ಗದಿಂದ ದೂರ ಉಳಿಯುತ್ತಾರೆ. ಕಾರಂತರು ಈ ಕಾದಂಬರಿಯ ಮೂಲಕ ಪುಡಾರಿ ರಾಜಕೀಯ ಮಾಡುವ ವ್ಯಕ್ತಿಗಳನ್ನು ಕಟುವಾಗಿ ಟೀಕಿಸುತ್ತಾರೆ. ಈ ಪಾತ್ರಗಳು ಸಮಾಜಕ್ಕೆ ಕಂಠಕವಾಗಿದೆ ಎಂದು ಹೇಳುತ್ತಾರೆ. ಈ ಕಾದಂಬರಿಯಲ್ಲಿ ಬರುವ ಇಂತಹ ಪಾತ್ರವೆಂದರೆ ಬಿಲ್ಲಾಡಿಮೋನಪ್ಪ, ಇವನು ಬ್ರಹ್ಮಾವರದಲ್ಲಿ ಬೀದಿ ಬೀದಿ ತಿರುಗುವ ಮೂಲಕ ಜನರ ಕಣ್ಣಿಗೆ ಪುಡಾರಿಯಾಗಿ ಕಂಡು ಬರುತ್ತಾನೆ. *"ಮೋನಪ್ಪ ಶ್ರೀಮಂತನೋ ಅಲ್ಲವೋ? ಆ ವಿಷಯ ಸ್ಪಷ್ಟವಾಗಿ ಬಹು ಮಂದಿಗೆ ಗೊತ್ತಿಲ್ಲ. ಅವನ ಮನೆಯೇನೋ ಶ್ರೀಮಂತಿಕೆಗೆ ಹಿಂದೆ ಹೆಸರಾಗಿತ್ತು. ಹಿಂದೆ ಆ ಮನೆಯವರು ಭೂಮಿ ಕಾಣಿಕೆಗಳಿಗೂ, ಪಾಳೆಯಗಾರಿಕೆಗೂ ಹೆಸರಾದರು. ಅಂಥ ಮನೆಗೆ ಸೇರಿದ್ದ ಮೋನಪ್ಪ ಬಾರ್ಕೂರು ಪೇಟೆಯಲ್ಲಿ*

೧೦೬. ಶಿವರಾಮ ಕಾರಂತ : ಉಕ್ಕಿದ ನೊರೆ, ಪುಟ-೧೦೧
೧೦೭. ಅದೇ, ಪುಟ-೨೮

ವೇಷಭೂಷಿತನಾಗಿ ಅಲೆದಾಡುತ್ತಿದ್ದ ಠೀವಿಯೇನು? ಅವನ ಮಾತಿಗೆ ಊರಿನ ನಾಲ್ಕು ತರುಣರಲ್ಲಿದ್ದ ಭರಾಮೇನು! ಅವನಿಗೆ ಬಿಲ್ಲಾಡಿ ಮನೆಯ ಯಜಮಾನಿ ಬರುವ ಕಾಲಕ್ಕೆ ಮುಪ್ಪು ಬರಬಹುದು. ಆದರೆ ಅವನು ಇವತ್ತು ಮಾಡುತ್ತಿರುವ ಶೋಕಿ, ನಡೆಸುತ್ತಿರುವ ದರ್ಬಾರು ಅವನ ಮಲ್ ಮಲ್ ಧ್ರೋತ್ರ, ರೇಷ್ಮೆ ಅಂಗಿ, ಬೆಳ್ಳಿ ಹಿಡಿಯ ಬೆತ್ತ ಇವನ್ನೆಲ್ಲ ಕಂಡರೆ, ಅವನೊಬ್ಬ ಯುವರಾಜನ ಮರಿಯ ಹಾಗೆ ಕಾಣಿಸುತ್ತಾನೆ."[೧೦೮] ಕಾರಂತರು ಬಿಲ್ಲಾಡಿ ಮೋನಪ್ಪನ ಪಾತ್ರದಲ್ಲಿ ಪೇಟೆ ಶೋಕಿತನ ಮತ್ತು ದರ್ಪವನ್ನು ಹೇಳುತ್ತಾರೆ. ಇದು ಅವನನ್ನು ಸಾಮಾನ್ಯವಾಗಿಯೆ ನಿಸರ್ಗದಿಂದ ದೂರವಿರುವಂತೆ ಪ್ರೇರೇಪಿಸುತ್ತದೆ. ಆದ್ದರಿಂದ ಇವನ ಪಾತ್ರದಲ್ಲಿ ನಿಸರ್ಗವನ್ನು ದಿಕ್ಕರಿಸಿ ಬದುಕುವ ನೆಲೆಗಳನ್ನು ಗುರುತಿಸಬಹುದು.

ಭದ್ರಗಿರಿ ವೆಂಕ ಮತ್ತು ಚೆನ್ನಕ್ಕರು ಮುಂಬೈಯಲ್ಲಿ ಬುದುಕು ಸಾಗಿಸುತ್ತಾರೆ. ಕಾರಣ ಅವರ ಹೊಟ್ಟೆಪಾಡಾಗಿರುತ್ತದೆ. ಇದರ ಅನಿವಾರ್ಯತೆಗೆ ಬಿದ್ದು ಚೆನ್ನಕ್ಕ ಮುಂಬೈಯಲ್ಲಿ ತನ್ನ ಮೈಮಾರಿಕೊಳ್ಳುವ ವೃತ್ತಿಗೆ ಇಳಿಯುತ್ತಾಳೆ. ಇವಳ ಬಡತನದ ಬಗ್ಗೆ ಮತ್ತು ಇವಳು ಹಾಗೂ ವೆಂಕನು ತಮ್ಮ ಗ್ರಾಮವನ್ನು ತ್ಯಜಿಸಲು ಕಾರಣವನ್ನು ಕಾರಂತರು ಹೇಳುತ್ತಾರೆ.

"ಭದ್ರಗಿರಿಯಿಂದ ಹಂಗಾರಕಟ್ಟೆಗೆ ಚಾಚುವ ನದಿಕರೆಯ ಯಾವುದೋ ಒಂದು ಬಡ ಕುಟುಂಬದಲ್ಲಿ ಹುಟ್ಟಿದವಳು ಅವಳು, ಅವಳೂ ಅವಳ ಗಂಡನೂ ಎಷ್ಟೋ ವರ್ಷಗಳ ಕೆಳಗೆ ಮುಪ್ತಿಗೆ ಹೋದರು. ಮುಂಬೈಯಲ್ಲಿ ಗಂಡ ಒಂದು ಕಂಪನಿಯಲ್ಲಿ ಜವಾನರಾಗಿ ದುಡಿಯತೊಡಗಿದ. ಅಷ್ಟರ ಮಟ್ಟಿಗೆ ಅವರ ಜೀವನ ಬಡತನದ್ದು- ಎಂಬುದು ಖಂಡಿತ. ಮುಂದೆ ಅವಳು ತನ್ನ ಗಂಡನೊಡನೆ ಒಂದೆರಡು ಬಾರಿ ಊರಿಗೆ ಬಂದು ಹೋದದ್ದುಂಟು. ಒಮ್ಮೆ ತನ್ನ ಅಕ್ಕನ ಸಂಬಂಧದ ಹುಡುಗ ವೆಂಕನನ್ನು ಮುಂಬೈಯಲ್ಲಿ ಚಾಕರಿ ದೊರಕಿಸಿಕೊಡುವೆನೆಂದು ಹೇಳಿ ಕರೆದುಕೊಂಡು ಹೋದದುಂಟು. ಪ್ರಾಯದಲ್ಲಿ ಅವರಿಬ್ಬರೂ ಸಮ ಇರಬಹುದು. ವೆಂಕನನ್ನು ಕರೆದುಕೊಂಡ ಹೋದ ಮೇಲೆ ಅವಳು ಗಂಡನೊಡನೆ ಊರಿಗೆ ಬಂದದ್ದೂ ಇಲ್ಲ, ಹೋದದ್ದೂ ಇಲ್ಲ"[೧೦೯]

ಚೆನ್ನಕ್ಕೆ ತನ್ನ ಗಂಡ ಹಾಗೂ ವೆಂಕನೊಂದಿಗೆ ಮುಂಬೈಯನ್ನು ಸೇರುತ್ತಾಳೆ. ಅಲ್ಲಿ ಚಿಕ್ಕ ಪಂಜರದಂತಹ ಕೋಣೆಗಳಲ್ಲಿ ಬದುಕು ಸಾಗಿಸುತ್ತಾಳೆ. ಅಲ್ಲದೆ ಆಗಾಗ ಬ್ರಹ್ಮಾವರಕ್ಕೆ ಬರುತ್ತಾಳೆ. ಬಂದವಳು ಪೆರಡೂರು, ಸೋಮೇಶ್ವರದಲ್ಲಿ ಕೆಲವು ಯೌವನೆಯರನ್ನು ಮುಂಬೈಗೆ ಕರೆದೊಯ್ಯುವ ಮೂಲಕ ವೇಶ್ಯಾ ದಂಧೆಗೆ ಅವರನ್ನು ಇಳಿಸುವ ಮೂಲಕ ಹಣ ಸಂಪಾದಿಸುತ್ತಾಳೆ. ಹೀಗೆ ತೊಗಲಿನ ವ್ಯಾಪಾರದ ರುಚಿ ಹತ್ತಿಸಿಕೊಂಡ ಚೆನ್ನಕ್ಕ ಮತ್ತು ವೆಂಕರು ನಿಸರ್ಗದಿಂದ ದೂರವಾಗಿ, ಪಟ್ಟಣದಲ್ಲಿ ವಾಸಿಸುತ್ತಾರೆ. ಈ ಪಾತ್ರದಲ್ಲಿ ಕಾರಂತರು ನಿಸರ್ಗ ದಿಕ್ಕರಿಸಿ ಬದುಕುವ ನೆಲೆಗಳನ್ನು ಗುರುತಿಸುತ್ತಾರೆ.

'ಅಂಟಿದ ಅಪರಂಜಿ' ಕಾದಂಬರಿಯಲ್ಲಿ ನಿಸರ್ಗವನ್ನು ದಿಕ್ಕರಿಸಿ ಬದುಕುವ ಪಾತ್ರಗಳು ಕಂಡು ಬರುತ್ತವೆ. ಈ ಪಾತ್ರಗಳಲ್ಲಿ ಪುರುಷೋತ್ತಮ ಮತ್ತು ಇವನ ಸೋದರಳಿಯ ಹಯವದನ

---

೧೦೮. ಅದೇ, ಪುಟ-೨೦
೧೦೯. ಅದೇ, ಪುಟ-೮೬

ಪ್ರಮುಖವಾಗಿದೆ. ಇವರಂತೆ ನುಡಿಮಂಗಳದ ಜನತೆ ಕಾಲಾಂತರದಲ್ಲಿ ಗ್ರಾಮವನ್ನು ಬಿಟ್ಟು ನಗರಗಳಿಗೆ ಸೇರುವುದಕ್ಕೆ ಕಾರಂತರು ಕಾರಣಗಳನ್ನು ಕೊಡುತ್ತಾರೆ.

"ಪುರಾತನ ಕಾಲವಾದರೆ ಒಬ್ಬಾತ ಯಾವ ಮಣ್ಣಿನಲ್ಲಿ ಜನಿಸಿದ್ದಾನೋ ಅದೇ ಮಣ್ಣಿನಲ್ಲಿ ತನ್ನ ಕಟ್ಟ ಕಡೆಯ ಉಸಿರನ್ನು ಎಳೆಯುವ ಸೌಭಾಗ್ಯವನ್ನು ದೌರ್ಭಾಗ್ಯವನ್ನು ಪಡೆದವರ ಸಂಖ್ಯೆ ನೂರಕ್ಕೆ ನೂರರಷ್ಟು ಅಲ್ಲದೆ ತೊಂಬತ್ತರಷ್ಟು ಜನಕ್ಕೆ ಇತ್ತೋ ಏನೋ ಪ್ರಾಯಶಃ ನನ್ನ ಲೆಕ್ಕ ತಪ್ಪಿರಲೂಬಹುದು. ಹೆಣ್ಣು ಮಕ್ಕಳು ಪರಸ್ಥಳಗಳಿಗೆ ದಾನವಾಗಿ ಹೋಗುವುದರಿಂದ, ಅರ್ಧದಷ್ಟು ಜನಸಂಖ್ಯೆ ಅವರೆಂದು ತಿಳಿಯುವಲ್ಲಿ ನೂರಕ್ಕೆ ನಾಲ್ವತ್ತೈದರಷ್ಟು ಜನ ಸ್ವಗ್ರಾಮದಲ್ಲಿ ಉದ್ಭವಿಸಿ, ಅಲ್ಲೇ ಅಂತರ್ಧಾನರಾಗುತ್ತಾರೆ.ಅಂಥ ನೆಲದ ಋಣ ದಕ್ಷಿಣ ಕನ್ನಡದ ಜನರಿಗೆ ಅವರವರ ಹೊಟ್ಟೆಯ ಪಾಡಿನಿಂದಾಗಿ ಈ ಶತಮಾನದ ಆರಂಭದಲ್ಲಿ ತಟ್ಟತೊಡಗಿತು.ಅದರಲ್ಲಿಯೂ ಮೇಲಣ ಜಾತಿಯವರು ಎನಿಸಿಕೊಂಡವರು ಊರಲ್ಲಿಯೇ ಹುಟ್ಟಿ, ಬೆಳೆದು, ಊರ ನೆಲವನ್ನು ಬಿಡುವ ಆಸೆ ಇಲ್ಲದಿದ್ದರೂ, ಬೇರೆ ವಿಧಿ ಇಲ್ಲದೆ ಸಟ್ಟಗಧಾರಿಗಳಾಗಿ ಪರವೂರುಗಳಿಗೆ ಹೋಗುವ ಯೋಗ ಈ ಶತಮಾನದ ಆರಂಭದ ದಶಕಗಳಲ್ಲಿ ತೊಡಗಿತು. ಅದನ್ನು ತಡೆಯುವ ಪ್ರಯತ್ನವನ್ನು ಯಾರು ಮಾಡಿರಲಿಲ್ಲ. ಹೀಗಾಗಿ, ಅನೇಕರು ಮೈಸೂರು, ಮದ್ರಾಸು ಇಲ್ಲವೆ ಮುಂಬೈ ಕರ್ನಾಟಕಗಳಿಗೆ ವಲಸೆ ಹೋದರು."[೧೧೦]

ಕಾರಂತರು ಹೇಳುವ ವಲಸೆ ಪ್ರಕರಣ, ಆಧುನಿಕ ಸಮಯದಲ್ಲಿ ಪ್ರಮುಖವಾಗುತ್ತಿದೆ. ಇದಕ್ಕೆ ಪ್ರಮುಖ ಕಾರಣವೆಂದರೆ, ಗ್ರಾಮ ಮಟ್ಟದಲ್ಲಿ ಕೃತಿಯನ್ನು ಅವಲಂಬಿಸಿ ಬದುಕು ಸಾಗಿಸುವುದು ಕಷ್ಟವಾಗುತ್ತಿದೆ. ಏಕೆಂದರೆ ನಿಸರ್ಗದ ಅಸಮತೋಲನದಿಂದ ವರ್ಷ ವರ್ಷವು ಮಳೆ ಕಡಿಮೆಯಾಗುತ್ತಿದೆ. ಇದರಿಂದ ಅಂತರ್ಜಲದ ಮಟ್ಟ ಕುಸಿಯತೊಡಗಿದೆ. ಇದರ ಪರಿಣಾಮ ಕೃಷಿಯನ್ನು ಮೇಲೆ ಅವಲಂಬಿಸಿ ಬದುಕು ಸಾಗಿಸುವುದು ದುಸ್ತರವಾಗಿ, ಆಧುನಿಕ ವಿದ್ಯಾಭ್ಯಾಸ ಪಡೆದ ಯುವಜನತೆಗೆ ಕಂಡು ಬರುತ್ತಿದೆ. ಇದೇ ಅಲ್ಲದೆ ತಮ್ಮ ಪೂರ್ವಿಕರು ನಂಬಿಕೊಂಡು ಬಂದಿದ್ದ ಮಣ್ಣನ್ನು ತ್ಯಜಿಸುತ್ತಿದ್ದಾರೆ.

---

೧೧೦. ಶಿವರಾಮ ಕಾರಂತ, ಅಂಟಿದ ಅಪರಂಜಿ, ಪುಟ – ೩೯೮

ಅಧ್ಯಾಯ-೬

ಭೂಮಿ ಮತ್ತು ಮಾನವ ಸಂಬಂಧಗಳ ನಿರಂತರ ಸಂಘರ್ಷ ಮತ್ತು ಆಧುನಿಕತೆಯ ಚಿತ್ರಣ

ಶಿವರಾಮಕಾರಂತರು ತಮ್ಮ ಕಾದಂಬರಿಗಳಲ್ಲಿ ಪ್ರಮುಖವಾಗಿ ನಿಸರ್ಗವನ್ನು ಮಾನವ ಸಂಬಂಧಗಳೊಂದಿಗೆ ತರುವುದು ಸಹಜ ತಂತ್ರ. ಇದು ಮನುಷ್ಯ ಸಂಬಂಧಗಳನ್ನು ಮತ್ತು ಆ ಸಂಬಂಧಗಳಿಗೆ ಇರುವ ಬೆಲೆಯನ್ನು ಹೆಚ್ಚು ಮಾಡುತ್ತದೆ. ಏಕೆಂದರೆ ನಿಸರ್ಗವಿಲ್ಲದೆ ಮನುಷ್ಯನ ಬಾಳು ಬರಡು, ಶಿವರಾಮಕಾರಂತರು ಕಾದಂಬರಿಗಳನ್ನು ಬರೆಯುವ ಕಾಲಕ್ಕೆ ಬ್ರಿಟೀಷ್ ಸಾಮ್ರಾಜ್ಯದ ಅವನತಿಯ ಹಾದಿ, ಭಾರತದಲ್ಲಿ ವಸಹಾತುಶಾಹಿ ಪರಿಣಾಮಗಳು ನಮ್ಮ ಸಾಮಾಜಿಕ, ಆರ್ಥಿಕ, ರಾಜಕೀಯ, ಹಾಗೂ ನಮ್ಮ ಇಡೀ ಸಾಂಸ್ಕೃತಿಕ ಚಟುವಟಿಕೆಗಳ ಮೇಲೆ ಗಾಡವಾದ ಪರಿಣಾಮವನ್ನುಂಟು ಮಾಡಿದವು. ಇದೇ ಸಮಯಕ್ಕೆ ನಮ್ಮ ವಿದ್ಯಾಭ್ಯಾಸವು ಇಂಗ್ಲಿಷ್ ಶಿಕ್ಷಣಕ್ಕೆ ತಮ್ಮನ್ನು ತೆರೆದುಕೊಂಡಿತ್ತು. ಆ ಮೂಲಕ ಇಂಗ್ಲಿಷ್ ಶಿಕ್ಷಣವನ್ನು ಪಡೆದ ಭಾರತೀಯರು ವಸಾಹತುಶಾಹಿ, ಬಂಡವಾಳಶಾಹಿಯ ಪರಿಣಾಮಗಳನ್ನು ಗ್ರಹಿಸಿದರು. ಅದಕ್ಕಿಂತ ಮೊದಲಾಗಿ ನಮ್ಮ ಸಮಾಜದ ಸ್ಥಿತಿಯು ಹರಿಯದ ನೀರಿನಂತೆ ರಾಡಿಯಾಗಿ ಇತ್ತು. ಇದೇ ಸಂದರ್ಭದಲ್ಲಿ ಇವರು ಹಿಂದೂ ಧರ್ಮದಲ್ಲಿನ ಜಾತಿಯತೆ, ವರ್ಣ ವ್ಯವಸ್ಥೆ ಇವುಗಳ ಶೋಧನೆಗೆ ತೊಡಗಿದರು. ಅಂತಹ ನೆಲೆಯಲ್ಲಿ ಅದುವರೆಗೆ ಕುರುಡುರಂತೆ ಇದ್ದ ದಲಿತರು, ಹಿಂದುಳಿದ ವರ್ಗದವರು ಈ ವಸಾಹತುಶಾಹಿ ಪರಿಣಾಮದ ಬದಲಾವಣೆಗೆ ಅತೀಬೇಗನೆ ಪ್ರತಿಕ್ರಿಯಿಸಿದರು. ಇದರ ಪರಿಣಾಮ ವಿದ್ಯಾವಂತ ತರುಣರು ಹೊಸದಾದ ಚಿಂತನೆಗಳನ್ನು ಅಳವಡಿಸಿಕೊಂಡು ಸಾಹಿತ್ಯ ಬರೆಯಲು ತೊಡಗಿದರು.

ಈ ರೀತಿಯ ಪಾಶ್ಚಾತ್ಯ ಶಿಕ್ಷಣವು ಸಮಾನತೆಯ ನೆಲೆಯಲ್ಲಿ ಭಾರತೀಯರನ್ನು ಸೆಳೆಯಿತು. ಇದರ ಪರಿಣಾಮ ಅನೇಕ ಸಮಾಜ ಸುಧಾರಕರು ಸಮಾಜ ಸುಧಾರಣೆಯ ಕಡೆ ಒಲವು ತೋರಿಸಿದರು. ಅಂತಹವರಲ್ಲಿ ಪ್ರಮುಖವಾಗಿ ರಾಜರಾಮ್ ಮೋಹನ್‌ರಾಯ್ ಅವರ ಸುಧಾರಣಾ ಚಳುವಳಿ, ಗಾಂಧೀಜಿಯವರ ಸಾಮಾಜಿಕ ಮತ್ತು ರಾಜಕೀಯ ಚಳುವಳಿ ಹಾಗೂ ಅಂಬೇಡ್ಕರ್ ಅವರ ದಲಿತ ಚಳುವಳಿಗಳು ಕಂಡುಬರುತ್ತವೆ. ಈ ಹಿನ್ನೆಲೆಯಲಿ ಭಾರತದಲ್ಲಿನ ಅನೇಕ ಲೇಖಕರು ತಮ್ಮ ಸಾಹಿತ್ಯದಲ್ಲಿ ಸ್ವಾತಂತ್ರ್ಯದ ಸಂಕ್ರಮಣದ ನೆಲೆಗಟ್ಟನ್ನು ವಾಸ್ತವಿಕ ದೃಷ್ಟಿಯಲ್ಲಿ ಬರೆಯಲು ಪ್ರಾರಂಭಿಸಿದರು. ಅವುಗಳಲ್ಲಿ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಆಯಾಮಗಳಿಗೆ ಸಂಬಂಧಿಸಿದಂತೆ ನವಯುಗದ ಕನಸುಗಳು ಇದ್ದುವು. ಇದರಿಂದ ಅದುವರೆಗೂ ಜಡ ಸಂಸ್ಕೃತಿಯ

ಹೊಸ ಚಲನಶೀಲತೆಯು ಮೂಡಲಾರಂಭಿಸಿ, ಸಮಾಜ ಹೊಸ ಹೊಸ ಚಿಂತನೆಗಳನ್ನು ರೂಢಿಸಿಕೊಂಡಿತು. ಅವುಗಳು ಮುಖ್ಯವಾಗಿ ನಮ್ಮ ನಿಸರ್ಗದ ಸಂಪತ್ತಿಗೆ ಸಂಬಂಧಿಸಿದ್ದಾಗಿವೆ. ಏಕೆಂದರೆ ಬ್ರಿಟೀಷರು ನಮ್ಮ ಅಮೂಲ್ಯವಾದ ನೈಸರ್ಗಿಕ ಸಂಪತ್ತು ಲೂಟಿ ಮಾಡಿದ್ದರು. ಇದನ್ನು ಅರಿತ ಗಾಂಧೀಜಿಯವರ 'ಸ್ವದೇಶಿ ಚಳುವಳಿಯ'ಯ ಮಂತ್ರದಿಂದ ನಮ್ಮ ನಿಸರ್ಗದ ಬಗ್ಗೆ ಮತ್ತು ನಮ್ಮ ದೇಶ, ನಮ್ಮ ನಾಡು, ನಮ್ಮ ಸಂಸ್ಕೃತಿಯ ಬಗ್ಗೆ ಅಭಿಮಾನವುಂಟಾಯಿತು.

ಭಾರತದಲ್ಲಿ ಉಂಟಾದ ಈ ರೀತಿಯ ಚಲನಶೀಲತೆಯಿಂದ ನಮ್ಮ ನಾಡು-ನುಡಿಯ ಬಗ್ಗೆ ಮತ್ತು ನಮ್ಮ ಪರಿಸರದ ಬಗ್ಗೆ ಆಧುನಿಕ ನೆಲೆಯಲ್ಲಿ ಚಿಂತಿಸುವ ವಾಸ್ತವಾತವಾದಿ ಚಿಂತನಶೀಲ ಲೇಖಕರು ಅನೇಕ ಕಾದಂಬರಿಗಳನ್ನು ಬರೆದರು. ಅದರಲ್ಲಿ ಗುಲ್ವಾಡಿ ವೆಂಕಟರಾಯರವರು ಬರೆದಿರುವ ಐತಿಹಾಸಿಕ ಕಾದಂಬರಿಯಾದ 'ಇಂದಿರಾಬಾಯಿ' (೧೮೯೯) ಬಂದಿತು. ಇಷ್ಟರೊಳಗೆ ಗಳಗನಾಥ ಮತ್ತು ಬಿ. ವೆಂಕಟಚಾರ್ಯರು ಅನುವಾದ ಸಾಹಿತ್ಯವನ್ನು ಬರೆಯುತ್ತಿದ್ದರು. ಇಂತಹ ಕಾಲಪಲ್ಲಟ, ಸಮಾಜ ಪಲ್ಲಟ, ರಾಜಕೀಯ ಪಲ್ಲಟ ಮತ್ತು ಸಂಸ್ಕೃತಿ ಪಲ್ಲಟಗಳಾಗಿ ೧೯ನೇ ಶತಮಾನದಲ್ಲಿ ಭಾರತ ದೇಶವು ನವ ಸಾಂಸ್ಕೃತಿಕ ಲೋಕಕ್ಕೆ ತೆರೆದುಕೊಂಡಿತು. ಇಂತಹ ಸಂಕ್ರಮಣ ಕಾಲದಲ್ಲಿ ಶಿವರಾಮಕಾರಂತರು ಬರೆಯಲು ಪ್ರಾರಂಬಿಸಿದರು. ಇದರ ಪರಿಣಾಮಗಳು ಕಾರಂತರ ಕಾದಂಬರಿಗಳಲ್ಲಿ ಕಂಡುಬರುತ್ತವೆ.

ಈ ಹಿನ್ನೆಲೆಯಲ್ಲಿ ಅವರ ಕಾದಂಬರಿಗಳಲ್ಲಿ ನಿಸರ್ಗದೊಂದಿಗೆ ಆಧುನಿಕ ಜಗತ್ತು ತೆರೆದುಕೊಂಡಿದ್ದು ಗಮನಾರ್ಹ. ಏಕೆಂದರೆ ಭಾರತವು ವಸಹಾತುಶಾಹಿ ಆಡಳಿತಕ್ಕೆ ಒಳಪಟ್ಟದಂತಹದಾಗಿತ್ತು. ಈ ಆಧುನಿಕತೆಯೆನ್ನುವುದು ಕಾರಂತರ ಪಾತ್ರಗಳಲ್ಲಿ ಬಂದರೂ ಸಹ ಕಾರಂತರು ಅವುಗಳ ಬಗ್ಗೆ ಹೆಚ್ಚು ಒಲವು ತೋರಿಸಿಲ್ಲ. ಬದಲಾಗಿ ಭೂಮಿಯೊಂದಿಗೆ, ಕಡಲಿನೊಂದಿಗೆ, ನದಿಯೊಂದಿಗೆ, ಕಾಡಿನೊಂದಿಗೆ ಅವಿನಾಭಾವ ಸಂಬಂಧ ಹೊಂದಿರುವ ಪಾತ್ರಗಳನ್ನು ಕುರಿತು ಸೊಗಸಾಗಿ ಬರೆಯುತ್ತಾರೆ. ಕಾರಂತರ ಮತ್ತೊಂದು ತಂತ್ರವೆಂದರೆ ಅವರೇ ಒಂದು ಪಾತ್ರವಾಗಿ ಇತರ ಪಾತ್ರಗಳೊಂದಿಗೆ ಗುರ್ತಿಸಿಕೊಳ್ಳುವುದು ಪ್ರಮುಖವಾಗಿದೆ.

'ಬೆಟ್ಟದ ಜೀವ' ಕಾದಂಬರಿಯನ್ನು ಕಾರಂತರು ತಮ್ಮ ಅನುಭವಗಳ ನೆಲೆಯಲ್ಲಿ ಹೇಳುತ್ತಾರೆ. ಅವರು ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ಸುತ್ತಮುತ್ತಲಿನ ಪರಿಸರವನ್ನು ಮತ್ತು ಅಲ್ಲಿನ ಕಾಡುಗಳಲ್ಲಿ ವಾಸಿಸುವ ಜನರನ್ನು ಸ್ವತಃ ಕಂಡವರು. ನಿಸರ್ಗದ ವರ್ಣನೆಯನ್ನು ಮತ್ತು ಅಂತಹ ನಿಸರ್ಗದೊಂದಿಗೆ ವಾಸಿಸುವ ಜನತೆಯ ಬದುಕಿನ ನೆಲೆಯನ್ನು ಸಹಜವಾಗಿ ಗುರ್ತಿಸುತ್ತಾರೆ.

ಈ ಕಾದಂಬರಿ ಕುರಿತು ಪೋಲಂಕಿ ರಾಮಮೂರ್ತಿಯವರು ಹೀಗೆನ್ನುತ್ತಾರೆ. *"ಬೆಟ್ಟದ ಜೀವಿಯಾದ ಗೋಪಾಲಯ್ಯ ಮತ್ತು ಬೆಟ್ಟದ ಸಂಬಂಧ ಸಂಗ್ರಾಮವೇ. ಕಾಡು ಮೃಗವಾಗಿ, ಜ್ವರವಾಗಿ ಮಾನವನನ್ನು ಕೊಲ್ಲುತ್ತದೆ. ಮಾನವನು ಕೋವಿಯಾಗಿ, ಕತ್ತಿಯಾಗಿ, ಗುದ್ದಲಿಯಾಗಿ, ಬೆಂಕಿಯಾಗಿ ಕಾಡನ್ನು ಕೊಲ್ಲುತ್ತಾನೆ. ಕಾಡು ಮತ್ತು ಮಾನವ ಒಂದನ್ನೊಂದು ಇಲ್ಲವಾಗಿಸುವುದರಲ್ಲೆ ಜೀವನ. ಗೋಪಾಲಯ್ಯ ಕಾಡನ್ನು ಕಡಿದು, ಸುಟ್ಟು ಅಗೆದು ತೋಟ ಮಾಡುತ್ತಾನೆ. ಆಗ ಬೆಟ್ಟ ಸರಿಯುತ್ತದೆ. ಹಿಮ್ಮೆಟ್ಟುತ್ತದೆ ಮತ್ತು ಅದರ ಸ್ಥಾನದಲ್ಲಿ ಬೇಸಾಯವಾಗುತ್ತದೆ."*[೧]

ಕಾದಂಬರಿಕಾರ ಗೋಪಾಲಯ್ಯನ ಮೂಲಕ ಆಧುನಿಕ ಜಗತ್ತನ್ನು ಕಾಣುತ್ತಾರೆ. ಅಂದರೆ ಪೋಲಂಕಿ ರಾಮಮೂರ್ತಿಹೇಳಿದಂತೆ "ಗೋಪಾಲಯ್ಯ ತನ್ನ ನೆಲೆಗಾಗಿ ಹಾಗೂ ಬದುಕುವುದಕ್ಕಾಗಿ ಆಧುನಿಕ ಸಲಕರಣೆಗಳಾದ ಕತ್ತಿ, ಗುದ್ದಲಿ ಮತ್ತು ಕೋವಿಯನ್ನು ನಿಸರ್ಗ ಮತ್ತು ಪ್ರಾಣಿಗಳ ವಿರುದ್ಧ ಪ್ರಯೋಗಿಸಿದ್ದಾನೆ. ಅಂದರೆ ಕಾರಂತರ ಉದ್ದೇಶ ಇಲ್ಲಿ ಸ್ಪಷ್ಟವಾಗಿದೆ. ಆಧುನಿಕ ನೆಲೆಯಲ್ಲಿ ಕಾಡುಗಳು ನಾಶವಾಗುತ್ತಿರುವುದನ್ನು ಮತ್ತು ಮನುಷ್ಯನ ದುರಾಸೆಯನ್ನು ಸ್ವತಃ ಕಾರಂತರು ಕಂಡಿದ್ದಾರೆ. ಇದರ ಪರಿಣಾಮಗಳ ಮುನ್ಸೂಚನೆ ಕೊಡಲು ಈ ಕಾದಂಬರಿಯಲ್ಲಿ ಪ್ರಯತ್ನಿಸಿದ್ದಾರೆ. ಅಲ್ಲದೆ ಮನುಷ್ಯ ನಿಸರ್ಗವನ್ನು ಬಳಸಿಕೊಂಡರು ನಿಸರ್ಗಕ್ಕೆ ಪೂರಕವಾಗಿ ನಡೆಯುವುದರ ಮೂಲಕ ಸಂಬಂಧವನ್ನು ಇಟ್ಟುಕೊಳ್ಳಬೇಕು ಎನ್ನುವ ವಿಚಾರವನ್ನು ಗೋಪಾಲಯ್ಯನ ಪಾತ್ರದ ಮುಖಾಂತರ ಕೊಡುತ್ತಾರೆ. ಕಾದಂಬರಿಯು ಪ್ರಾರಂಭವಾಗುವುದೇ ಕಾಡಿನ ಒಡಲಿಗೆ ಆಧುನಿಕತೆಯ ಪ್ರತಿನಿಧಿಯಾಗಿ ನಿರೂಪಕ ಶಿವರಾಮಯ್ಯ ಪ್ರವೇಶಿಸುತ್ತಾನೆ. ಈತ ದೇರಣ್ಣಗೌಡನ ಸಹಾಯದಿಂದ ಗೋಪಾಲಯ್ಯನ ಮನೆ ಸೇರುವಾಗ ನೀರಿನ ಕೋಡನ್ನು ದಾಟುವಾಗ ದೇರಣ್ಣನು *"ಜಿಮುಕು ಜಿಮುಕು ಕುನಿಯುವ ಆ ಅಡಿಕೆ ಮರದ ಸೇತುವೆಯ ಮೇಲೆ ಜಿನುಗುವುದು ಸಾಮಾನ್ಯವಾಗಿರುತ್ತದೆ. ಆದರೆ ನಗರ ಜೀವನದ ಪ್ರತಿನಿದಿಯಾದ ಶಿವರಾಮಯ್ಯ ತಾನು ಆ ಸೇತುವೆ ಮೇಲೆ ನಡೆದ ಬಗ್ಗೆ ಹೇಳುತ್ತಾ ನಾನು ಜೀವ ಹಿಡಿದು ದಾಟಿ, ತಿರುಗಿ ಮನುಷ್ಯನಾದೆ."*[೨] ನಿಸರ್ಗಕ್ಕೆ ದೂರವಾಗಿ ಬದುಕುತ್ತಿರುವ ಆಧುನಿಕ ಮನುಷ್ಯನು ಅನುಭವಿಸುತ್ತಿರುವ ಏರುಪೇರುಗಳನ್ನು ಈ ಸನ್ನಿವೇಶ ಪ್ರತಿಬಿಂಬಿಸುತ್ತದೆ. ಅಂದರೆ ನಾಗರೀಕನೆನಿಸಿಕೊಂಡಂತೆ ಮಾನವ ದಿನೇ ದಿನೇ ನಿಸರ್ಗದಿಂದ ದೂರವಾಗುತ್ತಿದ್ದಾನೆ. ಇದರಿಂದ ಅವನು ತೆರುತ್ತಿರುವ ಬೆಲೆಯು ಘೋರವಾಗಿದೆ. ಇದನ್ನು ಅರಿತಿರುವ ಕಾರಂತರು ತಮ್ಮ ಕಾದಂಬರಿಗಳಲ್ಲಿ ಪೂರ್ತಿಯಾಗಿ ನಿಸರ್ಗ ಮತ್ತು ಮಾನವ ಸಂಬಂಧಗಳನ್ನು ಹೇಳಿದರೂ ಸಹ, ಆಧುನಿಕತೆಯ ಸೊಗಡು, ಅಂದರೆ ಆಧುನಿಕ ನೆಲೆಗಳನ್ನು ಈ ನಿಸರ್ಗದೊಂದಿಗೆ ತರುತ್ತಾರೆ.

ಆ ಪಾತ್ರಗಳು ಹಾಗೆ ಬಂದು ಹಾಗೆ ಹೋದ ರೀತಿಯಲ್ಲಿ ಕಂಡುಬರುತ್ತವೆ. ಇವುಗಳಿಂದ ನಿಸರ್ಗವು ಒಂದು ಸಲ ದೌರ್ಜನ್ಯದಿಂದಲೇ ಈ ಆಧುನಿಕ ಪ್ರತಿನಿಧಿಗಳು ಲಾಭವನ್ನು ಪಡೆಯುತ್ತಾರೆ. ಅದರ ಲಾಭವು ಆರ್ಥಿಕ, ಸಾಮಾಜಿಕ, ರಾಜಕೀಯ ಉದ್ದೇಶಕ್ಕೆ ಅನ್ವಯಿಸಿರುತ್ತದೆ.

೧. ಜಿ.ಎಸ್.ಶಿವರುದ್ರಪ್ಪ (ಸಂ), ಕಾದಂಬರಿಕಾರರಾಗಿ, ಕಾರಂತ, ಪುಟ-೭೯

೨. ಶಿವರಾಮ ಕಾರಂತ, ಬೆಟ್ಟದ ಜೀವ, ಪುಟ-[illegible].

ಅದೇ ರೀತಿಯಾಗಿ, ಕೆಲವು ಪಾತ್ರಗಳು ನಿಸರ್ಗ ನೆಲೆಯನ್ನೇ ತೊರೆದು ಆಧುನಿಕ ಪ್ರಪಂಚಕ್ಕೆ ಅನಿವಾರ್ಯವೋ ಅಥವಾ ಸ್ವಪ್ರೇರಣೆಯಿಂದ ಮಾನಸಿಕ ಕ್ಲೇಶಗಳಿಗೆ ಒಳಗಾಗಿ ಹೋಗುತ್ತಾರೆ. ಈ ಸಂಗತಿಯನ್ನು ಕಾರಂತರು ಉದ್ದೇಶಪೂರ್ವಕವಾಗಿ ಹೇಳಿಲ್ಲ. ಬದಲಾಗಿ ಇಲ್ಲಿ ವಿವೇಚನೆಯು ಅಡಗಿದೆ ವರ್ತಮಾನದ ನೆಲೆಯಲ್ಲಿ ನಿಂತು ಭವಿಷ್ಯತ್ತನ್ನು ನಿರೀಕ್ಷಿಸಿ ಹೇಳಿರುವುದು ಆಗಿದೆ. ಗೋಪಾಲಯ್ಯನ ಕಾಡು ಜೀವನದ ಎಲ್ಲಾ ರೀತಿಯ ಪರಿಚಯವನ್ನು ಶಿವರಾಮಯ್ಯನಿಗೆ ಮಾಡುತ್ತಾನೆ. ಇವುಗಳಲ್ಲಿ ಕೆಲವು ವಿಷಯಗಳಿಗೆ ಶಿವರಾಮಯ್ಯ ನಗರ ಕೇಂದ್ರೀತವಾದ ಸಲಹೆ ಕೊಡುತ್ತಾನೆ. ಕಾಡಿನಲ್ಲಿ ಹುಲಿ, ತಮ್ಮ ಜಾನುವಾರಗಳ ಮೇಲೆ ದಾಳಿ ಮಾಡುವುದು, ಮನುಷ್ಯರಿಗೆ ಉಪಟಳ ಕೊಡುವುದು, ತಮ್ಮ ಬೆಳೆಗಳ ಮೇಲೆ ಆನೆ, ಕಡವೆಗಳು ದಾಳಿ ಮಾಡಿ ನಾಶಪಡಿಸುವುದು. ಇದರಿಂದ ತುಂಬಾ ತೊಂದರೆ ಎಂದ ಗೋಪಾಲಯ್ಯ ಹೇಳಿದಾಗ, ನಿರೂಪಕನು 'ಅಷ್ಟೆಲ್ಲ ತೊಂದರೆಯಿರುವುದಾದರೆ, ನಿಮ್ಮಂಥವರು ಇಂಥ ಊರನ್ನು ಆರಿಸಿ, ತೋಟ ಗೀಟವೆಂದು ನಂಬಿ ಕುಳಿತಿದ್ದೀರ' ಎನ್ನುತ್ತಾರೆ. ಈ ಮಾತಿನಲ್ಲಿ ನಾಗರೀಕ ಜೀವನದ ಮೌಲ್ಯಗಳು ಕಂಡುಬರುತ್ತವೆ. ಆಧುನಿಕ ಮನಸ್ಸುಳ್ಳ ಶಿವರಾಮಯ್ಯ ನಗರ ಕೇಂದ್ರೀತವಾದ ರೀತಿಯಲ್ಲಿಯೇ ನಿಸರ್ಗವನ್ನು ಕಾಣುತ್ತಾನೆ. ಶಿವರಾಮಯ್ಯ, ಗೋಪಾಲಯ್ಯನೊಂದಿಗೆ ಕಾಡು ತಿರುಗಾಡಲು ಹೊರಟಾಗ, ಅಲ್ಲಿನ ಬೆಟ್ಟಗಳನ್ನು ತೋರಿ ಗೋಪಾಲಯ್ಯ 'ಇದು ಕುಮಾರ ಪರ್ವತ, ಇದು ನಮ್ಮ ಶೇಷಪರ್ವತ' ಎಂದು ಹೇಳುತ್ತಾರೆ. ಆಗ ಶಿವರಾಮಯ್ಯ 'ನಿಮ್ಮ ಊರು ಕೈಲಾಸವಯ್ಯ' ಎನ್ನುತ್ತಾನೆ. '*ಆಗ ಗೋಪಾಲಯ್ಯ ನಿತ್ಯವು ಇವನ್ನೇ ನೋಡುತ್ತಾ ಎಲ್ಲೋ ತಿರುಗಾಡುತ್ತಿರುವ ನಮಗೆ ಇದು ಬರಿಯ ಬೆಟ್ಟ, ಎನೋ, ಪೇಟೆಯಿಂದ ಬರುವ ನಿಮ್ಮಂಥವರು ಅದರ ಚೆಂದವನ್ನು ಬಣ್ಣಿಸಿದರೇನೆ ಚಂದವೆಂದು ನನಗೆ ತಿಳಿಯಬೇಕು*".[೩]

ಪೇಟೆಯವರಿಗೆ ಈ ಪ್ರಕೃತಿ ಕೇವಲ ಸೌಂದರ್ಯ ಆಸ್ವಾದದ ನೆಲೆಯಾದರೆ ಹಳ್ಳಿ ಮಕ್ಕಳಿಗೆ ಅದು ಜೀವನದ ನೆಲೆ. ಈ ನಿಸರ್ಗ ಅವರ ಬದುಕನ್ನು ರೂಪಿಸುವ ಶಕ್ತಿಯಿಂದ ಅವರ ಜೀವನ ಪಾವನವಾಗುತ್ತದೆ. ಹೀಗೆ ಇಲ್ಲಿ ಆಧುನಿಕ ಪ್ರತೀಕವೆನಿಸಿದ ಪಟ್ಟಣವು ನಿಸರ್ಗದ ಭಾಗವಾದ ಕಾಡಿನೊಂದಿಗೆ ಮುಖಾಮುಖಿಯಾಗುವುದನ್ನು ಕಾರಂತರು ಚಿತ್ರಿಸಿದ್ದಾರೆ. ಕ್ರಮವಾಗಿ ಇಲ್ಲಿ ಜೀವನವನ್ನು ಕಂಡುಕೊಂಡಿರುವ ಕುರಿತು ಜಿ.ಎಸ್. ಅಮೂರವರು "*ಕಾದಂಬರಿಯ ಎರಡನೆಯ ಪ್ರಕರಣದಿಂದ ಶಿವರಾಮಯ್ಯ ಗ್ರಾಮ ಜೀವನಕ್ಕೆ ಆಕರ್ಷಿತವಾಗುವ, ಹೊಂದಿಕೊಳ್ಳುವ ಕ್ರಿಯೆ ಆರಂಭವಾಗುತ್ತದೆ. ಈ ಕ್ರಿಯೆಯ ಪರಿಳಿತಗಳೇ ಕಾದಂಬರಿಯ ಸಂವಿಧಾನದ ವಲಯಗಳನ್ನು ನಿರ್ಮಿಸುತ್ತವೆ*"[೪] ಎನ್ನುತ್ತಾರೆ.

ಗೋಪಾಲಯ್ಯ ಮತ್ತು ಶಂಕರಮ್ಮ, ದೇರಣ್ಣಗೌಡ, ನಾರಾಯಣಯ್ಯ ಮುಂತಾದವರು ನಿಸರ್ಗ ಜೀವನದ ಪ್ರತಿನಿಧಿಗಳಾಗಿ ಕಡೆಯವರೆಗೂ ಕಂಡುಬರುತ್ತಾರೆ. ಗೋಪಾಲಯ್ಯನ ಮಗ

---

೩. ಶಿವರಾಮ ಕಾರಂತ, ಬೆಟ್ಟದ ಜೀವ, ಪುಟ -೨೧

೪. ಜಿ.ಎಸ್.ಅಮೂರ, ಕನ್ನಡ ಕಥನ ಸಾಹಿತ್ಯ ಕಾದಂಬರಿ, ಪುಟ - [illegible]

ಶಂಭು ನಿಸರ್ಗವನ್ನು ಬಿಟ್ಟು ಪರಾರಿಯಾದ ಬಗ್ಗೆ ಹೇಳುತ್ತಾರೆ ಇದು ಗೋಪಾಲಯ್ಯ ಮತ್ತು ಮಗನ ಗುಣಗಳಲ್ಲಿ ಅಜಗಜಾಂತರ ವ್ಯತ್ಯಾಸವಿರುವುದನ್ನು ತೋರಿಸುತ್ತದೆ.

ಶಂಭು ಇಂಗ್ಲಿಷ್ ಶಿಕ್ಷಣ ಪಡೆಯಲು ಪುತ್ತೂರಿಗೆ ಹೋದ ಅಲ್ಲಿಂದ ಬಿ.ಎ. ಮುಗಿಸಿ ಎಲ್.ಎಲ್.ಬಿ, ಮುಗಿಸಲು ಮುಂಬಯಿಗೆ ಹೋದವನು ಬರಲೆ ಇಲ್ಲ ಎಂದ ಗೋಪಾಲಯ್ಯ *"ಯಾವುದೋ ಹೆಣ್ಣು ಹುಲಿ ಹಿಡಿಯಿತು"*[೫] ಎನ್ನುವ ಮಾತುಗಳಲ್ಲಿ ಆ ದಂಪತಿಗಳ ದುಃಖ ಎಂತಹುದು ಎಂದು ತಿಳಿಯುತ್ತದೆ. ಹೀಗೆ ಇಂಗ್ಲಿಷ್ ಶಿಕ್ಷಣದ ಪರಿಣಾಮವಾಗಿ ಆದುನಿಕ ಪ್ರಪಂಚದ ಎಲ್ಲಾ ಯುವಕರಂತೆ ನಿಸರ್ಗದಿಂದ ದೂರವೆ ಉಳಿಯುತ್ತಾನೆ. ಆದರೆ ಗೋಪಾಲಯ್ಯ ದಂಪತಿಗಳು ತಮ್ಮ ಕಡೆಯ ಕಾಲಕ್ಕೆ ತಾನು ತಂದು ಕಾಟುಮೂಲೆಯಲ್ಲಿ ಇರಿಸಿದ ಮಣಿ ನಾರಾಯಣಯ್ಯ ನಮ್ಮನ್ನು ಸಾಕಲು ದತ್ತು ಪಡೆಯೋಣವೆಂದು ಹೇಳಿ ತಮ್ಮ ದುಃಖವನ್ನು ಮರೆಯಲು ಪ್ರಯತ್ನಿಸುತ್ತಾರೆ. ಇದರೊಂದಿಗೆ ಆಧುನಿಕ ಪ್ರತಿನಿದಿಯೆನಿಸಿದ ಶಿವರಾಮಯ್ಯ ಅವರ ದುಃಖದಲ್ಲಿ ಪಾಲ್ಗೊಳ್ಳುತ್ತಾನೆ.

'ಬೆಟ್ಟದ ಜೀವ' ಕಾದಂಬರಿಯ ಶಂಭು ಮತ್ತು 'ಮರಳಿ ಮಣ್ಣಿಗೆಯ' ಲಚ್ಚರು ಸಮಕಾಲೀನರು. ಇವರ ಕಾಲ ಇಂಗ್ಲೀಷ್ ಶಿಕ್ಷಣವನ್ನು ತಮ್ಮ ಮಕ್ಕಳಿಗೆ ಕೊಡಿಸಬೇಕು ಎಂದು ಉತ್ಕಟ ಆಸೆಯನ್ನು ಹೊಂದಿರುವುದು ವಸಾಹತುಶಾಹಿಯ ಪ್ರಭಾವದಿಂದ ತಿಳಿಯುತ್ತದೆ. ಆದ್ದರಿಂದ ಈ ಶಿಕ್ಷಣ ಪಡೆದ ಲಚ್ಚ ಮತ್ತು ಶಂಭು ಹೊಸ ವಿದ್ಯಮಾನಗಳಿಗೆ ತಮ್ಮನ್ನು ತೆರೆದುಕೊಂಡು ಅವಕ್ಕೆ ದಾಸರಾಗುತ್ತಾರೆ. ಅದರಲ್ಲಿ ಮುಖ್ಯವಾಗಿ ಲೈಂಗಿಕತೆಯ ತೀವ್ರ ಆಪೇಕ್ಷೆ ಕಾಣುತ್ತದೆ.

ಗೋಪಾಲಯ್ಯ ತಮ್ಮ ಮಗನಿಗೆ ಇಂಗ್ಲಿಷ್ ಶಿಕ್ಷಣ ಕೊಡಿಸಲು ಕಾರಣ ಕೊಡುತ್ತಾರೆ, "ನಮ್ಮ *ಕಾಲಕ್ಕೆ ಆಸ್ತಿ, ಜಮೀನುಗಳಿಗೆ ಮರ್ಯಾದೆಯಿದ್ದಿತ್ತು; ಮಾಡಿದೆವು. ಈಗ ಇಂಗ್ಲಿಷಿಗೆ ಹೆಚ್ಚಿನ ಮರ್ಯಾದೆ, ಅದನ್ನು ಕಲಿಸಿದೆವು. ನಿಜ–ಒಬ್ಬನೇ ಮಗನಿದ್ದಾಗ, ನನ್ನಂತೆ ಅವನು ಬೇಸಾಯಗಾರನಾಗಲಿ, ಇಂಗ್ಲಿಷಿಗೆ ಕಳುಹಿಸಬಾರದಿತ್ತು ಎಂದು ಕಾಣುತ್ತದೆ. ಆದರೆ ಒಮ್ಮೊಮ್ಮೆ, ಅವನಜ್ಜ ಮನೆಯಲ್ಲಿ ಇರಿಸಿಕೊಂಡಿದ್ದಾರೆ, ಇದ್ದುದನ್ನೆಲ್ಲ ಮಾರಾಟಮಾಡಿ ಸೇರುವುದಿಲ್ಲ ವೆಂಬುದು ಏನು ನಿಶ್ಚಯ? ಎಷ್ಟೋ ಜನ ಆಸ್ತಿ ವಂತರು, ಪೇಟೆಯಲ್ಲಿ ಕುಳಿತು ಉಣ್ಣುವವರಿದ್ದಾರೆ ಆದರಿಂದ ಏನು ಮಾಡಿದ ಹಾಗಾಯಿತು"*[೬] ಈ ಮಹತ್ವವನ್ನು ಅರಿತಿದ್ದ, ಅವರು ತಮ್ಮ ಮಗ ದೊಡ್ಡವನಾದರೆ ಹೇಗೂ ಈ ನಿಸರ್ಗದ ಮಡಿಲಲ್ಲಿ ಇರುವುದಿಲ್ಲ ಎನ್ನುವ ಪ್ರಜ್ಞೆ ಅವರಲ್ಲಿ ಮೂಡಿತ್ತು. ಆದ ಕಾರಣ ಇಂಗ್ಲಿಷ್ ಶಿಕ್ಷಣ ಕೊಡಿಸಿದರು. ಅದರಂತೆ ಶಂಭು ಆಧುನಿಕತೆಗೆ ಮಾರು ಹೋಗಿ ನಿಸರ್ಗದಿಂದ ದೂರ ಉಳಿಯುತ್ತಾನೆ.

ಕಾಡನ್ನು ಸುತ್ತಿ ಕಾಫಿಯನ್ನು ಕುಡಿಯಲು ಗೋಪಾಲಯ್ಯನ ಮನೆಗೆ ಬಂದಾಗ ತನ್ನ ಅನುಭವಗಳನ್ನು ಬಣ್ಣಿಸುವ ಆಧುನಿಕತೆಯ ಮನುಷ್ಯ ಕಂಡುಬರುತ್ತಾನೆ. 'ಒಮ್ಮೊಮ್ಮೆ ನಿಮ್ಮ

---

೫. ಶಿವರಾಮ ಕಾರಂತ, ಬೆಟ್ಟದ ಜೀವ, ಪುಟ – ೭೫

೬. ಅದೇ, ಪುಟ – ೮೨–೮೩

ಬಯಲಿನ ಹಸುರು, ಬೆಟ್ಟದ ನೀಲ, ಬಾನಿನ ಬೆಡಗುಗಳನ್ನೆಲ್ಲ ನೋಡಿ ಇಲ್ಲಿಯೇ ಇರುವ ಎನಿಸುತ್ತದೆ. ಆದರೆ ನಾಲ್ಕು ದಿನ ಹೆಚ್ಚಾಗಿ ನಿಂತರೆ ಬಟ್ಟನ ಹೊಟ್ಟೆಯಂತೆ ನಾನು ಪ್ರಸವ ಪ್ರಾಪ್ತಿ ಪಡೆದೇನೋ ಎನಿಸುತ್ತದೆ' ಭಟ್ಟರೇ, ಈ ದೆವ್ವನ ಹಾಗಿರುವ ಮರಗಳು, ಅವುಗಳನ್ನು ನುಂಗುವಂತೆ ಕಾಣುವ ಈ ಬೆಟ್ಟಗಳು-ಇವನ್ನೆಲ್ಲ ನೋಡಿದರೆ ಮನುಷ್ಯ ಎಷ್ಟು ಸಣ್ಣ ಪ್ರಾಣಿಯಾಗಿ ಕಾಣುತ್ತಾನೆ!?

ಬೆಟ್ಟದ ಮೇಲೆ ಓಡಾಡುವ ಆನೆ ಸಹ ಇರುವೆಯೇ ಅಲ್ಲವೇ! ನನಗೆ?.....ಭಟ್ಟರು ನಗುತ್ತಾ *"ಏನು! ಅಲ ಇರುವೆ ಸಣ್ಣ ಪ್ರಾಣಿಯೇನು! ತನ್ನ ಗಾತ್ರದ ಹತ್ತರಷ್ಟು ಹೊರೆಯನ್ನು ಅದು ಹೊರಲಾರದೇ? ಆಳು ಚಿಕ್ಕದಾದರೇನು? ಮೂರ್ತಿ ಸಣ್ಣದಾದರೂ ಕೀರ್ತಿ ದೊಡ್ಡದು ಎಂಬ ಹಾಗಿದೆ ಇರುವೆ. ನೀವು ಹಿಮಾಲಯ ಎಂದಿರಿ ನಾನು ಅದರ ಹೆಸರನ್ನ ಮಾತ್ರ ಕೇಳಿದವನು, ಕಣ್ಣಿಂದ ಕಾಣಲು ಇಲ್ಲ, ಈಗ, ನನ್ನ ತಲೆಯೇ ಹಿಮವಾದ ಮೇಲೆ ಅದನ್ನು ಕಾಣುವ ಹಾಗೂ ಇಲ್ಲ."*[೭]

ಆಧುನಿಕ ವ್ಯಕ್ತಿಯಾದ ಶಿವರಾಮಯ್ಯನಿಗೆ ಕಾಡು, ಬೆಟ್ಟ ಇವು ಅವನನ್ನು ಭಯ ಹುಟ್ಟಿಸುವ ಸಂಗತಿಗಳಾಗಿ ಕಂಡು ಅವನಿಗೆ ಆಶ್ಚರ್ಯವನ್ನುಂಟು ಮಾಡುತ್ತವೆ. ಆದರೆ ನಿಸರ್ಗ ವ್ಯಕ್ತಿಯಾದ ಗೋಪಾಲಯ್ಯನ ವ್ಯಕ್ತಿತ್ವವು ನಿಸರ್ಗವನ್ನು ಎದುರಿಸಿ ಬದುಕನ್ನು ನಡೆಸುತ್ತಿರುವಲ್ಲಿ ಅವರ ಸಾಹಸವು ಕಂಡು ಬರುತ್ತದೆ. ಕಾರಂತರು 'ಬೆಟ್ಟದ ಜೀವ' ಕಾದಂಬರಿಯಲ್ಲಿ ಆಧುನಿಕ ಪ್ರತಿನಿಧಿಯಾದ ಶಿವರಾಮಯ್ಯನ ಮುಖಾಂತರ ನಿಸರ್ಗದಲ್ಲಿ ಆಧುನಿಕ ಮನಸ್ಸು ಅದರೊಂದಿಗೆ ಹೊಂದಿಕೊಳ್ಳುವ ಮತ್ತು ಫಲಾಯನವಾದದ ಎರಡು ಗುಣಗಳನ್ನು ಗುರ್ತಿಸುತ್ತಾರೆ. ಅಲ್ಲದೆ ಶಿವರಾಮಯ್ಯ ಗೋಪಾಲಯ್ಯನಿಂದ ಅನೇಕ ಅನುಭವಗಳನ್ನು ಪಡೆಯುವಂತೆ ಕಾರಂತರು ಸನ್ನಿವೇಶಗಳನ್ನು ಸೃಷ್ಟಿಸಿದ್ದು, ಗೋಪಾಲಯ್ಯನ ಮುಖಾಂತರ ಕಾಡು ಜೀವನದ ಹೊಂದಾಣಿಕೆಯ ಕಷ್ಟ-ಸುಖಗಳನ್ನು ಒಂದೆಡೆ ಕಟ್ಟಿಕೊಡುತ್ತಾರೆ. ಈ ಕುರಿತು ಸುಬ್ರಾಯ ಚೊಕ್ಕಾಡಿಯ –*"ಕಾರಂತರು ಮಾತ್ರ ಗ್ರಾಮೀಣ ಬದುಕಿನ ಮೌಲ್ಯಗಳನ್ನು ಒಪ್ಪಿಕೊಂಡೂ ಭಾವತಿರೇಕದ ಜ್ವರಕ್ಕೆ ಪಕ್ಕಾಗದೆ, ತಕ್ಕ ಸಂಯಮವನ್ನು ಕಾಯ್ದುಕೊಂಡ ರೀತಿ ಅಪೂರ್ವವಾದುದು ಮತ್ತು ಇದರಿಂದಲೇ ಕಾದಂಬರಿಗೆ ಇನ್ನೊಂದು ಆಯಾಮವೂ ದೊರಕಿದೆ. ಇದು ಕಾದಂಬರಿಯ ತಂತ್ರದ ಒಂದು ಬಗೆಯೂ ಹೌದು. ಸಾರ್ಥಕ ಬಾಳಿನ ಅನ್ವೇಷಣೆಯ ಒಂದು ರೀತಿಯೂ ಹೌದು. ಅದೆಂದರೆ ಗ್ರಾಮೀಣ ಹಾಗೂ ನಾಗರೀಕ ಮನಸ್ಸುಗಳ ಮುಖಾಮುಖಿ. ಇದು ಒಂದು ಸುಂದರ ಭಾವಗೀತೆಯ ಹಾಗೆ ಇದೆ".*[೮]

ಈ ಹಿನ್ನೆಲೆಯಲ್ಲಿ ನೋಡಿದಾಗ ಕಾರಂತರು ಆಧುನಿಕ ಪ್ರಕ್ರಿಯೆಯನ್ನು 'ಬೆಟ್ಟದ ಜೀವ' ಕಾದಂಬರಿಯಲ್ಲಿ ನಿರೂಪಕ ಶಿವರಾಮಯ್ಯ, ಗೋಪಾಲಯ್ಯ, ಶಂಕರಮ್ಮ ದಂಪತಿಗಳ ಮಗ ಶಂಭುವಿನ ಪಾತ್ರಗಳ ಮುಖಾಂತರ ಹೇಳುತ್ತಾರೆ. ನಿಸರ್ಗಕ್ಕೆ ಆಧುನಿಕ ಪ್ರತಿನಿಧಿಯಾದ ಶಿವರಾಮಯ್ಯ ನಿಸರ್ಗವನ್ನು ಕಂಡು ಆಸ್ವಾದನೆ ಮತ್ತು ಆಶ್ಚರ್ಯವನ್ನು ವ್ಯಕ್ತಪಡಿಸಿದರೆ, ಶಂಭೂ

---

೭. ಅದೇ, ಪುಟ – ೯೪–೯೫

೮. ಟಿ.ಪಿ. ಅಶೋಕ (ಸಂ), ಈ ಶತಮಾನದ ನೋಟ ಶಿವರಾಮ ಕಾರಂತ, ಪುಟ–೧೪೨–೧೪೩

ನಿಸರ್ಗದಲ್ಲಿ ಹುಟ್ಟಿ ನಿಸರ್ಗದ ಬಗ್ಗೆ ಜಿಗುಪ್ಸೆ ತಾಳಿ, ಇದರಿಂದ ಫಲಾಯನ ಮಾಡಿರುವ ಸಂಗತಿ ಅವನು ಆಧುನಿಕ ನಾಗರಿಕತೆಗೆ ಅತಿ ಬೇಗನೆ ಮಾರು ಹೋಗಿರುವ ಸಂಗತಿಯಾಗಿರುವುದನ್ನು ಕಾರಂತರು ಈ ಇರಡು ಪಾತ್ರಗಳಲ್ಲಿ ಗುರ್ತಿಸುತ್ತಾರೆ.

'ಕುಡಿಯರ ಕೂಸು' ಕಾದಂಬರಿಯಲ್ಲಿ ಆದಿವಾಸಿಗಳೆನಿಸಿದ ಕುಡಿಯರ ಸಾಂಸ್ಕೃತಿಕ ನೆಲೆಗಳನ್ನು ಹೇಳಲಾಗಿದೆ. ಕಾರಂತರು ಈ ಕಾದಂಬರಿಯನ್ನು ಕುರಿತು ಮುನ್ನುಡಿಯಲ್ಲಿ 'ಬೆಟ್ಟದ ಜೀವ' ಬರೆದಾಗಲೇ ಘಟ್ಟದ ಪ್ರದೇಶಗಳಲ್ಲಿ ವಾಸಿಸುವ ಮಕ್ಕಳಾದ ಮಲೆ ಕುಡಿಯರನ್ನು ಕುರಿತು ಬರೆಯಲು ಹವಣಿಸಿದ್ದೆ. ಆದರೆ ಈ ಆಸೆಯು ಪಕ್ವವಾಗಲು ಇಷ್ಟು ಸಮಯ ಹಿಡಿಯಿತು. ಅದು ಪಕ್ವವಾಗಿದೆ ಎನ್ನುವ ಸಾಹಸವೂ ನನಗಿಲ್ಲ. ಅವರ ಜೀವನದಲ್ಲಿ ನೆಟ್ಟ ಕಟ್ಟಳೆ, ನಂಬಿಕೆ, ಆಚರಣೆಗಳು ಹೀಗಿವೆ ಎಂದು ತಿಳಿಯಲು ಇನ್ನಷ್ಟು ಸೂಕ್ಷ್ಮವಾದ ಪರಿಚಯಬೇಕೆಂಬುದನ್ನು ಬಲ್ಲೆ. ಇಲ್ಲಿ ಕಾಣಬಹುದಾದ ಸ್ಥೂಲ ಚಿತ್ರ, ಅವರಿಗೂ ನಿಸರ್ಗಕ್ಕೂ ಇರುವ ಸಂಬಂಧವನ್ನೂ, ಅವರ ಜೀವನದಲ್ಲಿ ಮಾರ್ಪಾಡುಗುತ್ತಿರುವ ಆರ್ಥಿಕ ಬದಲಾವಣೆಗಳನ್ನು ತೋರಿಸುತ್ತದೆ ಎಂದಿದ್ದಾರೆ. ಹೀಗೆ ಕಾರಂತರು ಕುಡಿಯರ ಸಂಸ್ಕೃತಿಯ ನಂಬಿಕೆಗಳನ್ನು ಮತ್ತು ಆ ನಂಬಿಕೆಗಳ ನೆಲೆಯಲ್ಲಿ ನಿಸರ್ಗದ ಗಾಢ ಸಂಬಂಧಗಳನ್ನು ಶೋಧಿಸಿದ್ದಾರೆ. ಈ ಶೋಧನೆಯ ಮುಖಾಂತರ ಕುಡಿಯರ ಜೀವನ ವಿಧಾನಗಳನ್ನು ಕಟ್ಟಿಕೊಡುತ್ತಾರೆ. ಈ ಜೀವನದ ವಿಧಾನದಲ್ಲಿ ಅವರ ಸಾಮಾಜಿಕ, ಆರ್ಥಿಕ, ರಾಜಕೀಯ ನೆಲೆಗಳು ಒಳಗೊಂಡಿವೆ. ಈ ನಲೆಗಳಲ್ಲಿ ಅವರ ಸ್ವಾಯತ್ತ ಅಧಿಕಾರವಿದೆ. ಈ ಸ್ವಾಯತ್ತ ಅಧಿಕಾರದಲ್ಲಿ ಕಾಡನ್ನು ನೆಲೆಯಾಗಿಸಿಕೊಂಡು ಅದರಿಂದ ಬದುಕುವ ಕಲೆಯನ್ನು ರೂಢಿಗತ ಮಾಡಿಕೊಂಡಿದ್ದಾರೆ. ಇಂತ ಜೀವನವನ್ನು ರೂಪಿಸಿಕೊಂಡಿರುವ ಕುಡಿಯರ ನೆಲಯಾದ ಕಾಡಿನ ನೆಲೆಯ ಮೇಲೆ ಶ್ರೀಮಂತರ ದಾಳಿ ನಡೆದು ಅದನ್ನು ತನ್ನ ವಸಾಹತು ನೆಲೆಯ ದೃಷ್ಟಿಕೋನದಲ್ಲಿ ಬದಲಾವಣೆಗೆ ಒಳಪಡಿಸುವ ಮುಖಾಂತರ, ತಮ್ಮ ಸ್ವಂತ ಲಾಭಕ್ಕಾಗಿ ಬಳಸಿಕೊಳ್ಳುವ ಹುನ್ನಾರಗಳು ಮತ್ತು ಇದರಿಂದ ನಿಸರ್ಗವು ನಲಗಿ ಹೋಗುತ್ತಿರುವ ಹಾಗೂ ಕುಡಿಯರ ಜೀವನ ವಿಧಾನಗಳಲ್ಲಿ ಬದಲಾವಣೆಗೆ ಒಳಪಟ್ಟು ಬದುಕು ಸಾಗಿಸುವ ನೆಲೆಗಳನ್ನು ಕಾರಂತರು ಗುರುತಿಸುತ್ತಾರೆ.

ಈ ಕುರಿತು ಕಾರಂತರು ತಮ್ಮ ಮುನ್ನುಡಿಯಲ್ಲಿ (ಐದನೆಯ ಮುದ್ರಣಕ್ಕೆ) 'ಈಗಾಗಲೇ ಇಲ್ಲಿ ಚಿತ್ರಿತವಾದ ಮಲೆಕುಡಿಯರ ಬದುಕು ಬದಲಾಗುತ್ತ ಬಂದು, ಅವರಲ್ಲಿ ಹೆಚ್ಚನವರು ನಾಗರಿಕರೊಬ್ಬರ ತೋಟದ ಕೂಲಿಕಾರರೆನಿಸಿದ್ದಾರೆ. ಅನೇಕರು ಘಟ್ಟದ ಕೆಳಗೆ ಬಂದು ನೆಲೆಸಿ ಕೃಷಿಕರೂ ಆಗಿದ್ದಾರೆ. ಕಥಾವಸ್ತು ನಾಲ್ಕೈದು ದಶಕಗಳ ಅವಧಿಯಲ್ಲಿ ಇತಿಹಾಸದ ಅಂಶವಾಗುತ್ತಲಿದೆ' ಎನ್ನುತ್ತಾರೆ. ಅಂದರೆ ಕಾರಂತರು ಹೇಳಿರುವ ಈ ಮಾತುಗಳಲ್ಲಿ, ಕಾಡಿನ

ಮಕ್ಕಳ ಮೇಲೆ ಶೀಘ್ರವಾಗಿ ಬೀರುತ್ತಿರುವ ಆಧುನಿಕ ಪ್ರಭಾವವನ್ನು ಅವರು ತಾವು ಬರೆಯುವ ಕಾಲಕ್ಕೆ ಕಂಡುಕೊಂಡಿದ್ದಾರೆ. ಇಂತಹ ಸನ್ನಿವೇಶಗಳನ್ನು ನಿಸರ್ಗ-ಮಾನವ ಸಂಬಂಧಗಳಲ್ಲಿ ಕಾರಂತರು ತರುತ್ತಾರೆ. ಈ ನೆಲೆಗಳನ್ನು ಇಂದು ಗುರ್ತಿಸುವುದು ತುಂಬಾ ಅವಶ್ಯಕವಾಗಿದೆ. ಏಕೆಂದರೆ ಸಮಕಾಲೀನ ಸಮಾಜದ ನಿಸರ್ಗ ಧೋರಣೆಗಳಿಗೆ ಅರಿವು ಮೂಡಿಸುವ ಜರೂರಿತನ ಇಂದು ತುಂಬಾ ಅವಶ್ಯಕವಿದೆ.

ಈ ಕಾದಂಬರಿಯು ಪ್ರಾರಂಭವಾಗುವುದೇ ಬದಲಾವಣೆಯ ಸೂಚನೆಗಳೊಂದಿಗೆ ಎಂಬುದು ಪ್ರಮುಖವಾದುದು. ಇದು ಹಳೆಯ ತಲೆಮಾರಿನವನಾದ ಕುಡಿಯರ ಗುರಿಕಾರನಿಗೆ ಅರ್ಥವಾಗಿರುವುದನ್ನು ಕಾರಂತರು ಹೇಳುತ್ತಾರೆ: "*ಇಂದಿನ ದಿನಕ್ಕೂ ಆ ದಿನಕ್ಕೂ ಆವರಣದಲ್ಲಿ ಕುಡಿಯರು ಬಾಳಿ ಬದುಕಿದ ರೀತಿಯಲ್ಲಿ ಬಹುಮಟ್ಟಿನ ವ್ಯತ್ಯಾಸವನ್ನು ನಾವು ಕಾಣಲಾರೆವಾದರು ಕುಡಿಯರ ಕೆಂಚ ಅವನ್ನೆಲ್ಲ ಕಾಣಬಲ್ಲ. ಅವನಿಗೀಗ ಅರವತ್ತು ವಯಸ್ಸಿರಬಹುದು. ಆ ಅರವತ್ತು ವಯಸ್ಸಿನ ಬಾಳ್ವೆಯಲ್ಲಿ ಅವನ ಮತ್ತು ಅವನ ಬಳಗದ ಅರಣ್ಯ ಜೀವನದಲ್ಲಿ ಎಷ್ಟೋ ಪರಿವರ್ತನೆಗಳಾಗಿವೆ ಎಂದು ತಿಳಿದುಕೊಂಡಿದ್ದಾನೆ. ಆತನ, ಕಾಲದ ಎಣಿಕೆ, ಸಂವತ್ಸರಗಳ ಎಣಿಕೆ, ಹೊತ್ತು ಗೊತ್ತುಗಳ ನಿಶ್ಚಿತ ಲೆಕ್ಕ ಕೆಂಚನಿಗಿಲ್ಲ. ಅವನ ಜನಕ್ಕೂ ಆ ಲೆಕ್ಕ ಇರುವುದು ಅಷ್ಟಕಷ್ಟೆ ಆದರೂ ವರ್ಷಗಳು ಸರಿದುದರ ಅನುಭವವಾಗುವುದಿಲ್ಲವೇ? ತಾವು ನೆಲೆಸಿದ ಮನೆ ಮಾಡುಗಳಲ್ಲಾದ ಬದಲಾವಣೆ, ಇತರ ಜೀವನ ಪ್ರವಾಹಗಳಿಂದ ಉಂಟಾದ ವರ್ಚಸ್ಸು ಇವೆಲ್ಲ ಗೊತ್ತಾಗಲೇಬೇಕಷ್ಟೆ ಅದೆಷ್ಟೋ ಬಾರಿ ತನ್ನ ಜೀವನದಲ್ಲಾದ ವ್ಯತ್ಯಾಸಗಳನ್ನು ನೋಡಿ, ಅಳೆದು, ನೆನೆದವ ಕೆಂಚ, ಹಿಂದೆಯೂ ನೆನೆದವನೇ ಆದರೆ ಆಗ ನೆನೆದುದಕ್ಕೂ ಈಗ ನೆನೆಯುತ್ತಿರುವುದಕ್ಕೂ ತುಂಬಾ ವ್ಯತ್ಯಾಸವಿದೆ.*"[೯] ಏಕೆಂದರೆ ಕೆಂಚ ಪರಂಪರಾಗತವಾಗಿ ರೂಢಿಸಿಕೊಂಡಿರುವ ಕುಡಿಯರ ದೈವನಾದ ಕಲ್ಕುಡನಿಗೆ ಮತ್ತು ಮಲೆರಾಯನಿಗೆ ನಡೆಸಿಕೊಡುತ್ತಿದ್ದ ಕೋಲ ಮತ್ತು ಪೂಜೆಯು ನಡೆಯುತ್ತಿರಲಿಲ್ಲ. ಇದಕ್ಕೆ ಕಾರಣ 'ಮಲೆ ಕುಡಿಯರ' ಜನಾಂಗದ ಯುವಕರು ಈಗ ಧನಿಗಳ ಏಲಕ್ಕಿ ತೋಟಗಳಲ್ಲಿ ಕೆಲಸ ಮಾಡುತ್ತಾ ಧನಿಯರು ಕೊಡುವ ಆಧುನಿಕ ವಸ್ತುಗಳನ್ನು ಪಡೆದು ತಮ್ಮ ಸಾಂಸ್ಕೃತಿಕ ಪರಂಪರೆಯನ್ನು ಮರೆಯುತ್ತಿದ್ದಾರೆ. ಇದನ್ನು ನೋಡಿ ಕೆಂಚನಿಗೆ ಕಳವಳವಾಗಿದೆ. ಈ ನೆಲೆಗಳನ್ನು ಕಾರಂತರು ನಿಸರ್ಗದ ನೆಲೆಯಲ್ಲಿ ಗುರುತಿಸುತ್ತಾರೆ.

ಕುಡಿಯರು ಸಹಜವಾಗಿ ನಿಸರ್ಗದಲ್ಲಿ ಬದುಕುತ್ತಿದ್ದ ಅವರ ಸಂಸ್ಕೃತಿಗೆ ವಸಾಹತುಶಾಹಿಯ ಧೋರಣೆಯುಳ್ಳ ತಿರುಮಲಭಟ್ಟರ ಪ್ರವೇಶವಾಗುತ್ತದೆ. ಸಹಜ ನಿಸರ್ಗವನ್ನು ಇವನು ತನ್ನ ವಸಾಹುತವನ್ನಾಗಿ ಮಾಡಿಕೊಂಡು ಅದನ್ನು ಒಳಪಡಿಸುತ್ತಾನೆ. 'ಅರಣ್ಯದಲ್ಲಿ ಎಲ್ಲಿ ಕಂಡರಲ್ಲಿ ತನ್ನಷ್ಟಕ್ಕೆ ಹುಟ್ಟಿ ಬೆಳೆಯುತ್ತಿದ್ದ ಏಲಕ್ಕಿಯನ್ನು ಹೆಕ್ಕಿ, ಅವರಾದರೂ ನಿತ್ಯ ತಿನ್ನುವ ಅನ್ನವಲ್ಲ. ಬದಲು ಬೀಡಿಸಿಂದ, ಅವರಿಗೆ ಪ್ರತಿ ಮನ್ನಣೆಯೂ ಸಲ್ಲುತ್ತದೆ. ಪ್ರತಿಯೊಬ್ಬ ಕುಡಿಯರಿಗೂ ಒಂದೊಂದು ಬಿಳಿಯ ಹಚ್ಚಡದ, ಅಪೂರ್ವಕ್ಕೆ ಒಂದೊಂದು ಕಂಬಳಿಯ ಉಡುಗೊರೆ ದೊರೆಯುತ್ತಿತ್ತು. ಜತೆಗೆ

೯. ಶಿವರಾಮ ಕಾರಂತ, ಕುಡಿಯರ ಕೂಸು, ಪುಟ-೨೬

ಅವರಿಗೆ ಬೇಕಾಗುವಂಥ ನಾಲ್ಕು ಚೀಲ ಉಪ್ಪನ್ನೂ ತರಿಸಿ ಕೊಡುತ್ತಿದ್ದರು. ಆ ಮೂಲೆಯಲ್ಲಿದ್ದ ಅವರಿಗೆ ಉಪ್ಪು ಬಟ್ಟೆಗಳೆರಡೇ ಅನ್ಯರಿಂದ ಬೇಕಾದ ಪದಾರ್ಥಗಳು. ಹಾಗೆಯೇ ಧನಿಯರ ಮನೆಗೆ ಬಂದ ಅವರು, ಅಲ್ಲೇ ಸಮೀಪದ ಈಶ್ವರ ದೇವಾಲಯದ ಜಾತ್ರೆಯೊಂದಕ್ಕೂ ಹೋಗುತ್ತಾರೆ. ಈ ಹಬ್ಬದ ತೇರು, ಮೆರವಣಿಗೆಗಳ ಚೆಲುವನ್ನೂ ಅನುಭವಿಸುವುದು ವಾಡಿಕೆಯಾಗಿತ್ತು. ಕಾಲಗತಿ ಬದಲಿಸಿದಂತೆ, ಹಬ್ಬಕ್ಕೆ ಬರುತ್ತಿದ್ದ ಮಣಿ ಸರಕಿನ ಮೇಲೂ ಹಸರದ ಇನ್ನಿತರ ಒಡವೆಗಳ ಮೇಲೂ ಅವರಿಗೆ ಮೋಹ ಬೆಳೆಯಿತು. ಮಲೆಯಿಂದ ಬರುವಾಗ ಜೇನು, ಸೀಗೆ ಮೊದಲಾದವನ್ನು ಹೊತ್ತು ತಂದು ಜಾತ್ರೆಯಲ್ಲಿ ವಿಕ್ರಯಿಸುತ್ತಾರೆ. ದೊರೆತ ಹಣದ ಬೆಲೆ ಅರಿಯದ ಅವರು ಅದಕ್ಕೆ ಪ್ರತಿಯಾಗಿ ಮಣಿ ಸರಕಿನಲ್ಲಿ ದೊರೆಯುತ್ತಿದ್ದ ಕನ್ನಡಿ, ಗಾಜು, ಕರಿಮಣಿ, ಕಬ್ಬಿಣದ ಬಳೆ ಸೂಜಿ ಮೊದಲಾದ ಅರ್ವಾಚೀನ ಯುಗದ ವಸ್ತುಗಳನ್ನು ಕೊಂಡು ಮಲೆಗೆ ಮರಳುತ್ತಾರೆ. ಜಾತ್ರೆಗೆ ವಿಲಾಯಿತಿಯ ಚೂರಿ ಬರತೊಡಗಿತು. ಬಟ್ಟೆಯನ್ನು ತೆಳ್ಳಗೆ ಮಡುವ ಸಬಕಾರ ಬರತೊಡಗಿತು. ಉರಿಸುವ ಬೆಂಕಿ ಪೆಟ್ಟಿಗೆಯೂ ಬರತೊಡಗಿತು. ಹೀಗೆ ಕುಡಿಯರು ನಾಲ್ಕೆಂಟು ವಿಚಿತ್ರ ಸಾಮಾನುಗಳು ಪರಿಚಯ ಮಾಡಿಕೊಂಡು. ಅವರ ಜೀವನದಲ್ಲಿ ಆಧುನಿಕ ನಾಗರಿಕತೆಯ ಹೆಚ್ಚಿನ ಪ್ರಭಾವ ಉಂಟಾಗಲಿಲ್ಲ"

"ಅವರ ಬದುಕಿಗೆ ಬೇಕಾದ ಪ್ರತಿಯೊಂದನ್ನು ಅವರು ಸ್ವಂತ ದುಡಿಮೆಯಿಂದ, ಬೇಟೆಯಿಂದ, ಬೇಸಾಯದಿಂದ ಅವರೇ ದೊರಕಿಸಿಕೊಳ್ಳುತ್ತಿದ್ದಾಗ ಹೆಚ್ಚಿನ ಹಂಗು ಯಾರದ್ದು ಇಲ್ಲ. ಬೀಡಿನ ಒಡೆಯರು, ಮಲೆ ತಮ್ಮದ್ದು ಎಂದುಕೊಳ್ಳುತ್ತಿದ್ದರು. ಮಲೆಗೆ ಹೋಗಿ ನಾಲ್ಕು ದಿನ ನಿಂತು ಎಷ್ಟು ಏಲಕ್ಕಿಯಾಗುತ್ತದೆ. ಏನು ಬೆಳೆಯಬಹುದು ಎಂದು ತಿಳಿದು ಬಿಡುವ ವಾಡಿಕೆಯೂ ಇದ್ದಿಲ್ಲ. ಹಿಂದೆ ಹಿರಿಯ ಬಲ್ಲಾಳರು ಮಲೆಗೆ ಹೋಗಿ ಕುಡಿಯರ ಸಹಾಯದಿಂದ ಕರ್ಪುತೆಗೆದು ಆನೆ ಬೀಳಿಸಿ, ಪಳಗಿಸಿ ತಂದು ತಮ್ಮ ಅರಮನೆಯ ಮುಂದೆ ಕಟ್ಟಿದ್ದುಂಟಂತೆ, ಅದೀಗ ಕತೆಯ ಮಾತಾಗಿದೆ."[೨೦]

ಕಾರಂತರು ಕುಡಿಯರ ನಿಸರ್ಗದಲ್ಲಿದ್ದುಕೊಂಡು ಧನಿಯ ಬೀಡಿನ ಮುಖಾಂತರ ಜಾತ್ರೆಗೆ ಹೋಗಿ ನಂತರ, ಬರುವಾಗ ಆಧುನಿಕ ವಸ್ತುಗಳನ್ನು ತರುವುದರ ಮುಖಾಂತರ, ಆಗಲೆ ಅವರು ಆಧುನಿಕತೆಗೆ ತಮ್ಮನ್ನು ಒಡ್ಡಿಕೊಂಡಿದ್ದರು. ಈ ಪ್ರಕ್ರಿಯೆಯು ನಡೆಯಲು ಇದು ಮನ್ಸೂಚನೆ ಎನ್ನುತ್ತಾರೆ.

"ಹಿರಿಯ ಬಲ್ಲಾಳರು ಅಷ್ಟೇ ಎಲ್ಲಿಂದಲೋ ಬಂದವರು ಸಹಜವಾಗಿರುವ ನಿಸರ್ಗ ಮತ್ತು ಪ್ರಾಣಿಗಳನ್ನು ಪಳಗಿಸುವುದರ ಮುಖಾಂತರ ತಮ್ಮ ಆಧುನಿಕತೆಯ ನೆಲೆಯನ್ನು ನಿಸಸರ್ಗದ ಸಂಬಂಧದಲ್ಲಿ ತರುತ್ತಾರೆ ಎನ್ನುತ್ತಾರೆ. ಬಲ್ಲಾಳರಿಗೆ ಸಾಲವಾದ ನಂತರ ಅದನ್ನು ವಿಟ್ಲೆಯ ತಿರುಮಲಭಟ್ಟರಿಗೆ ಅದನ್ನು ಒಪ್ಪಿಸುತ್ತಾರೆ. ತಿರುಮಲಭಟ್ಟರು ಕುತಂತ್ರಕಾರ ಮತ್ತು ಬ್ರಿಟೀಷರ ವಸಾಹತುವಿನ ರೀತಿಯ ಧೋರಣೆಯುಳ್ಳ ವ್ಯಕ್ತಿ. ಬ್ರಿಟೀಷರ ಒಡೆದು ಆಳುವ ನೀತಿಯಂತೆ ಈತನು ಅದನ್ನು ಕರಗತ ಮಾಡಿಕೊಂಡಿದ್ದನ್ನು. ಅದಕ್ಕಾಗಿ ಕುಡಿಯರಲ್ಲಿ ಒಳಜಗಳಗಳನ್ನು ಉಂಟು ಮಾಡಿದನು. ಊರಿನ ಆಳುಗಳನ್ನು ಕರೆದುತಂದರು. ಕುಡಿಯರನ್ನು ಕರೆಯಿಸಿದರು. ಹುತ್ತಿಯಡ್ಕದಿಂದ ಪರಿವಾರ ಸಮೇತರಾಗಿ ಕಾನನವನ್ನು ಹೊಕ್ಕರು. ಬಡಗಿ ಬಡಾವಿಗಳನ್ನು ಕಟ್ಟಿಕೊಂಡೇ ಮಲೆಯ

೨೦. ಅದೇ, ಪುಟ-೨೩

ಮಧ್ಯದಲ್ಲಿ ಕುಡಿಯರ ಕೇರಿಗೆ ಸಮೀಪದಲ್ಲಿ, ನೀರಿನ ದಂಬೆಯೊಂದು ಹರಿಯುವಲ್ಲಿ ಪಡುವಣ ಬಾನು ತೆರವಾಗಿ ಕಾಣಿಸುವಲ್ಲಿ–ನೆಲ ಸವರಿದರು. ಒಂದು ಮನೆಗೆ ಆಸ್ತಿಬಾರ ಹಾಕಿದರು. ಮಣ್ಣಿನಲ್ಲಿ ಆದನ್ನು ಕಂಡು ಕುಡಿಯರಿಗೆ ಹಿಡಿಸಲಾರದ ಆಶ್ಚರ್ಯ. ಸಂತೋಷ! ಹೊಸ ಧನಿಗಳು ತಮ್ಮ ಎಡೆಯಲ್ಲೇ ವಾಸವಾಗಿರಲು ಆ ಮನೆ ಕಟ್ಟಿಸಿದನ್ನು ಕಂಡು ಅವರಿಗೆ ಧೈರ್ಯ ಧನಿಗಳು ಮಲೆಗೆ ಬಂದು ಹೋಗುವಾಗಲೆಲ್ಲ. ಗುಂಡು ಹಾರಿಸುವ ತುಪಾಕಿ ತರುತ್ತಿದ್ದರು. ಅವರು ತುಪಾಕಿ ಕಂಡಂದು ಅದೇ ಮೊದಲು ಆಳುಗಳಿಂದ ಒಡಗೂಡಿ ದೊರೆಯ ಮಗನಂತೆ ಬರುತ್ತಿದ್ದರು. ಜೊತೆಗೆ ತೈನಾತಿಯೊಬ್ಬ ನಾಲ್ಕು ಮೈಲಿನ ಮಾಡಿನ ದಾರಿ ಸವರಿ ಸಜ್ಜಾಗಿ ಮಾಡಿಸಿದರು."[೧೧]

ಹೀಗೆ ಕುಡಿಯರ ಸಹಜ ನಿಸರ್ಗ ಜೀವನಕ್ಕೆ ಮತ್ತು ಸಹಜ ಪರಿಸರಕ್ಕೆ ತಿರುಮಲಭಟ್ಟ ಹೊಸ ತಿರುವನ್ನು ಕೊಡುತ್ತಾನೆ. ಇದನ್ನು ಕಂಡ ಮುಗ್ಧ ಕುಡಿಯರು ಸಹಜವಾಗಿ ಅದರ ಕಡೆಗೂ ಒಲವು ತೋರಿಸತೊಡಗಿದರು. ಆದರೆ ಅವರ ಮೂಲ ಸಂಸ್ಕೃತಿಗೆ ಸಂಬಂಧಪಟ್ಟ ವಿಷಯದ ಕಡೆ ತಿರುಮಲಭಟ್ಟ ಮೂಗು ತೂರಿಸಿದಾಗ ಅದನ್ನು ಕಲ್ಕುಡ ದೇವರ ಆರಾಧನೆಯ ಮೂಲಕ ಪ್ರತಿಭಟಿಸುತ್ತಾರೆ.

"ಧನಿಗಳು ಅಲ್ಲೆ ನೆಲೆ ನಿಂತ ಮೇಲೆ ಕುಡಿಯರ ಗುಡಿಸಲಿನಲ್ಲಿ ಹೊಸ ಚಿಮಣಿ ದೀಪಗಳು ಉರಿದವು. ತಿರುಮಲಭಟ್ಟ ಏಲಕ್ಕಿ ಬೇಸಾಯವನ್ನು ತಾವೇ ನಿಂತು ಅವರಿಗೆ ಹೇಳಿಕೊಡುತ್ತಿದ್ದರು. ಏಲಕ್ಕಿ ಗಿಡಗಳ ಎಡೆಯಲ್ಲಿ ಕಳೆ ಬೀಳಲು ಮತ್ತೊಂದು ಬೆಳೆಯದಂತೆ ಸವರುವ ಕೆಲಸ ಜನರಿಂದ ಮಾಡಿಸಿದರು. ಅಲ್ಲದೆ ಉತ್ಸಾಹಿ ತರುಣರಿಗೆ ಕೋವಿಯಿಡಿಯುವುದನ್ನು ಕಲಿಸಿದರು. ಅವರ ಕುಮರಿ ಬೆಳೆಗಳ ಆನೆಗಳ ಹಿಂಡು ಹಾನಿ ಮಾಡಿದಾಗ ಕರ್ಪು ತೋಡಿಸಿ, ಒಂದು ಆನೆಯನ್ನು ಹಿಡಿಸಿಯೂ ಬಿಟ್ಟರು. ಆದರೆ ಮುಂದಿನ ದಾರಿ ಕಾಣದೆ, ಹಿಡಿದ ಆ ಆನೆಯನ್ನು ಬಿಡಬೇಕಾಯಿತು."[೧೨]

ಕಾರಂತರು ಕುಡಿಯರು ವಾಸಿಸುವ ಪ್ರದೇಶವಾದ ಕಿರುಮಲೆ ಮತ್ತು ಹಿರಿಮಲೆಯ ತಿರುಮಲಭಟ್ಟರ ಪ್ರವೇಶದಿಂದ ಆ ಬದಲಾವಣೆಗಳನ್ನು ನಿಸರ್ಗ ಮತ್ತು ಮಾನವ ಸಂಬಂಧಗಳಲ್ಲಿ ಗುರ್ತಿಸುತ್ತಾರೆ. ತಿರುಮಲಭಟ್ಟ ಕುಡಿಯರ ಸಮಾಜಕ್ಕೆ ಒಬ್ಬ ವಸಾಹತು ಪ್ರತಿನಿಧಿ. ಈತನು ಕುಡಿಯರ ಸ್ತ್ರೀಯರನ್ನು ಕಾಮ ವಾಂಛನೆಯಿಂದ ನೋಡಿ ಬಳಸಿಕೊಳ್ಳುತ್ತಾನೆ. ಇದು ಅವರ ಆಧುನಿಕ ಮತ್ತು ಪಾಳೇಗಾರಿಕೆ ಸಂಸ್ಕೃತಿಯಾಗಿದೆ. ಈ ಸಂಸ್ಕೃತಿಗೆ ಬಲಿಯಾದ ಕುಡಿಯರ ಸ್ತ್ರೀಯೆಂದರೆ ಕೆಂಪಿ. ಈ ಕುರಿತು ಟಿ.ಪಿ ಅಶೋಕರವರು "ಕಾಡಿನ ಮಕ್ಕಳಾದ ಕುಡಿಯರು ಇಲ್ಲಿ *ಪ್ರಕೃತಿಯ ಒಂದು ಭಾಗವೆಂಬಂತೆ ಬದುಕುತ್ತಿದ್ದಾರೆ. ಇವರಿಗೆ ತಮ್ಮದೇ ಆದ ಸಾಮಾಜಿಕ ರಾಜಕೀಯ ವ್ಯವಸ್ಥೆ ಇದೆ. ಧಾರ್ಮಿಕ ಆಚರಣೆಗಳು ಕಟ್ಟು ಪಾಡುಗಳು ಇವೆ. ತಮ್ಮದೇ ಆದ ಜೀವನ ವಿಧಾನಗಳಿವೆ. ಕುಡಿಯರ ಜಗತ್ತು ಒಂದು ಸ್ವಯಂ ಪೂರ್ಣ ಜಗತ್ತು ಅದಕ್ಕೆ ತನ್ನದೇ ಆದ ಲಯವಿದೆ: ವಿನ್ಯಾಸವಿದೆ: ವಿರೋಧಭ್ಯಾಸಗಳೂ ಇವೆ. ಇವರನ್ನು ಕಾಯುವ ದೈವ ಇದೆ. ಬದುಕುವ ಹಲವು ದಾರಿಗಳು ಸಂಮೃದ್ಧವಾದ ಅರಣ್ಯವೇ ತೋರಿಸಿಕೊಟ್ಟಿದೆ.*

೧೧. ಅದೇ, ಪುಟ-೨೮
೧೨. ಅದೇ, ಪುಟ-೨೪

ಇವರ ಜೀವನ ನಿಜಕ್ಕೂ ಪಲ್ಲಟಗೊಳ್ಳುವುದು. ಆ ಅರಣ್ಯಗಳು ಊರ ಶ್ರೀಮಂತರ ಖಾಸಗಿ ಸ್ವತ್ತುಗಳಾದಾಗ"[೧೩] ಎಂದು ಹೇಳುತ್ತಾರೆ.

ಈ ಮಾತುಗಳು ಕುಡಿಯರ ಜೀವನ ಮತ್ತು ನಿಸರ್ಗದಲ್ಲಿ ಆಧುನಿಕತೆಯನ್ನು ಸರಿಯಾಗಿ ಹೇಳುತ್ತವೆ. ಕೆಂಚ ಸತ್ತ ನಂತರ ಗುರಿಕಾರನನ್ನಾಗಿ ತಿರುಮಲಭಟ್ಟ ತುಕ್ರವನ್ನು ನೇಮಿಸುತ್ತಾನೆ. ಮತ್ತು ತಾನು ಧನಿ ಹೇಳುವಂತೆ ಕೇಳಬೇಕು ಎಂದು ಪಾಳೇಗಾರಿಕೆ ದರ್ಪ ತೋರಿಸಿದಾಗ ಕುಡಿಯರು ತಮ್ಮ ನಿಸರ್ಗ ಸಹಜವಾದ ಸಂಸ್ಕೃತಿಯನ್ನು ಉಳಿಸಿಕೊಳ್ಳಲು ಅವರ ಪ್ರತಿನಿಧಿಯಾದ ಚನಿಯ ಇದಕ್ಕೆ ತನ್ನ ವಿರೋಧದ ಮಾತುಗಳನ್ನು ಆಡುತ್ತಾನೆ. *"ಧನಿಗಳೆ ತಾವು ಹಾಗೆಲ್ಲ ಸಿಟ್ಟಾಗಬಾರದು. ಕೂಡು ಕಟ್ಟಿನ ಸಭೆಯು ನೀವಿದ್ದು ಆಗಬೇಕೆಂದು ಮಾತೇನು? ಅದು ಜಾತಿಯವರಿದ್ದು ಆಗುವ ಕೆಲಸ ಅದಕ್ಕೆ ಇನ್ನೊಬ್ಬರನ್ನು ನಾವು ಕರೆವುದೂ ಸಮನಲ್ಲ, ಅವರೂ ಬರುವುದೂ ಚಂದವಲ್ಲ. ಈಗ ಕೇರಿಯವರು ನಿರ್ಧಾರ ಮಾಡಿ ಒಂದು ಮನಸ್ಸಿನಿಂದ ನಮಗೆ ಎಲೆ ಅಡಿಕೆಗಳ ಮರ್ಯಾದೆ ಸಲ್ಲಿಸಿದ್ದಾರೆ."*[೧೪] ಎಂದು ಹೇಳುವ ಚನಿಯನ ಮಾತಿನಲ್ಲಿ ವಸಾಹತುಶಾಹಿ ಮತ್ತು ಬಂಡವಾಳಶಾಹಿಯು ತನ್ನ ಪಾಡಿಗೆ ತಾನು ಹಿಡಿದು ಬಂದ ದಾರಿಯ ಕಡೆ ನೋಡಬೇಕಾಗುತ್ತದೆ. ಕಾರಂತರು ಹೀಗೆ ನಿಸರ್ಗ ಮತ್ತು ಮಾನವ ಸಂಬಂಧದಲ್ಲಿ ಆಧುನಿಕತೆಯ ಸುಳಿಹುಗಳನ್ನು ಈ ಮೂಲಕ ನೀಡುತ್ತಾರೆ. ಪ್ರತಿಭಟನೆಯ ಅಂಶಗಳನ್ನು ತಿಳಿಸುತ್ತಾರೆ.

'ನಂಬಿದವರ ನಾಕ ನರಕ' ಕಾದಂಬರಿಯಲ್ಲಿ ಕಾರಂತರು ಮನುಷ್ಯ ಸಂಬಂಧಗಳ ವಿಘಟನೆಯನನ್ನು ಸಾಮಾಜಿಕ ನೆಲೆಯಲ್ಲಿ ಕಾಣುತ್ತಾರೆ. ಈ ನೆಲಗಳು ನಿಸರ್ಗದೊಂದಿಗೆ ಹೊಂದಿರುವ ಸಂಬಂಧಗಳನ್ನು ಕುರಿತು ಹೇಳುವಾಗ ಕೆಲವು ಪಾತ್ರಗಳಲ್ಲಿ ಆಧುನಿಕತೆಯ ನೆಲೆಯನ್ನು ಗುರ್ತಿಸುತ್ತಾರೆ. ಈ ಕಾದಂಬರಿಯು ಸೌಗೋಡು ಮತ್ತು ಚೌಗೋಡ ಮನೆತನಗಳ ಸಂಬಂಧ ಮತ್ತು ಇವರ ಮನೆಗೆ ಬರುವ ಸೊಸೆಯರ ಏಳು ಬೀಳುಗಳ ಕಥೆಯಾಗಿದೆ. ಶಿರೂರಿನ ಶಂಕರಯ್ಯನ ಮಗಳು ವಾಗ್ದೇವಿ ಸೌಗೋಡಿನ ನಾಗೇಂದ್ರನ ಪತ್ನಿ ಮಕ್ಕಿಗದ್ದೆ ಸೋಮೇಶ್ವರನ ಮಗಳು ಸತ್ಯಭಾಮೆ ಚೌಗೋಡು ಕುಟುಂಬದ ಸುಬ್ರಾಯನ ಪತ್ನಿ, ಸತ್ಯಭಾಮೆಯ ಅತ್ತೆ ಸಾವಿತ್ರಮ್ಮ ತುಂಬಾ ಸಂಪ್ರದಾಯವಂತೆ. ಇವಳ ಮಗ ಸುಬ್ರಾಯ ಮಾತ್ರ ಇಡೀ ಕುಟುಂಬ ವರ್ಗವನ್ನೆ ಬಿಟ್ಟು ಉದ್ಯೋಗದ ನೆಪದಿಂದ ಬೊಂಬಾಯಿಗೆ ಪರಾರಿಯಾಗುತ್ತಾನೆ. ಇದು ಅವನ ಆಧುನಿಕ ಜಗತ್ತಿನ ಸೆಳೆಪಿಗೆ ಬಲಿಬೀಳುವುದು ಆಗಿದೆ. ಸೌಗೋಡಿನ ಒಡೆಯ ತುಂಬಾ ಸಾಹುಕಾರ. ಇವನು ವಿಲಾಸಮಯ ಜೀವನ ನಡೆಸುವವನು. ಆದರೆ ಮಕ್ಕಿಗದ್ದೆ ರಾಮಕೃಷ್ಣ ಮತ್ತು ಪತ್ನಿ ಪದ್ಮಾವತಿಯು ನಿಸರ್ಗದಲ್ಲಿ ತಮ್ಮ ಜೀವನವನ್ನು ಕಟ್ಟಿಕೊಳ್ಳುತ್ತಾರೆ. ಆದರೆ ಇಲ್ಲಿ ಪ್ರಮುಖವಾಗಿರುವುದು, ಈ ಪಾತ್ರಗಳು ಹೊಂದಿರುವ ನಿಸರ್ಗ ಸಂಬಂಧದಲ್ಲಿ ಆಧುನಿಕತೆಯ ಪ್ರವೇಶ ಹೇಗೆ ಸಾಕಾರವಾಗುತ್ತದೆ

೧೩. ಟಿ.ಪಿ.ಅಶೋಕ (ಸಂ), ಶಿವರಾಮ ಕಾರಂತ ಎರಡು ಅಧ್ಯಯನಗಳು, ಪುಟ - ೯೪

೧೪. ಶಿವರಾಮ ಕಾರಂತ, ಕುಡಿಯರ ಕೂಸು, ಪುಟ- ೧೦೯

ಎಂಬುದು ಸೌಗೋಡಿನ ಸಾಹುಕಾರ ನಾಗಪ್ಪಯ್ಯ ಅಥವಾ ನಾಗೇಂದ್ರನಗೆ ತನ್ನ ತಾಯಿ ತಂದೆ ಸತ್ತ ನಂತರ ಅಪಾರವಾದ ಆಸ್ತಿ ಮತ್ತು ಸಂಪತ್ತು ಆತನ ಕೈಗೆ ಬರುತ್ತದೆ. ಇವನು ಮದುವೆ ಮಾಡಿಕೊಂಡ ಶರೂರಿನ ವಾಗ್ದೇವಿ ತುಂಬಾ ಕಲಿತವಳಲ್ಲ ಮತ್ತು ನಾಚಿಕೆ ಸ್ವಭಾವದವಳು. ಇಂತಹವಳನ್ನು ಮದುವೆಯಾಗಿ ನಾಗೇಂದ್ರನ ಮನೆಗೆ ಬಂದಾಗ ಅವನ ಆಧುನಿಕ ವಸಾಹತುಶಾಹಿ ನೆಲೆಗಳು ನಾಗೇಂದ್ರನ ಶಯ್ಯಾಗೃಹದಲ್ಲಿ ಕಾಣುತ್ತಾಳೆ. ನಮ್ಮ ಸ್ವಾತಂತ್ರೋತ್ತರ ಭಾರತದಲ್ಲಿ ನಮ್ಮ ಮೇಲೆ ಅದುವರೆಗೂ ಸಂಪ್ರಾದಯದ ನೆಲೆಯಲ್ಲಿದ್ದ ಲೈಂಗಿಕ ವಿಷಯಗಳು ನವವಸಾಹತು ಮತ್ತು ಬಂಡವಾಳಶಾಹಿತ್ವದ ಪರಿಣಾಮವಾಗಿ ಲೈಗಿಂಕ ವಿಷಯಗಳನ್ನು ಒಳಗೊಂಡ ಸಾಹಿತ್ಯ, ನೀಲಿ ಚಿತ್ರಗಳು ಹೊಸ ಸರಕಾಗಿ ನಮ್ಮ ಯುವ ಜನತೆಯನ್ನು ಹಾದಿ ತಪ್ಪಿಸುತ್ತವೆ. ಇದನ್ನು ಕಾರಂತರು ಸೌಗೋಡಿನ ಸಾಹುಕಾರನ ಪಾತ್ರದಲ್ಲಿ ಕಾಣುತ್ತಾರೆ. ಏಕೆಂದರೆ ಈತ ಗ್ರಾಮೀಣ ಸೊಗಡಿನ ಪರಿಚಯವುಳ್ಳವನು, ಆದರೆ ಈ ಹೊಸ ವಿಲಾಸಮಯ ಜೀವನಕ್ಕೆ ತನ್ನನ್ನು ಒಡ್ಡಿಕೊಳ್ಳುವುದರಲ್ಲಿ ಅವನ ಲೋಲುಪತೆ ಮತ್ತು ಆಧುನಿಕ ಭೀಭಿತ್ಸ ಮನಸ್ಸು ಅರಿವಾಗುತ್ತದೆ.

ಕಾರಂತರು ವಾಗ್ಧೇವಿಯ ಬಗ್ಗೆ ಹೀಗೆ ಬರೆಯುತ್ತಾರೆ. 'ಸೌಗೋಡು ಮನೆಗೆ ವಾಗ್ದೇವಿ ಯಜಮಾನಳಾದಳು. ಆದ ಮೇಲೆ ಮನೆ, ಸಂಪತ್ತು, ಗಂಡ ಮೂರನ್ನೂ ಕಂಡು ಮೂಗ್ದೇವಿಯಾದಳು. ಮೊದಲೇ ಬಡತನದಲ್ಲಿ ಬೆಳೆದವಳು, ಕುಲೀನರಲ್ಲಿ ನಾಚಿಕೆಯ ಬಳ್ಳಿಯಂತೆ ಸಂಕೋಚದಲ್ಲಿ ಬೆಳೆದವಳು. ಇದು ಕಟ್ಟುಪಾಡಿಲ್ಲದಂಥ ಮನೆ. ಅವಳೇ ಅದಕ್ಕೆ ನಾಯಕಿಯಾದರೂ ಗಂಡಸರೊಡನೆ ಮುಖವೆತ್ತಿ ಮಾತನಾಡಲು ಕಲಿತವಳಲ್ಲ. ಅವಳ ಲಜ್ಜಾಶೀಲತೆ ನಾಗೇಂದ್ರನ ಕೋಪಕ್ಕೂ ಕಾರಣವಾಗುವುದಂಟು' ಅದೇ ರೀತಿಯಾಗಿ ಕಾರಂತರು ನಾಗೇಂದ್ರನ ಬಗ್ಗೆ ಬರೆಯುತ್ತಾರೆ. ಆತ ನವ ಯುವಕ: ಸಾಗರ, ಹೊಸನಗರಗಳಂತ ಊರುಗಳಿಗೆ ಸಂಚಾರಿ ಸಿನಿಮಾಗಳು ಬಂದರೆ ಒಂದನ್ನು ಬಿಡಲಾರದವ. ಹಿಂದೆ ಗಾಡಿಯನ್ನು ಅಟ್ಟಿಸಿಕೊಂಡು ಹೋಗಿ ಬರುತ್ತಿದ್ದರೆ ಈಗ ಅವನೇ ನಡೆಯಿಸುವ ಹಳೆಯದಾದ ಪೋರ್ಡ್ ವಾಹನವಿದೆ. ಅವನಿಗೆ ತನ್ನ ವಾಗ್ಧೇವಿಯು ಚಿತ್ರಲೋಕದ ಅಪ್ಸರೆಯಂತೆ ಮರೆದರೆ ಆದೀತೆಂಬ ಹಂಬಲ. ಗ್ರಾಮ ಜೀವನದ ಸಹಜ ನೆರಳಲ್ಲಿ ಬೆಳೆದ ವಾಗ್ದೇವಿಯು ಸೌಗೋಡಿನ ಮನೆಗೆ ಬಂದಾಗ, ಅವಳಿಗೆ ಹೊಸ ರೀತಿಯ ಅನುಭವಗಳು ಅವಳಲ್ಲಿ ತನ್ನ ಗಂಡ ನಾಗೇಂದ್ರನಿಂದ ಉಂಟಾಯಿತು. ನಾಗೇಂದ್ರ ಪಟ್ಟಣದ ಜೀವಸಕ್ಕೆ ಅತಿಬೇಗನೆ ಹೊಂದಿಕೊಂಡು ಆ ಪಟ್ಟಣದ ಮನಸ್ಸನ್ನು ತನ್ನ ಹೆಂಡತಿಯ ನೆಲೆಯಲ್ಲಿ ಕಾಣಲು ತವಕಿಸುತ್ತಾನೆ. ಆದರೆ ವಾಗ್ದೇವಿ ಸಂಪ್ರದಾಯದ ಬ್ರಾಹ್ಮಣ ಕುಟುಂಬದಲ್ಲಿ ಬೆಳೆದವಳು. ಆದ್ದರಿಂದ ಅವಳಲ್ಲಿ ಸಾಮಾನ್ಯವಾಗಿ ಮಾನಸಿಕ ಗೊಂದಲಗಳು ಮೂಡಿದವು.

"ವಾಗ್ದೇವಿಯ ಮಾನಸಿಕ ಚಿತ್ರಗಳು ದಾಂಪತ್ಯ ಜೀವನವನ್ನು ಕುರಿತಾದ ಸುಖ ಸ್ವಪ್ನಗಳನ್ನು ಕೆರಳಿಸುವ ಬದಲು, ಭಯ ಭೀತಿಗಳನ್ನೇ ಹುಟ್ಟಿಸಿದವು. ತನ್ನದೆಂಬ ಶಯ್ಯಾಗಾರಕ್ಕೆ ಮೊದಲ ದಿನ ಹೊಕ್ಕು ಅಲ್ಲಿ ಗೋಡೆಗಳನ್ನು ನೋಡಿದಾಗ, ಮನಸ್ಸಿಗೆ ತೀರ ಅಸಹ್ಯ ಹುಟ್ಟಿತ್ತು. ಆ ಮೋಹಿನಿ, ಚಿತ್ತಿನಿ, ಹಸ್ತನಿ, ಶಂಕರನಿಯರೋ! ಹಾಗೆಯೇ ಬಟ್ಟೆಯ ಮೇಲೆ ಬೇಸರ ತಾಳಿದಂತ ಜಪಾನಿನ ನಕಲಿ ಗೀಶಾಗಳೊ ಇಂಥವೇ ಚಿತ್ರಗಳನ್ನು ಕಂಡು 'ಇಸ್ಸಿ' ಅನ್ನಿಸಿತ್ತು"[೧೫]

ನಾಂಗ್ರೇಂದ್ರನ ಆಧುನಿಕ ಮನಸ್ಸು ಅವನ ಕೊಠಡಿಯಲ್ಲಿ ಕಾಣಸಿಗುತ್ತದೆ. ಅದಕ್ಕಾಗಿ ಅವನಿಗೆ ಯಾವುದೇ ಮುಜುಗರವಿಲ್ಲ. ಸಹಜವಾಗಿ ಅವನಿಗೆ ಅವನ ತಂದೆಯಿಂದ ಬಂದಿದ್ದ ಆಸ್ತಿಯಿದ್ದರು, ಅವುಗಳನ್ನು ಗೇಣಿಗೆ ಕೊಟ್ಟು ಅತೀ ಬೇಗನೆ ಸಾಮಾಜಿಕವಾಗಿ, ಸಾಹುಕಾರನೆನಿಸಿ; ಈ ಶ್ರೀಮಂತತನಕ್ಕೆ ಶಿರೋಮಣಿಯಂತೆ ಆಧುನಿಕ ಶೋಕಿತನಕ್ಕೆ ಮರಳಾಗಿ ನಿಸರ್ಗದಿಂದ ಸಾಕಷ್ಟು ದೂರವಿರುತ್ತಾನೆ.

ಚೌಗೊಡಿನ ಕುಟುಂಬ ರೈತ ಕುಟುಂಬ. ಈ ಕುಟುಂಬದ ಹಿರಿಯಳು ಸಾವಿತ್ರಮ್ಮ. ಇವಳ ಗಂಡ ಗಣೇಶ ಹೆಗ್ಗಡೆ. ಇವರ *"ಅಜ್ಜನೊ ಮುತ್ತಜ್ಜನೋ, ಹೆಸರೇ ಇರದ ಮೂಲೆಗೆ ಬಂದು ಕಾಡು ಕಡಿದು ತೋಟ ಗದ್ದೆಗಳನ್ನು ಮಾಡಿಕೊಂಡು, ಆ ಊರಿಗೆ 'ಚೌಗೊಡು' ಎಂಬ ಹೆಸರು ತರಿಸಿದರು. ಅಲ್ಲಿಗೆ ಅವರು ಇನ್ನೆಲ್ಲಿಂದಲೋ ಬಂದರಂತೆ ಈ ಸಹ್ಯಾದ್ರಿಯ ಬೆನ್ನುದ್ದಕ್ಕೂ ನೆಲೆಸಿಕೊಂಡಿದ್ದ ಜೀವಿಗಳು ಬೀಡು ಕಟ್ಟಿದಕ್ಕೂ ಬೀಡು ಬಿಟ್ಟಿದಕ್ಕೂ ಅಂಕೆ ಸಂಖ್ಯೆಯಿಲ್ಲ. ಕಾಡನ್ನು ಹೊಕ್ಕು, ದಾರಿ ತಪ್ಪಿ ಬಂದು ಮೂಲೆಗೆ ಹೋದರೂ ಕೂಡ, ಅಲ್ಲೊಂದು ಗಿಡವೋ, ತಳ ಪಾಯವೋ, ಹಿಂದಿದ್ದ ಜನವಸತಿಯನ್ನು ಸೂಚಿಸುತ್ತದೆ."*[೧೬]

ಸಾವಿತ್ರಮ್ಮನಿಗೆ ಎಂಟು ಮಕ್ಕಳು ಅವರಲ್ಲಿ ಉಳಿದವರು ಮೂವರು ಮಾತ್ರ, ದೊಡ್ಡವನು ಇಪ್ಪತ್ತೈದು ವಯಸ್ಸಿನ ಸುಬ್ರಾಯ ಆತ ಪರವೂರಿನಲ್ಲಿ ಇದ್ದಾನೆ. ಗಣೇಶಯ್ಯ ತಾವು ವಾಸಿಸುತ್ತಿದ್ದ ಚೌಗೊಡು ಜ್ವರದ ಕೊಂಪೆಯಾಗಿದ್ದರಿಂದ, ತನ್ನ ಮಕ್ಕಳು ಉಳಿಯದೇ, ಇದ್ದುದರಿಂದ ಇರುವವರಲ್ಲಿ ಒಬ್ಬನಿಗಾದರು ಒಳ್ಳೆಯ ಇಂಗ್ಲಿಷ್ ವಿದ್ಯಾಭ್ಯಾಸವನ್ನು ಕೊಡಿಸಬೇಕೆಂದು ನಿಶ್ಚಯಿಸಿರುತ್ತಾರೆ. ಹಾಗಾಗಿ ಸುಬ್ರಾಯನಿಗೆ ಸಾಗರ, ಶಿವಮೊಗ್ಗಗಳಲ್ಲಿ ವಿದ್ಯೆಯನ್ನು ಕೊಡಿಸಿದರು. ಇಷ್ಟು ಓದಿಸುವುದರೊಳಗೆ ಗಣೇಶಯ್ಯ ಹೆಗ್ಗಡೆ ಜ್ವರಕ್ಕೆ ಬಲಿಯಾದರು. ಆದರೂ ಸುಬ್ರಾಯ ಕಷ್ಟಪಟ್ಟು ಮೆಟ್ರಿಕ್‌ನ್ನು ಮುಗಿಸಿದ. ಮುಂದೆ ಕೆಲಸವನ್ನು ಹುಡುಕಿಕೊಂಡು ಹುಬ್ಬಳಿಯಲ್ಲಿ ಶಾಲಾ ಮಾಸ್ತರಿಕೆಯನ್ನು ಹಿಡಿದ. ಆತ ಹೆಚ್ಚುದಿನ ಅಲ್ಲಿ ನಿಲ್ಲಲಿಲ್ಲ. ಕಾರಣ ಅವನ ಸ್ವಭಾವವೇ ಅಂತಹದು. ಇದರಿಂದ ಸಾವಿತ್ರಮ್ಮನ ಮನೆಗೆ ಕಷ್ಟಗಳು ಉಂಟಾದವು. ಇದರಿಂದ ಸಾವಿತ್ರಮ್ಮ ನೊಂದುಕೊಳ್ಳುತ್ತಾಳೆ.

ಸಾವಿತ್ರಮ್ಮನ ಮನಸ್ಸು ನಿಸರ್ಗದ ಮನಸ್ಸು. ಈಕೆಯ ಮನಸ್ಸಿನ ಬಗ್ಗೆ ಕಾರಂತರು *"ಕೊನೆಯ ಉಸಿರಿರುವ ತನಕ ತಮ್ಮ ಕರ್ತವ್ಯವನ್ನು ಮರೆಯುವ ಹೆಂಗಸು ಅವಳಲ್ಲ. ತನ್ನನ್ನು ಕೈಹಿಡಿದ*

೧೫. ಶಿವರಾಮ ಕಾರಂತ, ನಂಬಿದವರ ನಾಕ ನರಕ, ಪುಟ-೨೨೭
೧೬. ಅದೇ, ಪುಟ ೨೩೭-೨೩೮

ತಂದವರು ಬಾಳಿನಂಥ ಮನೆ ಎಂದೆಂದೂ ಅವಳದ್ದೇ ಮನೆ ಅವನ್ನೂ ಬಿಡುವಳು ಅವಳಲ್ಲ. ಅಡಿಕೆ ತೋಟ, ಬತ್ತದ ಗದ್ದೆ, ದನಕರುಗಳ ಋಣಾನುಬಂಧವನ್ನು ಕಡಿದು, 'ಈಚೆ ಬನ್ನಿ' ಎಂದರೆ ಬರುವವಳಲ್ಲ." [೧೭]

ಇಂತಹ ನಿಸರ್ಗ ಸಂಬಂಧವನ್ನು ಹೊಂದಿದ್ದ ಸಾವಿತ್ರಮ್ಮ ಕುಟುಂಬದ ಜೀವನದಲ್ಲಿ ಅವರ ಮಗ ಸುಬ್ರಾಯ ಆಧುನಿಕ ಸಂಗತಿಗಳನ್ನು ಮೈಗೂಡಿಸಿಕೊಂಡ ವಸಾಹತು ಮತ್ತು ಬಂಡವಾಳಶಾಹಿತ್ವದ ಪ್ರತೀಕದಂತೆ ತನ್ನ ತಾಯಿಗೆ ಭೂಮಿ, ಕೃಷಿಯ ಬಗ್ಗೆ, ಸಲಹೆಯನ್ನು ನೀಡುತ್ತಾನೆ. ಅದು ಇದನ್ನೆಲ್ಲಾ ಮಾರಾಟ ಮಾಡುವ "*ಎನ್ನುವ ಸಲಹೆ ಆದರೆ ಸಾವಿತ್ರಮ್ಮ ನೀನು ನಾಳೆ ದಿನ ನಿನ್ನ ಹೆಂಡತಿಯನ್ನು ಕಟ್ಟಿಕೊಂಡು, ಎಲ್ಲಾದರೂ ಸಂಸಾರವನ್ನು ಮಾಡಿಕೊಂಡಿದ್ದೀಯ ಇನ್ನಿಬ್ಬರ ಗತಿಯೇನು? ಅವು ನಿನ್ನಂತೆ ಓದಿಲ್ಲ, ಮಾಡಿಲ್ಲ ಗದ್ದೆ ಬೇಸಾಯ, ತೋಟದ ಬೇಸಾಯ ಮಾಡಿದರೇನೆ ಅವುಗಳ ಜೀವನ ಸಾಗೀತು*"[೧೮]

ಸಾವಿತ್ರಮ್ಮನ ಈ ಮಾತು ವಿದ್ಯಾಭ್ಯಾಸ ಮಾಡಿರುವವರು ನಿಸರ್ಗದಿಂದ ದೂರ ಉಳಿಯುತ್ತಾರೆ ಮತ್ತು ವ್ಯವಸಾಯದ ಜೀವನ ನಮಗೆ ಅಗತ್ಯವಿಲ್ಲ ಎಂಬ ನಿರಾಕರಣೆಯ ಅಂಶಗಳನ್ನು ಹೇಳುತ್ತದೆ. ಸುಬ್ರಾಯನಿಗೆ ಇದು ಒಂದು ರೀತಿಯ ಹಳೆಯ ಗೊಡ್ಡು ನಂಬಿಕೆಯ ರೀತಿ ಕಂಡು ಬಂದು ಆತ ಭೂಮಿಯನ್ನು ಮಾರಾಟ ಮಾಡಿ ನಗರವನ್ನು ಸೇರುವ ವಿಚಾರವನ್ನು ತನ್ನ ತಾಯಿಗೆ ತಿಳಿಸುವಲ್ಲಿ ಆತನಲ್ಲಿರುವ ಆಧುನಿಕ ಸ್ವಾರ್ಥ ಲಾಲಸೆಯನ್ನು ಗುರ್ತಿಸಬಹುದಾಗಿದೆ.

ಈ ಕಾದಂಬರಿಯಲ್ಲಿ ಕಾರಂತರು ಸುಬ್ರಾಯನ ಮೂಲಕ ಶಿಕ್ಷಣದ ಪರಿಣಾಮ ಮತ್ತು ಅವನ ಆಧುನಿಕ ಮನೋಭಾವವನ್ನು ಹೇಳುತ್ತಾರೆ.ಈತನು ಮಕ್ಕಿಗದ್ದೆಯ ಸೋಮೇಶ್ವರಯ್ಯನ ಮಗಳು ಸತ್ಯಭಾಮೆಯನ್ನು ಮದುವೆಯಾಗುತ್ತಾನೆ. ಸತ್ಯಭಾಮೆಯು ಸಾವಿತ್ರಮ್ಮನ ಮನೆಯಲ್ಲಿ ಕೃಷಿ ಚಟುವಟಿಕೆಗಳಲ್ಲಿ ತೊಡಗುತ್ತಾಳೆ. ಆದರೆ ಸುಬ್ರಾಯ ಮದುವೆಯಾದ ಸ್ವಲ್ಪ ದಿವಸ ಇದ್ದ ಈತನು "*ತನ್ನ ಉದ್ಯೋಗದ ಸಲುವಾಗಿ ಹುಬ್ಬಳ್ಳಿಯನ್ನು ಸೇರಬೇಕಾಯಿತು. ಹಾಗೆ ಚೌಗೂಡನ್ನು ಬಿಟ್ಟು ಹೊರಡುವಾಗ ಹೆಂಡತಿಯೊಡನೆ ಬಾಯಿ ತುಂಬಾ ಮಾತಾಡಿ ಹೋಗಿದ್ದ; ಈ ಊರು ಇವರಿಗೇನೆ ಚಂದ; ನಾನು ಇಲ್ಲಿ ನಿಂತರೆ ಉಸಿರುಗಟ್ಟಿ ಸತ್ತೇ ಹೋದೆನು. ಬೇಗನೆ ಹುಬ್ಬಳ್ಳಿಗೆ ಹೋಗಿ ಅಲ್ಲಿಗೆ ನಿನ್ನನ್ನು ಕರೆದೊಯ್ಯುತ್ತೇನೆ ಆ ತನಕ ಈ ಕಾಡು ಮೂಲೆಯಲ್ಲಿರಲು ನಿನಗೆ ಕಷ್ಟವಾದಿತು.*"[೧೯]

ಸ್ವಾತಂತ್ರ್ಯ ಭಾರತದಲ್ಲಿ ಶಿಕ್ಷಣದಿಂದ ನಮ್ಮ ಯುವ ಜನತೆ ಎಲ್ಲಾ ರೀತಿಯಾಗಿ ವೈಜ್ಞಾನಿಕ ಚಿಂತನೆಯನ್ನು ಬೆಳೆಸಿಕೊಂಡಿತು. ಆದರೆ ಈ ಚಿಂತನೆ ಅತಿ ಬೇಗನೆ, ಅದುವರೆಗೂ ಸಾಂಪ್ರದಾಯಿಕವಾಗಿ ನಂಬಿಕೊಂಡು ಬಂದಿದ್ದ ಮೌಲ್ಯಗಳನ್ನು ಪಲ್ಲಟಕ್ಕೆ ಒಳಪಡಿಸಿತು. ಇದರ ಪರಿಣಾಮ ಅದುವರೆಗೂ ತಾವು ನಿಸರ್ಗವನ್ನು ನಂಬಿದ್ದ ಸ್ವಾತಂತ್ರ್ಯೋತ್ತರ ಭಾರತದ ಅಂದಿನ ತಲೆಮಾರಿನವರಲ್ಲಿ ಕಳವಳಕ್ಕೆ ದಾರಿಮಾಡಿಕೊಟ್ಟಿತು. ನಾಗೇಂದ್ರನು ಆಧುನಿಕ ಶೋಕಿ ವ್ಯಕ್ತಿಯಾಗಿ

---

೧೭. ಅದೇ, ಪುಟ-೨೬೯

೧೮. ಅದೇ, ಪುಟ ೨೭೭

೧೯. ಶಿವರಾಮ ಕಾರಂತ, ಹುಚ್ಚು ಮನಸ್ಸಿನ ಹತ್ತು ಮುಖಗಳು, ಪುಟ-೨೨೨

ಕಂಡುಬಂದರೆ ಸುಬ್ರಾಯ ಆಧುನಿಕ ಶಿಕ್ಷಣವನ್ನು ಪಡೆದು ಆಧುನಿಕ ಪ್ರಜೆಯಾಗಿ ಹಾಗೂ ಕೌಟುಂಬಿಕ ನೆಲೆಯಲ್ಲಿ ಸೋತು ಪರಾರಿಯಾದ ಪಾತ್ರವಾಗಿ ಕಂಡು ಬರುತ್ತಾನೆ. ಇದರಿಂದ ಅವನ ತಾಯಿ ಪಾರ್ವತಮ್ಮ ಮತ್ತು ಸತ್ಯಭಾಮೆಯು ಮಾನಸಿಕ ಕ್ಲೇಷಗಳಿಗೆ ತುತ್ತಾಗುತ್ತಾರೆ.

'ಮರಳಿ ಮಣ್ಣಿಗೆ' ಕಾದಂಬರಿಯಲ್ಲಿ ತಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಬ್ರಾಹ್ಮಣರ ಬಡತನ ಜೀವನವನ್ನು ಮೂರು ತಲೆಮಾರುಗಳಲ್ಲಿ ಕಟ್ಟಿಕೊಡುತ್ತಾರೆ. ಮೊದಲ ತಲೆಮಾರಿನ ರಾಮೈತಾಳರು ಮತ್ತು ಪತ್ನಿಯರಾದ ಪಾರೋತಿ ಸತ್ಯಭಾಮೆ ಹಾಗೂ ರಾಮೈತಾಳರ ತಂಗಿ ಸರಸೋತಿಯರು ನಿಸರ್ಗವನ್ನು ನಂಬಿ ಬದುಕುತ್ತಾರೆ. ಇದು ಅವರಿಗೆ ಅನಿವಾರ್ಯವೂ ಹೌದು. ಅದೇ ರೀತಿ ಶೀನಯ್ಯನು ನಿಸರ್ಗವನ್ನು ಸಹ ಭೂಮಿಯನ್ನು ಗೇಣಿಗೆ ಕೊಡುವ ಮುಖಾಂತರ ನಿಸರ್ಗ ದೊಂದಿಗೆ ಬದುಕುತ್ತಾನೆ. ಆದರೆ ಇವರು ತಮ್ಮ ಮಕ್ಕಳಿಗೆ ಇಂಗ್ಲಿಷ್ ಶಿಕ್ಷಣವನ್ನು ಕೊಡಿಸುತ್ತಾರೆ. ಇವರ ಕಾಲಕ್ಕೆ ಇಂಗ್ಲಿಷ್ ಶಿಕ್ಷಣವೆನ್ನುವುದು ಒಂದು ವಸಾಹತುಶಾಹಿ ಕೊಡುಗೆಯಾಗಿ ಕಂಡು ಬರುತ್ತದೆ. ಅವರ ಮಕ್ಕಳಿಗೆ ಅನ್ನದ ಪ್ರಶ್ನೆಯುಂಟಾಗುತ್ತದೆ. ಆದ್ದರಿಂದ ಇಂಗ್ಲಿಷ್ ಶಿಕ್ಷಣವನ್ನು ಕೊಡಿಸುತ್ತಾರೆ.

ರಾಮ ಐತಾಳರಿಗೆ ಮತ್ತು ಅವರ ಕುಟುಂಬ ವರ್ಗಕ್ಕೆ ಕೃಷಿ ಮತ್ತು ಪೌರೋಹಿತ್ವವು ಸಂಪ್ರದಾಯದ ಪ್ರಕಾರ ಪರಂಪರೆಯಿಂದ ಬಂದದ್ದು ಇವರೆಲ್ಲರ ಬದುಕು ಗ್ರಾಮೀಣ ಕೃಷಿ ಬದುಕು. ರಾಮ ಐತಾಳರು ಸ್ವಲ್ಪ ಮಟ್ಟಿಗೆ ಹಣವುಳ್ಳವರು. ಇವರ ಪಕ್ಕದ ಮನೆಯ ಶೀನಮಯ್ಯ ಐತಾಳನು ಸಹ ಕೃಷಿ ಮಾಡುತ್ತಾ ತಾನು ಸಹ, ರಾಮ ಐತಾಳರಂತೆ ಆಗಬೇಕೆಂಬ ಆಸೆ ಅವನಲ್ಲಿರುತ್ತದೆ. ಅದಕ್ಕಾಗಿ ಅವನು ತನ್ನ ಮಕ್ಕಳನ್ನು ನಗರಕ್ಕೆ ಕಳುಹಿಸುವ ಯೋಚನೆಯಲ್ಲಿರುತ್ತಾರೆ. ಇಷ್ಟರೊಳಗೆ ಕೋಡಿ ಗ್ರಾಮದ ಸುತ್ತಲೂ ಜನರು ನಗರದಾರಿ ಹಿಡಿದಿದ್ದು, ತಮ್ಮ ಸಂಪ್ರದಾಯಿಕವಾದ ಕೃಷಿಯನ್ನು ತ್ಯಜಿಸಿ ಉದ್ಯೋಗ ಹುಡುಕಲು ನಗರವೆಂಬ ಮಾಯೆಗೆ ಸೇರಿ ದೊಡ್ಡ ಮೊತ್ತದ ಹಣ ಸಂಪಾದಿಸಿದರು. ಏಕೆಂದರೆ ರಾಮ ಐತಾಳರ ಮತ್ತು ಶೀನಮಯ್ಯರ ಉತ್ತರಾರ್ಧ ಕಾಲ ಅವರಿಗೆ ಅರಿವಿಲ್ಲದಂತೆ ಆಧುನಿಕತೆಗೆ ತೆರೆದುಕೊಳ್ಳುತ್ತಿತ್ತು. ಇದನ್ನು ಅವರು ತಮ್ಮ ಮಕ್ಕಳ ಮೇಲೆ ಪರಿಣಾಮ ಬೀರುವಂತೆ ಮಾಡಿದರು. ಇದರಲ್ಲಿ ಮೊದಲನೆಯದು ಇಂಗ್ಲಿಷ್ ಶಿಕ್ಷಣ ನಂತರ ಶೀನಮಯ್ಯನ ಮಕ್ಕಳ ಹೋಟೆಲ್ ಉದ್ಯಮ ಸ್ಥಾಪನೆ ಪ್ರಮುಖವಾದುದು.

ಈ ಕುರಿತು ಕಾರಂತರು 'ಮೊದಲ ತಲೆಮಾರಿನವರು ನಿಸರ್ಗದಿಂದ ಸಂತೋಷಪಡಲಿಲ್ಲ. ಕಡಲಿನೊಡನೆ, ನದಿಯೊಡನೆ ಸೆಣಸಾಡಿ, ತಮ್ಮ ನೆಲಕ್ಕೆ ಬೆವರನ್ನು ಸುರಿಸಿ ಅನ್ನಕ್ಕಾಗಿ ಶ್ರಮಿಸುತ್ತಿದ್ದರು. ಆಗ ತುಂಬಿದ ಬಡತನ ಅವರದು. ಬಡತನದ ಜಂಜಾಟವನ್ನು ಮರೆಯುವುದಕ್ಕೆ ಒಂದೇ ದಾರಿ ವಿಧಿಯ ವಿಲಾಸದಲ್ಲಿ ನಂಬುಗೆ, ಈ ಸಂಪ್ರದಾಯದವರಲ್ಲಿ ಹೆಂಗಸರ ಬಾಳು ಕಷ್ಟದಲ್ಲಿ ಅದ್ದಿ ತೇಲಿದ್ದು.

ಎರಡನೇಯ ತಲೆಮಾರಿನಲ್ಲಿ ಜನಕ್ಕೆ ಇಂಗ್ಲಿಷ್ ವಿದ್ಯಾಭ್ಯಾಸದ ಗಾಳಿ ಬೀಸುತ್ತದೆ. ಒಂದು ಗುಂಪು ಹಳ್ಳಿಯನ್ನು ಬಿಟ್ಟು, ಪರವೂರುಗಳನ್ನು ಸೇರಿ, ಹೋಟೆಲ್‌ಗಳನ್ನು ನಡೆಸುತ್ತಾರೆ. ಇದರಿಂದ ಊರಿಗೆ ಹಣ ಬರತೊಡಗುತ್ತದೆ. ಇದರಿಂದ ಸಂಪತ್ತು ಹೆಚ್ಚುತ್ತ ಬರುತ್ತದೆ. ದುಡ್ಡಿನ ಬಲದಿಂದ, ಕೀಟಲೆಯಲ್ಲಿ ಸಂತೋಷಗೊಳ್ಳುವ ವ್ಯಕ್ತಿಗಳು ಊರಲ್ಲಿ ಉದಯಿಸುತ್ತಾರೆ. ಇನ್ನೊಂದು ಕಡೆ, *"ಲಚ್ಚನಂತಹ ವ್ಯಕ್ತಿಗಳು ಪೇಟೆಯ ಮೋಹಕ್ಕೆ ಬಲಿಬಿದ್ದು, ಹೊಸ ಆವರಣದಲ್ಲಿ ತಲೆಕೆಡಿಸಿಕೊಳ್ಳುತ್ತಾರೆ. ಇವರ ಪಾಲಿಗೆ ನಿಸರ್ಗವು ಜಡ ವಸ್ತುವೇ ಮೂರನೆಯ ತಲೆಮಾರಿನಲ್ಲಿ ಇಂಗಿಷ್ ವಿದ್ಯಾಭ್ಯಾಸ ತೀರ ಸಾಮಾನ್ಯವಾಗುತ್ತದೆ. ನಿರುದ್ಯೋಗದ ಪ್ರಶ್ನೆ ಬೆಳೆಯುತ್ತದೆ. ರಾಷ್ಟ್ರದಲ್ಲಿ ಅಶಾಂತಿ ತಲೆದೋರುತ್ತದೆ. ಇವೆಲ್ಲ ರಾಮನಂತ ಹುಡುಗನಲ್ಲಿ ಕಾಣಿಸುತ್ತವೆ. ಕೊನೆಗೆ ನಿರಾಶೆಯಿಂದ ಆತ ಹಳ್ಳಿಗೆ ಮುಖ ಮಾಡುತ್ತಾನೆ. ಇಲ್ಲೂ ರಾಮನಂಥ ವ್ಯಕ್ತಿಯಲ್ಲಿ ನಿಸರ್ಗವು ಹೆಚ್ಚಿನ ಸಂತೋಷದ ಪ್ರೇರಣೆಯಾಗುತ್ತದೆ."*[೨೦]

ಕಾರಂತು ಹೇಳುವಂತೆ ಮೊದಲನೆ ತಲೆಮಾರಿನವರಿಗೆ ಭೂಮಿ ಮತ್ತು ನಿಸರ್ಗ ಅನಿವಾರ್ಯ ಆದರೆ ಎರಡನೆ ಮತ್ತು ಮೂರನೇ ತಲೆಮಾರಿನವರಿಗೆ, ಮೊದಲು ತಲೆಮಾರಿನವರಂತೆ ಅವರಿಗೆ ನಿಸರ್ಗ ಮತ್ತು ಭೂಮಿಯ ಅಗತ್ಯವಿಲ್ಲ. ಇದಕ್ಕೆ ಕಾರಣ ಲಚ್ಚ ಮತ್ತು ರಾಮನಿಗೆ ಇದ್ದ ಎರಡು ಮುಖಗಳೇ ಆಗಿವೆ. ಅವು ಒಂದು ಇಂಗ್ಲಿಷ್ ಶಿಕ್ಷಣ ಇನ್ನೊಂದು ನಗರ ಜೀವನ ಆಗಿದೆ.

ಶೀನಮಯ್ಯನ ಮಕ್ಕಳು ಬೆಂಗಳೂರು ಬಳೇಪೇಟೆ ಮುಂತಾದ ಕಡೆ ಹೋಟೆಲ್ ತೆರೆದು ಹಣ ಸಂಪಾದಿಸುವ ಕಲೆಯನ್ನು ಕಲಿತರು. ಇದರಿಂದ ಶೀನಮಯ್ಯನ ಬಳಿ ಹಣ ಹೆಚ್ಚಿತು ಮತ್ತು ಗರ್ವ ಸಹ ಬಂದಿತು. ಇದರಿಂದ ರಾಮಐತಾಳರು ತಮ್ಮ ಮಗನಿಗೆ ವಿದ್ಯಾಭ್ಯಾಸ ಕೊಡಿಸಲು ಶಂಕರ ಐಗಳ ಮಠಕ್ಕೆ ಕಳುಹಿಸಿದರೂ ಏನೋ ಅನುಮಾನ ಸತ್ಯಭಾಮೆಗೆ 'ಇತ್ತ ಅವಳಿಗೆ ಮಾಣಿಯನ್ನು ಮನೆಯಲ್ಲಿಯೆ ಬೆಳೆಯಿಸಿಬಿಟ್ಟರೆ ಅದು ದೊಡ್ಡ ತಾಯಿಯಂತೆ ಗಂಟೆ ಮೇಯಿಸುವುದನ್ನು ಬಿಟ್ಟು ಇನ್ನಾವ ಕೆಲಸವನ್ನು ಬಿಡಬಾರದು ಎನ್ನುವ ಮಾತುಗಳಲ್ಲಿನ ಆಧುನಿಕ ಯೋಚನೆ ಮತ್ತು ತಾವು ನಂಬಿರುವ ನಿಸರ್ಗದ ಬಗ್ಗೆ ನಂಬಿಕೆಯಿಲ್ಲವೆಂಬಂತೆ ಅವಳು ಈ ಮಾತನ್ನು ಆಡುತ್ತಾಳೆ.

ಮಗು ಲಚ್ಚನ ವಿದ್ಯಾಭ್ಯಾಸಕ್ಕೆ ಸಂಬಂಧಿಸದಂತೆ ಸತ್ಯಭಾಮೆ ಮತ್ತು ಐತಾಳರು ಮಾಡುವ ಚರ್ಚೆಯೆಂದರೆ *"ನಮ್ಮ ಮಗ ವಕೀಲನಾಗಿದ್ದರೆ ಆಗುತ್ತಿತ್ತು. ತಹಶೀಲ್ದಾರನೋ, ಮಣಿಗಾರನೊ, ಸರಕಾರದ ಯಾವನಾದರೊ ನೌಕರನೋ ಆದರೆ ಸಾಕಿತ್ತು. ಈ ವೈಧೀತಿಗೆ ಬಂದೀತೇ ಎಂಬ ಆಸೆ ತೋಡಿಕೊಂಡರು. ಜಿದ್ದರಿಂದ ಐಗಳ ಮಠವೂ ಬೇಡ. ಅಧ್ಯಯನವೂ ಬೇಡ ಎಂದು ತೀರ್ಮಾನವಾಯಿತು. ಹಾಗಿದ್ದರೆ ಪಡು ಮಣ್ಣಿನ್ನೂರಲ್ಲಿ ಅಜ್ಜನ ಮನೆಗೂ ಸರಕಾರಿ ಶಾಲೆ ಹತ್ತಿರವಿದೆ. ಅಜ್ಜನೂ ಲಚ್ಚನನ್ನೂ ಹತ್ತಿರವೇ ಇರಿಸಿಕೊಂಡಾರು. ಇಲ್ಲೇ ಮಾಣಿಯಿದ್ದರೆ ಯಾಕೋ ಮಡಿಯದಂತೆ ಆದೀತು".*[೨೧] ಎಂದು ಮಾತನಾಡಿಕೊಳ್ಳುತ್ತಾರೆ.

---

೨೦. ಶಿವರಾಮ ಕಾರಂತ, ಮರಳಿ ಮಣ್ಣಿಗೆ, ಪುಟ-೨೨೨
೨೧. ಅದೇ, ಪುಟ-೧೪೪

ಈ ಹಿನ್ನೆಲೆಯನ್ನು ಗಮನಿಸಿದಾಗ ರಾಮಐತಾಳರಿಗೆ ತಾವು ಕೃಷಿಕಾರಾಗಿಯು ಮತ್ತು ವೈದಿಕ ವೃತ್ತಿಯು ಅವರ ಕಾಲಕ್ಕೆಯೇ ಇದರ ಬಗ್ಗೆ ತಿರಸ್ಕಾರ ಭಾವನೆ ಬೆಳೆದಿತ್ತು ಅನಿಸುತ್ತದೆ. ಆದ್ದರಿಂದ ತಮ್ಮ ಮಕ್ಕಳನ್ನು ಅವರು ತಮ್ಮ ವೃತ್ತಿಯಿಂದ ವಿಮುಖರನ್ನಾಗಿಸಲು ಪಣತೊಟ್ಟಂತೆ ಕಾಣುತ್ತದೆ. ಇದಕ್ಕೆ ಮುಖ್ಯ ಕಾರಣ ಹಣದ ಸಂಪಾದನೆ ಆಗಿದೆ. ಆದ್ದರಿಂದ ಅವರು ತಮ್ಮ ಮಕ್ಕಳಿಗೆ ಇಂಗ್ಲೀಷ್ ಶಿಕ್ಷಣವನ್ನು ಕೊಡುವುದರ ಮೂಲಕ ಆಧುನಿಕತೆಗೆ ತೆರೆದುಕೊಳ್ಳುತ್ತಾರೆ. ಇಲ್ಲಿ ಇಂಗ್ಲಿಷ್ ಶಿಕ್ಷಣ ಆಧುನಿಕತೆಯ ಪ್ರತಿನಿಧಿಯೆನಿಸಿದೆ. ಏಕೆಂದರೆ ತೃತೀಯ ಜಗತ್ತು ಬ್ರಿಟೀಷರ ವಸಾಹತುಶಾಹಿತ್ವಕ್ಕೆ ಒಳಗಾಗಿತ್ತು. ಅದು ಕಾಲಕಾಲಕ್ಕೆ ಮುಂದುವರೆಯುತ್ತಲೂ ಇತ್ತು. ಇದು ಪ್ರಬಲವಾದ ಕಾರಣವಾಗಿತ್ತು. ಆದ್ದರಿಂದ ರಾಮಐತಾಳರು ಲಚ್ಚನಿಗೆ ಇಂಗ್ಲಿಷ್ ಶಿಕ್ಷಣ ಕೊಡಿಸಿದರು. ಈ ಕ್ರಿಯೆ ರಾಮ ಐತಾಳರ ಸಂಸ್ಕೃತಿ ಮತ್ತು ಸಂಪ್ರದಾಯಕ್ಕೆ ಮುಖಾಮುಖಿ ಯಾಗುತ್ತದೆ. ಲಚ್ಚನನ್ನು ದೊಡ್ಡ ತಹಶೀಲ್ದಾರನನ್ನಾಗಿ ಮಾಡಬೇಕೆಂದು ಕನಸು ಕಂಡಿದ್ದ ರಾಮ ಐತಾಳ ಮತ್ತು ಸತ್ಯಭಾಮೆಗೆ ನಿರಾಶೆ ಕಾದಿತ್ತು. ಲಚ್ಚ ಗ್ರಾಮೀಣ ಸಂಸ್ಕೃತಿಯಿಂದ ತಪ್ಪಿಸಿಕೊಂಡು ಹೊಸನಾಗರೀಕತೆಯ ಉಡುಪಿಯಂತಹ ನಗರವನ್ನು ಸೇರುತ್ತಾನೆ. ಅಲ್ಲಿ ಹೋಟೆಲ್ ಕ್ಲಬ್ ನಂತಹ ಅಡ್ಡೆಗಳಿಗೆ ಮತ್ತು ಕಾಮ ಪೀಡಿತನಾಗಿ ಹಾದಿತಪ್ಪುತ್ತಾನೆ. ಇದರಿಂದ ಇವನ ಜೀವನ ವೃತ್ತಿಯು ವಿಲಾಸಿ ಜೀವನದತ್ತ ಸಾಗುತ್ತದೆ.

ಕಾರಂತರು ಲಚ್ಚನಲ್ಲಿ ಉಂಟಾದ ಆಧುನಿಕ ಚಹರೆಗಳ ಬಗ್ಗೆ ದಿನಗಳು ಸರಿದಂತೆ, ತಿಂಗಳುಗಳು ಸರಿದಂತೆ, ಈ ಹೊಸ ಜೀವನವು ಅವನಿಗೆ ಒಗ್ಗಿತು. "*ಪೇಟೆಯ ಜನರ ಚುರುಕುತನ, ಮಾತುಗಾರಿಕೆ ಅವನಲ್ಲಿಯೂ ಕಂಡು ಬಂದವು. ಹೊಸಬಗೆಯ ಇಂಗ್ಲಿಷ್ ಓದಿನಲ್ಲೊಂದು ಬಗೆಯ ಹೆಮ್ಮೆಯು ಅವನಿಗೆ ಹುಟ್ಟಿತು. ಹಳ್ಳಿಯವರು ಎದುರಾಗಿ ಬರುವಾಗಲೆಲ್ಲ ಗೆಳೆಯರೊಡನೆ ಹಟ ಹಿಡಿದು ಇಂಗ್ಲಿಷ್‌ನ್ನೇ ಮಾತನಾಡುತ್ತಿದ್ದನು*"[೨೨] ಇದು ರಾಮ ಐತಾಳರ ಮತ್ತು ಅವರ ಕುಟುಂಬದವರಿಗೆ ತುಂಬಾ ಸಂತೋಷವನ್ನು ತರುತ್ತಿತ್ತು. ಏಕೆಂದರೆ ಅದುವರೆಗೆ ಕಂಡಿದ್ದ ಅವರ ವೃತ್ತಿಯ ಬಗ್ಗೆ ಯಾವುದೇ ವಿಶೇಷ ಭಾವನೆಗಳಿರಲಿಲ್ಲ. ಆದರೆ ಇದು ಅವರಿಗೆ ವಿಶೇಷವೆನಿಸಿತು. ಲಚ್ಚನನ್ನು ಇಂಗ್ಲಿಷ್ ಶಿಕ್ಷಣವು ಬೆಪ್ಪನನ್ನಾಗಿಸಿತ್ತು.

ನಾಗವೇಣಿಯನ್ನು ಮದುವೆಯಾದ ಲಚ್ಚನು ಮನೆಯಲ್ಲಿಯು ಸರಿಯಾಗಿ ದುಡಿಯದೆ, ಆಚೆಯು ದುಡಿಯದೆ ಪಟ್ಟಣದಿಂದ ಗ್ರಾಮಕ್ಕೆ, ಗ್ರಾಮದಿಂದ ಪಟ್ಟಣಕ್ಕೆ ತಿರುಗುವುದರ ಮುಖಾಂತರ ದ್ವಂದ್ವ ಗುಣವನ್ನು ತೋರಿಸುತ್ತಾನೆ. ಮನೆಗೆ ಬಂದ ಲಚ್ಚ ಸ್ವಲ್ಪ ದಿವಸ ನಿಸರ್ಗದೊಂದಿಗೆ ಬೆರೆಯುತ್ತಾನೆ, ಉಳುಮೆ ಮಾಡುತ್ತಾನೆ. ಈ ಕಡೆ ಶೀನಮಯ್ಯನ ಮಗನು ಲಚ್ಚನ ಬಲೆಗೆ ಬಿದ್ದು ಅವರ ಅಣ್ಣಂದಿರ ಮೇಲೆ ಜಗಳ ಮಾಡುತ್ತಾನೆ. ಈತನಿಗೂ ಸಹ ನಿಸರ್ಗದ ಬಗ್ಗೆ ಜಿಗುಪ್ಸೆ ಆತನು ಬಂದು ಲಚ್ಚನ ಬಳಿ "*ಲಚ್ಚಣ್ಣಯ್ಯ ನನಗೆ ಈ ಊರೇ ಹಿಡಿಸುವುದಿಲ್ಲ. ಇಲ್ಲಿ ಮನೆಯಲ್ಲಿದ್ದರೆ, ಈ ಆಸ್ತಿ*

೨೨. ಅದೇ, ಪುಟ-೨೩೨

ನಾಲ್ಕು ದಿನಕ್ಕೂ ಸಾಲದು. ಅಣ್ಣನು ಹೋಟೆಲು ವ್ಯವಹಾರವನ್ನು ಬೆಳೆಯಿಸುತ್ತ ಹಣ ಗಳಿಸುತ್ತಿರುವಾಗ ನಾನು, ಊರಲ್ಲಿ ಬಿದ್ದಿರಬೇಕೆ? ಅಲ್ಲದೆ, ಅವನ ಮೈಸೂರಲ್ಲೂ ಒಂದು ಹೊಸ ಹೋಟೆಲ್ ತೆರೆದಿದ್ದಾನೆ. ಅಲ್ಲಿ ತುಂಬಾ ವ್ಯವಹಾರವಂತೆ."[೨೩] ಹೀಗೆ ವೈಶಾಖ ಮಾಸದ ವೇಳೆಗೆ ಕೋಡಿಯಲ್ಲಿನ ಭೂಮಿಯನ್ನೂ ಯಾರಿಗಾದರೂ ಗೇಣಿಗೆ ವಹಿಸಿಕೊಟ್ಟು ಮೈಸೂರಿನ ಅಣ್ಣನ 'ಶ್ರೀರಾಮ ರೆಸ್ಟೋರೆಂಟ್'ನ ಮುಂದೆ 'ಡಿಲ್ಲಿ ದರ್ಬಾರು' ಹೋಟೆಲ್‌ನ್ನು ತೆರೆದನು. ಇತ್ತ ಲಚ್ಚನು ತನ್ನ ಕಂತ್ರಿ ಬುದ್ಧಿ ಮತ್ತು ನಗರ ಜೀವನದ ಬುದ್ಧಿಯ ನಯವಾದ ಮಾತುಗಳಿಂದ ಆಸ್ತಿಯನ್ನು ಆಕೆಯ ಹೆಸರಿನಿಂದ ತನ್ನ ಹೆಸರಿಗೆ ಮಾಡಿಸಿಕೊಂಡನು. ರಾಮ ಐತಾಳರು ಇದಕ್ಕಿಂತ ಮುಂಚೆ ಲಚ್ಚನ ವಿಲಾಸ ಜೀವನವನ್ನು ಮತ್ತು ಅವನ ತೈನಾತಿಗಳನ್ನು ಕಂಡು ತನ್ನ ಆಸ್ತಿಯನ್ನು ಇವನು ಕಳೆಯುತ್ತಾನೆ ಎಂಬ ಭಯ ಉಂಟಾಗಿ ಇದ್ದ ಆಸ್ತಿಯನ್ನು ಸೊಸೆ ನಾಗವೇಣಿ ಹೆಸರಿಗೆ ಮಾಡಿಸಿ ಮರಣ ಹೊಂದುತ್ತಾರೆ. ಇದನ್ನು ಅರಿತಿದ್ದ ಲಚ್ಚ ಅವಳ ಹೆಸರಿನಿಂದ ತನ್ನ ಹೆಸರಿಗೆ ಆಸ್ತಿಯನ್ನು ಮಾಡಿಸಿಕೊಂಡನು. ಇಷ್ಟರೊಳಗೆ ಶೀನಯ್ಯನು ತೀರಿ ಮಗನು ಮತ್ತೊಮ್ಮೆ ಊರಿಗೆ ಬಂದು ಊರಿನಲ್ಲಿ ತನ್ನ ಆಸ್ತಿಯು ಹೊಣೆಯ ಸಾಲವನ್ನು ಎತ್ತಿ ಡಿಲ್ಲಿ ದರ್ಬಾರಿನ ಬ್ರಾಂಚುಗಳನ್ನು ಬೆಂಗಳೂರಿನಲ್ಲಿ ತೆರೆಯುವ ಸಾಹಸಕ್ಕೆ ಮುಂದಾದನು. ಇದನ್ನು ಅರಿತ ಲಚ್ಚನು ಅವನೊಂದಿಗೆ ಮನೆಯಲ್ಲಿ ಉಡುಪಿಗೆ ಹೊರಡುತ್ತೇನೆ ಎಂದು ಹೊರಟವನು ಮನೆಗೆ ಹಿಂತಿರುಗಿ ಬರಲೇ ಇಲ್ಲ.

ಈ ಸಂಗತಿಗಳನ್ನು ನೋಡಿದಾಗ ಶಿವರಾಮಕಾರಂತರು 'ತಮ್ಮ ಹುಚ್ಚು ಮನಸ್ಸಿನ ಹತ್ತು ಮುಖದಲ್ಲಿ ಹೇಳಿರುವಂತೆ ಅಂದಿನ ಜನತೆಗೆ ಇಂಗ್ಲಿಷ್ ಶಿಕ್ಷಣ ಮತ್ತು ಅನ್ನದ ಪ್ರಶ್ನೆ ಕಾಡುತ್ತಿತ್ತು. ಆ ಮನಸ್ಸು ಇಟ್ಟುಕೊಂಡು ರಾಮ ಐತಾಳ ಲಚ್ಚನಿಗೆ ಇಂಗ್ಲಿಷ್ ಶಿಕ್ಷಣ ಕೊಡಿಸಿದ. ಆದರೆ ಇಂಗ್ಲಿಷ್ ಶಿಕ್ಷಣವನ್ನು ಲಚ್ಚ ದುರುಪಯೋಗಪಡಿಸಿಕೊಂಡನು. ಆಧುನಿಕ ಜಗತ್ತಿನ ವಿಲಾಸ ಜೀವನಕ್ಕೆ ಮಾರು ಹೋದನು. ಆಧುನಿಕ ನೆಲೆಗಳಾದ ಸಿನಿಮಾ, ಕ್ಲಬ್, ಇಸ್ಪೀಟು, ವೇಶ್ಯಾವಾಟಿಕೆಯಲ್ಲಿ ತೊಡಗಿದ. ಅದರೊಂದಿಗೆ ಗ್ರಾಮೀಣ ಮುಗ್ಧ ಪ್ರತೀಕಗಳಾದ ಸರಸೋತಿ ಸತ್ಯಭಾಮೆ ಮತ್ತು ನಾಗವೇಣಿಯಂತಹವರನ್ನು ನಂಬಿಸಿ ಬಲಿ ಕೊಟ್ಟನು. ತನ್ನ ತಂದೆ ರಾಮ ಐತಾಳರ ಕನಸನ್ನು ಮಣ್ಣು ಪಾಲು ಮಾಡಿದ. ಇದಕ್ಕೆಲ್ಲಾ ಕಾರಣ ಅವನಿಗಿದ್ದ ಹಣದ ಮೋಹ ಮತ್ತು ಹೆಣ್ಣಿನ ಮೋಹವೇ ಆಗಿತ್ತು. ಇವನೊಬ್ಬ ಮಾನಸಿಕ ಅಸ್ವಸ್ಥನಂತೆ ಕಂಡು ಬರುತ್ತಾನೆ.

ಈ ಕುರಿತು ಜಿ.ಎಸ್. ಅಮೂರರು "*ಗ್ರಾಮೀಣ ಸಂಸ್ಕೃತಿಯ ಮೌಲ್ಯ ಕ್ರಮದ ಬಿಗಿ ಹಿಡಿತದಿಂದ ತಪ್ಪಿಸಿಕೊಂಡ ಲಚ್ಚನ ಜೀವನ ತಗ್ಗಿದ್ದಲೆಲ್ಲ ಹರಿಯತೊಡಗುತ್ತದೆ. ಲಚ್ಚನಲ್ಲಿ ಹೊಣೆಗಾರಿಕೆಯ ಭಾವನೆ ಬಹಳ ಕಡಿಮೆ. ಇಂದ್ರಿಯಿಕ ಅನುಭವದ ಬೆನ್ನುಹತ್ತುವುದೆ ಅವನ ಪ್ರಕೃತಿಧರ್ಮ. ಇದು ಬ್ರಾಹ್ಮಣ ಆದರ್ಶಕ್ಕಿಂತ ಬಹಳ ದೂರವಾದುದು. ಸಣ್ಣವನಿದ್ದಾಗ ಬಾಯಿಚಪಲ. ದೊಡ್ಡವನಾದ ಮೇಲೆ ಹಣದಾಸೆ, ಕಾಮುಕ ಜೀವನ ಇವು ಅವನ*

೨೩. ಅದೇ. ಪುಟ-೨೨೮

ಜೀವನದ ಗತಿಯನ್ನು ನಿರ್ಧರಿಸುತ್ತವೆ. ಆದರೂ ತನಗೆ ಅರಿವಿಲ್ಲದೆಯೆ 'ಮೋಜಿನ ಜೀವನ' ಪ್ರತಿಪಾದಿಸುತ್ತಾನೆ. 'ಗಮ್ಮತ್ತು' ಕೌಟುಂಬಿಕ ಹಾಗೂ ಸಾಮಾಜಿಕ ಸಂದರ್ಭಗಳಿಗೆ ಹೊರತಾದದು. ಈ ಮೌಲ್ಯಗಳಿಂದಾಗಿ ಲಚ್ಚ ತನ್ನ ಆವರಣದಲ್ಲಿ ಹೊಸ ರೀತಿಯ ಬಿಕ್ಕಟ್ಟು ಹುಟ್ಟಿಕೊಳ್ಳುವುದಕ್ಕೆ ಕಾರಣವಾಗುತ್ತಾನೆ."[೨೪] ಎನ್ನುತ್ತಾರೆ. ಆದ್ದರಿಂದ ಲಚ್ಚನಂತಹ ವ್ಯಕ್ತಿಗಳು ಇಂಗ್ಲಿಷ್ ಶಿಕ್ಷಣ ಪಡೆದರೆ ವರಟಯ್ಯ, ನರಸಿಂಹನಂತಹವರು ವಸಾಹತುಶಾಹಿಯ ಇನ್ನೊಂದು ಮುಖವಾದ ಬಂಡವಾಳಶಾಹಿತ್ವಕ್ಕೆ ಮಾರು ಹೋಗಿ ಹಣ ಸಂಪಾದನೆಯಲ್ಲಿ ತೊಡಗುತ್ತಾರೆ. ಆದರೆ ಲಚ್ಚನಿರಬಹುದು ಅಥವಾ ವರಟಯ್ಯನಿರಬಹುದು ಇವರು ಜೀವನದಲ್ಲಿ ವಿವಿಧ ಮುಖಗಳನ್ನು ಕಾಣುತ್ತಾರೆ. ಆದರೆ ಕಡೆಗೂ ಜೀವನವೆಂಬ ಪರೀಕ್ಷೆಯಲ್ಲಿ ತೇರ್ಗಡೆಯಾಗುವುದಿಲ್ಲ. ಬದಲಾಗಿ ತಮ್ಮನ್ನು ನಂಬಿದವರನ್ನು ಪೀಡನೆಗೆ ಒಳಪಡಿಸಿ ಸಂತೋಷ ಪಡುತ್ತಾರೆ. ಇದು ಅವರ ವಿಕೃತ ಮನಸ್ಸು ಆಗಿದೆ. ಮೊದಲನೆಯ ತಲೆಮಾರಿನವರಿಗೆ ನಿಸರ್ಗ ಜೀವನವು ಅನಿವಾರ್ಯವಾಗಿತ್ತು. ಆದರೆ ಇವರಿಗೆ ಅನಿವಾರ್ಯವಲ್ಲ. ಬದಲಾಗಿ ಅದನ್ನು ನೋಡಿ ಸಂತೋಷ ಪಡುತ್ತಾರೆಯೇ ಹೊರತು ಅದರೊಂದಿಗೆ ಬೆರೆಯಲು ಹಿಂದೇಟು ಹಾಕುತ್ತಾರೆ. ಹೀಗೆ ಮೂರನೇ ತಲೆಮಾರಿನ ಜನತೆಯು ಇಂಗ್ಲಿಷ್ ಶಿಕ್ಷಣ ಮತ್ತು ಆಧುನಿಕತೆಯ ಪ್ರಭಾವಕ್ಕೆ ಒಳಗಾಗಿ ಕಷ್ಟಗಳನ್ನು ಅನುಭವಿಸುತ್ತಾರೆ.

ಒಂದು ಮತ್ತು ಎರಡನೆ ತಲೆಮಾರಿನ ಜನತೆಯಲ್ಲಿ ಅವರ ಜೀವನವು ಏರಿಳಿತಗಳಿಂದ ಸಾಗಿದರೆ ಮೂರನೆ ತಲೆಮಾರಿನ ರಾಮನಲ್ಲಿ ನಿಸರ್ಗದ ಸಂಬಂಧ ಮತ್ತು ಆಧುನಿಕ ಪ್ರಭಾವವು ಸಾಮಾನ್ಯ ಸಂಗತಿಯಾಗಿರುತ್ತದೆ. ರಾಮನು ೨೦ನೇ ಶತಮಾನದ ನಾಗರಿಕನಾಗಿ ಕಂಡುಬರುತ್ತಾನೆ. ಇವನು ಓದುವ ಕಾಲಕ್ಕೆ ಇಂಗ್ಲಿಷ್ ಶಿಕ್ಷಣವೆನ್ನುವುದು ಸಾಮಾನ್ಯ ಸಂಗತಿಯಾಗಿರುತ್ತದೆ. ರಾಮ ಹುಟ್ಟಿ ಎರಡು ವರ್ಷಕ್ಕೆ ಕಡಲಿನ ಬಗ್ಗೆ ಒಲವು ಇತ್ತು. ತನ್ನ ಪ್ರೌಢಶಿಕ್ಷಣವನ್ನು ಮುಗಿಸಿ ಮದ್ರಾಸ್ ಮತ್ತು ಮುಂಬೈ ಸೇರುವುದು ಅಲ್ಲಿ ಅವನು ನಿಸರ್ಗವನ್ನು ನೋಡುವುದರಲ್ಲಿ ಆಧುನಿಕ ಮನಸ್ಸು ಕಂಡು ಬರುತ್ತದೆ. ಇಷ್ಟರೊಳಗೆ ಭಾರತದಲ್ಲಿ ಸಾಮಾಜಿಕ, ರಾಜಕೀಯ, ಆರ್ಥಿಕ ನೆಲೆಗಳಲ್ಲಿ ಅನೇಕ ಬದಲಾವಣೆಗಳು ಉಂಟಾಗಿರುತ್ತವೆ.

ಜಿ.ಎಸ್ ಅಮೂರವರು ರಾಮನ ಬಗ್ಗೆ ಬರೆಯುತ್ತಾ– *"ಕೋಡಿಯಂತಹ ಒಂದು ಸಣ್ಣ ಹಳ್ಳಿಯಿಂದ ಪ್ರಾಂಭವಾದ ವಸ್ತು ವಿಸ್ತಾರವಾದ ದೊಡ್ಡ ನಗರಗಳನ್ನು ಒಳಗೊಳ್ಳುತ್ತದೆ. ರಾಮ ಮರಳಿ ಬಂದರೂ ರಾಮ ಐತಾಳರಂತಹ ಪುರೋಹಿತ ವೃತ್ತಿಯನ್ನು ಕೈಗೊಳ್ಳುವುದಿಲ್ಲ. ಅವನೊಬ್ಬ ಶಿಕ್ಷಕ ಅದಕ್ಕೂ ಹೆಚ್ಚಾಗಿ ಕಲಾವಿದ. ರಾಮನ ವಿಶಾಲವಾದ ಕ್ಷಿತಿಜಕ್ಕು ರಾಮ ಐತಾಳರ ಸೀಮಿತ ಕಾರ್ಯ ಕ್ಷೇತ್ರಕ್ಕೂ ಇದ್ದ ಅಂತರವನ್ನೇ ಅವರಿವರ ಮನೋಧರ್ಮದಲ್ಲಿ ಮೌಲ್ಯ ಕ್ರಮಗಳಲ್ಲಿ ಅನುಭವದ ಮಟ್ಟದಲ್ಲಿ ನಾವು ಕಾಣಬಹುದು. ರಾಮನ ಸಂವೇದನೆಯ*

---

೨೪. ಜಿ.ಎಸ್.ಅಮೂರ, ಕನ್ನಡ ಕಥನ ಸಾಹಿತ್ಯ ಕಾದಂಬರಿ, ಪುಟ – ೧೩೩

ಆಧುನಿಕತೆಯನ್ನಾಗಲಿ, ಶ್ರೀಮಂತಿಕೆಯನ್ನಾಗಲಿ ನಾವು ರಾಮ ಐತಾಳರಲ್ಲಿ ನಿರೀಕ್ಷಿಸುವಂತಿಲ್ಲ. ಈ ಅಂಶವನ್ನು ಕಾರಂತರು ಬಹು ಚೆನ್ನಾಗಿ ಲಕ್ಷಿಸಿದ್ದಾರೆ"[೨೫] ಎಂದಿದ್ದಾರೆ.

ಈ ಅಂಶಗಳನ್ನು ಗಮನಿಸಿದಾಗ ರಾಮ ಬಿ.ಎ ಓದಲು ಮದ್ರಾಸನ್ನು ಸೇರುವುದು ಅಲ್ಲಿ ಸಮುದ್ರವನ್ನು ನೋಡಿ ಮುಂಬೈನ ಸಮುದ್ರವನ್ನು ನೋಡಿ ಅಲ್ಲಿ 'ನೋವ' ಎಂಬ ಸಂಗೀತ ಗಾರಳಿಂದ ಸಂಗೀತ ಕಲಿತು ಯಶಸ್ವಿಯಾಗುವುದು. ಆದರೆ ಯಾವುದೇ ರೀತಿಯ ತೃಪ್ತಿಯಿಲ್ಲ ಅವನಲ್ಲಿ ಯಾವುದೋ ಕೊರತೆ ತಾಂಡವಾಡುತ್ತಿದೆ. ಅದಕ್ಕಾಗಿ ಮುಂಬೈನ *"ಚೌಪಾಟಿಯ ಕಡಲ ತಡಿಯಲ್ಲಿ ಬಂದು ಕುಳಿತನು ಅಲ್ಲಿನ ಮರಳು ಮದ್ರಾಸಿನ ಕಡಲಿನ ಉಸುಬಿನಂತೆ ಇದ್ದಿರಲಿಲ್ಲ ಎದುರಿನ ಕಡಲ ನೀರು ಕೊಳೆಯನ್ನು ಹೊತ್ತು ಸಹಜ ನಗುವನ್ನು ಕಳೆದುಕೊಂಡಿತ್ತು. ನಗರವನ್ನು ಸೇರಿಕೊಂಡ ಆ ಕಡಲಿಗೆ. ಸ್ವಾಭಾವಿಕವಾದ ಉಕ್ಕು, ಸುಕ್ಕುಗಳಾವುವೂ ಇರಲಿಲ್ಲ. ಮಳೆ ನೀರಿನ ಭರದಿಂದ ಕದಡಿ ಕಲಕಿದ ಕೆರೆಯಂತಿತ್ತು ಅಲ್ಲಿನ ಸಮುದ್ರ"*[೨೬]

ರಾಮನ ಪಾತ್ರದಲ್ಲಿ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ, ಆರ್ಥಿಕ ಬದಲಾವಣೆಯಿಂದ ರೂಪುಗೊಂಡ ವ್ಯಕ್ತಿತ್ವ ಕಂಡುಬರುತ್ತದೆ. ಆತನು ತಾನು ಪಡೆದ ಶಿಕ್ಷಣದ ಪರಿಣಾಮವಾಗಿ ಉದ್ಯೋಗವನ್ನು ಆಧುನಿಕ ನೆಲೆಯಲ್ಲಿ ಹುಡುಕುತ್ತಾನೆ. ಆದರೆ ಅದು ಅಷ್ಟು ಸುಲಭವಲ್ಲ. ಕಾರಣ ಸ್ಪರ್ಧೆ ಆಗಲೇ ಆಧುನಿಕ ಉದ್ಯೋಗ ಜಗತ್ತಿನಲ್ಲಿ ತೀವ್ರವಾಗಿರುತ್ತದೆ. ಇದನ್ನು ರಾಮ ಕಾಲಕಳೆದಂತೆ ಅರ್ಥೈಸಿಕೊಳ್ಳುತ್ತಾನೆ. ಆದ ಕಾರಣವಾಗಿ ಶಿಕ್ಷಕನಾಗಿ ಚಿತ್ರಕಲೆಯನ್ನು ಕಲಿಯುತ್ತಾನೆ. ಇದರಿಂದ ಅನ್ನ ದೊರೆಯಲಾರದೆಂದು ತಿಳಿದ ಅಲ್ಲದೆ ಅವನಿಗೆ ತನ್ನ ತಾಯಿಗೆ ಮುದಿತನದಲ್ಲಿ ಮಾಡಬೇಕಾದ ಸಹಾಯದ ಪ್ರಶ್ನೆ ಕಾಡಿತು. ಆದ್ದರಿಂದ 'ಮರಳಿ ಮಣ್ಣಿಗೆ' ಅಂದರೆ ಮುಂಬೈಯಿಂದ ಕೋಡಿಗೆ ಹಿಂತಿರುಗಿದ.

ಈ ಹಿನ್ನೆಲೆಯಲ್ಲಿ ಗಮನಿಸಿದ ವ್ಯಕ್ತಿಯು ತಾನು ಎಷ್ಟೇ ಬುದ್ಧಿವಂತನಾದರೂ ಆಧುನಿಕತೆಯನ್ನು ನಿಸರ್ಗದೊಂದಿಗೆ ಬೆರೆಸಿ ಬದುಕಿದರೂ ಸಹ ನಿಸರ್ಗವನ್ನು ಬಿಟ್ಟು ಜೀವಿಸಲು ಸಾಧ್ಯವೇ ಇಲ್ಲ ಎನಿಸುತ್ತದೆ. ಆದರೆ ರಾಮ ನಿಸರ್ಗದಲ್ಲಿ ಆಧುನಿಕ ವ್ಯಕ್ತಿಯಾಗಿ ಬೆರೆತರೂ ತಾತ ರಾಮ ಐತಾಳರಂತೆ ಅವನ ಕಾರ್ಯಕ್ಷೇತ್ರ ಸೀಮಿತವಾದುದಲ್ಲ. ಬದಲಾಗಿ ಅವನಲ್ಲಿ ವಿಶಾಲ ದೃಷ್ಟಿಯಿದೆ. ಆಧುನಿಕ ಶಿಕ್ಷಣಕ್ಕೆ ತಕ್ಕಂತೆ ವ್ಯವಸಾಯದೊಂದಿಗೆ ಕಡಲನ್ನು ನೋಡುತ್ತಾನೆ. ಹಳ್ಳಿತನವನ್ನು ಕಾಣುತ್ತಾನೆ, ಸಂತೋಷಪಡುತ್ತಾನೆ. ಅದನ್ನು ತನ್ನ ಕುಂಚದಲ್ಲಿ ಚಿತ್ರಿಸುತ್ತಾನೆ.

ಕಾರಂತರು ಹೀಗೆ ನಿಸರ್ಗ ಮಾನವ ಸಂಬಂಧಗಳಲ್ಲಿ ಆಧುನಿಕ ಪ್ರವೇಶವನ್ನು ಮೂರು ತಲೆಮಾರುಗಳಲ್ಲಿ ವೈವಿಧ್ಯಮಯವಾಗಿ ತರುತ್ತಾರೆ. ಕಲಾವಿದನಾಗಿ ರಾಮನನ್ನು ೨೦ನೇ ಶತಮಾನದ ಕಲಾವಿದನಾಗಿ ಭವಿಷ್ಯದ ವ್ಯಕ್ತಿಯನ್ನಾಗಿ ಕಾಣುತ್ತಾರೆ.

---

೨೫. ಟಿ.ಪಿ.ಅಶೋಕ (ಸಂ), ಈ ಶತಮಾನದ ನೋಟ ಶಿವರಾಮ ಕಾರಂತ, ಪುಟ-೧೧೫

೨೬. ಶಿವರಾಮ ಕಾರಂತ, ಮರಳಿ ಮಣ್ಣಿಗೆ, ಪುಟ-೩೮೩-೩೮೪

'ಮೈ ಮನಗಳ ಸುಳಿಯಲ್ಲಿ' ಕಾದಂಬರಿಯಲ್ಲಿ ಕಾರಂತರು ಮೂರು ತಲೆಮಾರುಗಳ ಕಥೆಯನ್ನು ಹೇಳುತ್ತಾರೆ. ಅವರು ವೇಶ್ಯೆಯರ ಜೀವನವನ್ನು ಕಣ್ಣಾರೆ ಕಂಡವರು. ಅವರ ಶೋಷಣೆಯನ್ನು ಸಾಮಾಜಿಕ ನೆಲೆಯಲ್ಲಿ ಸ್ವತಃ ಕಂಡವರು ಅದನ್ನು ಕುರಿತು ಕಾರಂತರು ವೇಶ್ಯೆಯೊಬ್ಬಳ ಮಾನಸಿಕ ಮತ್ತು ಲೈಂಗಿಕ ಜೀವನದಲ್ಲಿ ದೊರೆತ ಸ್ನೇಹ ಸಂಬಂಧವನ್ನು ತೋರಿಸಿಕೊಡುತ್ತಾರೆ ಈ ಸಮಸ್ಯೆಯ ಹಲವಾರು ಮುಖಗಳನ್ನು ಸೂಚಿಸಿದ್ದಾರೆ. *"ವಾಸ್ತವವಾಗಿ ಅಲ್ಲಿ ಕಾಣಿಸುವ ಪ್ರಕ್ರಿಯೆಗಳು, ಸನ್ನಿವೇಶಗಳು ವಿಭಿನ್ನ ಪುರುಷರನ್ನೂ ತಂದು ಮನೋದೇಹಿಯಾದ ಅವಳ ಜೀವನದಲ್ಲಿ ಕಾಮ ಜೀವನದಲ್ಲಿ ಕಾಮ ಪ್ರೇಮದ ವಿವಿಧ ರೂಪದ ಚಿತ್ರಗಳನ್ನೊದಗಿಸಿದ್ದೇನೆ."*[೨೭]

ಈ ಕಾದಂಬರಿಯ ಮುಖ್ಯ ಪಾತ್ರಗಳಲ್ಲಿ ಮಂಜುಳೆ, ಚಂದ್ರಿ ಪ್ರಮುಖರು. ಮಂಜುಳೆ ಭವಾನಿಯ ಮಗಳು ಈಕೆಯ ಮನಸ್ಸು ೨೦ ನೇ ಶತಮಾನದ ಮನಸ್ಸಾಗಿ ಮಾತನಾಡುತ್ತದೆ. ಆದರೆ ಇಲ್ಲಿ ಮಂಜುಳೆಯ ಲೈಂಗಿಕತೆಯ ವಿಷಯವಿರಬಹುದು ಅಥವಾ ಮೂರನೇ ತಲೆಮಾರಿನ ವಿದ್ಯಾವಂತೆ ಚಂದ್ರಿಯ ಲೈಂಗಿಕ ಭಾವನೆಗಳ ವಿಷಯಕ್ಕೆ ಸಂಬಂಧಿಸಿರಬಹುದು, ಮಂಜುಳೆಯೆ ಎಲ್ಲಾ ರೀತಿಯಾಗಿಯೂ ತನ್ನ ಬಳಿ ಸುಖವನ್ನು ಅನುಭವಿಸಿದವರ ಯೋಗ್ಯತೆಯನ್ನು ಅಳೆಯುತ್ತಾಳೆ. ಅವಳು ಬಂದ ವಿಕಟ ಪುರುಷರ ಮಾನಸಿಕ ದಾಹ ಮತ್ತು ದೈಹಿಕ ದಾಹ ಸುಖವನ್ನು ನೀಡಿದ ಮತ್ತು ಸುಖಪಟ್ಟ ಪುರುಷರ ಬಗ್ಗೆ ಮಾತನಾಡುತ್ತಾಳೆ. ಇದನ್ನು ಮಂಜುಳೆ ಪ್ರೌಢಾವಸ್ಥೆಯಲ್ಲಿದ್ದಾಗ ಮೊದಲು ಪ್ರವೇಶಿಸಿದ ಗಂಡು ಕಡಲೂರು ವಾಸದೇವ, ಎರಡನೆಯವನು ಉಳ್ಳೂರು ಸುಬ್ರಾಯ, ಮಂಜುಳೆಗೆ ತುಂಬಾ ಆತ್ಮೀಯರೆನಿಸಿದ ಮರುಗೋಡು ನಂಜಪ್ಪ, ಸ್ವಾಮಿ ಲಕ್ಷ್ಮಣತೀರ್ಥರು ಪ್ರಮುಖರು.

ಮಂಜುಳೆಯ ಆತ್ಮಕಥೆ ತೆರೆದುಕೊಳ್ಳುವುದು ಮಂಜುಳೆಯ ಮೊಮ್ಮಗಳು ಚಂದ್ರಿಯು ಅದನ್ನು ಓದಿಕೊಳ್ಳುವ ಮೂಲಕ ಈಕೆ ಪ್ರೌಢಶಾಲೆಯವರೆಗೆ ಕಲಿತವಳು. ತನ್ನ ತಾಯಿ ಶಾರಿಯ ಬಲವಂತಕ್ಕೆ ಬಲಿಯಾಗದೆ ವೇಶ್ಯೆಯಾಗದೆ ಇದ್ದವಳು. ಏಕೆಂದರೆ ಶಾರಿಯು ತನ್ನ ಅಮ್ಮ ಮಂಜುಳೆಯಂತೆ ಮನಸ್ಸು ದೇಹಗಳೆರಡರ ಅಂತರವನ್ನು ಕಾಯ್ದುಕೊಳ್ಳದೆ, *"ಕಸುಬಿನ ಮರ್ಮವನ್ನು ಮರೆತು ಬಾಳನ್ನು ಆರಂಭದಲ್ಲೇ ಅಗ್ಗಕ್ಕೆ ಮಾರಿಕೊಂಡ ಶಾರಿ ತನ್ನ ಮೈ ಬೇರೆ ಮನಸು ಬೇರೆ ಎಂದು ತಿಳಿಯದೇ ಬೇಕಾದ ಪರಿಸ್ಥಿತಿ ಉಂಟಾಯಿತು"*[೨೮] ಏಕೆಂದರೆ ಇಷ್ಟರೊಳಗೆ ಆಕೆಯು ತನ್ನ ಆಸ್ತಿ ಹಿತ್ತಲಿನ ಮನೆಯನ್ನು ಕಳೆದುಕೊಂಡಿದ್ದಲ್ಲದೆ. ತನ್ನ ಮನಸ್ಸು ಮತ್ತು ಶೀಲವನ್ನು ಕಳೆದುಕೊಂಡಿರುತ್ತಾಳೆ. ಇದು ಅವಳ ಮನೆಯ ಗಂಗಕ್ಕನಿಗೆ ತಿಳಿದು ಎಚ್ಚರಿಕೆ ನೀಡಿದರು, ಶಾರಿಯು ಇದನ್ನು ಕೇಳುವುದಿಲ್ಲ. ಈಗ ಪಶ್ಚಾತ್ತಾಪ ಪಡುತ್ತಿದ್ದಾಳೆ. ಈ ಪಶ್ಚಾತ್ತಾಪವನ್ನು ಕಳೆಯಲು ಮತ್ತು ಮತ್ತೆ ಆಸ್ತಿಯನ್ನು ಸಂಪಾದಿಸಲು ತನ್ನ ಮಗಳನ್ನು ಕುಲವೃತ್ತಿಗೆ ಇಳಿಸಲು ಪ್ರಯತ್ನಿಸುತ್ತಾಳೆ. ಇದರ

---

೨೭. ಬಿ.ಮಾಲಿನಿ ಮಲ್ಯ (ಸಂ), ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ, ಸಂಪುಟ-೩೪, ಪುಟ-೧೪೩

೨೮. ಶಿವರಾಮ ಕಾರಂತ, ಮೈಮನಗಳ ಸುಳಿಯಲ್ಲಿ, ಪುಟ-೨೬೨

ಹಿಂದೆ ಕಂದಾವರದ ಶ್ಯಾಮಣ್ಣನಿದ್ದ, ಈತ ಕೋರ್ಟಿನಿಂದ ಶಾರಿಯ ಮನೆಯ ಹಿತ್ತಲಿಗೆ ಸೋಮಯ್ಯ ಪಟೇಲರು ಡಿಕ್ರಿ ತಂದಾಗ, ಶ್ಯಾಮಣ್ಣ ಚಂದ್ರಿಯ ಕನಸಿನೊಂದಿಗೆ ಐದು ಸಾವಿರ ಕೊಟ್ಟು ಆ ಹಿತ್ತಲ ಮನೆಯನ್ನು ಉಳಿಸಿಕೊಂಡಿದ್ದನ್ನು ಕಾಣಬಹುದು. ಆದರೆ ಚಂದ್ರಿಯು ಅವನ ಕೈಗೆ ಸಿಗುತ್ತಿಲ್ಲ ಕಾರಣ ಆಕೆಯು ಪಡೆದ ಆಧುನಿಕ ಶಿಕ್ಷಣವೆ ಆಗಿದೆ.

ವೇಶ್ಯಾವಾಟಿಕೆಗೆ ಸಾಮಾಜಿಕ ಆರ್ಥಿಕ ಮತ್ತು ರಾಜಕೀಯ ನೆಲೆಗಳು ಇವೆ. ಇವನ್ನು ಕಾರಂತರು ಈ ಕಾದಂಬರಿಯಲ್ಲಿ ಗುರುತಿಸುತ್ತಾರೆ. ಆರ್ಥಿಕ ಮೂಲವಾದ ಆಸ್ತಿಯು ಮನುಷ್ಯನಿಗೆ ತುಂಬಾ ಮುಖ್ಯ ಅದನ್ನು ಕೆಲವರು ಬೇರೆ ಬೇರೆ ರೀತಿಯಲ್ಲಿ ಪಡೆಯುತ್ತಾರೆ. ಆದರೆ ಸ್ವಾತಂತ್ರ್ಯ ಪೂರ್ವದಲ್ಲಿ ಸಾಮಾಜಿಕವಾಗಿ ಮಾನ್ಯತೆಯಿದ್ದ ಗಣಿಕಾಸ್ತ್ರೀಯರು ಅಪಾರವಾದ ಸಂಪತ್ತನ್ನು ಹೊಂದಿ ಭೂಮಿಯನ್ನು ನೀಡಿ ಬದುಕುತ್ತಿದ್ದರು. ಸ್ವಾತಂತ್ರ್ಯ ಅನಂತರದಲ್ಲಿ ಕೀಳು ವೃತ್ತಿಯೆಂದು ಸಮಾಜದ ದೃಷ್ಟಿಯಲ್ಲಿ ಪರಿಗಣಿಸಲ್ಪಟ್ಟಿತ್ತು. ಈ ನೆಲೆಗಳನ್ನು ಚಂದ್ರಿ ಸೂಕ್ಷ್ಮವಾಗಿ ಅರಿತಿರುತ್ತಾಳೆ. ಅಲ್ಲದೆ ತನ್ನ ಸ್ನೇಹಿತೆ ಶಾರದೆಯ ಮದುವೆ ಮತ್ತು ಅವರ ಜೀವನವನ್ನು ಅರಿತಿರುತ್ತಾಳೆ. ಆದ್ದರಿಂದ "*ಅನೇಕ ಬಾರಿ ಯಾರು ಯಾರೋ ಊರ ಬಯಲಿನಲ್ಲಿ ಶಾಲೆಗೆ ಬರುತ್ತಿದ್ದ ಶಾರದೆ, ಚಂದ್ರಿಯರು ಮುಂದೆ ಮಡಿಚಿದ ಕಾಗದಗಳನ್ನು ಕೆಡೆದು ಹೋದದುಂಟು, ಅದನ್ನು ಕುತೂಹಲದಿಂದ ಚಂದ್ರಿ ಆರಿಸಿ, ತೋರಿಸಿ, ತೆಗೆದು ಹರಿದು ಹಾಕಿ ನಕ್ಕುದುಂಟು; ಬೇಸರಗೊಂಡುದ್ದುಂಟು, ಅಂಥ ಪ್ರಸಂಗ ಬಂದರೆ ನಾನು ಊರು ಬಿಟ್ಟು ಓಡಿಯೇನು ಬಾವಿ ಹಾರಿಕೊಂಡೇನು ಯಾರರ ಎಂಜಲು ತಿಂದು ಬದುಕುವ ಬಾಳು ನನಗೆ ಬೇಕಿಲ್ಲ*"[೨೯] ಎಂದು ಹೇಳುತ್ತಾರೆ.

ಹೀಗೆಯೇ ಮುಂದುವರೆದು ಶಾರಿಯು ಮಗಳನ್ನು ಪೀಡಿಸಿದಾಗ ಚಂದ್ರಿಯು ಹೇಳುವ ಮಾತಿನಲ್ಲಿ ಆಧುನಿಕ ಸ್ತ್ರೀಯ ನೆಲೆಯು ಕಂಡುಬರುತ್ತದೆ. ಆದರೆ ಆಸ್ತಿ ಹರಾಜಿಗೆ ಬಂದ ಪ್ರಸಂಗ ಅವಳಲ್ಲಿ ತೀವ್ರವಾಗಿ ಕಾಡಿದೆ. ಅದಕ್ಕಾಗಿ ಅವಳು ತನ್ನ ತಾಯಿಗೆ "*ಯಾಕಮ್ಮ ಹೆದರಿಕೆ ಒಂದು ಮಾಸ್ತರಣಿಕೆ ಕೆಲಸ ಸಿಕ್ಕೀತು ನನಗೆ, ನಿನ್ನನ್ನು ಸಾಕಲಾರನೆ ?*"[೩೦] ಈ ಎರಡು ಪ್ರಸಂಗಗಳಲ್ಲಿ ಚಂದ್ರಿಯ ದಿಟ್ಟತನ ಮತ್ತು ಸಂಪ್ರದಾಯಕ್ಕೆ ತಿಲಾಂಜಲಿ ಇಟ್ಟಿರುವ ಮತ್ತು ತಾನೂ ಸಹ ಸಮಾಜದಲ್ಲಿ ಗೌರವ ಜೀವನವನ್ನು ಸಾಗಿಸಬೇಕು ಎನ್ನುವ ಮನೋಭಾವ ಕಂಡುಬರುತ್ತದೆ.

ಈ ಕಾದಂಬರಿ ಕುರಿತು ಜಿ.ಎಸ್.ಅಮೂರವರು "*ಕೇಂದ್ರ ಪಾತ್ರವಾದ ಮಂಜುಳೆಯ ಮೂಲಕ ಕಾರಂತರು ಗಂಡು ಹೆಣ್ಣುಗಳಲ್ಲಿ ಮೈಮನಗಳ ಸಂಬಂಧದ ರಹಸ್ಯವನ್ನು ಭೇಧಿಸಲು ಪರೀಕ್ಷಿಸಿದ್ದಾರೆ.*"[೩೧] ಎನ್ನುತ್ತಾರೆ.

ಈ ರಹಸ್ಯವನ್ನು ಕಾರಂತರು ಸ್ವಾತಂತ್ರ್ಯ ಪೂರ್ವದಲ್ಲಿ ನಮ್ಮ ದೇಶಕ್ಕೆ ಪೋರ್ಚುಗೀಸರ ಕಾಲದಲ್ಲಿ ಆಮದಾದ ಸಾಮಾಜಿಕ, ಆರ್ಥಿಕ, ರಾಜಕೀಯ ನೆಲೆಗಳನ್ನು ವಸಾಹತು ದೃಷ್ಟಿ

---

೨೯. ಅದೇ, ಪುಟ-೨೯೯
೩೦. ಅದೇ, ಪುಟ-೩೩೧
೩೧. ಜಿ.ಎಸ್.ಅಮೂರ, ಕನ್ನಡ ಕಥನ ಸಾಹಿತ್ಯ ಕಾದಂಬರಿ, ಪುಟ [illegible]

ಕೋನದಲ್ಲಿ ನೋಡುತ್ತಾರೆ. ಈ ವಸಾಹತು ಪರಿಣಾಮವಾಗಿ ನಮ್ಮ ಸಂಸ್ಕೃತಿಯಲ್ಲಿ ಬೇರುಬಿಟ್ಟ ಸಂಸ್ಕೃತಿಯೆಂದರೆ ವೇಶ್ಯಾವಾಟಿಕೆ ಎನ್ನುತ್ತಾರೆ. ಕಾರಂತರು ಕಾದಂಬರಿಯ ಮೊದಲ ಅಧ್ಯಾಯದಲ್ಲಿ ಅವರು ನಿಸರ್ಗದ ನೆಲೆಯಲ್ಲಿ ಮಾನವ ಸಂಬಂಧಗಳನ್ನು ಆಧುನಿಕತೆಯ ಪ್ರವೇಶದೊಂದಿಗೆ ಹೇಳುತ್ತಾರೆ.

'ಅದೊಂದು ಕಾಲದಲ್ಲಿ ವಸುಂದರ' ಎನಿಸಿದ್ದ ನಗರ ಇಂದು ಜನರ ಮಾತಿನಲ್ಲಿ ಬಸರೂರು ಆಗಿದೆ. ಊರು ಸಾಕಷ್ಟು ಜನಭರಿತವಾದದ್ದು; ನೂರಾರು ಹಿತ್ತಿಲು ಮನೆಗಳಿಂದ ತುಂಬಿದ್ದು ತೆಂಗು, ಕಂಗು, ಹಲಸು, ಮಾವು ಎಂದು ನೆಟ್ಟ ಜನ ಅವನ್ನು ತುಂಬಾ ಹಸಿರಾಗಿಯೇ ಇರಿಸಿದ್ದಾರೆ. ಅದನ್ನು ಚಲುವಿಗಾಗಿ ನೆಟ್ಟದಲ್ಲ ಉಪಯೋಗಕ್ಕಾಗಿ ನೆಟ್ಟ ಆ ಗಿಡಮರಗಳು ತಮ್ಮ ಸಹಜ ಗುಣದಿಂದ ಚೆಲುವನ್ನು ಬೀರಿದ್ದರೆ ಯಾರೇನೂ ಆಕ್ಷೇಪ ಮಾಡುವಂತಿಲ್ಲ.

ಕಾರಂತರು ಹೇಳುವ ಗಿಡಮರಗಳು ಚೆಲುವನ್ನು ಬೀರಿದ್ದರೆ ಯಾರೇನೂ ಆಕ್ಷೇಪವಿಲ್ಲ ಎಂದು ಹೇಳುವ ಮಾತು ನಿಸರ್ಗ ಮಾನವ ಸಂಬಂಧದಲ್ಲಿ ಹೊಸದಾದ ಒಂದು ಕ್ರಿಯೆಯು ಸಾಮಾಜಿಕವಾಗಿ ಆಮದಾಗುತ್ತದೆ. ಎನ್ನುವ ಮುನ್ಸೂಚನೆ ನೀಡುತ್ತಿದ್ದಾರೆ. ಅದು ಬಂಡವಾಳಶಾಹಿ ಮತ್ತು ವಸಾಹತು ಧೋರಣೆಯುಳ್ಳ ಲೈಗಿಂಕ ಶೋಷಣೆಯಾಗಿರುವುದು ಈ ಕಾದಂಬರಿಯಲ್ಲಿ ತಿಳಿಯುತ್ತದೆ. ಪಾಶ್ಚಾತ್ಯರು ಭಾರತಕ್ಕೆ ಕಾಲಿಟ್ಟಾಗೆ ಬಸರೂರಿನ ಜನತೆಯ ಸಂಸ್ಕೃತಿ ಇಂದು ಬದಲಾಗಿದೆ. ಹಿಂದೆ ಪಟ್ಟಣದ ಮಗ್ಗುಲಲ್ಲಿ :ಹರಿಯುವ ವರಾಹಿ ನದಿ ಕಂಡಿದ್ದೀರಿ, ಅದರ ಮೂಲ ಪಶ್ಚಿಮ ಘಟ್ಟದಲ್ಲಿ ಅಲ್ಲಿಂದ ಗಂಗೊಳ್ಳದಲ್ಲಿ ಕಡಲನ್ನು ಪ್ರವೇಶಿಸುತ್ತದೆ. ಅಲ್ಲಿ ಇನ್ನೂ ಕೆಲವು ನದಿಗಳು ಸಂಗಮವಾಗುತ್ತವೆ. ವಸಪುರ ಆ ತಾವಿಗಿಂತ ಹರದಾರಿ ಹಿಂದಕ್ಕಿದೆ ಪೋರ್ಚುಗೀಸರು ಈ ಬಸರೂರಿನ ತನಕವೂ ತಮ್ಮ ಹಡಗುಗಳನ್ನು ತಂದು ವ್ಯಾಪಾರ ನಡೆಸಿದ ಕಾಲವೊಂದಿತ್ತು, ಈಗ ಕಾಲಗತಿ ಬದಲಾಯಿಸಿದೆ. "ಮೊನ್ನೆ ಮೊನ್ನೆಯ ತನಕವೂ ಅವು ಕುರಚಲು ಕಾಡುಗಳಿಂದ ತುಂಬಿದ್ದುಂಟು ದೆವ್ವ ಗಾತ್ರದ ಧೂಪದ ಮರಗಳು ನವ ನಾಗರಿಕತೆಯಂತೆ ಅವುಗಳ ಉನ್ನತಿ ಹರವು ಎರಡೂ ಅಧಿಕ ಅವು ಕೊಡುವ ನೆರಳು ಸಾವಿರಾರು ದನಕರುಗಳ; ಆಶ್ರಯ. ವಸಂತಕಾಲ ಬರುವುದರೊಳಗೆ ಅವು ಅವಸರಿಸಿ ಬಿಟ್ಟುವೆಂದರೆ ಅವುಗಳ ಸೊಗಸು ಕಂಪು ಅಷ್ಟಿಷ್ಟಲ್ಲ.

"ಇಂದೋ ಹಳೆಯ ಧೂಪದ ಮರಗಳ ಸಾಲು ಸಾಲು ಮಂಗ ಮಾಯವಾಗಿ ಅನೇಕ ಹಳೆಯ ಶ್ರೀಮಂತ ಸಂಸಾರಗಳು ತಮ್ಮ ಡಾಂಭಿಕ ಜೀವನದಿಂದ ಪೊಳ್ಳಾದಂತೆ ಅವೂ ಪೊಳ್ಳಾಗಿ ಒಂದೊಂದು ವರ್ಷದ ಗಾಳಿಗೆ ಒಂದೊಂದು ಮರ ಮುರಿದು ಬಿತ್ತು ಊರಿನ ಗುಡ್ಡಗಳಲ್ಲಿ ಅವುಗಳ ನಾಟದಂಥ ದೋಣಿಗಳನ್ನು ಕೆತ್ತಿಸಿದರು ಇದು ಬಸರೂರಿನಿಂದ ವಸಪುರದ ಅಗಾಧ ಹಿರಿಮೆಯನ್ನೋ ರಸಿಕತೆಯನ್ನೋ ನಿಷ್ಕರುಣೆಯನ್ನೋ ದಾರಿದ್ರ್ಯವನ್ನು ಸಾರಬಹುದು."[೩೨]

---

೩೨. ಶಿವರಾಮ ಕಾರಂತ : ಮೈಮನಗಳ ಸುಳಿಯಲ್ಲಿ, ಪುಟ -೨೮೦, ೨೫೧

ಕಾರಂತರು ವಸುಪುರ ಅಥವಾ ಬಸರೂರು ಹಿಂದೆ ಇದ್ದ ನಿಸರ್ಗ ಮತ್ತು ಈ ನಿಸರ್ಗದೊಂದಿಗೆ ಮನುಷ್ಯ ಹೊಂದಿರುವ ಸಂಬಂಧ ಹಾಗೂ ಭೂಮಿಯೊಂದಿಗಿನ ಸಂಬಂಧದಿಂದ ಆತನು ನಿಸರ್ಗದ ಮೇಲೆ ಮಾಡುತ್ತಿರುವ ದೌರ್ಜನ್ಯವನ್ನು ಹೇಳುತ್ತಾರೆ.

ಹದಿನೇಳನೆಯ ಶತಮಾನದಲ್ಲಿ ಇಂಗ್ಲಿಷರು, ಪೋರ್ಚುಗೀಸರು, ಡಚ್ಚರು ಕರಾವಳಿಯ ನಗರಗಳಲ್ಲಿ ವ್ಯಾಪಾರಕ್ಕಾಗಿ ಬೀಡು ಬಿಡತೊಡಗಿದರು. ಇಲ್ಲಿ ಹಿಂದೆ ನೇಕಾರ ವಸತಿ ಬಹಳವಾಗಿದ್ದುದರಿಂದ ಅರಿವೆಯ ವ್ಯಾಪಾರವು ನಡೆಯುತ್ತಿದ್ದರಿಂದ, ಬದಲಿಗೆ ಈ ಯುರೋಪಿನನ ಬಿಳಿಯ ಜನ ಏನನ್ನು ತಂದು ಕೊಟ್ಟರೋ ತಿಳಿಯದು. ಈಗ ಬಸರೂರಿನ ತನಕ ಹಡಗುಗಳು ಬರುವುದೇ ಇಲ್ಲ ತಟ್ಟ ಗೋಡಿನಿಂದ ತುಂಬಿದೆ ಎಂದಿದ್ದೆ. *"ಈ ಊರಿನಿಂದ ಕೊಂಡೊಯ್ಯುವ ಅರಿವೆ, ಮೆಣಸು ಇತ್ಯಾದಿಗಳಿಗೆ ಬದಲಾಗಿ ಅವರೇನು ತಂದುಕೊಟ್ಟರೊ ಚೆನ್ನಾಗಿ ತಿಳಿಯದು ಅಂತಹ ಪರನಾಡುಗಳಿಂದ ಬಂದ ನಾವಿಕರು ಅದರಲ್ಲಿಯೋ ಬಿಳಿ ಮೋರೆಯವರು ಈ ನಗರದ ರೇವುಗಳಲ್ಲಿ ಕೆಲಸವಿದ್ದೋ ಇಲ್ಲದೆಯೋ ಮನವೋಲಿಸುವ ಪದಾರ್ಥ ಊರಲ್ಲಿ ಇರಲೇಬೇಕಲ್ಲ. ಇದ್ದೇ ಇತ್ತು ಅವರೇ ಇಲ್ಲಿನ ವೇಶ್ಯಾಲಲನೆಯರು ಆ ಕನ್ಯೆಯರಿಂದಾಗಿಯೇ ಬಸರೂರು ಎಂದರೆ, ತೋರಿಕೆಗೆ ಮೂಗು ಮುರಿಯುವವರು ಬಹಳ. ಅಂತು ಚಾರಿತ್ರಿಕವಾಗಿ ಈ ಊರು ಜನರಿಂದ ಆಮದು ಮಾಡಿಕೊಂಡ ಸರಕುಗಳಲ್ಲಿ ಒಂದು ವಸ್ತು ಪರಂಗಿ ರೋಗವಾಗಿತ್ತು! ಇಂದು ಬಿಳಿಯದಿಲ್ಲ! ಅವರ ಹಡುಗಳು ಈ ಊರಿನ ಹತ್ತಿರ ಸುಳಿಯುವುದಿಲ್ಲ. ಆದರೆ ಒಂದು ಕಾಲದಲ್ಲಿ ಆ ಬಿಳಿಯ ಮೊಲೆಗಳು ಸ್ಥಳೀಯ ವಿಲಾಸಿಗಳ ಪಾಲಿಗೆ ಸ್ಫರ್ಧಾಳುಗಳಾಗಿದ್ದರು. ಈ ಊರಿನಲ್ಲಿ ವೃತ್ತಿ ಪರಂಪರೆಯಿಂದ ಬಂದುದು ಎಂಬ ಕೀರ್ತಿಯನ್ನು ಹೊತ್ತಿದೆ."*[೩೩]

ಕಾರಂತರ ಮೈಮನಗಳ ಸುಳಿಯಲ್ಲಿ ಎನ್ನುವ ಈ ಕಾದಂಬರಿಯ ಪಾತ್ರಗಳ ಕ್ರಿಯೆಯಾದ ವೇಶ್ಯಾವಾಟಿಕೆಗೆ ಮತ್ತು ಅವರು ಇಂದು ಅಮೂಲ್ಯವಾದ ಸಂಪತ್ತನ್ನು ಹಾಗೂ ಭಾರತದ ಹದಿನೇಳನೆಯ ಶತಮಾನದಲ್ಲಿ ನಡೆದ ಚಾರಿತ್ರಿಕ ಸಂಗತಿಗಳನ್ನು ಹೇಳುತ್ತಾರೆ. ಸುಂದರ ನಿಸರ್ಗವನ್ನು ಒಳಗೊಂಡಿದ್ದ ಹಾಗೂ ನಿಸರ್ಗದೊಂದಿಗೆ ಬದುಕುತ್ತಿದ್ದ ಬಸರೂರಿನ ಜನರು ವಸಾಹತು ರಾಜಕೀಯ ಚಳುವಳಿಯ ಪರಿಣಾಮದಿಂದ ಭಾರತಕ್ಕೆ ಕಾಲಿಟ್ಟ ಬ್ರಿಟೀಷರು, ಡಚ್ಚರು, ಪೋರ್ಚುಗೀಸರು ತಮ್ಮ ಆಡಳಿತವನ್ನು ಇಲ್ಲಿ ಸ್ಥಾಪಿಸಿದ್ದು ಅಲ್ಲದೆ ನಮ್ಮ ನೈಸರ್ಗಿಕ ಸಂಪತ್ತನ್ನು ಮೊದಲು ಲೂಟಿ ಮಾಡಿದರು. ಅನಂತರ ತಮ್ಮ ಸುಖಕ್ಕಾಗಿ ಲೈಂಗಿಕವಾಗಿ ಸ್ಥಳೀಯ ಸ್ತ್ರೀಯರನ್ನು ಬಳಸಿಕೊಂಡರು. ವೇಶ್ಯಯರಿಗೆ ಅಪಾರವಾದ ಹಣ ಮತ್ತು ಸಂಪತ್ತನ್ನು ಕೊಡುವುದನ್ನು ಕಲಿಸಿದರು. ಇದು ಸ್ಥಳೀಯರ ಮೇಲೆ ಪ್ರಭಾವ ಬೀರಿತು. ಈ ಕಾರಣಗಳಿಂದ ಭಾರತೀಯರು ನಿಸರ್ಗವನ್ನು ಕೇವಲ ಲಾಭದ ಉದ್ದೇಶದಲ್ಲಿ ನೋಡಿದರು, ನಾಶ ಮಾಡಿದರು. ಕೆಲವು ಸಮಾಜದ ಕುಟುಂಬದವರು ಭೂಮಿಯನ್ನು ಸಂಪಾದಿಸಿ ತಮ್ಮ ಅಂತಸ್ತನ್ನು ಹೆಚ್ಚಿಸಿಕೊಳ್ಳಲು ಇಳಿದರು. ಇದರಿಂದ ನೆಮ್ಮದಿಯ ಜೀವನವನ್ನು ನಡೆಸಿದರು. ಆದ್ದರಿಂದ ಈ ಸ್ಥಿತಿಗೆ ಬಸರೂರು

೩೩. ಅದೇ. ಪುಟ – ೨೫೩

ಹೊರತೇನಲ್ಲ, ಇಂತಹ ಬಸರೂರಿನಲ್ಲಿ ಪ್ರಸಿದ್ಧಿಯನ್ನು ಪಡೆದ ವೇಶ್ಯೆ ಮಂಜುಳೆ. ಇವಳು ವೇಶ್ಯಾ ಚಟುವಟಿಕೆಯಲ್ಲಿ ಆಧುನಿಕ ಮನಸ್ಸುಳ್ಳವಳಾಗಿ ಬರುತ್ತಾಳೆ.

ಈ ಕಾದಂಬರಿಯನ್ನು ಕಾರಂತರು ಬರೆದ ಉದ್ದೇಶ ಮತ್ತು ಆ ಪಾತ್ರಗಳ ಸಾಮಾಜಿಕ ನೆಲೆಗಳ ಬಗ್ಗೆ ಹೆಚ್.ವಿ.ರಂಗಚಾರರವರು *"ಕರಾವಳಿ ಸೀಮೆಯಲ್ಲಿ ಹೀನಸ್ಥಿತಿಗಿಳಿದ ವೇಶ್ಯಾಸ್ತ್ರೀಯರ ಜೀವನ ಸುಧಾರಣೆಗೆಂದು ಅವರು ಮಾಡಿದ ಪ್ರಯತ್ನಗಳು ಅವರ ಅಂತಃಕಾರಣವೇ ಹಾಗೆ. ಯಾವಾಗಲೂ ಸಮಾಜದ ಕೀಳು ಸ್ತರಗಳಲ್ಲಿ ಸಿಕ್ಕಿ, ದಾಸ್ಯ, ಕಾರ್ಪಣ್ಯ ಮತ್ತು ಅಜ್ಞಾನಗಳಿಗೆ ಬಲಿಯಾಗಿ ದಿಕ್ಕುಗಾಣದೆ ಜೀವಿಸಿದವರನ್ನು ಕಂಡು ಕರುಣೆಯಿಂದ ಮರುಗುವ ಹೃದಯ ಅಂಥವರ ಕಷ್ಟಗಳ ಜಟಿಲವಾಗದ ಸಾಮಾಜಿಕ ಕಾರಣಗಳನ್ನು ಅರಿಯುವ ಮತ್ತು ಸರಿಯಾದ ಪರಿಹಾರ ಯೋಚಿಸಬಲ್ಲ ತೀಕ್ಷ್ಣಮತಿಯ ಮತ್ತು ಅದನ್ನು ತಕ್ಷಣ ಕಾರ್ಯಗತ ಮಾಡುವ ಸ್ವಭಾವವವು ಅವರಿಗಿತ್ತು".*[೩೪]

ಈ ಹಿನ್ನೆಲೆಯಲ್ಲಿ ಕಾರಂತರು ಮಂಜುಳೆಯ ಪಾತ್ರವನ್ನು ನೋಡುತ್ತಾರೆ. ಈಕೆ ತನ್ನ ಬಳಿಯಲ್ಲಿ ಬರುವ ಜನರನ್ನು ಆಧುನಿಕ ಚಿಂತನೆಯಲ್ಲಿಯೇ ನೋಡುತ್ತಾಳೆ ಮತ್ತು ಅನುಭವಿಸುತ್ತಾಳೆ. ಕಡೆಯಲ್ಲಿ ಬರುವ ಸ್ವಾಮಿ ಲಕ್ಷಣ ತೀರ್ಥ ಇವಳಿಗೆ ಮನಸ್ಸು ಮತ್ತು ದೇಹ ಎರಡಕ್ಕೂ ಸುಖವನ್ನು ನೀಡುತ್ತಾನೆ. ಆದರೆ ಇಲ್ಲಿ ಇದು ಮುಖ್ಯವಲ್ಲ ಬದಲಾಗಿ ಮಂಜುಳೆ ಲೈಂಗಿಕ ವಿಷಯಕ್ಕೆ ಸಂಬಂಧಿಸಿದಂತೆ ಆಧುನಿಕವಾಗಿ ಯೋಚಿಸುತ್ತಾಳೆ ಎಂದು ಕಾರಂತರು ಆಕೆಯ ಪಾತ್ರದಲ್ಲಿ ಹೇಳಿದ್ದರೂ ಸಹ ಈ ವೇಶ್ಯಾವಾಟಿಕೆ ಉಂಟಾಗಲು ಚಾರಿತ್ರಿಕ ದೃಷ್ಟಿಯಾದ ವಸಾಹತುಶಾಹಿ ಪದ್ಧತಿ ಕಾರಣವೆಂದು ಹೇಳುತ್ತಾರೆ. ಆದ್ದರಿಂದ ಕಾದಂಬರಿ ಮೊದಲ ಅಧ್ಯಾಯನದಲ್ಲಿ ಕಾರಂತರು ಹೇಳುವ ನಿಸರ್ಗ ಮತ್ತು ಮಾನವ ಹಾಗೂ ಈ ಸಂಬಂಧದೊಳಗೆ ಆಧುನಿಕತೆಯು ವಸಾಹತುಶಾಹಿಯ ಮೂಲಕಲ್ಪನೆಯಾಗಿ ಬಂದು, ಬದಲಾವಣೆಗೆ ಒಳಪಡುವ ಸಂಗತಿ ಪ್ರಮುಖವಾಗಿದೆ.

'ಅಳಿದ ಮೇಲೆ' ಕಾದಂಬರಿಯಲ್ಲಿ ಕಾರಂತರು 'ಯಶವಂತ' ಎಂಬ ಪಾತ್ರದಲ್ಲಿ ಮಾನವೀಯತೆಯನ್ನು ಕಾಣುತ್ತಾರೆ. ಯಶವಂತರ ಮಿತ್ರನಾಗಿ ಕಾರಂತರು ಆತನ ಮಾನವೀಯ ದೃಷ್ಟಿಕೋನದ ಸಂಗತಿಯ ಸಂಬಂಧಗಳನ್ನು ಅನ್ವೇಷಣೆ ಮಾಡಿ ಅವರ ಆಸೆಯನ್ನು ನೆರವೇರಿಸುವ ಪಾತ್ರವಾಗಿ ಕಂಡುಬರುತ್ತಾರೆ. ಯಶವಂತರಾಯರ ಊರು ಬೆನಕನಹಳ್ಳಿ ಇದಕ್ಕೆ ಇನ್ನೊಂದು ಹೆಸರು ಯಲ್ಲಾಪುರ ಯಶವಂತರು ಚಿತ್ರ ಸಂಕೇತಗಳ ಮೂಲಕ ತಮ್ಮ ಸಂಬಂಧಗಳನ್ನು ಗುರ್ತಿಸುತ್ತಾರೆ. ಆ ಮೂಲಕ ಕಾರಂತರು ಅವರ ಮರಣದ ನಂತರ, ಅವರನ್ನು ಬೊಂಬಾಯಿಯಲ್ಲಿ ಸಂಸ್ಕಾರ ಮಾಡಿ ಮನೆಗೆ ಹಿಂತಿರುಗುತ್ತಾರೆ. ಹಿಂತಿರುಗಿದ ಕಾರಂತರಿಗೆ ಯಶವಂತರು ಕಳುಹಿಸಿದ ೧೫೦೦೦ ಮನಿ ಡ್ರಾಫ್ಟ್ ಸಿಕ್ಕಿ ಅದನ್ನು ಕುರಿತು ಅವರ ಟ್ರಂಕ್‌ನಲ್ಲಿದ್ದ

೩೪. ನಾಗ ಐತಾಳ (ಅಹಿತಾನಲ) (ಸಂ), ಕಾರಂತ ಚಿಂತನ ಕಡಲಾಚೆಯ ಕನ್ನಡಿಗರಿಂದ, ಪುಟ-೧೯೩

ಅವರು ಬರೆದಿಟ್ಟಿದ್ದ ಪತ್ರಗಳನ್ನು ಅಮೂಲಾಗ್ರವಾಗಿ ಪರಿಶೀಲಿಸಿ ಯಶವಂತರ ಪತ್ನಿಯರಾದ ಕಮಲ, ಧಾರೇಶ್ವರ ಸರಸಿ, ಮಕ್ಕಳಾದ ಸೀತಾರಾಮ ಹೆಗಡೆ, ಬಲಜ, ಇಂದುಮತಿ, ಯಶವಂತರು ಸ್ನೇಹಿತ ವಿಷ್ಣುವಂತ ಘಾಟಿಯ ಬಗ್ಗೆ ತಿಳಿಯುತ್ತಾರೆ. ಈ ವಿಷ್ಣುವಂತೆ ಘಾಟಿ ಮಹಾರಾಷ್ಟ್ರದವನು. ಇವನು ಧರ್ಮಶಾಸ್ತ್ರ ಬರೆಯುತ್ತಿರುತ್ತಾನೆ. ಇವನಿಗೆ ಯಶವಂತರು ಸಹಾಯಾರ್ಥವಾಗಿ ಹಣಕಳುಹಿಸಿರುತ್ತಾರೆ. ಯಶವಂತರನ್ನು ಸಾಕಿ ಸಲುಹಿದ ಪಾರ್ವತಮ್ಮನಿಗೆ ಯಶವಂತರ ಸಲಹೆಯಂತೆ ತಿಂಗಳಿಗೆ ೨೫ ರೂಪಾಯಿಯನ್ನು ಕಳುಹಿಸಿಕೊಡುತ್ತಿರುವಾಗ ಪೋಸ್ಟ್ ಮನಿಯಾರ್ಡರಿನಲ್ಲಿ ಸ್ವೀಕರಿಸಿದ ಸಾಕ್ಷಿಗೆ ಸಂಬಂಧಿಸಿದಂತೆ ವ್ಯತ್ಯಾಸ ಕಂಡು ಕಾರಂತರು ಪಾರ್ವತಮ್ಮನನ್ನು ಹುಡುಕಿಕೊಂಡು ಹೋಗುತ್ತಾರೆ.

ಈ ಕುರಿತು ಜಿ.ಎಸ್.ಅಮೂರ ಅವರು–"*ಮನುಷ್ಯತ್ವ ಉಳಿಸಿಕೊಂಡು ಬಾಳಿನಲ್ಲಿ ಸಾರ್ಥಕತೆಯನ್ನು ಸಾಧಿಸುವ ಕಾರಂತರು ಮೆಚ್ಚಿಕೊಳ್ಳುವ ಅನೇಕ ವ್ಯಕ್ತಿಗಳು ಕಾದಂಬರಿಯಲ್ಲಿದ್ದಾರೆ. ಹೀಗಿದ್ದರು ಯಶವಂತರೇ ಕೇಂದ್ರ ಪ್ರತೀಕವಾಗುವುದಕ್ಕೆ ಮುಖ್ಯ ತಾತ್ತ್ವಿಕ ಅರಿವಿನಿಂದ ಸಮಕಾಲಿನ ಜೀವನದ ಆಹ್ವಾನಗಳನ್ನು ಸ್ವತಂತ್ರವಾಗಿ ಎದುರಿಸುವವರು ಅವರೊಬ್ಬರೇ, ಪಾರ್ವತಮ್ಮನಂಥ ವ್ಯಕ್ತಿಗಳ ಸಾಮರ್ಥ್ಯವಿರುವುದು ಅವರಲ್ಲಿ ಆಳವಾಗಿ ಬೇರೂರಿದ ನಂಬಿಕೆಗಳಲ್ಲಿ. ಆದರೆ ಈ ನಂಬಿಕೆಗಳ ಆಧಾರವಾದ ಸನಾತನ ಧರ್ಮವನ್ನೇ ಒಪ್ಪದ ಯಶವಂತರು ತಮ್ಮ ಸ್ವಂತದ ವೈಚಾರಿಕತೆಯ ಬಲದ ಮೇಲೆಯೇ ಜೀವನವನ್ನು ನಡೆಸುತ್ತಾರೆ.*"[೩೫]

ಈ ಮಾನವೀಯ ನೆಲೆಗಳು ಭಾರತೀಯ ಸಂಸ್ಕೃತಿಯ ಪ್ರತಿ ಬಿಂಬಗಳು. ಈ ನೆಲೆಯಿಂದಲೆ ನಾವು ನಮ್ಮ ಸಂಸ್ಕೃತಿಯ ವೈವಿಧ್ಯತೆಯಲ್ಲಿ ಏಕತೆ ಸಾದಿಸಿದ್ದೇವೆ. ಈ ಸಂಸ್ಕೃತಿಯ ಮೇಲೆ ಸ್ವತಂತ್ರ ಭಾರತದಲ್ಲಿ ವಸಾಹತು ಶಾಹಿಯ ಪರಿಣಾಮವಾಗಿ ಇಂಗ್ಲೀಷ್ ಸಾಹಿತ್ಯದಿಂದ ಆದ ಸಮಾಜವು ಆಧುನಿಕ ನಾಗರಿಕತೆಗೆ ತೆರೆದುಕೊಂಡಿತು. ಹೀಗೆ ತೆರೆದುಕೊಂಡ ಯುವಜನತೆಯಲ್ಲಿ ಹೊಸ ಆಲೋಚನೆಗಳು ಮತ್ತು ಮೌಲ್ಯಗಳು ಕಾಣಿಸಿಕೊಂಡವು. ಈ ಹಿನ್ನೆಲೆಯಲ್ಲಿ ಕಾರಂತರು ಸಹ ಒಬ್ಬ ಆಧುನಿಕ ಪ್ರತಿಕ್ರಿಯೆಯಾಗಿ ಭೂಮಿಯೊಂದಿಗೆ ವ್ಯವಸಾಯ ಮಾಡಿ ಜೀವಿಸುತ್ತಿರುವ ಬೆನಕನಹಳ್ಳಿಯ ಜನರೊಂದಿಗೆ ಬೇಟಿಯಾಗುವ ನೆಲೆಯಲ್ಲಿ ಆಧುನಿಕ ಪ್ರಕ್ರಿಯೆಯನ್ನು ಕಾಣಬಹುದು.

ಕಾರಂತರು ಆಧುನಿಕತೆಯ ಪ್ರತಿನಿಧಿಯಾಗಿ ಪ್ರವೇಶ ಪಡೆದು ಬೆನಕನಹಳ್ಳಿಯ ಸಮೀಪದ ಪರಿಸರವಾದ ಕೊಚ್ಚೆ, ರೊಚ್ಚೆ, ರಸ್ತೆಯಲ್ಲಿ ನಡೆಯುತ್ತಾರೆ. ಆಗ ಅಲ್ಲಿದ್ದ ಮಲೆನಾಡಿನ ಧನಗಾಹಿಯನ್ನು, ವಿಳಾಸ ಕೇಳುವ ಮಾತುಗಳಲ್ಲಿ ಆಧುನಿಕತೆಯ ಮತ್ತು ಕಾಡು ಜೀವನದ ನಡುವಿನ ಅಂತರವನ್ನು ಗುರ್ತಿಸಬಹುದು. ಕಾರಂತರು ಇಲ್ಲಿ ಬ್ರಾಹ್ಮಣರ ಮನೆಗಳಿವೆಯೇ? ಇನ್ನು ಮುಂದಕ್ಕೆ ಕೈ ತೋರಿಸಿ ಮುಂದೆ ಕಾಣುವ ಬಿದಿರು ಮಳೆಗಳ ಎಡೆಯಲ್ಲಿ ಹಳ್ಳಿಗೆ ಹೆಸರುಕೊಟ್ಟ ಬೆನಕನ ಗುಡಿಯಿದೆಯಂತೆ ಎಂದು ವಿಳಾಸದ ಚಹರೆಯನ್ನು ಅವನಿಗೆ ಹೇಳಿದಾಗ ಆ

೩೫. ಜಿ.ಎಸ್.ಅಮೂರ, ಕನ್ನಡ ಕಥನ ಸಾಹಿತ್ಯ ಕಾದಂಬರಿ, ಪುಟ-೧೬೩

ದನಗಾಹಿಯ ಓ ಪೇಟೆಯವರಂತೆ ಕಾಣುತ್ತದೆಯೆಂದು ತಿಳಿದು, ಆತನು ಕಾರಂತರನ್ನು ಚೊಚ್ಚಲ ಮನೆಗೆ ಕರೆದುಕೊಂಡು ಹೋಗುತ್ತಾನೆ.

ಈ ಸಂದರ್ಭದಲ್ಲಿ ಕಾರಂತರು ಅನುಭವಿಸಿದ ಕಷ್ಟ ಮತ್ತು ದನಗಾಹಿಯ ವರ್ತನೆಯ ನಡುವೆ ನಡೆದ ಪರಿಯಲ್ಲಿ ವ್ಯತ್ಯಾಸವನ್ನು ಕಾರಂತರು ಹೇಳುತ್ತಾರೆ. *"ಅವನ ಕೈಯಲ್ಲಿ ಕೋಲಿತ್ತು ಜೇಡಿ ಮಣ್ಣಿನ ಕೆಸರಲ್ಲಿ ಅದನ್ನು ಊರುತ್ತ 'ಬನ್ನಿ ಬನ್ನಿ' ಎನ್ನುತ್ತ ಇಳಿದ. ನನ್ನ ಕಾಲಿಗೆ ಕೆಸರಿನ ಪಾಪಸು! ಆಚೆ ಈಚೆ ಕೆಸರಿನ ದಂಡೆಗಳು; ಮುಟ್ಟಿದ್ದೆಲ್ಲ ಕೆಸರೆ! ಇಲ್ಲಿ ಕಾಲೂರಿದರೆ ಅಲ್ಲಿ ಹೋಗಿ ನಿಲ್ಲುತ್ತದೆ; ದರಿದ್ರ ಇಳಿಜಾರು ದಾರಿ ಬೇರೆ ಒಂದೆರೆಡು ಬಾರಿ ಜಾರಿ ಕೆಸರಿನ ಅಭಿಷೇಕವೂ ಆಯಿತು. ಶಂಭುಭಟ್ಟನನ್ನು ಶಪಿಸಿದ."*[೩೬]

ಆಧುನಿಕ ವ್ಯಕ್ತಿಯಾಗಿ ಕಾರಂತರು ಚೊಚ್ಚಲ ಮನೆಗೆ ಪ್ರವೇಶಿಸುತ್ತಾರೆ. ಕೌಪೀನವನ್ನು ತೊಟ್ಟ ಬಡಕಲು ದೇಹದ ವ್ಯಕ್ತಿ ಕಾರಂತರಿಗೆ ಕಾಣಸಿಗುತ್ತಾನೆ. ಅವನನ್ನು ಪಾರ್ವತಿಯ ಬಗೆಗೆ ಕೇಳಿದಾಗ ಅವನು ಅನುಮಾನಸ್ಪದವಾಗಿ ಉತ್ತರಿಸುತ್ತಾನೆ. *"ಪಾರೋತಿ ಎಂಬ ಹೆಸರಿನ ಮುದುಕಿ ಇಲ್ಲವಲ್ಲ ನೀವು ಯಾಕಗಿ ಬಂದೀರಿ? ಬಹಳ ದೂರದವರೋ? ಅವರ ಸಂಬಂಧದವರೋ? ಎಂದು ಕೇಳಿದ."*[೩೭] ಇದು ಅವನ ಅಪರಾಧ ಪ್ರಜ್ಞೆಯನ್ನು ಪ್ರತಿಬಿಂಬಿಸುತ್ತದೆ. ಓದುಗರಿಗೆ ಆತನೆ ಶಂಭು ಹೆಗ್ಗಡೆಯಿರಬಹುದು ಎಂದು ಅರ್ಥವಾಗುತ್ತದೆ. ಹೀಗೆ ಆಧುನಿಕ ಮತ್ತು ಗ್ರಾಮ ಜೀವನ ಪಾತ್ರಗಳ ನಡುವೆ ಮೂಕಾಂಬಿಕ ಅಜ್ಜಿಯಿಂದ ಪಾರ್ವತಿಯ ಎಲ್ಲಾ ವಿಷಯವನ್ನು ಅರಿಯುತ್ತಾರೆ.

ಶಂಕರಹೆಗ್ಗಡೆಯವರು ಯಾಶವಂತನನ್ನು ಸ್ಮರಿಸಿಕೊಂಡು ಯಶವಂತ ಎನ್ನುವವರು ಇದ್ದರು. ಅವನು ನನಗಿಂತ ಚಿಕ್ಕವನು, ಅವರ ತಂದೆ ಮತ್ತು ನನ್ನ ತಂದೆ ಅಣ್ಣ ತಮ್ಮಂದಿರು ಎಂದು ಹೇಳುತ್ತಾ ಅಮೂಲಾಗ್ರ ಪ್ರಶ್ನೆಗಳನ್ನು ಶಂಕರಹೆಗ್ಗಡೆಯವರು ಬಹಳ ಕೌತುಕದಿಂದ ಪ್ರಶ್ನಿಸಿ ಕಾರಂತರ ಪೂರ್ವಾಪರ ತಿಳಿಯುತ್ತಾನೆ. ಯಶವಂತರು ಕುಮುಟೆಗೆ ಹೋದ ವಿಚಾರವನ್ನು ಶಂಕರಹೆಗ್ಗಡೆ ತಿಳಿಸಿ ಆತ ಇದುವರೆಗೂ ಜೀವಿಸಿರುವ ಬಗ್ಗೆ ಸಂದೇಹ ವ್ಯಕ್ತಪಡಿಸುತ್ತಾನೆ. ಆಗ ಕಾರಂತರಿಗೆ *"ಕಣ್ಣು ಮುಂದಿರುವ ಬಿದಿರ ಮಳೆಯ ಕೆಳಗೆ ರಾಶಿ ಬಿದ್ದಂತೆ ಕಾಣಿಸುತ್ತಿತ್ತು. ನನ್ನ ಗೆಳೆಯರು ಬೇರೊಬ್ಬ ಯಶವಂತರಾಯರು ಇರಲಾರನೆಸಿತು. ಕುಮುಟೆಯಿಂದ ಹೆಣ್ಣು ತಂದದ್ದು ನಮ್ಮ ಯಶವಂತರಿಗೇನೆ ಸಂಸಾರ ತ್ಯಾಗ ಮಾಡಿದ್ದು ಅವರೇನೆ ವಿರಕ್ತವಾಗಿ ಹೋಗಿ ಸೇರಿಕೊಂಡ ಕಾಶಿ, ಹರಿದ್ವಾರ ಮಾತ್ರ ಬೇರೆ ಪಡೆದ ಸಾವೂ ಬೇರೆ ಅವರಿಗಾಗದ ಜನಗಳು ಸಾವಿನ ಸುದ್ದಿಯನ್ನ ಮುಟ್ಟಿಸಿ ತಮ್ಮ ಆತ್ಮಕ್ಕೆ ಮೊದಲೇ ತೃಪ್ತಿ ತಂದುಕೊಂಡಿರಬೇಕು. ಹುಟ್ಟಿದ ಊರನ್ನು ಹೋದ ತಮ್ಮನ ವಿಚಾರದಲ್ಲಿ ಶಂಕರ ಹೆಗ್ಡೆಯವರು ಅದನ್ನು ನಂಬಿದ್ದರೆ ಆಶ್ಚರ್ಯವಿಲ್ಲ."*[೩೮]

ಹೀಗೆ ಆಧುನಿಕ ನೆಲೆಯಲ್ಲಿ ಯಶವಂತರು ಹುಟ್ಟಿದ ಸ್ಥಳವನ್ನು ತಾವೇ ಗುರುತಿಸಿಕೊಂಡ ನಂತರ ಮೂಕಾಂಬಿಕೆಯಿಂದ ಸತ್ಯವನ್ನು ತಿಳಿಯುತ್ತಾ ನಂತರ ಪಾರ್ವತಿಯ ಭೇಟಿಯನ್ನು

---

೩೬. ಶಿವರಾಮ ಕಾರಂತ, ಅಳಿದ ಮೇಲೆ, ಪುಟ-೬೨
೩೭. ಅದೇ, ಪುಟ-೬೩
೩೮. ಅದೇ, ಪುಟ-೬೭

ಮಾಡುತ್ತಾರೆ. ಕಾರಂತರು *“ಆಕೆಗೆ ತಾನು ಕೊಟ್ಟು ಕಳುಹಿಸುತ್ತಿದ್ದ ೨೫ ರೂಪಾಯಿಗಳು ಮತ್ತು ಅದನ್ನು ಕಳುವು ಮಾಡುತಿದ್ದ ಅಂಚೆಯವರು ಮತ್ತು ಶಂಭು ಹೆಗ್ಗಡೆಯ ಬಗ್ಗೆ ತಿಳಿದುಕೊಂಡು ಪಾರ್ವತಿ ಅಜ್ಜಿಗೆ ಸಲ್ಲುತ್ತಿದ್ದ ಐದು ರೂಪಾಯಿಗಳ ಕಾಣಿಕೆಯನ್ನು ತಿಳಿದು ಶಂಭು ಹೆಗ್ಗಡೆ ಮತ್ತು ಪೋಸ್ಟ್ ಮಾಸ್ತರ್ ಬಗ್ಗೆ ಮನಸ್ಸಿನಲ್ಲಿ ಕಾರಂತರು ಶಪಿಸಿ, ಪಾರ್ವತಜ್ಜಿ ಮಾಡಿಕೊಟ್ಟ ಹಪ್ಪಳವನ್ನು ತಿಂದರು. ಇದನ್ನು ನಾನು ಕೆಸವೆ ಹಪ್ಪಳವನ್ನು ತಿಂದವನಲ್ಲ; ಅದು ಒರಟಾಗಿದ್ದರೂ ಉಪ್ಪು ಕಾರ ಹಿಡಿದು ರುಚಿಯಾಗಿಯೂ ಇತ್ತು”*[೩೯] ಎನ್ನುತ್ತಾರೆ.

ಕಾರಂತರು ನಿಸರ್ಗವನ್ನು ನಂಬಿ ಅಲ್ಲಿಯೇ ಜೀವಿಸುತ್ತಿರುವ ವ್ಯಕ್ತಿಗಳನ್ನು ಆಧುನಿಕ ನೆಲೆಯಲ್ಲಿ ಪ್ರಶ್ನೆ ಮಾಡಿದಾಗ ಅವರಲ್ಲಿಯು ಸಹ ಆಧುನಿಕ ಪ್ರಪಂಚದಲ್ಲಿರುವಂತೆ ರಾಗ ದ್ವೇಷಗಳು ಇರುವುದನ್ನು ಕಂಡುಕೊಳ್ಳುತ್ತಾರೆ. ಅದರೊಂದಿಗೆ ಮಾತೃ ಪ್ರೇಮವನ್ನು ಮೂಕಾಂಬಿಕೆ ಮತ್ತು ಪಾರೋತಿಯಲ್ಲಿ ಕಾಣುತ್ತಾರೆ. ನಂತರ ಪಾರ್ವತಿ ಅಜ್ಜಿಯ ಬಯಕೆಯಂತೆ ಗುಡ್ಡೆ ಬೆನಕಯ್ಯನ ದೇವಸ್ಥಾನವನ್ನು ಚೊಚ್ಚಲಮನೆ ಶಂಭು ಹೆಗ್ಗಡೆಯ ಮುಖಾಂತರ ಕಟ್ಟಿಸಿಕೊಡುತ್ತಾರೆ. ಕಾರಂತರು ನಂತರ ಪಾರ್ವತಿ ಅಜ್ಜಿಗೆ ಯಶವಂತರು ವಾಸಿಸುತ್ತಿದ್ದ ಗುಡಿಸಲನ್ನೂ ಕಟ್ಟಿಕೊಟ್ಟು ಸಾರ್ಥಕ ಪಡೆಯುತ್ತಾರೆ. ಹೀಗೆ ಕಾರಂತರು ಆಧುನಿಕತೆಯ ಪ್ರತಿನಿಧಿಯಾಗಿ ನಿಸರ್ಗದೊಂದಿಗೆ ಪೂರಕವಾಗಿ ಹೊಂದಿಕೊಳ್ಳತ್ತಾ ಆಧುನಿಕವಾಗಿ ಚೊಚ್ಚಲು ಮನೆಯವರ ಮೇಲೆ ಕಾರಂತರು ಅಪಾರ ಪ್ರಮಾಣದಲ್ಲಿ ಪ್ರಭಾವ ಬೀರುತ್ತಾರೆ. ಇದರಿಂದ ಶಂಕರ ಹೆಗ್ಗಡೆ ಮನೆತನದವರು ಆಧುನಿಕತೆಯ ನೆಲೆಗಳನ್ನು ಸುಲಭವಾಗಿ ಆರ್ಥೈಸಿಕೊಂಡು ಮಾನವೀಯ ನೆಲೆಯಲ್ಲಿ ಬದುಕುವ ಅಂಶಗಳನ್ನು ತಿಳಿಯುತ್ತಾರೆ, ಈ ಮೂಲಕ ನಿಸರ್ಗ ಮಾನವ ಸಂಬಂಧಗಳಲ್ಲಿ ಆಧುನಿಕತೆಯ ಪ್ರವೇಶವಾಗುತ್ತದೆ.

‘ಮೂಕಜ್ಜಿಯ ಕನಸುಗಳು’ ಕಾದಂಬರಿಯಲ್ಲಿ ಮೂಕಾಂಬಿಕ ಎಂಬ ವಿಧವೆಯ ಮುಖಾಂತರ ಹಾಗೂ ಅವಳ ಮೊಮ್ಮಗ ಸುಬ್ರಾಯನ ಮುಖಾಂತರ ಆಧುನಿಕತೆಯನ್ನು ನಿಸರ್ಗದ ನೆಲೆಯಲ್ಲಿ ಗುರ್ತಿಸುತ್ತಾರೆ. ಸುಬ್ರಾಯನಿಗೆ ಐತಿಹಾಸಿಕ ದೃಷ್ಟಿಕೋನವಿದ್ದರೆ, ಮೂಕಜ್ಜಿಗೆ ತನ್ನ ಕಾಲದ ಹಾಗೂ ಭೂತ ಭವಿಷ್ಯತ್ಕಾಲಗಳನ್ನು ತನ್ನ ಒಳಗಣ್ಣಿನಿಂದ ಊಹಿಸುವವಳು. ಮನುಷ್ಯನ ಹುಟ್ಟು, ಸಾವು, ಪ್ರಪಂಚ, ದೇವರು, ದೈವ ಬಗ್ಗೆ ವೈಜ್ಞಾನಿಕ ನೆಲೆಗಟ್ಟಿನಲ್ಲಿ ಮಾತನಾಡುತ್ತಾಳೆ. ಈ ಕಾದಂಬರಿಯ ಸರ್ವಕಾಲಿಕ ಶ್ರೇಷ್ಠಕತೆಯನ್ನು ಅನೇಕ ವಿಮರ್ಶಕರು ಮಾಡಿದ್ದಾರೆ. ಈ ಕಾದಂಬರಿಯ ಮುಖ್ಯ ಪಾತ್ರಗಳಾದ ಮೂಕಜ್ಜಿ ಮತ್ತು ಮೊಮ್ಮಗ ಸುಬ್ರಾಯನಿಗೆ ಸಂಬಂಧಿಸದಂತೆ ಕಾರಂತರು ತಮ್ಮ ಮುನ್ನುಡಿಯಲ್ಲಿ ಆ ಅಜ್ಜಿ ಮೊಮ್ಮಗ ಇಬ್ಬರೂ ಸೇರಿ ನಾಲ್ಕೈದು ಸಾವಿರ ವರ್ಷಗಳಿಂದ ಹರಿದು ಬಂದಿರುವ ಸೃಷ್ಟಿ ಸಮಸ್ಯೆಯೊಂದನ್ನು ಮಥಿಸಲು ಇಲ್ಲಿ ಯತ್ನಿಸುತ್ತಾರೆ. ಅವಾಸ್ತವಿಕಗಳೆ ಅಜ್ಜಿ ಅನೇಕ ವಾಸ್ತವಿಕ ಇತಿಹಾಸಾಂಶಗಳನ್ನು ತನ್ನ ಒಳದಿಳಿವಿನಿಂದ ನಮ್ಮ ಮುಂದಕ್ಕೆ ಇರಿಸುತ್ತಾಳೆ ಎನ್ನುತ್ತಾರೆ.

---

೩೯. ಅದೇ, ಪುಟ-೭೨

ವಯಸ್ಸಿನ ಹತ್ತನೆಯ ಸಂದರ್ಭದಲ್ಲಿ ಗಂಡನ ವೈದವ್ಯ ಕಂಡ ಮೂಕಾಂಬಿಕೆ ಮೂಕಳಾಗಿದ್ದಾಳೆ ಆದರೆ ವಯಸ್ಸಾಗುತ್ತ ಬಂದಂತೆ, ತನ್ನಷ್ಟಕ್ಕೆ ತಾನು ಗೊಣಗಲು ಪ್ರಾರಂಬಿಸುತ್ತಾಳೆ. ಅದು ಸಂಪ್ರದಾಯದ ವಿರುದ್ಧದ ಮತ್ತು ಇತಿಹಾಸಕ್ಕೆ ಸಂಬಂಧಿಸಿದ ವಿಷಯವನ್ನೊಳಗೊಂಡಿರುವ ಗೊಣಗು. ಮೊಮ್ಮಗ ಸುಬ್ರಾಯನಿಗೆ ಅಜ್ಜಿಯ ಅಪೂರ್ವ ಜ್ಞಾನಕ್ಕೆ ತುಂಬಾ ಮನಸ್ಸನ್ನು ಕೊಡುತ್ತಾನೆ. ಸುಬ್ರಾಯನ ಸಂಪ್ರದಾಯ ಮತ್ತು ಅವನು ಹೊಂದಿರುವ ನಿಸರ್ಗ ಸಂಬಂಧ ಇಲ್ಲಿ ಮುಖ್ಯವಾಗಿರುತ್ತದೆ. ಸುಬ್ರಾಯ ಇಲ್ಲಿ ಆಧುನಿಕ ಮನಸ್ಸುಳ್ಳವನಾಗಿ ಪ್ರವೇಶಿಸುತ್ತಾನೆ. ಇವನ ಸ್ನೇಹಿತ ಇವರಿಬ್ಬರು ಸಮನಾದ ಮನಸ್ಸು ಮತ್ತು ಸಮಾನದ ಚಿಕಿತ್ಸಾ ಬುದ್ಧಿ ಆದರೆ ಅದರಲ್ಲೂ ಸುಬ್ರಾಯನದು ಅವನಿಗಿಂತಲೂ ಬುದ್ಧಿವಂತಿಕೆಯಲ್ಲಿ ಹೆಚ್ಚು ಎನ್ನಬಹುದು.

ಸುಬ್ರಾಯ ತನ್ನ ಸ್ನೇಹಿತ ಜನ್ನನನ್ನು ಕರೆದುಕೊಂಡು ನಾಗನಕಲ್ಲು ಇರುವ ಕಾಡಗುಡ್ಡಗಳಿಗೆ ತಿರುಗಾಡಲು ಹೋಗುತ್ತಾನೆ. ಅವನು ಮೂಡೂರಿನ ಜನತೆಯ ಬಗ್ಗೆ *"ನಮ್ಮ ಮೂಡೂರಿನಲ್ಲಿ ಅರಳು ಮರುಳರಿಗೂ, ಬುದ್ಧಿ ಸಾಚಾ ಇರುವವರಿಗೂ ಯಾವ ವ್ಯತ್ಯಾಸವೂ ಇಲ್ಲ. ಯಾವುದೇ ಮರ, ಕಲ್ಲು, ಕುಂಟೆ, ಏನನ್ನೂ ಕಂಡರೂ ಒಂದೊಂದು ಕತೆ ಹೇಳುತ್ತಾರೆ. ಅದು ಭೀಮ ಅಡಿಗೆ ಮಾಡಿದ ಒಲೆ; ಇದು ಪಾಂಡವರು ಕಟ್ಟಿದ ದೇವಸ್ಥಾನ, ಅಗೊಮ್ಮೆ ರಾವಣನು ಮಿಂದ ತೀರ್ಥ; ಹೀಗೆ ಕತೆಯ ಮೇಲೆ ಕತೆ! ನಮ್ಮ ಅಮ್ಮನ ಬಾಯಿಯಲ್ಲಿ ಅಂಥ ನೂರಾರು ಕಥೆಗಳಿವೆ."*[೪೦] ಎನ್ನುತ್ತಾನೆ.

ನಿಸರ್ಗಕ್ಕೆ ಪುರಾಣ ಕಲ್ಪನೆಯನ್ನು ನೀಡಿರುವ ಮೂಡೂರಿನ ಜನತೆಯ ನಂಬಿಕೆಯನ್ನು ಸುಬ್ರಾಯ ವ್ಯಂಗ್ಯವಾಗಿ ಆತನ ವಾಸ್ತವಿಕತೆಯನ್ನು ತೋರಿಸುತ್ತದೆ. ಅಲ್ಲದೆ ಇಂತಹ ಕತೆಗಳ 'ಒಂದಕ್ಕಾದರೂ ತಲೆ ಬುಡವಿದಯೇ? ಅದನ್ನು ಏನಿಸಿದರೆ ನಗು ಬರುತ್ತದೆ.....' ಎನ್ನುತ್ತಾನೆ. ಇದು ಅವನ ಆಧುನಿಕ ಮನೋಧರ್ಮವಾಗಿದೆ. ಸಂಪ್ರದಾಯ ನೆಲೆಗಟ್ಟಿನಲ್ಲಿರುವವರಿಗೆ ಬಲವಾದ ಚೌಟಿಯೇಟು ನೀಡುತ್ತಿದ್ದಾನೆ. ಆಕೆಯ ಬಗ್ಗೆ ಹೇಳುತ್ತಾ ಹಾಗೆಯೇ, ನಮ್ಮ ಅಜ್ಜಿ ಅನ್ನುತಿದ್ದ ನೆನಪು ನನಗೆ, ಈ ಮೂಡೂರಿಗೆ ಮೂರೂರು ಎಂಬ ಹೆಸರಿತ್ತಂತೆ ಇಲ್ಲಿ ಮತ್ತು ಇದರ ಆಚೀಚೆ ಮೂರು ಕಾಡು ಮತ್ತು ಹಾಡಿಗಳ ಸೆರಗುಗಳಿವೆ. ಅವು ಮೂರು ಕೂಡಿ ಒಂದು ಊರಾಗಿತ್ತಂತೆ. ಜನರ ಬಾಯಿ ತೊದಲಿ ಆ ಮೂರೂರು ಮೂಡನು ಆಯಿತು. ಈಗ ಕೇಳಿದರೆ ಮೂಡೂರು ನಮ್ಮದು ಎನ್ನತ್ತಾರೆ. ನಮ್ಮದು ನಡೂರು ಆಚಿನದು ಮೂಡೂರು; ನಮ್ಮ ಈಚಿನದು ಪಡೂರು ಆಚೆ ಮೂಡೂರಿನಲ್ಲಿ ಒಂದು ಹಳೆಯ ಬಸರೀ ಮರವಿದ್ದಿರಬೇಕು. ಅದರ ಸುತ್ತಲೂ ಒಂದು ಕಟ್ಟೆ ಇದ್ದಿರಬೇಕು.

---

೪೦. ಶಿವರಾಮ ಕಾರಂತ, ಮೂಕಜ್ಜಿಯ ಕನಸುಗಳು, ಪುಟ-೪೫

ಅದಕ್ಕೆ ಬಸರಿಕಟ್ಟೆ ಎಂದು ಹೆಸರು. ಈಗ ಅದನೆಲ್ಲ ಕಾಡು ನುಂಗಿಕೊಂಡಿದೆ ನಮ್ಮದು ಆಶ್ವತ್ಥಕಟ್ಟೆ ಪಡುವಣದಲ್ಲಿಯು ಒಂದು ಕಟ್ಟೆ ಇತ್ತಂತೆ. ಇದಕ್ಕೆ ಬೂದಿಕಟ್ಟೆ ಎಂಬ ಹೆಸರಂತೆ ಅಲ್ಲಿ ಯಾವ ಮರವಿತ್ತೋ; ಯಾಕೆ ಆ ಹೆಸರಿಟ್ರೋ ನನಗೆ ನಮ್ಮ ಒಂದು ಕಟ್ಟೆ ಮಾತ್ರ ಗೊತ್ತು ಉಳಿದೆವು ಯಾವುದನ್ನು ಕಂಡ ನೆನಪಿಲ್ಲ. ನಾನು ಎಲ್ಲಿಗೂ ಹೋದವಳಲ್ಲ. ಮನೆ ಬಿಟ್ಟರೆ ಬೇಸರ ನನಗೆ 'ಆಗ ಸುಬ್ರಾಯ ಅಜ್ಜಿ ಹಾಗೆಯೇ ಈ ಊರಲ್ಲಿದ್ದು ಇದು ನಮಗೆ ಬೇಸರ ಬರಲಿಲ್ಲವೇ' ಎಂದು ಕೇಳುತ್ತಾನೆ.

"ನನಗೆ ಇದೆ ಚಂದ ಎಂದ ಕೇಳಿ ನಕ್ಕರು ಆಗ ಜನಾರ್ಧನ ಯಾಕೆ ನಕ್ಕಿರಿ? ಎಂದಾಗ ಅಜ್ಜಿಯು ಮೂರು ಮೂರು ಕಟ್ಟೆಗಳ ವಿಚಾರ ಕೇಳಿದಾಗ ನನ್ನ ತಲೆಯಲ್ಲಿಯೂ ಏನೇನೋ ಅನಿಸಿತ್ತು! ಅವರು ಬರಿದೆ ಕಟ್ಟೆಯ ಬುಡದಲ್ಲಿ ಆಶ್ವತ್ಥದ ಕಟ್ಟೆ ಎಂದು ಇದನ್ನು ಕರೆಯುವ ಬದಲು ಬಸರೀಕಟ್ಟೆ ಎಂದ ಹಾಗೆ 'ಬಾಳ್ ಕಟ್ಟೆ' ಎಂದಿದ್ದರೆ ಚೆನ್ನಾಗಿರುತ್ತಿತ್ತು. ಆಗ ಸುಬ್ರಾಯ ನನಗೆ ಒಂದೂ ಅರ್ಥವಾಗಲಿಲ್ಲವಲ್ಲ ಅಜ್ಜಿ ಎನ್ನುತ್ತಾನೆ. ಅದಕ್ಕೆ ಅಜ್ಜಿ ಆ ಬಸರೀ ಕಟ್ಟೆಯಲ್ಲಿ ಹುಟ್ಟಿ ಬೂದಿಕಟ್ಟೆಯಲ್ಲಿ ಮುಗಿಯುವ ಮೊದಲು ನಾವು ಒಡಾಡಿಕೊಂಡಿರುವ ಕಟ್ಟೆ ಬಾಳಿನ ಕಟ್ಟೆಯಲ್ಲವೇ? ಮೂರೂರು ಅಂದರೆ ಅದೇ ಈ ಜಗತ್ತೆಲ್ಲ ಮೂಡೂರೇ"[೪೧] ಎನ್ನುತ್ತಾರೆ.

ಸುಬ್ರಾಯ ಕುತೂಹಲದ ಪ್ರತಿಯೊಂದು ಪ್ರಶ್ನೆಗೂ ಅಜ್ಜಿ ವೈಜ್ಞಾನಿಕ ನೆಲಗಟ್ಟಿನಲ್ಲಿ ಉತ್ತರಿಸುತ್ತಾಳೆ. ಮನುಷ್ಯನ ಹುಟ್ಟು ಬಸರೀಕಟ್ಟೆ ಜೀವನ ನಡೆಸುವುದು ನಮ್ಮ ತಾರ್ಕಿಕ ಪ್ರಪಂಚ. ಅದು ಬಾಳ್ಕಟ್ಟೆ ಅಂದರೆ ಭೂಮಿಯ ಮೇಲೆ ಬದುಕನ್ನು ಕಟ್ಟಿಕೊಂಡು ಅಜ್ಜಿ ಕೂತಿರುವ ಆಶ್ವತ್ಥ ಕಟ್ಟೆ. ಎಲ್ಲಾಮುಗಿದ ಮೇಲೆ ಬೂದಿಕಟ್ಟೆಯೆಂದರೆ ಸ್ಮಶಾನಕ್ಕೆ ಹೋಗುವುದು ಎಂದು ಸುಬ್ರಾಯನಿಗೆ ಅರ್ಥೈಸುತ್ತಾಳೆ. ಮಾತುಗಳಲ್ಲಿ ಆಧುನಿಕ ನೆಲೆಯನ್ನು ಕಾಣಬಹುದು ಸುಬ್ರಾಯ ತನ್ನ ಸಂಶೋಧನೆಗಾಗಿ ಜನಾರ್ಧನನ್ನು ಮೂಡೂರಿನ ಕಾಡುಗಳಿಗೆ ಕರೆದೊಯ್ಯುತ್ತಾನೆ. ಅಲ್ಲಿ ತನ್ನ ಸಂಶೋಧನಾ ಸಹಾಯಕ್ಕಾಗಿ ಅಣ್ಣುನಾಯ್ಕನನ್ನು ಕರೆದೋಯ್ಯುತ್ತಾರೆ. ಮೂಡೂರಿನ ಸೆರಗು ದಾಟಿದರೆ ಕುಡಿಬಿಯರ ಗುಹೆಗಳು ಸಿಗುತ್ತವೆ. ಅಲ್ಲಿ ವಾಸಿಸುವ ಬೆಣವಕ್ಕೆ ಹೋಗುತ್ತಾರೆ. ಇವರು ಬೆಣದ ಹಂಚಿನಿಂದ ನಿಂತು 'ಕೋಕ್ ಕೋಕ್' ಎಂದು ಎರಡು ಬಾರಿ ಕೂಗಿದರು. ಆಗ ಮನೆಯಿಂದ ಹೊರ ಬಂದ ಅಣ್ಣುನಾಯ್ಕ ಹೊರಕ್ಕೆ ಒಂದು ಏನು ಕರೆದಿರಿ. ಅವನು ವಿಷಯ ತಿಳಿದು ಹಾಗಿದ್ದರೆ ಈ ಬಲದ ಜಾಡನ್ನು ಹಿಡಿದು ನಾಲ್ಕು ಹೆಜ್ಜೆ ಮುಂದಕ್ಕೆ ಹೋಗಿ ನಿಮ್ಮ ಬೆನ್ನಿಗೆ ಬಂದು ಸೇರುತ್ತೇನೆ ಎಂದು ಹೇಳಿದ. ಅಂತೆ ಬಂದ ಅಣ್ಣುನಾಯ್ಕ ಋಷಿಗಳ ತಪಸ್ಸು ಮಾಡುತ್ತಿದ್ದ ಗುಹೆಗಳನ್ನು ತೋರಿಸಲು ಕರೆದುಕೊಂಡು ಹೋಗುತ್ತಾನೆ. ಆದರ ಬಗ್ಗೆ *"ಸುಬ್ರಾಯ ಮುಂದೆ ಅವನು ಹೋದದ್ದೇ ದಾರಿ ಕಾಡಿನ ಜಾಡು ಅಷ್ಟೊಂದು ಕಾಣಿಸುತ್ತಿರಲಿಲ್ಲ. ಅಣ್ಣು ಕಣ್ಣಿಗೆ ಇದಿರಾದ ಗಿಡಗಳು ಅಡಚುಗಳನ್ನು ಸವರಿ ಮೈ ಬಗ್ಗಿಸಿ, ನುಗ್ಗಿ, ನುಸುಳಿ ಸರಸರ ಹೋದರೆ ಅವನ ಹಿದಂಕ್ಕೆ ನಾವು ಹೋಗುತ್ತಿದ್ದೆವು. ಆವನ ಚುರುಕು ನಮಗೆ ಬರಲಾರದು. ನಮ್ಮ ಮುಖಗಳಿಗೆ ಎಷ್ಟೋ ಸಾರಿ ಮರದ ಆನರುಗಳು ಬಡಿದವು ಎನ್ನುವುದಕ್ಕಿಲ್ಲ. [illegible]*

೪೧. ಅದೇ, ಪುಟ ೨೪-೨೫

ಘಂಟೆಯಾದರೂ ನಡೆದಿರಬೇಕು. ಆದರೂ ಬಹಳ ದೂರಕ್ಕೆ ಸರದು ಬಂದೆವು ಎಂಬ ಭಾವನೆ ಉಂಟಾಗಲಿಲ್ಲ. ಅಷ್ಟಕ್ಕೆ ಒಂದು ಬೆಟ್ಟದ ಬೆನ್ನಿಗೆ ಬಂದೆವು. 'ನಿಲ್ಲ ಒಂದಿಷ್ಟು' ಎಂದು ಹೇಳುತ್ತಾ ಅಣ್ಣು ಕೋವಿಯನ್ನು ನೆಲದಲ್ಲಿರಿಸಿ ಸಮೀಪದ ಒಂದು ಮರವನ್ನೇರಿದ ಇವನೇಕೆ ಈ ಕೆಲಸದಲ್ಲಿ ತೊಡಗಿದ ಎಂಬ ಯೋಚನೆ ನನಗೆ ಬಂತು. ಆತ ಬಯನಿ ಮರದ ಎತ್ತರದಿಂದ ನಾಲ್ಕು ಸುತ್ತಲೂ ನೋಡಿ ಅಲ್ಲಿಂದಲೇ ಅಯ್ಯ ಇನ್ನೇನೂ ಬಹಳ ದೂರವಿಲ್ಲ ದಿಕ್ಕು ತಿಳಿಯಿತು ಅಣ್ಣು ನಾಯಕನ ಸಹಾಯದಿಂದ ಕಂಡುಕೊಂಡು ಗುಹೆಯನ್ನು ಹೊಕ್ಕರು. ಆಗ ಅವರಿಗೆ ಆ ಗುಹೆಯಲ್ಲಿ ಜನರಂತೂ ಅಲ್ಲಿ ವಾಸವಾಗಿದ್ದ ಕುರುಹು ಅಷ್ಟು ದೊಡ್ಡದಾದ ಬೂದಿಯ ರಾಶಿಯಿಂದಲೇ ಸ್ಪಷ್ಟವಾಯಿತು. ಅಷ್ಟು ದಪ್ಪವಾದ ರಾಶಿ ಬೀಳಬೇಕಾದರೆ ದೀರ್ಘಕಾಲ ವಾಸ ಮಾಡಿರಬೇಕು."[೪೧]

ಆಧುನಿಕ ಪ್ರತಿನಿಧಿಗಳಾದ ಸುಬ್ರಾಯ ಮತ್ತು ಜನಾರ್ಧನರು ಆದಿವಾಸಿ ಕುಡುಬಿ ಜನಾಂಗದ ಅಣ್ಣುನಾಯ್ಕನ ಸಹಾಯದಿಂದ ಕಾಡನ್ನು ಅರಿಯುವುದರಲ್ಲಿ ಮತ್ತು ಕಾಡು ಜೀವನಕ್ಕೆ ಹೊಂದಿಕೊಳ್ಳುವಲ್ಲಿ ಎಡವುತ್ತಾರೆ. ಅಣ್ಣುನಾಯ್ಕ ತನಗೆ ಅಡ್ಡ ಬರುವ ಎಡರುಗಳನ್ನು ಸವರಿ ಬೇಗಬೇಗನೆ ಮುನ್ನಡೆಯುವುದು ಇವರು ಮೊದಲು ಹೋಗಿ ಕರೆದಾಗ ಇವರನ್ನು ಕಳುಹಿಸಿ ಅವರಿಗಿಂತ ಮುಂಚೆ ಹಾಜರಿರುವುದು. ಈ ಎಲ್ಲಾ ಗುಣಗಳಲ್ಲಿ ನಿಸರ್ಗದೊಂದಿಗೆ ಆದಿವಾಸಿಗಳು ಹೊಂದಿರುವ ಗಾಢ ಸಂಬಂಧ ತಿಳಿಯುತ್ತದೆ. ಗುಹೆಯಲ್ಲಿ ಸುಬ್ರಾಯನಿಗೆ ಕಲ್ಲಿನ ಆಯುಧಗಳು, ಕೊಂಬು ಇವೆಲ್ಲಾ ಸಿಗುತ್ತದೆ. ಇದನ್ನು ಅವನು ಅನಂತರಾಯನಿಗೆ ತೋರಿಸಿ ಅದರ ಇತಿಹಾಸದ ವಿವರ ಪಡೆಯುತ್ತಾನೆ. ಸುಬ್ರಾಯ ನಂತರ ಅಜ್ಜಿಯ ಬಳಿ ಬಂದು ಋಷಿಗಳಿಗೆ ಏನು ಭಯ, ಅಜ್ಜಿ ಭಯ ಇರುವವರು ಹುಲಿ, ಕರಡಿ ಇರುವ ಗುಹೆಗಳನ್ನು ಸೇರುತ್ತಾರೆಯೇ? ಎಂದು ಕೇಳುತ್ತಾನೆ.

ಆಗ ಅಜ್ಜಿ "*ಗುಹೆ ಇರುವುದೇ ಅದಕ್ಕೆ ಅವರಿಗೆ ಹುಲಿ, ಸಿಂಹಗಳ ಭಯವಿಲ್ಲ. ಅವರಿಗಿರುವುದು ಸಂಸಾರದ ಭಯ ಅವರನ್ನು ಹುಟ್ಟಿಸಿದ ದೇವರೇ ಸಂಸಾರದ ಒಳಕ್ಕೆ ಹುಟ್ಟಿಸಿ ಇರು ಮಗುವೇ ಎಲ್ಲರೊಂದಿಗೆ ನೀನು ಎಂದು ಬಿಟ್ಟ ಇಲ್ಲವಾದರೆ ಯಾಕೆ ಹುಟ್ಟಿಸಬೇಕಾಗಿತ್ತು? ಇಲ್ಲಿ ಇರುವುದಕ್ಕಾಗಿಯೇ ಅವನು ಹುಟ್ಟಿಸಿದ ಇವರಿಗೆ ಸಂಸಾರದಲ್ಲಿರುವುದಕ್ಕೆ ಭಯ. ಆದರೆ ಅದು ಎಂಥ ಸುಖ? ಶಾಶ್ವತ ಸುಖ! ಅಂಥ ಸುಖ ಆ ಪರಮಾತ್ಮನಿಗೆ ಉಂಟೋ ಇಲ್ಲವೋ! ಅವನು ಸೃಷ್ಟಿಸಿದ ಜಗತ್ತು ಇರುವ ತನಕವೂ ಹೀಗೆ ಸಿಗಬೇಕು ಅವನಿಗೆ ಸುಖ? ಆದರೆ ಈ ಋಷಿಗಳಂಥವರು ಸಂಸಾರವನ್ನು ಬಿಟ್ಟು ಓಡಲಿಕ್ಕೆ ಕಲಿತರು. ಅವರಿಗೆ ಹೆಂಡತಿ ಮಕ್ಕಳು ಬೇಡವಾದರೆ ಬೇಡ ಹೋಗಲಿ ಅಪ್ಪ. ಅಮ್ಮ ಬೇಡವಾದರೂ ಬೇಡ ಹೋಗಲಿ*"[೪೨] ಎಂದು ವಿಮರ್ಶೆ ಮಾಡುತ್ತಾಳೆ. ಮೂಕಜ್ಜಿ ತನ್ನ ತ್ರಿಕಾಲ ಜ್ಞಾನದಿಂದ ಋಷಿಗಳು ಸಾಂಸರಿಕ ಜೀವನದಿಂದ ವಿಮುಖ ಕಾರಣದಿಂದ ಮತ್ತು ಹುಟ್ಟಿಗೆ ಲಿಂಗ, ಯೋನಿ ಸಂಬಂಧ, ಕೃಷ್ಣಾ ಅರ್ಜುನನಿಗೆ ಗೀತೆಯನ್ನು ಬೋಧಿಸಿದ್ದು, ದೇವತೆಗಳ ಸ್ತ್ರೀ ಲೋಲಪತೆ, ಧರ್ಮಗುರುಗಳ ಕಪಟತನ, ದೇವರ ಬಗ್ಗೆ ನಂಬಿಕೆ ತನ್ನ ಸುತ್ತ ಮುತ್ತಲಿನ ಜನಗಳ ಆಂತರಿಕ ಗುಣಗಳನ್ನು ಗಂಧ ತೇದು ಹಚ್ಚುವಂತೆ ಇಡೀ ಮನುಷ್ಯನ ಕಂದಾಚಾರವನ್ನು ಜಾಲಾಡುತ್ತಾಳೆ. ಇದನ್ನು ಕಂಡು ಜನರಿಗೆ ವಿಸ್ಮಯವಾಗುತ್ತದೆ.

---

೪೧ ಅದೇ, ಪುಟ ೪೭, ೪೮
೪೨ ಅದೇ, ಪುಟ – ೬೩

ಇದರಿಂದ ಸುಬ್ರಾಯನ ಸಂಶೋಧನೆ ಇಂಬು ಕೊಟ್ಟಂತೆ ಆಗುತ್ತದೆ. ಹೀಗೆ ನಿಸರ್ಗದ ಬಗ್ಗೆ ಮಾನವನು ಇಟ್ಟುಕೊಂಡಿರುವ ಕಲ್ಪನೆ ಮತ್ತು ಆಡಂಬರತನವನ್ನು ಅಜ್ಜಿಯ ನಿಸರ್ಗದ ಸತ್ವದ ದೃಷ್ಟಿಯಲ್ಲಿ ನೋಡುವುದರ, ಮೂಲಕ ನಿಸರ್ಗವೇ ಸತ್ಯ ಮಿಕ್ಕೆಲ್ಲ ನಂಬಿಕೆಗಳು ಸುಳ್ಳು ಎಂದು ಸಾರುತ್ತಾಳೆ. ಮನುಷ್ಯನ ಕಂದಾಚಾರವನ್ನು ಕಂಡು ಒಳಗೊಳಗೆ ನಗುತ್ತಾಳೆ. ಹೀಗೆ ಕಾರಂತರು ಮೂಕಜ್ಜಿಯ ಮೂಲಕ ಸಾರ್ವಕಾಲೀಕ ನೆಲೆಯಲ್ಲಿ ಭೂಮಿಯೊಂದಿಗೆ ಮಾನವ ಹೊಂದಿರುವ ದೃಷ್ಟಿಯ ವೈಚಾರಿಕ ನೆಲೆಯನ್ನು ಹೇಳುತ್ತಾರೆ.

'ಗೊಂಡಾರಣ್ಯ' ಕಾದಂಬರಿಯು ಕಾರಂತರ ದೃಷ್ಟಿಯ 'ರಾಜಕೀಯ ಕಾದಂಬರಿ' ಇಲ್ಲಿ ರಾಜಕೀಯಕ್ಕೆ ಸಂಬಂಧಿಸಿದ ಎಲ್ಲ ತಂತ್ರಗಳು ಇವೆ ಈ ತಂತ್ರಗಳು ನಿಸರ್ಗವನ್ನು ಖಾಸಗಿ ಸ್ವತ್ತಾಗಿ ನೋಡುತ್ತವೆ. ಈ ತಂತ್ರಗಳು ಆಧುನಿಕ ದೃಷ್ಟಿಕೋನವನ್ನು ಹೊಂದಿವೆ. ಗೊಂಡಾರಣ್ಯ ಕಾದಂಬರಿಯ ಶೀರ್ಷಿಕೆಗೆ ತಕ್ಕಂತೆ ಇಲ್ಲಿನ ಕಥೆಯು ಇದೆ. ಇಲ್ಲಿ ನಿಸರ್ಗವಿದೆ. ಈ ನಿಸರ್ಗದ ಸಂಪತ್ತು ಇದೆ. ಆದಿವಾಸಿಗಳು ಈ ನಿಸರ್ಗವನ್ನು ನಂಬಿ ಬದುಕುತ್ತಿದ್ದಾರೆ. ಈ ನಿಸರ್ಗದ ಪ್ರತಿನಿಧಿ ಕಾಡು. ಇದು ಗೊಂಡಾರಣ್ಯ ಪ್ರಾಂತ್ಯದ ಸುತ್ತಲು ಹಬ್ಬಿದೆ. ಇದರ ದೊರೆ ಪ್ರತಾಪಚಂದ್ರ, ಈತನು ಸ್ವಾತಂತ್ರ್ಯ ಪೂರ್ವದಲ್ಲಿ ಮತ್ತು ಸ್ವಾತಂತ್ರ್ಯ ಬರುವ ದಿವಸದವರೆಗು ಇದ್ದ ನಂತರ ಇವನನ್ನು ಪೂಜಿಸುತ್ತಿರುವ ಜನರೇ ಇವನ ವಿರುದ್ಧ ತಿರುಗಿಬಿದ್ದರು.

ಪ್ರಜಾಪ್ರಭುತ್ವ ಸರ್ಕಾರಕ್ಕೆ ಪಟ್ಟು ಹಿಡಿದ್ದರು. ಈ ಚಳುವಳಿಯ ನೇತಾರ ಹಿಂಜಿ ವಾಮನರಾಯ. ಇವನಲ್ಲಿ ರಾಜಕಾರಣತ್ವ ಮತ್ತು ಸರ್ವಾಧಿಕಾರತ್ವವು ಇದೆ. ದೇಶವಾದಿ ಅಧ್ಯಕ್ಷನಾಗಿದ್ದ ಅರುಣಾಚಲಯ್ಯನನ್ನು ಕುತಂತ್ರದ ಮೂಲಕ ಕೆಳಗಿಳಿಸಿ ಅಧ್ಯಕ್ಷನಾಗುತ್ತಾನೆ. ಇದರಿಂದ ನೊಂದ ಅರುಣಾಚಲಯ್ಯ ದೇಶವಾದಿ ಪಕ್ಷವನ್ನು ತೊರೆದು ನಾಗಲಾಂಭಿಕೆ ಸ್ಥಾಪಿಸಿದ್ದ 'ಜನವಾದಿ ಪಕ್ಷ' ಸೇರಿ ಅದರ ಅಧ್ಯಕ್ಷ ಸ್ಥಾನ ಪಡೆಯುತ್ತಾನೆ. ಕಾಂಚನ ಮಾಲೆ ದೇಶವಾದಿ ಪಕ್ಷದೊಂದಿಗೆ ಕೈ ಜೋಡಿಸಿ ಅರುಣಾಚಲಯ್ಯ ಪ್ರಧಾನಿಯಾಗುತ್ತಾನೆ. ಮತ್ತೊಮ್ಮೆ ಚುನಾವಣೆ ನಡೆದಾಗ ಕಾಂಚನ ಮಾಲೆ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸಿ ಗೆಲ್ಲುತ್ತಾಳೆ. ದೇಶವಾದಿ ಪಕ್ಷ ಸೋತು ಹೋಗುತ್ತದೆ. ಅರುಣಾಚಲಯ್ಯ ಮತ್ತೊಮ್ಮೆ ಗೆದ್ದು ಸ್ವತಂತ್ರ ಅಭ್ಯರ್ಥಿಗಳ ಸಹಾಯದಿಂದ ಮತ್ತೆ ಪ್ರಧಾನಿಯಾಗುತ್ತಾರೆ. ಆದರೆ ಕುತಂತ್ರಕ್ಕೆ ಬಲಿಯಾಗುತ್ತಾರೆ. ಈ ಕಥಾನಕದ ನಡುವೆ ಕಾರಂತರು ನಿಸರ್ಗವನ್ನು ಮಾನವ ಸಂಬಂಧದೊಂದಿಗೆ ಗುರುತಿಸುತ್ತಾರೆ. ಈ ನಿಸರ್ಗ-ಮಾನವ ಸಂಬಂಧದಲ್ಲಿ ಸ್ವತಂತ್ರೋತ್ತರ ಭಾರತದಲ್ಲಿರಾಜಕೀಯ ಪಲ್ಲಟಗಳ ಪರಿಣಾಮವಾಗಿ ನಮ್ಮವರೇ ಆದ ಆಡಳಿತಗಾರರು ನವವಸಹಾತುಶಾಹಿಯ ನೆಲೆಯಲ್ಲಿ ಜನರನ್ನು ಹಾಗೂ ನೈಸರ್ಗಿಕ ಸಂಪತ್ತನ್ನು ಶೋಷಣೆಗೆ ಒಳಪಡಿಸುತ್ತಾರೆ.

ಗೊಂಡಾರಣ್ಯ ಬಗ್ಗೆ ಕಾರಂತರು ಬರೆಯುತ್ತಾ *"ಇಂದು ಪ್ರಜಾಪ್ರಭುತ್ವ ಗಳಿಸಿದ ಗೊಂಡಾರಣ್ಯದ ಜನಗಳು ಎಂಥವರು, ಏನು ಎಂದು ತಿಳಿಯುವುದು ಅತ್ಯಾವಶ್ಯಕ. ನಾಡಿನ ಮೂರು ದಿಕ್ಕಿಗೂ ಚಾಚಿರುವ ಪರ್ವತಾವಳಿಯಲ್ಲಿ ವಾಸಿಸುತ್ತಿರುವ ಜನಗಳೂ ಆದಿವಾಸಿಗಳು, ರಾಜಕೀಯದ ಗಂಧ ಗಾಳಿಯಿಲ್ಲದವರು. ಅದಕ್ಕಿಂತ ಮಿಕ್ಕಿದ ಜನಸಂಖ್ಯೆಯಿರುವುದು ನಡುವಣ ಮಲೆನಾಡು, ಬಯಲು ಸೀಮೆಗಳಲ್ಲಿ ಪಡುವಣ ಮಲೆನಾಡಿನಿಂದ ಮುಂದೆ ಸರಿದಂತೆ ಜನವಸತಿ ಹೆಚ್ಚಾಗುತ್ತಾ ಬರುತ್ತದೆ. ಆದರೆ ಭಾರತದ ಇತರ ಪ್ರಾಂತಗಳಂತಯೇ ಬಹುಮಟ್ಟಿನ ಜನಗಳು ಬಡವರು, ಕೃಷಿಯೇ ಜೀವನಾಧಾರವಾದವರು"*[೪೪] ಇಂತ ಪ್ರಾಕೃತಿಕ ಸೊಬಗನ್ನು ಹೊಂದಿರುವ ಗೊಂಡಾರಣ್ಯ ಪ್ರಾಂತ್ಯಕ್ಕೆ ಇಂದು ಹೊಸ ಗಾಳಿ ಬೀಸಿದೆ. ಅದು ಪ್ರಜಾಪ್ರಭುತ್ವದ ಗಾಳಿ ಅದುವರೆಗೂ ರಾಜ ಪ್ರತಾಪರಾಯರಿಗಾಗಿ ಜೈಕಾರ ಹಾಕುತ್ತಿದ್ದ ಜನ, ಈಗ ವಾಮನರಾಯನಿಗೆ ಜೈಕಾರ ಹಾಕುತ್ತಿದ್ದಾರೆ. ಇದನ್ನು ಕಂಡ ದೊರೆಯ ಆಡಳಿತವನ್ನು ಇನ್ನೂ ನಂಬಿ ಕೂತಿರುವ ವ್ಯಕ್ತಿಗಳಿಗೆ ದಿಗ್ಭ್ರಮೆಯಾಗಿದೆ. ಅಂತಹ ವ್ಯಕ್ತಿಗಳಲ್ಲಿ ಮುಕ್ಕಣ್ಣ ಸಹ ಒಬ್ಬ. ಈತ ವಿಕ್ರಮ ನಗರದ ನಾಗರೀಕರನ್ನು ಈ ರಾಜಕೀಯ ಆಂದೋಲನ ಮಾಡಿದ ದಿನಗಳಲ್ಲೆ, ಈತ ಅಲ್ಲಿಗೆ ಹೋಗಿದ್ದ. ಆಗ ಅಲ್ಲಿ ಕಂಡ ನೋಟವನ್ನು ಅವನ ಕಣ್ಣಗಳು ನಂಬಲಿಲ್ಲ, ಕೇಳಿದುದನ್ನು ಅವನ ಕಿವಿಗಳು ನಂಬಲಿಲ್ಲ. ಅದಕ್ಕೆ ಕಾರಣ,ಅವನ ವಯಸ್ಸು; ಸಂಸ್ಕಾರ; ಹಳೆಗಾಲದ ಕಣ್ಣು, ಕಿವಿಗಳು, ಹಳ್ಳಿಯಲ್ಲೇ ಹುಟ್ಟಿ ಹಳ್ಳಿಯಲ್ಲೇ ಬೆಳೆದು, ಹೊಸದಕ್ಕೆ ಹೊಂದಿಸಿಕೊಳ್ಳಲಾರದ ಮುದುಕ ಮುಕ್ಕಣ್ಣ. ಹಳ್ಳಿಯಿಂದ ಹೆಚ್ಚಾಗಿ ಹೊರಗೆ ಹೋಗದವನು ತಾನಿರುವ ಕಗ್ಗಾಡೆ ಸ್ವರ್ಗವೆಂದು ತಿಳಿದವನು ಅವನ ಹಳ್ಳಿಹೆಸರು ಕಿಗ್ಗಳ್ಳಿ.

"ಗೊಂಡಾರಣ್ಯದ ಪ್ರಜಾ ಸಾಮಾನ್ಯರಲ್ಲಿ ಮುಕ್ಕಣ್ಣ ಎಲ್ಲರಂತಿರುವ ಒಬ್ಬನಾದುದರಿಂದ ಅವನ ವಿಷಯವನ್ನು ನಾವು ತಿಳಿಯಬೇಕಾಗುತ್ತದೆ. ಅವನ ಊರು ನಿಸರ್ಗದೇವತೆಯ ಆಲಯವೆಂದರೂ ಸಲ್ಲುತ್ತದೆ. ಅವನ ಹಳ್ಳಿಗೆ ಪಡು, ತೆಂಕು, ಬಡಗಣಗಳಲ್ಲೂ ಬೆಟ್ಟದ ಸೆರಗು ಗೊಂಡಾರಣ್ಯ ಪರ್ವತಾವಳಿ, ತೆಂಕಣ ಸೆರಗು ದೊಂಡಾರಣ್ಯ ಇವುಗಳಲೊಂದರ ಹೆಸರು ನಾಡಿಗೇನೆ ಬಂದಿದೆ."[೪೫]

ಮುಕ್ಕಣ್ಣ ಇಂತಹ ನಿಸರ್ಗದ ವಾತಾವರಣದಲ್ಲಿದ್ದು, ಆತನಿಗೆ ತಾನು ನಂಬಿಕೊಂಡು ಬಂದಿದ್ದ ತತ್ವಗಳಿಗೆ ಮತ್ತು ನಂಬಿಕೆಗಳಿಗೆ ತಕ್ಷಣ ಹೊಡೆತ ಇದ್ದಂತೆ ಆಶ್ಚರ್ಯ ಮತ್ತು ಭಯಗೊಂಡನು. ಸ್ವಾತಂತ್ರೋತ್ತರ ಭಾರತದ ಕಾಲ ಘಟ್ಟದಲ್ಲಿ ಅನೇಕ ಪ್ರಾಂತೀಯ ರಾಜರುಗಳು ಪ್ರಜಾಪ್ರಭುತ್ವಕ್ಕೆ ದಾರಿ ಮಾಡಿಕೊಟ್ಟು ತಮ್ಮ ಅಧಿಕಾರವನ್ನು ತ್ಯಜಿಸುತ್ತಿದ್ದ ಕಾಲವಾಗಿತ್ತು. ಅದೇ ರೀತಿಯಾಗಿ ಗೊಂಡಾರಣ್ಯದ ರಾಜ ಪ್ರತಾಪಚಂದ್ರ ತನ್ನ ಅಧಿಕಾರವನ್ನು ತ್ಯಜಿಸಿ, ವಾಮನರಾಯನಿಗೆ ಅಧಿಕಾರ ಹಸ್ತಾಂತರಿಸಿದ. ಇದರಿಂದ ಸಾಮಾಜಿಕ, ಆರ್ಥಿಕ, ರಾಜಕೀಯ ಕ್ಷೇತ್ರದಲ್ಲಿ ಹೊಸ ಮುನ್ನುಡಿಗೆ ಕಾರಣವಾಯಿತು. ಈ ಅನುಭವವನ್ನು ಮುಕ್ಕಣ್ಣ ಪಡೆಯುವ ಮೂಲಕ ತಳಮಳಕ್ಕೆ ಈಡಾದ ಮೊದಲ ವ್ಯಕ್ತಿಯಾಗಿದ್ದಾನೆ.

---

೪೪. ಶಿವರಾಮ ಕಾರಂತ, ಗೊಂಡಾರಣ್ಯ, ಪುಟ-೧೩

೪೫. ಅದೇ, ಪುಟ - ೧೪

ಮುಕ್ಕಣ್ಣನ ತಂದೆ ತಿಪ್ಪಣ್ಣ. ಈತ ವಿಕ್ರಮ ಮನೆತನದ ಅರಸನಂತಿದ್ದ ಕಿಗ್ಗಲ್ಲಿ ಮಾನಹಳ್ಳಿ ಮೊದಲಾದ ಗ್ರಾಮಗಳನ್ನು ಉಂಬಳಿಯಾಗಿ ಪಡೆದಿದ್ದ ನಾಮಧಾರಿ ಒಕ್ಕಲಿಗರ ಒಕ್ಕಲು. ತಿಪ್ಪಣ್ಣನ ಧನಿ ಪಟ್ಟೇದಾರ ಅನಂತ ದೇವರು ತಿಪ್ಪಣ್ಣನ ಪಾಲಿಗೆ ಅನಂತದೇವರು ಇವನಿಗೆ ದೇವರು ಸಮಾನ ಅದೇರೀತಿಯಾಗಿ ತಿಪ್ಪಣ್ಣ ಸತ್ತ ನಂತರ ದಿಕ್ಕು ತೋಚದೆ ಅಳುತ್ತಿದ್ದ ಮುಕ್ಕಣ್ಣನನ್ನು ಅನಂತ ದೇವರು ಬಂದು ಅವನ ಬೆನ್ನು ಚಪ್ಪರಿಸಿ "*ಮುಕ್ಕ ಯಾಕೆ ಅಳುತ್ತೀಯಾ? ಯಾರಿಗೆ ಜೀವ ಶಾಶ್ವತ? ನೀನು ಹೀಗೆ ಅತ್ತರೆ ಹೇಗೆ? ನೀನು ಗಂಡಸಲ್ಲವೆ. ನಿನ್ನ ತಾಯಿಯ ಮುಖ ನೋಡು ಅವಳಿಗೆ ಸಮಾಧಾನ ಹೇಳಿ ಅವಳ ಬದುಕನ್ನು ತಂಪು ಮಾಡಬೇಕು*"[೪೬] ಎನ್ನುತ್ತಾನೆ. ಆಗ ಈ ಮಾತು ಮುಕ್ಕಣ್ಣನ ಮೇಲೆ ಗಾಢ ಪರಿಣಾಮ ಬೀರುತ್ತದೆ. ಅನಂತದೇವರ ಮಕ್ಕಳು ಕೃಷ್ಣದೇವರು, ಜಯದೇವ ಮತ್ತು ವಾಸುದೇವ ಅನಂತದೇವರ ಮರಣದ ನಂತರ ಎರಡು ವರ್ಷಕ್ಕೆ ಕೃಷ್ಣದೇವ ಮರಣ ಹೊಂದುತ್ತಾನೆ. ನಂತರ ಪಟ್ಟೆದಾರರಾಗಿ ಪಟ್ಟಕ್ಕೆ ಬಂದವರು. ಈ ಜಯದೇವ ಮತ್ತು ವಾಸುದೇವರು ಆಧುನಿಕ ಸೊಗಡಿಗೆ ಅತಿಬೇಗನೆ ತುತ್ತಾಗುತ್ತಾರೆ. ಆ ಕಾರಣವಾಗಿ ಅವರು ಮುಕ್ಕಣ್ಣನನ್ನು ಕುರಿತು "*ಇಲ್ಲಿನ ಹವೆ ಹಿಡಿಸುವುದಿಲ್ಲ ಎನ್ನತೊಡಗಿದರು. ಹಾಗೆಂದಾಗಲಿಲ್ಲ ಮುಕ್ಕಣ್ಣ ಇಲ್ಲಿನ ಹವೆಗೇನಾಗಿದೆ ಧನಿಯೇ! ನಿಮ್ಮ ಹಿರಿಯರೆಲ್ಲ; ಇಲ್ಲೇ ಹುಟ್ಟಿ ಬೆಳೆದವರಲ್ಲವೇ?*"[೪೭] ಎನ್ನುತ್ತಾನೆ. ಆದರೂ ಬಂದ ಗೃಹಿಣಿಯರಿಂದಲೋ ಅವರ ಸ್ವಂತ ಬುದ್ಧಿಯಿಂದಲೋ ಅಣ್ಣ ತಮ್ಮಂದಿರು ಸರದಿಯಿಂದ ವಿಕ್ರಮ ನಗರದಲ್ಲಿ ವಾಸಿಸತೊಡಗಿದರು.

ಹೀಗೆ ಜಯದೇವ, ವಾಸುದೇವ ಕಿಗ್ಗಳ್ಳಿ ಬಿಡಲು ಆಧುನಿಕ ಶಿಕ್ಷಣ ಮತ್ತು ಪಟ್ಟಣದ ಆಕರ್ಷಣೆ ಅವರನ್ನು ವಿಕ್ರಮನಗರಕ್ಕೆ ಸೆಳೆಯಿತು. ಅಲ್ಲದೇ ಅಷ್ಟರೊಳಗೆ ಗೊಂಡಾರಣ್ಯ ಪ್ರಾಂತ್ಯದಲ್ಲಿ ರಾಜಕೀಯ ಪಲ್ಲಟಗಳಾಗಿತ್ತು. ಇದನ್ನು ಇವರೂ ಸೂಕ್ಷ್ಮವಾಗಿ ಗಮನಿಸಿದ್ದರು. ಅಲ್ಲದೇ ತಮಗೆ ಈ ವೃತ್ತಿಯಲ್ಲಿದ್ದರೆ ಜನ ಗೌರವ ಸರಿಯಾಗಿ ಕೊಡುವುದಿಲ್ಲವೆಂದು ಮನಗಂಡಿರಬಹುದು. ಆದ್ದರಿಂದ ಪರಂಪರಾಗತವಾಗಿ ರೂಢಿಸಿಕೊಂಡು ಬಂದಿರುವ ವ್ಯವಸಾಯದ ಭೂಮಿಯನ್ನು ಮತ್ತು ಒಕ್ಕಲುಗಳ ಉಸ್ತುವಾರಿ ತಮ್ಮ ನಂಬುಗೆಯ ಒಕ್ಕಲು ಮುಕ್ಕಣ್ಣನಿಗೆ ಒಪ್ಪಿಸಿ ಹೊರಡುವುದರಲ್ಲಿ ನಿಸರ್ಗ ಮತ್ತು ಮಾನವ ಸಂಬಂಧಗಳಲ್ಲಿ ಆಧುನಿಕತೆಯ ಪ್ರಭಾವವನ್ನು ಗುರುತಿಸಬಹುದು.

ಧನಿಯ ಕೃಪೆಯಿಂದ ದೊರೆತನಕ್ಕೆ ಕಡಿಮೆಯಿಲ್ಲ ಮತ್ತೊಂದು ಗೌರವ ಮುಕ್ಕಣ್ಣನ ಜೀವನಕ್ಕೆ ಅಂಟಿಕೊಂಡಿತು. ಅದು ಆದಿವಾಸಿಗಳ ಮಾತಿನಲ್ಲಿ 'ಡಂಣಾಯಕ' ಎಂದು ಆಗಿತ್ತು. ಒಂದು ದಿವಸ ಕಿಗ್ಗಳ್ಳಿಯ ಮಹಾ ಉತ್ಸವಕ್ಕೆ ದೊರೆಬಂದಾಗ, "ಧನಿ, ಕರಣಿಕರ ಅಪ್ಪಣೆಯಂತೆ ಇವನೇ ಕಾಡು ಸವರಿ, ದಾರಿ ಮಾಡಿಸಿ, ತೋರಣ, ಅಲಂಕಾರ ಮಾಡಿಸಿ, ಸಮೀಪದ ಗ್ರಾಮಸ್ಥರು ಸಲ್ಲಿಸಿದ ಗೌರವದಲ್ಲಿ ಪ್ರಮುಖವಾಗಿ ನಿಂತಿದ್ದ ದೊರೆ ಅಶ್ವಾರೋಹಿಗಾಗಿ ಬಂದಾಗ ನಮ್ಮ ಊರಿಗೆ ಬಂದು ನೆಲಪಾವನ ಮಾಡಿದಿರಿ ಎಂದಿದ್ದ."[೪೮]

೪೬. ಅದೇ. ಪುಟ–೧೬, ೧೭

೪೭. ಅದೇ. ಪುಟ – ೧೭, ೧೮

೪೮. ಅದೇ. ಪುಟ– ೧೯

ಕಾರಂತರು ಮುಕ್ಕಣ್ಣನ ಪಾತ್ರದಲ್ಲಿ ಪಾಳೇಗಾರಿಕೆಯ ಗುಲಾಮತನವನ್ನು ಮತ್ತು ಮುಗ್ಧತೆಯನ್ನು ಗುರ್ತಿಸುತ್ತಾರೆ. ಇಂತಹ ವ್ಯಕ್ತಿಗೆ ಪ್ರಜಾಪ್ರಭುತ್ವವೆಂಬ ಆಧುನಿಕ ಆಯುಧವು ಸಹಜವಾಗಿ ಅವನಿಗೆ ನುಂಗಲಾರದ ತುತ್ತಾಗಿತ್ತು ಇದರಿಂದ ಕಳವಳಕೀಡಾಗುತ್ತಾನೆ. ಪರಂಪರಾಗತ ರೂಢಿಯನ್ನು ಮತ್ತು ನಿಸರ್ಗವನ್ನು ಕಲಪಟ್ಟೇದಾರರಾದ ವಾಮದಾವ ಮತ್ತು ವಾಸುದೇವ ಬಿಟ್ಟಾಗ ತುಂಬಾ ನೊಂದುಕೊಳ್ಳುತ್ತಾನೆ. ಇಷ್ಟೆಕ್ಕ ಆಧುನಿಕ ಸ್ಪರ್ಶವು ಅವನ ನಿಸರ್ಗ ಸಂಬಂಧದಲ್ಲಿ ಮಾರ್ಪಾಡು ಉಂಟು ಮಾಡುತ್ತದೆ. ಗೊಂಡಾರಣ್ಯ ಪ್ರಾಂತ್ಯದಲ್ಲಿ ಬರಗಾಲ ಆವರಿಸಿದಾಗ ಅರಣಾಚಲವಯ್ಯನವರು ಆದಿವಾಸಿಗಳಾದ ದೊಡಾಲರ ಪ್ರಾಂತ್ಯದಲ್ಲಿ ಬರಗಾಲ ಆವರಿಸಿದಾಗ ಅರುಣಾಚಲಯ್ಯ ಮತ್ತು ಸರ್ಕಾರದ ಸಹಾಯಕರಿಗೆ ದಾರಿ ತೋರಿಸುವುದಕ್ಕೆ ಸಹಾಯಕನಾಗುತ್ತಾನೆ.

ಅರುಣಾಚಲಯ್ಯ ಮಾಡಿದ ಅಭಿವೃದ್ಧಿಯ ಕಾರ್ಯದಿಂದ ಆದಿವಾಸಿಗಳ ಬದುಕಿನಲ್ಲಿ ಹೊಸ ತಿರುವು ಪಡೆಯುತ್ತದೆ. ಅವರ ಹಿರಿಯ 'ಬೊಮ್ಮ' ಇವನು ಮತ್ತು ಜನಾಂಗ ರಾಜಕೀಯ ಡಂಬಾಚಾರ ಮತ್ತು ಕುತಂತ್ರದ ಸುದ್ದಿಗಳಿಗೆ ಮುಗ್ಧರಾಗಿ ಕಿವಿಗೊಡಾತ್ತಾರೆ. ಅದರಲ್ಲಿ ನೀರ್ಕಟ್ಟೆಯ ವಿಚಾರದ ರಾಜಕೀಯ. ಶ್ರಮವಾದಿ ಸೇತುರಾಯ ಮತ್ತು ಇವನ ಗುಪ್ತಚಾರಿ ಮಾನಪ್ಪ ತಮ್ಮ ರಾಜಕೀಯ ಅಸ್ಥಿತ್ವಕ್ಕಾಗಿ ಕೆಲಸ ನಡೆಯದಂತೆ ನೋಡಿಕೊಳ್ಳಲು ಆದಿವಾಸಿಗಳ ಮನಸ್ಸಿನಲ್ಲಿ *"ನೀರ್ಕಟ್ಟೆ ನಿಲ್ಲಲು ನಿಮ್ಮಂತಹ ನೂರು ಜನರನ್ನು ಬಲಿಕೊಡುತ್ತಾರೆ ಎಂದು ನಂಬಿಸುತ್ತಾರೆ. ಇದನ್ನು ಅರಿತ ದೊಂಡಾಲರು ಸಹಜವಾಗಿಯೇ ಅಭಿವೃದ್ಧಿಯ ಕೆಲಸಕ್ಕೆ ತಡೆಯುಂಟು ಮಾಡುತ್ತಾರೆ. ಆದರೆ ಅರುಣಾಚಲಯ್ಯ ಜಯದೇವ ಮತ್ತು ಮುಕ್ಕಣ್ಣ ಅವರಲ್ಲಿ ಅರಿವು ಮೂಡಿಸಿ ನೀರ್ಕಟ್ಟೆ ಅಣೆಕಟ್ಟು ಕಟ್ಟಲು ಅನುವು ಮಾಡಿಕೊಡುತ್ತಾರೆ. ಈ ಮೂಲಕ ಭೂಮಿಯನ್ನು ವ್ಯವಸಾಯ ಮಾಡಲು ಸಾಧ್ಯವಾಗುತ್ತದೆ. ಕುಮರಿ ಅಪ್ಪಣೆಯಾಗಬೇಕು ಎಂದು ಬೇಡಿ ಸಮ್ಮತಿ ಪಡೆದು, ಯುಗಾದಿಯ ಹಚ್ಚಡಗಳನ್ನು ಪಡೆದು ಹೋದರೆ, ತಿರುಗಿ ಬರುವುದು ಮಳೆಗಾಲ ಕಳೆದ ಮೇಲೆ ಆಗ ಧನಿಯರಿಗೆ ಆ ಕಾಡಿನ ಉತ್ಪನ್ನಗಳನ್ನು ಕಾಣಿಕೆಯಾಗಿ ತರುತ್ತಾರೆ. ಅವರನ್ನು ನವರಾತ್ರಿ ಹಬ್ಬದಲ್ಲಿ ಒಂದು ದಿನ ಕರೆಯಿಸುವದೂ ಉಂಟು"*[೪೯] ಹೀಗೆ ಆದಿವಾಸಿಗಳು ನಿಶ್ಚಿತೆಯಿಂದ ಜೀವಿಸುತ್ತಿದ್ದರೆ ಅವರ ಸಂಸ್ಕೃತಿಯ ನಡುವೆ ಸ್ವತಂತ್ರೋತ್ತರ ಭಾರತದಲ್ಲಿ ಹೊಸ ರಾಜಕೀಯ ಬಿರುಗಾಳಿ ಬೀಸಿ ಅವರ ನಿಸರ್ಗಕ್ಕೆ ಸಂಬಂಧಿಸಿದ ಜೀವನ ಸಂಸ್ಕೃತಿಗಳಲ್ಲಿ ತುಂಬಾ ಬದಲಾವಣೆಗೆ ಒಳಪಟ್ಟಿತ್ತು.

ಈ ಬದಲಾವಣೆಯಿಂದ ಭ್ರಷ್ಟಚಾರ, ಸ್ವಜನ ಪಕ್ಷಪಾತ, ಸ್ವಲಾಭಕೋರತನವೂ ಸಹ ಹೆಚ್ಚಿತು. ಈ ಸ್ಥಿತಿಯು ಹಿಂದೆ ವಾಮನರಾಯ ಪ್ರಧಾನಿಯಾಗಿದ್ದಾಗ ಹೆಚ್ಚಾಯಿತು. ಅದು ಜನರ ಸಾಮಾಜಿಕ, ಅರ್ಥಿಕ ಮತ್ತು ನೈಸರ್ಗಿಕ ಸಂಬಂಧಗಳ ಮೇಲೆ ಪ್ರಭಾವ ಬೀರಿತು. ವಾಮನರಾಯನ ಸರ್ಕಾರವು ನಾಡಿನ ಉದ್ದಕ್ಕೂ ಹೊಸ ದಾರಿಗಳು ನೀರ್ಕಟ್ಟೆ ಕೆಲಸ. ವಿದ್ಯುತ್ತಿನ ಪೂರೈಕೆ ಮಾಡಿತು. ಆದರೆ ಅವೆ ಹೊಸ ದಾರಿಗಳಿಂದಾಗಿ ನಾಡಿನ ಈ ತನಕ ಕಾದಿಟ್ಟ ಅರಣ್ಯ

೪೯. ಅದೇ. ಪುಟ-೧೮

ಸಂಪತ್ತು ವ್ಯಾಪಾರಕ್ಕೆ, ಸೂರೆಗೆ, ಸುಲಿಗೆಗೆ ತೆರವಾಗಿ ರಾಜಾದಾಯ ಹೆಚ್ಚುತ್ತಿದ್ದು ನಿಜ; ಕಳ್ಳ ವ್ಯಾಪಾರದಿಂದ ಹಲವಾರು ಶ್ರೀಮಂತರಾಗುತ್ತಿದ್ದು ನಿಜ ಇದರ ಒಂದು ಘನ ಪರಿಣಾಮ ಅರಣ್ಯ ವಾಸಿಗಳ ಮೇಲೆಯು ಉಂಟಾಗಿದೆ. ಅವರ ಮುಚ್ಚುಮರೆಯ ಬಾಳು ಬಹಿರಂಗವಾಗ ತೊಡಗಿದೆ. ಹೀಗೆಯೆ ಕಾಡು ಸವರಿನ ಅವರ ಬೇಸಾಯಕ್ಕೆ ವಿಘ್ನವು ಇದೆ; ಕಾಡು ಇಲ್ಲದಂತಾಗಿ ಅವರ ಬದುಕು ಅಸಾಧ್ಯಯವಾದೀತು.

ಕಾರಂತರು ಈ ಕುರಿತು ಸರ್ಕಾರಗಳು ಜನೋಪಕಾರಿ ಕೆಲಸ ಮಾಡುತ್ತಿದ್ದರೂ ಅದರಲ್ಲೂ ಸ್ವಾರ್ಥವಿರುತ್ತದೆ ಮತ್ತು ರಾಜಕೀಯ ಕೈವಾಡವಿರುತ್ತದೆ. ಹಾಗೂ ಸ್ವಲಾಭಕೋರತನವಿರುತ್ತದೆ. ಎನ್ನುತ್ತಾರೆ. ಈ ಸ್ವಲಾಭಕೋರತನದಿಂದ ಆದಿವಾಸಿಗಳ ನಿಸರ್ಗದ ನಡುವಿನ ಸಂಬಂಧದಲ್ಲಿ ಪಲ್ಲಟಗಳಾಗುತ್ತಿವೆ ಎನ್ನುತ್ತಾರೆ. ಕಾರಂತರು ರಾಜಿಕೀಯ ವಿಷಯಕ್ಕೆ ಸಂಬಂಧಿಸಿದಂತೆ ಹೇಳಿರುವ ಈ ಮಾತುಗಳಲ್ಲಿ ಭವಿಷ್ಯತ್ತಿನ ಭೀಕರತೆಯನ್ನು ಸೂಚಿಸುತ್ತದೆ. ಈ ಕುರಿತು ಪಾ.ವೆಂ. ಆಚಾರ್ಯರವರು "*ಬಂಡವಾಳಗಾರರು, ಶ್ರಮಜೀವಿಗಳು ಎಲ್ಲರೂ ಸ್ವ ಲಾಭಕ್ಕಾಗಿ ಕುತಂತ್ರ ಮಾಡುವರು. ಒಳ್ಳೆ ಆಳ್ವಿಕೆ ಕೊಡಬೇಕೆಂಬುವರನ್ನು ಇವರೆಲ್ಲ ಒಂದೇ ಎಂದು 'ಗೊಂಡಾರಣ್ಯ'ದಲ್ಲಿ ಕಾರಂತರು ವಿಷಾದ ಪಡುತ್ತಾರೆ. ಹೀಗೆ ಗೊಂಡಾರಣ್ಯ ಕಾದಂಬರಿಯು ಮುಖ್ಯ ರಾಜಕೀಯ ಚಿಂತನೆಯನ್ನು ಒಳಗೊಂಡಿರುವ, ಅಖಿಲ ಭಾರತ ರಾಜಕೀಯ ದುರಂತಗಳನ್ನು ಸ್ಪಷ್ಟವಾಗಿ ಸೂಚಿಸುವ ಮೂಲಕ ಪ್ರಜೆಗಳ ನಿಸರ್ಗ ಮಾನವ ಸಂಬಧಗಳ ಮೇಲೆ ಆಧುನಿಕತೆಯ ಬೀರುವ ಪ್ರಭಾವವನ್ನು ಹೇಳುತ್ತದೆ.*"[೫೦]

'ನಷ್ಟ ದಿಗ್ಗಜಗಳು ಕಾದಂಬರಿಯಲ್ಲಿ ಕಾರಂತರು ಐತಿಹಾಸಿಕ ಸ್ಥಳಗಳ ಬೇಟಿಯ ನಡುವೆ ಸಂದರ್ಭದಲ್ಲಿ ಕಂಡುಕೊಂಡ ವಿಷಯಗಳನ್ನು ಪ್ರಸ್ತಾಪಿಸುತ್ತಾರೆ. ಅವರು ತಮ್ಮ ಮುನ್ನುಡಿಯಲ್ಲಿ ರೋಮ್‌ಗೆ ಇಟಲಿಯ ಜನ ಸಮೂಹದ ಮನಸ್ಸನ್ನು ತಿಳಿಯಬಲ್ಲ ಅವಕಾಶವು ಒದಗಿತು. ನಾನು ಹೋದಾಗ ಅವರು ಜಾಗತಿಕ ಕಾಲ್ಚೆಂಡಾಟಲ್ಲಿ ವಿಜಯಿಗಳಾದರೂ ಅದು ದೇಶಕ್ಕೆ ದೇಶವೇ ಮೈಮರೆತ ಕಾಲವಾಯಿತು. ಅದರಂತೆ ನಮ್ಮ ಭಾರತ ಸ್ವತಂತ್ರಗೊಂಡ ೧೫ನೇ ಆಗಸ್ಟ್ ೧೯೪೭ ಸಹ ಅಲ್ಲವೇ? ಈ ಘಟನೆಗಳೇ ಕಾದಂಬರಿಯನ್ನು ಅಥವಾ ಕಾಲ್ಪನಿಕ ಪ್ರವಾಸ ಲೇಖನವನ್ನು ಪ್ರೇರೆಪಿಸಿದವು. ಇದು ಅಪಮೌಲ್ಯಗಳಿಗೆ ಬಲಿಯಾದ ನಮ್ಮ ಸಮಾಜದ ಜೀವನದ ಒಂದು ವಿಡಂಬನೆಯೆಂದು ತಿಳಿಯಬಹುದು, ಎಂದು ಹೇಳುತ್ತಾರೆ.

ಮುಖ್ಯ ಪಾತ್ರಗಳು ದರೆಶಿವಶಂಕರ ಗುಪ್ತ, ದುನಿಚಂದ, ರೂಪಚಂದ, ಡಾ.ಜೈನಿಯವರು ಪರಶುರಾಮ ಭಾವಗಳು ಮುಂತಾದವರು, ಇಲ್ಲಿ ಸ್ವಾರ್ಥಕ್ಕಾಗಿಯೇ ಅಥವಾ ಉದ್ದೇಶ ಪೂರ್ವಾಕವಾಗಿಯೋ ಶ್ರುತಕೀರ್ತಿ ಭಟ್ಟಾರಕ ಪ್ರತಿಮೆ ಪರಶುರಾಮ ಭಾವರ ಪ್ರತಿಮೆ, ಗ್ಯಾಸಿಸಿಂಗರ ಪ್ರತಿಮೆಗಳನ್ನು ಸ್ಥಾಪಿಸಿರುವುದನ್ನು ಕಾರಂತರು ನೋಡುತ್ತಾರೆ. "*ಈ ಪ್ರತಿಮೆಗಳಲ್ಲಿ ಗ್ಯಾಸಿಸಿಂಗರ ಪ್ರತಿಮೆಯನ್ನು ಕಾರಂತರು ಕಂಡು, ಆಶ್ಚರ್ಯದಿಂದ ಬದುಕಿರುವ ಪ್ರತಾಪಸಿಂಗರ ಪ್ರತಿಮೆಯೇ*

೫೦. ಪಾ.ವೆಂ.ಆಚಾರ್ಯ ಮತ್ತು ಇತರರು, ಜ್ಞಾನಪೀಠ ವಿಜೇತ ಕನ್ನಡಿಗರು, ಪುಟ-೫೯

ಎಂದು ಕೇಳಿದಾಗ, ಶಿವಶಂಕರಗುಪ್ತರವರಿಂದ ಅದು ಅವರ ತಂದೆಯ ಪ್ರತಿಮೆಯೆಂದು ತಿಳಿಯುತ್ತದೆ. ಆಗ ಪ್ರತಾಪಸಿಂಗರ ಚರಿತ್ರೆಯನ್ನು ಶಿವ ಶಂಕರಗುಪ್ತರು ಕಾರಂತರಿಗೆ ತಿಳಿಸುತ್ತಾರೆ. ಗ್ಯಾನಿಸಿಂಗರು ತಮ್ಮ ತಾರುಣ್ಯದಲ್ಲಿ ಮಂತ್ರಿಯಾಗಿದ್ದ ಶಂಕ್ಲಾರ ಮೇಲೆ ಪ್ರಭಾವ ಬೀರಿ, ಪ್ರತಾಪಸಿಂಗರನ್ನು ಶುಕ್ಲಾರ ವಶಕ್ಕೆ ಒಪ್ಪಿಸುತ್ತಾರೆ. ಮುಂದೆ ನಾಲ್ಕೈದು ವರ್ಷಗಳೊಳಗಾಗಿ ಅರಣ್ಯ ಸಂಬಂಧವಾದ ಗುತ್ತಿಗೆ ಮೊದಲಾದ ವ್ಯವಹಾರಗಳ ದೆಸೆಯಿಂದ ಅವರ ಮಗ ಪ್ರತಾಪಸಿಂಗರು ಮೋತಿಹಾರಿಯಿಂದ ಮಾಗಾಂವಿಗೆ ಬರುತ್ತಾರೆ. ಆಗ ಆಧುನಿಕ ಪ್ರತಿನಿಧಿಯಾದ ಪ್ರತಾಪಸಿಂಗರು ಕಾಡುಗಳಲ್ಲಿ ತಮ್ಮ ಕಾರುಬಾರನ್ನು ಸ್ಥಾಪಿಸುತ್ತಾರೆ.”[೫೧]

ಪ್ರತಾಪಸಿಂಗರಿಗೆ ತಾರುಣ್ಯದಿಂದಲು ಶಿಕಾರಿಯ ಹುಚ್ಚು ಅವರು ಬೆಳದದ್ದು ಬಿಹಾರದ ಯಾವುದೋ ಮೂಲೆಯಲ್ಲಿ ಗಂಡಕಿ ನದಿ ಹರಿಯುವ ಚಂಪಾರಣ್ಯ ಕಣಿವೆಯಲ್ಲಿ ಅವರ ಮೂಲಕ ಮನೆ ಇರುವುದು ಮೋತಿಹಾರನಲ್ಲಿ ಇಂತಾಹ ವ್ಯಕ್ತಿ ಬೆಟ್ಟದ ಸೆರೆಗೊಂದರಲ್ಲಿ ಸಾವಿರಾರು ಎಕರೆ ಕಾಡನ್ನು ವಹಿಸಿಕೊಂಡು ಪ್ರಯೋಗಾರ್ಥವಾದ ಮೆದು ಜಾತಿಯ ಮರಗಳನ್ನು ಬೆಳೆಯುವ ಸಾಹಸ ಮಾಡುತ್ತಾರೆ. ಇದನ್ನು ನೋಡಲು ಕಾರಂತರು ಡಾ.ಜೈನಿ, ಶಿವಶಂಕರ ಗುಪ್ತರೊಂದಿಗೆ ಹೋದಾಗ ಪ್ರತಾಪಸಿಂಗರ ತೋಟಗಳಲ್ಲಿ ದುಡಿಯುತ್ತಿದ್ದ. ಆದಿವಾಸಿಗಳ ಮತ್ತು ಅವರ ಬದುಕಿನ ಮೇಲೆ ಆಧುನಿಕತೆಯ ಪ್ರಭಾವ ಬೀರುವುದನ್ನು ಕುರಿತು ಹೇಳುತ್ತಾರೆ. ಪ್ರತಾಪ ಸಿಂಗರು ತಮ್ಮ ಬಂಡವಾಳಶಾಹಿತ್ವ ಮತ್ತು ನವ ಹೊಸಹತುಶಾಹಿತ್ವ ನೆಲೆಗೆ ಕಾಡಿನ ಮಕ್ಕಳನ್ನು ಸೆಳೆಯುತ್ತಾರೆ. ಇದಕ್ಕೆ ಅಂಟಿಕೊಂಡ ಆದಿವಾಸಿ ಯುವಕರ ಮತ್ತು ಅವರ ಹಳೆ ತಲೆಮಾರಿನ ಜನರ ನಡುವೆ ಆದ ಸಾಂಸ್ಕೃತಿಕ ಅಂತರವು ಏರ್ಪಡುತ್ತವೆ. “*ಈ ಆದಿವಾಸಿಗಳು ಅಲ್ಲಿ, ಇಲ್ಲಿ ಹಂಚಿ ಬಿದ್ದ ಹಲವಾರು ಬುಡಕಟ್ಟುಗಳಿಗೆ ಸೇರಿದವರು. ಅವರ ಒಂದೊಂದು ತೆರ; ಅವರ ಸ್ಥಾನ ಮಾನಗಳೂ ಒಂದೊಂದು ತೆರೆ ನಿತ್ಯಜೀವನ ಹೆಚ್ಚು ಕಡಿಮೆ ಒಂದೇ ತೆರವಾಗಿದ್ದರೂ ಅವರ ರೀತಿ ತೆರ ಪೇಟ ಪಟ್ಟಣಗಳ ಮೋಹ ಅವರಿಗಿಲ್ಲ. ನಮ್ಮ ನಿಮ್ಮಂತೆ ದುಡ್ಡನ್ನುಗಳಿಸಿ, ಕೂಡಿಸಿ, ಲೆಕ್ಕಚಾರವನ್ನು ಬಿಗಿಸಿ ಸಂತೋಷಪಡುವ ಸ್ವಭಾವ ಅವರದ್ದಲ್ಲ ಅಲ್ಪ ತೃಪ್ತರು ಅವರು. ತಾವಿರುವ ವನ ಪ್ರದೇಶದ ಗಿಡಮರಗಳಿಂದ ಏನು ಸಿಗುತ್ತದಯೋ ಅದು ಆಹಾರ ಇಂದಿಗೂ ಗೆಡ್ಡ ಗೆಣಸು ಅವರ ಅದನ್ನೇ ತೀರ ನೆಚ್ಚಬಾರದೆಂದು ಈ ಬೆಟ್ಟಗಳಲ್ಲಿ ಬೆಳೆಯಬಹುದಾದ ನವಣೆ, ಸಜ್ಜೆ, ಜವಾರಿ ಬೆಳೆಯುತ್ತಾರೆ. ಅವರಿಗೆ ವಿದ್ಯಾಭ್ಯಾಸದ ಮೋಹವು ಇಲ್ಲ ನಗರಗಳ ಮೋಹವು ಇಲ್ಲ.”*[೫೨]

ಕಾರಂತರು ಆದಿವಾಸಿಗಳ ಸಾಂಸ್ಕೃತಿಕ ಲೋಕವನ್ನು ಪರಿಚಯ ಮಾಡುತ್ತಾರೆ. ಇಂತಹ ಆದಿವಾಸಿಗಳ ಮತ್ತು ನಿಸರ್ಗದ ನಡುವಿನ ಸಂಬಂಧದಲ್ಲಿ ಆಧುನಿಕತೆಯ ಪ್ರವೇಶವಾಗಿ ಅವರ ಜೀವನ ಪಿಧಾನದಲ್ಲಿ ಪಲ್ಲಟಗಳಾಗುತ್ತದೆ, ಈ ಕುರಿತು “*ಆದಿವಾಸಿ ಹಿರಿಯ ವ್ಯಕ್ತಿ ಅವರ ಜೀವನ ಬದಲಾವಣೆಗೆ ಒಳಪಟ್ಟಿದ್ದನ್ನು ಹೇಳುತ್ತಾರೆ ಮೊದಲಿನಂತೆ ಬೇಟೆ. ಗಡ್ಡೆ ಗೆಣಸು ಮೊದಲಾದವನ್ನು ಹೊಂದಿಕೊಂಡಿಲ್ಲ. ಅವರ ಹೆಚ್ಚಿನ ಶ್ರಮವನ್ನು ಧನಿಯ ಸೇವೆಗೆ ಸಂಬಂಧಿಸಿದಂತೆ ಸಸಿ ನೆಡುವುದರಲ್ಲಿ ಸಸಿಗಳಿಗೆ ನೀರೆರೆಯುವುದರಲ್ಲಿ ಅಲ್ಲಿನ ಕೂಲಿಯ ಸೇವೆಯಲ್ಲಿ ಕಳೆಯುತ್ತಾರೆ. ಅವರ ಒಡೆಯರಾದ ಸಿಂಗದೇವರೇ ಅವರಿಗೆ ದವಸ ಧಾನ್ಯ ಒದಗಿಸುವುದರಿಂದ ಅವರು ಬೇಸಾಯ ಮಾಡುವುದನ್ನು ಬಿಟ್ಟು ಕೆಲವು ವರ್ಷಗಳಾದುವಂತೆ ಈಗಿನ*

೫೧. ಶಿವರಾಮ ಕಾರಂತ, ನಷ್ಟ ದಿಗ್ಗಜಗಳು, ಪುಟ-೨೯೪
೫೨. ಅದೇ, ಪುಟ-೨೭೮

ಮಕ್ಕಳಿಗೆ ಇದೆ ಚಂದ, ಸುಲಭ, ಅನುಕೂಲ ಅನಿಸುತ್ತಿದೆ! ಎನ್ನುತ್ತಾನೆ. ಅಲ್ಲದೆ 'ಹಾರಾಡುವ ಮೈನಾ' ಹಕ್ಕಿಯನ್ನು ಗೂಡಿನಲ್ಲಿ ತುರುಕಿದ ಹಾಗಾಗಿದೆ ಎನ್ನುತ್ತಾನೆ."[೫೩]

'ಹಾರಾಡುವ ಮೈನಾ ಹಕ್ಕಿಯನ್ನು ಗೂಡಿನಲ್ಲಿ ತುರುಕಿದ ಹಾಗಾಗಿದೆ' ಇನ್ನುವ ಆದಿವಾಸಿ ಹಿರಿಯನ ಮಾತು ಸತ್ಯವಾಗಿದೆ. ನಮ್ಮ ಸ್ವತಂತ್ರ ಭಾರತದಲ್ಲಿ ಆಡಳಿತ ಮಾಡುತ್ತಿರುವ ಸರ್ಕಾರಗಳು ಆದಿವಾಸಿಗಳ ಸಂಸ್ಕೃತಿಯ ಮೇಲೆ ನಿರಂತರವಾಗಿ ಆಧುನಿಕ ಸಮಾಜ ಮತ್ತು ರಾಜಕೀಯ ನೆಲೆಗಳು ಕೈಗಾರಿಕೆಗಳ ಸ್ಥಾಪನೆ, ಅಭಯಾರಣ್ಯದಂತಹ ಕಾಡುಗಳ ಸ್ಥಾಪನೆಯಂತಹ ಪ್ರಯೋಗಗಳ ಮೂಲಕ ದಾಳಿಮಾಡುತ್ತವೆ. ಇದರಿಂದ ಕಾಡಿನ ಮಕ್ಕಳು ಸ್ವತಂತ್ರ ಭಾರತದಲ್ಲಿ ಅವರ ನೆಲೆಯಲ್ಲಿಯೇ ತಬ್ಬಲಿಗಳಾಗುತ್ತಿರುವುದು ತುಂಬು ದುಃಖಕರ ಸಂಗತಿಯಾಗಿದೆ. ಈ ನೆಲೆಯನ್ನು ಕಾರಂತರು ಪ್ರತಾಪಸಿಂಗ್‌ರ ಪಾತ್ರದ ಮುಖಾಂತರ, ಆದಿವಾಸಿಗಳ ನಿಸರ್ಗ ಸಂಬಂಧದಲ್ಲಿ ಆಧುನಿಕತೆಯ ಪ್ರವೇಶವನ್ನು ಹೇಳಿ ಇದರಿಂದ ಅವರಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಗುರ್ತಿಸುತ್ತಾರೆ.

'ಧರ್ಮರಾಯನ ಸಂಸಾರ' ಕಾದಂಬರಿಯಲ್ಲಿ ಕಾರಂತರು ನಾಲ್ಕು ಸಂಸಾರಗಳ ಜೀವನದ ಕಥೆಯನ್ನು ಹೇಳುತ್ತಾರೆ. ನಾರಾಯಣ ಹೆಬ್ಬಾರರ ಕುಟುಂಬ, ಕೊಕ್ಕರಣೆ ರಾಮಪ್ಪಯ್ಯನ ಕುಟುಂಬ ಮತ್ತು ಅರೆಬೈಲಿನ ಶಂಕರಯ್ಯನ ಕುಟುಂಬ ಮತ್ತು ಇವರೆಲ್ಲರ ಪುರೋಹಿತನ ಮಾಡುತ್ತಿರುವ ಲಚ್ಚ ಐತಾಳಾ ಕುಟುಂಬವು ಒಂದು. ಈ ಸಂಸಾರಗಳ ಸಾಮಾಜಿಕ ಆರ್ಥಿಕ ಸಮಸ್ಯೆಗಳನ್ನು ಕುರಿತು ಪ್ರಮುಖವಾಗಿ ಈ ಕಾದಂಬರಿ ಚಿತ್ರಿಸುತ್ತದೆ. ಈ ಕಾದಂಬರಿಯ ಮಿಕ್ಕ ಪಾತ್ರಗಳಲ್ಲಿ ಮಹಾಲಕ್ಷ್ಮಿ, ಸರಸ್ವತಿ, ಮಹಾಬಲಯ್ಯ, ಪದ್ಮಾವತಿ ಮತ್ತು ನಾಗಪ್ಪಯ್ಯರು ಪ್ರಮುಖರು.

ಈ ಕಾದಂಬರಿಯ ಕುರಿತು ಒಂದು ಮನೆಯಲ್ಲಿ ಅದರ ಹಿರಿಯರ ಗೋಚರ, ಅಗೋಚರ ನಡುವಳಿಕೆಗಳ ಪ್ರಭಾವ ಮುಂದಣ ಸಂತಾನದ ಮೇಲೆ ಯಾವ ರೀತಿಯಿಂದಾಯಿತು ಎಂಬುದು ಈ ಕತೆಯ ಒಂದು ಸೆರಗು. ಇಲ್ಲಿನ ಸರಸ್ವತಿ, ಮಹಾಬಲರ ಜೀವನ ದಾರುಣವಾದ, ವಿಚಿತ್ರವಾದ, ಭೀಕರವಾದ ಒಂದು ದಾಂಪತ್ಯದ ಸಮಸ್ಯೆಯನ್ನು ನಮ್ಮ ಮುಂದಕ್ಕಿರಿಸುತ್ತದೆ. ಹೇಳುವ ನೀತಿ, ಬದುಕುವ ರೀತಿ, ಜೀವನ ನರಕದಲ್ಲಿರುವ ಪಾಲಿಗೆ ಹೇಗೆ ಕಾಣಿಸಿತು ಎಂಬುದನ್ನು ಚಿತ್ರಿಸಲಾಗಿದೆ.

ಈ ಕಾದಂಬರಿಯ ಎಲ್ಲಾ ಪಾತ್ರಗಳು ನಿಸರ್ಗ ಮೂಲವಾದ ತಮ್ಮ ಸ್ಥಾನವನ್ನು ಭೂಮಿಗಾಗಿ ಮತ್ತು ಅದರಲ್ಲಿ ಕೃಷಿಯನ್ನು ಮಾಡುವುದಕ್ಕಾಗಿ ಹವಣಿಸುತ್ತವೆ. ಆ ಮೂಲಕ ಸ್ಥಾನವನ್ನು ಭದ್ರಪಡಿಸಿಕೊಂಡು ಆರ್ಥಿಕವಾಗಿ ಮುನ್ನಡೆಯುವುದನ್ನು ಕಾರಂತರು ಗುರುತಿಸಿದ್ದಾರೆ. ಇಲ್ಲಿ ಪ್ರಮುಖವಾಗಿ ಭೂ ಒಡೆತನದ ಪ್ರಶ್ನೆ ಮುಖ್ಯವಾಗಿರುತ್ತದೆ. ಇದರಿಂದ ಪಾತ್ರಗಳ ನಡುವೆ ಕ್ಲೇಷಗಳು ಕಂಡುಬರುತ್ತವೆ. ಈ ಕಾದಂಬರಿಯನ್ನು ಕುರಿತು ವಿ.ಎಂ.ಇನಾಂದಾರರವರು "ಇಲ್ಲಿಯ

---

೫೩. ಅದೇ. ಪುಟ-೧೯೦

ಕಥೆ ಅಹಂಕಾರ, ಔದಾರ್ಯ, ಕ್ರೌರ್ಯಗಳಿಂದುಟಾದ ಕಷ್ಟಗಳ ಕಥೆಯಾದರೂ ಓದುಗನ ಮನಸ್ಸಿನಲ್ಲಿ ಕೊನೆಯಲ್ಲಿ ಉಳಿಯುವುದು ಕಷ್ಟಕ್ಕೀಡಾದವರ ಕಷ್ಟಗಳಲ್ಲ, ಅವರು ತೋರಿದ ಹೃದಯ ವೈಶಾಲ್ಯ, ಪ್ರೀತಿ, ಮಾಡಿದ ತ್ಯಾಗ ಪ್ರಮಾಣಿಕವಾದ ದುಡಿಮೆ, ಏನಾದರೂ ಬದುಕಬೇಕು, ಬಾಳಬೇಕು ಎಂಬ ಹಟ, ಇಂಥ, ಗುಣಗಳೇ ಎದ್ದು ನಿಲ್ಲುತ್ತದೆ."[೫೪]

'ಅಂಟಿದ ಅಪರಂಜಿ' ಕಾದಂಬರಿಯು ದೈವಭಕ್ತಿ ಮತ್ತು ಉದ್ಯಮದ ಚಿಂತನೆಯ ಕಥೆಯನ್ನು ಒಳಗೊಂಡಿದೆ. ಈ ದೈವ ಭಕ್ತಿಯನ್ನು ಒಂದು ಉದ್ಯಮದ ರೀತಿಯಲ್ಲಿ ಬೆಳೆಸುವ ವ್ಯಕ್ತಿಯೆಂದರೆ ದಿವಾಕರಧನ್ಯರು. ಇವರಿಗೆ ತಮ್ಮ ಹೊಲದಲ್ಲಿ ದೊರಕಿದ ತಾಮ್ರದ ಶಾಸನದಿಂದ ಅವರ ಬದುಕಿನ ರೀತಿಯೆ ಬದಲಾವಣೆಗೆ ಒಳಗಾಯಿತು. ದಿವಾಕರಧನ್ಯನಿಗೆ ಸಿಕ್ಕಿದ ತಾಮ್ರ ಶಾಸನವನ್ನು ಓದಿದ ಅನಂತಯ್ಯನವರು ಅದರ ಪೂರ್ವ ಇತಿಹಾಸವನ್ನು ಹೇಳುತ್ತಾರೆ. ಅದು ಆಲೂಪ ದೊರೆ ಕುಂದವರ್ಮ ಆ ಗ್ರಾಮದ ನುಡಿಮಂಗಲಮ್ಮ ದೇವಾಲಯಕ್ಕೆ ಹೊಲ, ಮನೆ, ಕಾಡು, ಇವುಗಳನ್ನು ದಾನವಾಗಿ ಕೊಟ್ಟಿದ್ದ ವಿಷಯ ದಿವಾಕರದನ್ಯ ತನ್ನ ಹೆಸರಿನ 'ಧನ್ಯ' ಎಂಬುದಕ್ಕೆ ಬದಲಾಗಿ ದಿವಾಕರ ಶರ್ಮ ಮಾಡಿಕೊಳ್ಳುತ್ತಾನೆ. ಇಂತಹ ವ್ಯಕ್ತಿ ನುಡಿ ಮಂಗಲಮ್ಮ ಹೆಸರಿನಲ್ಲಿ ಹಣ, ಭೂಮಿ ಮುಂತಾದ ಸಂಪತ್ತನ್ನು ಮಾಡಿಕೊಂಡು ತನಗೆ ಮತ್ತು ಮಕ್ಕಳ ಭವಿಷ್ಯತ್ತಿಗೆ ಅಡಿಪಾಯ ಹಾಕಿದನು. ಈ ಮೂಲಕ ಹಳ್ಳಿಯಾಗಿದ್ದ ನುಡಿಮಂಗಲವು ನಗರದಂತೆ ಎಲ್ಲಾ ಸೌಲಭ್ಯಗಳೊಂದಿಗೆ ಬೆಳೆಯಿತು. ಇದರಿಂದ ನುಡಿಮಂಗಲಕ್ಕೆ ಆಧುನಿಕ ಸ್ಪರ್ಶ ಬಂದಿತು. ಇಂತಹ ಸಂದರ್ಭದಲ್ಲಿ ನುಡಿಮಂಗಲದ ಜನರು ತಮ್ಮ ಬದುಕಿಗಾಗಿ ವಿವಿಧ ವೃತ್ತಿಗಳನ್ನು ಹಿಡಿದರು ಅಂತಹವರಲ್ಲಿ ಅನಂತಯ್ಯ, ಬಾಬಣಿಪೈ ಪ್ರಮುಖರು.

ನಿಸರ್ಗ–ಮಾನವ ಸಂಬಂಧದಲ್ಲಿ ಆಧುನಿಕತೆಯ ಪ್ರವೇಶವನ್ನು ದಿವಾಕರ ಶರ್ಮ ಮಾಡಿದ ಕಾರ್ಯದಲ್ಲಿ ಗುರ್ತಿಸಬಹುದು. ಕಾರಂತರು ಇಲ್ಲಿ "*ಒಬ್ಬನೆ ಒಬ್ಬ ಶ್ರೀಮಂತ ಕಾಣಲು ಸಿಗುವುದೂ ಕಷ್ಟ, ಇದು ತೀರಾ ದರಿದ್ರ ಊರು. ಮಳೆ ಬಂದರೆ ಅರ್ಧ ಕೆಸರು, ಮಣ್ಣಗಳು ತುಂಬಿದ. ನೈದಿಲೆಗಳು ಬೆಳೆದು ಹಸುರಾದ ಕೆರೆ, ಕುಂಟೆಗಳು ಕೆಲವಿವೆ. ಆ ಕೆರೆಗಳ ನಡುವೆ ಹೊಂಡ ತೋಡಿ, ಅಲ್ಲಿ ಸೇರಿದ ನೀರನ್ನು ಹಾಯಿಸಿದರೆ, ಎರಡನೇ ಭತ್ತದ ಬೆಳೆಯನ್ನು ಬೆಳೆಯುವ ಹೊಲಗದ್ದೆಗಳು ಇವೆ. ಧನ್ಯರಿಗೆ ಭೂಮಿ ಇರುವ ಹೊಲಗದ್ದೆಗಳು ಅಂಥವು!*"[೫೫]

ಇಂತಹ ಸಹಜ ನಿಸರ್ಗದ ವಾತವರಣಕ್ಕೆ ಆಶ್ಚರ್ಯಕರವಾಗಿ ಆಧುನಿಕತೆಯ ಸೊಗಡು ಕಾಣಿಸುತ್ತದೆ. ನುಡಿಮಂಗಲದ ಬ್ರಾಹ್ಮಣ ದಿವಾಕರಶರ್ಮ ಕಟ್ಟಿಸಿದ ನುಡಿಮಂಗಲಮ್ಮ ದೇವಾಲಯ ದಿಂದ ಎನ್ನುವುದು ತುಂಬಾ ಆಶ್ಚರ್ಯಕರ ಸಂಗತಿ. "*ದೇವಾಲಯವನ್ನು ಕಟ್ಟಿಸಿದ ನಂತರ ಅವರ ಮುಂದೆ ಕೆರೆಯನ್ನು ದಿವಾಕರಧನ್ಯರು ತೋಡಿಸಿದರು. ಆಗ ಅನೇಕ ಮನೆಗಳು ಆ ಕೆರೆಯ ಪಕ್ಕದಲ್ಲಿ ಹುಟ್ಟಿಕೊಂಡವು. ಆಗ ಅಲ್ಲಿನ ಜನರು ಅಕ್ಕ ಪಕ್ಕದ ಮರ ಗಿಡಗಳನ್ನು ಕಡಿದು. ಕೇವಲ ಹತ್ತು ವರ್ಷಗಳ ಹಿಂದೆ*

೫೪. ಶಿವರಾಮ ಕಾರಂತ, ಧರ್ಮರಾಯನ ಸಂಸಾರ, ಪುಟ–೨೦೮

೫೫. ಟಿ.ಪಿ.ಅಶೋಕ (ಸಂ), ಈ ಶತಮಾನದ ನೋಟ ಶಿವರಾಮ ಕಾರಂತ, ಪುಟ–೨೫೪

ಪಡುನಿಡಿಯೂರಿನ ಹಾಡಿ, ಕುರುಚಲು ಕಾಡು, ಪೊದೆಗಳ ಹಿಂಡುಗಳ ನಡುವೆ ಮರೆಯಲ್ಲಿ ಅಡಗಿದ್ದ ಎಷ್ಟೋ ಮನೆ ಮಠಗಳು, ಕಾಡು ಸವರಿದುದರ ಫಲವಾಗಿ ದೇಗುಲದ ಸುತ್ತಮುತ್ತಲೂ ಕಾಣಿಸಿಕೊಂಡವು."[೫೬]

ದಿವಾಕರ ಶರ್ಮರು ಸ್ಥಾಪಿಸಿದ ದೇವಾಲಯದ ಪರಿಣಾಮ ನಿಸರ್ಗ ಮಾನವ ಸಂಬಂಧಗಳಲ್ಲಿ ತುಂಬಾ ಬದಲಾವಣೆಯಾಯಿತು. ಇದನ್ನು ಕಾಡಿನ ಮರ ಗಿಡಗಳನ್ನು ಕಡಿಯುವುದರ ಮೂಲಕ ಮಾನವ ಪ್ರಕಟಗೊಳಿಸುತ್ತಾನೆ. ಕಾಡು ಕಡಿದ ಜಾಗದಲ್ಲಿ ಕಾಂಕ್ರೀಟ್ ಕಾಡು ಬಂದಿತು. ಕಾಲಾಂತರಗಳಿಂದ ಬೆಳೆದು ಬಂದ ಕೃಷಿ ಪದ್ಧತಿ ಸವಕಾಲಾಯಿತು. ಅದರಲ್ಲಿ ಸ್ವಾರ್ಥ ಭ್ರಷ್ಟಾಚಾರ ಬೆಳೆಯಿತು.

ಈ ವಿಷಯದ ಬಗ್ಗೆ ಕಾರಂತರು "*ಅಪರಂಜಿಪದ ಉತ್ತಮ ಪದಾರ್ಥಕ್ಕೆ ಹೇಳುವಂತೆ, ತದ್ವಿರುದ್ಧ ವಸ್ತುವಿಗೂ ಬಳಕೆಯಾಗುತ್ತದೆ. ಅಂಥ ಒಬ್ಬ ವ್ಯಕ್ತಿ ತನ್ನ ಸ್ವಾರ್ಥವನ್ನು ಸಾಮಾಜಿಕ ಮನೋವಿಲಾಸದ ಶೋಷಣೆಗಾಗಿ ಬಳಸುವ ನಿತ್ಯ ಜೀವನದ ತಮ್ಮದೇ ಕೆಲವು ಕಹಿ ಅನುಭವಗಳು ಇಲ್ಲಿನ ವಸ್ತುವಾಗಿದೆ.*"[೫೭]

ಕಾರಂತರು ಹೇಳಿರುವ ಹಾಗೆ, ಇಲ್ಲಿ ಸಾಮಾಜಿಕ, ಮನೋವಿಲಾಸದ ಶೋಚಣೆಯೆಂದರೆ, ಸಮಾಜದಲ್ಲಿರುವ ಜನತೆ ಮುಗ್ಧರು. ಈ ಮುಗ್ಧತನವನ್ನು ದಿವಾಕರ ಶರ್ಮರಂತಹವರು ಬಂಡವಾಳ ಮಾಡಿಕೊಂಡು ದೇವರ ಹೆಸರಿನಲ್ಲಿ ಶೋಷಣೆ ಮಾಡುತ್ತಾರೆ. ಈ ಶೋಷಣೆಯ ಮುಖಕ್ಕೆ ಅಡಿಪಾಯವಿದೆ. ಪುರೋಹಿತಶಾಹಿತ್ವದ ಶೋಷಣೆಯ ಕ್ರೂರ ಇತಿಹಾಸವಿದೆ. ಈ ಮೂಲಕ ದಿವಾಕರ ಶರ್ಮರನ್ನು ಗಮನಿಸಿದಾಗ ಇವರು ಸಹಜವಾಗಿ ಎಲ್ಲರಂತೆ ನೆಲದಲ್ಲಿ ಉಳುಮೆ ಮಾಡುತ್ತಿದ್ದರು. ಆದರೆ ಇಂದು ಇವರು ನೇಗಿಲು ಹಿಡಿದು ಉಳುಮೆ ಮಾಡುತ್ತಿಲ್ಲ. ಬದಲಾಗಿ ಅವನ ಒಕ್ಕಲಾದ ದುಗ್ಗ ಉಳುಮೆ ಮಾಡುತ್ತಾನೆ. ಅವನು ದೇವರ ಹೆಸರಿನಲ್ಲಿ ಅಪಾರವಾದ ಆಸ್ತಿ ಸಂಪಾದಿಸಿದ್ದಾನೆ. ಸ್ವಾತಂತ್ರೋತ್ತರ ಭಾರತದಲ್ಲಿ ಉದ್ಭವಿಸಿದ ಅನೇಕ ನವ ವಸಾಹತುಶಾಹಿಗಳ ಮನೋಭಾವದಂತೆ ಇವನಲ್ಲಿ ನಯವಂಚನೆ, ಭ್ರಷ್ಟಾಚಾರ ಮತ್ತು ಶೋಷಣೆಯ ಮನೋಭಾವಗಳು ಬೆಳೆದು, ಆತನು ನುಡಿಮಂಗಲದ ಜನರನ್ನು ಶೋಷಣೆ ಮಾಡಿದನು. ಇದರ ಪರಿಣಾಮವಾಗಿ ನುಡಿಮಂಗಲದ ಜನರು ಹಿಂದಿದ್ದ ಸಹಜ ನಿಸರ್ಗ ಸಂಬಂಧದಲ್ಲಿ ಆ ದಾರ್ಮಿಕತೆ ಪ್ರವೇಶ ಪಡೆಯುತ್ತದೆ. ಅಲ್ಲದೆ ಅವರು ತಮ್ಮ ಸ್ವಾರ್ಥಕ್ಕಾಗಿ ಕಾಡನ್ನು ಸವುರುತ್ತಾರೆ. ದೇವಾಲಯದ ಸುತ್ತ ಮುತ್ತಲು ಮನೆ ಅಂಗಡಿ ಮುಗ್ಗಟ್ಟುಗಳನ್ನು ಕಟ್ಟುವುದರ ಮೂಲಕ ನಿಸರ್ಗದಿಂದ ದೂರವಾಗುತ್ತಾರೆ.

ಇದಕ್ಕೆಲ್ಲ ಕಾರಣಕರ್ತನಾದ ದಿವಾಕರ ಶರ್ಮನ ಬಲಗೈ ಬಂಟ ಅನಂತಯ್ಯನಿಗೆ ತಾನು ಸಹ ಸಂಪತ್ತನ್ನು ದೇವಾಲಯದ ಹೆಸರಿನಲ್ಲಿ ಸಂಪಾದಿಸಬೇಕೆಂಬ ಒಲವು ಇರುತ್ತದೆ. ಆದರೆ ಇದಕ್ಕೆ ಕುತಂತ್ರ ಬುದ್ಧಿವುಳ್ಳ ದಿವಾಕರ ಶರ್ಮ ಅವಕಾಶ ಕೊಡುವುದಿಲ್ಲ. ಆದ್ದರಿಂದ ಆತನು

೫೬. ಶಿವರಾಮ ಕಾರಂತ, ಅಂಟಿದ ಅಪರಂಜಿ ಪುಟ-೧೪೨

೫೭. ಅದೇ, ಪುಟ-೯೭

ದಿವಾಕರ ಶರ್ಮರಿಗೆ ಸೆಡ್ಡು ಹೊಡೆದು ನಿಲ್ಲಲು ಮಾಡುವ ಕೆಲಸವೆಂದರೆ, ಗುಳೇಮಕ್ಕಿಯಲ್ಲಿ ಬೇಸಾಯವನ್ನು ಮಾಡುತ್ತಿದ್ದ ಜಮೀನನ್ನು ಮಾರಿ, ನುಡಿಮಂಗಲಕ್ಕೆ ಬರುತ್ತಾರೆ. ಈ ಕುರಿತು ಕಾರಂತರು "*ಕೆಲವು ಸಮಯದಿಂದ ಅನಂತಯ್ಯನವರು ನುಡಿಮಂಗಲ ದೇಗುಲದ ಮಗ್ಗುಲ ಕೆರೆಯಲ್ಲಿ ಸ್ನಾನಕ್ಕೆಹೋಗಿ ಮುಳುಗಿ, ಏಳುವುದು ಕಾಣಿಸುತ್ತಲಿಲ್ಲ. ಹರಕೆ ಹೊತ್ತು ಬರುವ ಭಕ್ತರ ಪೀಡೆ ತಪ್ಪದ ದೇಗುಲದ ನಿಯಮದಲ್ಲೂ ಅವರಿಲ್ಲ! ಆ ದೇವಸ್ಥಾನದ ಹಂಬಲವೂ ಅವರನ್ನು ಆಕರ್ಷಿಸುತ್ತಿರಲಿಲ್ಲ. ದಿವಾಕರ ಶರ್ಮರು ಅವರಿಗಾಗಿಯೇ ಎಂಬಂತೆ ಪಾರು ಮಾಡಿದ ದೈತ್ಯ ಅಶ್ವತ್ಥ ವೃಕ್ಷದ ಪರಿಸರವೇ ಅವರ ನಿತ್ಯ ಸ್ಥಳವಾಗಿದೆ. ಆ ಸ್ಥಳ ಒಂದು ನೈಸರ್ಗಿಕ ಉದ್ಯಾನದಂತೆ ಕಾಣಿಸುತ್ತಿದೆ. ಆ ಉದ್ಯಾನದ............. ಮರದ ಸಮೀಪದಲ್ಲಿ ಒಂದು ಸುಮಧುರ ಹಾಸು ಬಂಡೆಯಿದೆ. ಆ ಕಲ್ಲಿನ ಮೇಲೆ ನೆರಳಲ್ಲಿ ಏಕಾಗ್ರ ಚಿತ್ತರಾಗಿ ಅನಂತಯ್ಯನವರು ಕುಳಿತು ಬಹಳ ಹೊತ್ತು ಕಳೆಯುತ್ತಾರೆ.*"[೫೮] ಅನಂತಯ್ಯ ಇದ್ದ ಭೂಮಿಯನ್ನು ಕಳೆದುಕೊಂಡು ಅವನು ಆಧ್ಯಾತ್ಮಿಕ ನೆಲೆಗೆ ಬರುವುದು ಸ್ವಾರ್ಥದಿಂದಲೇ ಆಗಿದೆ. ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಆಧ್ಯಾತ್ಮಿಕ ನೆಲೆಗೆ ಬರುವುದು ಸ್ವಾರ್ಥದಿಂದಲೇ ಆಗಿದೆ. ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಆಧ್ಯಾತ್ಮಿಕತೆಯನ್ನು ನಮ್ಮ ಋಷಿಮುನಿಗಳು ರೂಢಿಸಿಕೊಂಡು ನಿರ್ಮಲ ಮನಸ್ಸಿನಿಂದ ಬೆಳೆಸಿಕೊಂಡು ಬಂದರು ಎನ್ನುವುದು ನಮ್ಮ ಪುರಾಣಗಳಿಂದ ತಿಳಿಯುತ್ತದೆ. ಆದರೆ ನುಡಿಮಂಗಲದ ದಿವಾಕರ ಶರ್ಮನಾಗಿರಬಹುದು ಅಥವಾ ಅನಂತಯ್ಯನಿರಬಹುದು. ಈ ಹೊಸ ರಾಜಕೀಯ ನೆಲೆಗಳನ್ನು ಒಳಗೊಂಡಿದೆ. ಈ ಆಧ್ಯಾತ್ಮಿಕತೆಯಿಂದ ಗಳಿಸುವ ಹಣ ಮತ್ತು ರಾಜಕೀಯ ಮಾಡುವುದರಿಂದ ಗಳಿಸುವ ಹಣ, ಈ ಎರಡು ಪರೋಕ್ಷವಾಗಿ ಅಥವಾ ಪ್ರತ್ಯಕ್ಷವಾಗಿ ನಿಸರ್ಗವನ್ನು ಬಲಿ ತೆಗೆದುಕೊಳ್ಳುತ್ತವೆ. ಬಾಬಣಿ ಪೈಗಳು ನುಡಿಮಂಗಲದ ಭಾರೀ ಶ್ರೀಮಂತ ವ್ಯಾಪಾರಿ, ಇವರು ಆಧುನಿಕ ಶ್ರೀಮಂತರು, ಇವರು ದಿವಾಕರಶರ್ಮರ ಮೊಮ್ಮಗ ಇಮ್ಮಡಿ ದಿವಾಕರ ಶರ್ಮರ ಮಿತ್ರರು. ಇವರು ಉದ್ಯಮ ಸ್ಥಾಪಿಸುವ ಮೂಲಕ ಆಧುನಿಕ ಲೋಕಕ್ಕೆ ತಮ್ಮನ್ನು ಒಪ್ಪಿಕೊಳ್ಳುತ್ತಾರೆ. ಜನರು ಪಟ್ಟಣಗಳಿಗೆ ವಲಸೆ ಹೋಗುವ ಪ್ರಸಂಗ ಒದಗಿ ಬಂದಿತು. ಇದರಿಂದ ಬಾಂಬಣಿ ಪೈಗಳು ಸಹಜ ನಿಸರ್ಗಕ್ಕೆ ತಮ್ಮ ಆಧುನಿಕತೆಯ ಸ್ಪರ್ಶ ನೀಡುತ್ತಾರೆ.

"*ಇಂಥೆಲ್ಲ ಅನುಭವಿಗಳಿಂದ ಮಾಗಿದ ಬಾಬಣಿ ಪೈಗಳವರು ಬ್ಯಾಂಕಿನ ಕನಸನ್ನು ಕಾಣುವ ತಮ್ಮ ಇಬ್ಬರು ಗೆಳೆಯರನ್ನು ಕೂಡಿಕೊಂಡು ಮಂಗಳೂರಿಗೆ ಹೋಗಿ ಅಲ್ಲಿ ವ್ಯವಹಾರಸ್ಥರಿಂದ ಪ್ರೇರಣೆ ಪಡೆದು ಬಂದರು. ಹೊಸ ಉದ್ಯಮದ ಕನಸನ್ನು ಕಂಡರು. ನುಡಿಮಂಗಲಕ್ಕೆ ಮೂರು ಹರಿದಾರಿ ದೂರದಲ್ಲಿ ಅನಾಯಾಸವಾಗಿ ಕಡಲಿಗೆ ಹರಿದು ಹೋಗುತ್ತಿರುವ ಕ್ರೋಢ ನದಿ ಇದೆ. ಅದರ ಎರಡೂ ದಂಡೆಗಳಲ್ಲಿ ಓಡ್ಲು, ಮಡಿಕೆ ಕುಡಿಕೆಗಳ ನಿರ್ಮಾಣಕ್ಕೆ ಬೇಕಾಗುವ ಕೊಜೆಮಣ್ಣು ಧಾರಾಳವಾಗಿದೆ. ಅದೇ ನದಿಯ ಇಕ್ಕಡೆಗಳಲ್ಲಿ ಸಂಮೃದ್ಧಿಯಿಂದ ಹೆಂಚನ್ನು ಬೇಯಿಸಲು ಕಟ್ಟಿಗೆಗೆ ಎಂದೂ ಕೊರತೆ ಬರಲಾರದು ಎಂಬುದು ತಿಳಿದಿತ್ತು.*

೫೮. ಅದೇ. ಪುಟ-೨೬೪

ಜಿಲ್ಲೆಯ ರಾಜಧಾನಿಯಾದ ಮಂಗಳೂರಿನಲ್ಲಿ ಈ ಶತಮಾನ ತೊಡಗುವ ಹೊತ್ತಿಗೇನೆ ಬಾಸೆಲಿನ ಮಿಶನರಿಗಳು ಬಂದು ಹೆಂಚಿನ ಕಾರ್ಖಾನೆ ತೆರೆದಿದ್ದರು. ಮಾರ್ಗೇನ್ ಎಂಬ ಇನ್ನೊಬ್ಬ ಅವರನ್ನು ಅನುಕರಿಸಿದ್ದ. ಅಲ್ಲಿಂದ ಮುಂದೆ ಅವರು ಉತ್ಪಾದಿಸಿದ ಹೆಂಚು ಒಂದೇ ಸಮನೆ ಹಡಗುಗಳಲ್ಲಿ ತುಂಬಿಸಿ ಸಿಂಹಳಕ್ಕೆ ಕರಾವಳಿಯ ಊರುಗಳಾದ ಗೋವಾ, ಮುಂಬಯಿಗಳಿಗೆ ಸಾಗಿಸುತ್ತಾಬೇಕಷ್ಟು ವ್ಯಾಪಾರ ಮಾಡಿದರು. ಬರಿದೆ ಮರಳಿ ಬರುವ ಹಡಗುಗಳಲ್ಲಿ ಹೋದ ಊರುಗಳಿಂದ ತಮ್ಮ ಜಿಲ್ಲೆಗೆ ಬೇಕಾಗುವ ಸರಕುಗಳನ್ನು ಸಾಗಿಸಿ ತಂದರು. ಅದರಿಂದಲೂ ಮುನಾಫೆ ಗಳಿಸಿ ಶ್ರೀಮಂತರಾದ ಎಷ್ಟು ಜನರಿಲ್ಲ! ಈ ಕಾರಣಗಳಿಂದಾಗಿ, ಬಾಬಣಿ ಪೈಗಳವರು ಬ್ಯಾಂಕಿನ ಕನಸನ್ನು ಕಾಣುವ ಮೊದಲೇ ಕ್ರೋಢನದಿ ದಂಡೆಯ ಬಸರೂನಲ್ಲಿ ಕಸಬುದಾರರನ್ನು ಮಂಗಳೂರಿನಿಂದಲೂ, ಕಲ್ಲಿಕೋಟೆಯಿಂದಲೂ ಕರೆಯಿಸಿಕೊಂಡರು. ಈ ಉದ್ಯಮವನ್ನು ತೊಡಗಿದ ಮೂರೆ ಮೂರು ವರ್ಷಗಳಲ್ಲಿ ನುಡಿಮಂಗಲ ಜನರು ಸಹ ತಮ್ಮ ಮನೆ ಮಾಡುಗಳಿಗೆ ಕುಂಬಾರರ ಒಡ್ಲುಗಳನ್ನು ಹಾಕುವುದು ಬಿಟ್ಟು ಹೆಂಚನ್ನು ಹೊದಿಸತೊಡಗಿದರು. ಮಂಗಲಾ ಕಾರ್ಖಾನೆಯ ಹಂಚೆಲ್ಲವೂ ಕೊಲಂಬೊ, ಮುಂಬಯಿಗಳೆಂಬ ಎರಡು ನಗರಗಳ ವ್ಯಾಪಾರಿಗಳಿಗೆ ಗುತ್ತಿಗೆಯಾಗಿ ಹೋಗುತ್ತಿತ್ತು. ನದಿದಂಡೆಯಿಂದ ಕೊಜೆಮಣ್ಣನ್ನು ಎತ್ತುವ ಮೊದಲೇ ದೂರ ಗಿರಾಕಿಗಳಿಂದ ಮುಂಗಡವಾಗಿ ಹಣ ಪಡೆದು ವ್ಯಾಪಾರ ನಡೆಯಿತು."[೫೯]

ಸಹಜವಾಗಿರುವ ನದಿಯ ನೀರು, ಮಣ್ಣು ಇವೆಲ್ಲ ನಿಸರ್ಗದ ಕೊಡುಗೆ, ಈ ಕೊಡುಗೆಯನ್ನು ಮಾನವ ತನ್ನ ಆರ್ಥಿಕ ಶ್ರೇಯೋಭಿವೃದ್ಧಿಗೆ ಬಳಸುವಲ್ಲಿ, ಆಧುನಿಕ ದೃಷ್ಟಿಕೋನವಿದೆ. ಸ್ವತಂತ್ರ ಭಾರತದ ಸಂಕ್ರಮಣ ಜನತೆಯು ನದಿ ನೀರನ್ನಾಗಲೀ, ಮಣ್ಣನ್ನಾಗಲೀ ಕೇವಲ ಅವಶ್ಯಕತೆಗೆ ತಕ್ಕಂತೆ ಬಳಕೆ ಮಾಡುತ್ತಿದ್ದರು. ಆದರೆ ಸಮಕಾಲೀನ ಸ್ಥಿತಿಯಲ್ಲಿ ನೀರು ಮತ್ತು ಮಣ್ಣನ್ನು ವಾಣಿಜ್ಯ ದೃಷ್ಟಿಕೋನದಲ್ಲಿ ಬಳಕೆ ಮಾಡಿಕೊಳ್ಳಲಾಗುತ್ತದೆ. ಇದರಿಂದ ಮಣ್ಣಿನ ಸವೆತ ಮತ್ತು ಭೂಮಾಲಿನ್ಯ ಪರಿಸ್ಥಿತಿಗಳು ತಲೆದೋರುತ್ತಿವೆ.

ಕಾರಂತರು ಬಾಬಣಿ ಪೈಗಳ ಉದ್ಯಮ ಪ್ರವೇಶದಿಂದ ನುಡಿಮಂಗಲದ ಜನರ ಮೇಲೆ ಆದ ಪ್ರಭಾವವನ್ನು ಕುರಿತು ಹೇಳುತ್ತಾರೆ. ಆ ಊರಿನ ಕೆಲವು ಬ್ರಾಹ್ಮಣ ಕುಟುಂಬಗಳು ಧನ್ಯರು, ಹತ್ವಾರರು, ಹೊಳ್ಳರು, ಮಯ್ಯರು ಎಂಬ ಕುಲ ಬಿರುದಿನವರು ಸಹ ಈ ಶತಮಾನದ ಆರಂಭದಲ್ಲಿ ಮೈಸೂರು ಸೀಮೆಗೆ ದಾವಿಸಿ, ಅಲ್ಲಿ ಇಲ್ಲಿ ಹೋಟೆಲು ಉದ್ಯಮವನ್ನು ನಡೆಯಿಸಿ ಧಾರಾಳ ಹಣವನ್ನು ಗಳಿಸಿ, ತಂತಮ್ಮ ಊರಿಗೆ ತಂದು ಸುರಿದದ್ದುಂಟು. ಅಂತವರಲ್ಲಿ ನಾಲ್ಕಾರು ಮಂದಿ ನುಡಿಮಂಗಲದ ಮಣ್ಣಿನ ವಾಸನೆಯನ್ನೇ ಉಂಡು ಬೆಳೆದವರು. ಸ್ವಂತ ಊರಿಗೆ ಮರಳಿದ ಅವರು, ಅಲ್ಲಿನ ಕೆಲವರ ಶ್ರೀಮಂತಿಕೆಯನ್ನು ಕಂಡೋ ಅಥವಾ ಪ್ರಸಿದ್ಧಿಯನ್ನು ಕೇಳಿಯೋ ತಾವು ಹೆಸರಿಗೆ ಬರಲು ಪ್ರಯತ್ನಿಸಿದುಂಟು. ಆ ಪ್ರದೇಶದ ಕುರುಚಲು ಕಾಡುಗಳ ನಡುವೆ ನುಡಿಮಂಗಲೆಯಂತಯೇ ಅರಣ್ಯವಶರಾದ ಒಬ್ಬ ಗಣಪತಿಯನ್ನೂ ಇನ್ನೊಬ್ಬ ಜನಾರ್ಧನನ್ನೂ ಉದ್ಧರಿಸಿದ್ದುಂಟು. ಅವರು ಅಂತಹ ಸಾಹಸವನ್ನು ದಿವಂಗತ ದಿವಾಕರ ಮೇಲಿನ ಅಸೂಯೆಗೆ ಮಾಡಿದರೋ ಅಥವಾ ನಿಜ

೫೯. ಅದೇ, ಪುಟ-೧೧೪

ಭಕ್ತಿಯಿಂದ ಮಾಡಿದರೋ ತಿಳಿಯದು, ಅಂಥವರು ತಂತಮ್ಮ ಕುಲ ದೇವರುಗಳ ಹೆಸರನ್ನು ಸ್ಥಿರಸ್ಥಾಯಿಯನ್ನಾಗಿ ಮಾಡಲು ಪ್ರಯತ್ನಿಸಿದರು.

ಕಾರಂತರು ಹೇಳಿರುವ ಈ ಮಾತುಗಳು ಸರ್ವಕಾಲಿಕ ಸತ್ಯವಾಗಿವೆ. ನುಡಿಮಂಗಲದ ಪರಿಸ್ಥಿತಿಯಲ್ಲಿ ಅವರು ಹೇಳಿರುವ ಉದ್ಯಮ ಸ್ಪರ್ಧೆ ಮತ್ತು ಗುಡಿ ಗೋಪುರಗಳನ್ನು ಕಟ್ಟಿಸುವ ಸ್ಪರ್ಧೆಯ ನಿರಂತರತೆಯನ್ನು ಗುರ್ತಿಸಬಹುದಾಗಿದಂತಹ ಪರಿಸ್ಥಿತಿಯು ಸಮಕಾಲೀನ ಸ್ಥಿತಿಯಲ್ಲಿ ಸ್ಪರ್ಧಾತ್ಮಕವಾಗಿ ಮುನ್ನಡೆಯುತ್ತಿದೆ. ಈ ಮುನ್ನಡೆಯು ನಿಸರ್ಗದ ಮೇಲೆ ನೇರ ಪರಿಣಾಮ ವನ್ನುಂಟು ಮಾಡುತ್ತಿವೆ. ಈ ಪರಿಣಾಮದಿಂದ ನಿಸರ್ಗ ನಾಶವಾಗುತ್ತಿದೆ. ಈ ಸ್ಪರ್ಧೆಯು ನುಡಿಮಂಗಲದಲ್ಲಿ ಹೆಚ್ಚಿತ್ತು ಇದರಿಂದ ನಿಸರ್ಗ ಅವನತಿಯ ಹಾದಿ ಹಿಡಿಯಿತು. ಈ ಸ್ಥಿತಿಯು ಕಾರಂತರನ್ನು ಸ್ವತಂತ್ರ ಭಾರತದ ಪರಿಸ್ಥಿತಿಯಲ್ಲಿ ಚಿಂತೆಗೀಡು ಮಾಡಿರುವ ಸಂಗತಿಯಾಗಿ ಕಂಡುಬರುತ್ತದೆ. ಸಂಸ್ಕೃತಿಯ ನೆಲೆಯಲ್ಲಿ ಆಧ್ಯಾತ್ಮಿಕ ಸ್ಥಾನಗಳಾದ ದೇವಸ್ಥಾನಗಳು ಆರ್ಥಿಕ ಜೀವನದ ಸ್ಥಾನಗಳೆಂದು ನೆಲೆಯಲ್ಲಿ ಪ್ರಸಿದ್ಧಿ ಪಡೆದಿವೆ. ಈ ಕಾದಂಬರಿಯಲ್ಲಿ ಬರುವ ಹಯವದನ ತಮ್ಮ ಕಪಟ ವೇಶದಿಂದ ಜನರನ್ನು ವಂಚನೆ ಮಾಡುವ ಮುಖಾಂತರ ಆಧುನಿಕ ಕಪಟ ವ್ಯಕ್ತಿಗಳ ಪಾತ್ರವನ್ನು ವಹಿಸುತ್ತಾನೆ.

'ಉಕ್ಕಿದ ನೊರೆ' ಕಾದಂಬರಿಯಲ್ಲಿ ಕಾರಂತರು ದಕ್ಷಿಣ ಕನ್ನಡ ಜಿಲ್ಲೆಯ ಬ್ರಹ್ಮಾವರಲ್ಲಿ ನಡೆಯುವ ಸಾಮಾಜಿಕ ವೈಚಿತ್ರಗಳನ್ನು ಹೇಳುತ್ತಾರೆ. ಈ ಸಾಮಾಜಿಕ ನೆಲೆಯಲ್ಲಿರುವ ಗ್ರಾಮೀಣ ಜನತೆಯ ಮೇಲೆ ಜಾಗತಿಕ ಮಹಾಯುದ್ಧಗಳು ಬೀರಿರುವ ಪರಿಣಾಮಗಳನ್ನು ಕುರಿತು ಈ ಕಾದಂಬರಿಯಲ್ಲಿ ಚಿತ್ರಿಸಲಾಗಿದೆ. ಇಲ್ಲಿನ ಪಾತ್ರಗಳಲ್ಲಿ ಶೀನಭಟ್ಟ, ಬಿಲ್ಲಾಡಿಮೋನಪ್ಪ, ಸರಸಾಸಾನಿ ಗುಲಾಬಿ, ಚೆನ್ನಕ್ಕ, ವಾಸು ಪ್ರಮುಖರು.

"ಶೀನಭಟ್ಟರು ವ್ಯವಸಾಯ ಮಾಡುವ ಮೂಲಕ ತನ್ನ ಜೀವನವನ್ನು ನಡೆಸುತ್ತಾರೆ. ಈತನು ತನ್ನ ತಾತ ಮುತ್ತಜ್ಜರು ನೆಟ್ಟಿರುವ ಹಲಸಿನ ಮರಗಳನ್ನು ಹಾಗೂ ಗದೆಗಳನ್ನು ನೋಡಿಕೊಳ್ಳುತ್ತಾನೆ. ಇವರ ಮಗ ವಾಸುದೇವ ಮತ್ತು ಮಗಳು ಲಕ್ಷ್ಮೀ ಶಿನಭಟ್ಟ ತಮ್ಮ ಮಕ್ಕಳು ತನ್ನಂತೆ ವ್ಯವಸಾಯ ಮಾಡಬೇಕೆಂದು ಇಚ್ಛಿಸುತ್ತಾರೆ. ಈ ಕುರಿತು ಶಂಭಯ್ಯನಿಗೆ ಹೇಳುವ ಅವರು ತಮಗಿರುವ ಮೂರು ಗಂಡು ಮಕ್ಕಳಲ್ಲಿ ಮೂವರು ಅದೇ ನೆಲವನ್ನು ಉತ್ತು, ಬಿತ್ತು, ತನ್ನ ಬಳಿಯಲ್ಲಿ ಬದುಕಬಲ್ಲವೇ ಎಂಬ ವಿಚಾರ ಹೊಳೆದಾಗ, ಅವರ ಮನಸ್ಸು ತಬ್ಬಿಬ್ಬಾಗುತ್ತಿತ್ತು. ಒಂದೆರಡು ಮಕ್ಕಳಾದರೂ ಪರವೂರನ್ನು ಸೇರಿ ಬದುಕುವಂಥ ಪಾಡು ಬಂದರೆ ಹೇಗಾದೀತು ಎಂಬುದನ್ನು ನೆನೆದಾಗಲೂ ಅವರಿಗೆ ಭಯವಾಗುತ್ತಿತ್ತು. ಎಲ್ಲಾದರೇನು, ಚೆನ್ನಾಗಿ ಜೀವನ ಮಾಡಿಕೊಂಡಿರಲಿ ಎಂದು ಶಂಭಯ್ಯನಿಗೆ ಅವರೇನ ಹೇಳಿದ್ದರು. ಚೆನ್ನಾಗಿ ಜೀವನ ಮಾಡುವುದು ಅಷ್ಟೊಂದು ಸುಲಭವಾದ ಕೆಲಸವಲ್ಲ ಎಂಬುದು ಅವರಿಗೂ ಅನಿಸುತ್ತದೆ."[೬೦]

ಶೀನಭಟ್ಟರಿಗೆ ತಮ್ಮ ಮಕ್ಕಳು ತನ್ನಂತೆ ಕೃಷಿಕರಾಗಿ ಬದುಕುವ ಮೂಲಕ ನಿಸರ್ಗದೊಂದಿಗೆ ಸಹಜ ಸಂಬಂಧವಿಟ್ಟುಕೊಳ್ಳಬೇಕು ಎಂಬ ಅಪೇಕ್ಷೆ. ಆದರೆ ಆತನಿಗೆ ತಾನು ಕೃಷಿ ಮಾಡುತ್ತಿರುವ

೬೦. ಶಿವರಾಮ ಕಾರಂತ, ಉಕ್ಕಿದ ನೊರೆ, ಪುಟ–೧೭೩

ಕಾಲಕ್ಕಾಗಲೇ ಆಧುನಿಕತೆಯ ಪ್ರಭಾವ ಬೀಸತೊಡಗಿರುವುದರ ಅರಿವು ಆಗಿದೆ. ಅದಕ್ಕಾಗಿ ಆತನು ತನ್ನ ಮಕ್ಕಳ ಭವಿಷ್ಯಕ್ಕೆ ಸಂಬಂಧಿಸಿದಂತೆ ಸೂಕ್ತ ನಿರ್ಣಯ ತೆಗೆದುಕೊಳ್ಳುವಲ್ಲಿ ಗೊಂದಲಕ್ಕೆ ಈಡಾಗುತ್ತಾನೆ.

ಬಿಲ್ಲಾಡಿ ಮೋನಪ್ಪ ಬಾರಕೂರಿನ ಸಾಹುಕಾರ, ಆದರೆ ಆತನು ವಿಲಾಸಿ; ಅತಿ ಬೇಗನೆ ಪೇಟೆ ಸಂಸ್ಕೃತಿಗೆ ಮಾರುಹೋಗುತ್ತಾನೆ. ವೇಶ್ಯೆಯರ ಸಹವಾಸ ಮಾಡುತ್ತಾನೆ. ತಾನೊಬ್ಬ ಪಟಿಂಗ ಎಂಬ ನಾಮಧೇಯವನ್ನು ಸಾಮಾಜಿಕ ನೆಲೆಯಲ್ಲಿ ಗಳಿಸುಸುತ್ತಾನೆ.ಕಾರಂತರು ಬಿಲ್ಲಾಡಿ ಮೋನಪ್ಪ ಗುಲಾಬಿಯನ್ನು ತನ್ನವಳನ್ನಾಗಿಸಿಕೊಂಡ ಬಗೆ ಮತ್ತು ಅವನ ಆಧುನಿಕ ಮನಸ್ಸಿನ ಬಗ್ಗೆ ಹೇಳುತ್ತಾರೆ. "*ಚಂದದ ಹೆಣ್ಣೊಂದು ಕಣ್ಮುಂದೆ ಹಾದು ಹೋದಾಗ ಕಣ್ಣರಳಿಸಿ ಕಾಣುವವರು ಎಷ್ಟೋ ಮಂದಿ ಇರಬಹುದು. ಅದು ಪ್ರಕೃತಿಯ ಆಟ ಆದರೆ ಆ ಆಟಕ್ಕೆ ಮರುಳಾಗುವ ಹೆಣ್ಣಿಗೆ ಮಾತ್ರ, ನಾಳೆ ತನ್ನ ಭವಿಷ್ಯವೇನು ಎಂಬ ವ್ಯವಹಾರ ಜ್ಞಾನ ಇರಬೇಕಾಗುತ್ತದೆ. ಅಂತ ಜ್ಞಾನವಿದ್ದ ಗುಲಾಬಿಯು ಅವಳನ್ನು ಮೆಚ್ಚಿ ಮರಳುಗೊಳಿಸಿದ ಬಿಲ್ಲಾಡಿ ಮಾನಪ್ಪ ಪ್ರೇಯಸಿಯಾದಳು ಮುಂದೆ ಮೋನಪ್ಪನ ದೀಮಂತನೋ ಅಲ್ಲವೋ, ಆ ವಿಷಯ ಸ್ಪಷ್ಟವಾಗಿ ಬಹುಮಂದಿಗೆ ಗೊತ್ತಿಲ್ಲ ಅವನ ಶ್ರೀಮಂತಿಕೆ ಹಿಂದೆ ಹೆಸರಾಗಿತ್ತು. ಹಿಂದೆ ಅ ಮನೆಯವರು ಭೂಮಿ ಕಾಣಿಕೆಗಳಿಗೂ, ಪಾಳೇಗಾರಿಕೆಗೂ ಹೆಸರಾದವರೂ ಅಂತ ಮನೆಗೆ ಸೇರಿದ್ದ ಮೋನಪ್ಪ ಬಾಕೂರು ಪೇಟೆಯಲ್ಲಿ ವೇಷಭೂಷಿತನಾಗಿ ಅಲೆದಾಡುತ್ತಿದ್ದ ಠೀವಿಯೇನು? ಅವನ ಮಾತಿಗೆ ಊರಿನ ನಾಲ್ಕು ತರುಣರಲ್ಲಿದ್ದ ಭರಾಮೇನು! ಅವನಿಗೆ ಬಿಲಾಡಿ ಮನೆಯ ಯಜಮಾನಿಕೆ ಬರುವ ಕಾಲಕ್ಕೆ ಮುಪ್ಪು ಬರಬಹುದು. ಆದರೆ ಅವನು ಇವತ್ತು ಮಾಡುತ್ತಿರುವ ಶೋಕಿ, ಅವನ ಮಲ್ ಮಲ್ ಧೋತ್ರ, ರೇಷ್ಮೆ ಅಂಗಿ, ಬೆಳ್ಳಿ ಹಿಡಿತದ ಬೆತ್ತ ಇವನೆಲ್ಲ ಕಂಡರೆ ಅವನೊಬ್ಬ ಯುವ ರಾಜನ ಮರಿಯ ಹಾಗೆ ಕಾಣಿಸುತ್ತಾನೆ. ಊರಿನ ಆಟಗಳಲ್ಲಿ, ಹಬ್ಬಗಳಲ್ಲಿ ಅವನ ಚೇಷ್ಟೆಯ ಕಣ್ಣುಗಳು ಗುಲಾಬಿಯನ್ನು ಹಂಬಲಿಸಿದ್ದು ಸ್ಪಷ್ಟವಾಗಿತ್ತು.*"[೬೧]

ಬಿಲ್ಲಾಡಿ ಮೋನಪ್ಪ ಕುಟುಂಬ ಕೃಷಿ ಕುಟುಂಬ. ಈ ಕುಟುಂಬದೊಂದಿಗೆ ಹೊಂದಿದ್ದ ಸಂಬಂಧದ ನೆಲೆಯನ್ನು ಮೋನಪ್ಪ ತನ್ನ ಪೇಟೆ ಜೀವನದ ವ್ಯಾಮೋಹದಿಂದ ತಪ್ಪಿಸುತ್ತಾನೆ. ಕಾರಂತರು ಕಾದಂಬರಿಗಳಲ್ಲಿ ತಮ್ಮ ಪಾತ್ರಗಳ ಮುಖಾಂತರ ನಗರ ಜೀವನದ ಸೊಗಡು ಮತ್ತು ಗ್ರಾಮೀಣ ಪರಿಸರದ ಸೊಗಡನ್ನು ದೀರ್ಘವಾಗಿ ಪರಿಚಯಿಸುತ್ತಾರೆ. ಅವನ ಪ್ರಕಾರ ನಗರವೆಂಬುದು ಆಧುನಿಕ ಜೀವನದ ಪ್ರತೀಕ ಬಿಲ್ಲಾಡಿ ಮೋನಪ್ಪ, ಚೆನ್ನಕ್ಕನ ಪಾತ್ರಗಳ ಮೂಲಕ ಆಧುನಿಕ ನೆಲೆಗಳನ್ನು ಗುರ್ತಿಸಿದ್ದಾರೆ.

ಚೆನ್ನಕ್ಕ ತನ್ನ ಹೊಟ್ಟೆ ಪಾಡಿಗೆ ಗಂಡನೊಂದಿಗೆ ಹೋಗಿ ಮುಂಬೈಯಲ್ಲಿ ನೆಲೆಸುತ್ತಾಳೆ. ಇವಳ ಗಂಡನಿಗೆ ವ್ಯವಸಾಯವಿದೆ. ಆದರೆ ಆಧುನಿಕ ಸೋಗಿಗೆ ಮಾರು ಹೋಗುತ್ತಾಳೆ. ಒಟ್ಟಾರೆಯಾಗಿ ಆಕೆಯು ನಿಸರ್ಗದಿಂದ ದೂರ ಹೋಗುತ್ತಾಳೆ. ಪೇಟೆಯ ಹುಟ್ಟು ಮತ್ತು ಅಲ್ಲಿನ ಸಂಸ್ಕೃತಿಯನ್ನು ತನ್ನ ಊರಿಗೆ ಬಂದಾಗ, ನಿಧಾನವಾಗಿ ಪ್ರವಹಿಸುವಂತೆ ಮಾಡುತ್ತಾಳೆ. ಬ್ರಹ್ಮಾವರ,

೬೧. ಅದೇ, ಪುಟ-೧೬೭

ಭದ್ರಗಿರಿಯ ಸುತ್ತಮುತ್ತಲಿನ ಹೆಣ್ಣು ಮಕ್ಕಳನ್ನು ಮುಂಬೈಗೆ ಕರೆದುಕೊಂಡು ಹೋದದ್ದು ಉಂಟು. ಅಲ್ಲಿ ಅವರನ್ನು ವೈಶ್ಯಾವಾಟಿಕೆಯಲ್ಲಿ ತೊಡಗಿಸುವುದು ಅವಳ ಕೆಲಸ. ಇದರಿಂದ ಅಪಾರ ಹಣವನ್ನು ಸಂಪಾದಿಸುತ್ತಾಳೆ. ಇವಳ ಸಹಾಯಕ ಭದ್ರಗಿರಿಯು, ಬ್ರಹ್ಮಾವರ, ಭದ್ರಗಿರಿ ಸುತ್ತ ಮುತ್ತಲೂ ಆಸ್ತಿಯನ್ನು ಕೊಳ್ಳುವುದರ ಮೂಲಕ ತನ್ನ ಇಚ್ಛೆಯನ್ನು ನೆರವೇರಿಸಿಕೊಳ್ಳುತ್ತಾರೆ. ಈ ಮೂಲಕ ಬ್ರಹ್ಮಾವರ, ಭದ್ರಗಿರಿ ಮತ್ತು ಕಲ್ಯಾಣಪುರ ಸುತ್ತಮುತ್ತಲ ವ್ಯವಸಾಯ ಮತ್ತಿತ್ತರ ಕೆಲಸಗಳನ್ನು ಮಾಡುತ್ತಿದ್ದ ಜನರ ಸಂಸ್ಕೃತಿಯಲ್ಲಿ ಮತ್ತು ನಿಸರ್ಗ ಸಂಬಂಧದಲ್ಲಿ ಆಧುನಿಕತೆಯ ಪ್ರವೇಶ ಪಡೆಯುತ್ತಿದೆ. ಆದ್ದರಿಂದ ಜನರು ಸಾಮಾನ್ಯವಾಗಿ ತಮ್ಮ ಪೂರ್ವಿಕರು ನಂಬಿದ್ದ ಭೂಮಿಯನ್ನು ತ್ಯಜಿಸುವುದರ ಮೂಲಕ ಪಟ್ಟಣಗಳಿಗೆ ವಲಸೆ ಹೋಗುವುದು ನಿರಂತರವಾಯಿತು. ಇದಕ್ಕೆ ನೈಸರ್ಗಿಕ ಕಾರಣಗಳನ್ನು ಊಹಿಸಿಕೊಳ್ಳಬಹುದು. ಇದರಿಂದ ಗ್ರಾಮೀಣ ಪ್ರದೇಶದಲ್ಲಿದ್ದ ಯುವ ಜನತೆ ಉದ್ಯೋಗ ನಿಮಿತ್ತ ಪಟ್ಟಣಗಳಿಗೆ ಬರುತ್ತಿದ್ದಾರೆ. ಗ್ರಾಮಗಳಲ್ಲಿ ಕೇವಲ ಮುದುಕರು ಉಳಿದುಕೊಂಡಿರುವುದನ್ನು ಗಮನಿಸಬಹುದು. ಈ ಅಂಶಗಳು ಕಾರಂತರ ಅನೇಕ ಕಾದಂಬರಿಗಳಲ್ಲಿ ತರುತ್ತಾರೆ. ಉದಾಹರಣೆಗೆ 'ಮರಳಿ ಮಣ್ಣಿಗೆ'ಯ ಲಚ್ಚ, ರಾಮ ಇವರೆಲ್ಲರು ಪಟ್ಟಣದ ರುಚಿ ಕಂಡವರು. ಲಚ್ಚ ಶಾಶ್ವತವಾಗಿ ಪಟ್ಟಣಕ್ಕೆ ಬಲಿಯಾಗುತ್ತಾನೆ. ಆದರೆ ರಾಮನ ಕಾಲಕ್ಕೆ ಉದ್ಯೋಗದ ಸಮಸ್ಯೆ ತೀವ್ರವಾಗಿರುತ್ತದೆ. ಏಕೆಂದರೆ ಇವರ ಕಾಲಕ್ಕೆ ಇಂಗ್ಲಿಷ್ ವಿದ್ಯಾಭ್ಯಾಸ ಸಾಮಾನ್ಯ ವಾಗಿರುತ್ತದೆ. ಆದ್ದರಿಂದ ಮುಂಬೈಗೆ ವಲಸೆ ಹೋಗುತ್ತಾನೆ. ಆದರೆ ರಾಮ ಮತ್ತೆ ಹಿಂತಿರುಗಿ ಬಂದರೂ ಸಹ ಬರುವವರೆಗಿನ ಮಧ್ಯಂತರದಲ್ಲಿ ಸರಸೋತಿ, ಸತ್ಯಭಾಮರ ಮುಂತಾದ ಹಿರಿಯರು ಹಾಗೂ ಇನ್ನೂ ಕೋಡಿಯಲ್ಲಿನ ಇತರ ಹಿರಿಯರು ಆಧುನಿಕತೆಯ ಪ್ರಭಾವವನ್ನು ಅನುಭವಿಸುತ್ತಾರೆ. ಈ ಸ್ಥಿತಿಯು ಕಾರಂತರನ್ನು ತೀವ್ರವಾಗಿ ಕಾಡಿದೆ. ಆದ್ದರಿಂದ ಅವರು ತಮ್ಮ ಕಾದಂಬರಿಗಳಲ್ಲಿ ನಿಸರ್ಗ ಮಾನವ ಸಂಬಂಧದಲ್ಲಿ ಆಧುನಿಕತೆಯು ಬೀರಿರುವ ಪ್ರಭಾವಗಳನ್ನು ಚಿತ್ರಿಸುತ್ತಾರೆ.

ಈ ಸಂಗತಿಗೆ ಚೆನ್ನಕ್ಕನು ಹೊರತಲ್ಲ. ಚೆನ್ನಕ್ಕ ಮುಂಬೈಯಲ್ಲಿದಷ್ಟು ದಿನ ಇದ್ದು ನಂತರ ವಯಸ್ಸು ಇಳಿದಾಗ, ಮತ್ತೆ ಹಿಂತಿರುಗಿ ಸ್ವಂತ ಮಣ್ಣಿಗೆ ಹಿಂತಿರುತ್ತಾಳೆ. ಇಷ್ಟರೊಳಗೆ ಯೂರೋಪಿನಲ್ಲಿ ಯುದ್ಧಗಳು ಪ್ರಾರಂಭವಾಗಿರುತ್ತವೆ. ಆದ್ದರಿಂದ ಆಕೆಯ ಬಡ್ಡಿ ವ್ಯವಹಾರ ಮತ್ತು ತನ್ನ ವೈಯುಕ್ತಿಕ ವ್ಯವಹಾರದ ಮೇಲೆ ಕೆಟ್ಟ ಪರಿಣಾಮ ಬೀರಿದ ಪರಿಣಾಮ ಆಕೆ ಊರಿಗೆ ಬರಲು ಕಾರಣವಾಗಿರುತ್ತದೆ.

ಪಾಟಾಲಿ ಶಂಭು, ಗುಲಾಬಿ ಮತ್ತು ಇನಾಸಸೋಜ ಇವರು ಬಾರಕೂರಿನಿಂದ ಚನ್ನಗಿರಿಗೆ ಹೋಗಿ ಜೀವನವನ್ನು ಕಂಡುಕೊಳ್ಳುತ್ತಾರೆ. ಇನಾಸಸೋಜ ತನ್ನ ಕುಲ ವೃತ್ತಿಯಾದ ಪಾತ್ರಗಳಿಗೆ

ಬೆಸುಗೆ ಹಾಕುವ ಕೆಲಸವನ್ನು ಮಾಡುತ್ತಾನೆ. ಶಂಭುವಿನ ಪ್ರೋತ್ಸಾಹದಿಂದ ಚನ್ನಗಿರಿಯಲ್ಲಿ ತಾಮ್ರ ಸಲೆಯನ್ನು ತೆರೆದ. ಈ ಮೂಲಕ ಅವನು ಸ್ವಂತ ಊರನ್ನು ಬಿಟ್ಟು ಪಟ್ಟಣದ ವಾಸಿಯಾಗುತ್ತಾನೆ. *"ತೆರೆದ ಎರಡು ವರ್ಷಗಳಲ್ಲಿ ಅದೃಷ್ಟ ಅನುಕೂಲಿಸಿತು. ಕೈಯಲ್ಲಿದ್ದ ತಾಮ್ರ, ತವರುಗಳ ಬೆಲೆ ಒಂದಕ್ಕೆ ಎಂಟಾಯಿತು.ಮಾಲಿಗೆ ಅಡಚಣೆ ಬಂದರೂ ಕೇಳಿದ ಮಜೂರಿ, ಕೇಳಿದ ಬೆಲೆ ಸಿಗುವ ಕಾಲ ಬಂದಿತು. ತಾಮ್ರದ ಅಂಗಡಿಯ ಮಗ್ಗುಲಿಗೇನೆ ಒಂದು ಚಿಕ್ಕ ಜವುಳಿಯ ಅಂಗಡಿಯನ್ನು ಹಾಕಿಕೊಂಡ. ಊರಿನಿಂದ ಅಲ್ಲಿಗೆ ತನ್ನ ಭಾವವನ್ನು ಹೆಂಡತಿಯನ್ನು ಕರೆಸಿಕೊಂಡ ಕೈಗೆ ನಾಲ್ಕು ಕಾಸು ಬರತೊಡಗಿತು."*[೬೨]

ಇನಾಸ ಸೋಜ ಸ್ವಂತ ನೆಲೆಯನ್ನು ತ್ಯಜಿಸಿ ಈ ಮೂಲಕ ಪ್ರಕೃತಿಯಿಂದ ದೂರವಾಗಿ ಆಧುನಿಕ ನೆಲೆಯೆನಿಸಿದ ಪಟ್ಟಣದಲ್ಲಿ ತನ್ನ ಜೀವನವನ್ನು ಕಟ್ಟಿಕೊಳ್ಳುತ್ತಾನೆ. ಪಾಟಾಳಿ ಶಂಭು ಮೊದಲು ಶಿವಯ್ಯ ಪುರಾಣಿಕ ಹೋಟೆಲ್ ನಲ್ಲಿ ಕೆಲಸ ಮಾಡುತ್ತಿದ್ದಾಗ ಹಣವನ್ನು ಕದ್ದು ನಂತರ ಸಾಹುಕಾರನಾಗಿ ಚನ್ನಗಿರಿಯಲ್ಲಿ ಸ್ವಂತ ಹೋಟೆಲ್ ತೆರೆಯುವ ಮೂಲಕ ಬದುಕನ್ನು ಕಂಡು ಕೊಳ್ಳುತ್ತಾನೆ.

"ಶಂಭುವಿನ ಅಂಗಡಿಯಲ್ಲಿ ವ್ಯಾಪಾರ ಧಾರಾಳವಾಗಿತ್ತು. ಅಂಗಡಿ ಎದುರು ಬದುರು ಒಳಗಡೆ ಬೆಂಗಡೆಗಳು ಹಾಳು ಕೊಟ್ಟಿಗೆಯ ಹಗೆ ಕಾಣಿಸಬಹುದಾದರೂ ಎಷ್ಟು ಹೊತ್ತಿಗೂ ಜನ ಬಂದು ಚಹಾ ಕುಡಿಯುತ್ತಿದ್ದರು. ತಿಂಡಿ ತಿನ್ನುತ್ತಿದ್ದರು. ಅವೇನು ಸಿಟಿಯ ಮಾಹಾತಿಂಡಿಗಳಲ್ಲ ಮೆಣಸು, ಕಡಲೆ ಹಿಟ್ಟು, ನೆಲಗಡೆ ಎಣ್ಣೆಗಳಿಂದ ತಯಾರಿಸಿದಂಥ ಹೊಟ್ಟೆ ತುಂಬಿಸಿಕೊಳ್ಳುವ ತಿನಿಸುಗಳು.ಶಂಭುವಿಗೂ ವ್ಯಾಪಾರ ಅಭಿವೃದ್ಧಿಗೊಳ್ಳುತ್ತಾ ಕಾಸು ಕೈಗೆ ಬರುತ್ತಿದ್ದ ಹಾಗೆಯೇ ಅದನ್ನು ಏನು ಮಾಡಬೇಕೆಂಬ ಯೋಚನೆಯು ಬಲವಾಗತೊಡಗಿತು. ಒಂದಿಷ್ಟು......... ಅವನ ಧನಿ ಶಿವಯ್ಯ ಪುರಾಣಿಕರು ಊರು ಮನೆಯಲ್ಲಿ ಭೂಮಿ ಕೊಳ್ಳುವುದನ್ನು ಕಂಡಿದ್ದಾನೆ. ತಾನು ಹಾಗೆ ಮಾಡಬಾರದೇಕೆ ಎಂದು ಅನಿಸಿದ್ದುಂಟು."[೬೩]

ಪಾಟಾಲಿ ಶಂಭು ಮತ್ತು ಗುಲಾಬಿಯರು ನಿಸರ್ಗದ ಸಹಜ ಸಂಬಂಧವನ್ನು ಕಡಿದುಕೊಂಡು ನಂತರ, ಹೋಟೆಲ್‌ನಲ್ಲಿ ಅನ್ನವನ್ನು ಮಾರುವುದರ ಮೂಲಕ ಹಣವನ್ನು ಸಂಪಾದಿಸುವಲ್ಲಿ ಆಧುನಿಕತೆಯನ್ನು ಕಾಣಬಹುದು. ನಾವು ಬೆಳೆ ಬೆಳೆಯುವುದು ರೈತ ಅದಕ್ಕೆ ವಾಣಿಜ್ಯ ರೂಪವನ್ನು ಕೊಟ್ಟು ಮಾರುವುದು ಪಟ್ಟಣಿಗರು ಇದು ಮನುಷ್ಯನ ಆಧುನಿಕತೆಯ ವಿವಿಧ ಮಜಲುಗಳಲ್ಲಿ ಒಂದಾಗಿದೆ. ಪಾಟಾಳಿ ಶಂಭುವಿಗೆ ಹಣದ ಸಂಪಾದನೆ ಹೆಚ್ಚಾಗಿ ತಾನೂ ಸಹ ತನ್ನ ಮೊದಲ ಧನಿ ಶಿವಯ್ಯ ಪುರಾಣಿಕರಂತೆ ಆಸ್ತಿಯನ್ನು ಕೊಳ್ಳಬೇಕು ಎಂದು ಯೋಚಿಸುತ್ತಾನೆ. ಈ ನೆಲೆಯಲ್ಲಿ ಬಂಡವಾಳಶಾಹಿಗಳ ಮನಸ್ಥಿತಿಯನ್ನು ಪ್ರತಿನಿಧಿಸುತ್ತಾನೆ.

ಇನಾಸಸೋಜನ ವ್ಯಾಪಾರದ ಮೇಲೆ ಯುರೋಪಿನಲ್ಲಾದ ಯುದ್ಧ ಪರಿಣಾಮ ಬೀರಿತು. ಆದ್ದರಿಂದ ಅವನಿಗೆ ಅನೇಕ ಸಾಮಾನುಗಳ ಕೊರತೆಯುಂಟಾಯಿತು. ಇದರಿಂದ ಅವನು ಅದನ್ನು

---

೬೨. ಅದೇ, ಪುಟ-೧೦೩

೬೩. ಅದೇ, ಪುಟ-೧೫೩

ನಂಬಿಕೊಳ್ಳಲು ಸಾಧ್ಯವಿಲ್ಲದೆ ಬೇರೆ ಉದ್ಯೋಗದ ಕಡೆ ಮುಖ ಮಾಡಿದನು. *"ಇನಾಸನ ಮಟ್ಟಿಗೆ ಊರುಮನೆಯಲ್ಲಿರುವುದನ್ನು ಒಂದು ಸಣ್ಣ ತೋಟ ಮಾತ್ರ ಶಂಭುವಿನ ಮಟ್ಟಿಗೆ ಇದ್ದ ತುಣುಕು ಭೂಮಿಯೂ ಸೋದರತ್ತೆ ಇರುವ ಮನೆಯನ್ನು ಬಿಟ್ಟರೆ ಮತ್ತೇನೂ ಉಳಿದಿರಲಿಲ್ಲ. ಇತ್ತ, ಇನಾಸನ ಮನಸ್ಸು ಆ ಊರಲ್ಲಿ ಪುಟ್ಟಕಾಮಗಾರಿಗಳ ಕಂಟ್ರಾಕ್ಟನ್ನು ಪಡೆಯುವ ಕುತೂಹಲವನ್ನು ತಾಳಿತು. ಹುಟ್ಟೂರಿನ ಗುರುತಿನಿಂದ ನಾಲ್ಕು ಜನ ಬಡಗಿಯನ್ನು ಕರೆಯಿಸಿಕೊಳ್ಳಬಲ್ಲ, ಸಾರಣಿಯನ್ನು ಕರೆಯಿಸಿಕೊಳ್ಳಬಲ್ಲ. ಸಾಮಾನ್ಯ ಕೆಲಸಗಳಿಗೆ ಅದೇ ಊರಿನ ಜನರನ್ನು ಸಾಕಾಗುತ್ತಾರೆ. ಹೀಗಾಗಿ ರಸ್ತೆ ರಿಪೇರಿ, ನೀರಿನ ಮೋರಿ, ಚಿಕ್ಕಪುಟ್ಟ ಕಟ್ಟಡ – ಇಂಥ ಕೆಲಸಗಳ ನಿರ್ಮಾಣವನ್ನು ಗುತ್ತಿಗೆ ವಹಿಸಿಕೊಳ್ಳುವ ಚಪಲ ಉಂಟಾಯಿತು."*[೬೪]

ಯೂರೋಪಿನಲ್ಲಿ ಉಂಟಾದ ಯುದ್ದಗಳು ಇಡೀ ಭಾರತವನ್ನು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯವಾಗಿ ಪೀಡಿಸಿತು. ಇದು ನಮ್ಮ ಬಾರಕೂರು, ಭದ್ರಗಿರಿ, ಬ್ರಹ್ಮವರದ ಜನರನ್ನೂ ಬಿಡಲಿಲ್ಲ. ಅಗತ್ಯ ವಸ್ತುಗಳ ಬೆಲೆಗಳು ಏರತೊಡಗಿದವು. ಜನರು ಪರದಾಡಿದರು. ಇದೇ ರೀತಿ ಚೆನ್ನಗಿರಿಯಲ್ಲಿ ವಾಸವಾಗಿದ್ದ ಇನಾಸೋಜನಿಗೆ ನೇರವಾಗಿ ತಟ್ಟಿತು. ಅದರ ಪರಿಣಾಮದಿಂದ ಅವನು ಕಾಂಟ್ರಾಕ್ಟನ್ನು ಮಾಡಿಸುವ ಕೆಲಸಕ್ಕೆ ಇಳಿದನು. ಈ ಮೂಲಕ ಅಣೆಕಟ್ಟು ನಿರ್ಮಾಣ, ರಸ್ತೆ ನಿರ್ಮಾಣ, ಇವೆಲ್ಲವು ಬಂಡವಾಳ ಶಾಹಿಯ ಪ್ರಕ್ರಿಯೆಯ ಮೂಲಗಳು ಈ ಮೂಲಗಳು ನಾವು ಬ್ರಿಟಿಷರಿಂದ ಪಡೆದ ಪ್ರತಿಫಲಗಳು. ಈ ಫಲಗಳಿಂದ ನಿಸರ್ಗ ನಲುಗುತ್ತಿದೆ.

ಶೀನಭಟ್ಟರು ಕೃಷಿಯಲ್ಲಿ ಆದರೆ ಇವನ ಮಕ್ಕಳು ವಿದ್ಯಾಭ್ಯಾಸದಲ್ಲಿ ನಿರತರಾಗಿರುತ್ತಾರೆ. ಅವರ ಎರಡನೇ ಮಗ ಕಾಶಿಯಲ್ಲಿ ಎಂ.ಸ್ಸಿ ಮಾಡುತ್ತಿರುತ್ತಾನೆ. ಇದು ಮುಗಿದ ನಂತರ ಊರಿಗೆ ಬಂದ. ಅನಂತರ ಮುಂಬೈನಲ್ಲಿ ಕೆಲಸಕ್ಕೆ ಸೇರಿಕೊಂಡನು. ಇವನ ಮೊದಲ ಮಗ ಶಾಲಾ ಮಾಸ್ತರಿಕೆ ಕೆಲಸ ಮಾಡುತ್ತಾನೆ. ಶೀನಭಟ್ಟ ಹುಟ್ಟು ಕೃಷಿಕನಾದರೆ ವಾಸುಭಟ್ಟ ಶಿಕ್ಷಕನಾಗಿ ಅದರೊಂದಿಗೆ ಬೇಸಾಯಗಾರನಾಗಬೇಕೆಂಬ ಆಸೆಯನ್ನು ಹೊಂದಿ ಆಧುನಿಕ ಮನೋಭಾವದೊಂದಿಗೆ ಬದುಕುತ್ತಾನೆ. ಭಾರತಕ್ಕೆ ಸ್ವಾತಂತ್ರ್ಯ ಬಂದು ಜನರು ಗೆದ್ದತ್ತಿನ ಬಾಲ ಹಿಡಿಯುವ ಪ್ರವೃತ್ತಿ, ಭ್ರಷ್ಟಾಚಾರ, ದಿವಾಳಿತನ, ಪ್ರತ್ಯೇಕ ರಾಜ್ಯದ ಕೂಗು ಕಂಡುಬರುತ್ತದೆ. ಇವೆಲ್ಲವು ವಾಸುಭಟ್ಟರಿಗೆ ತುಂಬಾ ಯೋಚಿಸುವ ಕಳವಳಕಾರಿಯ ವಿಷಯಗಳಾಗುತ್ತವೆ. ಅದಕ್ಕಾಗಿ ಆತನು ತಂದೆಯೊಂದಿಗೆ ಚರ್ಚೆ ಮಾಡುತ್ತಾನೆ. ಈ ಚರ್ಚೆಯಲ್ಲಿ ಆಧುನಿಕ ಚಿಂತನೆಯ ನೆಲೆಯನ್ನು ಕಾಣಬಹುದಾಗಿದೆ.

"೧೫ನೇ ಆಗಸ್ಟ್ ೧೯೪೭ ದಿನ ಬ್ರಹ್ಮಾವರದಲ್ಲೂ ಸಹ ಸ್ವಾತಂತ್ರ್ಯ ಉತ್ಸವ ನಡೆಸುವ ಪೂರ್ವಭಾವಿಯಾಗಿ ಬ್ರಿಟೀಷರು ಎರಡು ತಿಂಗಳ ಮೊದಲೇನೆ ಭಾರತಕ್ಕೆ ಸ್ವಾತಂತ್ರ್ಯವನ್ನು ಕೊಡುತ್ತೇವೆ. ಎಂದು ಘೋಷಿಸಿದ್ದರು. ಆ ವಾರ್ತೆಯನ್ನು ವಾಸುಭಟ್ಟ ತನ್ನ ಊಟಕ್ಕೆ ಕುಳಿತಾಗ ತಿಳಿಸಿದ್ದ. ಶೀನಭಟ್ಟರ ಸ್ವಾತಂತ್ರ

೬೪. ಅದೇ, ಪುಟ-೧೪೯

ಬರುತ್ತದಂತೋ! ಬರಲಿಯಪ್ಪ! ಅದನ್ನು ತೆಗೆದುಕೊಂಡು ಒಬ್ಬರು ಇನ್ನೊಬ್ಬರ ತಲೆಯನ್ನು ಹೊಡೆದರಾಯಿತು. ಈಗಲೇ ನಮ್ಮಲಿ ನಡೆಯುತ್ತಿರುವುದು ಗೆದ್ದ ಎತ್ತಿನ ಬಾಲ ಹಿಡಿಯುವ ಧರ್ಮ, ನ್ಯಾಯ, ನೀತಿಗಳಿಗೆ ಮರ್ಯಾದೆಯಿಲ್ಲ. ದುಡ್ಡಿಗೆ ಅಧಿಕಾರಕ್ಕೆ ಮರ್ಯಾದೆ ಆದರೂ ಇಲ್ಲಿಯ ತನಕ ಒಂದು ಬಿಗುಮಾನದ ಸರಕಾರ ಇದ್ದದರಿಂದ ಮನುಷ್ಯ ಮನುಷ್ಯನನ್ನು ತಿನ್ನದೆ ಕುಳಿತಿದ್ದಾನೆ.!"[೬೫]

ಶೀನಭಟ್ಟರ ಈ ಮಾತುಗಳಲ್ಲಿ ಬ್ರಿಟೀಷರು ಹೋದ ನಂತರ ನಮ್ಮವರ ಸ್ವಾರ್ಥಬುದ್ಧಿ ನಿಸರ್ಗವನ್ನು ತನ್ನ ಸ್ವಂತಕ್ಕೆ ಬಳಸುವ ಹುನ್ನಾರದ ಅರ್ಥವಿದೆ. ಇದು ಪ್ರಸ್ತುತ ನಿಜವಾಗುತ್ತಲೂ ಇದೆ. ವಾಸುದೇವ ಅಥವಾ ವಾಸುಭಟ್ಟನ ಕುರಿತು ಟಿ.ಪಿ ಅಶೋಕರವರು–*"ಉಕ್ಕಿದ ನೊರೆಯ ವಾಸುದೇವ ಮೊದಲಾದ ಪಾತ್ರಗಳ ಹಿಂದೆ 'ಮರಳಿ ಮಣ್ಣಿಗೆ'ಯ ರಾಮ ಯಾವತ್ತೂ ಇದ್ದಾನೆ, ರಾಮನ ವ್ಯಕ್ತಿತ್ವದ ಬೇರೆ ಬೇರೆ ಎಳೆಗಳು ಈ ಪಾತ್ರಗಳಲ್ಲಿ ಅವುಗಳ ವಿವಿಧ ವಿಸ್ತೃತ ಸಾಮ್ಯ ವ್ಯತ್ಯಾಸಗಳಲ್ಲಿ ಕಂಡುಬರುತ್ತದೆ. ಸ್ವಾತಂತ್ರ್ಯ ಪೂರ್ವದ ಆದರ್ಶಗಳೆಲ್ಲವು ಕಾರಂತರ ಭರವಸೆ ಅನುಮಾನಗಳ ಡೆಯಲೆಕ್ಟಿನಲ್ಲಿಯೇ ಮೂಡಿಬರುವುದರಿಂದ ಒಂದು ನಿಟ್ಟಿನಲ್ಲಿ ಹುಸಿ ರೋಮ್ಯಾಂಟಿಕ್ ಆಗುವ ಅಪಾಯಗಳಿಂದ ವೈಯಕ್ತಿಕ ಜೀವನ ಸಂದರ್ಭದಲ್ಲಿಯೇ ಪಡೆದುಕೊಳ್ಳುವ ಸ್ವರೂಪವನ್ನು ಕಾಣಿಸುವ ಯಾವತ್ತೂ ವಾಸ್ತವವಾದಿ ಗದ್ಯದಲ್ಲಿ ಅಧಿಕೃತವಾಗುತ್ತದೆ."*[೬೬]

ಕಾರಂತರು ಈ ಕಾದಂಬರಿಯಲ್ಲಿ ಸಾಮಾಜಿಕ, ಆರ್ಥಿಕ, ರಾಜಕೀಯ ಸಮಸ್ಯೆಗಳಿಂದ ಮಾನವನು ನಿಸರ್ಗವನ್ನು ತ್ಯಜಿಸುವ ಮತ್ತು ಕಡೆಗೆ ನಿಸರ್ಗವನ್ನು ತನ್ನ ಅಭಿವೃದ್ಧಿಗಾಗಿ ಬಳಸಿಕೊಳ್ಳುವ ಅನಿವಾರ್ಯತೆಗಳನ್ನು ಮತ್ತು ಲಾಭ ಕೋರತನಗಳನ್ನು ಗುರ್ತಿಸುತ್ತಾರೆ. ಇದು ಆಧುನಿಕತೆಯ ಪ್ರಭಾವವಾಗಿದೆ. ಇಂತಹ ಪ್ರವೇಶಕ್ಕೆ ಕಾರಣವಾಗುವವರು ಚೆಲ್ಲಾಡಿ ಮೋನಪ್ಪ, ವಾಸುಭಟ್ಟ, ಇನಾಸಸೋಜ, ಪಾಟಾಳಿ ಶಂಭು, ಗುಲಾಬಿ, ಚೆನ್ನಕ್ಕ, ಭದ್ರಗಿರಿ, ವೆಂಕ, ಶಿವಯ್ಯ ಪುರಾಣಿಕ ಮೊದಲಾದವರು. ಇವರೆಲ್ಲರೂ ಜೀವನದಲ್ಲಿ ಏರುಪೇರುಗಳನ್ನು ಕಂಡವರು. ಕಾರಣ ಬದುಕಿನ ದೃಷ್ಟಿಕೋನವಾಗಿದೆ. ಈ ಕಾರಣದಿಂದ ಅವರು ಆಧುನಿಕ ನಿಲುವುಗಳನ್ನು ರೂಢಿಸಿಕೊಂಡು, ಆಧುನಿಕರಾಗಿ ನಿಸರ್ಗವನ್ನು ಪ್ರವೇಶಿಸಿ, ಜೀವನ ನಡೆಸುತ್ತಾರೆ.

'ಸ್ವಪ್ನದ ಹೊಳೆ'ಯು ಕಾರಂತರ ಅನುಭವದ ಹೊಳೆಯಾಗಿದೆ. ಕಾರಂತರು ತಾವು ಕಂಡ ನಿಸರ್ಗ ಮತ್ತು ವ್ಯಕ್ತಿಗಳ ಆದರ್ಶಗಳನ್ನು ಈ ಕಾದಂಬರಿಯ ನಾಯಕ ಸೊಪ್ಪಿನಹಳ್ಳಿಯ ಪರಮೇಶ್ವರಯ್ಯನ ಮಗ ಕಿಟ್ಟಣ್ಣನಲ್ಲಿ ಕಾಣುತ್ತಾರೆ, ಕಿಟ್ಟಣ್ಣ ನಿಸರ್ಗದ ಆರಾಧಕ. ಇವನು ಈ ಆರಾಧನೆಯ ಆದರ್ಶವನ್ನು, ತನ್ನ ತಂದೆಯ ಒಕ್ಕಲಾದ ತಿಮ್ಮನ ಮಗ ಮಾದನಿಂದ ಪಡೆಯುತ್ತಾನೆ. ಕಿಟ್ಟಣ್ಣ ಮಾದನೊಂದಿಗೆ ನಿಸರ್ಗವನ್ನು ನೋಡಲು ಹೋದಾಗ ಸೊಪ್ಪಿನಹಳ್ಳಿಯಲ್ಲಿ ಹರಿಯುತ್ತಿದ್ದ ಹಳ್ಳವನ್ನು ಕಂಡು ಸಂತೋಷವಟ್ಟು ಅದನ್ನು 'ಸ್ವಪ್ನದ ಹೊಳೆ' ಎನ್ನುತ್ತಾನೆ.

ಕಿಟ್ಟಣ್ಣ ಕುಂದಾಪುರದಲ್ಲಿ ಮೆಟ್ರಿಕ್ ಮುಗಿಸಿ ಮಂಗಳೂರಿನಲ್ಲಿ ಕಾಲೇಜಿಗೆ ಸೇರುತ್ತಾನೆ. ಕಿಟ್ಟಣ್ಣ ಮಂಗಳೂರಿನ ಶ್ರೀಮಂತ ವಕೀಲ ರಾಮರಾಯರ ಮನೆಯಲ್ಲಿ ಊಟ ಮಾಡಿಕೊಂಡು

೬೫. ಅದೇ, ಪುಟ–೧೬೯
೬೬. ಟಿ.ಪಿ.ಅಶೋಕ (ಸಂ), ಈ ಶತಮಾನದ ನೋಟ ಶಿವರಾಮ ಕಾರಂತ, ಪುಟ–೧೦೩

ಕಾಲೇಜು ಶಿಕ್ಷಣವನ್ನೂ ಮುಗಿಸುತ್ತಾನೆ. ಊರಿಗೆ ಹಿಂತಿರುಗಿದ ನಂತರ, ಶಿಕ್ಷಕನಾಗಿ ದುಡಿಯಲು ಬೊಂಬಾಯಿಗೆ ಹೋಗುತ್ತಾನೆ. ಮುಂಬೈಯಲ್ಲಿ ಕಾಲೇಜಿನ ಪ್ರಾಧ್ಯಾಪಕನಾಗಿದ್ದಾಗ ಟ್ಯೂಷನ್‌ಗೆ ಬರುತ್ತಿದ್ದ ಬನ್ನಿ ಮತ್ತು ಇಂದುಮತಿಯರು ಅವನಿಗೆ ತುಂಬಾ ನೆಚ್ಚಿನ ವಿದ್ಯಾರ್ಥಿಗಳಾಗಿದ್ದರು. ಇವರಲ್ಲಿ ಬನ್ನಿಯು ಗೃಹಸ್ಥ ಮಡಗಾಂವಕರ್ ಎಂಬ ಪ್ರಾಧ್ಯಾಪಕನ ಮೋಸಕ್ಕೆ ಬಲಿಯಾಗಿ ಗರ್ಭಿಣಿಯಾಗುತ್ತಾಳೆ. ಈ ನಡುವೆ ಅವನು ಮುಂಬೈಯಲ್ಲಿ ಕಲಾ ಶಿಕ್ಷಕನಾಗಿ, ಕಲಾವಿದನಾಗಿ ಹೆಸರನ್ನು ಪಡೆದಿರುತ್ತಾನೆ. ಅಲ್ಲಿರುವ ತನಕ ಆಧುನಿಕ ದೃಷ್ಟಿಕೋನಕ್ಕೆ ಬೇಕಾಗಿರುವ ಎಲ್ಲಾ ರೀತಿಯ ಗುಣಗಳನ್ನು ಮೈಗೂಡಿಸಿಕೊಂಡ ಕಿಟ್ಟಣ್ಣ ನಿಸರ್ಗವನ್ನು ಆಧುನಿಕ ದೃಷ್ಟಿ ಕೋನದ ನೆಲೆಯಲ್ಲಿ ನೋಡುತ್ತಾನೆ. ಈ ಕಾದಂಬರಿಯ ಸೊಪ್ಪಿನ ಹಳ್ಳಿಯ ಕೃಷ್ಣ ಕುಂದಾಪುರ, ಮಂಗಳೂರು, ಮುಂಬೈ ಹೀಗೆ ಅಲೆದಾಡಿ ಕಲಾವಿದನಾಗಿ ಬೆಳೆಯುತ್ತಾ ಹೋಗುವ ಕಥೆ ಸ್ವಪ್ನದ ಹೊಳೆಯಲ್ಲಿದೆ.

ಸೊಪ್ಪಿನಹಳ್ಳಿಯಿಂದ ಕುಂದಾಪುರವನ್ನು ಸೇರಿದಾಗ ಸಾಕಷ್ಟು ಬೆರಗುಪಟ್ಟಿದ ಕಿಟ್ಟಣ್ಣ! ಕುಂದಾಪುರದಿಂದ ಮಂಗಳೂರನ್ನು ಸೇರಿದಾಗ ಇನ್ನಷ್ಟು ಬೆರಗುಗೊಂಡನು. ಆದರೆ ಮುಂಬೈಗೆ ಹೋದಾಗ ನಿಸರ್ಗವನ್ನು ಕಂಡು ಬೆರಗಾದ ಸಹ ಅವನಲ್ಲಿ ಅಷ್ಟರೊಳಗೆ ಆಧುನಿಕತೆಯ ಪ್ರಭಾವ ಹೆಚ್ಚಾಗಿರುತ್ತದೆ. ಅವನಲ್ಲಿ ಸೊಪ್ಪಿನಹಳ್ಳಿಯ ನಿಸರ್ಗವನ್ನು ಕಂಡು ಸಂತೋಷ ಪಟ್ಟಷ್ಟು ಅಲ್ಲಿನ ನಿಸರ್ಗವನ್ನು ಕಂಡಾಗ ಆಗಲಿಲ್ಲ. ಬದಲಾಗಿ ಅಲ್ಲಿನ ವಾತಾವರಣ ಕೃತಕವೆನಿಸುತ್ತದೆ. ಅಲ್ಲಿ ಮಾನವ ಸಂಬಂಧಗಳ ಕೊರತೆ ಕಂಡುಬರುತ್ತದೆ.

ಮುಂಬಯಿಗೆ ಬಂದಾಗಿನಿಂದ ಅವನಿಗೆ ಇನ್ನೊಂದು ಉಪಕಾರವಾಗಿದೆ. ಮಂಗಳೂರು ನಗರವನ್ನು ನೋಡುತ್ತಿರುವಾಗ, ನಗರದ ತೆಂಗಿನ ತೋಟಗಳು, ಯಾವತ್ತು ನಗರದ ಹಾದಿ, ಬೀದಿ, ಜನ ಸಮೂಹಗಳನ್ನು ಅಡಗಿಸಿ ಹಿಡಿಯುವಂತೆ ಮುಂಬಯಿ ನಗರ ಕಾಣಿಸುತ್ತಿರಲಿಲ್ಲ. ಇಲ್ಲಿಯೂ ಎತ್ತರದ ಮಲಬಾರ್ ಬೆಟ್ಟವಿದೆ. ಅದು ಅವನ ನಿವಾಸಕ್ಕೆ ತೀರ ಸಮೀಪದಲ್ಲಿ ಚಾಪಾತಿಯ ಕಡಲ ತೀರವಿದೆ. ಕಡಲಿನ ದಂಡೆಗೆ ಹೋಗಿ ಕುಳಿತರೆ ಆಚೀಚೆ ಕುಳಿತಿರುವವರು ಸಾವಿರಾರು ! ಆದರೆ ಅದೇ ಅವರೆಲ್ಲ ಬರಿಯ ಜನರು ಅಪರಿಚಿತರು. ಅವನನ್ನು ಮಾತಾಡಿಸುವವರು, ನೋಡಿಯೂ ನೋಡದಂತಿರುವವರು! ಈ ದೃಷ್ಟಿಯಿಂದ ಅದು ಮಂಗಳೂರಿನ ಬಾವುಟ ಗುಟ್ಟವೇ ! ಮುಂದಿರು ಸಮುದ್ರ? ಅದರ ಕಲಕು ನೀರು ಶಕ್ತಿಗುಂದಿದ ಅಲೆಗಳು? ಅವು ಮುರಿಯುವ ರೀತಿಯನ್ನು ನೋಡಿದಗೆ, ಪಾಪ ಗಂಗೊಳ್ಳಿ ಹೊಳೆಗೆ ಇರುವ ಶಕ್ತಿ ಸೌಂದರ್ಯ ಇದಕ್ಕಿಲ್ಲ ಅನಿಸುತ್ತದೆ ಅವನಿಗೆ!

ಕಿಟ್ಟಣ್ಣ ಬನ್ಸಿಯನ್ನು ಮದುವೆಯಾಗಿ ಮುಂಬೈಯಿಂದ ಮನೆಗೆ ಹಿಂತಿರುಗಿದಾಗ ಇದನ್ನು ಕಂಡ ರುಕ್ಮಿಣಿಗೆ ಆಶ್ಚರ್ಯವಾಗುತ್ತದೆ. ಏಕೆಂದರೆ ಬನ್ಸಿಯ ಬೇರೆ ಜಾತಿ ಮತ್ತು ಸಂಸ್ಕೃತಿಗೆ ಒಳಪಟ್ಟಿರುವವಳು. ಇದನ್ನು ಕಂಡ ಅದೇ ರೀತಿಯಾಗಿ ಅವನ ತಾಯಿ "ಅದೆಲ್ಲ ಋಣಾನುಬಂಧ, ದೈವೇಚ್ಛೆ" ಎಂದು ಹೇಳುತ್ತಾಳೆ. ಈತನ ತಂದೆ ಪರಮೇಶ್ವರಯ್ಯನಿಗೆ ಈ ಬಗ್ಗೆ ಸಮಾಧಾನ ಬರುವುದಿಲ್ಲ. ಆಗ ಕಿಟ್ಟಣ್ಣ ತಂದೆಯಲ್ಲಿ ಕ್ಷಮೆ ಕೇಳುತ್ತಾನೆ. ಮನೆಗೆ ಬಂದ ಕಿಟ್ಟಣ್ಣ ತನ್ನ ಪತ್ನಿಯನ್ನು ಸಂಜೆ ಇಳಿ ಬಿಸಿಲಿನಲ್ಲಿ ನಿಸರ್ಗವನ್ನು ತೋರಿಸಲು ಕರೆದೊಯ್ಯುತ್ತಾನೆ. ಈ ಮೂಲಕ ಕಾರಂತರು ನಿಸರ್ಗ ಮಾನವ ಸಂಬಂಧದೊಳಗೆ ಬನ್ಸಿಯೆಂಬ ಆಧುನಿಕ ಪಾತ್ರವನ್ನು ತರುತ್ತಾರೆ. ಈ ಸಂದರ್ಭದಲ್ಲಿ ನಿಸರ್ಗವನ್ನು ನೋಡುವ ಮತ್ತು ಅನುಭವಿಸುವ ದೃಷ್ಟಿಯ ಬನ್ಸಿ ಮತ್ತು ಕಿಟ್ಟಣ್ಣನಲ್ಲಿ ವ್ಯತ್ಯಾಸ ಕಾಣಬಹುದು.

ಕೃಷ್ಣ ಊರಿನ ಬೆಣದ ಮೂಲಕ ಹರಿಯೂತ್ತಾ ಬನ್ಸಿಯನ್ನು ಕರೆದುಕೊಂಡು ಹೊರಟ. ಊರ ಗೋಳಿಯ ಕಟ್ಟೆಯನ್ನು ತೋರಿಸಿದ. ನನ್ನ ತಂಗಿ ಹೇಳಿದ ಸ್ಥಳ ಇದು ಎಳೆಯನಿರುವಾಗ ನನಗೆ ಇಲ್ಲಿಗೆ ಬರುವುದೆಂದರೆ ಆಸೆ ಎಂದ ಮತ್ತೂ 'ಬನ್ಸಿ ಇದು ಚಂದ ನೋಡು! ಎಲ್ಲಿ ಆನಂದಗೊಂಡಳು ಬಳಿಕ ಅಲ್ಲೇ ಬಂಡೆಯೊಂದರ ಮೇಲೆ ಕುಳಿತು ನೀರಿಗೆ ಕಾಲಿಳಿಸಿ ಆಡಿಸಿದಳು.'

"ತುಂಬಾ ಚಂದವಲ್ಲವೇ ಈ ಸ್ಥಳ? ಅದರಲ್ಲಿಯೂ ಬನ್ಸಿ, ಬಂದರೆ ನನಗೆ ಕನಸೇ ಕನಸು. ಕನಸ್ಸನ್ನು ಹೆಣೆಯಲು ಕಲಿಸಿದ ಗುರುವೇ ಈ ಹಳ್ಳ ! ನಾವು ಹಡಗಿನಿಂದ ಇಳಿದು, ಅಳಿವೆ ದಾಟಿ, ಗಂಗೋಳ್ಳಿಗೆ ಬಂದವಲ್ಲ. ಅದೇ ಹೊಳೆಯ ಬುಡವಿದು, ಇದರ ತುದಿ ಗಂಗೊಳ್ಳಿಯ ಅಳಿವೆ– ಆಗ ಬನ್ಸಿಯ "ನಿಮಗೆ ನದಿ, ನೀರು,ಸಮುದ್ರ ಎಂದರೆ ಅಷ್ಟು ಪ್ರೀತಿ! "ನನಗೆ ಇದನ್ನು ನೋಡಿದರೆ, ಇದೇ ಜೀವನದ ಪ್ರತಿಬಿಂಬ ಅನಿಸುತ್ತದೆ! ಇದಕ್ಕೆ ಅಂತ್ಯವಿಲ್ಲ ನೋಡು"[೬೭] ಈ ದೃಷ್ಟಿಯಲ್ಲಿ ಬನ್ಸಿಯು ನಿಸರ್ಗದೊಂದಿಗೆ ಹೊಂದಿರುವ ಸಂಬಂಧವು ಸಂಪೂರ್ಣ ಆಧುನಿಕತೆಯ ನೆಲೆಯನ್ನು ಹೊಂದಿದ್ದರೆ, ಕಿಟ್ಟಣ್ಣನಲ್ಲಿ ಅರೆಬೆಂದ ಆಧುನಿಕತೆ ಮತ್ತು ನಿಸರ್ಗವನ್ನು ಕಂಡಾಗ ಅತಿ ಭಾವುಕತೆಗೆ ಒಳಗಾಗುವ ಪಾತ್ರವಾಗಿ ಕಂಡು ಬರುತ್ತಾನೆ.

'ಮುಗಿದ ಯುದ್ಧ' ಕಾದಂಬರಿಯಲ್ಲಿ ಕಾರಂತರು ಭೂಮಿ, ಬಡತನ ಮತ್ತು ಜನರು ಪಡುವ ಮಾನಸಿಕ ತಳಮಳವನ್ನು ತುಂಬಾ ಮಾರ್ಮಿಕವಾಗಿ ಗುರ್ತಿಸುತ್ತಾರೆ. ಈ ಕಾದಂಬರಿಯಲ್ಲಿ ಬರುವ ನಾಯಕ ಅಚ್ಯುತ.ಕೊಂಬಾರಿನ ಕೃಷ್ಣರಾಯರ ಮಗ. ಕೃಷ್ಣರಾಯ ಕಾಯಿಲೆಯಿಂದ ನರಳುತ್ತಿರುತ್ತಾನೆ. ಅದಕ್ಕಾಗಿ ತನ್ನ ಮಗನಾದರೂ ಚೆನ್ನಾಗಿ ಓದಲಿ ಎಂದು ನಿರ್ಣಯಿಸುತ್ತಾನೆ. ಅದರಂತೆ ಓದಿಸುವಾಗ ಕೃಷ್ಣರಾಯರಿಗೆ ಕಾಯಿಲೆ ಬಿಗಡಾಯಿಸಿ ಮರಣಹೊಂದುವುದು ಅಚ್ಯುತ ಮತ್ತು ತಾಯಿ ಲಕ್ಷ್ಮಮ್ಮನಿಗೆ ಬರಸಿಡಿಲು ಹೊಡೆದಂತೆ ಆಗುತ್ತದೆ. ಇಂತಹ ಸಮಯದಲ್ಲೂ ಮೆಟ್ರಿಕ್ ಮುಗಿಸಿ ಬೊಗ್ಗಾಡಿ ಪಂಚಾಯತ್ ಶಾಲೆಯಲ್ಲಿ

---

೬೭. ಶಿವರಾಮ ಕಾರಂತ, ಸ್ವಪ್ನದ ಹೊಳೆ, ಪುಟ-೧೯೩

ಉಪಾಧ್ಯಾಯನಾಗುತ್ತಾನೆ. ನಂತರ ಸ್ನೇಹಿತ ನಾಗರಾಜನಿಂದ ಸಾಲ ಪಡೆದು ಟ್ರೈನಿಂಗ್ ಮುಗಿಸಿದ ನಂತರ ಪಂಜದ ಪುಟ್ಟಣ್ಣಯ್ಯನ ಮಗಳಾದ ರುಕ್ಮಿಣಿಯನ್ನು ಮದುವೆಯಾದನು. ನಂತರ ನಾಗರಾಜನಿಗೆ ತನ್ನ ಸಾಲಕ್ಕಾಗಿ ಇದ್ದ ಭೂಮಿಯನ್ನು ಮಾರುತ್ತಾನೆ. ಆದರೂ ಹೋದ ಕಡೆಯಲ್ಲಾ ತಾನೊಬ್ಬ ಆದರ್ಶ ಶಿಕ್ಷಕನೆನಿಸಿಕೊಂಡು ಬದುಕುತ್ತಿರುವಾಗ, ಬೆಳ್ತಂಗಡಿಯಲ್ಲಿ ನಾಗರಾಜನ ಕುತಂತ್ರದಿಂದ ಇವನ ಮೇಲೆ ಅಪಪ್ರಚಾರವಾಗಿ ಮೇಲಾಧಿಕಾರಿಗಳಿಂದ ಎಚ್ಚರಿಕೆಯ ಮಾತುಗಳನ್ನು ಕೇಳಬೇಕಾಗುತ್ತದೆ. ಆದ್ದರಿಂದ ಇವನನ್ನು ಶಂಕನಾರಾಯಣ ಕುರ್ಚಿಪಳ್ಳ, ಬಗ್ಗಾಡಿ ಹೀಗೆ ಬೇರೆ ಬೇರೆ ಕಡೆ ವರ್ಗಾವಣೆಯನ್ನು ಮಾಡಲಾಗುತ್ತದೆ. ಇದರಿಂದ ಅವನು ಮಾನಸಿಕ ಮತ್ತು ದೈಹಿಕವಾಗಿ ಕುಗ್ಗಿಹೋಗುತ್ತಾನೆ. ಇದೇ ಸಮಯಕ್ಕೆ ಯುರೋಪಿನಲ್ಲಿ ಯುದ್ಧ ಪ್ರಾರಂಭವಾಗುತ್ತದೆ. ಇದರಿಂದ ಕೊಂಬಾರಿನ ಸುತ್ತಮುತ್ತಲಿನ ಊರಿನ ಜನತೆ ಆಧುನಿಕ ಯುದ್ಧಗಳಿಂದ ತತ್ತರಿಸಿದರು.

ಈ ಕಾದಂಬರಿಯಲ್ಲಿ ಅಚ್ಯುತ, ನಾಗರಾಜ, ಮಾಮಂಜಿ, ಸೀತೆ, ಲಕ್ಷ್ಮಮ್ಮ ಇವರೆಲ್ಲ ಸಹಜವಾಗಿ ನಿಸರ್ಗದ ಮೂಲವಾದ ಭೂಮಿಯ ಒಡೆತನಕ್ಕಾಗಿ ಹಂಬಲಿಸಿದವರು. ಅದಕ್ಕಾಗಿ ನಿಸರ್ಗದೊಂದಿಗೆ ಸಂಬಂಧವನ್ನು ಹೊಂದಿರುತ್ತಾರೆ. ಈ ಮೂಲಕ ವ್ಯವಸಾಯ ಮಾಡಿ ಬದುಕುತ್ತಿರುತ್ತಾರೆ. ಈ ಸಮಯಕ್ಕೆ ಭೀಕರ ಕದನ ಯುರೋಪಿನಲ್ಲಿ ಉಂಟಾಯಿತು. ಅದರ ಪರಿಣಾಮವನ್ನು ಕಾರಂತರು ಸಾಮಾಜಿಕ ದೃಷ್ಟಿಕೋನದಲ್ಲಿ ನೋಡುತ್ತಾರೆ.

"*ಯುರೋಪಿನಲ್ಲಿ ವಿಮಾನ ದಾಳಿಗಳೂ, ನೆಲ ಯುದ್ಧಗಳು ಹೇಗೆ ನಡೆದರೇನು? ಸಾವಿರ ಸೇನೆಗಳೂ ಹೋದರೂ, ಸಾವಿರ ವಿಮಾನಗಳೂ ಉರುಳಿದರೂ, ನಗರಕ್ಕೆ ನಗರಗಳೇ ಧ್ವಂಸವಾದರೂ ಇಲ್ಲಿನವರಿಗೆ ಅದರ ಭೀಕರತೆ ಕಾಣಿಸಲಾರದು. ಈ ಊರಿಗೆ ಯುದ್ಧದ ಉರಿಯು ನಾಟಿದುದು ಬೆಲೆಗಳ ಏರಿಕೆಯಿಂದ, ಮಳೆಗಾಲ ಬಂದಿದೆಯಷ್ಟೆ-ಊರಲ್ಲಿ ಅಕ್ಕಿಯ ಮುಡಿಗೆ ಇಪ್ಪತ್ತೈದು ರೂಪಾಯಿ ಕೊಟ್ಟರೂ ಸಿಗದಾಯಿತು*".[೬೮] ಆಧುನಿಕ ಕಾಲದಲ್ಲಿ ಭೂಮಿ ಮತ್ತು ನಿಸರ್ಗದ ಸಂಪತ್ತಿಗಾಗಿ ರಾಷ್ಟ್ರಗಳ ನಡುವೆ ಯುದ್ಧಗಳು ಪ್ರಾರಂಭವಾಗುತ್ತಿರುವುದು ಸರ್ವೆಸಾಮಾನ್ಯ ಸಂಗತಿಯಾಗುತ್ತದೆ. ಅದೇ ರೀತಿಯಾಗಿ ಯುರೋಪಿನಲ್ಲಿ ಯುದ್ಧಗಳು ತೊಡಗಿದಾಗ ಅದರ ಪರಿಣಾಮ ತೃತಿಯ ಜಗತ್ತಿನ ಮೇಲೆ ಪ್ರಭಾವ ಬೀರಿತು. ಅದು ಮುಖ್ಯವಾಗಿ ತಿನ್ನುವ ಆಹಾರ ಪದಾರ್ಥಗಳೂ ಮತ್ತು ಔಷಧಗಳ ಅಭಾವ ಆಗುವ ರೀತಿಯಲ್ಲಿ ಪರಿಣಾಮ ಬೀರಿತು. ಇದು ನೇರವಾಗಿ ಭಾರತದ ಹಳ್ಳಿಗಳು, ಪಟ್ಟಣವೆನ್ನದೆ ಎಲ್ಲಾ ಕಡೆ ಪ್ರಭಾವ ಬೀರಿ, ಆಹಾರ ಪದಾರ್ಥಗಳ ಬೆಲೆಗಳ ಏರಿಕೆಯಾಯಿತು. ಇಂತಹ ಸಂದರ್ಭ ಎಂದೂ ಊಹಿಸಿರದಂತಹ ಅಚ್ಯುತ ನಂತರ ಭಾರತದ ಅನೇಕ ಬಡವರು ಅನಿವಾರ್ಯವಾಗಿ ಈ ಯುದ್ಧವೆಂಬ ಆಧುನಿಕ ಪ್ರಭಾವಕ್ಕೆ ಒಳಗಾಗಿ ಕಷ್ಟಪಡಬೇಕಾಗುತ್ತದೆ.

'ಉಕ್ಕಿದ ನೊರೆ', 'ಮುಗಿದ ಯುದ್ಧ' ಕಾದಂಬರಿಗಳಲ್ಲಿ ಜಾಗತಿಕ ಮಹಾಯುದ್ಧಗಳ ಪರಿಣಾಮ ಗ್ರಾಮೀಣ ಭಾರತದ ಮೇಲೂ ಆದ ಚಿತ್ರಣವಿದೆ. ಈ ಅವಧಿಯಲ್ಲಿ ಹುಟ್ಟಿಕೊಂಡ ನವ

---

೬೮. ಶಿವರಾಮ ಕಾರಂತ, ಮುಗಿದ ಯುದ್ಧ, ಪುಟ-೮೪

ವಿದ್ಯಾವಂತ ಮತ್ತು ನವ ಶ್ರೀಮಂತ ವರ್ಗಗಳೇ ಸ್ವಾತಂತ್ರ್ಯೋತ್ತರ ಭಾರತದ ನವ ರಾಜಕೀಯ ಶಕ್ತಿಗಳಾಗಿ ರೂಪುಗೊಂಡವು ಎಂಬ ಸೂಚನೆಯನ್ನು ಈ ಕಾದಂಬರಿಗಳು ನೀಡುತ್ತವೆ. ಮಹಾ ಯುದ್ಧಗಳು ನಮ್ಮ ಭಾರತದ ರಾಜಕೀಯ, ಸಾಮಾಜಿಕ, ಆರ್ಥಿಕತೆಯ ಮೇಲೆ ಪ್ರಭಾವ ಬೀರಿವೆ. ಈ ಪ್ರಭಾವವು ಜನರು ಭೂಮಿಯೊಂದಿಗೆ ಹೊಂದಿರುವ ಸಂಬಂಧಗಳ ಮೇಲೆ ಆಗಿರುವುದು ಪ್ರಮುಖವಾಗಿದೆ.

'ಚೋಮನ ದುಡಿ' ಕಾದಂಬರಿಯಲ್ಲಿ ಮುಖ್ಯವಾಗಿ ನಿಸರ್ಗದೊಂದಿಗೆ ಆಧುನಿಕತೆಯ ಪ್ರವೇಶವನ್ನು ಕಾರಂತರು ಚೋಮನ ಮನಸ್ಸಿನ ನೆಲೆಯಲ್ಲಿ ನೋಡುತ್ತಾರೆ. ಚೋಮ ದಲಿತರ ಪ್ರತಿನಿಧಿಯಾಗಿ ೨೧ನೇ ಶತಮಾನದ ಆಧುನಿಕ ದಲಿತನ ಪಾತ್ರವನ್ನು ವಹಿಸುತ್ತಾನೆ. ಅದಕ್ಕಾಗಿ ಭೂಮಿಯಿಲ್ಲದ ಈತ ಭೂಮಿಯನ್ನು ಪಡೆಯಲು ಇಚ್ಛಿಸುತ್ತಾನೆ. ಈ ಇಚ್ಛೆ ಅವನ ಸಾಮಾಜಿಕ ಕಟ್ಟಳೆಯ ಸಂಸ್ಕೃತಿಗೆ ಸವಾಲು ಒಡ್ಡಿದಂತೆ ಕಂಡುಬರುತ್ತದೆ. ಚೋಮನಿಗೆ "ಬೇಸಾಯಗಾರನಾಗಬೇಕೆಂಬ ಬಯಕೆ ಕುತ್ತಿಗೆಯವರೆಗಿದೆ. ಆದರೆ ಅವನ ಊರಲ್ಲಿ ಹೊಲೆಯ ಬೇಸಾಯಗಾರನೆಂಬ ಜಾತಿಯೇ ಇಲ್ಲ. ಹಾಗಾಗುವ ಆಸೆ ಹಿಡಿದು ಚೋಮ ಸಂಕಪ್ಪಯ್ಯನವರನ್ನು "*ನಾಲ್ಕೆ ಗೇಣು ಜಾಗ ನನಗೆ ಗೇಣಿಗೆ ಕೊಡಿ ಎಂದು ಕೇಳುವ ಸಾಹಸವಿಲ್ಲ. ಆದರೆ ಒಂದಲ್ಲ ಒಂದು ದಿವಸ, ನೇಗಿಲುಗಳನ್ನು ಹಿಡಿದು ಮೆರೆದೇನು– ಎಂಬ ಆಸೆಯಿದೆ. ಆದರಿಂದಲೇ ಮೂರು ವರ್ಷಗಳಿಂದ ಎರಡು ಹಸುವಿನ ಕರುಗಳನ್ನು ಸಾಕುತ್ತ ಬಂದಿದ್ದಾನೆ.*"[೧೯]

ಹೊಲೆಯರು ಸ್ವಾತಂತ್ರ್ಯ ಪೂರ್ವ ಗ್ರಾಮೀಣ ಪ್ರದೇಶದಲ್ಲಿ ಭೂಮಿಯು ಹಕ್ಕನ್ನು ಕಳೆದುಕೊಂಡಿದ್ದಾರೆ. ಈ ರೀತಿ ಕಳೆದುಕೊಳ್ಳುವುದಕ್ಕೆ ಹಿಂದೂ ಧರ್ಮದಲ್ಲಿರುವ ಜಾತಿ ಎಂಬ ಶುಚಿತ್ವ ಪದ್ಧತಿ ಮುಖ್ಯವಾಗಿದೆ.ಈ ಪದ್ಧತಿಗೆ ಅಂತ್ಯವಾಡುವ ಮತ್ತು ಎಚ್ಚರಿಕೆಯನ್ನು ನೀಡುವ ರಿತಿಯಲ್ಲಿ ಚೋಮ ಸಿದ್ದತೆ ಮಾಡಿಕೊಂಡಿದ್ದಾನೆ. ಅದು ನಿಸರ್ಗಮಯ ಸಹಜವಾಗಿ ಕೊಟ್ಟಿರುವ ಭೂಮಿಯ ಒಡೆತನ ಪಡೆಯಲು ಹವಣಿಸುತ್ತಿರುವ ಮೂಲಕವಾಗಿ ಆಗಿದೆ. ಅದಕ್ಕಾಗಿ ಅವನು ಒಮ್ಮೆ ಕಾಡಿನಲ್ಲಿ ದೊರೆತ ಎರಡು ಹಸುಗಳನ್ನು ಸಾಕಿದ್ದಾನೆ. ಅದಕ್ಕಾಗಿ ಸಂಕಪ್ಪಯ್ಯನ ಮನೆ ಮುಂದೆ ಕುಳಿತವನು ಮೇಲೆ ಏಳಲಿಲ್ಲ. ಆಗ ಸಂಕಪ್ಪಯ್ಯ ಕಾರಣ ವಿಚಾರಿಸಿದಾಗ ಅವನಿಂದ ಒಡೆತನವೆಂಬ ಆಸೆಯ ಅಂತರಾಳದ ಮಾತು ಹೊರ ಬೀಳುತ್ತದೆ.

"ಇನ್ನೇನಿಲ್ಲ. ಎತ್ತಿ ಜೋಡಿನ ಸಂಗತಿ
ಎನದು ಹೇಳು ದಾಕ್ಷಿಣ್ಯ ಬೇಡ
ಇನ್ನೇನಿಲ್ಲ. ಧನಿಗಳಿಗೆ ಇಷ್ಟೆಲ್ಲ ಒಕ್ಕಲು ಮಕ್ಕಳಿದ್ದಾರೆ,

ಈ ಚೋಮನಿಗೂ ಒಂದು ಹಾಳು ಕೊಂಪೆಯನ್ನು ಗೇಣಿಗೆ ಕೊಟ್ಟಿದ್ದರೆ. ನಿಮ್ಮ ಹೆಸರು ಹೇಳಿ ಬದುಕುತ್ತಿದ್ದೆ. ಚೋಮನ ಮಾತನ್ನು ಕೇಳಿ ಸಂಕಪ್ಪನವರಿಗೆ ಆಶ್ಚರ್ಯವೇ ಆಯಿತು."[೨೦] ಆಸ್ತಿಯನ್ನು ಒಬ್ಬ

೧೯. ಶಿವರಾಮ ಕಾರಂತ: ಚೋಮನದುಡಿ, ಪುಟ–೧೯
೨೦. ಅದೇ, ಪುಟ–೪೨

ದಲಿತನು ಬ್ರಾಹ್ಮಣ ಸಂಕಪ್ಪಯ್ಯನನ್ನು ಕೇಳುವ ಮಾತಿನಲ್ಲಿ ಆಧುನಿಕತೆಯ ಮನೋಭಾವವಿದೆ. *"ಸ್ವತಃ ಸಂಕಪ್ಪಯ್ಯರಿಗೆ ತಮ್ಮ ಚೋಮನಿಗೆ ಹಾಳು ಬಿದ್ದ ಒಂದು ಹೊಲದ ಚೂರನ್ನು ಕೊಡುವುದಕ್ಕೆ ಆಕ್ಷೇಪವಿರಲಿಲ್ಲ. ಪ್ರತೀ ವರ್ಷವೂ ಗೇಣಿಗೆಯನ್ನು ತಿಂದು ಹಾಕುವ ಒಕ್ಕಲುಗಳಿಗಿಂತ ಚೋಮನಿಗೆ ಕೊಡಬಾರದೇಕೆ? ಎಂದೇ ಇತ್ತು. ಆದರೆ ತಾಯಿಯ ಮುದ್ರೆಯನ್ನು ದೊರಕಿಸುವುದು ಕಠಿಣವೇ ಸರಿ. ಹಳೆ ಸಂಪ್ರದಾಯದ ಮುದುಕಿಯವಳು."*[೭೧]

ಸಂಕಪ್ಪಯ್ಯ ಈ ನೆಲೆಯಲ್ಲಿ ನಿಸರ್ಗ ಮತ್ತು ಮಾನವ ಸಂಬಂಧದಲ್ಲಿ ಆಧುನಿಕ ಪ್ರತಿನಿಧಿಯಾಗಿ ಕಂಡುಬರುತ್ತಾನೆ. ಸಮಾಜ ಸುಧಾರಣೆಯನ್ನು ಬಯಸುವ ಪಾತ್ರವಾಗಿ ಕಂಡುಬರುತ್ತಾನೆ. ಆದರೆ ಈ ಪ್ರಯತ್ನಕ್ಕೆ ಕಲ್ಲು ಮುಳ್ಳುಗಳಂತೆ ಸಮಾಜದಲ್ಲಿ ಜಾತಿಯತೆ ಅಡ್ಡವಿದೆ ಎಂಬ ಭಯವು ಅವನಲ್ಲಿದೆ. ಈ ಕುರಿತು ಟಿ.ಪಿ ಅಶೋಕರವರು–*"ಅಸ್ಪೃಶ್ಯ ಜಾತಿಗೆ ಸೇರಿದವನೊಬ್ಬನಿಗೆ ಭೂಮಿಯ ಒಡೆತನದ ಆಸೆ ಹುಟ್ಟಿದ್ದು–ಅದರಿಂದ ಎದ್ದ ಪ್ರಶ್ನೆಗಳು ಭಾರತೀಯ ಜಾತಿ ವ್ಯವಸ್ಥೆಯ ಸಂದರ್ಭದಲ್ಲಿ ಪರಂಪರಾಗತ ಮೌಲ್ಯಗಳಿಗೆ ಮಾತ್ರ ಮುಖಾಮುಖಿಯಾಗದೆ ವಸಾಹತುಶಾಹಿ ಮೌಲ್ಯಗಳಿಗೂ ಮುಖಾಮುಖಿಯಾಗುವುದು ಈ ಕೃತಿಯ ವೈಶಿಷ್ಟ್ಯವಾಗಿದೆ. ತನ್ನ ಕಾಲ, ದೇಶಗಳಿಂದ ತುಂಬಾ ಮುಂದೆ ಇರುವಂಥ ಆಸೆ ಚೋಮನದು."*[೭೨]

ಚೋಮನು ತನಗೆ ಭೂಮಿ ಸಿಗದಿದ್ದರೆ ಬೇರೆಯವರಿಗೆ ಏಕೆ ದುಡಿಯಬೇಕು ಎಂದು ಯೋಚಿಸುತ್ತಾನೆ. ಆದರೂ ಪ್ರತಿ ಕ್ಷಣವೂ ಅವನ ಮುಂದೆ ಮುನಿದು ನಿಂತಿರುವ ನೇಗಿಲಿನ ಚಿತ್ರ ಕಾಣಿಸುತ್ತದೆ. ಒಮ್ಮೊಮ್ಮೆ–ನಾನು ನನಗಾಗಿ ನೇಗಿಲನ್ನು ಹಿಡಿಯಬಾರದಾದರೆ, ಇನ್ನೊಬ್ಬರಿಗಾಗಿ ಏತಕ್ಕೆ ಹಿಡಿಯಬೇಕೆಂದು ಯೋಚಿಸುತ್ತಾನೆ. ಬೇಸಾಯಗಾರನಾಗುವ ಯೋಗ ತನಗಿಲ್ಲದಿದ್ದರೆ ಇನ್ನೊಬ್ಬರಿಗಾಗಿ ಗದ್ದೆಯ ಕೆಸರಿನಲ್ಲಿ ಈಜಿ ಏತಕ್ಕೆ ಬಾಳಬೇಕೆಂದು ಆತನಿಗೆ ತೋರುವುದಿಲ್ಲ. ವಿಚಾರಗಳ ಕೋಲಾಹಲ ಅವನ ಮಿದುಳಿನಲ್ಲಿ ನಡೆಯುತ್ತದೆ.

ಚೋಮ ಹೀಗೆ ಮಾನಸಿಕವಾಗಿ ಯೋಚಿಸುವ ಮೂಲಕ ೨೧ನೇ ಶತಮಾನದ 'ನವಯುವಕ'ನ ಕ್ರಾಂತಿಕಾರಿತನವನ್ನು ತನ್ನಲ್ಲಿ ವ್ಯಕ್ತಪಡಿಸುತ್ತಾನೆ. ಹೀಗೆ ಕಾರಂತರು ಭೂಮಿಯೆಂಬ ಒಡೆತನಕ್ಕೆ ಸಂಬಂಧಿಸಿದಂತೆ ಸಾಮಾಜಿಕ ಕಟ್ಟುಕಟ್ಟಳೆಯ ಸಂದರ್ಭಗಳಲ್ಲಿ, ಆಧುನಿಕ ದಲಿತ ಯೋಚಿಸುವ ಪರಿಯನ್ನು ಚೋಮನ ವ್ಯಕ್ತಿತ್ವದ ಮೂಲಕ ಚಿತ್ರಣ ತರುತ್ತಾರೆ. ಇದು ಕಾರಂತರ ಕಂಡುಕೊಂಡ ಸಾಮಾಜಿಕ ಸುಧಾರಣಾವಾದಿ ಮುಖವಾಗಿದೆ.

'ಕನ್ನಡಿಯಲ್ಲಿ ಕಂಡಾತ' ಕಾದಂಬರಿಯಲ್ಲಿ ಶಿವರಾಮಕಾರಂತರು ಮಂಗಳಪಾಡಿಯ ಪರಮೇಶ್ವರನ ಜೀವನ ಏರು ಪೇರುಗಳನ್ನು ಹೇಳುತ್ತಾನೆ. ಮಂಗಳ ಪಾಡಿಯು ಬರುವುದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ, ಇವನ ಹೆಂಡತಿ ಕಾವೇರಿ, ಇವನು ಶಾಲಾ ಮಾಸ್ತರ. ಈ ಕಾದಂಬರಿಯಲ್ಲಿ ಬರುವ ಉಳಿದ ಪಾತ್ರಗಳೆಂದರೆ ಜಾನಕಿ, ಜಯರಾಮ, ಕುಮಾರಸ್ವಾಮಿ, ಕಾಳ, ನಾರಾಯಣ ಪ್ರಮುಖರು. ಕಾರಂತರು ತಮ್ಮ ಕಾದಂಬರಿಗಳಲ್ಲಿ ಹೆಚ್ಚಿನ ಪಾತ್ರಗಳು ತಮ್ಮ ಗ್ರಾಮವನ್ನು ತ್ಯಜಿಸಿ

೭೧. ಅದೇ, ಪುಟ–೩೧

೭೨. ಟಿ.ಪಿ.ಅಶೋಕ (ಸಂ), ಈ ಶತಮಾನದ ನೋಟ ಶಿವರಾಮ ಕಾರಂತ, ಪುಟ–೧೧೪

ನಗರ ಸೇರುವುದನ್ನು ಗುರುತಿಸಿದ್ದಾರೆ. ಆ ಮೂಲಕ ಅವರು ಆಧುನಿಕ ಜೀವನವನ್ನು ಕಾರಂತರು ಚಿತ್ರಿಸಿರುತ್ತಾರೆ.

ಕಾರಂತರ ಕಾದಂಬರಿಗಳಲ್ಲಿ ಗಂಡಂದಿರು ತಮ್ಮ ಹೆಂಡಂದಿರನ್ನು ತೊರೆದು ಹೋಗುವ ಸನ್ನಿವೇಶಗಳು ಮೇಲಿಂದ ಮೇಲೆ ಬರುತ್ತವೆ, ಶಂಕರರಾಯ (ಸನ್ಯಾಸಿ ಬದುದಕು), ಪರಮೇಶ್ವರ (ಕನ್ನಡಿಯಲ್ಲಿ ಕಂಡಾತ), ಯಶವಂತ (ಅಳಿದ ಮೇಲೆ), ಲಚ್ಚ (ಮರಳಿ ಮಣ್ಣಿಗೆ), ಸುಬ್ರಾಯ (ನಂಬಿದವರ ನಾಕನರಕ) ಮುಂತಾಗಿ ಇವರೆಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ತಮ್ಮ ಹೆಂಡಂದಿರನ್ನು ತೊರೆದು – ಹೊರಟ ಪಾತ್ರಗಳನ್ನು ನೋಡಬಹುದು.

ಸಂಪ್ರದಾಯ ಎಂಬ ಶಬ್ದ ವ್ಯಾಪಕವಾದ ಅರ್ಥದಲ್ಲಿ ಸಮಗ್ರ ಸಾಹಿತ್ಯವನ್ನೇ ತನ್ನೊಳಗೆ ಸೇರಿಸಿಕೊಳ್ಳುತ್ತದೆ. ಪ್ರತಿಯೊಂದು ವಸುವಿನ್ತ ಹಿಂದೆಯೂ ಪರಂಪರಾನುಗತವಾಗಿ ಬೆಳೆದು ಬಂದ ಸಂಪ್ರದಾಯವಿರುತ್ತದೆ. ಇದು ಒಬ್ಬ ವ್ಯಕ್ತಿಯು ಆಚರಿಸುವ ವ್ಯಕ್ತಿಗತ ನಡಾವಳಿಯಾಗಿದೆ ಒಂದು ಗುಂಪು ಅಥವಾ ಸಮಾಜ ಒಪ್ಪಿಕೊಂಡು ಆಚರಣೆಯಲ್ಲಿ ತಂದದ್ದಾಗಿರುತ್ತದೆ. ಪರಂಪರಾನುಗತ ವಾಗಿ ಬೆಳೆದು ಬಂದ ಆಚಾರ, ವಿಚಾರಗಳು ಕೇವಲ ಗೊಡ್ಡು ಕಂದಾಚಾರಗಳಾಗಿರದೇ ಸಮಾಜ ವ್ಯವಸ್ಥೆಯಲ್ಲಿ ಜನಜೀವನದೊಡನೆ ಅವು ಜೀವಂತವಗಿ ಬೆರೆತು ಹೋಗಿರುತ್ತವೆ.

೧೯ ಮತ್ತು ೨೦ನೇ ಶತಮಾನದಲ್ಲಿ ಭಾರತವು ವಸಾಹತು ಸಂಸ್ಕೃತಿಯ ಸಂಪರ್ಕದಿಂದ ಅನೇಕ ಮಟ್ಟಗಳಲ್ಲಿ ಸಾಂಸ್ಕೃತಿಕ ಸಂಘರ್ಷವೊಂದು, ಮುಖಾಮುಖಿಯಾಗುವುದನ್ನು ಕಾಣುತ್ತೇವೆ. ಅಂದರೆ ಹೊರಗಿನ ಶಕ್ತಿಗಳ ಜ್ಞಾನ ಮತ್ತು ವಿಜ್ಞಾನ ಭಾರತೀಯ ಜೀವನವನ್ನು ಒಂದು ಬಗೆಯ ಆಕರ್ಷಣೆಗೆ ಮತ್ತು ಪ್ರಭಾವಕ್ಕೆ ಒಳಗು ಮಾಡಿತು. ಭಾರತದ ಸಾಮಾಜಿಕ, ಆರ್ಥಿಕ, ಧಾರ್ಮಿಕ ಶೈಕ್ಷಣಿಕ ಮುಂತಾದ ಕ್ಷೇತ್ರಗಳಲ್ಲಿ ಹೊಸ ಅಧ್ಯಾಯ ಆರಂಭವಾಯಿತು. ಹೊಸ ಕನಸುಗಳು ಆಲೋಚನೆಗಳು, ಆವಿಷ್ಕಾರಗಳು ಮತ್ತು ಸಂಪರ್ಕಗಳು ಉಂಟಾದವು. ಇವಲ್ಲದೆ ವ್ಯಷ್ಟಿ ಮತ್ತು ಸಮಷ್ಟಿ ಪ್ರಜ್ಞೆಗಳಲ್ಲಿ ಹೊಸ ಎಚ್ಚರ ಮೂಡಿದವು ಹಾಗೂ ಬದಲಾವಣೆಗೆ ನಾಂದಿ ಹಾಡಿದವು.

ಪ್ರಾದೇಶಿಕವಾಗಿ ಕರ್ನಾಟಕಲ್ಲಿ ಕ್ರಿಶ್ಚಿಯನ್ ಪಾದ್ರಿಗಳ ಮೂಲಕ ಸ್ಕೂಲು, ಆಸ್ಪತ್ರೆ, ಬೈಬಲ್ಲು, ಬೈಸಿಕಲ್, ರೈಲು, ಹಡಗು, ರಸ್ತೆ, ಸಾರಿಗೆ ಮತ್ತು ಸಂಪರ್ಕಗಳ ಮೂಲಕ ಜನರ ಬದುಕನ್ನು ಪ್ರವೇಶಿಸುತ್ತಿದ್ದವು. ಈ ಕಾಲಮಾನದ ಪರಿಣಾಮಗಳನ್ನು ಕಾರಂತರು ತಮ್ಮ ಕಾದಂಬರಿಗಳಲ್ಲಿ ಎರಡು ಸಂಸ್ಕೃತಿಗಳ ಸಂಘರ್ಷ ಮತ್ತು ಸ್ಥಿತ್ಯಾಂತರಗೊಳ್ಳುವುದನ್ನು ಸಾಕ್ಷೀಕರಿಸಿದ್ದಾರೆ.

ಜೈನ, ಬೌದ್ಧ, ವೀರಶೈವ, ಶೈವ ಮತ್ತು ಇಸ್ಲಾಂ ಧರ್ಮಗಳು ಪ್ರಾಚೀನ ಕಾಲದಿಂದಲೂ ಭಾರತದ ಪ್ರಾದೇಶಿಕ ಸಾಂಸ್ಕೃತಿಕ ಚರಿತ್ರೆಯಲ್ಲಿ ತಮ್ಮ ಪ್ರಭಾವ ಬೀರುತ್ತಲೇ ಬಂದಿವೆ. ವಸಾಹತುಶಾಹಿ ಸಂದರ್ಭದಲ್ಲಿ ಈ ಪ್ರಕ್ರಿಯೆ ತನ್ನ ಧರ್ಮದ ಮೂಲಕ ರಾಜಕೀಯ ಯಂತ್ರವನ್ನು

ಬಲಪಡಿಸಿಕೊಳ್ಳಲು ಬಳಕೆಯಾಗಿದೆ. ಇದು ಸ್ಥಳೀಯರಿಗೆ ಆಕ್ರಮಣಕಾರಿಯಾಗಿ ಕಾಣುತ್ತದೆ. ಆದರೆ ಮತಾಂತರ ಪ್ರಕ್ರಿಯೆಗೆ ಕಂಡುಕೊಳ್ಳುವ ದಾರಿಗಳು ಒಳಸಂಚುಗಳನ್ನು ಅಮಾನವೀಯ ಧೋರಣೆ-ಗಳನ್ನು ಚೋಮನ ದುಡಿಯಂತಹ ಕಾದಂಬರಿಗಳಲ್ಲಿ ಕಾಣಲು ಅಸಾಧ್ಯವಿದೆ. ಅದು ಬಲತ್ಕಾರ, ಅಸಂಖ್ಯ ಆಮಿಷಗಳನ್ನು ಮುಂದೆ ಮಾಡಿಕೊಂಡು ತನ್ನ ಉದ್ದೇಶವನ್ನು ಈಡೇರಿಸಿಕೊಳ್ಳುತ್ತದೆ. ಕುವೆಂಪುರವರ ಕಾನೂರು ಹೆಗ್ಗಡತಿ, ಮಾಸ್ತಿಯವರ ಅನೇಕ ಕಥೆಗಳು, ಶಿವರಾಮಕಾರಂತರ ಚೋಮನದುಡಿ ಮತಾಂತರದ ವಾಗ್ವಾದಗಳನ್ನು ವಿಭಿನ್ನ ನೆಲೆಯಲ್ಲಿ ಮಂಡಿಸುತ್ತವೆ. ಸ್ವಾತಂತ್ರ್ಯಾನಂತರದ ಕಾದಂಬರಿಗಳಲ್ಲೂ ಹಿಂದೂ, ಇಸ್ಲಾಂ, ಕ್ರೈಸ್ತ ಮತಗಳು ಶೂದ್ರ, ದಲಿತ, ಸ್ತ್ರೀಯರಲ್ಲಿ ಅಮಾನವೀಯ ಮೌಲ್ಯಗಳನ್ನು ಪ್ರಶ್ನಿಸುತ್ತಾ, ಅಂತರಜಾತಿ ವಿವಾಹದ ಕಡೆ ಗಮನ ಹರಿಸಿ, ಸಾಂಸ್ಕೃತಿಕ ಸಾಮಾಜಿಕ ಬಿಕ್ಕಟ್ಟಿಗೆ ಕಾರಣವಾಗಿರುವುದನ್ನು ಮಂಡಿಸಲಾಗಿದೆ.

ಧರ್ಮದ ಅನಾಚಾರ, ಅವಿವೇಕ, ಸಂಕುಚಿತ ಮನೋಭಾವ, ಜಾತಿಮತ, ಪಕ್ಷಪಾತ, ಬ್ರಾಹ್ಮಣರ ತಿರಸ್ಕಾರ, ಶೂದ್ರರ ಧೈನ್ಯ, ಅಧೋಗತಿ ಸ್ಥಿತಿ, ಇಸ್ಲಾಂನಲ್ಲಿನ ಮಹಿಳೆಯರ ಶೋಚನೀಯ ಸ್ಥಿತಿಯನ್ನು, ಕ್ರೈಸ್ತರ ಅಮಿಷ, ಸ್ವಜನ ಪಕ್ಷಪಾತ, ಸಹಕಾರ, ಹೊಸ ಹೊಸ ಯಂತ್ರೋಪಕರಣಗಳ ಪ್ರವೇಶ, ಶಿಕ್ಷಣ, ಸುಶ್ರೂಷೆಯ ಮೂಲಕ ಜನರನ್ನು ಒಲಿಸುವ ಪರಿ ನಾವು ಅಧ್ಯಯನದಲ್ಲಿ ಗುರುತಿಸಬೇಕಾದ ವಿಷಯವೇ ಆಗಿದೆ. ಇದು ಸಾಂಸ್ಕೃತಿಕ ಪಲ್ಲಟಕ್ಕೆ ನೈತಿಕತೆಯ ಹುಡುಕಾಟಕ್ಕೆ ಅನುರಾಗ, ವಿಶ್ವಾಸ, ಕೃತಜ್ಞತೆಗಳೆಂಬ ಮಾನವೀಯ ಮೌಲ್ಯಗಳ ತಾಕಲಾಟಕ್ಕೆ ಗುರಿಯಾಗುತ್ತದೆ.

ಕೂಲಿ ಕಾರ್ಮಿಕರ, ಬಡವರ, ಕೆಳಸ್ತರದ ಬದುಕಿನ ಅಂತರ್ಯದಲ್ಲಿ ದಟ್ಟ ವಿವರಗಳೊಂದಿಗೆ ಪ್ರಕಟವಾಗುವ ಅಂತರಿಕ ಸಂಘರ್ಷ, ಜನರ ಚೈತನ್ಯ, ಪ್ರತಿರೋಧದ ನೆಲೆಯನ್ನು ಕಾರಂತರ ಸೃಜನ ಶೀಲ ಮನಸ್ಸು ಗುರುತಿಸಿ ದಾಖಲಿಸಿದೆ. ಆಧುನಿಕತೆಯ ಪರಿಣಾಮಗಳನ್ನು ಒಪ್ಪಿಕೊಂಡು ಕ್ರೈಸ್ತ ಮಿಶಿನರಿಗಳ ಷಡ್ಯಂತ್ರಗಳನ್ನು ಖಂಡಿಸುವ ನಿಲುವನ್ನು ಸಾಮಾಜಿಕರು ವ್ಯಕ್ತಪಡಿಸುವುದು. ಚೋಮನ ಮಗ ಗುರುವನನ್ನು ದಿಕ್ಕರಿಸಿ ಚೋಮ ನಿಲ್ಲುವುದು. ಬೆಳ್ಳಿ ಆಸೆಯ ಕಣ್ಣುಗಳಿಂದ ಸೇರೆಗಾರರನ್ನು ನೋಡುವುದು, ದ್ವಂದ್ವವನ್ನು ಎತ್ತಿಹಿಡಿಯುತ್ತದೆ. ಚೋಮನ ಪಾಲಿಗೆ ಭೂತವನ್ನು ದಿಕ್ಕರಿಸುವುದು, ಸನಾತನ ಧರ್ಮವನ್ನು, ನಂಬಿಕೆಗಳನ್ನು, ಕೌಟುಂಬಿಕ, ಸಾಮಾಜಿಕ ಸಂಬಂಧಗಳನ್ನು, ಕಟ್ಟುಪಾಡುಗಳನ್ನು ಒಮ್ಮೆಗೆ ತ್ಯಜಿಸಿ ಮತ್ತೊಂದು ಧರ್ಮ ಸೇರುವುದು ಸಾವಿನಷ್ಟೇ ಸತ್ಯ. ಇದೆಲ್ಲ ಒಂದು ಧರ್ಮದ ಆಕರ್ಷಣೆಗೆ ಜನರ ವಿಕರ್ಷಣೆಗಳು, ವ್ಯಷ್ಟಿ ಮಟ್ಟದಲ್ಲಿ ಮತ್ತು ಸಮಷ್ಟಿ ನೆಲೆಯಲ್ಲಿ ಕಾದಂಬರಿಯಲ್ಲಿ ಚಿತ್ರಿತವಾಗಿವೆ. ಇದನ್ನು ಕುವೆಂಪುರವರ ಮಲೆಗಳಲ್ಲಿ ಮದುಮಗಳು ಕಾದಂಬರಿಯ್ಲಲಿ ಮುಕುಂದಯ್ಯನಿಗೆ ರೆವೆರೆಂಡ್ ಲೇಕ್‌ಹಿಲ್ ಕೊಡುವ ಉತ್ತರದಲ್ಲಿ

ಸ್ಪಷ್ಟವಾಗಿ ಈ ರೀತಿ ತಿಳಿಸಿದ್ದಾರೆ. ಗೌಡರೆ ದಯವಿಟ್ಟು ಗಮನಿಸಿ ಕೇಳಿ ನಿಮ್ಮ ಜಾತಿಯವರು ಎಲ್ಲಿಯವರೆಗೆ ಬ್ರಾಹ್ಮಣರ ಪಾದ ತೊಳೆದು ಅದನ್ನು ತೀರ್ಥವೆಂದು ಕುಡಿಯುವುದನ್ನೇ ತಮ್ಮ ಧರ್ಮ ಜೀವನದ ಸರ್ವಸ್ವ ಎಂದು ಭಾವಿಸುವರೋ ಅಲ್ಲಿಯವರೆಗೆ ನಿಮಗೆ ನಾಮಧಾರಿ ಗೌಡರಿಗೆ ಮತ್ತು ಇತರ ಬ್ರಾಹ್ಮಣೇತರ ವರ್ಗದವರಿಗೆ ಉದ್ಧಾರವಿರಲ್ಲ; ಉಳಿಗತಿಯಿಲ್ಲ, ನಿಮ್ಮ ಮೂಢಾಚಾರಗಳು ಬ್ರಾಹ್ಮಣರ ಜೀವನೋಪಾಯಕ್ಕೆ, ಸಂಪಾದನೆಗೆ ಬಂಡವಾಳ ಸ್ವರೂಪವಾಗಿವೆ. ನಿಮ್ಮನ್ನು ಅವರು ನಾಯಿಗಳನ್ನು ಕಂಡ ಹಾಗೆ ಕಾಣುತ್ತಾರೆ. ಮುಟ್ಟುವುದಿರಲಿ ಹತ್ತಿರ ಬಂದರೂ ಅವರಿಗೆ ಮೈಲಿಗೆ ಬ್ರಾಹ್ಮಣರೆಲ್ಲ ಬ್ರಹ್ಮನ ಮುಖದಿಂದ ಬಂದವರೆಂದೂ ಶೂದ್ರರು ಅವರ ಕಾಲಡಿಯಿಂದ ಬಿದ್ದವರೆಂದು ಕಟ್ಟು ಕಥೆ ಕಟ್ಟಿದ್ದಾರೆ. ಅವರೇ ಅವರ ಅನುಕೂಲಕ್ಕಾಗಿ ಬರೆದುಕೊಂಡಿರುವ ಪುರಾಣ ಕಥೆಗಳನ್ನು, ನಿಜವಾಗಿ ನಡೆದವೆಂಬಂತೆ ನಿಮಗೆ ಹೇಳಿ, ನಿಮ್ಮನ್ನು ಮರಳು ಮಾಡಿದ್ದಾರೆ. ಶೂದ್ರರು ವೇದ ಓದಬಾರದಂತೆ! ಓದುವುದಿರಲಿ, ಯಾರಾದರೂ ಓದುವುದನ್ನು ಆಲಿಸಿದರೂ ನರಕದಲ್ಲಿ ಶೂದ್ರನ ಕಿವಿಗೆ ಕಾಯಿಸಿದ ಕಬ್ಬಿಣವನ್ನು ಹೊಯ್ಯುತ್ತಾರಂತೆ! ಶತಶತಮಾನಗಳಿಂದಲೂ ನಿಮ್ಮನ್ನು ಈ ಮೂಢ ಸ್ಥಿತಿಯಲ್ಲಿ ಇಟ್ಟು, ನಿಮ್ಮಿಂದ ಸೇವೆ ಸಲ್ಲಿಸಿಕೊಂಡು, ಸುಖಜೀವನ ನಡೆಸುತ್ತಿದ್ದಾರೆ.

"ಕ್ರೈಸ್ತ ಧರ್ಮದಲ್ಲಿ ಜಾತಿಭೇದ ಇಲ್ಲ, ಎಲ್ಲರೂ ದೇವರ ಇದಿರಿನಲ್ಲಿ ಸಮಾನರು, ನಾನು ಕೇಳಿಕೊಳ್ಳುವುದಿಷ್ಟೆ, ನೀವು ಕ್ರೈಸ್ತ ಮತಕ್ಕೆ ಸೇರಿ ಬಿಡಿ, ಅದು ಜಾತಿ ಭೇದ ಇಲ್ಲ, ಎಲ್ಲರೂ ದೇವರ ಇದಿರಿನಲ್ಲಿ ಸಮಾನರು, ಅದು ಅಷ್ಟು ಮುಖ್ಯವಲ್ಲ, ಆದರೆ ಕ್ರೈಸ್ತಧರ್ಮದ ಉದಾರ ತತ್ವಗಳನ್ನು ಸೇವೆ ಮನೋಧರ್ಮವನ್ನು, ಸರ್ವಸಮಾನತಾ ದೃಷ್ಟಿಯನ್ನು, ಉನ್ನತ ಆದರ್ಶಗಳನ್ನು, ನಿಮ್ಮ ಮಾರ್ಗದರ್ಶನ ಜ್ಯೋತಿಯನ್ನಾಗಿ ಮಾಡಿಕೊಂಡು, ಬ್ರಾಹ್ಮಣದ ದುರ್ಮುಷ್ಟಿಯಿಂದ ಬಿಡಿಸಿಕೊಳ್ಳುವುದು ಮಾತ್ರ ನಿಮ್ಮ ಜನಾಂಗದ ಪ್ರಗತಿಗೆ ಅತ್ಯಂತ ಅವಶ್ಯಕವಾದ ಆದ್ಯ ಕರ್ತವ್ಯ ಕರ್ಮ! ಆ ದಾರಿಯಲ್ಲಿ ಮುಂದುವರಿಯುವುದಕ್ಕೆ ನಿಮ್ಮ ಜನಾಂಗದವರಿಗೆ ನಾವು ಸರ್ವ^ ಸಹಾಯ ನೀಡಲು ಸಿದ್ಧರಿದ್ದೇವೆ."[೭೩]

ಈ ಮೇಲಿನ ಉತ್ತರ ಶತಮಾನಗಳಿಂದ ಬ್ರಾಹ್ಮಣ ಸಮಾಜ ವ್ಯವಸ್ಥೆ ಉಂಟುಮಾಡಿದ ಅಸಮಾನತೆಗೆ, ಜನಾಂಗಭೇದಕ್ಕೆ, ಶೋಷಣೆಗೆ, ನೀತಿಗೆ ಬಹುಪಯೋಗಿ ವ್ಯಾಖ್ಯಾನವಾಗಿದೆ. ಇದರಿಂದ ಕಾರಂತರು ಪ್ರಭಾವಿತರಾಗಿ ಬ್ರಾಹ್ಮಣ್ಯ ಧಿಕ್ಕರಿಸಿ, ಅಂತರ ಜಾತೀಯ ವಿವಾಹವಾಗಿ ಲೀಲಾ ಎಂಬಾಕೆಯ ಜತೆ ೫೦ ವರ್ಷ ಬಾಳ ಸಂಗಾತಿಯಾಗಿ ಜೀವಿಸಿ ಆದರ್ಶಪ್ರಾಯವಾದರು. ಇಂತಹ ನೂರಾರು ಮಡಿ ಸಂಬಂಧಿತ ಮೂಢನಂಬಿಕೆಗಳನ್ನು ಕಿತ್ತೊಗೆಯಲು ಕಾದಂಬರಿ ಮೂಲಕ ಜಾಗೃತಿ ಮೂಡಿಸಿದರು. ವಸಾಹತು ಸಂದರ್ಭದಲ್ಲಿ ದೇಶೀಯ ಸ್ವಾತಂತ್ರ್ಯ ಚಳುವಳಿಯ ಹೋರಾಟದ ವಾತಾವರಣದಿಂದ ಪ್ರಭಾವಿತರಾಗಿ ಹೊರ ಮತ್ತು ಒಳಗಿನ ಸಾಂಸ್ಕೃತಿಕ, ವೈಚಾರಿಕ, ಸಂಘರ್ಷಕ್ಕೆ ಸ್ಪಂದಿಸಿ ಕಾರಂತರು ಸಂಕೀರ್ಣತೆಯ ಸಂವೇದನೆಗೆ ಒಳಗಾಗಿ ಸೃಜನಶೀಲ

೭೩. ಕುವೆಂಪು, ಮಲೆಗಳಲ್ಲಿ ಮದುಮಗಳು, ಪುಟ-೨೬೪

ಕೃತಿಗಳನ್ನು ರಚಿಸಿದರು. ಮಾನವೀಯ ಮೌಲ್ಯಗಳನ್ನು ಗುರುತಿಸಿ, ಪಾತ್ರಗಳಲ್ಲಿ ತುಂಬಿ, ಆದರ್ಶ ಪಾತ್ರಗಳನ್ನು ಕಾದಂಬರಿಗಳಲ್ಲಿ ಕಡೆದು ನಿಲ್ಲಿಸಿದರು. ಸಮಾಜದಲ್ಲಿನ ಮೂಢನಂಬಿಕೆ, ವೈವಿಧ್ಯತೆ, ಸ್ತ್ರೀಶೋಷಣೆ, ಜಾತಿಪದ್ಧತಿ, ನೈರ್ಮಲ್ಯ ಪರಿಸರ, ಭೂಮಿಯ ಒಡೆತನದ ಪ್ರಶ್ನೆ ಕಾಳಜಿಗಳೇ ಮೈದುಂಬಿಕೊಂಡು ಮೌಲ್ಯಗಳನ್ನು ರಕ್ಷಿಸಿದರು, ಪೋಷಿಸಿದರು. ಅವರ ಒಟ್ಟಾರೆ ಕಾದಂಬರಿಗಳನ್ನು ಶೋಧಿಸಿದಾಗ ಈ ಧ್ವನಿ ಅನುಕರಣಗೊಳ್ಳುತ್ತದೆ. ಸಮಷ್ಟಿ ಬದುಕಿನಲ್ಲಿ ನವ ಚೈತನ್ಯವನ್ನು ಮೌಲ್ಯಗಳ ರೂಪದಲ್ಲಿ ತುಂಬಿದ್ದಾರೆ. ಕಾರಂತರು ತಮ್ಮ ಕಾದಂಬರಿಗಳಲ್ಲಿ ಆಧುನಿಕತೆಯ ಪ್ರವೇಶಕ್ಕೆ ಮೈಯೊಡ್ಡಿ ವಸಹತುಶಾಹಿ ಸಂಸ್ಕೃತಿಯ ಸ್ವೀಕರಣೆಯನ್ನು ಜ್ಞಾನದ ಮತ್ತು ವಿಜ್ಞಾನದ ಬರಮಾಡಿಕೊಳ್ಳುವಿಕೆಯಿಂದ ನವ ಜೀವನ ಕಟ್ಟಲು ಹೆಣಗಿದ್ದಾರೆ. ಇದರಿಂದ ಸಮಷ್ಟಿ ಪ್ರಜ್ಞೆಯನ್ನು ವಿಸ್ತರಿಸಲು ವಸಾಹತು ಪ್ರವೇಶದಿಂದ ಭಾರತದಲ್ಲಿ ಶಿಕ್ಷಣಪದ್ಧತಿ, ರಾಜಕಾರಣ, ರಾಜಪ್ರಭುತ್ವ, ಮೂಢನಂಬಿಕೆ, ಸಾಮಾಜಿಕ ಅನಿಷ್ಟ ಪದ್ಧತಿಗಳ ವಿರೋಧಿ ಚಳುವಳಿಗಳು, ಕಾನೂನುಗಳು, ರಸ್ತೆ, ರೈಲ್ವೆ, ಹಡಗುಗಳ ಸಾಗಾಣಿಕಾ ವ್ಯವಸ್ಥೆ. ಹೀಗೆ ಹಲವಾರು ವಿಧದಲ್ಲಿ ಬದಲಾವಣೆ ಶೆಕೆಯ ಆರಂಭವೂ 'ಸಮಷ್ಟಿ ಪ್ರಜ್ಞೆಯ' ವಿಕಾಸವೂ ಜತೆಜತೆಗೆ ನಡೆಯಿತು. ಪಾಶ್ಚಾತ್ಯರ ಸಂಪರ್ಕದಿಂದ ಅವರ ವಿಚಾರಧಾರೆಯಿಂದ ಭಾರತೀಯ ಸಂಸ್ಕೃತಿ ಬದಲಾವಣೆಗೊಂಡು ಪುನರ್ ರೂಪಿತವಾಗಲು ಮೌಲ್ಯೀಕರಣಕ್ಕೆ ಒಳಗಾಗುವುದನ್ನು ಅನೇಕ ಸಂಸ್ಕೃತಿ ಪರವಾದ ಚಿಂತನೆಗಳು ತಿಳಿಸುತ್ತವೆ. ಒಂದು ಸಂಸ್ಕೃತಿಯ ಮೂಲಕ ಸಿದ್ಧಾಂತ, ನಂಬಿಕೆ, ಆಚರಣೆಗಳನ್ನು ವಿಮರ್ಶಿಸುವುದು, ಮೌಲೀಕರಿಸುವುದರ ಮೂಲಕ ಮಾನವೀಯ ಮೌಲ್ಯಗಳ ಹುಡುಕಾಟ ಸಮಷ್ಟಿ ಸಂವೇದನೆಯಲ್ಲಿ ಮಾನವೀಯತೆಯ ಮೇಳೈಸುವಿಕೆ, ನಡೆಯುತ್ತದೆ. ಪ್ರಾದೇಶಿಕವಾಗಿ ಗುರುತಿಸಲ್ಪಡುವ, ಮೌಢ್ಯಕ್ಕೆ ಧರ್ಮ, ಜಾತಿ, ಅನಿಷ್ಟ ಪದ್ಧತಿಗಳ ಆಚರಣೆಗಳನ್ನು ಅಂದರೆ ಸತಿ ಸಹಗಮನ, ಬಾಲ್ಯವಿವಾಹ, ವಿಧವಾ ವಿವಾಹ ಮುಂಡ ಬೋಳಿಸುವಿಕೆ ಮತ್ತು ಮಧ್ಯಪಾನದಂತ ಆಚರಣೆಗಳನ್ನು ತೊಡೆದು ಹಾಕಲು ಪ್ರಯತ್ನ ನಡೆಯಿತು. ಅನೇಕ ವಿಚಾರಧಾರೆಗಳು ಪಾಶ್ಚಾತ್ಯರಿಂದ ಹರಿದುಬಂದ ಫಲವಾಗಿ, ಇಂಗ್ಲೀಷ್ ಶಿಕ್ಷಣ ಹೊಸ ಚೈತನ್ಯ, ಹೊಸ ಎಚ್ಚರ ಉಂಟುಮಾಡಿತು. ಅನೇಕ ಸುಧಾರಣಾವಾದಿ ನಾಯಕರ ಪ್ರಭಾವಕ್ಕೆ ಒಳಗಾಗಿ ತನ್ನ ಬೇರು ಮಟ್ಟದ ಮೂಲ ಸಂಸ್ಕೃತಿ ಉಳಿಸಿಕೊಳ್ಳಲು ಹೆಣಗಾಡಿತು. ಒಟ್ಟಾಗಿ ಭಾಷಣಗಳು, ನಾಟಕಗಳು ಬರವಣಿಗೆ ಮತ್ತು ಕಾದಂಬರಿಗಳು ಸಾಮಾಜಿಕ ಅನಿಷ್ಟತೆಗಳನ್ನು ದೂರಮಾಡಿ ಸಮಾಜದ ಸ್ವಾಸ್ಥ್ಯ ಕಾಪಾಡಲು ಹಲವು ರೀತಿಯಲ್ಲಿ ಪ್ರಯತ್ನಿಸಿವೆ. ಸಮಷ್ಟಿ ಪ್ರಜ್ಞೆಯನ್ನು ಎಚ್ಚರಿಸಿವೆ. ಕ್ಷೇಮಾಭಿವೃದ್ಧಿಯ ಪರಿಣಾಮಗಳನ್ನು ತಿಳಿಸಿ, ಜಾಗೃತಿ ಮೂಡಿಸಿದೆ.

ಮನೆಯ ನೆಲೆತಪ್ಪಿ, ತಿಮ್ಮಿಯನ್ನು ಕಳೆದುಕೊಂಡು ಕಾಡಿನಲ್ಲಿ ಅಲೆಯುವಾಗ ಗುತ್ತಿಗೆ ತನ್ನ ಸಾಮಾಜಿಕ ಸಂದರ್ಭದ ದಾರುಣ ಅರಿವು, ತನ್ನ ದಲಿತತ್ವದ ಅನುಭವ ಬರುವುದೂ ಅತ್ಯಂತ ವಾಸ್ತವವಾಗಿದೆ. *"ಇದ್ದಕ್ಕಿದ್ದ ಹಾಗೆ ಏನೋ ಮಿಂಚು ಹೊಳೆದಂತಾಯಿತು ಗುತ್ತಿಗೆ, ನಾನು ಹೊಲೇರವನಲ್ಲದೆ ಬ್ಯಾರೆ ಜಾತಿಗೆ ಸೇರಿದವನಾಗಿದ್ದರೆ ಹಂಗಾಗ್ತಿತ್ತೇ?" ಎಂದುಕೊಂಡನು. ಗೌಡರ ಜಾತಿಗೆ? ಸೆಟ್ಟರ ಜಾತಿಗೆ? ಬಿರಾಂಬರ ಜಾತಿಗೆ? ಊಂಹೂಂ ಈ ಜಲ್ಮದಾಗೆ ಅದೆಲ್ಲಿ ಸಾಧ್ಯ? ಸಾವರ ಜಾತಿಗೆ? ಕಿಲಸ್ತರ ಜಾತಿಗೆ?......... ಥೂ ಥೂ ಥೂ! ತನ್ನ ತಲೆಯಲ್ಲಿ ಸುಳಿದಿದ್ದ ಏನನೋ ಉಗುಳಿ ನಿರಾಕರಿಸಿದನು."*[೭೪] ಕಾರಂತರ ಚೋಮನಿಗೂ ಇಂಥದೇ ಅನುಭವ ಬರುವುದು ಸೂಚ್ಯವಾಗಿದೆ. ದಲಿತರಾಗಿ ಹುಟ್ಟಿರುವುದಕ್ಕೆ ಭೂಮಿಯ ನಿರಾಕರಣೆಯಾಗಿದೆ. ನೆರೆದ ಜನರೆಲ್ಲರ ಎದುರಿನಲ್ಲಿಯೇ ಮಗ ನೀಲ ಹೊಳೆಯಲ್ಲಿ ಮುಳುಗಿ ಸತ್ತಾಗ ಚೋಮನಿಗೆ ತನ್ನ ಸಾಮಾಜಿಕ ಸ್ಥಿತಿಯ, ಅಸ್ಮಿತೆಯ ನಿಜವಾದ ಅರ್ಥ ಹೊಳೆಯುತ್ತದೆ. ಚೋಮನಿಗೆ ಹೊಲೆಯರ ಬಾಳ್ವೆಯ ಹುಣ್ಣು ಎಂಥದೆಂದು ಆಗ ಪೂರ್ಣ ಅರ್ಥವಾಯಿತು.

ಮೇಲಿನ ಉದ್ಧರಣಗಳಲ್ಲಿ ಒಂದು ಧರ್ಮದ ಗೊಡ್ಡು ಸಂಪ್ರದಾಯಿಕ ನಂಬಿಕೆಗಳಿಂದ ಮಗುವನ್ನು ಕಳೆದುಕೊಳ್ಳುವ ದಲಿತತ್ವ ಧಾರುಣ ಸ್ಥಿತಿಯ ಅರಿವಾಗುತ್ತದೆ. ತಾನು ಬೇರೆ ಜಾತಿಯವನಾಗಿದ್ದರೆ ಅದರಲ್ಲೂ ಅನ್ಯ ಧರ್ಮೀಯನಾಗಿದ್ದರೆ, ನನಗೆ ಎಲ್ಲಾ ವಿಪುತ್ತಗಳಿಂದ ಹೊರಬರುವ, ಅವಮಾನಗಳಿಂದ ದೂರವಾಗುವ, ಆಸೆಗಳನ್ನು ಪೂರೈಸಿಕೊಳ್ಳುವ ಇತರರಂತೆ ತಾನು ಸಹ ಬದುಕುವುದನ್ನು ಕಟ್ಟಿಕೊಳ್ಳುವ ಧೈರ್ಯವಾಗಿ ಎದುರಿಸುವ ನೆಲೆಗೆ ತಲುಪಬಹುದಿತ್ತು ಎಂಬುದನ್ನು ಒಂದು ಸಾಮಾಜಿಕ ಸ್ಥಿತಿಯಿಂದ ಮತ್ತೊಂದು ಸಾಮಾಜಿಕ ನೆಲೆಗೆ ಸ್ಥಿತ್ಯಂತರಗೊಳ್ಳುವ ಯೋಚನೆಗಳನ್ನು ಚೋಮ ಮತ್ತು ಗುತ್ತಿಯರು ಮಾಡುತ್ತಾರೆ.

ಮರಳಿ ಮಣ್ಣಿಗೆಯ ಕೊನೆಯ ಭಾಗದ ಬಗ್ಗೆ ಇದುವರೆಗೆ ಬಂದ ಅಸಮಾಧಾನ ಈ ಕಾದಂಬರಿಯ ವಿಮರ್ಶೆಯ ಸಾಮಾನ್ಯ ಅಂಶವಾಗಿದೆ. ಈ ಭಾಗ ತಾಂತ್ರಿಕ ದೃಷಿಯಿಂದ 'ದುರ್ಬಲ' ಎಂದು ಹೇಳುತ್ತ ರಾಮನು ಮಣ್ಣಿಗೆ ಮರಳುವ ಆಯ್ಕೆ. ಅನುಭವಿಸುವ ಸತ್ಯಕ್ಕಿಂತಲೂ ಹಗಲುಗನಸಾಗಿ ಕಾಣುತ್ತದೆ. ರಾಮನ ಸಾಧನೆ ಪ್ರಾತಿನಿಧಿಕವಲ್ಲ ವೈಯುಕ್ತಿಕ ಎನ್ನುವುದು ಯು.ಆರ್. ಅನಂತಮೂರ್ತಿಯವರ ಅಭಿಪ್ರಾಯವಾಗಿದೆ. ಕೊನೆಯ ಭಾಗದ ಬರವಣಿಗೆ ಸಡಿಲವಾಗಿದೆ ಎಂದು ಗಿರಡ್ಡಿಯವರಿಗೆ ಎನಿಸಿದೆ ಆದರೆ *"ನನ್ನ ದೃಷಿಯಲ್ಲಿ ಈ ಭಾಗ ಉಳಿದ ಭಾಗಗಳಷ್ಟೆ ಯಶಸ್ವಿಯಾಗಿದೆ. ವೈಚಾರಿಕವಾಗಿಯಂತೂ ಇಲ್ಲಿ ಕಂಡುಬರುವ ಸಾಮಾಜಿಕ ಅವಸ್ಥೆ ಕಾರಂತರ ಜೀವನದರ್ಶನದ ಒಂದು ಅವಿಭಾಜ್ಯ ಅಂಗವಾಗಿದೆ. ಸಾಂಪ್ರದಾಯಿಕ ಮೌಲ್ಯಗಳನ್ನು ಕಳೆದುಕೊಂಡ ಸಮಾಜ ಸಾಂಕ್ರಾಮಿಕ ಅವಸ್ಥೆಯನ್ನು ದಾಟಿ ಆಧುನಿಕತೆಯನ್ನು ಪಡೆಯುವ ಬಗೆಯನ್ನು ಈ ಭಾಗ ಮಾರ್ಮಿಕವಾಗಿ*

---

೭೪ ಅದೇ, ಪುಟ-೩೪೯

ಚಿತ್ರಿಸುತ್ತದೆ, ತುಂಬಾ ಎಚ್ಚರದಲ್ಲಿ ತನ್ನ ಜೀವನವನ್ನು ರೂಪಿಸಿಕೊಳ್ಳುವ ನಾಗವೇಣಿ ಅವಳ ನಿರ್ಮೂಲವಾದ ಆತ್ಮಸಾಕ್ಷಿಯಲ್ಲಿ ಬೆಳೆದುಬಂದ ರಾಮ ಈ ಹೊಸ ಸಮಾಜದ ಅತ್ಯಂತ ಯಶಸ್ವೀ ಪ್ರತೀಕಗಳಾಗಿದ್ದಾರೆ."[೭೫]

ಹೀಗೆ ಕೆಲವು ಕಾದಂಬರಿಗಳು ಭೂಮಿಯೊಂದಿಗಿನ ಸಂಬಂಧ ಮತ್ತು ಸಂಘರ್ಷವನ್ನು ಢಾಳಾವಾಗಿ ಬಿಂಬಿಸಿವೆ. ಆಧುನಿಕತೆ ತನ್ನ ಪ್ರಭಾವ ಬೀರಿದಂತೆ ಬದಲಾಗಿರುವ ಬದುಕಿನ ಚಿತ್ರಣ ಇಲ್ಲಿದೆ. ವಸಾಹತುಶಾಹಿ ನೀಡಿದ ಧನಾತ್ಮಕ-ಋಣಾತ್ಮಕ ಪರಿಣಾಮಗಳ ನಿರೂಪಣೆಯೂ ಇಲ್ಲಿದೆ. ಆ ಮೂಲಕ ಕಾರಂತರು ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯಾ ನಂತರದ ಭಾರತದ ಸಾಂಸ್ಕೃತಿಕ, ಸಾಮಾಜಿಕ, ಪ್ರಾಕೃತಿಕ ಚಲನೆಗಳಲ್ಲಿ ಗ್ರಹಿಸಿರುವ ಮೂಲಕ ತಾತ್ವಿಕತೆಯ ಹಿಂದಿನ ನೆಲೆಗಳನ್ನು ಈ ಅಧ್ಯಯನ ಬಿಂಬಿಸಿದೆ. ನಿಸರ್ಗ ಮತ್ತು ಮನುಷ್ಯನ ಸಂಘರ್ಷದ ಫಲಿತ ಮುಖ್ಯವಲ್ಲ. ಇದೊಂದು ಪ್ರಕ್ರಿಯೆ ಮಾತ್ರ!

೭೫. ಟಿ.ಪಿ.ಅಶೋಕ (ಸಂ), ಈ ಶತಮಾನದ ನೋಟ ಶಿವರಾಮ ಕಾರಂತ, ಪುಟ-೧೯೮

ಅಧ್ಯಾಯ–೭

ಅಂತಿಮ ಫಲಿತಗಳು

ಶಿವರಾಮ ಕಾರಂತರ ಕಾದಂಬರಿಗಳಿಗೆ ಸಂಬಂಧಿಸಿದಂತೆ ಮಾತನಾಡುವಾಗ, ಸಾಹಿತ್ಯವು ಸಮಾಜ ಕೇಂದ್ರಿತವಾದ ಕಲೆಯೆಂಬುದನ್ನು ಮರೆಯಬಾರದು. ಈ ಅಂಶಗಳು ಕಾರಂತರ ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ಕಂಡು ಬಂದರೂ ಸಹ, ಸಾಹಿತ್ಯದಲ್ಲಿ ಕಾದಂಬರಿಗಳು ಪ್ರಮುಖವಾಗಿವೆ. ಕಾದಂಬರಿಗಳು ಮಾನವನ ಜೀವನದ ವಿವಿಧ ನೆಲೆಗಳನ್ನು ಹೇಳುತ್ತವೆ.

ಕಾರಂತರು ನಿಸರ್ಗವನ್ನು ತಮ್ಮ ಕಾದಂಬರಿಗಳಲ್ಲಿ ವರ್ಣನೆಗಳಾಗಿ ಮತ್ತು ಅನುಭವಗಳಾಗಿ ತರುವುದರಲ್ಲಿ ಸಿದ್ಧಹಸ್ತರು. ಅವರು ನಿಸರ್ಗವನ್ನು ಮಾನವನ ಪ್ರತಿಯೊಂದು ಕ್ರಿಯೆಯೊಂದಿಗೆ ಸಮೀಕರಿಸಿ ಹೇಳುತ್ತಾರೆ. ಕನ್ನಡ ಕಾದಂಬರಿ ಲೋಕದ ಬಹುದೊಡ್ಡ ಪ್ರತಿಭೆಯಾದ ಕಾರಂತರು ಪರಿಸರದ ವಸ್ತುವನ್ನು ನಿರ್ವಹಿಸಿದ ಬಗೆಯೇ ಅತ್ಯಂತ ವಿಸ್ಮಯಕಾರಿಯದದ್ದು ಮತ್ತು ಅನನ್ಯವಾದದ್ದು. ನಿಸರ್ಗದ ಒಡನಾಟದ ಬಗ್ಗ ಗಾಢವಾದ ಅರಿವು ಕಾರಂತರಿಗಿತ್ತು ಎನ್ನುವುದು ಅವರ ಕೃತಿಗಳಿಂದ ನಮಗೆ ತಿಳಿದು ಬರುತ್ತದೆ. ಕಾರಂತರು ತಮ್ಮ ಒಂದೊಂದು ಕಾದಂಬರಿಯಲ್ಲೂ ನಿಸರ್ಗದೊಂದಿಗೆ ಬದುಕಿ, ಬಾಳಿ, ಹೋರಾಡಿದ ಮಾನವ ಜೀವಿಗಳ ಅನು ದಿನದ ಬದುಕನ್ನು ವಿಶಿಷ್ಟವಾಗಿ ಕಟ್ಟಿಕೊಡುತ್ತಾರೆ.

ನಿಸರ್ಗವು ಕಾರಂತರ ಕಾದಂಬರಿಗಳಲ್ಲಿ ಅತ್ಯಂತ ವೈವಿಧ್ಯಮಯವಾಗಿ ಕಾಣಿಸಿಕೊಂಡಿದೆ. ಕೇವಲ ಸೌಂದರ್ಯಾನುಭವವನ್ನು ನೀಡುವ ಜೈವಿಕ ಅಂಶವಾಗಿ ಮಾತ್ರವಲ್ಲದೇ, ಮಾನವನ ಬದುಕಿನ ಸಂಗಾತಿಯಗಿ, ರಕ್ಷಕನಾಗಿ, ಹೋರಾಟದ ಕಣವಾಗಿ, ಸ್ಪೂರ್ತಿಯ ಸೆಲೆಯಾಗಿ ಹೀಗೆ ಇನ್ನೂ ಹಲವಾರು ರೀತಿಯಲ್ಲಿ ಅವರ ಕಾದಂಬರಿಗಳು ತೆರೆದುಕೊಳ್ಳುತ್ತವೆ. ಮರಳಿಮಣ್ಣಿಗೆ, ಬೆಟ್ಟದಜೀವ, ಕುಡಿಯರ ಕೂಸು, ಚೋಮನದುಡಿ, ಚಿಗುರಿದ ಕನಸು, ಧರ್ಮರಾಯನ ಸಂಸಾರ ಅಳಿದ ಮೇಲೆ ಮತ್ತು ಇತರ ಕಾದಂಬರಿಗಳಲ್ಲಿ ನಿಸರ್ಗ ಮಾನವ ಸಂಬಂಧವು ಹಾಸು ಹೊಕ್ಕಾಗಿ ಹೆಣೆದುಕೊಂಡಿದೆ.

ಕರಾವಳಿ ತೀರ ಮತ್ತು ದಕ್ಷಿಣ ಕನ್ನಡ ಜನರ ಜೀವನದ ದೈನಿಕ ವಿವರಗಳನ್ನು ಯಥಾವತ್ತಾಗಿ ಸೃಷ್ಟಿಸುವ ಕಾರಂತರು ಅಲ್ಲಿನ ಸಹಜ ಪರಿಸರವನ್ನಷ್ಟೇ ದಾಖಲಿಸಿ ಅಲ್ಲಿಗೆ ನಿಲ್ಲಿಸಿ ಬಿಡುವುದಿಲ್ಲ. ಮನುಷ್ಯನ ಬಾಳಿನಲ್ಲಿ ನಿಸರ್ಗದ ಪಾತ್ರ ಮತ್ತು ಅವನು ಬದುಕಿಗಾಗಿ ಮಾಡಿರುವ ಭೂಮಿ ಹಾಗೂ ಅವನ ರಾಗ – ದ್ವೇಷಗಳನ್ನು ತಮ್ಮ ಕಾದಂಬರಿಗಳಲ್ಲಿ ಸೃಷ್ಟಿಸಿರುತ್ತಾರೆ. ಇದರೊಂದಿಗೆ ಮನುಷ್ಯನ ಜೀವನವನ್ನು ನಿರ್ಧರಿಸುವುದೇ ಪ್ರಕೃತಿಯಾಗಿದೆ. ಇಂತಹ ಪ್ರಕೃತಿಗೆ

ಮನುಷ್ಯ ಧಕ್ಕೆ ತಂದರೆ, ಅವನಿಗೆ ಉಳಿಗಾಲವಿಲ್ಲವೆಂಬ ಎಚ್ಚರಿಕೆಯನ್ನು ಕಾರಂತರು ನೀಡಿರುತ್ತಾರೆ. ಈ ನಿಸರ್ಗದೊಂದಿಗೆ ಮಾನವನ ಈ ಸಂಬಂಧವು ಜೈವಿಕ, ಅನುಭಾವಿಕ, ಮಾನವೀಯವಾಗಿ ಹೀಗೆ ವಿವಿಧ ಸ್ತರಗಳಲ್ಲಿ ನೆಲೆಗೊಂಡಿರುವುದನ್ನು ಹೇಳುತ್ತಾರೆ. ಆದ್ದರಿಂದಲೇ ಕಾರಂತರನ್ನು 'ಕಡಲ ತೀರದ ಭಾರ್ಗವ' ಎಂದು ಕರೆಯುವುದು ಸಮಂಜಸವಾಗಿದೆ.

ಕಾರಂತರ ಕಾದಂಬರಿಗಳು ಸ್ವಾತಂತ್ರ್ಯ ಪೂರ್ವ ಮತ್ತು ನಂತರದ ಕರ್ನಾಟಕದ ಜನ ಜೀವನದ ಬಗ್ಗೆ, ಅದರಲ್ಲೂ ಕರಾವಳಿ ಜನಜೀವನದ ಸೊಬಗನ್ನು ವಿವರಿಸುತ್ತವೆ. ಈ ಮೂಲಕ ಅವರ ಕಾದಂಬರಿಗಳು ಸಾಂಸ್ಕೃತಿಕವಾಗಿ ಒಂದು ಭೌಗೋಳಿಕ ಪರಿಸರ ಮತ್ತು ಜನಾಂಗದ ಸಾಹಿತ್ಯದ ದಾಖಲೆಯಾಗಿಯು ಗಮನ ಸೆಳೆಯುತ್ತವೆ. ನಿಸರ್ಗದೊಂದಿಗೆ ಅನಿವಾರ್ಯವಾಗಿ ಬದುಕು ನಡೆಸಬೇಕಾದ ಅಲ್ಲಿನ ಜನ, ಅದರಲ್ಲಿ ಕಂಡುಕೊಂಡು ಸಫಲತೆ – ವಿಫಲತೆಗಳನ್ನು ಅವರ ಕೆಲವು ಕಾದಂಬರಿಗಳು ಧ್ವನಿಸುತ್ತವೆ. ಹೀಗೆ ಕಾರಂತರು ಮತ್ತು ಕುವೆಂಪು ಅವರನ್ನು ಬಿಟ್ಟರೆ ನಿಸರ್ಗದ ನಾನಾ ಮುಖಗಳನ್ನು ಸೃಜನಶೀಲವಾಗಿ ಹೇಳಿದ ಕನ್ನಡ ಕಾದಂಬರಿಕಾರರು ವಿರಳವೆನ್ನಬಹುದಾಗಿದೆ.

ಕಾದಂಬರಿ ಕ್ಷೇತ್ರದ ಮಹತ್ವದ ಲೇಖಕರಾದ ಕಾರಂತರು ತಮ್ಮ ಪ್ರಧಾನ ಕಾಳಜಿಯಾಗಿಯೇ ನಿಸರ್ಗ ಮಾನವ ಸಂಬಂಧಗಳನ್ನು ಸೃಜನಶೀಲವಾಗಿ ತಮ್ಮ ಕಾದಂಬರಿಗಳ ಮೂಲಕ ಅನ್ವೇಷಿಸಲು ತೊಡಗಿದ್ದಾರೆ. ಹೀಗೆ ಅವರು ಶೋಧಿಸಿರುವ ನಿಸರ್ಗದ ಅಂಶಗಳನ್ನು ಈ ಮೂಲಕ ನಾವು ಶೋಧಿಸುತ್ತಲೇ ಅವರು ಪರಿಸರ ಸಂಬಂಧಿಯಾದ ಅನೇಕ ಮುಖ್ಯ ಪ್ರಶ್ನೆಗಳನ್ನು ಇಂದಿನ ಪರಿಸರದ ಸವಾಲುಗಳೊಂದಿಗೆ ಸೃಜನಾತ್ಮಕವಾಗಿ ಬಿಡಿಸಿ ಅರಿತುಕೊಳ್ಳಲು ಪ್ರಯತ್ನಿಸಲಾಗಿದೆ. ಈ ಶೋಧನೆ ಅಂತಿಮವೇನಲ್ಲ: ಬದಲಾಗಿ ಇದನ್ನು ವಿವಿಧ ದೃಷ್ಟಿಕೋನಗಳಲ್ಲಿ ಮುಂದಿನ ಪೀಳಿಗೆ ಶೋಧಿಸಲು ಅವಕಾಶವಿದೆ. ಎನ್ನುವುದು ಮನಗಾಣಲಾಗಿದೆ. ಹೀಗೆ ಕಾರಂತರ ಕಾದಂಬರಿಗಳು ಮಾನವನ ವಿವಿಧ ಮುಖಗಳನ್ನು ಪರಿಚಯಿಸುತ್ತವೆ. ಈ ಪರಿಚಯದಲ್ಲಿ 'ಭೂಮಿ ಮತ್ತು ಮಾನವ ಸಂಬಂಧಗಳು' ಒಂದು ಬಗೆಯಾಗಿದೆ. ನಿಸರ್ಗ ಮತ್ತು ಮಾನವ ಸಂಬಂಧಗಳಿಗೆ ಸಂಬಂಧಿಸಿದಂತೆ ಅವರ ಅನೇಕ ಕಾದಂಬರಿಗಳು ಧ್ವನಿಸುತ್ತವೆ. ಆದರೆ ಇಲ್ಲಿ ಕೇವಲ ಪ್ರಾತಿನಿಧಿಕ ಕಾದಂಬರಿಗಳ ಮೂಲಕ ಈ ಅಂಶವನ್ನು ಗಮನಿಸಲಾಗಿದೆ. 'ಮರಳಿ ಮಣ್ಣಿಗೆ' ಕಾದಂಬರಿಯಲ್ಲಿ ಸಂಮೃದ್ದವಾದ ಪ್ರಕೃತಿ ವಿವರಗಳನ್ನು ಒಳಗೊಂಡಿದೆ. ನಿಸರ್ಗವನ್ನು ಮಾನವನು ತನ್ನ ವಿವಿಧ ಮುಖಗಳಲ್ಲಿ ಕಾಣುವುದನ್ನು ಮೂರು ತಲೆಮಾರುಗಳಲ್ಲಿ ಪುರುಷ ಮತ್ತು ಸ್ತ್ರೀ ಪಾತ್ರಗಳು ಭೂಮಿಯೊಂದಿಗೆ ಹೋರಾಡಿ ಬದುಕನ್ನು ರೂಪಿಸಿಕೊಂಡಿರುವುದನ್ನು ಗುರುತಿಸಬಹುದಾಗಿದೆ. 'ಬೆಟ್ಟದ ಜೀವ' ಕಾದಂಬರಿಯಲ್ಲಿ ಪ್ರಕೃತಿಯ ಸವಾಲುಗಳನ್ನು ಗೆದ್ದು ಬದುಕುವ ಪಾತ್ರಗಳು ಮತ್ತು 'ಚೋಮನದುಡಿ' ಕಾದಂಬರಿಯಲ್ಲಿ ತುಂಡು ಭೂಮಿಯು ದಲಿತರ,

ಬಡವರ ಶೋಷಣೆಯ ಸಾಧನವಾಗಿರುವ ಬಗ್ಗೆ, 'ಕುಡಿಯರ ಕುಸು' ಕಾದಂಬರಿಯಲ್ಲಿ ಮಲೆ ಕುಡಿಯ ಜನಾಂಗದ ಪ್ರಕೃತಿ ವಿವರಗಳು ಧರ್ಮರಾಯನ ಸಂಸಾರದಲ್ಲಿ ಕುಟುಂಬ ಮತ್ತು ಭೂಮಿಯ ಬಗ್ಗೆ ಮೂಕಜ್ಜಿಯ ಕನಸುಗಳಲ್ಲಿ ಬದುಕಿನ ಅನುಭವ ಇದ್ದರೂ ಚಿಂತೆಯಲ್ಲಿ ಬದುಕಿನ ನೆಲೆ ಬೆಲೆಗಳನ್ನು ಹಾಗೂ ಅಳಿದ ಮೇಲೆ ಉಳಿವುದೇನ ಹೀಗೆ ಕಾರಂತರು ಅದ್ಭುತವಾಗಿ ಬದುಕನ್ನು ಕಟ್ಟಿಕೊಡುತ್ತಾರೆ. ಪ್ರಸ್ತುತ ಅಧ್ಯಯನದಲ್ಲಿ ಕಾರಂತರ ಕಾದಂಬರಿಗಳ ಮೂಲಕ ನಿಸರ್ಗ – ಮಾನವನ ಸಂಬಂಧಾಂತರಗಳನ್ನು ಹೊಸ ಬಗೆಯಲ್ಲಿ ಗ್ರಹಿಸಲು ಪ್ರಯತ್ನಿಸಲಾಗಿದೆ.

ಕನ್ನಡ ಸಾಹಿತ್ಯಕ್ಕೆ ಕಾದಂಬರಿ ಸಾಹಿತ್ಯ ಒಂದು ಅಪೂರ್ವ ಕೊಡುಗೆ, ಕಾದಂಬರಿಗಳ ವಸ್ತು ವೈವಿಧ್ಯತೆ ಪಾತ್ರಗಳು, ಸಂವಿಧಾನ, ಕಥನಕಲೆ, ಭಾಷಾಶೈಲಿ, ರಚನಾತಂತ್ರ, ಕಾದಂಬರಿಕಾರನ ಸಾಮಾಜಿಕ ಜೀವನದ ಅನುಭವ, ಕಲ್ಪನೆ, ಪಾರಂಪರಿಕ ಪ್ರಜ್ಞೆ ಹೀಗೆ ಎಲ್ಲಾ ದೃಷ್ಟಿಕೋನಗಳಿಂದ ನೋಡಿದಾಗ ಇವು ಪ್ರಯೋಗ ಶೀಲತೆಗೆ ಒಡ್ಡಿಕೊಂಡು ಜನಮೆಚ್ಚುಗೆಯನ್ನು ಪಡೆದಿವೆ. ಕಾದಂಬರಿಗಳಲ್ಲಿ ಪರಿಸರ, ಜೀವನದ ವೈವಿಧ್ಯತೆಗಳು, ಗ್ರಾಮ ಮತ್ತು ನಗರಗಳ ಅಪೂರ್ವ ಮಿಲನದ ದಾಖಲೆಗಳಿವೆ. ಮೌಢ್ಯತೆ, ನಾಗರೀಕತೆ, ಬದುಕಿನ ಸಂಕೀರ್ಣತೆಗಳು, ಕುಟುಂಬ ವಿಘಟನೆಯ ತಲ್ಲಣಗಳು, ಸಾಂಸಾರಿಕ ಜೀವನದ ಸೆಳೆತಗಳು, ಜನರ ನಂಬಿಕೆಗಳು, ಮುಗ್ಧತೆ, ಭಯ, ದಿಟ್ಟತನ ಮತ್ತು ಸವಾಲುಗಳು, ಸೋಲು ಮತ್ತು ಅವಮಾನಗಳು, ಸಮಾಜ ಒಪ್ಪಿತ ಆದರ್ಶ ಜೀವನ, ಬದುಕಿನ ಪರವಾದ ಪ್ರೀತಿಯ ಸೆಳೆತ, ಹೊಸ ಸಂಸ್ಕೃತಿಯ ಮುಖಾಮುಖಿ, ಧರ್ಮದ ಗೊಡ್ಡು ಉಪದೇಶ ಮತ್ತು ಸೆಳೆತ ಇತ್ಯಾದಿ ವಿಷಯಗಳ ಬಗ್ಗೆ ಕಾದಂಬರಿಗಳು ಬೆಳಕನ್ನು ಬೀರುತ್ತವೆ. ಸಮಷ್ಟಿ ಪ್ರಜ್ಞೆಯನ್ನು ಓದುಗರಲ್ಲಿ ಮೂಡಿಸುತ್ತವೆ.

ಕಾರಂತರು ತಮ್ಮ ಸ್ವಾನುಭವದ ಮೂಲಕ ವ್ಯಕ್ತಿ ವಿಶಿಷ್ಟತೆಯನ್ನು ಮೆರೆದು ತಮ್ಮ ಕಾದಂಬರಿಗಳಲ್ಲಿ ಜೀವನಾನುಭವಗಳ ದರ್ಶನವನ್ನು ನೀಡುವಂಥ ಪಾತ್ರಗಳನ್ನು ಸೃಷ್ಟಿಸಿ ವಿಶಿಷ್ಟತೆಯನ್ನು ಮೆರೆದಿದ್ದಾರೆ. ತಮ್ಮ ಆಲೋಚನೆಗಳನ್ನು ಒಣಸಿದ್ಧಾಂತಗಳಾಗಿ ಬರದೆ ಸಜೀವ ದರ್ಶನವಾಗಿ ಮೂಡಿಬರುತ್ತವೆ. ಕೆಲವು ಕಾದಂಬರಿಗಳಲ್ಲಿ ಅಂದರೆ 'ಬೆಟ್ಟದ ಜೀವ', 'ಚೋಮನದುಡಿ', ಮೈಮನಗಳ ಸುಳಿಯಲ್ಲಿ,' 'ಅಳಿದ ಮೇಲೆ,' 'ಮರಳಿ ಮಣ್ಣಿಗೆ', ಇಲ್ಲೆಲ್ಲ ಕಾವ್ಯಾತ್ಮಕವಾದ ಬಿಗುವಿನಿಂದ ಕೂಡಿದ ಧ್ವನಿಯುಕ್ತ ಭಾಷೆ ಮತ್ತು ತಂತ್ರಗಳನ್ನು ಬಳಸಿ ವೈಶಿಷ್ಟ್ಯತೆಯನ್ನು ಮೆರೆದಿದ್ದಾರೆ. ಸಾಹಿತ್ಯಾತ್ಮಕವಾಗಿ ವಸ್ತು, ತಂತ್ರ, ಕಥನ, ನಿರೂಪಣೆ, ಶೈಲಿ ಮತ್ತು ಸಂವಿಧಾನಗಳಿಂದ ವಿಶಿಷ್ಟತೆಯನ್ನು ಮೆರೆದರೆ ಸಾಹಿತ್ಯೇತರವಾಗಿ ಸಮಾಜ, ಸಂಸ್ಕೃತಿ, ಪರಿಸರ ಮತ್ತು ಪ್ರಭಾವಗಳಿಂದ ವಿಶೇಷವಾದ ಪ್ರಜ್ಞೆಯನ್ನು ಹೊರಡಿಸಿದ್ದಾರೆ. ಆಧುನಿಕ ಕನ್ನಡ ಸಾಹಿತ್ಯದಲ್ಲಿ 'ಸಂಶೋಧನೆ' ಎಂಬ ಪರಿಕಲ್ಪನೆಯನ್ನು 'ವಿಮರ್ಶೆ' ಎಂಬ ಚೌಕಟ್ಟಿನಲ್ಲಿ ಗುರುತಿಸಲಾಗುತ್ತದೆ.

ಎಂದು ಕೆ.ವಿ.ನಾರಾಯಣ ಅವರು ಅರ್ಥೈಸಿದ್ದಾರೆ. ಹೀಗೆ ಯಾವುದೇ ಸಾಹಿತ್ಯ ಕೃತಿಯನ್ನು ಅಧ್ಯಯನ ಮಾಡುವಾಗ ಸಂಶೋಧನೆ ಮತ್ತು ವಿಮರ್ಶೆ ಒಟ್ಟೊಟ್ಟಿಗೆ ನಡೆಯುತ್ತಿರುತ್ತದೆ. ಈ ದಿಶೆಯಲ್ಲಿ ಸಂಶೋಧನಾ ಪ್ರಬಂಧವನ್ನು ಸಿದ್ಧಪಡಿಸಿರುತ್ತೇನೆ. ಇಲ್ಲಿ ಸಂಶೋಧನೆಯ ಶಾಸ್ತ್ರೀಯವಾದ ಶಿಸ್ತಿನೊಂದಿಗೆ ವಿಮರ್ಶೆ, ವಿಶ್ಲೇಷಣೆ ಮತ್ತು ಪ್ರತಿಕ್ರಿಯೆಯೂ ಸೇರಿವೆ.

ಕಾದಂಬರಿಗಳ ಸ್ವರೂಪ ಇಂದು ದೊಡ್ಡ ಕಥೆಯಿಂದ ಹಿಡಿದು ಸಾವಿರಾರು ಪುಟಗಳವರೆಗೆ ವ್ಯಾಪಿಸಿದೆ. ದೇವನೂರ 'ಒಡಳಾಳ' ಒಂದು ಕಿರು ಕಾದಂಬರಿಯ ವ್ಯಾಪ್ತಿಯ ಸ್ವರೂಪ ಹೊಂದಿದೆ ಎಂದರೆ ಕಾರಂತರ 'ಮರಳಿ ಮಣ್ಣಿಗೆ', 'ಔದಾರ್ಯದ ಉರುಳಲ್ಲಿ', ಕುವೆಂಪುರವರ 'ಕಾನೂರು ಹೆಗ್ಗಡತಿ', 'ಮಲೆಗಳಲ್ಲಿ ಮದುಮಗಳು', ರಾವ್‌ಬಹದ್ದೂರರ 'ಗ್ರಾಮಾಯಣ', ಗೋಕಾಕರ 'ಸಮರಸವೇ ಜೀವನ' ಹೀಗೆ ಕನ್ನಡದಲ್ಲಿ ಹೆಸರಿಸಬಹುದಾದಂತಹ ಸಾಕಷ್ಟು ಕಾದಂಬರಿಗಳು ತಮ್ಮ ಸ್ವರೂಪ, ವಸ್ತು, ವಿಷಯ ಮತ್ತು ವೈವಿಧ್ಯತೆಗಳಿಂದ ಓದುಗರ ಮತ್ತು ಸಂಶೋಧಕರ ಗಮನ ಸೆಳೆದಿವೆ. ಕಾರಂತರು ಒಂದೆಡೆ ಸ್ಮೃತಿಪಟಲದಲ್ಲಿ ಹೇಳಿರುವಂತೆ "ವಸಂತ" ಪತ್ರಿಕೆಯನ್ನು ತುಂಬಿಸಲು ಕಾದಂಬರಿ ಬರಹಕ್ಕೆ ಕೈ ಹಾಕಿದೆ" ಎನ್ನುವ ಮಾತು ಯಾವುದೋ ಒಂದು ಹಿಡಿದ ಕೆಲಸವನ್ನು ಪುರೈಸಲು, ಉದ್ದೇಶವನ್ನು ಸಾಧಿಸಲು, ಸಾಮಾಜಿಕ ಸಮಸ್ಯೆ ಬಿಂಬಿಸಲು, ಓದುಗರ ಗಮನ ಸೆಳೆಯಲು ಕಾದಂಬರಿಗಳನ್ನು ಬರೆದು ಸಮಷ್ಟಿ ಪ್ರಜ್ಞೆಯನ್ನು ಜಾಗೃತಪಡಿಸಿದರು. ವಸಾಹತು ಕಾಲದಲ್ಲಿ, ರಾಷ್ಟ್ರೀಯ ಪ್ರಜ್ಞೆ, ಸ್ವಾತಂತ್ರದ ಹೋರಾಟ, ಭೂಮಿಗಾಗಿ ಹೋರಾಟ, ಬಡತನ ಸಮಸ್ಯೆ ಅಸ್ಪೃಶ್ಯತೆಯನ್ನು ತೊಲಗಿಸಲು, ಮೂಡನಂಬಿಕೆಗಳ ವಿರುದ್ಧ ಧೋರಣೆ ವ್ಯಕ್ತಪಡಿಸಲು, ಸ್ತ್ರೀ ವಿಮೋಚನೆ, ವೇಶ್ಯಾ ಪದ್ಧತಿ ನಿರ್ಮೂಲನೆ, ವಿಧವಾ ವಿವಾಹ, ಅಂತರಜಾತಿಯ ವಿವಾಹ ಹೀಗೆ ಹಲವಾರು ಸಮಾಜ ಪೀಡೆಗಳ ವಿರುದ್ಧ ಕಾದಂಬರಿಗಳನ್ನು ರಚಿಸಿ ಸಾಮಾಜಿಕ ಅರಿವನ್ನು ಮೂಡಿಸಿದರು. ರಾಷ್ಟ್ರೀಯತೆಯನ್ನು ಕನ್ನಡತನವನ್ನು ಮತ್ತು ಸ್ವಾಭಿಮಾನ, ಗುಣಗಳನ್ನು ಜಾಗೃತ ಪಡಿಸುವ ನಿಟ್ಟಿನಲ್ಲಿ ಕಾದಂಬರಿಗಳನ್ನು ಬರೆದಿದ್ದಾರೆ ಎಂಬುದನ್ನು ಪ್ರಸ್ತುತ ಅಧ್ಯಯನದ ಮೂಲಕ ಶೋಧಿಸಿದೆ.

ಇಪ್ಪತ್ತನೇ ಶತಮಾನದ ಭಾರತದ ಐತಿಹಾಸಿಕ ಮಹತ್ತರ ಘಟ್ಟವನ್ನು ಸಾಂಸ್ಕೃತಿಕ ವೈವಿಧ್ಯತೆಗಳನ್ನು ಸಾಮಾಜಿಕ ಸ್ಥಿತಿಗತಿಗಳನ್ನು ಸಾಹಿತ್ಯ ಕೃತಿಯೊಳಗೆ ಬಂದಿಸುವ ಕಾದಂಬರಿ ಕಲೆಯಾಗಿ ಪರಿವರ್ತಿಸುವ ಕಾದಂಬರಿಯನ್ನು ಇತಿಹಾಸದ ದಾಖಲೆಯಾಗಿಸುವ ಸಾಂಸ್ಕೃತಿಕ ಮತ್ತು ಸಾಮಾಜಿಕ ಮೌಲ್ಯಗಳ ಪಲ್ಲಟಗಳನ್ನು ಮತ್ತು ಸಂಘರ್ಷವನ್ನು ಕಟ್ಟಿಕೊಡುವ ಕಲೆ ಕಾರಂತರಂಥ ಪ್ರತಿಭಾವಂತರಿಗೆ, ಸೃಜನಶೀಲರಿಗೆ ಸಾಧ್ಯವಾಗಿರುವುದು ಸಹಜವಾಗಿದೆ. ಕೆ.ವಿ.ನಾರಾಯಣರವರು ಚರಿತ್ರೆ ಮತ್ತು ಸಾಹಿತ್ಯ ಕೃತಿಗಳ ಸಂಬಂಧ ಕುರಿತು ಹೀಗೆ "ಚರಿತ್ರೆಯನ್ನು

ಸಾಹಿತ್ಯ ಕೃತಿಗಳ ಮೂಲಕ ಗ್ರಹಿಸಬೇಕೆಂಬ ಮಾತೂ, ಚರಿತ್ರೆಯ ಮೂಲಕ ಸಾಹಿತ್ಯ ಕೃತಿಗಳನ್ನು ಗ್ರಹಿಸಬೇಕೆಂಬ ಮಾತೂ ಒತ್ತೊಟ್ಟಿಗೆ ಹೋಗಲಾರದು"[೧] ಮೇಲಿನ ಹೇಳಿಕೆ ಸಾಹಿತ್ಯವನ್ನು ಚರಿತ್ರೆಯಿಂದ ಚರಿತ್ರೆಯನ್ನು ಸಾಹಿತ್ಯದಿಂದ ನೋಡಬಾರದೆಂದು ಹೇಳಿದರೂ ಇದನ್ನು ಮೀರಿರುವ ಪ್ರಯತ್ನಗಳು ಅನಾದಿಕಾಲದಿಂದಲೂ ಬಂದಿರುವುದು ಸತ್ಯವಷ್ಟೆ. ಪಂಪನಿಂದ, ಶಾಸನಗಳಿಂದ, ಸಾಹಿತ್ಯ ಕೃತಿಗಳಿಂದ ಚರಿತ್ರೆಯ, ಸಮಾಜದ ಕಾಲಘಟ್ಟದ ವಿವರಗಳನ್ನು ಪಡೆಯುತ್ತಲೇ ಇದ್ದೇವೆ. ಸಂಶೋಧನೆಗೆ ಸಾಹಿತ್ಯ ಕೃತಿ ಚಾರಿತ್ರಿಕ ಸತ್ಯ ಆಕರಗ್ರಂಥ ಎಂಬುದರಲ್ಲಿ ಭೇಧವಿಲ್ಲ.

ಕಾರಂತರು ಒಂದು ಶತಮಾನದ ಚಾರಿತ್ರಿಕ ಸಾಮಾಜಿಕ ತಲ್ಲಣಗಳನ್ನು ತಮ್ಮ ಕಾದಂಬರಿಗಳಲ್ಲಿ ಚಿತ್ರಿಸಿದ್ದಾರೆ. ಓದುಗರ ಪ್ರಜ್ಞೆಯನ್ನು ಬಡಿದೆಬ್ಬಿಸಿದ್ದಾರೆ. ಕಾರಂತರ ಕಾದಂಬರಿಗಳ ದೃಷ್ಟಿಕೋನವನ್ನು ವೈವಿಧ್ಯತೆಗಳನ್ನು, ವೈಚಾರಿಕತೆಯನ್ನು, ಸಾಮಾಜಿಕ ಮೌಲ್ಯಗಳ ಪ್ರತಿಪಾದನೆಯನ್ನು ಮತ್ತು ಹೊಸ ಹೊಸ ಚಿಂತನೆಗಳ ನೆಲೆಗಳನ್ನು ಪ್ರಬಂಧದಲ್ಲಿ ವಿಶ್ಲೇಷಿಸಲಾಗಿದೆ. ಮಾನವತಾವಾದದ ಸ್ಥಾಪನೆಗೆ, ನಿರಂತರ ಕಾಯ್ದುಕೊಳ್ಳುವಿಕೆಗೆ ವಿಶೇಷ ಕಾಳಜಿ ತೋರಿರುವುದನ್ನು ಗುರುತಿಸಲಾಗಿದೆ. ಜಾಗತಿಕ ಸಾಹಿತ್ಯಕ್ಕೆ ಕಾದಂಬರಿ ರೀತಿಯಲ್ಲಿ ಕಾರಂತರು ವಿಶೇಷ ಕೊಡುಗೆಯನ್ನು ನೀಡಿದ್ದಾರೆ. ಅವರ 'ಮರಳಿ ಮಣ್ಣಿಗೆ', ಬೆಟ್ಟದ ಜೀವ', 'ಅಳಿದ ಮೇಲೆ', ಮೂಕಜ್ಜಿಯ ಕನಸುಗಳು', 'ಚೋಮನ ದುಡಿ', 'ಕುಡಿಯರ ಕೂಸು', ಇದ್ದರೂ ಚಿಂತೆ, ಧರ್ಮರಾಯನ ಸಂಸಾರ, ಮೈಮನಗಳಲಿ ಸುಳಿಯಲ್ಲಿ, ಚಿಗುರಿದ ಕನಸು, ಅಳಿದ ಮೇಲೆ, ಶನೀಶ್ವರನ ನೆರಳಲ್ಲಿ, ಗೆದ್ದ ದೊಡ್ಡಸ್ಥಿಕೆ, ನಂಬಿದವರ ನಾಕ ನರಕ ಸಾಕಷ್ಟು ಓದುಗರನ್ನು ಪಡೆದು ಪುನರ್ ಮುದ್ರಣಗಳನ್ನು ಕಂಡ ಹಲವಾರು ಭಾಷೆಗಳಿಗೆ ಅನುವಾದಗೊಂಡ ಜಾಗತಿಕ ಮಟ್ಟದಲ್ಲಿ ನಿಲ್ಲಬಲ್ಲ ಮಹತ್ವದ ಕಾದಂಬರಿಗಳಾಗಿವೆ. ಈ ಕಾದಂಬರಿಗಳು ಮಾನವೀಯ ಸಂಬಂಧಗಳನ್ನು ಬೆಳೆಸುವ ಇತಿಹಾಸವಾಗಿಸುವ ಮತ್ತು ಕಲೆಯಾಗಿಸುವ ಮೂಲಕ ಸಮಷ್ಟಿ ಪ್ರಜ್ಞೆಯನ್ನು ಬೆಳೆಸುತ್ತವೆ. ಇವುಗಳ ವೈಶಿಷ್ಟ್ಯವನ್ನು ಅಧ್ಯಯನ ಮಾಡಲಾಗಿದೆ.

ಕಾರಂತರ ಹತ್ತಾರು ಕಾದಂಬರಿಗಳು ಅಸಂಖ್ಯಾತ ಓದುಗರನ್ನು ಪಡೆದಿವೆ. ಈಗಲೂ ಪಡೆಯುತ್ತಿವೆ. ಮತ್ತೆ ಮತ್ತೆ ಓದಿಗೆ ಒಳಗಾಗಿ ಕಾಲಾನುಕ್ರಮದಲ್ಲಿ ಹೊಸ ಹೊಸ ಮೌಲ್ಯಗಳ ಹುಡುಕಾಟ ಮತ್ತು ಚರ್ಚೆಗೆ ಅವಕಾಶ ಕಲ್ಪಿಸಿವೆ. ಹೊಸ ಹೊಸ ಅರ್ಥಪರಂಪರೆಗಳನ್ನು ಹೊಮ್ಮಿಸುತ್ತಿವೆ. ಇದಕ್ಕೆ ಕಾರಣ ಕಾರಂತರ ಸಾಮಾಜಿಕ ಪ್ರೀತಿ ಮತ್ತು ಕಾಳಜಿ, ಭಾಷೆ, ತಂತ್ರ, ಕಥನ ಮತ್ತು ನಿರೂಪಣಾ ವಿಧಾನ. ಸಾಮಾಜಿಕ ಪರಿಸರವು ಕೆಲವೊಮ್ಮೆ ವಿಶೇಷತೆಯನ್ನು ಪಡೆಯುತ್ತದೆ. ಕಡಲು, ಕಾಡು, ಬೆಟ್ಟ-ಗುಡ್ಡಗಳ ಚಿತ್ರಣವೂ ನಿಸರ್ಗದ ನಿರ್ಮಿತಿ ವಿಶೇಷತೆಯನ್ನು ಪಡೆದು ಶೋಧನೆಗೆ ಸಾಮಾಗ್ರಿಯಾಗಿವೆ. ಕನ್ನಡದ ಕಾದಂಬರಿ ಸಾಹಿತ್ಯ ಪರಂಪರೆಯಲ್ಲಿ ಕಾರಂತರ

೧. ಕೆ.ಪಿ.ನಾರಾಯಣ, ಬೇರು, ಕಾಂಡ, ಚಿಗುರು, ಪುಟ-೧೫

ಕಾದಂಬರಿಗಳು ಅಜರಾಮರವಾಗಿ, ಮೈಲುಗಲ್ಲುಗಳಾಗಿ ಮುಂದಿನ ಪೀಳಿಗೆಯವರಿಗೆ ಮಾರ್ಗದರ್ಶಕವಾಗಿ ಶಾಶ್ವತತೆಯನ್ನು ಪಡೆಯುತ್ತವೆ ಎಂದು ಈ ಅಧ್ಯಯನ ಗುರುತಿಸಿದೆ.

ಪುನರ್ ವಿಭಾಗಗಳನ್ನು ಮಾಡಿ ಕಾದಂಬರಿಗಳ ಸಮಷ್ಟಿ ಗ್ರಹಿಕೆ, ವಸಾಹತು ನೆಲೆಯ ಪ್ರವೇಶ ಮತ್ತು ಪ್ರತಿಕ್ರಿಯೆಗಳನ್ನು ದಾಖಲಿಸಿದೆ. ಸ್ತ್ರೀ ಪ್ರತಿನಿಧೀಕರಣದ ಮಹತ್ವವನ್ನು ಮತ್ತು ಪ್ರತಿಕ್ರಿಯೆಗಳನ್ನು ಗಮನಿಸಿದೆ. ನಿಸರ್ಗ ಕುರಿತಾದ ಅನಿಸಿಕೆ ಅಭಿಪ್ರಾಯಗಳನ್ನು ವಿವೇಚನೆಗೆ ಒಳಪಡಿಸಿದೆ. ಸಮಗ್ರವಾಗಿ ಸಾಮಾಜಿಕ ಅರಿವನ್ನು ವೃದ್ಧಿಗೊಳಿಸಲು ಕಾದಂಬರಿಗಳ ಕೊಡುಗೆಯನ್ನು ಅಧ್ಯಯನದ ಮೂಲಕ ದಾಖಲಿಸಿದೆ.

ಸರಿಸುಮಾರು ಒಂದು ಶತಮಾನವನ್ನು ಗ್ರಹಿಸಿದ, ಕಥಿಸಿದ, ಶೋಧಿಸಿದ, ವಿಶ್ಲೇಷಿಸಿದ ಇಬ್ಬರು ಮಹಾಲೇಖಕರೆಂದರೆ ಕಾರಂತ ಮತ್ತು ಕುವೆಂಪು, ಕುವೆಂಪು ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ಕೃಷಿಗೈದರೆ, ಕಾರಂತ ಕಾದಂಬರಿಯನ್ನೇ ತಮ್ಮ ಮುಖ್ಯ ಅಭಿವ್ಯಕ್ತಿ ಮಾಧ್ಯಮವನ್ನಾಗಿ ಮಾಡಿಕೊಂಡು ಕನ್ನಡ ಸಾಹಿತ್ಯ ಲೋಕಕ್ಕೆ ಅಪೂರ್ವ ಕಾಣಿಕೆ ನೀಡಿದ್ದಾರೆ. ಅವರ ಕಾದಂಬರಿಗಳು ಬದುಕಿನ ಆಯಾಮಗಳನ್ನು ಬಿಂಬಿಸಿವೆ. ಮನುಷ್ಯ ನಿಸರ್ಗಜೀವಿ, ಸಮಾಜ ಜೀವಿ, ಸಂಸ್ಕೃತಿ ಜೀವಿ ಎಂಬುದನ್ನು ಧ್ವನಿಸಿವೆ. ಅನಾದಿಕಾಲದಿಂದ ಮಾನವ ಹೊಂದಿರುವ ನಿಸರ್ಗದ ನಂಟಿನ ಹಲವು ಮುಖಗಳನ್ನು ಅವರ ಕಾದಂಬರಿಗಳಲ್ಲಿ. ಈ ನಂಟಿಗೆ ಹೊಂದಿಕೊಳ್ಳುವ, ಘರ್ಷಿಸುವ, ರಾಜಿ ಮಾಡಿಕೊಳ್ಳುವ ಗೆಲ್ಲುವ, ಸೋಲುವ ಎಲ್ಲ ನೆಲೆಗಳಿವೆ.

ಹೀಗೆ ಮನುಷ್ಯ ಭೂಮಿಯೊಡನೆ, ಕಡಲಿನೊಡನೆ, ಕಾಡಿನೊಡನೆ ಬದುಕಿನ ಹಲವು ಹಂತಗಳನ್ನು ಕಾರಂತರು ತಮ್ಮ ಕಾದಂಬರಿಗಳ ಮುಖ್ಯ ಭಿತ್ತಿಯಾಗಿಸಿಕೊಂಡು ತಟಸ್ಥ ಮತ್ತು ಸಮಷ್ಟಿ ಪ್ರಜ್ಞೆಯೊಂದಿಗೆ ಕೃತಿ ರಚಿಸಿದ್ದಾರೆ. ಹೀಗೆ ಮಾನವ, ಭೂಮಿಯ ಸಂಬಂಧಗಳ ಕುರಿತ ಅವರ ಗ್ರಹಿಕೆಯ ಹಿನ್ನೆಯಲ್ಲಿರುವ ತಾತ್ವಿಕತೆಯ ಕೆಲವು ಅಂಶಗಳನ್ನು ಈ ಅಧ್ಯಯನ ವಿಷದೀಕರಿಸಿದೆ.

ಕಾರಂತರ ತಾತ್ವಿಕತೆ ಧನಾತ್ಮಕವಾದುದು. ಕೆಲವು ಸಣ್ಣ ಲೋಪದೋಷಗಳ ಹೊರತಾಗಿ ಅವರ ಕಾದಂಬರಿಗಳು ಶೋಧಿಸಿರುವ ಮನುಷ್ಯ ನಿಸರ್ಗದ ನಂಟಿನ ವ್ಯಾಖ್ಯಾನ ಕಿರು ಪ್ರಮಾಣದಲ್ಲಿ ಇಲ್ಲಿ ಅವಲೋಕಿತವಾಗಿದೆ.

******

ಅನುಬಂಧ

ಅ. ಆಕರ ಗ್ರಂಥಗಳು

೧. ಅಂಟಿದ ಅಪರಂಜಿ – ಶಿವರಾಮ ಕಾರಂತ
ರಾಜಲಕ್ಷ್ಮೀ ಪ್ರಕಾಶನ, ಬಳೇಪೇಟೆ
ಬೆಂಗಳೂರು – ೧೯೮೬

೨. ಅದೇ ಊರು; ಅದೇ ಮರ – ಶಿವರಾಮ ಕಾರಂತ
ರಾಜಲಕ್ಷ್ಮೀ ಪ್ರಕಾಶನ, ಬಳೇಪೇಟೆ
ಬೆಂಗಳೂರು – ೧೯೭೭

೩. ಅಳಿದ ಮೇಲೆ – ಶಿವರಾಮ ಕಾರಂತ
ರಾಜಲಕ್ಷ್ಮೀ ಪ್ರಕಾಶನ, ಬಳೇಪೇಟೆ
ಬೆಂಗಳೂರು – ೧೯೬೦

೪. ಆಳ, ನಿರಾಳ – ಶಿವರಾಮ ಕಾರಂತ
ಐ.ಬಿ.ಎಚ್. ಪ್ರಕಾಶನ, ಗಾಂಧಿನಗರ
ಬೆಂಗಳೂರು – ೧೯೭೩

೫. ಇದ್ದರೂ ಚಿಂತೆ – ಶಿವರಾಮ ಕಾರಂತ
ಹರ್ಷ ಪ್ರಕಟಣಾಲಯ, ಪುತ್ತೂರು,
ದ.ಕ – ೧೯೬೮.

೬.ಇಳೆಯೆಂಬ – ಶಿವರಾಮ ಕಾರಂತ,
ಐ.ಬಿ.ಎಚ್. ಪ್ರಕಾಶನ, ಗಾಂದಿನಗರ,
ಬೆಂಗಳೂರು – ೧೯೭೫.

೭. ಉಕ್ಕಿದ ನೊರೆ – ಶಿವರಾಮ ಕಾರಂತ,
ಹರ್ಷ ಪ್ರಕಟಣಾಲಯ,
ಪುತ್ತೂರು, ದ.ಕ – ೧೯೭೦

೮. ಒಂಟಿದನಿ – ಶಿವರಾಮ ಕಾರಂತ
ಹರ್ಷ ಪ್ರಕಟಣಾಲಯ, ಪುತ್ತೂರು,
ದ.ಕ – ೧೯೭೧

೯. ಒಡ ಹುಟ್ಟಿದವರು – ಶಿವರಾಮ ಕಾರಂತ,
ಹರ್ಷ ಪ್ರಕಟಣಾಲಯ, ಪುತ್ತೂರು,
ದ.ಕ – ೧೯೭೨

೧೦. ಔದಾರ್ಯದ ಉರುಳಲ್ಲಿ – ಶಿವರಾಮ ಕಾರಂತ
ಐ.ಬಿ.ಎಚ್. ಪ್ರಕಾಶನ, ಗಾಂಧಿನಗರ,
ಬೆಂಗಳೂರು – ೧೯೭೫

೧೧. ಕಣ್ಣಿದ್ದೂ ಕಾಣರು – ಶಿವರಾಮ ಕಾರಂತ ಸಾಹಿತ್ಯ ಶ್ರೇಣಿ,
ಮಾಲಿನಿ ಮಲ್ಯ (ಸಂ), ಸಂಪುಟ–೨೨, ಕನ್ನಡ
ಮತ್ತು ಸಂಸ್ಕೃತಿ ನಿದೇಶನಾಲಯ, ೨೦೦೩.

೧೨. ಕನ್ನಡಿಯಲ್ಲಿ ಕಂಡಾತ – ಶಿವರಾಮ ಕಾರಂತ.
ರಾಜಲಕ್ಷ್ಮೀ ಪ್ರಕಾಶನ, ಬಳೇಪೇಟೆ,
ಬೆಂಗಳೂರು – ೧೯೮೪.

೧೩. ಕನ್ಯಾಬಲಿ – ಶಿವರಾಮ ಕಾರಂತ ಸಾಹಿತ್ಯ ಶ್ರೇಣಿ,
ಮಾಲಿನಿ ಮಲ್ಯ (ಸಂ), ಸಂಪುಟ–೦೨, ಕನ್ನಡ
ಮತ್ತು ಸಂಸ್ಕೃತಿ ನಿದೇಶನಾಲಯ, ೨೦೦೧.

೧೪. ಕರುಳಿನ ಕರೆ – ಶಿವರಾಮ ಕಾರಂತ
ರಾಜಲಕ್ಷ್ಮೀ ಪ್ರಕಾಶನ, ಬಳೇಪೇಟೆ,
ಬೆಂಗಳೂರು – ೧೯೮೬

೧೫. ಕುಡಿಯರ ಕೂಸು – ಶಿವರಾಮ ಕಾರಂತ ಸಾಹಿತ್ಯ ಶ್ರೇಣಿ,
ಮಾಲಿನಿ ಮಲ್ಯ (ಸಂ), ಸಂಪುಟ–೭, ಕನ್ನಡ
ಮತ್ತು ಸಂಸ್ಕೃತಿ ನಿರ್ದೇಶನಾಲಯ, ೨೦೦೧.

೧೬. ಕೇವಲ ಮನುಷ್ಯರು – ಶಿವರಾಮ ಕಾರಂತ
ಹರ್ಷ ಪ್ರಕಟಣಾಲಯ, ಪುತ್ತೂರು,
ದ.ಕ – ೧೯೭೧.

೧೭. ಗೆದ್ದ ದೊಡ್ಡಸ್ತಿಕೆ – ಶಿವರಾಮ ಕಾರಂತ,
ಎಸ್.ಬಿ.ಎಸ್ ಪಬ್ಲಿಷರ್ಸ್, ಡಿಸ್ಟ್ರಿಬ್ಯೂಟರ್ಸ್,
ಬೆಂಗಳೂರು – ೧೯೯೮.

೧೮. ಗೊಂಡಾರಣ್ಯ – ಶಿವರಾಮ ಕಾರಂತ, ಹರ್ಷ ಪ್ರಕಟಣಾಲಯ, ಪುತ್ತೂರು, ದ.ಕ – ೧೯೬೯.

೧೯. ಜಗದೋದ್ಧಾರ ನಾ.... – ಶಿವರಾಮ ಕಾರಂತ ಹರ್ಷ ಪ್ರಕಟಣಾಲಯ, ಪುತ್ತೂರು, ದ.ಕ – ೧೯೬೦

೨೦. ಚಿಗುರಿದ ಕನಸು – ಶಿವರಾಮ ಕಾರಂತ ಹರ್ಷ ಪ್ರಕಟಣಾಲಯ, ಪುತ್ತೂರು, ದ.ಕ – ೧೯೫೧

೨೧೧. ಚೋಮನ ದುಡಿ – ಶಿವರಾಮ ಕಾರಂತ, ರಾಜಲಕ್ಷ್ಮೀ ಪ್ರಕಾಶನ, ಬಳೇಪೇಟೆ, ಬೆಂಗಳೂರು – ೧೯೭೬

೨೨. ದೇವ ದೂತರು – ಶಿವರಾಮ ಕಾರಂತ ರಾಜಲಕ್ಷ್ಮೀ ಪ್ರಕಾಶನ, ಬಳೇಪೇಟೆ ಬೆಂಗಳೂರು.

೨೩. ಧರ್ಮರಾಯನ ಸಂಸಾರ – ಶಿವರಾಮ ಕಾರಂತ, ರಾಜಲಕ್ಷ್ಮೀ ಪ್ರಕಾಶನ, ಬಳೇಪೇಟೆ, ಬೆಂಗಳೂರು – ೧೯೭೬

೨೪. ನಂಬಿದವರ ನಾಕ ನರಕ – ಶಿವರಾಮ ಕಾರಂತ ಎಸ್.ಬಿ.ಎಸ್ ಪಬ್ಲಿಷರ್ಸ್ ಡಿಸ್ಟ್ರಿಬ್ಯೂಟರ್ಸ್, ಬೆಂಗಳೂರು–೨೦೦೧.

೨೫. ನಷ್ಟ ದಿಗ್ಗಜಗಳು – ಶಿವರಾಮ ಕಾರಂತ ಸಾಹಿತ್ಯ ಶ್ರೇಣಿ, ಮಾಲಿನಿ ಮಲ್ಯ (ಸಂ), ಸಂಪುಟ– ೨೧ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ೨೦೦೩

೨೬. ನಾವು ಕಟ್ಟಿದ ಸ್ವರ್ಗ – ಶಿವರಾಮ ಕಾರಂತ ರಾಜಲಕ್ಷ್ಮೀ ಪ್ರಕಾಶನ, ಬಳೇಪೇಟೆ, ಬೆಂಗಳೂರು – ೧೯೮೦.

೨೭. ನಿರ್ಭಾಗ್ಯ ಜನ್ಮ – ಶಿವರಾಮ ಕಾರಂತ ಸಾಹಿತ್ಯ ಶ್ರೇಣಿ, ಮಾಲಿನಿ ಮಲ್ಯ (ಸಂ), ಸಂಪುಟ–೨, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ೨೦೦೧.

೨೮. ಬತ್ತದ ತೊರೆ – ಶಿವರಾಮ ಕಾರಂತ,
ಹರ್ಷ ಪ್ರಕಟಣಾಲಯ, ಪುತ್ತೂರು,
ದ.ಕ – ೧೯೫೩.

೨೯. ಬಾಳ್ವೆಯೇ ಬೆಳಕು – ಶಿವರಾಮ ಕಾರಂತ
ರಾಜಲಕ್ಷ್ಮೀ ಪ್ರಕಾಶನ, ಬಳೇಪೇಟೆ,
ಬೆಂಗಳೂರು – ೧೯೮೦.

೩೦. ಬೆಟ್ಟದ ಜೀವ – ಶಿವರಾಮ ಕಾರಂತ,
ಹರ್ಷ ಪ್ರಕಟಣಾಲಯ, ಪುತ್ತೂರು,
ದ.ಕ – ೧೯೭೨.

೩೧. ಭೂತ – ಶಿವರಾಮ ಕಾರಂತ ಸಾಹಿತ್ಯ ಶ್ರೇಣಿ,
ಮಾಲಿನಿ ಮಲ್ಯ (ಸಂ), ಸಂಪುಟ–೨ , ಕನ್ನಡ
ಮತ್ತು ಸಂಸ್ಕೃತಿ ನಿರ್ದೇಶನಾಲಯ, ೨೦೦೧.

೩೨. ಮರಳಿ ಮಣ್ಣಿಗೆ – ಶಿವರಾಮ ಕಾರಂತ,
ಹರ್ಷ ಪ್ರಕಟಣಾಲಯ, ಪುತ್ತೂರು,
ದ.ಕ – ೧೯೬೮.

೩೩. ಮುಗಿದ ಯುದ್ಧ – ಶಿವರಾಮ ಕಾರಂತ,
ಹರ್ಷ ಪ್ರಕಟಣಾಲಯ, ಪುತ್ತೂರು,
ದ.ಕ – ೧೯೬೯.

೩೪. ಮೂಕಜ್ಜಿಯ ಕನಸುಗಳು – ಶಿವರಾಮ ಕಾರಂತ,
ಹರ್ಷ ಪ್ರಕಟಣಾಲಯ, ಪುತ್ತೂರು,
ದ.ಕ – ೧೯೬೮

೩೫. ಮೈಮನಗಳ ಸುಳಿಯಲ್ಲಿ – ಶಿವರಾಮ ಕಾರಂತ
ವಿಶ್ವ ಕನ್ನಡ ಸಮ್ಮೇಳನ, ಬೆಂ – ೧೯೮೩.

೩೬. ಮೊಗ ಪಡೆದ ಮನ – ಶಿವರಾಮ ಕಾರಂತ,
ಹರ್ಷ ಪ್ರಕಟಣಾಲಯ, ಪುತ್ತೂರು,
ದ.ಕ – ೧೯೬೮

೩೭. ವಿಚಾರ ಶೀಲತೆ – ಶಿವರಾಮ ಕಾರಂತ
ಪ್ರಕಟಣೆ ಕಲಾನಿಲಯ, ಮೈಸೂರು–೧೯೭೭.

೩೮. ವಿಚಿತ್ರ ಕೂಟ – ಶಿವರಾಮ ಕಾರಂತ ಸಾಹಿತ್ಯ ಶ್ರೇಣಿ,
ಮಾಲಿನಿ ಮಲ್ಯ (ಸಂ), ಸಂಪುಟ–೨ , ಕನ್ನಡ
ಮತ್ತು ಸಂಸ್ಕೃತಿ ನಿರ್ದೇಶನಾಲಯ, ೨೦೦೧.

೩೯. ಶನೀಶ್ವರನ ನೆರಳಲ್ಲಿ – ಶಿವರಾಮ ಕಾರಂತ,
ಐ.ಬಿ.ಎಚ್. ಪ್ರಕಾಶನ, ಗಾಂಧಿನಗರ,
ಬೆಂಗಳೂರು – ೧೯೭೪.

೪೦. ಶಿವರಾಮ ಕಾರಂತ ವಾಙ್ಮಯ ವೃತ್ತಾಂತ, – ಮಾಲಿನಿ ಮಲ್ಯ (ಸಂ), ಎಸ್.ಬಿ.ಎಸ್ ಪಬ್ಲಿಷರ್ಸ್,
ಡಿಸ್ಟ್ರಿಬ್ಯೂಟರ್ಸ್, ಬೆಂ–೨, ೧೯೯೨

೪೧. ಶಿವರಾಮ ಕಾರಂತ ಸಾಹಿತ್ಯ ಶ್ರೇಣಿ (೧ ರಿಂದ ೬ ಸಂಪುಟಗಳು – ಮಾಲಿನಿ ಮಲ್ಯ (ಸಂ), ಕನ್ನಡ ಮತ್ತು
ಸಂಸ್ಕೃತಿ ನಿರ್ದೇಶನಾಲಯ.
ಬೆಂಗಳೂರು– ೨, ೨೦೦೧.

೪೨. ಶಿವರಾಮ ಕಾರಂತ ಸಾಹಿತ್ಯ ಶ್ರೇಣಿ (೭ ರಿಂದ ೮ ಸಂಪುಟಗಳು) – ಮಾಲಿನಿ ಮಲ್ಯ (ಸಂ),
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ,
ಬೆಂ–೨, ೨೦೦೨.

೪೩. ಶಿವರಾಮ ಕಾರಂತ ಸಾಹಿತ್ಯ ಶ್ರೇಣಿ (೯ ರಿಂದ ೨೨ ಸಂಪುಟಗಳು) – ಮಾಲಿನಿ ಮಲ್ಯ (ಸಂ),
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ,
ಬೆಂ–೨, ೨೦೦೩.

೪೪. ಶಿವರಾಮ ಕಾರಂತ ಸಾಹಿತ್ಯ ಶ್ರೇಣಿ (೨೩ ರಿಂದ ೨೬ ಸಂಪುಟಗಳು) – ಮಾಲಿನಿ ಮಲ್ಯ (ಸಂ),
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ
ಬೆಂ–೨, ೨೦೦೫.

೪೫. ಶಿವರಾಮ ಕಾರಂತ ಸಾಹಿತ್ಯ ಶ್ರೇಣಿ (೨೭–೨೮ ಸಂಪುಟಗಳು) – ಮಾಲಿನಿ ಮಲ್ಯ (ಸಂ),
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ,
ಬೆಂ–೨, ೨೦೦೬.

೪೬. ಶಿವರಾಮ ಕಾರಂತ ಸಾಹಿತ್ಯ ಶ್ರೇಣಿ (೨೯ ರಿಂದ ೩೫ ಸಂಪುಟಗಳು) – ಮಾಲಿನಿ ಮಲ್ಯ (ಸಂ), ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂ–೨, ೨೦೦೬.

೪೭. ಸನ್ಯಾಸಿಯ ಬದುಕು – ಶಿವರಾಮ ಕಾರಂತ, ರಾಜಲಕ್ಷ್ಮೀ ಪ್ರಕಾಶನ ಬಳೇಪೇಟೆ, ಬೆಂಗಳೂರು– ೧೯೮೧.

೪೮. ಸರಸಮ್ಮನ ಸಮಾಧಿ – ಶಿವರಾಮ ಕಾರಂತ, ಐ.ಬಿ.ಎಚ್. ಪ್ರಕಾಶನ, ಗಾಂಧಿನಗರ, ಬೆಂಗಳೂರು–೧೯೮೮.

೪೯. ಸಮೀಕ್ಷೆ – ಶಿವರಾಮ ಕಾರಂತ ಸಾಹಿತ್ಯ ಶ್ರೇಣಿ, ಮಾಲಿನಿ ಮಲ್ಯ (ಸಂ), ಸಂಪುಟ–II, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ೨೦೦೩.

೫೦. ಸ್ವಪ್ನದ ಹೊಳೆ – ಶಿವರಾಮ ಕಾರಂತ, ಎಸ್.ಬಿ.ಎಸ್ ಪಬ್ಲಿಷರ್ಸ್, ಡಿಸ್ಟ್ರಿಬ್ಯೂಟರ್ಸ್. ಬೆಂಗಳೂರು–೧೯೭೩.

೫೧. ಹುಚ್ಚು ಮನಸಿನ ಹತ್ತು ಮುಖಗಳು, (ಅಳಿದುಳಿದ ನೆನಪುಗಳೊಂದಿಗೆ) – ಶಿವರಾಮ ಕಾರಂತ ರಾಜಲಕ್ಷ್ಮೀ ಪ್ರಕಾಶನ, ಬಳೇಪೇಟೆ, ಬೆಂಗಳೂರು – ೧೯೯೫.

೫೨. ಹೆತ್ತಳಾ ತಾಯಿ – ಶಿವರಾಮ ಕಾರಂತ, ಐ.ಬಿ.ಎಚ್. ಪ್ರಕಾಶನ, ಗಾಂಧಿನಗರ, ಬೆಂಗಳೂರು–೧೯೭೩.

ಆ. ಪರಾಮರ್ಶನ ಗ್ರಂಥಗಳು

ಅನಂತನಾರಾಯಣ .ಎಸ್ – ಕಾರಂತರ ಕಾಂದಂಬರಿಗಳಲ್ಲಿ ನಿಸರ್ಗ, ಕರ್ನಾಟಕ ಸಂಘ, ಪುತ್ತೂರು.೧೯೯೨.

ಅನಂತನಾರಾಯಣ ಎಸ್. – ಕಾರಂತರ ಕಾದಂಬರಿಗಳು, ಉಷಾ ಸಾಹಿತ್ಯ ಮಾಲೆ, ಮೈಸೂರು, ೧೯೪೮

ಅಮೂರ ಜಿ.ಎಸ್. – ಕನ್ನಡ ಕಥನ ಸಾಹಿತ್ಯ ಕಾದಂಬರಿ, ಶ್ರೀ ಹರಿ ಪ್ರಕಾಶನ, ಭಾರತೀ, ನವೋದಯ ನಗರ, ಧಾರವಾಡ, ೦೩.೧೯೯೪.

ಅಮೂರ ಜಿ.ಎಸ್. – ಕಾದಂಬರಿ ಸ್ವರೂಪ, ಕನ್ನಡ ಸಂಘ ಕ್ರೈಸ್ಟ್ ಕಾಲೋನಿ ಬೆಂಗಳೂರು. ೧೯೯೯

ಅಶೋಕ ಟಿ.ಪಿ. (ಸಂ) – ಕಾರಂತ ಮಂಥನ, ಕರ್ನಾಟಕ ಸಂಘ, ಪುತ್ತೂರು–೦೧, ದಕ್ಷಿಣ ಕನ್ನಡ, ೧೯೯೪.

ಅಶೋಕ ಟಿ.ಪಿ. (ಸಂ) – ಕಾರಂತರ ಕಾದಂಬರಿಗಳಲ್ಲಿ ಗಂಡು–ಹೆಣ್ಣು, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ಕರ್ನಾಟಕ– ೧೭, ೧೯೮೨.

ಅಶೋಕ ಟಿ.ಪಿ. – ಶಿವರಾಮ ಕಾರಂತ ಎರಡು ಅಧ್ಯಯನಗಳು, ಅಕ್ಷರ ಪ್ರಕಾಶನ ಹೆಗ್ಗೋಡು ಸಾಗರ, ಕರ್ನಾಟಕ–೧೭, ೨೦೦೪

ಅಶೋಕ ಟಿ.ಪಿ. – ಈ ಶತಮಾನದ ನೋಟ ಶಿವರಾಮ ಕಾರಂತ ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ–೧೧,೧೯೯೩

ಆಚಾರ್ಯ ಪಾ.ವೆಂ. ಮತ್ತು ಇತರರು – ಜ್ಞಾನಪೀಠ ವಿಜೇತ ಕನ್ನಡಿಗರು, ಉಡುಪಿ ೧೯೯೩

ಇಂದಿರಾ ಎಂ.ಕೆ – ತುಂಗಭದ್ರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು–೦೨

ಕಾರಂತ ಪೆರಾಜೆ.ನಾ – ಶಾರಾದಾ ಬುಕ್ ಹೌಸ್ ಪುತ್ತೂರು ೨೦೦೫

ಕುವೆಂಪು – ಕಾನೂರು ಹೆಗ್ಗಡತಿ, ಉದಯ ರವಿ ಪ್ರಕಾಶನ, ಮೈಸೂರು ೪.೧೯೭೪

ಕಾರಂತರ ಬದುಕು ಬರಹ – ಗೋವಿಂದ ಪೈ ಸ್ಮಾರಕ ಉಡುಪಿ–೧೯೭೮

ಕಾದಂಬರಿಕಾರನಾಗಿ ಕಾರಂತ – ಪ್ರಸಾರಂಗ ಬೆಂಗಳೂರು ವಿ.ವಿ.–೧೯೭೮

ಕನ್ನಡ ಕಾದಂಬರಿಯ ಮೊದಲ ಹೆಜ್ಜೆಗಳು – ಮಂಗಳೂರು ವಿ.ವಿ.–೧೯೮೭

ಕಾರಂತರ ಕಾದಂಬರಿಗಳಲ್ಲಿ ಸ್ತ್ರೀ – ಕನ್ನಡ ವಿಭಾಗ, ಮುಂಬೈ ವಿಶ್ವವಿದ್ಯಾನಿಲಯ

ಕೃಷ್ಣ ನಂದ ಕಾಮತ್ – ಸಸ್ಯ ಪ್ರಪಂಚ ಬೆಂಗಳೂರು ೪೧. ೧೯೯೨

ಕೇಶವಶರ್ಮ ಮತ್ತು ಲಕ್ಷ್ಮೀ – ಪರಿಸರ ಶಿಕ್ಷಣ ಮೈಸೂರು–೨೪, ೨೦೦೦

ಗಿರಡ್ಡಿ ಗೋವಿಂದರಾಜು – ಸಮಗ್ರ ವಿಮರ್ಶೆ, ಸಂಪುಟ–೨ ಸಪ್ನ ಬುಕ್ ಹೌಸ್, ಬೆಂಗಳೂರು ೦೮

ಗೀತಾ ನಾಗಭೂಷಣ – ಆಸರೆಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು-೦೨, ೨೦೦೬

ನಾಗರಾಜ ಡಿ.ಆರ್. – ವಿಮರ್ಶಾ ಲೇಖನಗಳ ಸಂಕಲನ ಸಾಹಿತ್ಯ ಕಥನ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ಕರ್ನಾಟಕ-೧೭, ೨೦೦೬

ನಾಯಕ ಜಿ.ಎಚ್. – ವಿನಯ ವಿಮರ್ಶೆ (ಪ್ರ) ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೬೧

ನಾಯಕ ಜಿ.ಎಚ್. – ಕೃತಿ ಸಾಕ್ಷಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು-೦೨, ೨೦೦೬

ನಾಗ ಐತಾಳ(ಸಂ) – ಕಾರಂತ ಚಿಂತನ ಕಡಲಾಚೆಯ ಕನ್ನಡಿಗರಿಂದ, ಅಕ್ಷರ ಪ್ರಕಾಶನ ಸಾಗರ,

ಪೂರ್ಣಚಂದ್ರ ತೇಜಸ್ವಿ – ಕರ್ವಾಲೋ, ಪುಸ್ತಕ ಪ್ರಕಾಶನ ಮೈಸೂರು-೦೯, ೯೦೦೭

ಪೂರ್ಣಚಂದ್ರ ತೇಜಸ್ವಿ – ನಿಗೂಢ ಮನುಷ್ಯರು, ಪುಸ್ತಕ ಪ್ರಕಾಶನ ಮೈಸೂರು-೦೯, ೧೯೮೩

ಪೂರ್ಣಚಂದ್ರ ತೇಜಸ್ವಿ – ಚಿದಂಬರ ರಹಸ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು-೦೨-೨೦೦೩

ಬರಗೂರು ರಾಮಚಂದ್ರಪ್ಪ – ಶ್ರಮ ಮತ್ತು ಸೃಜನ ಶೀಲತೆ, ಅಂಕಿತ ಪುಸ್ತಕ, ಬೆಂಗಳೂರು-೦೪, ೨೦೦೫

ಬಸಪ್ಪನವರ ಸಿ.ಎಚ್. – ಹುಲಿ-ಭಾರತದ ರಾಷ್ಟ್ರೀಯ ಮೃಗ, ಕನ್ನಡ ಅಧ್ಯಯನ ವಿಭಾಗ,

ಮಾಲಿನಿ ಮಲ್ಯ .ಬಿ. – ಶಿವರಾಮ ಕಾರಂತರ ಸಾಹಿತ್ಯ ಶ್ರೇಣಿ, ಸಂಪುಟ-೩೪, ಜೀವನ ಚರಿತ್ರೆ, ಆತ್ಮಕಥನಗಳು-೦೩ (ಪ್ರ) ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು-೦೨,೨೦೦೭

ಮಾಲಿನಿ ಮಲ್ಯ .ಬಿ. – ಶಿವರಾಮ ಕಾರಂತರ ಲೇಖನಗಳು, ಸಂಪುಟ-೦೭, ನಾಡು, ನಿಸರ್ಗ, ಪರಿಸರ, ೧೯೯೫

ಮಾಲಿನಿ ಮಲ್ಯ .ಬಿ. – ಶಿವರಾಮ ಕಾರಂತರ ವಾಙ್ಮಯ ವೃತ್ತಾಂತ, ಬೆಂಗಳೂರು-೦೧, ೧೯೯೨

ಮಾಲಿನಿ ಮಲ್ಯ .ಬಿ. – ಶಿವರಾಮ ಕಾರಂತರ ಲೇಖನಗಳು, ವ್ಯಕ್ತಿ ಚಿತ್ರಗಳು, ವಿಮರ್ಶೆಗಳು, ಸಂಪುಟ ೦೧, ಪ್ರಸಾರಂಗ ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳ ಗಂಗೋತ್ರಿ ೧೯೯೩

ರಮೇಶ ಬೆ.ಗೋ. – ಸಾಹಿತ್ಯ ಲೋಕದ ಪ್ರಾತಃಸ್ಮರಣೆಯರು, ಶಿವರಾಮ ಕಾರಂತ, ದಿವ್ಯಚಂದ್ರ ಪ್ರಕಾಶನ, ಬೆಂಗಳೂರು-೨೯.೨೦೦೮

ರಹಮತ್ ತರೀಕೆರೆ – ಕತ್ತಿಯಂಚಿನ ದಾರಿ, ಅಭಿನವ ಪ್ರಕಾಶನ, ಬೆಂಗಳೂರು-೪೦-೨೦೦೬

ರಾಜಪ್ಪ ದಳವಾಯಿ (ಸಂ) – ಕನ್ನಡ ಸಾಹಿತ್ಯ ಕೋಶ, ದಳವಾಯಿ ಎಜುಕೇಷನ್ ಅಂಡ್ ಸೋಷಿಯೋಕಲ್ಚರರ್, ಮೈಸೂರು ೧೯೯೬

ರಾಜೇಂದ್ರ ಡಿ.ಕೆ – ವ್ಯಕ್ತಿ ಚಿತ್ರಗಳು, ಭಾಗ್ಯಶ್ರೀ ಎಂಟರ್ ಪ್ರೈಸಸ್, ಬೆಂಗಳೂರು ೨೦೦೮

ಶಾಮರಾಯ ತಾ.ಸು – ಕನ್ನಡ ಸಾಹಿತ್ಯ ಚರಿತ್ರೆ ಮೈಸೂರು, ೨೦೦೯

ಶಿವರುದ್ರಪ್ಪ ಜಿ.ಎಸ್ – ಹೊಸಗನ್ನಡ ಸಾಹಿತ್ಯ ಎರಡು ಮಾರ್ಗಗಳು, ಪ್ರಸಾರಂಗ ಬೆಂಗಳೂರು ವಿಶ್ವವಿದ್ಯಾಲಯ ೧೯೮೧

ಹರಿದಾಸ ಭಟ್ಟ ಕು.ಶಿ. – (ಸಂ) ಕಾರಂತ ಪ್ರಪಂಚ, ಕಾರಂತ ಅಭಿನಂದನಾ ಸಮಿತಿ ಉಡುಪಿ, ೧೯೬೯

ಇ. ಪರಾಮರ್ಶನ ಲೇಖನಗಳು

೧. ಅನಂತಮೂರ್ತಿ ಯು.ಆರ್. – ೧. ಕಾರಂತರು ಒಂದು ಸೃಜನಾತ್ಮಕ ಪ್ರತಿಕ್ರಿಯೆ (ಸಂ) ರಾಘವೇಂದ್ರರಾವ್ ಎಚ್.ಎಸ್. ಸಾಹಿತ್ಯ ವಿಮರ್ಶೆ ೧೯೮೪, ಪುಟ ೧೦೪–೧೨೩

೨. ಅನಂತಮೂರ್ತಿ ಯು.ಆರ್. – ೨. ಭಾರತೀಯ ಸಂಸ್ಕೃತಿ ಮತ್ತು ಲೇಖನ, ಪ್ರಜ್ಞೆ ಮತ್ತು ಪರಿಸರ, ಅಕ್ಷರ ಪ್ರಕಾಶನ, ಸಾಗರ ೧೯೯೨, ಪುಟ – ೧೪೩–೧೭೭.

೩. ಅಶೋಕ ಟಿ.ಪಿ – ಮೂಕಜ್ಜಿಯ ಕನಸುಗಳು, ಶೂದ್ರ, ಸಂಚಿಕೆ ೬–೭, ೧೯ ಡಿಸೆಂಬರ್ ೧೯೯೨, ಪುಟ ೪೨.

೪. ಆರ್ಕೆ ಮಣಿಪಾಲ – ಅಳಿದ ಯುದ್ಧ, ಸಂವಾದ (೩೧), ಜನವರಿ–ಫೆಬ್ರವರಿ, ೧೯೯೩. ಪುಟ ೧೯,

೫. ಕೀರ್ತಿನಾಥ ಕುರ್ತಕೋಟಿ – ಕಾರಂತರಲ್ಲಿ ಸಾಮಾಜಿಕತೆ, ಯುಗಧರ್ಮ ಹಾಗೂ ಸಾಹಿತ್ಯ ದರ್ಶನ, ಮನೋಹರ ಗ್ರಂಥಮಾಲಾ, ಧಾರವಾಡ, ೧೯೯೨, ಪುಟ ೨೭೦–೩೦೨

೬. ಕೀರ್ತಿನಾಥ ಕುರ್ತಕೋಟಿ – ೧. ಶಿವರಾಮ ಕಾರಂತ, ನೂರು ಮರ ನೂರು ಸ್ವರ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೧೯೯೮, ಪುಟ ೨೦೩–೨೦೭

೭. ಕೀರ್ತಿನಾಥ ಕುರ್ತಕೋಟಿ – ೨. ಕಾರಂತರ ಕಾದಂಬರಿಗಳು, ಪುಟ ೨೦೮–೨೨೦.

೮. ಕೀರ್ತಿನಾಥ ಕುರ್ತಕೋಟಿ – ವಿಮರ್ಶೆಯ ಲೇಖನಗಳು, ವಿಮರ್ಶೆಯ ವಿನಯ (ಕಾದಂಬರಿ) ಮನೋಹರ ಗ್ರಂಥಮಾಲಾ, ಧಾರವಾಡ ೧೯೯೬, ಪುಟ ೧೧೯–೧೨೪.

೯. ಕೃಷ್ಣಮೂರ್ತಿ ಕಿತ್ತೂರ – ಅಳಿದ ಮೇಲೆ, ವಿಮರ್ಶೆಯ ವ್ಯಾಪ್ತಿ, ಸಾಹಿತ್ಯ ಭಂಡಾರ, ಹುಬ್ಬಳ್ಳಿ, ೧೯೭೭, ಪುಟ – ೧೧೯–೧೨೬.

೧೦. ಗಿರಡ್ಡಿ ಗೋವಿಂದರಾಜ – ಸಮಗ್ರ ವಿಮರ್ಶೆ,
೧. ಕಾದಂಬರಿಗೊಂದು ಸಾಹಿತ್ಯ ಮೀಮಾಸೆ, ಪುಟ ೩ ರಿಂದ ೯.
೨. ಕಾದಂಬರಿ ವಸ್ತು ಮತ್ತು ತಂತ್ರ, ಪುಟು ೧೦–೨೬
೩. ಕಾರಂತರ 'ಮರಳಿಮಣ್ಣಿಗೆ' ಪುಟ ೫೧–೬೫
೪. ಕಾರಂತರ ಮೂಕಜ್ಜಿಯ ಕನಸುಗಳು,ಸಪ್ನ ಬುಕ್‌ಹೌಸ್, ಬೆಂಗಳುರು, ೨೦೦೧, ಪುಟ ೬೬–೭೮

೧೧. ತಿಪ್ಪೇರುದ್ರಸ್ವಾಮಿ – ಕನ್ನಡ ಕಾದಂಬರಿ ಅಂದು–ಇಂದು,
(ಸಂ) ಶಂಕರ ಪಾಟೀಲ ಕಾದಂಬರಿ ದರ್ಶನ,
ಶ್ರೀಕೃಷ್ಣಮೂರ್ತಿ ಪುರಾಣಿಕ ಸತ್ಕಾರ ಸಮಿತಿ,
ಹುಬ್ಬಳ್ಳಿ–ಧಾರವಾಡ, ೧೯೭೪. ಪುಟ

೧೨. ತಿರುಮಲೆ ಶ್ರೀನಿವಾಸಚಾರ್ಯ – ಬತ್ತದ ತೊರೆ,
ಕನ್ನಡ ನುಡಿ, ಜುಲೈ ೧೯೫೪, ಪುಟ ೧೫೧.

೧೩. ನಾಗರಾಜ ಡಿ.ಆರ್. – ಕನ್ನಡ ಕಾದಂಬರಿ ಪರಂಪರೆ ಮತ್ತು ಕಾರಂತರು, ಅಮೃತ ಮತ್ತು ಗರುಡ, ಕನ್ನಡ
ಮತ್ತು ಸಂಸ್ಕೃತಿ ನಿರ್ದೇಶನಾಲಯ
ಬೆಂಗಳೂರು, ೧೯೯೦, ಪುಟ ೨೫–೩೫.

೧೪ ನಾಗರಾಜ ಕಿ.ರಂ – ಮೂಕಜ್ಜಿಯ ಕನಸುಗಳು,
ಸಾಧನೆ, ಸಂಪುಟ–, ಸಂಚಿಕೆ–೩, ಜುಲೈ ಸೆಪ್ಟೆಂಬರ್, ೧೯೭೮, ಪುಟ ೧೧ ರಿಂದ ೧೩.

೧೫ ನಾರಾಯಣ ಕೆ.ವಿ – ಬೇರು ಕಾಂಡ ಚಿಗುರು.
೧. ಮೂಕಜ್ಜಿಯ ಕನಸುಗಳು, ಅದರ ವಿಶಿಷ್ಟತೆ ಪುಟ ೩೧೯–೩೨೨
೨. ಕಾರಂತರ ಕಾದಂಬರಿಗಳ ಶಿಲ್ಪ; ಒಂದು ಸಮೀಕ್ಷೆ, ಪುಟ ೨೮೫–೨೭೭
೩. ಕಾದಂಬರಿ; ಜನಪ್ರಿಯ ಮತ್ತು ಸೌದರ್ಯಾತ್ಮಕ ಸಂಬಂಧಗಳು, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು, ೧೯೯೭, ಪುಟ ೨೭೦–೨೭೭.

೧೬. ನಾರಾಯಣ ಕೆ.ವಿ. – ಮೂಕಜ್ಜಿಯ ಕನಸುಗಳು,
ಸಾಧನೆ., ಸಂಪುಟ–೭, ಸಂಚಿಕೆ–೩, ಜುಲೈ
ಸೆಪ್ಟೆಂಬರ್, ೧೯೭೮, ಪುಟ ೧೦.

೧೭ ನಿಕೇತನ – ಕಾರಂತರ ಕಾದಂಬರಿಗಳಲ್ಲಿ ಸ್ತ್ರೀ ಲೋಕ, ಸ್ತ್ರೀ ದೃಷ್ಟಿ,
ರಾಶಿ ಪ್ರಕಾಶನ, ಉಡುಪಿ,೨೦೦೫, ಪುಟ–೨೧೨–೨೮

೧. ನೆಗಳೂರು ರಂಗನಾಥ – ಶಿವರಾಮ ಕಾರಂತರ ಹೆತ್ತಳಾತಾಯಿ, ಸಂಪುಟ–೭, ಸಂಚಿಕೆ–೧, ಮೇ–೧೯೪೬ ಪುಟ ೧೭೬.

೨. ಬೈಕಾಡಿ ವೆಂಕಟಕೃಷ್ಣರಾಯ – ಕುಡಿಯರ ಕೂಸು, ಕನ್ನಡ ನುಡಿ, ಮಾರ್ಚ್ ೧೯೫೧, ಪುಟ ೮೭.

೩. ರಾಜಶಖರ್ ಜಿ. – ಮೈಮನಗಳ ಸುಳಿಯಲ್ಲಿ, ಸಾಕ್ಷಿ–೩೮, ಏಪ್ರಿಲ್ ೧೯೭೮, ಪುಟ ೩೫–೩೬.

೪. ರಾಘವೇಂದ್ರ ಭಟ್ಟ – ಚೋಮನ ದುಡಿ (ಸಂ) ಉಮಾಪತಿ ಕೆ.ಎಸ್. ನಾ ಮೆಚ್ಚಿದ ಪುಸ್ತಕ, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರು ೧೯೯೮, ಪುಟ – ೬೫–೭೨.

೫. ರಾಮಚಂದ್ರದೇವ – ಕಾರಂತರ ಕಾದಂಬರಿಗಳಲ್ಲಿ ಸ್ತ್ರೀ ಪಾತ್ರಗಳು, ಸಾಕ್ಷಿ–೩೮, ಏಪ್ರಿಲ್ ೧೯೭೮, ಪುಟ ೭೪.

೬. ಶಿವರುದ್ರಪ್ಪ ಜಿ.ಎಸ್ (ಸಂ) – ಸಮಗ್ರ ಗದ್ಯ, ಕಾರಂತರ ‘ಮೂಕಜ್ಜಿಯ ಕನಸುಗಳು’ ಕೆಲವು ಮಾತುಗಳು, ಸ್ನೇಹ ಪ್ರಕಾಶನ, ೧೯೯೪, ಪುಟ – ೩೮೬–೩೯೧.

೭. ಶೂದ್ರ – ನಾವು ಕಟ್ಟಿ ಸ್ವರ್ಗ, ಶೂದ್ರ ಸಂಪುಟ–೭, ಸಂಚಿಕೆ–೫,೬ ಪುಟ ೧೪

೮. ಶೇಷಗಿರಿರಾವ್ ಎಲ್.ಎಸ್. – ಮೂಜನ್ಮ, ಸುಧಾ ೧೩, ಅಕ್ಟೋಬರ್ ೧೯೯೧, ಪುಟ ೧೫.